# ಪತ್ರಾಂಕಿತ (ಗೆಜೆಟೆಡ್) ಹುದ್ದೆಗಳ ಮುಖ್ಯ ಪರೀಕ್ಷೆಯ ಪರಿಷ್ಕೃತ ಪಠ್ಯಕ್ರಮ

## ಪತ್ರಿಕೆ–3 : ಸಾಮಾನ್ಯ ಅಧ್ಯಯನ–2

### ವಿಭಾಗ – 1 : ಭೌತಿಕ ಲಕ್ಷಣಗಳು ಮತ್ತು ಸ್ವಾಭಾವಿಕ ಸಂಪನ್ಮೂಲಗಳು

**ವಿಶ್ವ ಭೂಗೋಳಶಾಸ್ತ್ರ**

1. **ಭೂ ಮಂಡಲ :** ಸೌರಮಂಡಲದಲ್ಲಿ ಭೂಮಿಯ ಸ್ಥಾನ, ಬಂಡೆಗಳು, ಭೂಕಂಪಗಳು, ಜ್ವಾಲಾಮುಖಿಗಳು, ಶಿಲಾ ಫಲಕಗಳ ಸಂಚಲನ, ಸವೆತ, ಕಾರಕಗಳು. ವಾಯುಮಂಡಲ – ರಚನೆ ಮತ್ತು ಸಂಯೋಜನೆ – ಹವಾಮಾನ ಮತ್ತು ವಾಯುಗುಣದ ಅಂಶಗಳು – ವ್ಯಾಪಕವಾದ ಹವಾಮಾನದ ವಿಧಗಳು. ಜಲಮಂಡಲ – ವಿಶ್ವ ಸಾಗರಗಳ ಲವಣಾಂಶ – ಸಾಗರ ಪ್ರವಾಹಗಳು ಮತ್ತು ಅಲೆಗಳು – ಸಾಗರ ನಿಕ್ಷೇಪಗಳು.

2. **ಭೂ ಖಂಡಗಳ ಪ್ರಕೃತಿ ಗೋಚರ ವಿಷಯಗಳು ಮತ್ತು ಜನಸಾಂದ್ರತೆ ವಿವರಣೆ :** ಪರ್ವತಗಳು, ನದಿಗಳು, ಅರಣ್ಯಗಳು, ಹುಲ್ಲುಗಾವಲು ಭೂಮಿಗಳು, ಮರುಭೂಮಿಗಳು, ಮಾನವ ಜನಾಂಗಗಳು, ಜನಸಂಖ್ಯೆಯ ಬದಲಾವಣೆ, ವಿತರಣೆ ಮತ್ತು ಜನಸಂಖ್ಯಾ ಪರಿವರ್ತನೆ, ಸಾಂದ್ರತೆ, ಲಿಂಗಾನುಪಾತ, ಜೀವನದ ಗುಣಮಟ್ಟ, ಜೀವಮಾನ ನಿರೀಕ್ಷೆ, ಸಾಕ್ಷರತೆ, ಜೀವನದ ಗುಣಮತ್ತು ಮತ್ತು ವಲಸೆ.

**ಭಾರತದ ಭೂಗೋಳಶಾಸ್ತ್ರ**

3. **ಭಾರತದ ಭೌಗೋಳಿಕತೆ – ಹವಾಗುಣ, ನದಿಗಳು, ಮಣ್ಣು, ನೈಸರ್ಗಿಕ ಸಸ್ಯಗಳು ಖನಿಜ ಸಂಪನ್ಮೂಲಗಳು :** ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ – ತಾಮ್ರ ಮತ್ತು ಬಾಕ್ಸೈಟ್, ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಪರಮಾಣು ನಿಕ್ಷೇಪಗಳು. ಮುಖ್ಯ ಬೆಳೆಗಳು : ಧಾನ್ಯಗಳ, ಸಣ್ಣ ಕಾಳುಗಳು, ಎಣ್ಣೆ ಬೀಜಗಳು, ತೋಟದ ಬೆಳೆಗಳು, ವಾಣಿಜ್ಯ ಬೆಳೆಗಳ ಹಂಚಿಕೆ ಮತ್ತು ಉತ್ಪಾದನೆ. ಭಾರತೀಯ ಜನಸಂಖ್ಯಾಶಾಸ್ತ್ರ – ಬೆಳವಣಿಗೆ, ರಚನೆ, ಹಂಚಿಕೆ, ಸಾಂದ್ರತೆ, ಮಾನವ ಅಭಿವೃದ್ಧಿ ಸೂಚ್ಯಂಕ ಜನಸಂಖ್ಯಾ ಶಾಸ್ತ್ರದ ದತ್ತಾಂಶ.

4. **ಕೈಗಾರಿಕಾ ಯೋಜನೆ ಮತ್ತು ಅಭಿವೃದ್ಧಿ :** ಭಾರೀ, ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಬೆಳವಣಿಗೆ ಮತ್ತು ಹಂಚಿಕೆ – ಭಾರತದ ಕೈಗಾರಿಕಾ ಪ್ರದೇಶಗಳು, ಕೈಗಾರಿಕಾ ಮೂಲ ಸೌಕರ್ಯ – ರೈಲ್ವೆಗಳು, ರಸ್ತೆಗಳು ಮತ್ತು ಬಂದರುಗಳು, ಹಿಂದುಳಿದ ಪ್ರದೇಶಗಳು ಮತ್ತು ಗ್ರಾಮೀಣ ಕೈಗಾರಿಕೀಕರಣ, ಪ್ರಾದೇಶಿಕ ಯೋಜನೆ ಮತ್ತು ಅಭಿವೃದ್ಧಿ ಬುಡಕಟ್ಟು ಮತ್ತು ಗುಡ್ಡಗಾಡು ಪ್ರದೇಶಗಳ, ಬರಪೀಡಿತ ಪ್ರದೇಶಗಳು, ಅಚ್ಚುಕಟ್ಟು ಪ್ರದೇಶಗಳು ಮತ್ತು ಜಲಾನಯನ ಪ್ರದೇಶಗಳು, ಪಟ್ಟಣಗಳು ಮತ್ತು ನಗರಗಳ ವರ್ಗೀಕರಣ, ನಗರ ವಿನ್ಯಾಸ.

**ಕರ್ನಾಟಕ ಭೂಗೋಳಶಾಸ್ತ್ರ**

5. **ಭೌಗೋಳಿಕ ವಿಭಾಗಗಳು –** ಹವಾಮಾನ, ನದಿಗಳು, ಮಳೆ ಹಂಚಿಕೆ, ನೈಸರ್ಗಿಕ ಸಸ್ಯವರ್ಗ ಮತ್ತು ಮಣ್ಣು, ಕೃಷಿ ಮತ್ತು ಕೃಷಿ ಹವಾಮಾನ ಪ್ರದೇಶಗಳು, ಮುಖ್ಯ ಬೆಳೆಗಳು, ಕರ್ನಾಟಕದ ತೋಟ ಮತ್ತು ವಾಣಿಜ್ಯ ಬೆಳೆಗಳು, ಕರ್ನಾಟಕದ ಖನಿಜ ಸಂಪನ್ಮೂಲಗಳು, ವಿದ್ಯುತ್ ಮೂಲಗಳು (ಜಲ, ಸೌರ, ಪರಮಾಣು ಮತ್ತು ಗಾಳಿ), ಭಾರಿ, ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು, ಆಗ್ರೋ ಆಧಾರಿತ ಕೈಗಾರಿಕೆಗಳು, ಕರ್ನಾಟಕದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳು, ಭೌಗೋಳಿಕ ಮಾಹಿತಿ ವ್ಯವಸ್ಥೆ.

6. **ನಗರ ಭೂಬಳಕೆ ನೀತಿ ಮತ್ತು ನಗರೀಕರಣ :** ಜನಸಂಖ್ಯಾ ವೈಶಿಷ್ಟ್ಯಗಳು, ಸಾಕ್ಷರತೆ ಮತ್ತು ನಗರೀಕರಣ, ಜನಸಂಖ್ಯಾ ಸಮಸ್ಯೆಗಳು ಮತ್ತು ನೀತಿಗಳು, ನಗರ ವರ್ಗೀಕರಣ ಮತ್ತು ನಗರ ಕ್ಷೇತ್ರಗಳ ಪ್ರಭಾವ, ಗ್ರಾಮೀಣ ನಗರ ಅಂಚಿನಲ್ಲಿರುವ ನಗರ ಬೆಳವಣಿಗೆಯ ಸಮಸ್ಯೆಗಳು, ಭೂಬಳಕೆ, ನಗರ ಯೋಜನೆ, ಕೊಳಚೆ ಮತ್ತು ನಗರ ವಸತಿ, ಆಂತರಿಕ ಮತ್ತು ಪ್ರಾದೇಶಿಕ ವ್ಯಾಪಾರ ಮತ್ತು ಗ್ರಾಮೀಣ ಮಾರುಕಟ್ಟೆಗಳ ಕೇಂದ್ರಗಳ ಪಾತ್ರ.

### ವಿಭಾಗ –2 : ಭಾರತದ ಸಂವಿಧಾನ ಅವಲೋಕನ (7 ಘಟಕಗಳು)

1. **ಸಂವಿಧಾನದ ಸ್ವರೂಪ :** ಸಾಂವಿಧಾನಿಕ ಬೆಳವಣಿಗೆಗಳು, ಸಂವಿಧಾನದ ಪ್ರಮುಖ ಲಕ್ಷಣಗಳು, ಪೀಠಿಕೆ, ರಾಜ್ಯ ನೀತಿಯ ನಿರ್ದೇಶಕ ತತ್ವಗಳು, ಭಾರತೀಯ ಒಕ್ಕೂಟ ಇತ್ಯಾದಿ.

2. **ಮೂಲಭೂತ ಹಕ್ಕುಗಳು :** ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು, ಸಂವಿಧಾನಾತ್ಮಕ ಪರಿಹಾರದ ಹಕ್ಕು, ಸೂಕ್ತ ನಿರ್ಬಂಧಗಳು – ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಅವಕಾಶಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯಗಳ ನಿಷೇಧ ಅಧಿನಿಯಮ, ರಾಷ್ಟ್ರೀಯ ಮತ್ತು ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ.

3. **ಕಾನೂನಾತ್ಮಕ ಅಧಿಕಾರಗಳ ಹಂಚಿಕೆ :** ಕೇಂದ್ರ ಮತ್ತು ರಾಜ್ಯ ನಡುವೆ, ಕೇಂದ್ರ ಮತ್ತು ರಾಜ್ಯಗಳ ನಡುವೆ ಆಡಳಿತಾತ್ಮಕ ಮತ್ತು ಆರ್ಥಿಕ ಸಂಬಂಧಗಳು, ಸಂವಿಧಾನಿಕ ಸಂಸ್ಥೆಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು,

ರಾಜ್ಯಪಾಲರ ಅಧಿಕಾರಗಳು ಮತ್ತು ಪ್ರಕಾರ್ಯಗಳು – ಮಂತ್ರಿ ಪರಿಷತ್ತು ಮತ್ತು ಸಚಿವ ಸಂಪುಟ, ನ್ಯಾಯಿಕ ಪರಿಹಾರೋಪಾಯಗಳು.

4. **ಏಕಸದನ ಮತ್ತು ದ್ವಿಸದನ :** ವಿಧಾನ ಮಂಡಲ ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಯ ಬಿಕ್ಕಟ್ಟು, ಪ್ರತ್ಯಾಯೋಜಿತ ಶಾಸನ, ಕಾನೂನಾತ್ಮಕ ಕಾರ್ಯವಿಧಾನ ಮತ್ತು ವಿಧಾನ ಮಂಡಲದ ಸಮಿತಿಗಳು, ಪ್ರತ್ಯಾಯೋಜಿತ ಶಾಸನದ ಮೇಲೆ ಕಾನೂನಾತ್ಮಕ ಮತ್ತು ನ್ಯಾಯಾಂಗದ ನಿಯಂತ್ರಣ, ಆಡಳಿತಾತ್ಮಕ ಕ್ರಮದ ನ್ಯಾಯಿಕ ವಿಮರ್ಶೆ, ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್, ಭಾರತದ ಅಟಾರ್ನಿ ಜನರಲ್.

5. **ಸಂವಿಧಾನದ ಪ್ರಮುಖ ತಿದ್ದುಪಡಿಗಳು :** ಮೂಲ ರಚನೆಯ ಸಿದ್ಧಾಂತ, ತುರ್ತು ಪರಿಸ್ಥಿತಿಯ ಅವಕಾಶಗಳು ಮತ್ತು ವಿಕೇಂದ್ರೀಕರಣ, ಪಂಚಾಯತ್ ರಾಜ್, ಎಪ್ಪತ್ತಮೂರನೇ ಮತ್ತು ಎಪ್ಪತ್ತನಾಲ್ಕನೇ ತಿದ್ದುಪಡಿಗಳು ಇತ್ಯಾದಿ.

6. **ಭಾರತದಲ್ಲಿ ಕಲ್ಯಾಮ ಪರಿಕಲ್ಪನೆ ವ್ಯವಸ್ಥೆ :** ರಾಜ್ಯ ನೀತಿಯ ನಿರ್ದೇಶಕ ತತ್ವಗಳು ಮತ್ತು ಅವುಗಳ ಸಂಬಂಧಗಳು, ಆಸ್ತಿ ಹಕ್ಕು, ಚುನಾವಣಾ ಆಯೋಗ, ಲೋಕ ಸೇವಾ ಆಯೋಗಗಳು, ಮಹಿಳಾ ಆಯೋಗ, ರಾಷ್ಟ್ರೀಯ ಮತ್ತು ರಾಜ್ಯ ಅಲ್ಪಸಂಖ್ಯಾತರ ಆಯೋಗ, ಹಿಂದುಳಿದ ವರ್ಗಗಳ ಆಯೋಗ, ಮಾನವ ಹಕ್ಕುಗಳ ಆಯೋಗ, ಹಣಕಾಸು ಆಯೋಗ, ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ.

7. **ಕೇಂದ್ರ ರಾಜ್ಯದಡಿಯಲ್ಲಿನ ಸೇವೆಗಳು :** ಸರ್ಕಾರ ಮತ್ತು ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ಅವಕಾಶಗಳು.

**ವಿಭಾಗ –3: ಸಾರ್ವಜನಿಕ ಆಡಳಿತ ಮತ್ತು ನಿರ್ವಹಣೆ – ಅಂತರಾಷ್ಟ್ರೀಯ ಸಂಬಂಧಗಳು (7 ಘಟಕಗಳು)**

1. **ಖಾಸಗಿ ಮತ್ತು ಸಾರ್ವಜನಿಕ ಆಡಳಿತ :** ಸಮಾಜದಲ್ಲಿ ಅವರ ಪಾತ್ರ, ಕಲೆ ಮತ್ತು ವಿಜ್ಞಾನದಲ್ಲಿ ಸಾರ್ವಜನಿಕ ಆಡಳಿತ, ಹೊಸ ಸಾರ್ವಜನಿಕ ಆಡಳಿತ ಮತ್ತು ಹೊಸ ಸಾರ್ವಜನಿಕ ನಿರ್ವಹಣೆ, ಪ್ರತಿಕ್ರಿಯಾಶೀಲ ಆಡಳಿತ, ಆಡಳಿತ ಮತ್ತು ನಿರ್ವಹಣೆ ನಡುವಿನ ವ್ಯತ್ಯಾಸ, ಸಾರ್ವಜನಿಕ ಮತ್ತು ಖಾಸಗಿ ಆಡಳಿತದ ನಡುವಿನ ವ್ಯತ್ಯಾಸ.

2. **ಸಂಘಟನೆ ರಚನೆ :** ಸಿಬ್ಬಂದಿ, ಹಣಕಾಸು, ಆಡಳಿತಾತ್ಮಕ ಕಾನೂನು, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ, ಜನಕಲ್ಯಾಣ ಆಡಳಿತ, ಭಾರತೀಯ ಆಡಳಿತದಲ್ಲಿ ಪ್ರದೇಶಗಳ ವಿವಾದಗಳು, ಅಭಿವೃದ್ಧಿ ಆಡಳಿತ.

3. **ಸಾಂಸ್ಕೃತಿಕ ವರ್ತನೆ ಮತ್ತು ನಿರ್ವಹಣೆ ಪರಿಕಲ್ಪನೆಗಳು :** ಸಾಂಸ್ಥಿಕ ರಚನೆ, ವ್ಯವಸ್ಥೆಗಳು, ಪ್ರಕ್ರಿಯೆಗಳು, ತಂತ್ರ ಕುಶಲತೆ, ಕಾರ್ಯನೀತಿಗಳು ಮತ್ತು ಉದ್ದೇಶಗಳು, ನಿರ್ಧಾರ ತೆಗೆದುಕೊಳ್ಳುವುದು, ಸಂವಹನ, ಕೇಂದ್ರೀಕರಣ, ವಿಕೇಂದ್ರೀಕರಣ, ಅಧಿಕಾರದ ಪ್ರತ್ಯಾಯೋಜನೆ, ಹೊಣೆಗಾರಿಕೆ, ನಿಯಂತ್ರಣ.

4. **ಔಪಚಾರಿಕ ಮತ್ತು ಅನೌಪಚಾರಿಕ ಸಂಘಟನೆ :** ಪ್ರಕಾರ್ಯಗಳ ನಿರ್ವಹಣೆ, ಹಣಕಾಸು, ಎಚ್‌ಆರ್ ವ್ಯಾಪಾರೋದ್ಯಮ, ಉತ್ಪಾದನೆ, ನಾಯಕತ್ವ ಮತ್ತು ಪ್ರೇರಣೆ.

5. **ನಿರ್ವಹಣೆ ಸಾಧನಗಳು ಮತ್ತು ತಂತ್ರಗಳು :** ಅನಿಶ್ಚಿತತೆ ಉಂಟಾದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಪಿಇಆರ್‌ಟಿ ಮತ್ತು ಸಿಪಿಎಂ, ಪಿಐಎಂಇ, ಪಿಓಎಸ್‌ಡಿ – ಸಿಓಆರ್‌ಬಿ, ಎಸ್‌ಡಬ್ಲ್ಯೂಓಟಿ ವಿಶ್ಲೇಷಣೆಗಳು, ಗುಣಮಟ್ಟ ಮತ್ತು ಮೌಲ್ಯನಿರ್ಣಯ ಕಾರ್ಯನಿರ್ವಹಣೆ, ಪಿಡಿಸಿಎ ಆವರ್ತ, ಸಿಬ್ಬಂದಿ ಕಾರ್ಯ ನೀತಿಗಳು, ಮಾನವ ಶಕ್ತಿ – ಕಾರ್ಯನೀತಿ ಮತ್ತು ಯೋಜನೆ, ತರಬೇತಿ ಮತ್ತು ಅಭಿವೃದ್ಧಿ, ಸಂಘರ್ಷ ನಿರ್ವಹಣೆ, ಬದಲಾವಣೆ ಮತ್ತು ಅಭಿವೃದ್ಧಿಯ ನಿರ್ವಹಣೆ, ತಂಡ ರಚನೆ ಗುಣಮಟ್ಟದ ಉಪಕರಣಗಳು (ಹೊಸ ಕಲ್ಪನೆಗಳನ್ನು ಚರ್ಚಿಸುವ ವಿಧಾನ, ನಾಮಿನಲ್ ಗ್ರೂಪ್ ಟೆಕ್ನಿಕ್), ಪೆರೆಟೋ ಚಾರ್ಟ್, ಫಿಷದೊನ್ ಚಿತ್ರ ಮತ್ತು ಪ್ರೊಸೆಸ್ ಚಾರ್ಟ್.

6. **ಆಡಳಿತಾತ್ಮಕ ಸುಧಾರಣೆಗಳು :** ಸಾರ್ವಜನಿಕ ಸೇವೆಯಲ್ಲಿ ನೀತಿ ಮತ್ತು ಮೌಲ್ಯಗಳು, ಸಾರ್ವಜನಿಕ ಸಂಬಂಧಗಳು, ಉತ್ತಮ ಆಡಳಿತ, ಹೊಣೆಗಾರಿಕೆ ಮತ್ತು ನಿಯಂತ್ರಣ, ಕಾರ್ಯಕ್ರಮದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ, ಲೋಕಪಾಲ ಮತ್ತು ಲೋಕಾಯುಕ್ತ, ನಾಗರಿಕ ಕುಂದು ಕೊರತೆಗಳ ನಿವಾರಣೆಗಳು, ಜಿಲ್ಲಾಡಳಿತ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಅಭಿವೃದ್ಧಿ ಕಾರ್ಯಗಳು, ಅಭಿವೃದ್ಧಿ ಕಾರ್ಯಕ್ರಮಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಮಹಿಳೆಯ ಕಲ್ಯಾಣ ಕಾರ್ಯಕ್ರಮಗಳು, ಜನರ ಪಾಲ್ಗೊಳ್ಳುವಿಕೆ, ಆಡಳಿತಾತ್ಮಕ ಸುಧಾರಣೆಗಳ ಆಯೋಗಗಳು – ಕೇಂದ್ರ ಮತ್ತು ರಾಜ್ಯ.

7. **ವಿಶ್ವಸಂಸ್ಥೆ ರಾಷ್ಟ್ರಗಳು ಮತ್ತು ವಿಶಿಷ್ಟ ಏಜೆನ್ಸಿಗಳು :** ಇತರ ಅಂತರಾಷ್ಟ್ರೀಯ ಸಂಘಟನೆಗಳು ಮತ್ತು ಏಜೆನ್ಸಿಗಳು, ಯುಎನ್‌ಓದ ಮೂಲ ಮತ್ತು ಅಭಿವೃದ್ಧಿ – ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಪಾತ್ರ, ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಆರ್ಥಿಕ ಮತ್ತು ಸಾಮಾಜಿಕ ಮಂಡಳಿ, ಟ್ರಸ್ಟಿಶಿಫ್ ಕೌನ್ಸಿಲ್, ಅಂತಾರಾಷ್ಟ್ರೀಯ ನ್ಯಾಯಾಲಯ.

ಯುಎನ್ ಮತ್ತು ಶಾಂತಿ ಪಾಲನಾ ನಿರ್ವಹಣೆಗಳು, ಯುಎನ್ ಮತ್ತು ನಿಶ್ಯಸ್ತ್ರೀಕರಣ, ಯುಎನ್ ಲಕ್ಷಣಗಳು, ಡಬ್ಲ್ಯೂಎಚ್‌ಓ, ಐಎಲ್‌ಓ, ಎಫ್‌ಎಓ ಇತ್ಯಾದಿಗಳಂಥ ವಿಶೇಷ ಏಜೆನ್ಸಿಗಳು, ಐಎಮ್‌ಎಫ್‌ನಂತ ಅಂತರರಾಷ್ಟ್ರೀಯ ಸಂಸ್ಥೆಗಳು, ವಿಶ್ವಬ್ಯಾಂಕ್, ಎಡಿಬಿ, ಡಬ್ಲ್ಯೂಟಿಓ, ಇಯು, ಎಎಸ್‌ಇಎಎನ್, ಸಾರ್ಕ್, ಎಯು, ಎನ್‌ಎಟಿಓ, ಎನ್‌ಎಎಮ್, ಓಪಿಇಸಿ, ಜಿ–8, ಐಎಇಎ ಇತ್ಯಾದಿಗಳು, ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಅಭಿವೃದ್ಧಿ ರಾಷ್ಟ್ರಗಳ ಪಾತ್ರ, ಭಾರತ ಮತ್ತು ಅದರ ನೆರೆಹೊರೆ ರಾಷ್ಟ್ರಗಳು ಇತ್ಯಾದಿ.

# ಅಧ್ಯಾಯ – 1
# ಪ್ರಪಂಚದ ಭೂಗೋಳ

ನಮಗೆ ನೆಲೆ, ನೀರು, ಆಶ್ರಯ ಬದುಕು ಕೊಟ್ಟ ಭೂಮಿಯ ಬಗ್ಗೆ ಅರಿಯದೇ ಹೋದರೆ ಯಾವ ಪಾಂಡಿತ್ಯವನ್ನು ಗಳಿಸಿದರೂ ಅಪೂರ್ಣ. ಕ್ರಿಸ್ತ ಪೂರ್ವದಲ್ಲೇ ಭೂಗೋಳ ಒಂದು ಅಧ್ಯಯನ ವಿಷಯವಾಗಿ ಬೆಳೆಯಿತು.

ಗ್ರೀಕ್ ಭಾಷೆಯಲ್ಲಿ ಜಿಯೋ ಅಂದರೆ ಭೂಮಿ, ಗ್ರಾಫೆನ್ ಎಂದರೆ ಅಧ್ಯಯನ ಅಥವಾ ವಿವರಣೆ. ಹೀಗೆ ಜಿಯೋಗ್ರಾಫಿ ಅಂದರೆ ಭೂಮಿಯ ವಿವರಣೆ ಎಂದವನು ಗ್ರೀಕ್‌ನ ಎರಟಾಸ್ತಾನಿಸ್ (ಕ್ರಿ.ಪೂ.276–194). ಜರ್ಮನಿ ದೇಶದ ಅಲೆಗ್ಸಾಂಡರ್ ವಾನ್ ಹಂಬೋಲ್ಡ್ (ಕ್ರಿ.ಶ.1769–1859)ರನ್ನು ಆಧುನಿಕ ಭೂಗೋಳ ಶಾಸ್ತ್ರದ ಪಿತಾಮಹ ಎಂದು ಕರೆಯಲಾಗುತ್ತದೆ.

**ಮಾನವ ನಿರ್ಮಿತ ಭೂಗೋಳ ಶಾಸ್ತ್ರ:**

ಸಾರಿಗೆ, ಕೈಗಾರಿಕೆ, ನಗರೀಕರಣ, ವ್ಯವಸಾಯ, ನೀರಾವರಿ, ಜನಸಂಖ್ಯೆ, ಜಾಗತಿಕ ಮತ್ತು ಪ್ರಾದೇಶಿಕ ರಾಜಕೀಯ.

**ಪ್ರಕೃತಿ ನಿರ್ಮಿತ ಭೂಗೋಳ ಶಾಸ್ತ್ರದಲ್ಲಿ ಬರುವ ಲಕ್ಷಣಗಳು:**

ಜ್ವಾಲಾಮುಖಿಗಳು, ಭೂಕಂಪಗಳು, ಶಿಲೆಗಳು, ಸಾಗರ, ಸಮುದ್ರ, ಅನಿಲಗಳ ರಾಶಿ, ಭೂ ವಿಭಾಗ.

**ಪ್ರಾಕೃತಿಕ ಭೂಗೋಳ ಶಾಸ್ತ್ರ:**

**1) ಶಿಲಾಗೋಳ:**

ಭೂಮಿಯ ಮೇಲ್ಭಾಗದ ಪದರನ್ನು ಶಿಲಾಗೋಳವೆಂದು ಕರೆಯಲಾಗುತ್ತದೆ. ಭೂಮಿಯ ಮೇಲ್ಭಾಗದಲ್ಲಿ ಮಣ್ಣುಗಳು, ವಿವಿಧ ರೀತಿಯ ಶಿಲೆಗಳು ಹಾಗೂ ಸ್ವರೂಪಗಳ ಬಗ್ಗೆ ವಿವರಣೆ.

1. ಭೂ ಸ್ವರೂಪ ರಚನಾ ಶಾಸ್ತ್ರ: ನಿರ್ಮಾಣ, ರಚನೆ, ನಗ್ನೀಕರಣ.

2. ಮಣ್ಣಿನ ಶಾಸ್ತ್ರ: ಉಗಮ, ರಚನೆ, ಸಂಯೋಜನೆ, ಹಂಚಿಕೆ.

3. ಶಿಲಾಶಾಸ್ತ್ರ: ಶಿಲೆಗಳ ಉತ್ಪತ್ತಿ, ರಚನೆ, ಗುಣಲಕ್ಷಣ, ವಿಧಗಳು, ಶಿಲೆಗಳ ರಾಸಾಯನಿಕ ಸಂಯೋಜನೆ.

**2) ವಾಯುಗೋಳ:**

ವಾಯುಮಂಡಲದ ಹವಾಮಾನದ ಘಟಕಗಳಾದ ಉಷ್ಣತೆ, ಮಳೆ, ಒತ್ತಡ, ಮಾರುತಗಳ ವೇಗ, ದಿಕ್ಕು ಇವುಗಳ ಬಗ್ಗೆ ಕೂಲಂಕುಷ ಅಧ್ಯಯನ.

**3) ಜಲಗೋಳ:**

ಭೂಮಿಯ ಮೇಲ್ಭಾಗದ ಸಾಗರ, ಸಮುದ್ರ, ನದಿ, ಜಲಸಂಧಿ, ಕೊಲ್ಲಿ, ಖಾರಿ, ಮುಂತಾದ ಜಲರಾಶಿಗಳ ಅಧ್ಯಯನ.

**ವಿಶ್ವ:**

ಬ್ರಹ್ಮಾಂಡದಲ್ಲಿ ಗ್ರಹಗಳು, ಉಪಗ್ರಹಗಳು, ಉಲ್ಕೆಗಳು, ಕ್ಷುದ್ರ ಗ್ರಹಗಳು, ಧೂಮಕೇತುಗಳು ವಿಶ್ವದ ಆಕಾಶಕಾಯಗಳು. ಈ ಆಕಾಶಕಾಯಗಳ ಆಕಾರ, ಗಾತ್ರ, ಚಲನೆ ಮುಂತಾದವುಗಳ ಬಗ್ಗೆ ಅಧ್ಯಯನ ಮಾಡುವುದೇ ಖಗೋಳ ಶಾಸ್ತ್ರ. ವಿಶ್ವದ ಉಗಮ, ಸ್ಥಿತಿ, ಲಯ ಮತ್ತು ವಿಶ್ವದ ವ್ಯಾಪ್ತಿಯನ್ನು ಕುರಿತ ಅಧ್ಯಯನವನ್ನು 'ವಿಶ್ವಸೃಷ್ಟಿ ವಿಜ್ಞಾನ' ಎಂದು ಕರೆಯುವರು.

ಸೌರವ್ಯೂಹ ಅಥವಾ ನಾವು ಇರುವ ನಕ್ಷತ್ರ ಪುಂಜ 'ಕ್ಷೀರಪಥ' ಅಥವಾ ಆಕಾಶ ಗಂಗೆ. ಇದು ಜ್ಯೋತಿರ್ ಮೇಘದ ಆಕಾರದಲ್ಲಿದೆ. ಇಲ್ಲಿ ಸುಮಾರು 200 ಬಿ.ನಕ್ಷತ್ರಗಳಿರಬಹುದು. ನಮ್ಮ ಸೌರವ್ಯೂಹವು ಕ್ಷೀರ ಪಥ ನಕ್ಷತ್ರ

ಪುಂಜವನ್ನು ಸುತ್ತು ಹಾಕಲು ಸುಮಾರು 250 ಮಿಲಿಯನ್ ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಈ ಅವಧಿಯನ್ನು 'ಕಾಸ್ಮಿಕ್ ವರ್ಷ' ಎನ್ನುವರು.

ಸೂರ್ಯ ಮತ್ತು ಭೂಮಿಯ ಮಧ್ಯದ ಅಂತರ ಸರಾಸರಿ 149.5 ಮೀ.ಕಿ.ಮೀ. ಈ ದೂರವನ್ನು 'ಖಗೋಳ ಮಾನ' ಎನ್ನುವರು.

**ಸೌರವ್ಯೂಹ:**

ಸೂರ್ಯನಿಂದ ಕೇಂದ್ರಿತಗೊಂಡು, ಅಷ್ಟ ಗ್ರಹಗಳು, ಉಪಗ್ರಹ, ಕ್ಷುದ್ರಗಳು, ಧೂಮಕೇತುಗಳು, ಉಲ್ಕೆಗಳು ಮುಂತಾದವುಗಳಿಂದ ಆವೃತವಾದ ವ್ಯವಸ್ಥೆ. ಸೂರ್ಯನ ಹತ್ತಿರದಲ್ಲಿರುವ ನಕ್ಷತ್ರವೆಂದರೆ ಪ್ರಾಕ್ಸಿಮಾ ಸೆಂಟಾರಿ. ಇದು 43 ಜ್ಯೋತಿರ್ ವರ್ಷ ದೂರದಲ್ಲಿದೆ.

**ಸೂರ್ಯ:**

ಇದು ಸ್ವಪ್ರಕಾಶವುಳ್ಳ ನಕ್ಷತ್ರ, 4.6 ಬಿ. ವರ್ಷಗಳ ಹಿಂದೆ ಉಗಮವಾಗಿದ್ದಾನೆ ಎಂದು ಅಂದಾಜಿಸಲಾಗಿದೆ. ಸೂರ್ಯನ ಆಯುಷ್ಯ 10 ಬಿಲಿಯನ್ ವರ್ಷಗಳು. ಸಊರ್ಯ ಸೌರವ್ಯೂಹದ 99%ರಷ್ಟು ದ್ರವ್ಯರಾಶಿಯನ್ನು ಹೊಂದಿದೆ.

ಸೂರ್ಯನಲ್ಲಿ 71%ರಷ್ಟು ಜಲಜನಕ, 27%ರಷ್ಟು ಹಿಲಿಯಂ ಇದೆ. ಇಲ್ಲಿ ಉಷ್ಣತೆ ಬೈಜಿಕ ಸಮ್ಮಿಲನ ಕ್ರಿಯೆ ಮೂಲಕ ಉತ್ಪತ್ತಿಯಾಗುತ್ತದೆ. ಸೂರ್ಯನ ಹೊರಗೆ 6000 ಡಿಗ್ರಿ ಸೆಲ್ಸಿಯಸ್ ಒಳಗೆ 15 ದಶಲಕ್ಷ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆ ಇರಬಹುದು.

**ಗ್ರಹಗಳು:**

ನಮ್ಮ ಸೌರವ್ಯೂಹವು ಒಟ್ಟು 8 ಗ್ರಹಗಳನ್ನು ಹೊಂದಿದೆ. ಅದರಲ್ಲಿ, ಗಡಿಯಾರದ ದಿಕ್ಕಿಗೆ ಅನುಗುಣವಾಗಿ ಸುತ್ತುವ ಗ್ರಹಗಳು – ಶುಕ್ರ ಮತ್ತು ಯುರೇನಸ್.

* ಪ್ಲೋಟೋ ತನ್ನ ಗ್ರಹದ ಸ್ಥಾನಮಾನ ಕಳೆದುಕೊಳ್ಳಲು ಕಾರಣಗಳು:
* ಬುಧ ಗ್ರಹಕ್ಕಿಂತಲೂ ಚಿಕ್ಕದಾಗಿದೆ.
* ಪ್ಲೋಟೋಗಿಂತಲೂ ದೊಡ್ಡದಾಗಿರುವ ಅನೇಕ ಆಕಾಶಕಾಯಗಳಿವೆ.
* ಇದರ ಪಥವು ಸುಧೀರ್ಘ ಅಂಡಾಕಾರವಾಗಿದೆ.
* ಇದು ಸೂರ್ಯನನ್ನು ಸುತ್ತುವ ಸಂಶಯವಿದೆ. ಬೇರಾವುದೋ ನಕ್ಷತ್ರದ ಸುತ್ತ ಸುತ್ತುತ್ತಿದೆ.

**ಬುಧ ಗ್ರಹ:**

ಇದು ಸೂರ್ಯನಿಗೆ ಅತ್ಯಂತ ಸಮೀಪ ಮತ್ತು ಚಿಕ್ಕ ಗ್ರಹವಾಗಿದೆ. ಇದಕ್ಕೆ ಯಾವುದೇ ಉಪಗ್ರಹಗಳಿಲ್ಲ.

**ಶುಕ್ರ ಗ್ರಹ:**

ಇದು 2ನೇಯ ಗ್ರಹವಾಗಿದ್ದು, ಪ್ರಜ್ವಲಿಸುವ ಏಕೈಕ ಗ್ರಹವಾಗಿದೆ. ಇದನ್ನು ಮುಂಜಾನೆ ನಕ್ಷತ್ರ ಎಂದು ಕರೆಯುವರು. ಇದರ ಅವಧಿ ಅಕ್ಷಭ್ರಮಣ–243 ಮತ್ತು ಪರಿಭ್ರಮಣ. ಅವಧಿ 225 ದಿನಗಳು. ಇದಕ್ಕೆ ಯಾವುದೇ ಉಪಗ್ರಹಗಳಿಲ್ಲ. ಈ ಗ್ರಹದ ವಾಯುಮಂಡಲದಲ್ಲಿ ಶೇ.90ರಷ್ಟು ಕಾರ್ಬನ್ ಡೈಆಕ್ಸೈಡ್ ಇದೆ.

**ಭೂಮಿ:**

ಭೂಮಿಯ ಅಕ್ಷಭ್ರಮಣ ಅವಧಿ 23 ಗಂಟೆ, 56 ನಿಮಿಷ. ಮತ್ತು ಪರಿಭ್ರಮಣ 365.25 ದಿನ. ಭೂಮಿಯ ನೈಸರ್ಗಿಕ ಉಪಗ್ರಹ ಚಂದ್ರ. ಇದು ಸೌರವ್ಯೂಹದ 5ನೇ ದೊಡ್ಡ ಗ್ರಹ ಮತ್ತು ಸೂರ್ಯನಿಂದ 3ನೇ ಸ್ಥಾನದಲ್ಲಿದೆ. ಇದು ಅತಿ ಹೆಚ್ಚು ಸಾಂದ್ರತೆಯನ್ನು ಹೊಂದಿದೆ. (5.52) ಭೂಮಿಯನ್ನು ನೀಲಿಗ್ರಹ ಎಂದು ಕರೆಯುವರು. ಭೂಮಿಯ ಸಮಭಾಜಕ ವೃತ್ತದ ವ್ಯಾಸ – 12,757 ಕಿ.ಮೀ. ಭೂಮಿಯ ಧ್ರುವಿಯ ವ್ಯಾಸ 12,714 ಕಿ.ಮೀ. ಭೂಮಿಯ ಸಮಭಾಜಕ ವೃತ್ತದ ಸುತ್ತಳತೆ – 40,076ಕಿ.ಮೀ. ಭೂಮಿಯ ಧ್ರುವಿಯ ಸುತ್ತಳತೆ

– 40,008 ಕಿ.ಮೀ. ಭೂಮಿಯ ಅಂದಾಜು ವಯಸ್ಸು 4,500 ದಶಲಕ್ಷ ವರ್ಷ. ಭೂಮಿ ಸೂರ್ಯನಿಂದ 149.6 ದಶಲಕ್ಷ ಕಿ.ಮೀ. ದೂರದಲ್ಲಿದೆ. ಏಪ್ರಿಲ್ 22ರಂದು ಭೂ ದಿನವಾಗಿ ಆಚರಣೆ ಮಾಡಲಾಗುತ್ತದೆ.

**ಚಂದ್ರ:**

ಇದು ಭೂಮಿಯ ಏಕೈಕ ನೈಸರ್ಗಿಕ ಉಪಗ್ರಹ. ಇದು ಭೂಮಿಯಿಂದ 3,84,000 ಕಿ.ಮೀ. ದೂರದಲ್ಲಿದೆ. ಚಂದ್ರನ ಕುರಿತು ಅಧ್ಯಯನ ಮಾಡುವುದನ್ನು 'ಸೆಲೆನೊಲಾಜಿ' ಎನ್ನುವರು. ಚಂದ್ರನ ಬೆಳಕು ಭೂಮಿಗೆ ತಲುಪಲು 1.25 ಸೆ. ಅವಧಿ ಬೇಕು. ಚಂದ್ರನ ಅಕ್ಷಯಭ್ರಮಣ ಅವಧಿಯು 27 ದಿನ 7 ಗಂಟೆ 43 ನಿಮಿಷ. ಚಂದ್ರನು ಭೂಮಿಯನ್ನು ಸುತ್ತುವ ಪರಿಭ್ರಮಣ ಅವಧಿ 27 ದಿನ 7 ಗಂಟೆ ಅವಧಿ. ಇದೇ ಕಾರಣಕ್ಕಾಗಿ ಭೂಮಿಗೆ ಚಂದ್ರನ ಶೇ.59 ಭಾಗ ಮಾತ್ರ ಕಾಣುವುದು. ಅಕ್ಷ ಮತ್ತು ಪರಿಭ್ರಮದ ಅವಧಿಗಳು ಒಂದೇ ಆಗಿವೆ. ಚಂದ್ರನು ಭೂಮಿಗೆ ಸಮೀಪ ಬರುವ ದಿನಕ್ಕೆ ಪೆರಿಜಿ ದಿನ ಮತ್ತು ಚಂದ್ರನು ಭೂಮಿಯಿಂದ ದೂರ ಹೋಗುವ ದಿನಕ್ಕೆ ಅಪೋಜಿ ದಿನ ಎನ್ನುವರು. ಚಂದ್ರನಲ್ಲಿ ನಿಂತು ಅಂತರಿಕ್ಷ ನೋಡಿದರೆ ಕಪ್ಪಾಗಿ ಕಾಣುವುದು. ಅಂತರಿಕ್ಷದಿಂದ ಭೂಮಿಯನ್ನು ನೋಡಿದರೆ ಚೀನಾದ ಮಹಾಗೋಡೆ ಕಾಣಿಸುವುದು.

**ಮಂಗಳ ಗ್ರಹ:**

ಇದನ್ನು ಕೆಂಪು ಗ್ರಹ, ಅಂಗಾಕಾರ, ಕುಜ ಎನ್ನುವರು. ಇದರ ಅಕ್ಷಭ್ರಮಣ ಅವಧಿ 24 ಗಂಟೆ 6 ನಿಮಿಷ ಮತ್ತು ಪರಿಭ್ರಮಣ ಅವಧಿ 687 ದಿನ. ಮಂಗಳ ಗ್ರಹವು ಸಾರಜನಕ, ಆರ್ಗಾನ್, ಆಮ್ಲಜನಕ ಹೊಂದಿದೆ. ಈ ಗ್ರಹದ ಉಪಗ್ರಹಗಳು ಪೋಬೋಸ್ ಮತ್ತು ಡಿಮೋಸ್. ಮಂಗಳ ಗ್ರಹ 7ನೇ ದೊಡ್ಡ ಗ್ರಹ. ಸೂರ್ಯನಿಂದ 4ನೇ ಸ್ಥಾನದಲ್ಲಿರುವ ಗ್ರಹ, ಭೂಮಿಯ ಹೋಲಿಕೆ ಹೊಂದಿದೆ. ಇದರ ವ್ಯಾಸ 12,118 ಕಿ.ಮೀ. ಇಲ್ಲಿ ನಂದಿದ ಜ್ವಾಲಾಮುಖಿ ಪರ್ವತಗಳಿವೆ. ಅತಿ ಎತ್ತರವಾದ ಜ್ವಾಲಾಮುಖಿ ಪರ್ವತ ನಿಕ್ಸ ಓಲಂಪಿಯಾ. ಅದು ಮೌಂಟ್ ಪರ್ವತದ ಮೂರು ಪಟ್ಟು ಎತ್ತರವಾಗಿದೆ.

ಮಂಗಳಕ್ಕೆ ಕಳುಹಿಸಿದ ಪ್ರಮುಖ ಉಪಗ್ರಹಗಳು ಈ ಕೆಳಗಿನಂತಿವೆ.

1965 – ಮರಿನಾ –4

1976 – ವೈಕಿಂಗ್ ವ್ಯೂಮ್

1993 – ಮಾರ್ಸ್ ಸರ್ವೇಯಸ್

1997 – ಪಾಥ್ ಪೈಂಡರ್

2003 – ಸ್ಪಿರಿಟ್

2005 – ಅಪಾರ್ಚುನಿಟಿ

2007 – ಫಿನಿಕ್ಸ್ ಲ್ಯಾಂಡರ್

2011 – ಕ್ಯೂರಿಯಾಸಿಟಿ

(2012)

2013 – ಮೊಮ್

2013 – ಮಾವೆನ್

**ಗುರು ಗ್ರಹ:**

ಇದು ಸೌರವ್ಯೂಹದ ಅತ್ಯಂತ ದೊಡ್ಡ ಗ್ರಹ. ಇದರ ಅಕ್ಷಭ್ರಮಣ ಅವಧಿ 9 ಗಂಟೆ 50 ನಿಮಿಷ ಪರಿಭ್ರಮಣ ಅವಧಿ 11.86 ವರ್ಷ. ಇದು ಅಮೋನಿಯಾ, ಮಿಥೇನ್, ಜಲಜನಕಗಳಿಂದಾವೃತವಾಗಿದೆ. ಇದಕ್ಕೆ 63ಕ್ಕಿಂತ ಹೆಚ್ಚು ಉಪಗ್ರಹಗಳು ಗ್ಯಾನಿಮೆಡ್, ಸೌರವ್ಯೂಹದ ಅತಿ ದೊಡ್ಡ ಉಪಗ್ರಹ.

ಶನಿ:

ಇದು ಉಂಗುರ ವ್ಯವಸ್ಥೆ ಹೊಂದಿದೆ. ಇದಕ್ಕೆ 3 ರೀತಿಯ ಉಂಗುರಗಳಿವೆ. ಇದರ ಅಕ್ಷಭ್ರಮಣ 10 ಗಂಟೆ 14 ನಿಮಿಷ ಮತ್ತು ಪರಿಭ್ರಮಣ 29.46 ವರ್ಷ. ಇದಕ್ಕೂ ಕೂಡ 60ಕ್ಕಿಂತ ಹೆಚ್ಚು ಉಪಗ್ರಹಗಳು. ಟೈಟಾನ್ ಶನಿಯ ದೊಡ್ಡ ಉಪಗ್ರಹ. ಇದು ವಾತಾವರಣ ಹೊಂದಿದ ಏಕೈಕ ಉಪಗ್ರಹವಾಗಿದೆ ಇದು ಅತಿ ಕಡಿಮೆ ಸಾಂದ್ರತೆ ಹೊಂದಿದೆ.

**ಯುರೇನಸ್:**

7ನೇ ಸ್ಥಾನದಲ್ಲಿರುವ ಈ ಗ್ರಹವು 27 ಉಪಗ್ರಹಗಳನ್ನು ಹೊಂದಿದೆ. ಇದರ ವಾತಾವರಣವು ಮಿಥೇನ್ ಮತ್ತು ಅಮೋನಿಯಾಗಳಿಂದ ಕೂಡಿದೆ. ಇದರ ಅಕ್ಷಭ್ರಮಣ 16 ಗಂಟೆ ಮತ್ತು ಪರಿಭ್ರಮಣ 84.02 ವರ್ಷಗಳು.

**ನೆಪ್ಚೂನ್:**

ಇದು ಕೊನೆಯ ಗ್ರಹ. ಇದಕ್ಕೆ 13 ಉಪಗ್ರಹಗಳಿವೆ. ಇದರ ಅಕ್ಷಭ್ರಮಣ 16 ಗಂಟೆ 23 ನಿಮಿಷ ಪರಿಭ್ರಮಣ 164.8 ವರ್ಷ. ಈ ಗ್ರಹದ ವಾತಾವರಣವು ಮಿಥೇನ್, ಜಲಜನಕ ಹಾಗೂ ಹೀಲಿಯಂ ಅನಿಲಗಳಿಂದ ಕೂಡಿದೆ.

**ಉಲ್ಕೆಗಳು:**

ಉಲ್ಕೆಗಳನ್ನು ಮಿನುಗುವ ನಕ್ಷತ್ರ ಎನ್ನುವರು. ಆಕಾಶದಿಂದ ಭೂಮಿಗೆ ಬೀಳುವ ಚಿಕ್ಕ ತುನುಕುಗಳೇ (ಸೌರ ತ್ಯಾಜ್ಯ) ಉಲ್ಕೆಗಳು. ಇವು ಮಧ್ಯಮಂಡಲದಲ್ಲಿ ಉರಿದು ಹೋಗುತ್ತವೆ. ಉಲ್ಕೆಗಳಲ್ಲಿ ಕಬ್ಬಿಣ, ನಿಕ್ಕೆಲ್, ಸಿಲಿಕೆಟ್ ಖನಿಜಗಳಿರುತ್ತವೆ. ಕೆನಡಾದ ಬಚ್‌ಕುಂಡ್, ಯು.ಎಸ್.ಎ ಬ್ಯಾರೆಂಜರ್ ಕುಂಡ್, ಆಸ್ಟ್ರೇಲಿಯಾದ ಹೆನ್ಬುರಿ ಕುಂಡಗಳು ಉಲ್ಕಾಪಾತದಿಂದಾಗಿವೆ.

**ಕ್ಷುದ್ರ ಗ್ರಹಗಳು:**

ಮಂಗಳ ಮತ್ತು ಗುರು ಗ್ರಹಗಳ ನಡುವೆ ಇರುವ ಚಿಕ್ಕ ಚಿಕ್ಕ ಆಕಾಶ ಕಾಯಗಳೇ ಕ್ಷುದ್ರ ಗ್ರಹಗಳು. ಸುಮಾರು 45,000 ಕ್ಷುದ್ರಗ್ರಹಗಳಿರಬಹುದೆಂಬ ಅಂದಾಜು ಮಾಡಲಾಗಿದೆ. ಪ್ರಮುಖ ಕ್ಷುದ್ರ ಗ್ರಹಗಳು ಸಿರಿಸ್, ಪಲ್ಲಾಸ್, ಜುನೊ, ವೆಸ್ತಾ. ಇವುಗಳಲ್ಲಿ ಸಿರಿಸ್ ಅತಿ ದೊಡ್ಡ ಕ್ಷುದ್ರ ಗ್ರಹ. ಇವುಗಳಲ್ಲಿ ವೆಸ್ತಾ ಹೊಳೆಯುವ ಕ್ಷುದ್ರ ಗ್ರಹ.

**ಧೂಮಕೇತುಗಳು:**

ಅತಿ ದೀರ್ಘ ವೃತ್ತಾಕಾರದ ಪಥದಲ್ಲಿ ಸೂರ್ಯನ ಸುತ್ತಲೂ ಪ್ರದಕ್ಷಿಣೆ ಹಾಕುವ ಬಾಲವುಳ್ಳ ಆಕಾಶ ಕಾಯಗಳಿಗೆ ಧೂಮಕೇತು ಎನ್ನುವರು. ಇವು ಸೂರ್ಯನನ್ನು ಒಂದು ಸುತ್ತು ಹಾಕಲು 100ರಿಂದ 1000 ವರ್ಷ ಅವಧಿ ತೆಗೆದುಕೊಳ್ಳುವುವು. ಅದರ ಬಾಲ ಸೂರ್ಯನಿಗೆ ವಿರುದ್ಧ ದಿಕ್ಕನಲ್ಲಿರುವುದು.

ಹ್ಯಾಲಿ ಧೂಮಕೇತು 76 ವರ್ಷಗಳಿಗೊಮ್ಮೆ ಕಾಣುವುದು. 1986ರಲ್ಲಿ ಹ್ಯಾಲಿ ಧೂಮಕೇತು ಕಾಣಿಸಿತ್ತು. ಪ್ರಮುಖ ಧೂಮಕೇತುಗಳು,

| | | |
|---|---|---|
| ಶೋಮೆಕರ | – | 1994 |
| ಹೆಲೆಬಾಪ್ | – | 1997 |
| ಗ್ರೇಟ್ | – | 1811 |

ಟೆಂಪಲ್ ಒನ್ ಇತ್ಯಾದಿ.

**ನಮ್ಮ ಭೂಮಿ:**

ತನ್ನ ಗುರುತ್ವಾಕರ್ಷಣೆಯ ಬಲದಿಂದಾಗಿ ವಾಯುಗೋಳ ಮತ್ತು ಜಲಗೋಳವನ್ನು ಬಂಧಿಸಿಕೊಂಡಿದೆ. ಭೂಮಿ ಸಮಭಾಜಕ ವೃತ್ತದ ಬಳಿ ಉಬ್ಬಿಕೊಂಡಿದ್ದು, ಧೃವೀಯ ಪ್ರದೇಶಗಳಲ್ಲಿ ಚಪ್ಪಟೆಯಾಗಿದೆ. ಇದನ್ನು ಲಘುಗೋಳ ಕಲ್ಪ ಎಂದು ಕರೆಯಲಾಗುತ್ತದೆ.

ಈ ಲಘುಗೋಳಕ್ಕೆ ಕಾರಣ ಭೂಮಿಯು ತನ್ನ ಸುತ್ತ ತಾನು ತಿರುಗುವಾಗ ಉಂಟಾಗುವ ಕೇಂದ್ರಾಪಗಮನ ಶಕ್ತಿ.

ಭೂಮಿಯ ಅಕ್ಷವು 23 1/2 ಕೋನದಲ್ಲಿ ಓರೆಯಾಗಿದೆ. ಹಾಗೂ ಭೂಮಿಯು ಸೂರ್ಯನ ಸುತ್ತ ತಿರುಗುವುದರಿಂದ ಋತುಮಾನಗಳು ಸಂಭವಿಸುತ್ತವೆ. ವರ್ಷದಲ್ಲಿ ಸೂರ್ಯನು 2 ದಿನಗಳಲ್ಲಿ ಭೂಮಧ್ಯೆ ರೇಖೆಯ ಮೇಲೆ ನೇರವಾಗಿ ಪ್ರಕಾಶಿಸುತ್ತಾನೆ. ಅಉಗಳು ಮಾರ್ಚ್ 21 ಮತ್ತು ಸೆಪ್ಟೆಂಬರ್ 23ರಂದು. ಈ 2 ದಿನಗಳನ್ನು ವಇಷವತ್ಸ ಕ್ರಾಂತ ಎಂದು ಕರೆಯುವರು. ಈ ದಿನಗಳಲ್ಲಿ ರಾತ್ರಿ ಮತ್ತು ಹಗಲುಗಳ ಅವಧಿ ಕರಾರುವಕ್ಕಾಗಿ 12 ಗಂಟೆ ಇರುತ್ತದೆ. ಮಾರ್ಚ್ 21 ಮೇಷ ಸಂಕ್ರಾಂತಿ. ಸೆಪ್ಟೆಂಬರ್ 23 ತುಲಾ ಸಂಕ್ರಾಂತಿ.

ಜೂನ್ 21ರಂದು ಸೂರ್ಯ ಕಿರಣಗಳು ಉತ್ತರಾರ್ಧಗೋಳದ ಕರ್ಕಾಟಕ ವೃತ್ತದ ಮೇಲೆ ನೇರವಾಗಿ ಬೀಳುವುದರಿಂದ ಈ ದಿನವನ್ನು ಕಟಕಾಯನ ಅಥವಾ ಕರ್ಕ ಸಂಕ್ರಾಂತಿ ಎನ್ನುವರು.

ಡಿಸೆಂಬರ್ 22ರಂದು ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದ ಮಕರ ಸಂಕ್ರಾಂತಿ ವೃತ್ತದ ಮೇಲೆ ನೇರವಾಗಿ ಬೀಳುತ್ತದೆ. ಆದ್ದರಿಂದ ಈ ದಿನವನ್ನು ಮಕರಾಯನ ಅಥವಾ ಮಕರ ಸಂಕ್ರಾಂತಿಯೆಂದು ಕರೆಯುವರು.

**ಭೂಮಿಯ ಚಲನೆ:**

ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ದೈನಂದಿನವಾಗಿ ತನ್ನ ಸುತ್ತ ತಾನು ಸುತ್ತಲು 23 ಗಂಟೆ 56 ನಿಮಿಷ 4 ಸೆಕೆಂಡುಗಳನ್ನು ತೆಗೆದುಕೊಳ್ಳುತ್ತದೆ.

ವಾರ್ಷಿಕ 365 ದಿನ, 6 ಗಂಟೆ 8 ನಿಮಿಷ. ಇದರಿಂದ ಋತುಮಾನಗಳು ಆವಿರ್ಭವಿಸುತ್ತವೆ. ಭೂಮಿ ಸರಾಸರಿ 18.5 ಮೈಲಿಗಳು ಪ್ರತಿ ಸೆಕೆಂಡಿಗೆ ಸೂರ್ಯನನ್ನು ಸುತ್ತುತ್ತದೆ.

ಅಕ್ಷಾಂಶ ಮತ್ತು ರೇಖಾಂಶ:

ಒಟ್ಟು 180 ಅಕ್ಷಾಂಶಗಳು ಮತ್ತು 300 ರೇಖಾಂಶಗಳಿವೆ. ಇವುಗಳ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

* 0' ರೇಖಾಂಶ ಪ್ರಧಾನ ರೇಖಾಂಶ.
* ಪ್ರಮುಖ ಅಕ್ಷಾಂಶಗಳು 0', 23 1/2' ಪೂರ್ವ ಮತ್ತು ಪಶ್ಚಿಮ, 66 1/2' ಪೂರ್ವ ಮತ್ತು ಪಶ್ಚಿಮ ಮತ್ತು 90' ಪೂರ್ವ ಮತ್ತು ಪಶ್ಚಿಮ.
* ಭಾರತದ ಕಾಲಮಾನವನ್ನು ನಿರ್ಧರಿಸುವ ರೇಖಾಂಶ 82 1/0ಡಿಗ್ರಿ ಪೂರ್ವ ರೇಖಾಂಶ.

ರಷ್ಯಾ 11, ಅಮೇರಿಕಾ ಮತ್ತು ಕೆನಡಾ ತಲಾ 5, ವೇಳಾಪಟ್ಟಿಗಳನ್ನು ಹೊಂದಿವೆ.

**ಶಿಲಾಗೋಳ:**

ಪೃಥ್ವಿಯ ಮೇಲ್ಭಾಗದಿಂದ ಭೂಮಿಯ ಒಳ ಕೇಂದ್ರದವರೆಗೆ ಒಟ್ಟು 6,371 ಕಿ.ಮೀ. ಆಳವಿದ್ದು, ಇದನ್ನು ಪ್ರಮುಖವಾಗಿ 3 ಭಾಗಗಳಾಗಿ ವಿಂಗಡಿಸಲಾಗಿದೆ.

**1) ತೊಗಟೆ ಅಥವಾ ಶಿಲಾಗೋಳ:**

ಇದು ಭೂಮಿಯ ಮೇಲಿನ ಭಾಗದ ಪದರು. ಮೇಲಿನಿಂದ 60 ಕಿ.ಮೀ. ಆಳಕ್ಕೆ ವ್ಯಾಪಿಸಿದೆ. ಇದರಲ್ಲಿ ಅಗ್ನಿ ಶಿಲೆ, ಪದರು ಶಿಲೆ, ರೂಪಾಂತರ ಶಿಲೆಗಳು ಪ್ರಮುಖವಾಗಿವೆ. ಇದರ ಕೆಳಗಿನ ಭಾಗ ಮಿಶ್ರಗೋಳ ಅಥವಾ ಮ್ಯಾಂಟಲ್. ಶಿಲಾಗೋಳದಿಂದ ಮಿಶ್ರಗೋಳವನ್ನು ಬೇರ್ಪಡಿಸುವ ವಲಯ 'ಮೋಹೊರೋವಿಕ್' ಸೀಮಾ ವಲಯ.

ತೊಗಟೆಯ ಸಾಂದ್ರತೆ 2.7ರಿಂದ 2.9 ಗ್ರಾಂ ಸಿ.ಸಿ. ಇದ್ದು, ತೊಗಟೆಯು ಭೂಮಿಯ ಒಟ್ಟು ಗಾತ್ರದ ಶೇ.1ರಷ್ಟು ಮಾತ್ರವಿದೆ. ತೊಗಟೆಯ ದಪ್ಪವು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಿದೆ. ಇಲ್ಲಿ ಸಿಲಿಕೇಟ್ ಮತ್ತು ಅಲ್ಯೂಮಿನಿಯಂ ಪ್ರಮುಖ ಖನಿಜಗಳಿವೆ. ಇದರಲ್ಲಿ ಅಲ್ಯೂಮಿನಿಯಂ ಅತಿ ಹೆಚ್ಚು ವ್ಯಾಪಿಸಿದೆ.

ಇಲ್ಲಿ ಭೂಕಂಪದ ಅಲೆಗಳು ಪ್ರತಿ ಸೆಕೆಂಡಿಗೆ 55 ಕಿ.ಮೀ. ವೇಗದಲ್ಲಿ ಚಲಿಸುತ್ತವೆ.

ಶಿಲಾಗೋಳದ ಭೂವಲ್ಕ್ಯದಲ್ಲಿ 6 ಫಲಕಗಳಿವೆ.

1) ಅಮೇರಿಕಾ ವಲಯ
2) ಫೆಸಿಫಿಕ್ ವಲಯ
3) ಐರೋಪ್ಯ ವಲಯ
4) ಆಫ್ರಿಕಾ ವಲಯ
5) ಅಂಟಾರ್ಟಿಕಾ ವಲಯ
6) ಇಂಡೋ ಆಸ್ಟ್ರೇಲಿಯಾ ವಲಯ.

**ಮಿಶ್ರಗೋಳ–ಮ್ಯಾಂಟಲ್ ಸ್ತರ:**

ಇದು ತೊಗಟೆಯ ನಂತರ 2,900 ಕಿ.ಮೀ.ಗಳವರೆಗೆ ಹರಡಿರುವ ಭಾಗ. ಇದು ಭೂಮಿಯ ಒಟ್ಟು ಗಾತ್ರದಲ್ಲಿ ಶೇ.83ರಷ್ಟು ಇದೆ. ಇದು ಕೆಳಭಾಗ ಮತ್ತು ಕೇಂದ್ರಗೋಳ, ಹೊರಭಾಗವನ್ನು ಬೇರ್ಪಡಿಸುವ ಭಾಗಕ್ಕೆ 'ಗುಟೆನ್ ಬರ್ಗ್' ಸೀಮಾವಲಯ ಎನ್ನುವರು. ಇದರ ಸಾಂದ್ರತೆ 4.6 ಗ್ರಾಂ ಸಿ.ಸಿ. ಇದರ ಸರಾಸರಿ ದಪ್ಪ 2,860 ಕಿ.ಮೀ. ಈ ವಲಯವು ಬೆಸಾಲ್ಟ್ ಶಿಲೆಗಳಿಂದ ರಚನೆಯಾಗಿದ್ದು ಎಕ್ಲೊಗೈಟ್ ಖನಿಜಗಳಿವೆ. ಇದಕ್ಕೆ ಸೀಮಾವಲಯ ಎನ್ನುವರು.

ಈ ಗೋಳದಲ್ಲಿ 1000–15000 ಸೆ.ಉಷ್ಣಾಂಶದ ವ್ಯತ್ಯಾಸವಿರುವುದು. ಇದರಿಂದ ಇಲ್ಲಿನ ಖನಿಜಾಂಶಗಳು ಕರಗಿ ಮೃದುತ್ವ ಗುಣವನ್ನು ಹೊಂದಿರುತ್ತವೆ. ಇದಕ್ಕೆ ಶಿಲಾಪಾಕದ ವಲಯವೆಂದೂ ಕರೆಯುವರು. ಈ ವಲಯದಲ್ಲಿ ಭೂಕಂಪದ ನೀಳ ಅಲೆಗಳು ಪ್ರತಿ ಸೆಕೆಂಡಿಗೆ 6–8 ಕಿ.ಮೀ. ವೇಗದಲ್ಲಿ ಚಲಿಸುತ್ತಿವೆ.

**ಕೇಂದ್ರ ಗೋಳ:**

ಕೇಂದ್ರಗೋಳವನ್ನು ಹೊರ ಕೇಂದ್ರ ಅಥವಾ ಒಳ ಕೇಂದ್ರವೆಂದು 2 ರೀತಿಯಲ್ಲಿ ವಿಭಾಗಿಸಲಾಗಿದೆ. ಮ್ಯಾಂಟಲ್‌ನ ಕೆಳಭಾಗದಿಂದ ಸುಮಾರು 5150 ಕಿ.ಮೀ.ವರೆಗೆ ಹೊರಕೇಂದ್ರವೆಂದು, ನಂತರದ ದೂರವನ್ನು 6371 ಕಿ.ಮೀ.ವರೆಗೆ ಒಳ ಕೇಂದ್ರಗೋಳವೆಂದು ಕರೆಯಲಾಗುತ್ತದೆ.

ನಿಕ್ಕೆಲ್ ಮತ್ತು ಕಬ್ಬಿಣದಿಂದ ಕೂಡಿದ್ದು ಇದು ಸಾಂದ್ರತೆ ಹೊಂದಿರುತ್ತದೆ. ಭೂಮಿಯ ಒಟ್ಟು ಗಾತ್ರದಲ್ಲಿ ಇದರ ಪಾಲು 16%ರಷ್ಟು. ಇದರ ಸರಾಸರಿ ದಪ್ಪ 3478 ಕಿ.ಮೀ. ಇಲ್ಲಿನ ಗರಿಷ್ಠ ಉಷ್ಣಾಂಶದಿಂದಾಗಿ ಇಲ್ಲಿಯ ಖನಿಜಗಳು ದ್ರವರೂಪದಲ್ಲಿರುತ್ತವೆ. ಇದು ದ್ರವರೂಪದ ವಲಯವಾಗಿದೆ. ಕೇಂದ್ರಗೋಳದಲ್ಲಿ ಹೆಚ್ಚು ಒತ್ತಡ ಹಾಗೂ ಸಾಂದ್ರತೆ ಇರುವುದರಿಂದ ಕೇವಲ ಭೂಕಂಪದ ನೀಳಲೆಗಳು ಮಾತ್ರ ಚಲಿಸುತ್ತವೆ. ಇಲ್ಲಿ ಮೇಲ್ಮೈ ಮತ್ತು ಅಡ್ಡಲೆಗಳು ಇರುವುದಿಲ್ಲ.

ಒಳ ಕೇಂದ್ರಗೋಳ ಘನ ರೂಪದಲ್ಲಿರುವುದು. 1936ರಲ್ಲಿ ಡೆನ್ಮಾರ್ಕಿನ ಭೂ ವಿಜ್ಞಾನಿ ಲೇಹಾಮನ್ ಕೇಂದ್ರಗೋಳವನ್ನು 2 ವಿಧಗಳಾಗಿ ವಿಂಗಡಿಸಿರುವರು.

**ಶಿಲೆಗಳು:**

ವಿವಿಧ ಖನಿಜಗಳ ಸಂಯುಕ್ತ ರೂಪವೇ ಶಿಲೆ. ಶಿಲೆಗಳು ಬಹುತೇಕ ಘನರೂಪದಲ್ಲಿರುತ್ತವೆ. ಭೂಮಿಯಲ್ಲಿ ಸುಮಾರು 2000 ಖನಿಜಗಳಿವೆ. ಆದರೂ ಕೇವಲ 12 ಖನಿಜಗಳು ಮಾತ್ರ ಭೂಮಿಯ ಎಲ್ಲಾ ಕಡೆ ಇವೆ. ಭೂಮಿಯ ತೊಗಟೆ ಭಾಗದಲ್ಲಿ ಶೇ.87ರಷ್ಟು ಸಿಲಿಕೇಟಗಳಿವೆ. ಶಿಲೆಗಳು ನಿರ್ಮಾಣಗೊಂಡಿರುವ ಆಧಾರದ ಮೇಲೆ ಅವನ್ನು 3 ವಿಧದ ಶಿಲೆಗಳಾಗಿ ವಿಂಗಡಿಸಬಹುದು.

1) ಅಗ್ನಿ ಶಿಲೆಗಳು
2) ಪದರು ಶಿಲೆಗಳು
3) ರೂಪಾಂತರ ಶಿಲೆಗಳು

**ಅಗ್ನಿ ಶಿಲೆಗಳು:**

ಇವು ಪ್ರಾಥಮಿಕ ಶಿಲೆಗಳು. ಈ ಶಿಲೆಗಳು ಹರಳಿನಿಂದ ಕೂಡಿವೆ. ಯಾವುದೇ ಜೈವಿಕ ಪಳೆಯುಳಿಕೆಗಳು ಈ ಶಿಲೆಗಳಲ್ಲಿ ಕಂಡುಬರುವುದಿಲ್ಲ. ಭೂಮಿಯ ಅಂತರಾಳದಿಂದ ಬಂದ ಲಾವಾರಸ ಅಥವಾ ಶಿಲಾರಸ ಭೂಮಿಯ ಮೇಲ್ಭಾಗದಲ್ಲಿ ಹರಡಿಕೊಂಡು ಕ್ರಮೇಣ ಬಿಸಿಯಾಗಿರುವ ಲಾವಾರಸ ತಂಪಾಗಿ ಅಗ್ನಿಶಿಲೆಗಳು ಮಾರ್ಪಡುತ್ತವೆ.

ಜ್ವಾಲಾಮುಖಿಗಳು ಕಾರ್ಯಾಚರಣೆ ಮಾಡುವ ಭಾಗಗಳಲ್ಲಿ (ಪ್ರದೇಶಗಳಲ್ಲಿ) ನಿರಂತರವಾಗಿ ಅಗ್ನಿಶಿಲೆಗಳು ನಿರ್ಮಾಣಗೊಳ್ಳುತ್ತವೆ. ಇವುಗಳನ್ನು ಬಹಿಸ್ಸರಣ ಅಗ್ನಿಶಿಲೆ ಎಂದು ಕರೆಯುವರು.

ಉದಾ: ಬಸ್ಸಾಲ್, ಆಂಡಿಸೈಟ್, ರಿಯಾಲೈಟ್.

ದಖನ್ ಪ್ರಸ್ಥಭೂಮಿಯಲ್ಲಿ 5,00,000 ಕಿ.ಮೀ.ಗಳಷ್ಟು ಬಸ್ಸಾಲ್ ಶಿಲೆ ನಿರ್ಮಿತಗೊಂಡಿದೆ.

ಭೂಮಿಯ ಅಂತರಾಳದಿಂದ ಜ್ವಾಲಾಮುಖಿಯ ದ್ವಾರದಿಂದ ಹೊರಬರುವ ಜ್ವಾಲಾಮುಖಿಯ ನಾಳದ ಮಧ್ಯೆಯಲ್ಲಿ ನಿಧಾನವಾಗಿ ತಂಪಾಗಿ ಭೂಮಿಯ ಒಳಭಾಗದಲ್ಲೇ ನಿರ್ಮಾಣವಾಗುವ ಶಿಲೆಗಳು 'ಅಂತಸ್ಸರಣ ಶಿಲೆಗಳು.'

ಉದಾ: ಗ್ರಾನೈಟ್, ಗ್ಯಾಬ್ರೋ, ಡಿಯೋರೈಟ್, ಡೊಲೆರೈಟ್ ಇತ್ಯಾದಿ.

ಭೂಮಿಯ ಮೇಲೆ ಮೊದಲು ನಿರ್ಮಾಣಗೊಂಡ ಶಿಲೆಗಳು ಈ ಅಗ್ನಿಶಿಲೆಗಳು. ಇವು ನಿರ್ಮಾಣವಾಗಿರುವ ಆಧಾರದ ಮೇಲೆ 2 ವಿಧಗಳಾಗಿ ವಿಂಗಡಿಸಲಾಗಿದೆ.

**ಅ) ಆಮ್ಲೀಯ ಶಿಲೆಗಳು:**

50%ಗಿಂತ ಹೆಚ್ಚು ಸಿಲಿಕಾನ್ ಖನಿಜ.

**ಬ) ಕ್ಷಾರೀಯ ಶಿಲೆಗಳು:**

50%ಗಿಂತ ಕಡಿಮೆ ಸಿಲಿಕಾನ್ ಅಂಶ.

**ಪದರ ಶಿಲೆಗಳು: (ಕಣ ಶಿಲೆ, ಜಲಜ ಶಿಲೆ)**

ಮೂಲ ಶಿಲೆಗಳು ಅಥವಾ ಅಗ್ನಿಶಿಲೆಗಳು ವಾಯುಮಂಡಲದ ಮೂಲ ಘಟಕಗಳಾದ ಉಷ್ಣಾಂಶ, ಮಳೆ, ಮಂಜು, ಗಾಳಿ, ನದಿ, ಸಮುದ್ರದ ಅಲೆಗಳಿಂದ, ಸಸ್ಯಗಳಿಂದ ಶಿಥಲೀಕರಣ ಅಥಾ ಸವಕಳಿಕರಣ ಹೊಂದಿ ಕಣಕಣಗಳಾಗಿ ಅಥವಾ ಪದರು ಪದರಾಗಿ ನಿರ್ಮಾಣವಾಗಿರುವ ಶಿಲೆಗಳೇ ಪದರ ಶಿಲೆಗಳು.

ಅಗ್ನಿಶಿಲೆಗಳು ಮತ್ತು ರೂಪಾಂತರ ಶಿಲೆಗಳು ಶಿಥಿಲೀಕರಣಕ್ಕೊಳಗಾಗಿ ಪದರು ಶಿಲೆಗಳು ನಿರ್ಮಿತವಾಗುತ್ತವೆ. ಉದಾ: ಮರಳು ಕಲ್ಲು, ಸುಣ್ಣದ ಕಲ್ಲು, ಶೆಲ್, ಕಲ್ಲಿದ್ದಲು, ಕಾಂಗ್ಲೋ ಮೆರೇಟ್ ಇತ್ಯಾದಿ. ಇಉ ಭೂಮಿಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. 75% ಭೂಮಿಯ ಮೇಲ್ಭಾಗವನ್ನು ಆವರಿಸಿವೆ. ಅದರಲ್ಲಿ 5% ಭೂಮಿಯ ಒಳಗೆ ಆವರಿಸಿವೆ. ಈ ಶಿಲೆಗಳಲ್ಲಿ ಸಾಮಾನ್ಯವಾಗಿ ಪೆಟ್ರೋಲಿಯಂ, ಕಲ್ಲಿದ್ದಲು ದೊರಕುತ್ತದೆ. ಈ ಶಿಲೆಗಳಲ್ಲಿ ಜೈವಿಕ ಪಳೆಯುಳಿಕೆಗಳು ಇವೆ.

ಪದರು ಶಿಲೆಗಳು ಉತ್ಪತ್ತಿಯ ಆಧಾರದ ಮೇಲೆ 3 ವಿಧಗಳಾಗಿ ವಿಂಗಡಿಸಲಾಗಿದೆ.

**ಅ) ಭೌತಿಕ ಕ್ರಿಯೆಯಿಂದಾದ–** ಚೂರುಗಲ್ಲು, ಸೆಂಡೆಗಲ್ಲು, ಜೇಡಿ ಶಲೆ, ಮರಳು ಶಿಲೆ, ರೆವೆಗಲ್ಲು.

**ಬ) ರಾಸಾಯನಿಕ ಕ್ರಿಯೆಯಿಂದಾದ–** ಸುಣ್ಣದ ಕಲ್ಲು, ಫ್ಲಿಂಟ್, ಡಾಲೋಮೈಟ್, ಸೀಮೆಸುಣ್ಣ, ಸಿಲಿಕಾ, ಜಿಪ್ಸಂ.

**ಕ) ಜೈವಿಕ ಕ್ರಿಯೆಯಿಂದಾದ–** ಪದರು ಶಿಲೆಗಳು. ಉದಾ: ಚಿಪ್ಪು, ಕಲ್ಲಿದ್ದಲು, ಲವಣ ಕಲ್ಲುಗಳು.

**ರೂಪಾಂತರ ಶಿಲೆಗಳು:**

ಅಗ್ನಿಶಿಲೆಗಳು, ಪದರು ಶಿಲೆಗಳು ಸ್ವರೂಪ ಬದಲಾವಣೆ ನಂತರ ಭೂಮಿಯ ಒಳಗೆ ಹುದುಗಿಕೊಂಡು ಭೂಮಿಯ ಒತ್ತಡ ಮತ್ತು ಶಾಖದಿಂದ ತಮ್ಮ ರೂಪದಲ್ಲಿ ಬದಲಾವಣೆ ಹೊಮದಿ ರಚನೆಯಾದಂತಹ ಶಿಲೆಗೆ ರೂಪಾಂತರ ಶಿಲೆ ಎನ್ನುವರು.

ರೂಪಾಂತರ ಶಿಲೆಗಳು ಭೂಮಿಯ ಅತ್ಯಂತ ಆಳದಲ್ಲಿ ದೊರೆಯುತ್ತವೆ. ಮೂಲ ಶಿಲೆಗಳ ಬಣ್ಣ, ರಚನೆ, ಕಣ ಸಂಯೋಜನೆ, ಖನಿಜ ಸಂಯೋಜನೆಗಳಲ್ಲಿ ಭಾಗಶ: ಅಥವಾ ಸಂಪೂರ್ಣ ಬದಲಾವಣೆಯಾದಲ್ಲಿ ಅಂತಹ ಶಿಲೆಗಳನ್ನು ರೂಪಾಂತರ ಶಿಲೆಗಳೆಂದು ಕರೆಯುವರು. ರೂಪಾಂತರ ಶಿಲೆಗಳು ಅತಿ ಹೆಚ್ಚು ಬೆಲೆಬಾಳುವ ಶಿಲೆಗಳಾಗಿವೆ.

**ಅಗ್ನಿ ಶಿಲೆಗಳು ರೂಪಾಂತರಗೊಳ್ಳುವುದು**

* ಗ್ರಾಫೈಟ್ – ನೀಸ್ ಶಿಲೆ
* ಬೆಸಾಲ್ಟ್ – ಶಿಷ್ಠ ಶಿಲೆ
* ಮರಳು – ಕ್ವಾಡ್ಜ

**ಪದರು ಶಿಲೆಗಳು ರೂಪಾಂತರಗೊಳ್ಳುವುದು**

* ಸುಣ್ಣದ ಕಲ್ಲು – ಅಮೃತ ಶಿಲೆ
* ರೇವೆಗಲ್ಲು – ಶಿಷ್ಠ ಶಿಲೆ
* ರೇವೆಗಳ್ಳು – ಪಾಟಿಗಲ್ಲು
* ಮರಳು ಶಿಲೆ – ಸ್ಪಟಿಕ ಶಿಲೆ

ಇನ್ನುಳಿದ ರೂಪಾಂತರ ಶಿಲೆಗಳಾದ ಬೆಳ್ಳಿ, ವಜ್ರ, ಸೀಸ್, ಗ್ರಾಫೈಟ್, ಪದ್ಮರಾಗ, ರೂಬಿ ಮುಂತಾದವುಗಳು. ಶಿಲೆಗಳ ಸೂಕ್ಷ್ಮ ಕಣಗಳನ್ನು ವೆಂಟವರ್ತ ಸ್ಕೇಲ್‌ನಿಂದ ಅಳೆಯುವರು.

| **ಭೂ ತೊಗಟೆ** | | **ಸಂಪೂರ್ಣ ಭೂಮಿ** | |
|---|---|---|---|
| **ಶಿಲೆಗಳು** | **ಶೇ.ವಾರು** | **ಶಿಲೆಗಳು** | **ಶೇ.ವಾರು** |
| ಪದರಶಿಲೆ | 75% | ಅಗ್ನಿಶಿಲೆ ಮತ್ತು ರೂಪಾಂತರ ಶಿಲೆ | 95% |
| ಅಗ್ನಿಶಿಲೆ | 20% | ಪದರಶಿಲೆ | 5% |
| ರೂಪಾಂತರ | 05% | | |

## ಭೂಕಂಪಗಳು

ಭೂಮಿಯ ಆಂತರಿಕ ಶಕ್ತಿಯ ಕಾರ್ಯಾಚರಣೆಯಿಂದ ಭೂ ತೊಗಟೆ ಅಥವಾ ಶಿಲಾಗೋಳದ ಮೇಲ್ಭಾಗದಲ್ಲಿ ಉಂಟಾಗುವ ಕಂಪನಗಳನ್ನು ಭೂಕಂಪಗಳು ಎನ್ನುವರು. ಇವುಗಳ ಅಧ್ಯಯನವನ್ನು ಸಿಸ್ಮೋಲಜಿ ಎನ್ನುವರು. ಭೂಕಂಪನದ ತೀವ್ರತೆಯನ್ನು ದಾಖಲಿಸುವ ಮಾಪನ ರಿಕ್ಟರ್ ಮಾಪಕ ಮತ್ತು ಭೂಕಂಪನ ಅಲೆಗಳನ್ನು ದಾಖಲಿಸುವ ಮಾಪನ ಭೂಕಂಪನ ಮಾಪಕ ಸಿಸ್ಮೋಗ್ರಾಫ್.

ರಿಕ್ಟರ್ ಮಾಪನದಲ್ಲಿ 0–9ರವರೆಗೆ ಲಾಗರಿದಮ್ ಸಂಖ್ಯೆಗಳಿರುತ್ತವೆ. ಈ ಸಂಖ್ಯೆಗಳು ಭೂಕಂಪನದ ತೀವ್ರತೆಯನ್ನು ಸೂಚಿಸುತ್ತವೆ. 0–6 ಸಾಮಾನ್ಯ, 6–8 ಮಧ್ಯಮ, 8ರ ನಂತರ ಅತೀ ಹೆಚ್ಚು ತೀವ್ರತೆ ಎಂದು ಅಳೆಯಲಾಗುತ್ತದೆ.

ಭೂಕಂಪ ಉಂಟಾಗುವ ಸ್ಥಳ ಅಥವಾ ಭಾಗವನ್ನು 'ಭೂ ಕಂಪನಾಭಿ' ಎನ್ನುವರು. ಭೂಕಂಪದಿಂದ ಉಂಟಾದ ಅಲೆಗಳು ಚಲಿಸುತ್ತಾ ಭೂ ತೊಗಟೆಯ ಮೇಲ್ಭಾಗ ತಲುಪುತ್ತವೆ. ಭೂಮಿಯ ಮೇಲ್ಭಾಗದಲ್ಲಿ ಭೂಕಂಪ ಉಂಟಾಗುವ ಪ್ರದೇಶಕ್ಕೆ ಭೂಕಂಪದ ಆದಿಕೇಂದ್ರ ಅಥವಾ ಭೂಕಂಪದ ಹೊರ ಕೇಂದ್ರ, ಬಾಹ್ಯ ಕೇಂದ್ರ ಎಂದು ಕರೆಯುವರು.

**ಭೂಕಂಪಗಳಿಗೆ ಕಾರಣಗಳು:**

ಅವುಗಳಲ್ಲಿ ಎರಡು ವಿಧ.

ಅ) ಸ್ವಾಭಾವಿಕ / ನೈಸರ್ಗಿಕ ಕಾರಣಗಳು

ಬ) ಕೃತಕ / ಮಾನವ ಕಾರಣಗಳು

**ಸ್ವಾಭಾವಿಕ ಕಾರಣಗಳು:**

1) ಶಿಲೆಗಳು ಉರುಳುವಿಕೆ

2) ಭೂ ಕುಸಿತ

3) ಹಿಮಪಾತ

4) ಗುಹೆಗಳ ಮೇಲ್ಛಾವಣಿ ಕುಸಿತ

5) ಜ್ವಾಲಾಮುಖಿಗಳು

6) ಒತ್ತಡದ ಕಾರಣಗಳು

7) ಭೂಮಿಯ ಒಳಭಾಗಕ್ಕೆ ನೀರು ಇಂಗುವಿಕೆ

**ಕೃತಕ ಕಾರಣಗಳು:**

1) ಅಣೆಕಟ್ಟುಗಳು – ಅಪಾರ ಪ್ರಮಾಣದ ನೀರಿನ ಸಂಗ್ರಹಣೆ

2) ಸಿಡಿಮದ್ದು

3) ಬೃಹತ್ ಪ್ರಮಾಣದ ಕಟ್ಟಡಗಳು

**ಭೂಕಂಪದ ಅಲೆಗಳು:**

ಭೂಕಂಪ ಉಂಟಾದ ಭಾಗ ಅಂದರೆ 'ಭೂಕಂಪ ನಾಭಿ'ಯಿಂದ ಭೂಕಂಪವಾದಾಗ ಅಪಾರ ಪ್ರಮಾಣದ ಶಕ್ತಿ ಹೊರಹೊಮ್ಮುವುದು. ಈ ಶಕ್ತಿ ಅಲೆಗಳ ಭೂಮಿಯ ಮೇಲ್ಭಾಗಕ್ಕೆ ಚಲಿಸುತ್ತದೆ. ಈ ರೀತಿಯಾಗಿ ಸೃಷ್ಟಿಯಾದ ಅಲೆಗಳಲ್ಲಿ ಮೂರು ವಿಧಗಳು.

**ಅ) ಪ್ರಥಮ ಅಲೆಗಳು:**

ಈ ಅಲೆಗಳನ್ನು ನೀಳ ಅಲೆಗಳು ಎಂದು ಕರೆಯುವರು. ಈ ಅಲೆಗಳು ಘನ, ದ್ರವ್ಯ, ಮಾಧ್ಯಮಗಳ ಮೂಲಕ ಚಲಿಸುತ್ತದೆ. (3 ಗೋಳದಲ್ಲಿ ಕೇಂದ್ರಗೋಳ, ಮಿಶ್ರಗೋಳ, ಶಿಲಾಗೋಳ). ಬೇರೆ ಅಲೆಗಳಿಗೆ ಹೋಲಿಸಿದಾಗ ಈ ಅಲೆಗಳು ಮೊದಲು ತೊಗಟೆ ಮೇಲ್ಬಾಗಕ್ಕೆ ತಲುಪುವುದರಿಂದ ಪ್ರಥಮ ಅಲೆಗಳು ಎನ್ನಲಾಗಿದೆ. ಇದನ್ನು 'ಪಿ' ಸಂಕೇತಾಕ್ಷರದಿಂದ ಗುರುತಿಸಲಾಗುತ್ತದೆ. ಇವುಗಳ ವೇಗ 5.5ರಿಂದ 13 ಕಿ.ಮೀ. ಸೆಕೆಂಡಿಗೆ ಇರುತ್ತದೆ.

**ಬ) ದ್ವಿತೀಯ ಅಲೆಗಳು:**

ಪ್ರಥಮ ಅಲೆಗಳ ನಂತರ ಇವು ಭೂಮಿಯ ಮೇಲ್ಭಾಗವನ್ನು ತಲುಪುತ್ತವೆ. ಇವುಗಳನ್ನು 'ಎಸ್' ಸಂಕೇತಾಕ್ಷರದಿಂದ ಗುರುತಿಸಲಾಗುತ್ತದೆ. ದ್ವಿತೀಯ ಅಲೆಗಳು ಘನ ಮಾಧ್ಯಮದಲ್ಲಿ ಮಾತ್ರ ಚಲಿಸುತ್ತವೆ. ಇವುಗಳ ವೇಗ 3–7 ಕಿ.ಮೀ. ಇರುತ್ತದೆ.

**ಕ) ಮೇಲ್ಮೈ ಅಲೆಗಳು:**

ಪಿ ಮತ್ತು ಎಸ್ ಅಲೆಗಳು ಭೂ – ತೊಗಟೆಯನ್ನು ತಲುಪಿದ ನಂತರ ಮೇಲ್ಮೈ ಅಲೆಗಳಾಗಿ ಹೊರಹೊಮ್ಮುತ್ತವೆ. ಈ ಅಲೆಗಳು ತುಂಬಾ ವಿನಾಶಕಾರಿ ಅಲೆಗಳು. ಈ ಅಲೆಗಳ ವೇಗ ಪ್ರತಿ ಸೆಕೆಂಡಿಗೆ 4–4.3 ಕಿ.ಮೀ.

ಭೂಮಿಯ ಬಾಹ್ಯ ಕೇಂದ್ರವನ್ನು ತಲುಪುವಾಗ ಭಯಂಕರ ಶಬ್ದ ಹಾಗೂ ಘರ್ಜಿಸುವ ಮೂಲಕ ಭೂಮಿಯನ್ನು ನಡುಗಿಸುತ್ತವೆ. ಈ ಅಲೆಗಳು ಶಿಲಾಗೋಳದ ಮೂಲಕ ಮಾತ್ರ ಚಲಿಸುತ್ತವೆ. ಇವು 3 ಸ್ತರಗಳ ಮೂಲಕ ಚಲಿಸಲಾರದೆ ಇರುವ ಅಲೆಗಳು. 'ಎಸ್' ಅಲೆಗಳು.

**ಭಾರತದ ಭೂಕಂಪದ ವಲಯಗಳು:**

ಭಾರತದಲ್ಲಿ ಉಂಟಾದ ಮತ್ತು ಸಂಭವನೀಯ ಭೂಕಂಪದ ತೀವ್ರತೆಯ ಆಧಾರದ ಮೇಲೆ 5 ವಲಯಗಳನ್ನು ಗುರುತಿಸಲಾಗಿದೆ.

ವಲಯ 1 – ಅತಿ ಕಡಿಮೆ ತೀವ್ರತೆ

ವಲಯ 2 – ಕಡಿಮೆ

ವಲಯ 3 – ಸಾಧಾರಣ

ವಲಯ 4 – ಹೆಚ್ಚು

ವಲಯ 5 – ಅತಿ ಹೆಚ್ಚು ತೀವ್ರತೆ

ದೆಹಲಿ ವಲಯ 4ರಲ್ಲಿದೆ. ಗುಜರಾತ್‌ನ ಕಛ್, ಎಲ್ಲಾ ಸಪ್ತ ಸಹೋದರಿಯರು, ಇತ್ತೀಚಿಗಿನ ನೇಪಾಳ, ಅಂಡಮಾನ್ ಮತ್ತು ನಿಕೋಬಾರ್‌ಗಳು ವಲಯ 5ರಲ್ಲಿವೆ. ಕರ್ನಾಟಕ ಭೂಕಂಪನ ಮತ್ತು ಸುನಾಮಿಗಳಿಂದ ಮುಕ್ತವಾದ ಪುಣ್ಯದ ನಾಡು ಎನ್ನಬಹುದು.

**ಭೂಕಂಪದ ಪರಿಣಾಮಗಳು:**

* ಭೂಮಿಯ ಮೇಲ್ಭಾಗದಲ್ಲಿ ಭೂಸ್ವರೂಪದಲ್ಲಿ ಬದಲಾವಣೆ.
* ನದಿಗಳ ಚಲನೆ ಮತ್ತು ಚಿಲುಮೆಗಳ ಚಲನೆಯಲ್ಲಿ ಬದಲಾವಣೆ.
* ಕಟ್ಟಡಗಳು, ರೈಲ್ವೆ ಮಾರ್ಗಗಳು, ರಸ್ತೆಗಳು, ಅಣೆಕಟ್ಟುಗಳು ಒಡೆದು ಹಾನಿ. – ಸುನಾಮಿ ಉಗಮ.
* ಸಾಂಕ್ರಾಮಿಕ ರೋಗಗಳು ತಲೆದೋರುವಿಕೆ.
* ತೀವ್ರ ಆರ್ಥಿಕ ಹಾನಿ, ಜನಜೀವನ ಅಸ್ತವ್ಯಸ್ತ, ಸಾವು ನೋವು, ನರಳಾಟ ಇತ್ಯಾದಿ.

**ಭೂಕಂಪದ ದಾಖಲಾತಿ ಕೇಂದ್ರಗಳು:**

ಪ್ರಪಂಚದಲ್ಲಿ ಸುಮಾರು 600 ಭೂಕಂಪದ ದಾಖಲಾತಿ ಕೇಂದ್ರಗಳಿವೆ.

ಭಾರತದಲ್ಲಿ 5 ಕೇಂದ್ರಗಳಿವೆ.

1) ಪೂನಾ
2) ಕೊಲಾಬಾ
3) ಕೊಲ್ಕತ್ತಾ
4) ಕೊಡೈಕೆನಾಲ್
5) ಗೌರಿಬಿದನೂರು.

ಫೆಸಿಫಿಕ್ ಸಾಗರದಲ್ಲಿ 75%ರಷ್ಟು ಭೂಕಂಪಗಳು ಸಂಭವಿಸುತ್ತವೆ. ಫೆಸಿಫಿಕ್‌ನ ಪೇರು, ಚಿಲಿ, ಆಲಾಸ್ಕಾ, ಮೆಕ್ಸಿಕೋ, ಕ್ಯಾಲಿಫೋರ್ನಿಯಾ, ಜಪಾನ್, ಇಂಡೋನೇಷಿಯಾ, ಫಿಲಿಫೈನ್ಸ್, ನ್ಯೂಝಿಲೆಂಡ್, ಹವಾಯಿ ದ್ವೀಪಗಳು. ಉತ್ತರ ಅಮೇರಿಕಾದ ರಾಕಿ ಮತ್ತು ದಕ್ಷಿಣ ಅಮೇರಿಕಾದ ಅಂಡೀಸ್ ಪರ್ವತಗಳಲ್ಲಿ ಅತಿ ಹೆಚ್ಚು. ಏಷ್ಯಾದ ಹಿಮಾಲ ಪರ್ವತ ಶ್ರೇಣಿಯಲ್ಲಿನ ಗ್ರೀಸ್, ಇಟಲಿ, ಟರ್ಕಿ, ಇರಾನ್, ಉತ್ತರ ಭಾರತ, ಬರ್ಮಾಗಳಲ್ಲಿ ಭೂಕಂಪಗಳು ಹೆಚ್ಚಾಗಿ ಕಂಡುಬರುತ್ತವೆ.

## ಸುನಾಮಿ

ಭೂಕಂಪನದಿಂದ ಉಂಟಾದ ಬೃಹದಾಕಾರದ ಸಮುದ್ರ ಅಲೆಗಳು. ಸಾಮಾನ್ಯವಾಗಿ ಹೆಚ್ಚಿನ ಸುನಾಮಿಗಳು ಸಮುದ್ರದ ತಳಭಾಗದಲ್ಲಿ ಉಂಟಾಗುವ ಭೂಕಂಪಗಳಿಂದ ಉಂಟಾಗುತ್ತದೆ. ಹೆಚ್ಚಾಗಿ ಫೆಸಿಫಿಕ್ ಮಹಾಸಾಗರದಲ್ಲಿ ಸಂಭವಿಸುತ್ತವೆ.

**ಪ್ರಮುಖ ಸುನಾಮಿಗಳು:**

ಚಿಲಿ ಸುನಾಮಿ – 1960 ತೀವ್ರತೆ 8.6, 2300 ಜನ ಮರಣ.

ಸುಮಾತ್ರ – 2004. 2 ಲಕ್ಷ ಜನ ಮರಣ.

ಚಿಲಿ ಸುನಾಮಿ – 27 ಫೆಬ್ರವರಿ 2010. 8.8 ತೀವ್ರತೆ.

ಜಪಾನ್ ದೇಶದ ಸುನಾಮಿ – ಮಾರ್ಚ್ 11, 2011

ಪುಕುಶಿಮಾ ಡೈಚಿ – ಅಣು ರಿಯಾಕ್ಟರ್‌ಗೆ ಹಾನಿ.

## ಜ್ವಾಲಾಮುಖಿ

ಭೂಗರ್ಭದಿಂದ ಶಿಲಾರಸ, ಶಿಲಾಚೂರು, ಅನಿಲ, ನೀರಾವಿ, ಬೂದಿಗಳನ್ನು ಭೂಮಿಯ ಹೊರ ದ್ವಾರದ ಮೂಲಕ ಹೊರ ಚಿಮ್ಮುವುದನ್ನು ಜ್ವಾಲಾಮುಖಿ ಎನ್ನುವರು.

**ಕಾರಣಗಳು:**

1) ಭೂ ಮೇಲ್ಮೈಯಿಂದ ಭೂಮಿಯ ಒಳಗೆ ಪ್ರತಿ 32 ಮೀಟರ್ ಆಳಕ್ಕೆ 1 ಡಿಗ್ರಿ ಸೆ. ಉಷ್ಣಾಂಶ ಹೆಚ್ಚಾಗುವುದು.
2) ಭೂಮಿಯ ಕೇಂದ್ರಭಾಗದಲ್ಲಿ ಗರಿಷ್ಠ ಉಷ್ಣಾಂಶವಿರುವುದರಿಂದ ಕೇಂದ್ರಭಾಗದಲ್ಲಿನ ಖನಿಜಾಂಶಗಳು ಕರಗಿ ದ್ರವರೂಪ ತಾಳುತ್ತವೆ.
3) ಈ ದ್ರವ ಪದಾರ್ಥದಲ್ಲಿ ನೀರಾವಿ ಮತ್ತು ಒತ್ತಡದ ಪ್ರಮಾಣ ಅಧಿಕವಿದ್ದು, ಅದು ನಿರಂತರವಾಗಿ ಹೊರಬರಲು ಪ್ರಯತ್ನಿಸುತ್ತದೆ.
4) ಶಿಲಾಪಾಕವು ಭೂ ಅಂತರಾಳದಲ್ಲಿ ಅತ್ಯಧಿಕ ಪ್ರಮಾಣದ ಒತ್ತಡದಿಂದ ಶಿಲಾಸ್ತರಗಳನ್ನು ಭೇದಿಸಿ ಹೊರಹೊಮ್ಮಿ ಜ್ವಾಲಾಮುಖಿಗಳು ಉಂಟಾಗುತ್ತದೆ.

**ಜ್ವಾಲಾಮುಖಿಯ ರಚನೆ:**

1) ಶಿಲಾರಸ, ಭೂಮಿಯ ಒಳಭಾಗದಿಂದ ತೊಗಟೆಯ ದ್ವಾರ ಲಾವಾನಾಳದ ಮುಖಾಂತರ ಭೂಮಿಯ ಮೇಲ್ಭಾಗಕ್ಕೆ ಬರುತ್ತದೆ.
2) ಜ್ವಾಲಾಮುಖಿ ಹೊರಚೆಲ್ಲಿ ನಿರಂತರ ಉಂಟಾಗುವ ತಗ್ಗು ಭಾಗವನ್ನು ಕುಂಡ ಎಂದು ಕರೆಯಲಾಗುತ್ತದೆ.

**ಜ್ವಾಲಾಮುಖಿಯಲ್ಲಿಯ ವಸ್ತುಗಳು:**

ಜ್ವಾಲಾಮುಖಿಯಿಂದಾಗಿ ಹೊರಬರುವ ವಸ್ತುಗಳು ಈ ಕೆಳಗಿನಂತಿವೆ.

1) ದ್ರವ ವಸ್ತುಗಳು: ಇದರಲ್ಲಿ ಶಿಲಾರಸ ಮುಖ್ಯವಾದದ್ದು. ಇದರ ಉಷ್ಣಾಂಶ 900 ಡಿಗ್ರಿ ಸೆ.ನಿಂದ 1200 ಡಿಗ್ರಿ ಸೆ. ಇದು ಕೆಂಪಾಗಿರುತ್ತದೆ. ನಂತರ ಕಪ್ಪಾಗುವುದು.
2) ಘನ ವಸ್ತುಗಳು: ಶಿಲಾಚೂರು, ಬೂದಿ, ಕಲ್ಲುಗುಂಡುಗಳು, ಧೂಳಿನ ಕಣಗಳು, ಕಿಟ್. ಇದರ ಉಷ್ಣಾಂಶ ಸುಮಾರು 400 ಡಿಗ್ರಿ ಸೆ.
3) ಅನಿಲ ವಸ್ತುಗಳು: ಹೈಡ್ರೋಕ್ಲೋರಿಕ್ ಆಮ್ಲ, ಅಮೋನಿಯಂ ಕ್ಲೋರೈಡ್, ನೀರಾವಿ, ಗಂಧಕದ ಡೈ ಆಕ್ಸೈಡ್, ಜಲಜನಕದ ಸಲ್ಫೇಟ್ ಇವುಗಳಲ್ಲಿ ನೀರಾವಿ ಪ್ರಮುಖವಾದುದು.

**ಜ್ವಾಲಾಮುಖಿ ವಿಧಗಳು:**

**1) ಜಾಗೃತ / ಜೀವಂತ ಜ್ವಾಲಾಮುಖಿ:**

ಪ್ರಪಂಚದ ಪ್ರಮುಖ ಜೀವಂತ ಜ್ವಾಲಾಮುಖಿ.

* ಹವಾಯಿ ದ್ವೀಪದ ಮೌನಲೋವಾ.
* ಇಂಡೋನೇಷಿಯಾದ ಕ್ರಕಟೋವಾ.
* ಇಟಲಿ ದೇಶದ ವೆಸಯಸ್.
* ಮೆಡಿಟರೇನಿಯನ್ ಪ್ರದೇಶದ ಸ್ಟ್ರಾಂಬೋಲಿ (ಬೆಳಕಿನ ಮನೆ).

**2) ಸುಪ್ತ / ನಿದ್ರಿತ ಜ್ವಾಲಾಮುಖಿ:**

ದೀರ್ಘಾವಧಿಯವರೆಗೆ ಕಾರ್ಯಾಚರಣೆ ನಡೆಸದೇ ಇರುವುದು. ಉದಾ:

* ಕ್ಯಾಲಿಫೋರ್ನಿಯಾದ ಲಾಸೆನ್
* ಭಾರತದ ಬ್ಯಾರೆನ್ ದ್ವೀಪ

* ಜಾವಾ, ಜಪಾನಿನ ಫ್ಯೂಜಿಯಾಮಾ
* ಇಂಡೋನೇಷಿಯಾದ ಕ್ರಕಟೋವಾ.

**3) ಲುಪ್ತ / ನಂದಿದ / ಆರಿದ ಜ್ವಾಲಾಮುಖಿ:**

ಪುರಾತನ ಕಾಲದ ನಿಷ್ಕ್ರಿಯವಾದವುಗಳು. ಉದಾ:

* ದಕ್ಷಿಣ ಅಮೇರಿಕಾದ ಅಕಾಂಶುಗುವಾ (ಚಿಲಿ).
* ಯು.ಎಸ್.ಎ ನ ಎಲ್ಲೊಸ್ಟೋನ್.
* ಭಾರತದ ದಖನ್ ಪ್ರಸ್ಥಭೂಮಿ.
* ತಾಂಜಿನಿಯಾದ ಕಿಲಿ ಮಂಜಾರೋ.
* ಅಂಡಮಾನ್ ನಿಕೋಬಾರ್.
* ನಾರ್ಕೋಂಡಮ್
* ಮೌಂಟ್ ಎಲ್‌ಬ್ರೂಸ್.

**ಜ್ವಾಲಾಮುಖಿಯಿಂದುಂಟಾಗುವ ಭೂಸ್ವರೂಪಗಳು:**

1) ಜ್ವಾಲಾಮುಖಿ ಶಂಖುಗಳು

2) ಜ್ವಾಲಾಮುಖಿ ಕುಂಡ

3) ಗುರಾಣಿಯಂತಹ ಬೆಟ್ಟ

4) ಗುಮ್ಮಟಾಕಾರದ ಪರ್ವತಗಳು.

## ವಿವರ್ತ ಹರಿವಾಣ

## ಭೂ ವಿಭಾಗಗಳ ಸ್ಥಾನ ಪಲ್ಲಟ

ಈ ಸಿದ್ಧಾಂತ ಕಲಿಯುವ ಮುಂಚೆ ನಾವು ಭೂ ಖಂಡಗಳ ಅಲೆತ ಸಿದ್ಧಾಂತವನ್ನು ಅರಿಯೋಣ.

ಅಲ್ಫ್ರೆಡ್ ವೆಗೆನರ್‌ರವರ ಪ್ರಕಾರ 200 ದಶಲಕ್ಷ ವರ್ಷಗಳ ಹಿಂದೆ ಇಂದು ಇರುವ ಭೂಖಂಡಗಳು ಒಟ್ಟಿಗೆ ಸೇರಿಕೊಂಡಿದ್ದವು. ಹೀಗೆ ಒಟ್ಟಿಗೆ ಇರುವ ಭೂಖಂಡಗಳನ್ನು 'ಪಾಂಜಿಯಾ' ಎಂದು, ಇದನ್ನು ಸುತ್ತುವರೆದಿದ್ದ ಜಲರಾಶಿಗೆ 'ಪ್ಯಾಂಥಲ್ಸ್' ಎಂತಲೂ ಕರೆದನು.

ಪಾಂಜಿಯಾ ಭಾಗ ನಾಲ್ಕು, (ಅಷ್ಟ) ದಿಕ್ಕುಗಳಿಗೂ ಬೇರ್ಪಟ್ಟಿತು. ಉತ್ತರ ಭಾಗವನ್ನು ಲಾರೇಷಿಯಾ ಎಂತಲೂ, ದಕ್ಷಿಣದ ಭಾಗವನ್ನು ಗೊಂಡ್ವಾನ ಲ್ಯಾಂಡ್ ಎಂತಲೂ ಕರೆದನು. ಭಾರತದ 'ಗೊಂಡ್ಸ್' ಎಂಬ ಬುಡಕಟ್ಟು ಜನರಿಂದ ಈ ಭಾಗಕ್ಕೆ ಗೊಂಡ್ವಾನ ಎಂಬ ಹೆಸರು ಬಂದಿದೆ.

ಪಾಂಜಿಯಾ ಮತ್ತು ಪ್ಯಾಂಥಲಸ್‌ಗಳು ಕಾಲನಂತರ ಮತ್ತೊಮ್ಮೆ ಬೇರ್ಪಟ್ಟು ಪ್ರಸ್ತುತ ಇರುವ ಉತ್ತರ ಅಮೇರಿಕಾ, ದಕ್ಷಿಣ ಅಮೇರಿಕಾ, ಆಫ್ರಿಕಾ, ಯೂರೋಪ್, ಆಸ್ಟ್ರೇಲಿಯಾ ಮತ್ತು ಏಷ್ಯಾ ಖಂಡಗಳಾಗಿವೆ ಎಂಬುದು ಆತನ ಅಂಬೋನ.

## ಪ್ಲೇಟ್ ಟೆಕ್ಟಾನಿಕ್ಸ್ ಥೇರಿ

ಭೂಖಂಡಗಳು ಒಂದು ಪ್ರದೇಶದಿಂದಲ್ಲಿ ಸ್ಥಿರವಾಗಿ ನಿಲ್ಲದೇ ಕ್ರಮೇಣ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಚಲಿಸುತ್ತವೆ ಎಂದು ವೆಗೆನರ್ ಪ್ರತಿಪಾದಿಸಿದ್ದನು. ಭೂ ವಿಭಾಗಗಳ ಚಲನೆಯ ಕಾರಣ ಮತ್ತು ಶಕ್ತಿಯನ್ನು ವಿವರಿಸಲು ಅರ್ಥಾತ್ ಹೋಮ್ಸ್‌ರವರ ಪ್ರಚಲನ ಪ್ರವಾಹ ಸಿದ್ಧಾಂತ ಅಳವಡಿಸಿಕೊಳ್ಳಲಾಗಿದೆ.

ಆದರೆ ಇದಕ್ಕೆ ಸರಿಯಾದ ವೈಜ್ಞಾನಿಕ ಆಧಾರಗಳನ್ನು ವೆಗೆನರ್ ಒದಗಿಸಲಿಲ್ಲ. ನಂತರ ವೈಜ್ಞಾನಿಕವಾಗಿ ಆಧಾರ ಕೊಟ್ಟಿದ್ದು ಈ ಭೂ ವಿಭಾಗಗಳ ಸ್ಥಾನ ಪಲ್ಲಟ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಶಿಲಾಗೋಳ, ತೊಗಟೆ ಭಾಗವು ಭೂಖಂಡಗಳು ಮತ್ತು ಸಾಗರಗಳಿಂದ ಮಾರ್ಪಟ್ಟಿದೆ.

ಈ ಭಾಗಗಳು ಭೂ ವಿಭಾಗಗಳನ್ನು ಒಳಗೊಂಡಿದೆ. ಇವು ತೊಗಟೆಯ ಕೆಳಭಾಗದಲ್ಲಿರುವ ಮೇಣದ ರೂಪದ ಅಸ್ತಿನೋಸ್ಪಿಯರ್ ವಲಯದ ಮೇಲೆ ನಿಧಾನವಾಗಿ ತೇಲುತ್ತಿವೆ. ಈ ರೀತಿ ಚಲಿಸುವುದರಿಂದ ಭೂಖಂಡಗಳು ಮತ್ತು ಸಾಗರಗಳು ಸ್ಥಾನ ಪಲ್ಲಟವಾಗುತ್ತಿವೆ.

**ಪ್ರಮುಖ ಭೂ ವಿಭಾಗಗಳು:**

ಪ್ರಧಾನ ಭೂ ವಿಭಾಗಗಳನ್ನು ಹಾಗೂ ಅನೇಕ ಚಿಕ್ಕ ಭೂ ವಿಭಾಗಗಳನ್ನು ತೊಗಟೆಯಲ್ಲಿ ಗುರುತಿಸಲಾಗಿದೆ.

* ಪ್ರಧಾನ ಭೂ ವಿಭಾಗಗಳು:

1) ಫೆಸಿಫಿಕ್ ಭೂ ವಿಭಾಗ
2) ಉತ್ತರ ಅಮೇರಿಕಾ
3) ಯುರೇಷಿಯಾ
4) ಆಫ್ರಿಕಾ
5) ಇಂಡೋ–ಆಸ್ಟ್ರೇಲಿಯಾ
6) ಅಂಟಾರ್ಟಿಕಾ
7) ದಕ್ಷಿಣ ಅಮೇರಿಕಾ

ಅತಿ ದೊಡ್ಡ ಭೂ ವಿಭಾಗ ಫೆಸಿಫಿಕ್ ಭೂ ವಿಭಾಗ. ಅತಿ ಚಿಕ್ಕ ಭೂ ವಿಭಾಗ ಜೂಯಾನ್ ಡಿ. ಪುಕಾ ಭೂ ವಿಭಾಗ. ಇದು ದಕ್ಷಿಣ ಅಮೇರಿಕಾ ಪಶ್ಚಿಮ ಭಾಗದಲ್ಲಿದೆ. ಭಾರತ 5ನೇ ವಿಭಾಗದಲ್ಲಿ ಕಂಡು ಬರುತ್ತದೆ.

**ಭೂಸವೆತದ ಕರ್ತೃಗಳು:**

ಭೂರಾಶಿಯ ಮೇಲ್ಮೈ ಸ್ವರೂಪಗಳು ನಿರಂತರವಾಗಿ ಬದಲಾವಣೆ ಹೊಂದುತ್ತವೆ. ಇವುಗಳಿಗೆ ಪ್ರಮುಖ ಕಾರಣಗಳು:

1) ನೀರು
2) ಗಾಳಿ
3) ಹಿಮ
4) ಅಲೆ

ಕೆಲವು ಭೂಭಾಗಗಳು ಮೇಲೆತ್ತಲ್ಪಟ್ಟು ಹೊಸದಾಗಿ ಭೂಭಾಗಗಳು ನಿರ್ಮಿತವಾದರೆ, ಕೆಲವು ಭಾಗಗಳು ಕುಸಿದು ಸಾಗರದಲ್ಲಿ ವಿಲೀನ ಹೊಂದುತ್ತವೆ. ಹೀಗೆ ಭೂಭಾಗಗಳ ಉಗಮ ಹಾಗೂ ಅಉುಗಳ ಸ್ವರೂಪ ನಿರ್ಮಾಣವು 2 ವಿಧವಾದ ಶಕ್ತಿಗಳಿಂದ ನಿರ್ವಹಿಸಲ್ಪಡುವುದು.

1) ಅಂತರ್ಜನಿತ ಶಕ್ತಿಗಳು (ಆಂತರಿಕ)
2) ಬಹಿರ್ಜನಿತ (ಬಾಹ್ಯ) ಶಕ್ತಿಗಳು

ಜ್ವಾಲಾಮುಖಿ, ಭೂಕಂಪ, ಭೂಮಡಿಕೆ, ಸ್ತರಭಂಗ ಇವು ಭೂಮಿಯ ಆಂತರಿಕ ಅಸ್ಥಿರತೆಯ ಪ್ರತೀಕವಾಗಿವೆ. ನೀರು, ಅಲೆ, ಹಿಮ, ಗಾಳಿ ಸವೆತ, ಸಾಗಾಣಿಕೆ ಮತ್ತು ಸಂಚಯನ ಕಾರ್ಯಗಳಿಂದ ಭೂಮಿಯ ಮೇಲೆ ವಿವಿಧ ಬಗೆಯ ಸ್ವರೂಪಗಳು ನಿರ್ಮಾಣ ಹೊಂದುತ್ತವೆ.

ಮುಖ್ಯವಾದ ಬಾಹ್ಯಶಕ್ತಿಗಳೆಂದರೆ, ಸುರಿಯುವ ಮಳೆ, ಹರಿಯುವ ನೀರು, ಬೀಸುವ ಗಾಳಿ, ಅಪ್ಪಳಿಸುವ ಸಮುದ್ರದ ಅಲೆಗಳು, ದ್ರಾವಣೀಕರಿಸುವ ಅಂತರ್ಜಲ ನಿಧಾನವಾಗಿ ಚಲಿಸುವ ಅಗಾಧ ಹಿಮರಾಶಿ ಹಾಗೂ ಭೂ ಮೇಲ್ಮೈ ಜೀವರಾಶಿಗಳು. ಭೂಮಿಯ ಮೇಲೆ ಕಂಡು ಬರುವ ಸ್ವರೂಪಗಳು ಆಂತರಿಕ ಹಾಗೂ ಬಾಹ್ಯ ಶಕ್ತಿಗಳ ನಿರಂತರ ಕಾರ್ಯದ ಪ್ರತೀಕವಾಗಿವೆ. ಅಲ್ಲದೆ ಈ ಕಾರ್ಯಗಳು ಭೂಮಿಯ ನಿರ್ಮಾಣವಾದಾಗಿನಿಂದ ಇಂದಿನವರೆಗೂ ನಿರಂತರವಾಗಿ ಮುಂದುವರೆದಿದೆ.

ಹೊಸದಾಗಿ ಭೂ ಪ್ರದೇಶಗಳು ಆಂತರಿಕ ಶಕ್ತಿಗಳಿಂದ ನಿರ್ಮಿತಗೊಂಡಂತೆ ಅವನ್ನು ಸವೆಸುವ, ಮಟ್ಟಸಗೊಳಿಸುವ ಕಾರ್ಯದಲ್ಲಿ ಬಾಹ್ಯ ಶಕ್ತಿಗಳು ತೊಡಗಿವೆ. ಇದು ಭೂ ಸವೆಯ ಕಾರ್ಯವು ಅಂತಿಮ ಮಟ್ಟವನ್ನು ತಲುಪುವವರೆಗೂ ಮುಂದುವರಿಯುವುದು.

## ವಾಯುಮಂಡಲ

ಭೂಮಿಯ ಹೊರಮೈಯನ್ನು ಹೊದಿಕೆಯಂತೆ ಸುತ್ತುವರೆದಿರುವ ಅನಿಲದ ರಾಶಿ, ಈ ಅನಿಲ ರಾಶಿಯಲ್ಲಿ ತೇಲುವ ದ್ರವ ಹಾಗೂ ಘನವಸ್ತುಗಳ ಅತೀ ಸೂಕ್ಷ್ಮ ಕಣಗಳನ್ನು ಒಟ್ಟಾಗಿ 'ವಾಯುಮಂಡಲ' ಎನ್ನುವರು. ವಾಯುಗೋಳವು ಭೂಮಿಯ ಗುರುತ್ವಾಕರ್ಷಣ ಬಲದಿಂದ ಬಂಧಿಸಲ್ಪಟ್ಟಿವೆ. ಇಂಗ್ಲೀಷ್‌ನ 'ಅಟ್‌ಮಾಸ್' ಅಂದರೆ ನೀರಾವಿ. 'ಸ್ಫೇರಿಯಾ' ಅಂದರೆ ಮಂಡಲ ಎಂದರ್ಥ. ವಾಯುಮಂಡಲವು ಬಣ್ಣರಹಿತ, ವಾಸನೆ, ರುಚಿ ರಹಿತವಾದುದು. ಇದು ಅನೇಕ ಅನಿಲಗಳ ಮಿಶ್ರಣವಾಗಿದೆ. ಇದು 1000 ಕಿ.ಮೀ. (6000 ಮೈ) ವಿಸ್ತರಿಸಿದೆ.

**ಪ್ರಾಮುಖ್ಯತೆ:**

ಇಲ್ಲಿನ ಅನಿಲಗಳು ಎಲ್ಲಾ ಬಗೆಯ ಜೀವಿ ಸಸ್ಯಗಳ ಅವಿರ್ಭಾವಕ್ಕೆ ಕಾರಣವಾಗಿವೆ. ಜೀವಿಗಳ ಅಸ್ತಿತ್ವ ಭೂಮಿಯಲ್ಲಿ ಮಾತ್ರವೇ ಇರಲು ಕಾರಣ. ಏಕಕೋಶ ಜೀವಿಯಿಂದ ಮಾನವನಾಗುವವರೆಗೆ ಇರುವ ಪ್ರಮುಖ ಅನಿಲಗಳು ಆಮ್ಲಜನಕ ಮತ್ತು ಸಾರಜನಕ ಇತ್ಯಾದಿ. ಓ3 ಸೂರ್ಯನ ವಿಕಿರಣದಿಂದ ಸಸ್ಯ ಪ್ರಾಣಿಗಳನ್ನು ಸಂರಕ್ಷಿಸುತ್ತವೆ. ಸಸ್ಯಗಳು ಸೂರ್ಯನ ಶಕ್ತಿ ಬಳಸಿ ಆಹಾರ ಉತ್ಪಾದಿಸುತ್ತವೆ. ಭೂಮಿಯ ಎಲ್ಲಾ ಬಗೆಯ ಚೈತನ್ಯಗಳಿಗೆ ಈ ಉಷ್ಣಾಂಶವೇ ಕಾರಣ.

**ವಾಯುಮಂಡಲದ ರಚನೆ:**

ವಾಯುಮಂಡಲ ಭೂಮಿಯಿಂದ ಸುಮಾರು 1000 ಕಿ.ಮೀ.ಗಳವರೆಗೆ ವ್ಯಾಪಿಸಿರಬಹುದು.

ಭೂಮಿಯ ಸಮೀಪ ವಾಯುಮಂಡಲದ ಸಾಂದ್ರತೆ ಹೆಚ್ಚಾಗಿದ್ದು, ಭೂಮಿಯಿಂದ ಎತ್ತರಕ್ಕೆ ಹೋದಂತೆ ಅನಿಲಗಳ ಸಾಂದ್ರತೆ ಕಡಿಮೆಯಾಗುತ್ತಾ ಹೋಗುತ್ತದೆ. ಭಾರವಾದ ಅನಿಲಗಳು ಭೂಮಿಯ ಸಮೀಪವಿರುತ್ತವೆ. ವಾಯುಮಂಡಲವು ಭೂಮಿಯ ವಿಕಿರಣತೆಯಿಂದ ಉಷ್ಣಾಂಶವನ್ನು ಪಡೆಯುತ್ತದೆ. ವಾಯುಮಂಡಲವು 5 ಸ್ತರಗಳ ರಚನೆಯಿಂದ ಕೂಡಿದೆ.

1) ಹವಾಗೋಳ
2) ವಾಯುಗೋಳ
3) ಮಧ್ಯಗೋಳ
4) ಅಯಾನ ಗೋಳ
5) ಕಾಂತತ್ವ ಮಂಡಲ

**ಪರಿವರ್ತನಾ ಮಂಡಲ:**

ಇದು ವಾಯುಮಂಡಲ ಅತ್ಯಂತ ಕೆಳಸ್ತರ. ಇದು ಭೂಮಿಯ ಸಮಭಾಜಕ ವೃತ್ತದಲ್ಲಿ 18 ಕಿ.ಮೀ. ಎತ್ತರವಿದ್ದು, ಧೃವಗಳಲ್ಲಿ 8 ಕಿ.ಮೀ. ಎತ್ತರದವರೆಗೆ ವಿಸ್ತರಿಸಿದೆ. ಇದರ ಸರಾಸರಿ ಎತ್ತರ 13 ಕಿ.ಮೀ. ಇಲ್ಲಿ ಸರಾಸರಿ 20 ಡಿಗ್ರಿ ಸೆ. – 25 ಡಿಗ್ರಿ ಸೆ.ವರೆಗು ಉಷ್ಣಾಂಶ ವ್ಯತ್ಯಾಸವಾಗುತ್ತದೆ. ಇದರಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶ ಕಡಿಮೆ. ಪ್ರತಿ 1 ಕಿ.ಮೀ. ಎತ್ತರಕ್ಕೆ ಹೋದರೆ 6 ಡಿಗ್ರಿ ಸೆ. ಕಡಿಮೆಯಾಗುತ್ತದೆ. ಸಮುದ್ರ ಮಟ್ಟದಲ್ಲಿ ವಾಯುಮಂಡಲದ ಸರಾಸರಿ ಒತ್ತಡ 1013.25 ಮಿಲಿಬಾರ.

ವಾಯುಗುಣದ ಮೂಲ ಘಟಕಗಳಾದ ಮೋಡಗಳು, ಮಾರುತಗಳು, ವೃಷ್ಠಿ, ಗುಡುಗು, ಮಿಂಚು, ಹಿಮ, ಮಂಜು ಈ ವಲಯಕ್ಕೆ ಮಾತ್ರ ಸೀಮಿತವಾಗಿವೆ. ಈ ವಲಯದಲ್ಲಿ ಅನಿಲಗಳ ಸಾಂದ್ರತೆ 75%ರಷ್ಟು. ಸಾರಜನಕ, ಆಮ್ಲಜನಕ, ಆರ್ಗಾನ್, ಇಂಗಾಲಾಮ್ಲ, ನೀರಾವಿ ಅನಿಲಗಳು ಹೆಚ್ಚಾಗಿ ಕಂಡು ಬರುತ್ತವೆ. ಪರಿವರ್ತನಾ ವಿರಾಮ, ಈ ವಲಯದ ಅಂತ್ಯಭಾಗ. ಪರಿವರ್ತನಾ ವಿರಾಮದಲ್ಲಿ ವಾಯುಧಾರೆಗಳು ಕಂಡುಬರುತ್ತವೆ.

**ಸಮೋಷ್ಣಮಂಡಲ (ಗಾಳಿಪದರು)**

ಇದು ಭೂಮಿಯಿಂದ ಸುಮಾರು 50 ಕಿ.ಮೀ. ಎತ್ತರಕ್ಕೆ ವ್ಯಾಪಿಸಿದೆ. ಇಲ್ಲಿ ಸಾಮಾನ್ಯವಾಗಿ ಉಷ್ಣಾಂಶದಲ್ಲಿ ವ್ಯತ್ಯಾಸವಾಗುವುದಿಲ್ಲ. ನೀರಾವಿ ಕಡಿಮೆ, ಮೋಡಗಳು ಕಡಿಮೆ, ಮಳೆಗೆ ಅವಕಾಶವಿಲ್ಲ. ಓಝೋನ್ ವಲಯವಿಲ್ಲಿರುತ್ತದೆ. ಇದು ಅತಿ ನೇರಳೆ ಕಿರಣಗಳಿಂದ ಭೂಮಿಯ ಜೀವಿಗಳಿಗೆ ರಕ್ಷಣೆ ನೀಡಿದೆ. ಓಝೋನ್ ವಲಯವು ಭೂಮಿಯಿಂದ ಸುಮಾರು 20–25 ಕಿ.ಮೀ. ಎತ್ತರದಲ್ಲಿ ಸಾಂದ್ರವಾಗಿ ವಿಸ್ತರಿಸಿದೆ.

ಸಿ.ಎಫ್.ಸಿ. ಮಿಥೇನ್ ಮುಂತಾದ ವಿಷಾನಿಲಗಳಿಂದ ಓ3ಗೆ ಹಾನಿಯಾಗುತ್ತಿದೆ. ಸಮೋಷ್ಣಮಂಡಲದ ಅಂತ್ಯವಲಯಕ್ಕೆ ಸಮೋಷ್ಣ ವಿರಾಮವೆಂದು ಕರೆಯುವರು. ಸಮೋಷ್ಣವಲಯದ 50 ಕಿ.ಮೀ.ನಿಂದ ಎತ್ತರಕ್ಕೆ 80 ಕಿ.ಮೀ.ಗೆ ವಿಸ್ತರಿಸಿದೆ. ಇಲ್ಲಿ ಉಷ್ಣಾಂಶ ಹೆಚ್ಚಾಗುತ್ತದೆ. ಇಲ್ಲಿ ಅನಿಲಗಳ ಸಾಂದ್ರತೆ ಕಡಿಮೆಯಿರುವುದರಿಂದ 60 ಡಿಗ್ರಿ ಸೆ.ನಿಂದ 75 ಡಿಗ್ರಿ ಸೆ.ವರೆಗೆ ಉಷ್ಣಾಂಶದ ವ್ಯತ್ಯಾಸವಾಗುತ್ತದೆ. ಇಲ್ಲಿ ಹಗುರವಾದ ಜಲಜನಕ, ಹೀಲಿಯಂ ಮತ್ತು ಮೀಥೆನ್ ಅನಿಲಗಳು ಕಂಡು ಬರುತ್ತವೆ. ಮಧ್ಯಮಂಡಲದಲ್ಲಿ ಉಲ್ಕೆಗಳು ಪ್ರವೇಶಿಸಿ ಉರಿಯುತ್ತವೆ. ಈ ಸ್ತರದಲ್ಲಿ ಧೃವ ಜ್ಯೋತಿಗಳು ಕಾಣಿಸುತ್ತವೆ. ಬೊರಾಲಿಸ್ ಮತ್ತು ಆಸ್ಟ್ರಾಲಿಸ್ ಮಧ್ಯ ಮಂಡಲದ ಮುಕ್ತಾಯದಲ್ಲಿ ಮಧ್ಯಂತರ ವಿರಾಮ ಎನ್ನುವರು

**ಆಯಾನ ಮಂಡಲ:**

80 ಕಿ.ಮೀ.ನಿಂದ 400 ಕಿ.ಮೀ.ವರೆಗೆ ವಿಸ್ತರಿಸಿದೆ. ಜಲಜನಕ ಮತ್ತು ಹೀಲಿಯಂ ಅನಿಲಗಳು ಪ್ರಮುಖವಾಗಿವೆ. ಈ 2 ಅನಿಲಗಳು ಸೂರ್ಯನ ಕಿರಣಗಳು, ಎಕ್ಸ್ ಕಿರಣಗಳು ಗಾಮಾ ಕಿರಣಗಳು ಹೀರಿಕೊಂಡು ಉಷ್ಣಾಂಶವನ್ನು ಪಡೆಯುತ್ತವೆ. ಈ ಸ್ತರದಲ್ಲಿ ಸುಮಾರು 1000 ಡಿಗ್ರಿ ಸೆ. – 1500 ಡಿಗ್ರಿ ಸೆ.ವರೆಗೆ ಉಷ್ಣಾಂಶ ವ್ಯತ್ಯಾಸವಾಗುತ್ತದೆ. ಇದು ರೇಡಿಯೋ, ದೂರದರ್ಶಕ ಮಾಧ್ಯಮಗಳ ತರಂಗಗಳನ್ನು ಭೂಮಿಗೆ ಪ್ರತಿಫಲಿಸುವ ವಲಯ.

ಡಿ.ಈ.ಎಫ್.ಜಿ ಎಂಬ 4 ರೇಡಿಯೋ ತರಂಗದ ಸ್ತರಗಳಿವೆ. ಈ ತರಂಗಗಳು:

* ಡಿ ಸ್ತರವು ದೀರ್ಘ ಫ್ರಿಕ್ವನ್ಸಿ ತರಂಗಗಳನ್ನು ಭೂಮಿಗೆ ಪ್ರತಿಫಲಿಸುತ್ತವೆ.
* ಎಫ್, ಜಿ ಸ್ತರಗಳು ಹಗಲು ಮಾತ್ರ ಗೋಚರಿಸುತ್ತವೆ.
* ಇದನ್ನು ರೇಡಿಯೋ ಎಂಜಿನೀಯರ್‌ರ ವಲಯವೆನ್ನುವರು.

**ಬಾಹ್ಯ ಮಂಡಲ:**

ಅತ್ಯಂತ ಎತ್ತರವಾದ ಸ್ತರ. 400 ಕಿ.ಮೀ.ನಿಂದ 1600 ಕಿ.ಮೀ.ವರೆಗೆ ವ್ಯಾಪಿಸಿದೆ. 1959 ವಾನ್ ಅಲೇನ ಕಂಡುಹಿಡಿದನು. ಆದ್ದರಿಂದ ಅದನ್ನು ವಾನ್ ಅಲೇನ್ ಸ್ತರ ಎಂದು ಕರೆಯುವರು. ಈ ವಲಯದಲ್ಲಿ ವಾಯು ಬಹಳ ವಿರಳವಾಗಿರುತ್ತದೆ. ಈ ಸ್ತರದಲ್ಲಿ ಅನಿಲಗಳ ಸಾಂದ್ರತೆ 1%ರಷ್ಟು. ಸರಾಸರಿ ವಾಯುವಿನ ಒತ್ತಡ 1 ಮಿಲಿಬಾರ ಮತ್ತು ಸರಾಸರಿ ಉಷ್ಣಾಂಶ 5568 ಡಿಗ್ರಿ ಸೆ.

**ವಾಯುಮಂಡಲ ಸಂಯೋಜನೆ:**

ವಾಯುಮಂಡಲವು ಒಳಗೊಂಡಿರುವ ಅನಿಲಗಳ ಹಾಗೂ ಇನ್ನಿತರ ಕಣ ರಾಶಿಯನ್ನೇ ವಾಯುಮಂಡಲ ಸಂಯೋಜನೆ ಎಂದು ಕರೆಯುವರು.

**ಎ) ಅನಿಲಗಳು:**

**1) ಸಾರಜನಕ:**

ಈ ಅನಿಲವನ್ನು 1949ರಲ್ಲಿ ರೇನಿಯನ್ ರುಧರ್ ಪೋರ್ಡ್ ಕಂಡುಹಿಡಿದ. ಇದು ಜಡವಾದ ಅನಿಲ. ವಾತಾವರಣದಲ್ಲಿ ಇದರ ಪ್ರಮಾಣ 78.08%. ಇದು ಆಮ್ಲಜನಕದ ತೀವ್ರತೆ ಕಡಿಮೆ ಮಾಡಿ ಜೀವಿಗಳಿಗೆ ಉಸಿರಾಡಲು ಅನುಕೂಲ ಮಾಡುವುದು. ಸಸ್ಯಗಳ ಬೆಳವಣಿಗೆಗೆ, ಮಣ್ಣಿನ ಫಲವತ್ತತೆಗೆ ಅಗತ್ಯ.

**2) ಆಮ್ಲಜನಕ:**

ಜೋಸೆಫ್ ಪ್ರಿಸ್ಲೆ ಎಂಬಾತನಿಂದ ಶೋಧನೆ. ಇದು ವಾಯುಮಂಡಲದಲ್ಲಿ 20.94%ರಷ್ಟಿದೆ. ಜೀವಿಗಳಿಗೆ ಉಸಿರಾಡಲು, ಇರುವ ಅಮೂಲ್ಯವಾದ ಜೀವಾನಿಲ.

**3) ಆರ್ಗಾನ್: 0.93%**

ಈ ಅನಿಲವನ್ನು ಲಾರ್ಡ್ ರ್‍ಯಾಲಿ ಮತ್ತು ವಿಲಿಯಂ ರಾಮಸ್ ಶೋಧಿಸಿದರು. ಈ ಅನಿಲವನ್ನು ಹೆಚ್ಚಾಗಿ ಟಂಗಸ್ಟನ್ ವಿದ್ಯುತ್ ಬಲ್ಬ್‌ಗಳಲ್ಲಿ ಉಪಯೋಗಿಸುತ್ತಾರೆ.

**4) ಇಂಗಾಲಾಮ್ಲ:**

ಇಂಗಾಲಾಮ್ಲ ಜೋಸೆಫ್ ಬ್ಲಾಕ್ ಶೋಧಿಸಿದ್ದಾನೆ. ದಹನ ಕ್ರಿಯೆಯಿಂದ ಉತ್ಪತ್ತಿಯಾದ ಇಂಗಾಲಾಮ್ಲವನ್ನು ಹಸಿರು ಸಸ್ಯಗಳು ತಮ್ಮ ದ್ಯುತಿ ಸಂಶ್ಲೇಷಣೆ ಕ್ರಿಯೆಯ ಮೂಲಕ ಪಡೆದುಕೊಳ್ಳುತ್ತವೆ. ಇದು ದಹನ ಅನಾನುಕೂಲಿ ಅನಿಲ. ಬೆಂಕಿ ಆರಿಸಲು ಉಪಯೋಗಿಸುತ್ತಾರೆ.

**5) ನಿಯಾನ:**

ಈ ಅನಿಲವನ್ನು ಬಣ್ಣದ ಬಲ್ಬ್‌ಗಳ ತಯಾರಿಕೆಯಲ್ಲಿ ಬಳಸುವರು.

**6) ಹಿಲಿಯಂ:**

0.0005%

**7) ಓ3:**

0.0006%

**8) ಜಲಜನಕ:**

0.0005%

ಇವುಗಳಲ್ಲದೆ, ಕ್ರಿಪ್ಟಾನ್, ಮಿಥೇನ್‌ಗಳು ಇದ್ದು, ಅವುಗಳ ಪ್ರಮಾಣ ಅತಿ ಕಡಿಮೆ. ಇವುಗಳನ್ನು ನೋಬೆಲ್ ಗಾಸೆಸ್ ಎನ್ನುವರು ಅಥವಾ ಇನರ್ಟ್ ಗ್ಯಾಸೆಸ್ ಎನ್ನುವರು.

**ಬಿ) ನೀರಾವಿ:**

ನೀರಾವಿಯ ಪ್ರಮಾಣ ವಾಯುಮಂಡಲದ ಶೇ.0.4ರಷ್ಟಿರುವುದು. ಯಾವುದೇ ಒಂದು ಅವಧಿಯಲ್ಲಿ ಭೂಮಿಯ ಒಟ್ಟು ನೀರಿನ 1%ರಷ್ಟು ಮಾತ್ರ ವಾಯುಮಂಡಲದಲ್ಲಿ ನೀರಾವಿಯ ರೂಪದಲ್ಲಿರುವುದು.

**ಸಿ) ಸೂಕ್ಷ್ಮ ಕಣಗಳು:**

ಇವು ವಾಯುಮಂಡಲದಲ್ಲಿ ತೇಲುವ ಸ್ಥಿತಿಯಲ್ಲಿರುವ ಸೂಕ್ಷ್ಮ ಕಣಗಳನ್ನು 'ಏರೋ ಸೋಲ್' ಎಂದು ಕರೆಯುವರು. ಓ3 ಪ್ರಮಾಣ 3300 ದಶಲಕ್ಷ ಟನ್‌ಗಳೆಂದು ಅಂದಾಜು. ಮಣ್ಣಿನ ಕಣ, ಹೊಗೆ, ಬ್ಯಾಕ್ಟೀರಿಯಾ, ಬೂದಿ, ಕಾಡ್ಗಿಚ್ಚು ಇತ್ಯಾದಿ.

## ವಾಯುಮಂಡಲ ಸಂಯೋಜನೆಯ ಮುಖ್ಯ ಲಕ್ಷಣಗಳು

ಭಾರವಾಗಿರುವ ಆಮ್ಲಜನಕ, ನೈಟ್ರೋಜನ್, ಕಾರ್ಬನ್ ಡೈಆಕ್ಸೈಡೆ ಅನಿಲಗಳು ವಾಯುಮಂಡಲದ ಕೆಳಸ್ತರಗಳಲ್ಲಿ ಮಾತ್ರ ಕಂಡುಬರುತ್ತವೆ. ಕಾರ್ಬನ್ ಡೈಆಕ್ಸೈಡ್ ಭೂಮಿಯಿಂದ 18 ಕಿ.ಮೀ. ಎತ್ತರದವರೆಗೆ, ಆಮ್ಲಜನಕ 109 ಕಿ.ಮೀ.ವರೆಗೆ ಹಾಗೂ ಸಾರಜನಕ 128 ಕಿ.ಮೀ.ಎತ್ತರದವರೆಗೆ ಮಾತ್ರ ಕಂಡು ಬರುತ್ತದೆ.

ಸುಮಾರು 150 ಕಿ.ಮೀ.ಗಳಿಗಿಂತ ಹೆಚ್ಚು ಎತ್ತರದ ವಾಯುಮಂಡಲದ ಜಲಜನಕವನ್ನು ಪ್ರಧಾನವಾಗಿ ಒಳಗೊಂಡಿರುವುದು. ವಾಯುಮಂಡಲದ ಕೆಳವಲಯದಲ್ಲಿ ಮಾರುತಗಳು ಮತ್ತು ಪ್ರವಾಹಗಳಿಂದ ಎಲ್ಲಾ ಬಗೆಯ ಅನಿಲಗಳು ಹೆಚ್ಚು ಮಿಶ್ರಣಗೊಂಡಿರುತ್ತದೆ.

ವಾಯುಮಂಡಲದ ಕೆಳವಲಯದಲ್ಲಿ ಮಾರುತಗಳು ಮತ್ತು ಪ್ರವಾಹಗಳಿಂದ ಎಲ್ಲಾ ಬಗೆಯ ಅನಿಲಗಳು ಹೆಚ್ಚು ಮಿಶ್ರಣಗೊಂಡಿರುತ್ತವೆ. ವಾಯುಮಂಡಲದ ನೀರಾವಿ, ಜಲಾಂಶ ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುತ್ತದೆ. ಈ ವಾಯು ಸಂಯೋಜನೆಯ ಊರ್ಧ್ವಮುಖ ಹಾಗೂ ಸಮಾನಾಂತರವಾಗಿಯೂ ಅಪಾರ ವ್ಯತ್ಯಾಸ ಒಳಗೊಂಡಿದೆ. ವಾಯು ಸಂಯೋಜನೆಯು ಉಷ್ಣಾಂಶದ ವ್ಯತ್ಯಾಸದೊಡನೆ ನಿರಂತರ ಬದಲಾವಣೆಯನ್ನು ಹೊಂದುವುದು.

# ಹವಾಮಾನ ಮತ್ತು ವಾಯುಗುಣ

**ಹವಾಮಾನ:**

ಒಂದು ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಕಾಲದಲ್ಲಿ ಕಂಡುಬರುವ ವಾಯುಮಂಡಲದ ಪರಿಸ್ಥಿತಿ ಹವಾಮಾನ. ಹವಾಮಾನ ತಿಳಿಯಲು ಇರುವ ಹವಾಮಾನದ ಮೂಲಾಂಶಗಳು – ಉಷ್ಣಾಂಶ, ಒತ್ತಡ, ಮಾರುತಗಳು, ತೇವಾಂಶ, ಮೋಡದ ಪ್ರಮಾಣ, ಸೌರಶಾಖದ ಅವಧಿ, ವಿವಿಧ ಉಪಕರಣಗಳಿಂದ ವಿಶ್ಲೇಷಣೆ.

**ವಾಯುಗುಣ:**

ಒಂದು ಪ್ರದೇಶದ ದೀರ್ಘಾವಧಿಯ, ಅಂದರೆ ಸುಮಾರು 30–35 ವರ್ಷಗಳ ಹವಾಮಾನದ ಸರಾಸರಿ ಅಥವಾ ಸಾಮಾನ್ಯ ಪರಿಸ್ಥಿತಿಯನ್ನು, ವಾಯುಗುಣವನ್ನು ನಿರ್ಧರಿಸುವ ಬಾಹ್ಯ ಮೂಲಾಂಶಗಳು, ಅಕ್ಷಾಂಶ, ಸಮುದ್ರದಿಂದ ಇರುವ ದೂರ, ಸಮುದ್ರದಿಂದ ಇರುವ ಎತ್ತರ, ಮಾರುತಗಳು ಬೀಸುವ ದಿಕ್ಕು ಮತ್ತು ವೇಗ ಸಾಗರ ಪ್ರವಾಹ ಇತ್ಯಾದಿ.

ಹವಾಮಾನ ಮತ್ತು ವಾಯುಗುಣ ನಿರ್ಧರಿಸುವ ಘಟಕಗಳು ಒಂದೇ ಆಗಿದ್ದರೂ, ಹವಾಮಾನದ ಘಟಕಗಳು ತಮ್ಮ ಮಾರ್ಪಾಡಿನೊಂದಿಗೆ ವಾಯುಗುಣವನ್ನು ರೂಪಿಸುತ್ತದೆ. ಅಂದರೆ ವಾಯುಗುಣವನ್ನು ನಿರ್ಧರಿಸುವ ಮೂಲಾಂಶಗಳು ವಾಯುಮಂಡಲದ ಬಾಹ್ಯ ಲಕ್ಷಣಗಳಾಗಿರುತ್ತವೆ.

ಅಂದರೆ ವಾಯುಮಂಡಲದ ಆಂತರಿಕ ಅಂಶಗಳು ಹವಾಮಾನವನ್ನು ರೂಪಿಸುತ್ತವೆ. ಇದಕ್ಕೆ ಬದಲಾಗಿ ಬಾಹ್ಯ ಅಂಶಗಳು ಹವಾಮಾನದ ಅಂಶಗಳನ್ನು ಮಾರ್ಪಡಿಸಿ ವಾಯುಗುಣವನ್ನು ನಿರ್ಧರಿಸುತ್ತವೆ.

**ವ್ಯತ್ಯಾಸಗಳು:**

**ಹವಾಮಾನ:**

* ಯಾವುದೇ ಒಂದು ನಿರ್ದಿಷ್ಟ ಸ್ಥಳದ, ನಿರ್ದಿಷ್ಟ ಕಾಲದ ವಾಯುಮಂಡಲದ ಪರಿಸ್ಥಿತಿ.
* ವಾಯುಮಂಡಲವು ಆಂತರಿಕವಾಗಿ ಒಳಗೊಂಡಿರುವ ಘಟಕಗಳಾದ ಉಷ್ಣಾಂಶ, ಒತ್ತಡ, ಮಾರುತ ಇತ್ಯಾದಿಗಳಿಂದ ನಿರ್ಧರಿಸಲ್ಪಡುತ್ತವೆ.
* ಹವಾಮಾನ ಸೂಚಿಸಲು ಚಳಿ, ಸೆಖೆ, ಮೋಡ ತುಂಬಿದ ಬಿರುಗಾಳಿ ಪದಗಳ ಬಳಕೆ ಮಾಡುವರು.
* ಒಂದು ನಿರ್ದಿಷ್ಟ ಸ್ಥಳ ಹಾಗೂ ಅಲ್ಪಾವಧಿಯ ಸೂಚಕ.

**ವಾಯುಗುಣ:**

* ಇದು ದೀರ್ಘ ಅವಧಿಯ ಹವಾಮಾನದ ಸರಾಸರಿ.
* ಇದು ಬಾಹ್ಯ ಅಂಶಗಳಿಂದ ನಿರ್ಧಾರಕ್ಕೆ ಅವು ಅಕ್ಷಾಂಶ, ಸಮುದ್ರದಿಂದ ಎತ್ತರ, ಸಾಗರ ಪ್ರವಾಹಗಳು ಇತ್ಯಾದಿ.
* ಇಲ್ಲಿ ಉಷ್ಣ, ಶೀತ, ಒಣ, ತೇವಾಯುತ, ಆರ್ದ್ರತೆ ಮುಂತಾದ ಪದ ಬಳಸುವರು.
* ಇದು ದೀರ್ಘಾವಧಿ ಹಾಗೂ ವಿಸ್ತಾರವಾದ ಪ್ರದೇಶಕ್ಕೆ ಅನ್ವಯಿಸುವುದು.

**ವಾಯುಗುಣವನ್ನು ಮಾರ್ಪಡಿಸುವ ಅಂಶಗಳು:**

1) ಅಕ್ಷಾಂಶ
2) ಭೂ ಮತ್ತು ಜಲಭಾಗಗಳು
3) ಮಾರುತಗಳ ದಿಕ್ಕು ಮತ್ತು ವೇಗ
4) ವಾಯುರಾಶಿಗಳು
5) ಎತ್ತರ
6) ಭೂ ಸ್ವರೂಪಗಳು

7) ಸಾಗರ ಪ್ರವಾಹಗಳು

8) ಆವರ್ತ ಮಾರುತಗಳು

**ವಾಯುಗುಣವನ್ನು ನಿರ್ಧರಿಸುವ ಅಂಶಗಳು:**

1) ಅಕ್ಷಾಂಶ ಅಥವಾ ಭೌಗೋಳಿಕ ಸ್ಥಾನ

2) ಸಮುದ್ರದಿಂದ ಇರುವ ಎತ್ತರ

3) ಸಾಗರಗಳಿಂದ ಇರುವ ದೂರ

4) ಪರ್ವತಗಳು ಹಬ್ಬಿರುವ ರೀತಿ

5) ಮಾರುತಗಳು ಬೀಸುವ ದಿಕ್ಕು

6) ಸಾಗರ ಪ್ರವಾಹಗಳು

7) ಭೂ ಮೇಲ್ಮೈ ಆವರಿಸಿರುವಿಕೆ

8) ಜ್ವಾಲಾಮುಖಿ ಕಾರ್ಯಾಚರಣೆ

9) ಸೌರ ಸಿದ್ಧಾಂತ ಮತ್ತು ಸೂರ್ಯನ ಕಲೆಗಳು

10) ಸ್ಥೈರ್ಯ ಮತ್ತು ಭೂಮಿಯ ಅಂತರ

ಪ್ರಪಂಚದ ವಾಯುಗುಣ ಪರಿಸ್ಥಿತಿಯನ್ನು ಐದು ಪ್ರಧಾನ ವಿಧಾನಗಳಾಗಿ ವಿಂಗಡಿಸಿದ್ದಾರೆ.

**1) ತೇವಯುತ ಉಷ್ಣವಲಯದ ವಾಯುಗುಣಗಳು:**

ಅತಿ ಕಡಿಮೆ ಉಷ್ಣಾಂಶ ಚಳಿಗಾಲದ ತಿಂಗಳಿನ ಕನಿಷ್ಠ ಉಷ್ಣಾಂಶವು 18 ಡಿಗ್ರಿ ಸೆ.ಗಿಂತ ಹೆಚ್ಚಾಗಿರುವ ಪ್ರದೇಶಗಳನ್ನು ಓ ಮಾದರಿಯ ವಾಯುಗುಣವೆಂದು ಪರಿಗಣಿಸಿರುವರು.

ಅಂದರೆ ಈ ವಲಯದಲ್ಲಿ ವರ್ಷದ ಎಲ್ಲಾ ತಿಂಗಳಿನಲ್ಲಿಯೂ ಸರಾಸರಿ ಉಷ್ಣಾಂಶವು 18 ಡಿಗ್ರಿ ಸೆ.ಗಿಂತ ಹೆಚ್ಚು. ಈ ಲಯವು ಚಳಿಗಾಲ ರಹಿತವಾಗಿದ್ದು, ವರ್ಷವೆಲ್ಲಾ ಹೆಚ್ಚು ಉಷ್ಣಾಂಶವನ್ನು ಹೊಂದಿರುವುದು.

ಈ ವಲಯವನ್ನು ಮಳೆಯ ಕ್ಲುಪ್ತತೆ ಹಾಗೂ ಪರಿಕ್ರಮ ಅಂದರೆ ಏರಿಳಿತಗಳನ್ನು ಅನುಸರಿಸಿ 4 ಬಗೆಯ ಮೊದಲ ಹಂತದ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಅವು ಎ.ಎಫ್. ಎ.ಡಬ್ಲ್ಯೂ, ಎ.ಎಮ್. ಎ.ಎಸ್.

**2) ಶುಷ್ಕ ವಾಯುಗುಣಗಳು:**

ಈ ವಲಯದಲ್ಲಿ ವೃಷ್ಟಿಗಿಂತ ಆವಿಯಾಗುವಿಕೆಯು ಹೆಚ್ಚು. ಇದರಿಂದ ಮಣ್ಣಿನಲ್ಲಿ ಸ್ಥಿರವಾದ ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳುವುದು ಸಾಧ್ಯವಿಲ್ಲ. ಈ ವಲಯವು ವರ್ಷವೆಲ್ಲಾ ನೀರಿನ ಕೊರತೆಯನ್ನು ಹೊಂದಿರುವುದು. ಈ ವಲಯವನ್ನು ವಾರ್ಷಿಕ ಉಷ್ಣಾಂಶ ಹಾಗೂ ಅಧಿಕ ಮಳೆಯನ್ನು ಹೊಂದಿರುವ ತಿಂಗಳಿನಿಂದ ಆಧಾರದ ಮೇಲೆ 2 ವಿಧಗಳಾಗಿ ವಿಂಗಡಿಸಲಾಗಿದೆ. ಅವು ಬಿ.ಎಸ್, ಬಿ.ಡಬ್ಲ್ಯೂ ಮಾದರಿ.

**3) ತೇವಯುತ ಸಮತಾಪ ವಾಯುಗುಣಗಳು:**

ಉಷ್ಣಾಂಶದ ಆಧಾರದಲ್ಲಿ ಗುರುತಿಸಲಾಗಿದೆ. ಚಳಿಗಾಲದಲ್ಲಿ ಅತಿ ಕಡಿಮೆ ಉಷ್ಣಾಂಶದ ತಿಂಗಳಿನ ಸರಾಸರಿಯು 30 ಡಿಗ್ರಿಗಿಂತ ಹೆಚ್ಚು ಆದರೆ 18 ಡಿಗ್ರಿಗಿಂತ ಕಡಿಮೆ. ಮಳೆಯ ಋತುಮಾನಿಕೆ ಕ್ಲುಪ್ತತೆಯನ್ನು ಅನುಸರಿಸಿ ಈ ಮಾದರಿಯ ವಾಯುಗುಣವನ್ನು 3 ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಸಿ.ಎಫ್, ಸಿ.ಎಸ್, ಸಿ.ಡಬ್ಲ್ಯೂ ಅವು ಮಾದರಿಗಳು.

**4) ತೇವಯುತ ಶೀತ ವಾಯುಗುಣ (ಡಿ) ಮಾದರಿ:**

ಈ ಮಾದರಿಯ ವಾಯುಗುಣ ವಲಯವು ಅತಿ ಶೀತವಾದ ತಿಂಗಳಿನಲ್ಲಿ 3 ಡಿಗ್ರಿ ಸೆ.ಗಿಂತ ಕಡಿಮೆ ಉಷ್ಣಾಂಶವಿದ್ದು ಗರಿಷ್ಠ ಉಷ್ಣಾಂಶದ ತಿಂಗಳಿನ ಸರಾಸರಿ 10 ಡಿಗ್ರಿ ಸೆ.ಗಿಂತ ಹೆಚ್ಚು. ಭೂ ಮೇಲ್ಮೈ ವರ್ಷದ ಹೆಚ್ಚು ಕಾಲ ಹಿಮಾವೃತವಾಗಿರುವುದು. ಇದನ್ನು 3 ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಡಿ.ಡಬ್ಲ್ಯೂ, ಡಿ.ಎಸ್.

**5) ಧೃವೀಯ ಶೀತ ವಾಯುಗುಣಗಳು:**

ಈ ಮಾದರಿಯ ವಾಯುಗುಣ ಪ್ರದೇಶವು ಗರಿಷ್ಠ ಉಷ್ಣಾಂಶದ ತಿಂಗಳಿನಲ್ಲಿ ಸರಾಸರಿ 10 ಡಿಗ್ರಿ ಸೆ.ಗಿಂತ ಕಡಿಮೆಯಿರುವುದು. ಇದರಲ್ಲಿ 2 ವಿಧಗಳು. ಈ.ಟಿ, ಈ.ಎಸ್. ಮಾದರಿಗಳು.

**6) ಪರ್ವತ ವಾಯುಗುಣಗಳು:**

ಇದನ್ನು ಎತ್ತರವಾದ ಪರ್ವತಗಳಲ್ಲಿನ ಶೀತ ವಾಯುಗುಣವನ್ನು ಸೂಚಿಸಲು ಬಳಸಲಾಗಿದೆ. ಹಲವು ಇತಿ ಮಿತಿಗಳ ನಡುವೆ. ಇದು 'ಸರಳ' ಅತ್ಯುತ್ತಮ ವಿಧವಾಗಿದೆ.

## ಜಲಗೋಳ

ಭೂಮಿಯ ಮೇಲ್ಮೈ ಭಾಗದಲ್ಲಿ 70.8%ರಷ್ಟು ಜಲರಾಶಿಯಿಂದ ಆವೃತಗೊಂಡಿದೆ. ಬಹುವಿಸ್ತಾರವಾದ ಸಾಗರ, ಸಮುದ್ರ, ಕೊಲ್ಲಿ, ಖಾರಿ, ಸರೋವರಗಳಿಂದ ಕೂಡಿದ ಜಲರಾಶಿ ಒಟ್ಟು 36% ದಶಲಕ್ಷ ಚದರ ಕಿ.ಮೀ.ಗಳಷ್ಟು ಆವರಿಸಿದೆ. ಭೂಮಿಯ ಮೇಲ್ಮೈನಲ್ಲಿ 57%ರಷ್ಟು ಜಲರಾಶಿ ದಕ್ಷಣಾರ್ಧ ಗೋಳದಲ್ಲಿ ಕಂಡುಬರುತ್ತದೆ. ಆದ್ದರಿಂದ ಈ ದಕ್ಷಿಣಾರ್ಧ ಗೋಳವನ್ನು 'ಜಲಗೋಳಾರ್ಧ' ಎಂದು ಕರೆಯುವರು.

**ಸಾಗರ ಮತ್ತು ಸಮುದ್ರಗಳ ಉಪಯೋಗಗಳು:**

* ಜಾಗತಿಕ ಮತ್ತು ಪ್ರಾದೇಶಿಕ ವಾತಾವರಣದ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಸೌರಶಕ್ತಿಯನ್ನು ಶೇಖರಿಸಿಟ್ಟುಕೊಳ್ಳುವ ಕಣಜದಂತಿದೆ.
* ಅವುಗಳ ವಿಸ್ತಾರದಿಂದ 71%ರಷ್ಟು ಸೂರ್ಯ ಜನ್ಯ ಇನ್‌ಸೋಲೇಷನ್ ಪಡೆಯುತ್ತವೆ. ಪಡೆದ ಇನ್‌ಸೋಲೇಷನ್ ಮತ್ತು ಶೇಖರಣೆ ಮಾಡಿಟ್ಟ ಸೌರಶಕ್ತಿ, ಸಾಗರ, ಸಮುದ್ರದ ಮೇಲ್ಭಾಗಕ್ಕೆ ಮಾತ್ರ ಸೀಮಿತ.

  ಧ್ರುವೀಯ ಸಾಗರ, ಸಮುದ್ರಗಳಿಗಿಂತ ಸಮಭಾಜಕ ವೃತ್ತದ ಸಾಗರ, ಸಮುದ್ರಗಳು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತವೆ.
* ಮಳೆ ಮತ್ತು ವಾತಾವರಣದಲ್ಲಿ ನೀರಾವಿ ಸಾಗರ, ಸಮುದ್ರಗಳು ಪ್ರಮುಖ ಕಾರಣ.
* ಸುಸ್ಥಿರ ಹೈಡ್ರೋಲಾಜಿಕಲ್ ಸೈಕಲ್ ಸಾಗರ ಸಮುದ್ರಗಳು ಸಹಾಯಕವಾಗಿವೆ.
* ಆಹಾರ ಮತ್ತು ಇನ್ನಿತರ ಉತ್ಪನ್ನಗಳಿಗೆ ಸಾಗರ, ಸಮುದ್ರಗಳು, ಮುಗಿಯದ ಮೂಲಗಳಾಗಿವೆ.
* ಇವು ಲೋಹ, ಅಲೋಹಗಳ ಮತ್ತು ಜೀವಾವಶೇಷ ಸಂಪನ್ಮೂಲಗಳ ಆಗರ.
* ಉಬ್ಬರವಿಳಿಕೆ, ಭರತ ಶಕ್ತಿಯಿಂದ ಶಕಿತಯ ಉತ್ಪಾದನೆ.

**ಪ್ರಪಂಚದ ಸಾಗರಗಳ ಲವಣತೆ**

ಸಾಗರ ಮತ್ತು ಸಮುದ್ರಗಳಲ್ಲಿ ಲವಣತೆ ಎಂಬುದು ವಿಶೇಷ ಗುಣಲಕ್ಷಣವಾಗಿದೆ. ಸಾಗರ ಸಮುದ್ರದ ನೀರಿನಲ್ಲಿ ಇರಬಹುದಾದ ಲವಣತೆಯ ಪ್ರಮಾಣ 1000 ಗ್ರಾಂಗಳಿಗೆ ಲೆಕ್ಕ ಹಾಕಲಾಗುತ್ತದೆ. ಈ ರೀತಿಯ ಅನುಪಾತವನ್ನು 'ಸಾಗರ ಲವಣತೆ' ಎಂದು ಕರೆಯಲಾಗುತ್ತದೆ.

ಎಲ್ಲಾ ಸಾಗರ ಮತ್ತು ಸಮುದ್ರಗಳ ಸರಾಸರಿ ಲವಣತೆ 35 ಗ್ರಾಂ / 1000 ಗ್ರಾಂ ಅಥವಾ 35%ಗಳಿಷ್ಟಿರುತ್ತದೆ. ಲವಣತೆ ಉಷ್ಣವಲಯ ಮತ್ತು ಉಪ ಉಷ್ಣವಲಯಗಳಲ್ಲಿ ಹೆಚ್ಚಾಗಿದ್ದು ಧ್ರುವ ಪ್ರದೇಶಗಳ ಕಡೆಗೆ ಹೋದಂತೆ ಕಡಿಮೆಯಾಗುತ್ತಾ ಹೋಗುತ್ತದೆ. ಸಾಗರ ಲವಣತೆಯು ಉಷ್ಣತೆ, ಸೂರ್ಯ ಶಾಖಜನ್ಯ, ಹೀರುಶಕ್ತಿ, ಆವಿಯಾಗುವಿಕೆ, ಆರ್ದ್ರತೆ ಎಂಬುದನ್ನು ಅವಲಂಬಿಸಿರುತ್ತದೆ.

**ಸಾಗರ ನೀರಿನ ಸಂಯೋಜನೆ, ಪ್ರಮಾಣ ಮತ್ತು ಶೇ.ವಾರು.**

| ಕ್ರ.ಸಂ. | ಲವಣಗಳು | ಪ್ರಮಾಣ | ಶೇ. |
|---|---|---|---|
| 1. | ಸೋಡಿಯಂ ಕ್ಲೋರೈಡ್ | 27.21 | 77.8% |
| 2. | ಮ್ಯಾಗ್ನೇಷಿಯಂ ಕ್ಲೋರೈಡ್ | 13.80 | 10.8% |
| 3. | ಮ್ಯಾಗ್ನೇಷಿಯಂ ಸಲ್ಫೇಟ್ | 1.65 | 4.7% |
| 4. | ಕ್ಯಾಲ್ಸಿಯಂ ಸಲ್ಫೇಟ್ | 1.26 | 3.6% |
| 5. | ಪೊಟ್ಯಾಸಿಯಂ ಸಲ್ಫೇಟ್ | 0.863 | 2.5% |
| 6. | ಕ್ಯಾಲ್ಸಿಯಂ ಕಾರ್ಬೋನೇಟ್ | 0.123 | 0.3% |
| 7. | ಮ್ಯಾಗ್ನೇಷಿಯಂ ಬ್ರೋಮೈಡ್ | 0.076 | 0.2% |
| | ಒಟ್ಟು | 35.00 | 100.0 |

**ಸಾಗರ ನೀರಿನ ಲವಣತೆ**

**ಲವಣತೆಯನ್ನು ನಿರ್ಧರಿಸುವ ಅಂಶಗಳು:**

**1) ಉಷ್ಣಾಂಶ ಅಥವಾ ಭಾಷ್ಪೀಕರಣ:**

ಉಷ್ಣಾಂಶದಿಂದ ನೀರು ಆವಿಯಾಗಿ ಲವಣಗಳು ಉಳಿಯುತ್ತವೆ. ಕರ್ಕಾಟಕ ಮತ್ತು ಮಕರ ಸಂಕ್ರಾಂತಿಕ ವೃತ್ತವಲಯಗಳಲ್ಲಿನ ಸಾಗರ ಮತ್ತು ಸಮುದ್ರಗಳಲ್ಲಿ ಲವಣಾಂಶ ಹೆಚ್ಚಾಗಿರುವುದು.

**2) ಮಳೆ:**

ಮಳೆ ನೀರು ನಿರಂತರವಾಗಿ ಸೇರಿದರೆ ಲವಣತೆ ಕಡಿಮೆಯಾಗುವುದು.

**3) ನದಿಗಳು:**

ನದಿಗಳು ಖನಿಜಾಂಶ ಹೊತ್ತು ಸಾಗರ, ಸಮುದ್ರ ಸೇರುವುದರಿಂದ ಲವಣತೆ ಹೆಚ್ಚಾಗುತ್ತದೆ.

**4) ನೀರಿನ ಚಲನೆ:**

ಸಾಗರ ಪ್ರವಾಹಗಳಿಂದಾಗಿ ಲವಣತೆಯ ಹಂಚಿಕೆಯಲ್ಲಿ ವ್ಯತ್ಯಾಸವಾಗುವುದು.

**ಲವಣತೆಯ ಹಂಚಿಕೆ:**

ಉತ್ತರಗೋಳದಲ್ಲಿ ಉಷ್ಣಾಂಶ ಮತ್ತು ಭೂಭಾಗ ಹೆಚ್ಚಿರುವುದರಿಂದ ಲವಣತೆ ಹೆಚ್ಚು ಮತ್ತು ಧ್ರುವಗಳಲ್ಲಿ ಅತಿ ಕಡಿಮೆ ಉಷ್ಣಾಂಶದಿಂದ ಲವಣತೆ ಅತಿ ಕಡಿಮೆ ಇರುತ್ತದೆ. ಸಮಭಾಜಕ ವೃತ್ತದಲ್ಲಿ ಹೆಚ್ಚಾಗಿ ಪರಿಸರಣ ಮಳೆಯಾಗುವುದರಿಂದ ಸಾಗರ, ಸಮುದ್ರದ ಲವಣತೆ ಕಡಿಮೆ.

ಟರ್ಕಿ ವಾನ್ ಲೇಕ್ 330%, ಮೃತ್ಯು ಸಮುದ್ರ 250, ಕೆಂಪು 240%, ಯು.ಎಸ್.ಎ. ಗ್ರೇಟ್‌ಸಾಲ್ಟ್ ಲೇಕ್ 2.20% ಲವಣತೆ ಹೊಂದಿದೆ.

ಸಾಗರಗಳಲ್ಲಿ,

| | | |
|---|---|---|
| ಅಟ್ಲಾಂಟಿಕ್ | – | 35.67% |
| ಹಿಂದೂ | – | 35% |
| ಫೆಸಿಫಿಕ್ | – | 34.85% |

ಸಾಗರ, ಸಮುದ್ರದಲ್ಲಿ ಒಂದೇ ಪ್ರಮಾಣದ ಲವಣಾಂಶವನ್ನು ನಕ್ಷೆಯ ಮೇಲೆ ತೋರಿಸುವ ರೇಖೆಗಳಿಗೆ ಐಸೋ ಹಲೆನ್ ರೇಖೆ ಎನ್ನುವರು.

## ಸಾಗರ ಪ್ರವಾಹಗಳು

ಸಾಗರ ಪ್ರವಾಹಗಳು ಭೂಮಿಯ ಬಾಹ್ಯ ಮತ್ತು ಆಂತರಿಕ ಶಕ್ತಿಗಳಿಂದ ಉಂಟಾಗುತ್ತವೆ. ಈ ಸಾಗರ ಪ್ರವಾಹಗಳನ್ನು ನಿಯಂತ್ರಿಸುವ ಅಂಶಗಳು ಈ ಕೆಳಗಿನಂತಿವೆ.

1) ಭೂಮಿಯ ದೈನಂದಿನ ಚಲನೆ
2) ವಾಯುಮಂಡಲದ ಒತ್ತಡ
3) ನಿರಂತರ ಮಾರುತಗಳು
4) ಮಳೆಯ ನೀರು
5) ಉಷ್ಣಾಂಶ
6) ಆವಿಯಾಗುವಿಕೆ
7) ಲವಣತೆ
8) ಸಾಂದ್ರತೆ
9) ಗುರುತ್ವಾಕರ್ಷಣ ಶಕ್ತಿ

ನಮ್ಮ ಭೂಮಿಯಲ್ಲಿಯ ಸಾಗರ ಪ್ರವಾಹಗಳು ಈ ಕೆಳಗಿನಂತೆ ವ್ಯಾಪಿಸಿವೆ.

**1) ಅಟ್ಲಾಂಟಿಕ್ ಸಾಗರ ಪ್ರವಾಹಗಳು:**

**ಉತ್ತರದಲ್ಲಿ:** ಫ್ಲೋರಿಡಾ, ಗಲ್ಫಸ್ಟ್ರಿಂ, ಉ.ಅಟ್ಲಾಂಟಿಕ್, ಕ್ಯಾನರೀ, ಲ್ಯಾಬ್ರಾಡರ್.

**ದಕ್ಷಿಣದಲ್ಲಿ:** ಬ್ರೆಜಿಲ್, ಫಾಕ್‌ಲ್ಯಾಂಡ್, ದ.ಅಟ್ಲಾಂಟಿಕ್, ಬೆಂಗ್ವೆಲಾ.

**2) ಫೆಸಿಫಿಕ್ ಸಾಗರದ ಪ್ರವಾಹಗಳು:**

**ಉತ್ತರದಲ್ಲಿ:** ಕ್ಯೂರೊಸಿವೋ, ಸುಸಿಮಾ, ಓಯೊಸಿವೋ, ಓಕೊಟಸ್ಕ್.

**ದಕ್ಷಿಣದಲ್ಲಿ:** ಪೂರ್ವ ಆಸ್ಟ್ರಲಿಯನ್, ಪೇರು, ಎಲ್‌ನೀನೋ, ಪಶ್ಚಿಮ ಮಾರುತಗಳು.

**3) ಹಿಂದೂ ಮಹಾಸಾಗರ ಪ್ರವಾಹಗಳು:**

**ಉತ್ತರದಲ್ಲಿ:** ಉತ್ತರ ವಿಷವೃತ್ತದ, ವಿಷ ವೃತ್ತದ ಪ್ರತಿಪ್ರವಾಹ, ನೈರುತ್ಯ ಮಾನ್ಸೂನ್.

**ದಕ್ಷಿಣದಲ್ಲಿ:** ದ.ವಿಷವೃತ್ತದ ಪ್ರವಾಹ, ಮಡಗಾಸ್ಕರ, ಮೊಜಾಂಬಿಕ ಅಗ್ಹುಲಾಸ, ದ.ಆಸ್ಟ್ರೇಲಿಯನ್ ಪ್ರವಾಹ.

ಸಾಗರಗಳಲ್ಲಿ ಕಂಡುಬರುವ ಉಬ್ಬರವಿಳಿತಗಳು ಕನಿಷ್ಠ ಭರತ ಮತ್ತು ಅಧಿಕ ಭರತಗಳಂತೆ ವಿಂಗಡನೆಯಾಗಿವೆ. ಕನಿಷ್ಠ ಭರತವೆಂದರೆ ಅಧಿಕ ಭರತ ಉಂಟಾದ ಒಂದು ವಾರದ ನಂತರ ಚಂದ್ರನ ಸ್ಥಾನದಲ್ಲಿ ಬದಲಾವಣೆಯಾಗುತ್ತದೆ. ಇದು ಭೂಮಿಯಿಂದ 90 ಡಿಗ್ರಿ ಸೆ. ಲಂಬವಾಗಿ (ಸೂರ್ಯನಿಗೆ)ರುವುದರಿಂದ ಸೂರ್ಯ, ಚಂದ್ರ ಗುರುತ್ವಶಕ್ತಿ ಸರಿಗೂಗಲ್ಪಟ್ಟು ಭೂಮಿಯ ಮೇಲೆ ಚಂದ್ರ ಮತ್ತು ಸೂರ್ಯನ ಗುರುತ್ವಾಕರ್ಷಣೆ ಬೀಳುವುದಿಲ್ಲ. ಹಾಗಾಗಿ ಇವು ಸಾಧಾರಣ ಉಬ್ಬರಕ್ಕಿಂತ 20%ರಷ್ಟು ಕಡಿಮೆ ಉಬ್ಬರಗಳಾಗಿರುತ್ತವೆ. ಇದೇ ಕನಿಷ್ಠ ಭಾರತ.

ಸಾಗರದ ಉಬ್ಬರವಿಳಿತಗಳನ್ನು ಅಳೆಯುವ ಸಾಧನ ಭರತ ಮಾಪಕ.

**ಸಾಗರದ ನಿರಂತರ ಉಬ್ಬರವಿಳಿತಗಳಿಗೆ ಕಾರಣಗಳು:**

ಸೂರ್ಯ, ಚಂದ್ರ, ಭೂಮಿಯ ಗುರುತ್ವಾಕರ್ಷಣೆ. ಒಂದು ಇಳಿಪ್ರವಾಹಕ್ಕೂ, ಇನ್ನೊಂದು ಇಳಿಪ್ರವಾಹಕ್ಕೂ ಹಾಗೆಯೇ ಒಂದು ಏರುಬ್ಬರಕ್ಕೂ, ಇನ್ನೊಂದು ಏರುಬ್ಬರಕ್ಕೂ ಇರುವ ವೇಳೆಯ ಅಂತರ 24 ಗಂಟೆ 52 ನಿಮಿಷ. ಒಂದು ಏರುಬ್ಬರ ಮತ್ತು ಒಂದು ಇಳಿಯುಬ್ಬರಕ್ಕೂ ಇರುವ ವೇಳೆಯ ಅಂತರ 12 ಗಂಟೆ 52 ನಿಮಿಷ.

**ಉಬ್ಬರವಿಳಿತಗಳ ಸಿದ್ಧಾಂತಗಳು:**

1) ಸಮತೋಲನ ಸಿದ್ಧಾಂತ (ಇಕ್ವಿಲಿಬ್ರಿಯಮ್ ಥಿಯರಿ): 1687ರಲ್ಲಿ ಐಸಾಕ್ ನ್ಯೂಟನ್ ರೂಪಿಸಿದರು.

2) ಗತಿಶೀಲ ಸಿದ್ಧಾಂತ (ಡೈನ್ಯಾಮಿಕ್ ಥಿಯರಿ): 1755ರಲ್ಲಿ ಲ್ಯಾಪ್ಲಾಸ್ ರೂಪಿಸಿದರು.

3) ಪ್ರಗತಿಶೀಲ ಅಲೆಯ ಸಿದ್ಧಾಂತ.

4) ಸ್ಥಿರ ಅಲೆಯ ಸಿದ್ಧಾಂತ.

**ಸಾಗರ ನಿಕ್ಷೇಪಗಳು:**

ಸಾಗರ ತಳಭಾಗದಲ್ಲಿ ಸಂಚಯನವಾದಂತಹ ವಿವಿಧ ಪ್ರಕಾರದ ವಸ್ತುಗಳೇ ಸಾಗರ ಸಂಚಯನ / ನಿಕ್ಷೇಪ. ಸಾಗರ ನಿಕ್ಷೇಪಗಳಿಗೆ 3 ಮೂಲಗಳಿವೆ.

1) ಭೂ ಭಾಗದ ಶಿಲೆಗಳು ಶಿಥಲೀಕರಣಗೊಂಡು ನದಿಗಳಿಂದ, ಹಿಮನದಿಗಳಿಂದ, ಗಾಳಿಗಳ ಮುಖಾಂತರ ಶಿಥಲೀಕರಣಗೊಂಡ ಶಿಲಾಚುರು, ಮಣ್ಣು, ಮರಳು ಮುಂತಾದವುಗಳು ಸಾಗರ ಸೇರುತ್ತವೆ.

2) ಜ್ವಾಲಾಮುಖಿ ಸ್ಫೋಟನೆಗಳಿಂದ ಹೊರಬಂದಂತಹ ವಸ್ತುಗಳು, ನದಿಗಳು ಮತ್ತು ಮಳೆಯ ನೀರಿನೊಂದಿಗೆ ಕೂಡಿಕೊಂಡು ಅಂತಿಮವಾಗಿ ಸಾಗರಗಳಲ್ಲಿ ಸಂಚಯನವಾಗುತ್ತವೆ.

3) ಸಾಗರಗಳಲ್ಲಿನ ಜಲಚರ ಜೀವಿಗಳು ಮತ್ತು ಸಸ್ಯಗಳ ಅವಶೇಷಗಳು ಸಹ ಅಂತಿಮವಾಗಿ ಸಾಗರದಲ್ಲಿ ಸಂಚಯನವಾಗುವುದು.

ಸಾಗರ ಜನ್ಯ ನಿಕ್ಷೇಪಗಳು ಉತ್ಪತ್ತಿ ರಚನೆಯ ಆಧಾರದ ಮೇಲೆ 2 ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.

**1) ಭೂಜನ್ಯ ನಿಕ್ಷೇಪಗಳು:**

ಭೂಭಾಗದಲ್ಲಿನ ಶಿಲೆಗಳು ನೈಸರ್ಗಿಕ ಕೃತ್ಯಗಳಿಂದ ಶಿಥಲೀಕರಣಗೊಂಡು, ಶಿಲಾಚೂರುಗಳು, ಮಣ್ಣು, ನೊರಜಗಲ್ಲು ಮುಂತಾದ ಅಜೈವಿಕ ವಸ್ತುಗಳು ನದಿ, ಹಿಮನದಿ ಸಮುದ್ರದ ಅಲೆಗಳು ಮತ್ತು ಗಾಳಿಗಳಿಂದ ಸಾಗರಗಳಲ್ಲಿ ಸಂಚಯನಗೊಳ್ಳುತ್ತವೆ. ಈ ರೀತಿ ಸಾಗರಗಳಲ್ಲಿ ಸಂಚಯನವಾದಂತಹ ವಸ್ತುಗಳು ಸಾಗರದ ಅಲೆ ಮತ್ತು ಪ್ರವಾಹಗಳ ಮುಖಾಂತರ ವಿವಿಧ ಭಾಗಗಳಲ್ಲಿ ಸಂಚಯನಗೊಳ್ಳುತ್ತವೆ. ಸಾಗರಗಳಲ್ಲಿ ಸೇರುವ ಭೂಜನ್ಯ ಪ್ರಮುಖ ವಸ್ತುಗಳೆಂದರೆ, ಮರಳು, ನುರುಜು ಮಣ್ಣು, ಸೂಕ್ಷ್ಮರೇವೆ ಮಣ್ಣು, ಜೇಡಿಮಣ್ಣು ಮುಂತಾದವುಗಳು.

**ಸೂಕ್ಷ್ಮ ಮಣ್ಣಿನ ವಿಧಗಳು:**

ಅ) ಹಸಿರು ಮಣ್ಣು: ನೀಲಿಮಣ್ಣು ಪೊಟ್ಯಾಶಿಯಂನ ಹಸಿರು ಸಿಲಿಕೇಟ್ ಒಳಗೊಂಡು ಸಾಗರದ ನೀರಿನ ಪ್ರಭಾವದಿಂದ ರಾಸಾಯನಿಕ ಬದಲಾವಣೆಗೆ ಒಳಪಟ್ಟು ಹಸಿರು ಮಣ್ಣು ನಿರ್ಮಾಣವಾಗುವುದು.

ಬ) ಕೆಂಪು ಮಣ್ಣು: ಕಬ್ಬಿಣದ ಆಕ್ಸೈಡ್ ಒಳಗೊಂಡಿರುವ ಶಿಲೆಗಳಿಂದ ಈ ಮಣ್ಣು ಉತ್ಪತ್ತಿಯಾಗಿರುತ್ತದೆ. ಈ ಪ್ರಕಾರದ ಮಣ್ಣು ಅಟ್ಲಾಂಟಿಕ್ ಸಾಗರದ ಆಳಸಾಗರ ಮೈದಾನ ಮತ್ತು ಬ್ರೆಜಿಲ್‌ನ ಪೂರ್ವ ತೀರದಲ್ಲಿ ಕಂಡುಬರುವುದು.

ಕ) ನೀಲಿ ಮಣ್ಣು: ಜೈವಿಕಾಂಶ ಮತ್ತು ಕಬ್ಬಿಣದ ಸಲ್ಫೇಟ್‌ಗಳು ಒಳಗೊಂಡ ಶಿಲೆಗಳ ಶಿಥಲೀಕರಣದಿಂದ ನೀಲಿ ಮಣ್ಣು ಉತ್ಪತ್ತಿಯಾಗಿರುತ್ತದೆ. ನೀಲಿಮಣ್ಣು ಅಟ್ಲಾಂಟಿಕ್ ಸಾಗರ, ಮೆಡಿಟರೇನಿಯನ್ ಮತ್ತು ಆರ್ಕಿಟಿಕ್ ಸಾಗರಗಳಲ್ಲಿ ಕಂಡುಬರುವುದು.

**2) ಸಾಗರ ಜನಿತ ನಿಕ್ಷೇಪ:**

ಸಾಗರಗಳು ಜೈವಿಕ ವೈವಿಧ್ಯತೆಯ ತಾಣಗಳಾಗಿವೆ. ಸಾಗರಗಳಲ್ಲಿ ಸಹಸ್ರಾರು ಬಗೆಯ ಜೀವಿಗಳು ಹಾಗೂ ಸಸ್ಯಗಳು ಸಾಗರಗಳಲ್ಲಿ ಹಂಚಿಕೆಯಾಗಿವೆ. ಸಾಗರಗಳಲ್ಲಿನ ಜೀವಿಗಳು ಮತ್ತು ಸಸ್ಯಗಳು ಅಳಿದ ನಂತರ ಅವಶೇಷಗಳು ಸಾಗರಗಳಲ್ಲಿಯೇ ಸಂಚಯನಗೊಳ್ಳುವುದು. ಸಾಗರಗಳ ನಿಕ್ಷೇಪಗಳಲ್ಲಿ ಅತಿ ಹೆಚ್ಚಾಗಿರುವ ನಿಕ್ಷೇಪವೆಂದರೆ ಸಾಗರ ಜನಿತ (ಪೆಲಾಜಿಕ) ನಿಕ್ಷೇಪಗಳಾಗಿವೆ. ಸಾಗರ ಜನಿತ ನಿಕ್ಷೇಪಗಳಲ್ಲಿ ಅನೇಕ ವಿಧಗಳಿವೆ. ಅವುಗಳೆಂದರೆ,

* ಅಸ್ಥಿ ಸಂಚಯನ
* ಸೂಕ್ಷ್ಮಜೀವಿ ಸಂಚಯನ

* ಚೂನಾಧಿಕ್ಯ ಕೆಸರು
* ಸಿಲಿಕಾಧಿಕ್ಯ ಕೆಸರು

ಮುಂತಾದವುಗಳು.

## ಪರ್ವತಗಳು

ಸುತ್ತಲಿನ ಪ್ರದೇಶಕ್ಕಿಂತ ಹೆಚ್ಚು ಎತ್ತರವಾಗಿರುವ ಹಾಗೂ ಕಡಿದಾದ ಇಳಿಜಾರನ್ನು ಹೊಂದಿದ ಭೂಸ್ವರೂಪಗಳನ್ನು ಪರ್ವತಗಳೆಂದು ಕರೆಯುವರು. ಪ್ರಪಂಚದ ಕೆಲವು ಭಾಗಗಳಲ್ಲಿ ಕೇವಲ 1000 ಮೀ. ಎತ್ತರವಾಗಿರುವ ಭೂಸ್ವರೂಪಗಳನ್ನು ಪರ್ವತಗಳೆಂದು ಕರೆಯಲಾಗಿದ್ದು, ಕೆಲವು ಕಡೆಗಳಲ್ಲಿ ಇದಕ್ಕಿಂತಲೂ ಹೆಚ್ಚು ಎತ್ತರವಾಗಿರುವ ಭೂಸ್ವರೂಪಗಳನ್ನು ಪರ್ವತಗಳೆಂದು ಕರೆಯಲಾಗಿವೆ. ಇದರಲ್ಲಿ ಒಮ್ಮತವಿಲ್ಲ. ಭೂಗೋಳ ವಿಜ್ಞಾನ ಕೋಶದಲ್ಲಿ ವಿವರಿಸಿರುವಂತೆ ಬೃಹತ್ ಪ್ರಮಾಣದ ಹಾಗೂ ಎತ್ತರವಾದ ಪರ್ವತಗಳ ಅತಿ ಉದ್ದವಾಗಿರುವ ಸಾಲು 'ಪರ್ವತ ಶ್ರೇಣಿ.'

### ಪರ್ವತಗಳಲ್ಲಿ ವಿಧಗಳು:

ಪರ್ವತಗಳು ನಿರ್ಮಾಣಗೊಂಡಿರುವ ರೀತಿ, ಹೊಂದಿರುವ ಭೂಲಕ್ಷಣಗಳು ಹಾಗೂ ಮಾರ್ಪಾಡಿನ ಆಧಾರದ ಮೇಲೆ 4 ಪ್ರಧಾನ ವಿಧಗಳಾಗಿ ವಿಂಗಡಣೆ ಮಾಡಲಾಗಿದೆ.

ಅವುಗಳೆಂದರೆ,

1) ಜ್ವಾಲಾಮುಖಿ ಪರ್ವತಗಳು
2) ಸ್ತರಭಂಗ ಜನಿತ ಪರ್ವತಗಳು
3) ಅವಶೇಷ ಪರ್ವತಗಳು
4) ಮಡಿಕೆ ಪರ್ವತಗಳು

### 1) ಜ್ವಾಲಾಮುಖಿ ಪರ್ವತಗಳು:

ಜ್ವಾಲಾಮುಖಿ ಪರ್ವತಗಳು ಶಿಲಾಪಾಕ, ಬೂದಿ, ಕಿಟ್ಟ, ಶಿಲಾಚೂರು ಮುಂತಾದವುಗಳ ಸಂಚಯನದಿಂದ ನಿರ್ಮಿತವಾದ ಪರ್ವತಗಳು.

ಉದಾಹರಣೆಗೆ ದಕ್ಷಿಣ ಅಮೇರಿಕಾದ ಆಂಡೀಸ್ ಪರ್ವತ ಶ್ರೇಣಿಯ ಓಜೋಸ್–ಡೆಲ್–ಸಲಾಡೋ, ಜಪಾನಿನ ಫ್ಯೂಸಿಯಾಮ, ಹವಾಯಿಯ ಮೌನಲೋವ.

### 2) ಸ್ತರಭಂಗ ಜನಿತ ಪರ್ವತಗಳು:

ಭೂಸ್ತರಗಳು ವಿಸ್ತರಣೆಯಿಂದ ಅಥವಾ ಸಂಕೋಚನೆಯಿಂದ ಉಂಟಾಗುವ ಅಸ್ಥಿರತೆಯಿಂದ ಶಿಲಾಸ್ತರಗಳು ಮುರಿದುಬಿದ್ದು ಸ್ತರಭಂಗ ಉಂಟಾಗಿ ಅವುಗಳು ಸ್ಥಳಾಂತರ ಹೊಂದುತ್ತವೆ. ಇವುಗಳನ್ನು ಸ್ತರಭಂಗ ಪರ್ವತಗಳು ಎಂದು ಕರೆಯಲಾಗುತ್ತದೆ. ಈ ಪರ್ವತಗಳು ಒಂದು ಬದಿಯ ಇಳಿಜಾರು ಹೊಂದಿದ್ದು ಮತ್ತೊಂದು ಭಾಗವು ಅತ್ಯಂತ ಕಡಿದಾಗಿರುವುದು. ಈ ಪರ್ವತಗಳನ್ನು 'ಖಂಡ ಪರ್ವತ' ಎಂತಲೂ ಕರೆಯುವರು.

ಉದಾಹರಣೆಗೆ ಸಹರಾ ಮರುಭೂಮಿಯ ಅಹಗ್ಗರ್, ಫ್ಲಿಂಡರ್ಸ್, ಪಾಕಿಸ್ತಾನದ ಸಾಲ್ಟ್‌ಶ್ರೇಣಿ, ನರ್ಮದಾ ನದಿಯು ವಿಂಧ್ಯ ಮತ್ತು ಸಾತ್ಪುರ ಪರ್ವತಗಳು ಸ್ತರಭಂಗ ಜನಿತವಾಗಿವೆ.

### 3) ಅವಶೇಷ ಪರ್ವತಗಳು:

ಎತ್ತರವಾದ ಭೂಭಾಗಗಳು ನಗ್ನೀಕರಣಕ್ಕೆ ತುತ್ತಾಗುತ್ತವೆ. ಅವುಗಳು ವಿವಿಧ ಕರ್ತೃಗಳ ಅವಿರತ ಕಾರ್ಯಗಳಿಂದ ಸವೆಸಲ್ಪಡುತ್ತವೆ. ನಗ್ನೀಕರಣದಿಂದ ಸಡಿಲವಾದ ಭಾಗಗಳು ಬೇಗ ಸವೆಸಲ್ಪಟ್ಟು ಗಟ್ಟಿಯಾದ ಭಾಗಗಳು ಮಾತ್ರ ಉಳಿದಿರುತ್ತವೆ. ಇವು ಸುತ್ತಲಿನ ಭಾಗಕ್ಕಿಂತ ಹೆಚ್ಚು ಎತ್ತರವಾಗಿರುತ್ತವೆ. ಈ ರೀತಿ ಜನಿತವಾದ ಪರ್ವತಗಳನ್ನು ಅವಶೇಷ ಪರ್ವತಗಳು ಎಂದು ಕರೆಯಲಾಗುತ್ತದೆ.

ಉದಾ: ಯು.ಎಸ್.ಎ.ನ ಅಪಲೇಷಿಯನ್ ಪರ್ವತಗಳು, ಭಾರತದ ಕರಾವಳಿ.

**4) ಮಡಿಕೆ ಪರ್ವತಗಳು:**

ಶಿಲಾಸ್ತರಗಳು ಮಡಿಚಲ್ಪಟ್ಟು ನಿರ್ಮಿತವಾಗಿರುವ ಪರ್ವತಗಳನ್ನು ಮಡಿಕೆ ಪರ್ವತಗಳೆಂದು ಕರೆಯುವರು. ಈ ಪರ್ವತಗಳ ಉಗಮವನ್ನು 'ಓರೋಜಿನಿ' ಎಂದು ಕರೆಯಲಾಗಿದೆ. ಮಡಿಕೆ ಪರ್ವತಗಳು ಇಂದು ಭೂಮಿಯ ಮೇಲೆ ಕಂಡುಬರುವ ಮೇರು ಲಕ್ಷಣಗಳು. ಪರ್ವತಗಳ ಎಲ್ಲಾ ಲಕ್ಷಣಗಳನ್ನೂ ಸಹ ಇವುಗಳು ಒಳಗೊಂಡಿವೆ. ಈ ಪರ್ವತಗಳು ಅತಿ ತಗ್ಗಾದ 'ಭೂ ಒಳ ಮಡಿಕೆ'ಗಳಲ್ಲಿ ಸಂಚಯಿತವಾದ ಕಣಶಿಲೆಗಳು ಮಡಿಚಲ್ಪಟ್ಟು ನಿರ್ಮಿತವಾಗಿರುವ ಮಡಿಕೆಗಳಾಗಿವೆ.

**ಪರ್ವತಗಳ ಹಂಚಿಕೆ:**

ಪ್ರಪಂಚದಲ್ಲಿ ಈ ಮೇಲೆ ವಿವರಿಸಿದಂತೆ ಎಲ್ಲಾ ಪ್ರಕಾರದ ಪರ್ವತಗಳೂ ಕಂಡು ಬರುತ್ತವೆ. ಆದರೆ ಹಲವು ಅತ್ಯುನ್ನತ ಪರ್ವತ ಶಿಖರಗಳನ್ನು ಏಷ್ಯಾಖಂಡ ಹೊಂದಿದೆ.

| ಭೂಖಂಡ | ಪರ್ವತ ಶಿಖರ | ಎತ್ತರ |
|---|---|---|
| ಏಷ್ಯಾ | ಮೌಂಟ್ ಎವರೆಸ್ಟ್, ಹಿಮಾಲಯ, ನೇಪಾಳ, ಕೆ2, ಕಾರಾಕೊರಮ್, ಕಾಂಚನಜುಂಗ | 8848 ಮೀ. 8611 ಮೀ. |
| ಆಫ್ರಿಕಾ | ಕಿಲಿಮಾಂಜಿರೋ | 5895 ಮೀ. |
| ಉ.ಅಮೇರಿಕಾ | ಮೆಕಿನ್ಲೆ, ಅಲಾಸ್ಕರ | 6194 ಮೀ. |
| ದ.ಅಮೇರಿಕಾ | ಅಕಾರಕಾಗುವ, ಆಂಡೀಸ್, ಅರ್ಜೈಂಟೈನಾ | 6960 ಮೀ. |
| ಯೂರೋಪ್ | ಎಲ್‌ಬ್ರೂಸ್, ಕಾಕಸಸ್, ಜಾಜಿಯಾ | 5633 ಮೀ. |
| ಆಸ್ಟ್ರೇಲಿಯಾ | ಕೊಸಿಯುಸ್ಕೊ, ದಿಗ್ರೇಟ್, ಡಿವೈಡಿಂಗ್ ರೇಂಜ್, ಆಸ್ಟ್ರೇಲಿಯಾ | 2230 ಮೀ. |
| ಝೋಸಿನಿಯಾ | ಸುದಿರ್ ಮನ್ ಶ್ರೇಣಿ | 5030 ಮೀ. |

## ಪ್ರಪಂಚದ ನದಿಗಳು

ನದಿಗಳು ಆಯಾ ಭೂಭಾಗದ ನೀರನ್ನು ಸಾಗರ ಅಥವಾ ಇನ್ನಿತರ ಜಲಭಾಗಗಳಿಗೆ ಸಾಗಿಸುವ ಸ್ವಾಭಾವಿಕ ಜಲವ್ಯವಸ್ಥೆಗಳಾಗಿವೆ. ಬಹುತೇಕ ನದಿಗಳು ಅಂತಿಮವಾಗಿ ಸಾಗರ ಅಥವಾ ಸಮುದ್ರಗಳನ್ನು ಸೇರುತ್ತವೆ. ಸಮುದ್ರ ಸೇರದೇ ಇರುವ ನದಿಗಳು 'ಆಂತರಿಕದ ನದಿ ವ್ಯವಸ್ಥೆ'ಯಲ್ಲಿ ಬರುತ್ತವೆ. ಮುಖ್ಯನದಿ ಹಾಗೂ ಅದರ ಎಲ್ಲಾ ಉಪನದಿಗಳನ್ನೂ ಒಟ್ಟಾಗಿ ಒಂದು 'ನದಿ ವ್ಯವಸ್ಥೆ'ಯೆಂದು ಕರೆಯುವರು.

ಬಹುತೇಕ ನದಿಗಳು ವೃಕ್ಷಾಕಾರ, ವೃತ್ತಾಕಾರ, ವಲಯಾಕಾರ ವ್ಯವಸ್ಥೆಗಳಾಗಿರುತ್ತವೆ. ಸಾಮಾನ್ಯವಾಗಿ ನದಿಗಳ ಪರಿಕ್ರಮ ಆಯಾ ಪ್ರದೇಶಗಳ ವಾಯುಗುಣದ ಪ್ರಭಾವವಾಗಿರುತ್ತದೆ. ನದಿಗಳು ಹರಿಯುವಾಗ 3 ಕಾರ್ಯ ಮಾಡುತ್ತವೆ. ಅವುಗಳು,

1) ಸವೆತ ಅಥವಾ ಬಾಲ್ಯಾವಸ್ಥೆ ಅಥವಾ ಮೇಲ್ಕಣಿವೆ.
2) ಸಾಗಾಣಿಕೆ ಅಥವಾ ಯೌವ್ವನಾವಸ್ಥೆ ಅಥವಾ ಮಧ್ಯ ಕಣಿವೆ.
3) ಸಂಚಯನ ಅಥವಾ ವೃದ್ಧಾವಸ್ಥೆ ಅಥವಾ ಕೆಳಕಣಿವೆ.

ಇಳಿಜಾರು ಪ್ರದೇಶಗಳಲ್ಲಿ ಸಾಗಾಣಿಕಾ ಕಾರ್ಯವನ್ನು ಮಾಡುತ್ತದೆ. ಬಯಲು ಪ್ರದೇಶದಲ್ಲಿ ನದಿಯ ನೀರಿನ ವೇಗ ಕಡಿಮೆಯಾಗಿ ಸಂಚಯನ ಕಾರ್ಯ ಮಾಡುತ್ತವೆ. ನದಿಗಳು ಎತ್ತರದ ಪ್ರದೇಶಗಳಲ್ಲಿ ಸವೆತದ ಕಾರ್ಯ ಮಾಡುತ್ತವೆ. ಈ 3 ಪ್ರಕಾರದ ಕಾರ್ಯಗಳಿಂದ ಬೇರೆ ಬೇರೆ ಸ್ವರೂಪಗಳು ನಿರ್ಮಾಣವಾಗುತ್ತವೆ.

**ಪ್ರಪಂಚದ ಅತಿ ಉದ್ದವಾದ ನದಿಗಳು:**

1) ನೈಲ್ – ಆಫ್ರಿಕಾ – 6695 ಕಿ.ಮೀ.
2) ಅಮೇಜಾನ್ – 6448 ಕಿ.ಮೀ.

3) ಮಿಸಿಸಿಪ್ಪಿ – 6270 ಕಿ.ಮೀ.

4) ಯಾಂಗೆ–ಟ್ಸೆ–ಇಯಾಂಗ್–4490 ಕಿ.ಮೀ.

5) ಕಾಂಗೋ – 4670 ಕಿ.ಮೀ.

**ಉತ್ತರ ಅಮೇರಿಕಾದ ನದಿಗಳು:**

ಬಹುತೇಕ ನದಿಗಳು ರಾಕಿ ಪರ್ವತಗಳಲ್ಲಿ ಉಗಮಿಸಿ ಪೂರ್ವ ಮತ್ತು ಪಶ್ಚಿಮಕ್ಕೆ ಹರಿದು ಕ್ರಮವಾಗಿ ಅಟ್ಲಾಂಟಿಕ್ ಮತ್ತು ಫೆಸಿಫಿಕ್ ಸಾಗರ ಸೇರುತ್ತವೆ. ಕೆನಡಾದ ಕೆಲ ನದಿಗಳು ಉತ್ತರದ ಆರ್ಟಿಕ್ ಸೇರುತ್ತವೆ. ಇಲ್ಲಿಯ ಪ್ರಮುಖ ನದಿಗಳು – ಮಿಸಿಸಿಪ್ಪಿ, ಮಿಸ್ಸೋರಿ, ಮೆಕೆಂಜೀ, ಕೋಲರೆಡೋ, ಕೊಲಂಬಿಯಾ, ಸೆಂಟ್‌ಲಾರೆನ್ಸ್ ಇತ್ಯಾದಿ.

**ದಕ್ಷಿಣ ಅಮೇರಿಕಾದ ನದಿಗಳು:**

ಆಂಡೀಸ್ ಪರ್ವತಗಳಲ್ಲಿ ಜನಿಸುವ ನದಿಗಳು ಪೂರ್ವದ ಕಡೆಗೆ ಹರಿಯುತ್ತವೆ. ದಕ್ಷಿಣ ಅಮೇರಿಕಾದ 5 ಪ್ರಮುಖ ನದಿ ವ್ಯವಸ್ಥೆ ಹೊಂದಿದೆ. ಅವುಗಳು,

* ಅಮೆಜಾನ್
* ರಯೊಡಿ–ಲಾ–ಪ್ಲಾಟಾ
* ಮ್ಯಾಗ್ಡಲಿನಾ–ಕಾಕ
* ಒರಿನೋಕೋ
* ಸಾವೋ ಫ್ರಾನ್ಸಿಸ್ಕೋ

**ಏಷ್ಯಾದ ನದಿಗಳು:**

ಏಷ್ಯಾ ಖಂಡದ ಪ್ರಾಕೃತಿಕ ಭೂಸ್ವರೂಪಗಳ ಸಂಕೀರ್ಣ ವ್ಯವಸ್ಥೆಯನ್ನು ಅದರ ನದಿಗಳು ಯಥಾವತ್ತಾಗಿ ಪ್ರತಿಬಿಂಬಿಸುತ್ತವೆ. ಪ್ರಪಂಚದ ಅತಿ ಉದ್ದದ 10 ನದಿಗಳಲ್ಲಿ 5 ನದಿಗಳು ಬಹುತೇಕ ಸರ್ವಕಾಲಿಕವಾಗಿವೆ. ಈ ನದಿಗಳು ಆರ್ಟಿಕ್, ಫೆಸಿಫಿಕ್, ಹಿಂದೂ ಮಹಾಸಾಗರ, ಸೇರುವುದಲ್ಲದೇ ಆಂತರಿಕವಾಗಿ ನದಿಗಳೆಂದು ನಾಲ್ಕು ವಿಭಾಗ ಮಾಡಬಹುದು. ಆರ್ಟಿಕ್ ಸಾಗರ ಸೇರುವ ನದಿಗಳು ಏಷ್ಯಾಖಂಡದ ಇತರ ನದಿಗಳಂತೆ ಹೆಚ್ಚು ಉಪಯುಕ್ತವಲ್ಲ.

**ಆರ್ಟಿಕ್ ಸೇರುವ ನದಿಗಳು:**

ಓಬಿ – ಸೈಬೀರಿಯಾ

ಎನಿಸಿ – ಸೈಬೀರಿಯಾ

ಲೀನಾ – ಸೈಬೀರಿಯಾ

ಇಂಡಿಗಿರಿತಾ ಮತ್ತು ಕೋಲಿಮಾ – ಸೈಬೀರಿಯಾ

**ಫೆಸಿಫಿಕ್ ಸಾಗರ ಸೇರುವ ನದಿಗಳು:**

ಅಮೂರ್ – ಮಂಗೋಲಿಯಾ

ಹ್ವಾಂಗ್ ಹೋ – ಚೀನಾ

ಯಾಂಗ್–ಟ್ಸೆ–ಕಿಯಾಂಗ್

ಸಿಕಿಯಾಂಗ್, ಮಿಕಾಂಗ್ – ಚೀನಾ

**ಹಿಂದೂ ಮಹಾಸಾಗರ ಸೇರುವ ನದಿಗಳು:**

ಯೂಪ್ರೆಟಿಸ್ ಮತ್ತು ಟೈಗ್ರೀಸ್ – ಟರ್ಕಿ

ಸಿಂಧೂ ನದಿ – ಹಿಮಾಲಯ

ಗಂಗಾ ನದಿ – ಹಿಮಾಲಯ

ಬ್ರಹ್ಮಪುತ್ರಾ – ಹಿಮಾಲಯ

ಇರವಾಡಿ – ಮಯೆನ್ಮಾರ್

ಸ್ವಾಲೀನ್ – ಚೈನಾ

**ಯೂರೋಪಿನ ನದಿಗಳು:**

ಇಲ್ಲಿನ ನದಿ ವ್ಯವಸ್ಥೆ ವೈವಿಧ್ಯತೆಯಿಂದ ಕೂಡಿದೆ. ಯೂರೋಪ್ ನದಿವ್ಯೂಹದ 3 ಮುಖ್ಯ ಗುಂಪುಗಳು ಈ ಕೆಳಗಿನಂತಿವೆ.

ಅ) ಪಶ್ಚಿಮಕ್ಕೆ ಹರಿಯುವ ನದಿಗಳು

ಬ) ಮೆಡಿಟರೇನಿಯನ್ ಸಮುದ್ರವನ್ನು ಸೇರುವ ನದಿಗಳು

ಕ) ಪೂರ್ವದಲ್ಲಿ ಸೇರುವ ನದಿಗಳು

**ಪಶ್ಚಿಮಕ್ಕೆ ಹರಿಯುವ ನದಿಗಳು:**

ಗರೋನ್ – ಫ್ರಾನ್ಸ್ ಲೊಯರ್ – ಫ್ರಾನ್ಸ್

ಸೀನ್ – ಫ್ರಾನ್ಸ್ ರೈನ್ – ಸ್ಪೇನ್

**ಮೆಡಿಟರೇನಿಯನ್ ಸಮುದ್ರವನ್ನು ಸೇರುವ ನದಿಗಳು:**

ಎಬ್ರೋ – ಸ್ಪೇನ್

ರ್ಹೋನ್ – ಸ್ವಿಸ್ ಮತ್ತು ಫ್ರಾನ್ಸ್ ಮೂಲಕ

ಪೋ – ಇಟಲಿ

**ಪೂರ್ವದಲ್ಲಿ ಸೇರುವ ನದಿಗಳು:**

ಡ್ಯಾನ್ಯೂಬ್ – ಜರ್ಮನಿ

ಓಲ್ಗಾ – ರಷ್ಯಾ

ಯೂರಲ್ – ಕಜಕ್‌ಸ್ಥಾನ.

**ಆಫ್ರಿಕಾದ ನದಿಗಳು:**

ನೈಲ್ ನದಿ 4670 ಕಿ.ಮೀ. ಇದೆ. ಕಾಂಘೋ ಜೈರ್ – ಓ ಅಕ್ಷಾಂಶವನ್ನು ಎರಡು ಬಾರಿ ಹಾಯುವುದು. ನೈಜರ್ ನದಿ – ಪಶ್ಚಿಮ ಆಫ್ರಕಾದಲ್ಲಿದೆ. ಅರೆಂಜ್ – ಆಫ್ರಿಕಾದ ದಕ್ಷಿಣದಲ್ಲಿದೆ.

**ಆಸ್ಟ್ರೇಲಿಯಾದ ನದಿಗಳು:**

ಇಲ್ಲಿನ ಭೌಗೋಳಿಕ ವಿಸ್ತಾರಕ್ಕೆ ಹೋಲಿಸಿದರೆ ಹೊಂದಿರುವ ನದಿಗಳ ಸಂಖ್ಯೆ ಕಡಿಮೆ. ಇಲ್ಲಿಯ ಪ್ರಮುಖ ನದಿಗಳು ಮುಕ್ರಿ ಡಾರ್ಲಿಂಗ್, ಡೇಲಿ, ವಿಕ್ಟೋರಿಯಾ.

## ಸ್ವಾಭಾವಿಕ ಸಸ್ಯವರ್ಗ

ಸಸ್ಯಗಳು ವಿವಿಧ ಪ್ರಾಕೃತಿಕ ಪರಿಸರಗಳಲ್ಲಿ ಕಂಡು ಬರುತ್ತವೆ. ವಿವಿಧ ರೀತಿಯ ಲಕ್ಷಣಗಳಿಂದ ಕೂಡಿರುವ ಸಸ್ಯ ವರ್ಗಗಳನ್ನು ಜಲಾಂಶದೊಡನೆ ಇವುಗಳು ಹೊಮದಿರುವ ಸಂಬಂಧವನ್ನು ಆಧರಿಸಿ 3 ವಿಧಗಳಾಗಿ ವಿಂಗಡನೆ ಮಾಡಲಾಗಿದೆ.

1) ಜಲೀಯ ಸಸ್ಯಗಳು ಜೌಗು / ತಗ್ಗು ಪ್ರದೇಶದಲ್ಲಿ.

2) ಉಷ್ಣಪೋಷಿತ ಸಸ್ಯ – ಅತಿ ಶುಷ್ಕ ಪರಿಸರ.

3) ಸಾಧಾರಣ ಪರಿಸ್ಥಿತಿಯಲ್ಲಿನ ಸಸ್ಯಗಳು – ಸದಾ ಹಸಿರು.

ಸ್ವಾಭಾವಿಕ ಸಸ್ಯವರ್ಗದ ಮೇಲೆ ಪ್ರಭಾವ ಬೀರುವ ಅಂಶಗಳು ಈ ಕೆಳಗಿನಂತಿವೆ.

* ಜಲಾಂಶ ಪೂರೈಕೆ.
* ಉಷ್ಣಾಂಶ.
* ಮಣ್ಣು.

**ವಿಂಗಡನೆ ಮತ್ತು ಹಂಚಿಕೆ:**

ಸ್ವಾಭಾವಿಕ ಸಸ್ಯವರ್ಗವನ್ನು ಮುಖ್ಯವಾಗಿ ವಾಯುಗುಣವನ್ನು ಆಧರಿಸಿ ವಿಂಗಡಿಸಲಾಗಿದೆ. ಅವುಗಳು,

**1) ಉಷ್ಣವಲಯದ ನಿತ್ಯ ಹಸಿರಾದ ಅರಣ್ಯಗಳು:**

ಉಷ್ಣವಲಯದಲ್ಲಿ ಹೆಚ್ಚು ಉಷ್ಣಾಂಶ ಮತ್ತು ಹೆಚ್ಚು ಮಳೆ ಪಡೆಯುವ ಭಾಗಗಳಲ್ಲಿ ನಿತ್ಯಹರಿದ್ವರ್ಣದ ಅರಣ್ಯಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಇವನ್ನು 'ಉಷ್ಣವಲಯದ ಮಳೆಕಾಡು' ತೇವಯುತ ಅರಣ್ಯ ಅಥವಾ ಸೆಲ್ವಾ ಎನ್ನುವರು. ಅಮೇಜಾನ್, ಕಾಂಗೋ, ಗಿನಿಯಾ, ಮಲೇಶಿಯಾದ ನದಿ ಮೈದಾನಗಳಲ್ಲಿ 900 ಮೀ.ಗಳಿಗಿಂತ ಕಡಿಮೆ ಎತ್ತರದ ಭೂಪ್ರದೇಶಗಳಲ್ಲಿ ಈ ಅರಣ್ಯಗಳು ಕಂಡುಬರುತ್ತವೆ. ಸಮಭಾಜಕ ವೃತ್ತ ಪ್ರದೇಶದ ವಾಯುಗುಣದ ಪರಿಣಾಮವನ್ನು ಸಸ್ಯವರ್ಗಗಳು ಪ್ರತಿಬಿಂಬಿಸುತ್ತವೆ. ವರ್ಷದ ಎಲ್ಲಾ ಕಾಲದಲ್ಲಿಯೂ ಹೆಚ್ಚು ಉಷ್ಣಾಂಶ, ಹೆಚ್ಚು ತೇವಾಂಶ ಮತ್ತು ವರ್ಷವೆಲ್ಲಾ ಬೀಳುವ ಹೆಚ್ಚು ಮಳೆ ಹೊಂದಿದೆ. ಈ ಅರಣ್ಯಗಳಲ್ಲಿ ಮರಗಳು ಎತ್ತರ ಸುಮಾರು 30–35 ಮೀ. ತಾಳೆ ಜಾತಿಯ ಮರಗಳು ಹೆಚ್ಚು ಕಂಡುಬರುತ್ತವೆ. ಮಹಾಗನಿ, ಎಬೊನಿ, ತೇಗ, ಬೀಟೆ, ರಬ್ಬರ್, ಸಿಂಕೋನ್ ಇಲ್ಲಿನ ಮುಖ್ಯ ಮರಗಳು.

**2) ಉಷ್ಣವಲಯದ ಮಾನ್ಸೂನ್ ಅರಣ್ಯಗಳು:**

ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ವಿಸ್ತಾರವಾದ ಭೂಭಾಗವು ಉಷ್ಣವಲಯದ ಮಾನ್ಸೂನ್ ವಾಯುಗುಣವನ್ನು ಹೊಂದಿದ್ದು, ಈ ವಲಯದಲ್ಲಿ ವಾಯುಗುಣಕ್ಕೆ ಅನುಗುಣವಾಗಿ ಸಸ್ಯವರ್ಗವು ರೂಪುಗೊಂಡಿರುವುದನ್ನು ಕಾಣಬಹುದು. ಇದೇ ರೀತಿ ಸಸ್ಯವರ್ಗವನ್ನು ಆಫ್ರಿಕಾದ ಪೂರ್ವತೀರ, ಮಧ್ಯ ಅಮೇರಿಕಾ ಹಾಗೂ ಉತ್ತರ ಆಸ್ಟ್ರೇಲಿಯಾಗಳಲ್ಲಿಯೂ ಕಾಣಬಹುದು. ಬೇಸಿಗೆಯಲ್ಲಿ ಮಾತ್ರ ಈ ಪ್ರದೇಶಗಳು ಮಳೆ ಪಡೆಯುತ್ತವೆ. ವರ್ಷದ ಶುಷ್ಕ ಅವಧಿಯಲ್ಲಿ ಈ ಮರಗಳು ಎಲೆಯುದುರಿಸುತ್ತವೆ. ಆದ್ದರಿಂದ ಇವುಗಳನ್ನು ಉಷ್ಣವಲಯದ ಎಲೆಯುದುರುವ ಅರಣ್ಯ ಎನ್ನುವರು. ಇಲ್ಲಿಯ ಮರಗಳ ಎತ್ತರ 460–60 ಅಡಿ ತೇಗ, ಹೊನ್ನೆ, ಮತ್ತಿ ಮತ್ತು ಶ್ರೀಗಂಧ ಪ್ರಮುಖ ಮರಗಳನ್ನು ಇಲ್ಲಿ ಕಾಣಬಹುದಾಗಿದೆ. ನದಿ ತೀರದಲ್ಲಿ ಮಾಂಗ್ರೋವ್ ಅರಣ್ಯಗಳು ಕಂಡುಬರುತ್ತವೆ. ಈ ಅರಣ್ಯ ಪ್ರದೇಶಗಳು ಪ್ರಪಂಚದ ಅತ್ಯಧಿಕ ಜನಸಾಂದ್ರತೆಯನ್ನು ಹೊಂದಿದ್ದು ಪ್ರಪಂಚದ ಪ್ರಮುಖ ವ್ಯವಸಾಯ ಪ್ರದೇಶಗಳಾಗಿವೆ.

**3) ಉಷ್ಣವಲಯದ ಹುಲ್ಲುಗಾವಲು ಅಥಾ ಸವನ್ನಾ ಸಸ್ಯವರ್ಗ:**

ಈ ವಲಯವನ್ನು ಉಷ್ಣವಲಯದ ಸವನ್ನಾ ಪ್ರದೇಶ ಹಾಗೂ 'ಪಾರ್ಕಲ್ಯಾಂಡ್' ಎಂದು ಸಹ ಕರೆಯುವರು. ಎತ್ತರವಾಗಿ ಬೆಳೆಯುವ ಹುಲ್ಲಿನ ನಡುವೆ ಗಿಡ್ಡನೆಯ ವೃತ್ತಾಕಾರದ, ಕೊಡೆಗಳಂತಿರುವ ಮರಗಳಿದ್ದು, ಈ ವಲಯವು ನಗರಗಳಲ್ಲಿರುವ ಪಾರ್ಕ್‌ನಂತೆ ಕಾಣುವುದು. ವರ್ಷದ ಒಂದು ಅವಧಿ ಅಲ್ಪಾವಧಿಯ ಮಳೆ ಹಾಗೂ ಮತ್ತೊಂದು ಕಾಲ ದೀರ್ಘಾವಧಿ ಮಳೆ ರಹಿತವಾಗಿರುವುದು ಇದರ ವಿಶಿಷ್ಟತೆ. ಈ ಸಸ್ಯವರ್ಗವು ಸಮಭಾಜಕ ವೃತ್ತದ 2 ಕಡೆಗಳಲ್ಲಿ ಸುಮಾರು 50ರಿಂದ 200 ಅಕ್ಷಾಂಶಗಳ ನಡುವೆ ಕಂಡು ಬರುವುದು. ದಕ್ಷಿಣ ಅಮೇರಿಕಾ, ಮಧ್ಯ ಅಮೇರಿಕಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾಗಳಲ್ಲಿ ಈ ವಲಯವು ವಿಸ್ತರಿಸಿದೆ. ಇಲ್ಲಿ ಅತಿ ಎತ್ತರವಾಗಿ 4–4.5 ಮೀ. ಎತ್ತರದ ಎಲಿಫೆಂಟ್‌ಗ್ರಾಸ್ ಕಂಡುಬರುತ್ತದೆ.

ದಕ್ಷಿಣ ಅಮೇರಿಕಾದಲ್ಲಿ ಈ ಸಸ್ಯವರ್ಗವನ್ನು ಕ್ಯಾಂಪೊಸ್ (ಕಂಪಾಸ್) ಎಂತಲೂ ಆಫ್ರಿಕಾದಲ್ಲಿ ಸವನ್ನಾ ಎಂತಲೂ ಕರೆಯಲಾಗುತ್ತದೆ.

### 4) ಮರುಭೂಮಿ ಸಸ್ಯವರ್ಗ:

ಮರುಭೂಮಿಗಳ ಪರಿಗಣನೆಗೆ ಮಳೆಯೇ ಮುಖ್ಯ ಲಕ್ಷಣ. ವಾರ್ಷಿಕ 25 ಸೆ.ಮೀ.ಗಿಂತ ಕಡಿಮೆ ಮಳೆಯನ್ನು ಪಡೆಯುವ ಪ್ರದೇಶಗಳು ಮರುಭೂಮಿ ಪ್ರದೇಶ ಎಂದು ಕರೆಯಲಾಗುತ್ತದೆ. ಕುರುಚಲು ಗಿಡಗಳು, ಮುಳ್ಳಿನ ಖಂಟಿಗಳು ಹಾಗೂ ಓಯಾಸಿಸ್ ಸಮೀಪದಲ್ಲಿ ಖರ್ಜೂರ ಮತ್ತು ಅದೇ ಜಾತಿಗೆ ಸೇರಿದ ಮರಗಳು ಬೆಳೆಯುತ್ತವೆ. ಈ ಸಸ್ಯಗಳನ್ನು ಉಷ್ಣಪೋಷಿತ ಸಸ್ಯವರ್ಗ ಎಂದು ವರ್ಗೀಕರಿಸಲಾಗಿದೆ. ಉತ್ತರ ಆಫ್ರಿಕಾದ ಸಹರಾ ಮರುಭೂಮಿಯು ಪ್ರಪಂಚದ ಅತಿ ವಿಸ್ತಾರವಾದ ಮರುಭೂಮಿಯಾಗಿದೆ. ಏಷ್ಯಾ ಖಂಡದಲ್ಲಿಯೂ ಸಹ ಉಷ್ಣಮರುಭೂಮಿಗಳು ಅತಿ ವಿಸ್ತಾರವಾಗಿವೆ.

* ಆಫ್ರಿಕಾದ ದಕ್ಷಿಣದ 2 ಪ್ರಮುಖ ಮರುಭೂಮಿಗಳೆಂದರೆ, ನಮೀಬ್ ಮತ್ತು ಕಲಹರಿ.
* ಏಷ್ಯಾದ ಪ್ರಮುಖ ಮರುಭೂಮಿಗಳು ರುಬ್–ಅರ್–ಖಿಲಿ ಮತ್ತು ನುಫುದ್, ದಸ್ತ್–ಎ–ಲುಟ್, ದಸ್ತ್–ಎ–ಕವಿರ್ (ಇರಾದ್).
* ಭಾರತದ ಥಾರ್ ಮರುಭೂಮಿ.

### 5) ಮೆಡಿಟರೇನಿಯನ್ ಪ್ರದೇಶ:

ಸ್ಪೈನ್, ಫ್ರಾನ್ಸ್, ಇಟಲಿ, ಟುನಿಸಿಯಾ, ಲಿಬಿಯಾ, ಸಿರಿಯಾ, ಇಸ್ರೇಲ್, ಟರ್ಕಿ, ಜೋರ್ಡಾನ್, ಆಸ್ಟ್ರೇಲಿಯಾದ ನೈರುತ್ಯ ಹಾಗೂ ಆಗ್ನೇಯ ಭಾಗ, ಕ್ಯಾಲಿಪೋರ್ನಿಯಾ ಪ್ರದೇಶಗಳಲ್ಲಿ ಈ ಮಾದರಿ ಸಸ್ಯವರ್ಗ ಕಂಡುಬರುತ್ತದೆ. ಇಲ್ಲಿನ ಗಿಡಗಳ ಎಲೆಗಳು ರಬ್ಬರಿನಂತೆ ಮಂದವಾಗಿದ್ದು, ಎಲೆಗಳ ಸಂಖ್ಯೆ ಕಡಿಮೆ. ಮರದ ತೊಗಟೆಯು ಅತಿ ಮಂದವಾಗಿರುತ್ತದೆ. ಮರಗಳ ಗಾತ್ರ ಕುಬ್ಜವಾಗಿದ್ದು, ಪೊದೆಗಳು ಇಲ್ಲಿ ಪ್ರಭಾವವಾಗಿವೆ. ಮಾಂಜಾನಿಡಾ, ಟೊಯೋನ್, ಲಯವ್ ಓಕ್, ಕಾರ್ಕ ಓಕ್ ಹಾಗೂ ಆಸ್ಟ್ರೇಲಿಯಾದಲ್ಲಿ ಯೂಕಲಿಪ್ಟಸ್ ಇಲ್ಲಿಯ ಮುಖ್ಯ ಮರಗಳು.

### 6) ಸಮಶೀತೋಷ್ಣ ವಲಯದ ಹುಲ್ಲುಗಾವಲು ಅಥವಾ ಸ್ಟೆಪ್ಪಿ:

ಮರುಭೂಮಿಗಳ ಅಂಚಿನಲ್ಲಿ ಅವುಗಳಿಗೆ ಹೊಂದಿಕೊಂಡಂತೆ ಕಡಿಮೆ ಮಳೆ ಪಡೆಯುವ, ಸಾಗರೀಕ ಪ್ರಭಾವದಿಂದ ದೂರದಲ್ಲಿರುವ, ವಿಸ್ತಾರವಾದ ಭೂರಾಶಿಗಳ ನಡುವೆ ಇರುವ ವಿಸ್ತಾರವಾದ ಸಮತಟ್ಟಾದ ಖಂಡಾಂತರ ಭೂಭಾಗದಲ್ಲಿ ಕಂಡುಬರುವ ಸಸ್ಯವರ್ಗವೇ ಸಮಶೀತೋಷ್ಣವಲಯದ ಹುಲ್ಲುಗಾವಲು. ಭೂಗೋಳಾರ್ಧದಲ್ಲಿ ಸುಮಾರು 40 ಡಿಗ್ರಿ ಸೆ.ನಿಂದ 55 ಡಿಗ್ರಿ ಸೆ. ಅಕ್ಷಾಂಶದ ನಡುವೆ ಈ ಭೂರಾಶಿಗಳು ಕಂಡುಬರುತ್ತದೆ. ಈ ಸಸ್ಯವರ್ಗವನ್ನು ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಅವುಗಳು,

ಯೂರೋಪ್ – ಸ್ಟೆಪ್ಪಿ

ಉತ್ತರ ಅಮೇರಿಕಾ – ಪ್ರೈರಿ

ಅರ್ಜೆಂಟೈನಾ – ಪಂಪಾಸ್

ಆಸ್ಟ್ರೇಲಿಯಾ – ಡೌನ್ಸ್

### 7) ಸಮಶೀತೋಷ್ಣವಲಯದ ಎಲೆಯುದುರುವ ಸಸ್ಯವರ್ಗ:

ಮೆಡಿಟರೇನಿಯನ್ ಪ್ರದೇಶದಿಂದ ಧ್ರುವಗಳ ಕಡೆಗೆ ಇರುವ ಪೂರ್ವ ಭಾಗಗಳಲ್ಲಿ ಈ ಮಾದರಿಯ ಸಸ್ಯವರ್ಗವು ಕಂಡುಬರುವುದು. ಇಲ್ಲಿ ಸುಮಾರು 80–100 ಸೆ.ಮೀ.ಗಳಷ್ಟಿರುವ ಮಳೆಯು ವರ್ಷದ ಎಲ್ಲಾ ಕಾಲಗಳಲ್ಲಿಯೂ ಬೀಳುವುದು. ಓಕ್, ಬೀಚ್, ಎಲ್ಮ್, ಮ್ಯಾಪಲ್, ವಾಲ್ನಟ್, ಮ್ಯಾಗ್ನೋಲಿಯ ಇಲ್ಲಿನ ಮರಗಳು.

### 8) ಟೈಗಾ ಅರಣ್ಯಗಳು:

ಉತ್ತರಾರ್ಧಗೋಳದ ವಿಸ್ತಾರವಾದ ಭೂ ಪ್ರದೇಶಗಳಲ್ಲಿ ಈ ಅರಣ್ಯಗಳು ಹರಡಿವೆ. ಪಶ್ಚಿಮದಲ್ಲಿ ಅಲಾಸ್ಕಾದಿಂದ ಕೆನಡಾದ ಮೂಲಕ ಸೈಬೀರಿಯಾದ ಪೂರ್ವ ಭಾಗದವರೆಗೂ ಈ ಅರಣ್ಯಗಳು ಕಂಡುಬರುತ್ತವೆ. ಸಿಕ್ವೊವೋಯಿಸ್ ಮರಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ರೀತಿಯ ಎಲೆ ಮೊನಚಾದ ಸಸ್ಯಗಳನ್ನು ಕಾಗದದ ಕೈಗಾರಿಕೆ, ರಯಾನ್ ಕೈಗಾರಿಕೆಗಳಲ್ಲಿ ಬಳಸುವರು.

### 9) ತಂಡ್ರಾ ಮಾದರಿಯ ಸಸ್ಯವರ್ಗ:

ಈ ಮಾದರಿ ಸಸ್ಯವರ್ಗಗಳು ಕೇವಲ ಉತ್ತರಾರ್ಧಗೋಳಕ್ಕೆ ಮಾತ್ರ ಸೀಮಿತವಾಗಿವೆ. ಉತ್ತರ ಅಮೇರಿಕಾ, ಯುರೇಷಿಯಾ ಉತ್ತರಭಾಗಗಳಲ್ಲಿ ಮಾತ್ರ ಇದು ಕಂಡುಬರುವುದು. ಈ ವಲಯವು ದೀರ್ಘಕಾಲದ ಚಳಿಗಾಲದಲ್ಲಿ ಹಿಮಾವೃತವಾಗುವುದು. ಈ ವಲಯದಲ್ಲಿ ಅತ್ಯಲ್ಪ ಎತ್ತರ ಬೆಳೆಸುವ ಸಸ್ಯಗಳು, ಬಳ್ಳಿಗಳು ಪ್ರಧಾನವಾದವು. ಸಎಡ್ಜಸ್, ಮಾಸೆಸ್, ಲೈಕವ್ ಅತಿ ಗಿಡ್ಡದಾದ ಪೊದೆಗಳು.

### 10) ಪರ್ವತ ವಲಯದ ಸಸ್ಯವರ್ಗ:

ಪರ್ವತಗಳ ಇಳಿಜಾರುಗಳಲ್ಲಿ ಆಯಾ ಪ್ರದೇಶಗಳ ವಾಯುಗುಣ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಸ್ಯವರ್ಗವೇ ಕಂಡುಬರುವುದು. ಆದರೆ ಎತ್ತರಕ್ಕೆ ಹೋದಂತೆ ಪ್ರತಿ ಸಾವಿರ ಮೀಟರ್‌ಗಳಿಗೆ 6.5 ಸೆ.ಮೀ.ನಷ್ಟು ಉಷ್ಣಾಂಶವು ಕಡಿಮೆಯಾಗುವುದು. ಪರ್ವತಗಳ ಪಾದಗಳಲ್ಲಿ ನಿತ್ಯಹರಿದ್ವರ್ಣದ ಅರಣ್ಯಗಳಿರುತ್ತವೆ. ನಂತರ ಸಮಶೀತೋಷ್ಣವಲಯದ ಎಲೆಯುದುರುವ ಅರಣ್ಯಗಳು, ಓಕ್, ಬೀಚ್, ಮ್ಯಾಪಲ್, ನಂತರ ಪೈನ್, ಫರ್, ಮೊದಲಾದ ಎಲೆಮೊನಚಾದ ಅರಣ್ಯಗಳಿದ್ದು ಅಂತಿಮವಾಗಿ ಪರ್ವತವಲಯದ ಹುಲ್ಲುಗಾವಲುಗಳಿದ್ದು, ಇವುಗಳಿಗಿಂತ ಹೆಚ್ಚು ಎತ್ತರವಾಗಿರುವ ಶಿಖರಗಳು ಹಿಮಚ್ಛಾದಿತವಾಗಿರುತ್ತವೆ.

## ಪ್ರಪಂಚದ ಜನಾಂಗಗಳು: (2014ರ ಕೆ.ಎ.ಎಸ್.ಪರೀಕ್ಷೆ)

ಏಕರೂಪದ ದೈಹಿಕ ಲಕ್ಷಣಗಳನ್ನು ಹೊಂದಿರುವ ಮಾನವ ಸಮೂಹಕ್ಕೆ ಜನಾಂಗ ಎನ್ನುವರು. ಜನಾಂಗಗಳ ಬಗ್ಗೆ ಅಧ್ಯಯನ ಮಾಡುವ ಶಾಸ್ತ್ರವನ್ನು ಎಂಟಾನಾಲೊಜಿ ಎನ್ನಲಾಗುತ್ತದೆ. ಜನಾಂಗಗಳನ್ನು 2 ಲಕ್ಷಣಗಳ ಆಧಾರದ ಮೇಲೆ ವಿಂಗಡಿಸಲಾಗುತ್ತದೆ. ಅವುಗಳು,

1) ಬಾಹ್ಯ ಲಕ್ಷಣಗಳು

2) ಆಂತರಿಕ ಲಕ್ಷಣಗಳು.

### 1) ಬಾಹ್ಯ ಲಕ್ಷಣಗಳೆಂದರೆ:

ಚರ್ಮದ ಬಣ್ಣದ ಆಧಾರದ ಮೇಲೆ ಜನಾಂಗಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

1. ಬಿಳಿಯ ಜನಾಂಗ – ಕಕಸಾಯ್ಡ್.

2. ಹಳದಿ ಜನಾಂಗ – ಮಂಗೋಲಾಯ್ಡ್.

3) ಕಪ್ಪು ಜನಾಂಗ – ನೀಗ್ರಾಯ್ಡ್.

### 2) ತಲೆಕೂದಲಿನ ಬಣ್ಣ ಮತ್ತು ರಚನೆ:

ಅ) ನೀಳ ತಲೆ ಕೂದಲು: ಲಿಯೋಟ್ರಿಚಿ–ಮಂಗೋಲರು ಮತ್ತು ಎಸ್ಕಿಮೋ ಜನರು ನೀಳ ತಲೆಕೂದಲನ್ನು ಹೊಂದಿರುವರು.

ಬ) ಅಲೆ ಅಲೆಯಾಕಾರದ ತಲೆಗೂದಲು: ಸೈಮೋಟ್ರೀಚಿ – ಕಕಸಾಯ್ಡ್ ಜನಾಂಗಗಳು.

ಕ) ಗುಂಗುರು ತಲೆಕೂದಲು: (ಉಲೊಟ್ರಿಚಿ) ಕಲಹರಿ: ಮರುಭೂಮಿ, ಬುಶ್‌ಮ್, ಅಟಕಾಮಾ ನೀಗ್ರೋ ಜನಾಂಗದವರು, ಗುಂಗುರು ಅಥವಾ ಉಣ್ಣೆಯಾಕಾರದ ತಲೆ ಕೂದಲನ್ನು ಹೊಂದಿರುವರು.

### 3) ಮೂಗಿನ ಉದ್ದ ಮತ್ತು ಆಕಾರ:

ಮೂಗಿನ ಉದ್ದವನ್ನು ಈ ಮುಂದೆ ತಿಳಿಸಿದಂತೆ ಅಳೆಯಲಾಗುತ್ತದೆ.

ಸೂಚ್ಯಾಂಕ=ಮೂತಿನ ಅಗಲ/ಮೂಗಿನ ಉದ್ದ*100

ಅ. ನೀಳ ನಾಸಿಕ ಮೂರು 55–70

ಬ. ಸಾಧಾರಣ ಮೂಗು 71–85

ಕ) ಅಗಲ ಮೂಗು 85–100 ಸೂಚ್ಯಾಂಕ

**4) ತಲೆಬುರುಡೆಯ ಉದ್ದ ಹಾಗೂ ಅಗಲ:**

ತಲೆಬುರುಡೆಯ ಉದ್ದ ಹಾಗೂ ಅಗಲಗಳ ಶೇ. ಅನುಪಾತವನ್ನು ತಲೆಬುರುಡೆಯ ಸೂಚ್ಯಾಂಕವಾಗಿರುತ್ತದೆ. ಇದನ್ನು ಈ ಕೆಳಗಿನಂತೆ ಅಳೆಯಲಾಗುತ್ತದೆ.

ತಲೆಬುರುಡೆಯ ಅಗಲ/ತಲೆಬುರುಡೆಯ ಉದ್ದ*100

ಅ) ಉದ್ದ ತಲೆ ಬುರುಡೆ 75%ಗಿಂತ ಕಡಿಮೆ

ಬ) ಸಾಧಾರಣ ತಲೆ ಬುರುಡೆ 75–80%ರಷು ಸೂಚ್ಯಾಂಕ.

ಕ) ಅಗಲವಾದ ತಲೆ ಬುರುಡೆ 80ಕ್ಕಿಂತ ಹೆಚ್ಚು.

**ಜನಾಂಗದ ವಿಧಗಳು:**

**1) ಕಕಸಾಯ್ಡ ಜನಾಂಗ:**

ಈ ಜನಾಂಗವು ಯೂರೋಪಿನ ಕಾಕಸಸ ಪರ್ವತದ ಮೂಲ ಜನಾಂಗವಾಗಿದ್ದಾರೆ. ಇವರಿಗೆ ಬಿಳಿಯ ಜನಾಂಗವೆಂದೂ ಕರೆಯುವರು. ಕಕಸಾಯ್ಡ ಜನಾಂಗವು ಯೋರೋಪ್ ಖಂಡದಲ್ಲಿ ಹೆಚ್ಚಾಗಿ ಕೇಂದ್ರೀಕರಣಗೊಂಡಿರುವುದು. ಅಲ್ಲದೇ ಖಾರಿ ರಾಷ್ಟ್ರಗಳಲ್ಲಿ ಮತ್ತು ಜಿರೋಸೋಲಮ ದೇಶದಲ್ಲಿ ಹಂಚಿಕೆಯಾಗಿರುವುದು. ಭಾರತದ ಹಿಂದೂಗಳು ಸಹ ಕಕಸಾಯ್ಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಭಾರತದಲ್ಲಿ ಮತ್ತು ಪ್ರಪಂಚದಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಜನಾಂಗ ಕಕಸಾಯ್ಡ ಜನಾಂಗವಾಗಿದೆ.

**2) ಮಂಗೋಲಾಯ್ಡ ಜನಾಂಗ:**

ಈ ಜನಾಂಗವು ಹೆಚ್ಚಾಗಿ ಏಷ್ಯಾ ಖಂಡದ ಮೂಲ ನಿವಾಸಿಗಳು. ಈ ಜನಾಂಗಕ್ಕೆ ಹಳದಿ ಜನಾಂಗವೆಂದೂ ಸಹ ಕರೆಯುವರು. ಮಂಗೋಲಾಯ್ಡ ಜನಾಂಗವು ಏಷ್ಯಾ ಖಂಡದ, ಮಂಗೋಲಿಯಾ, ಚೈನಾ, ಜಪಾನ್, ಮಲೇಶಿಯಾ, ಕೋರಿಯಾ, ತಂಡ್ರಾ ಪ್ರದೇಶ ಮತ್ತು ಅಲಾಸ್ಕಾದ ಎಸ್ಕಿಮೋ, ಅಮೇರಿಕಾ ರೆಡ್ ಇಂಡಿಯನ್ಸ್, ಮಂಗೋಲಾಯ್ಡ (ಹಳದಿ) ಜನಾಂಗಕ್ಕೆ ಸೇರಿದವರು. ಮಂಗೋಲರು ಪ್ರಪಂಚದಲ್ಲಿ ಕಾಕಸಾಯ್ಡ ಜನಾಂಗದ ನಂತರ ಎರಡನೇ ಸ್ಥಾನದಲ್ಲಿರುವ ಜನಾಂಗವಾಗಿದೆ.

**3) ನೀಗ್ರೋ ಜನಾಂಗ:**

ನೀಗ್ರೋ ಜನಾಂಗ ಇವರು ಆಫ್ರಿಕಾದ ಮೂಲ ನಿವಾಸಿಗಳು. ನೀಗ್ರೋ ಜನಾಂಗಕ್ಕೆ ಕಪ್ಪು ಜನಾಂಗಗಳೆಂದು ಕರೆಯುವರು. ನೀಗ್ರೋ ಜನಾಂಗವು ಹೆಚ್ಚಾಗಿ ಆಫ್ರಿಕಾ ಖಂಡದಲ್ಲಿ ಹೆಚ್ಚು ಕೇಂದ್ರಿಕರಣಗೊಂಡಿರುವುದು. ಅಲ್ಲದೇ ಈ ಜನಾಂಗವು, ಆಗ್ನೇಯ ಏಷ್ಯಾ ಫೆಸಿಫಿಕ್, ಸಾಗರದ ದ್ವೀಪಗಳಲ್ಲಿ, ಆಸ್ಟ್ರೇಲಿಯಾ, ಭಾರತ ಉಪಖಂಡ, ದಕ್ಷಿಣ ಅಮೇರಿಕಾ ಖಂಡ ಮುಂತಾದವು. ಹಲವಾರು ಪ್ರದೇಶಗಳಲ್ಲಿ ಚದುರಿದಂತೆ ಹಂಚಿಕೆಯಾಗಿರುವುರು. ಪ್ರಪಂಚದಲ್ಲಿ ಈ ಜನಾಂಗ 3ನೇ ಸ್ಥಾನ ಹೊಂದಿದೆ.

**4) ಅಸ್ಟ್ರಲಾಯ್ಡ್ ಜನಾಂಗ:**

ಈ ಜನಾಂಗ ಆಸ್ಟ್ರೇಲಿಯಾದ ಮೂಲ ನಿವಾಸಿಗಳಾಗಿರುವರು. ಇವರು ಹೆಚ್ಚಾಗಿ ಆಸ್ಟ್ರೇಲಿಯಾದಲ್ಲಿ ಕೇಂದ್ರೀಕರಣಗೊಂಡಿರುವರು.

**ಜನಸಂಖ್ಯೆಗೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳು:**

* ಪ್ರಪಂಚದ ಅತೀ ಹೆಚ್ಚು ಜನಸಂಖ್ಯೆ ಹೊಂದಿದ ದೇಶಗಳು ಚೀನಾ ಮತ್ತು ಭಾರತ. ಇವು ಏಷ್ಯಾ ಖಂಡದಲ್ಲಿವೆ.
* 2008ರ ಪ್ರಕಾರ ಏಷ್ಯಾದ ಜನಸಂಖ್ಯೆ 387 ಕೋಟಿ.
* ಆಫ್ರಿಕಾ–ಏಷ್ಯಾ ಖಂಡದ ನಂತರ ಜನಸಂಖ್ಯೆಯಲ್ಲಿ 2ನೇ ಅತಿ ದೊಡ್ಡ ಖಂಡ.
* 2008ರ ಪ್ರಕಾರ ಆಫ್ರಿಕಾದ ಜನಸಂಖ್ಯೆಯ 72.20 ಕೋಟಿ.

* 3ನೇ ಅತಿ ದೊಡ್ಡದಾದ ಖಂಡ ಉತ್ತರ ಅಮೇರಿಕಾ ಇಲ್ಲಿನ ಜನಸಂಖ್ಯೆ 50 ಕೋಟಿ.
* 4ನೇ ಅತಿ ದೊಡ್ಡದಾದ ಖಂಡ ದಕ್ಷಿಣ ಅಮೇರಿಕಾದ ಜನಸಂಖ್ಯೆ 37.95 ಕೋಟಿ.
* ಯೂರೋಪ್ ಜನಸಂಖ್ಯೆ 72 ಕೋಟಿ.

**2008ನೇ ಸಾಲಿನ ಅನ್ವಯ:**

ವಿಶ್ವದ ಜನಸಂಖ್ಯೆಗೆ ಸಂಬಂಧಿಸಿದಂತೆ ಇರುವ ಅಂಕಿ ಅಂಶಗಳು ಹೀಗಿವೆ.

| ಖಂಡಗಳು | ಜನಸಾಂದ್ರತೆ | ಶೇ.ಪ್ರಮಾಣ (ಜನಸಂಖ್ಯೆ) |
|---|---|---|
| ಏಷ್ಯಾ | 86 | 60% |
| ಆಫ್ರಿಕಾ | 29 | 15% |
| ಯೂರೋಪ್ | 69 | 11.4% |
| ಉತ್ತರ ಅಮೇರಿಕಾ | 21 | 7.6% |
| ದಕ್ಷಿಣ ಅಮೇರಿಕಾ | 20 | 5.39% |
| ಆಸ್ಟ್ರೇಲಿಯಾ | 3 | 0.5% |

2001ನೇ ಇಸವಿಯ ಪ್ರಕಾರ ಪ್ರಪಂಚದ ಸರಾಸರಿ ಜನಸಾಂದ್ರತೆ 45 ಪ್ರತಿ ಚ.ಕಿ.ಮೀ. ಏಷ್ಯಾ (80), ಯೂರೋಪ್ (69), ಆಫ್ರಿಕಾ (29), ಆಸ್ಟ್ರೇಲಿಯಾ ಕ್ರಮವಾಗಿ ಜನಸಾಂದ್ರತೆಯಲ್ಲಿ 1,2,3,5ನೇ ಸ್ಥಾನ ಪಡೆದಿದೆ.

**ಪ್ರಪಂಚದ ಪ್ರಮುಖ ಗರಿಷ್ಟ ಜನಸಾಂದ್ರತೆಯ ದೇಶಗಳು:**

1) ಮೊನಾಕ್ಕೋ – 16779
2) ಸಿಂಗಾಪುರ – 6535
3) ವ್ಯಾಟಿಕನ್ ಸಿಟಿ – 1873
4) ಮಾಲ್ಡಿವ್ಸ್ – 1293

**ಪ್ರಪಂಚದ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ದೇಶಗಳು:**

1) ಚೀನಾ
2) ಭಾರತ
3) ಯು.ಎಸ್.ಎ.
4) ಇಂಡೋನೇಷಿಯಾ
5) ಛ್ರಾಝಿಲ್
6) ಪಾಕಿಸ್ತಾನ
7) ಬಾಂಗ್ಲಾದೇಶ
8) ನೈಝೀರಿಯಾ
9) ರಷ್ಯಾ
10) ಜಪಾನ್

**ಪ್ರಪಂಚದ ಗರಿಷ್ಠ ಜನಸಂಖ್ಯೆ ನಗರಗಳು: 2010ರ ಪ್ರಕಾರ**

1) ಟೋಕಿಯೋ
2) ದೆಹಲಿ
3) ಸಾವೋಪೋ
4) ಮುಂಬೈ
5) ಮೆಕ್ಸಿಕೋ
6) ನ್ಯೂಯಾರ್ಕ್
7) ಶಾಂಘೈ
8) ಕಲ್ಕತ್ತಾ

**ಸಾಕ್ಷರತೆ:**

* ಏಷ್ಯಾ ಖಂಡ ಪ್ರಪಂಚದಲ್ಲಿ ಅತಿ ಹೆಚ್ಚು ಸಾಕ್ಷರರನ್ನು ಹೊಂದಿದ ಖಂಡವಾಗಿದೆ.
* ಜಪಾನ್ 99.9%ರಷ್ಟು ಸಾಕ್ಷರತೆ ಹೊಂದಿದೆ.
* ಆಫ್ರಿಕಾ ಖಂಡವು ಪ್ರಪಂಚದಲ್ಲಿ ಅತಿ ಕಡಿಮೆ ಸಾಕ್ಷರತೆ ಹೊಂದಿದ ಖಂಡವಾಗಿದೆ.

**ಲಿಂಗಾನುಪಾತ:**

1) 2001ನೇ ಸಾಲಿನ ಪ್ರಕಾರ ಪ್ರಪಂಚದ ಸರಾಸರಿ ಲಿಂಗಾನುಪಾತ 100 ರಿಂದ 103.
2) ಏಷ್ಯಾ ಖಂಡ (104) ಪ್ರಪಂಚದ ಲಿಂಗಾನುಪಾತದಲ್ಲಿ ಪ್ರಥಮ.
3) ಯೂರೋಪ್ ಖಂಡ ಅತಿ ಕಡಿಮೆ (100–93) ಲಿಂಗಾನುಪಾತ.

**2005ನೇ ಸಾಲಿನ ಪ್ರಕಾರ ಪ್ರಪಂಚದ ಸರಾಸರಿ ಅಯುರ್ನಿರಿಕ್ಷೆ – 67 ವರ್ಷಗಳು:**

* ಪುರುಷರ ಅಯುರ್ನಿರಿಕ್ಷೆ 65, ಮಹಿಳೆ 69 ವರ್ಷ.
* ಉತ್ತರ ಅಮೇರಿಕಾದ ಖಂಡದ ಸರಾಸರಿ ಆಯು 78 ವರ್ಷ.
* ಯೂರೋಪ್ ಖಂಡ 75 ವರ್ಷ.
* ಏಷ್ಯಾ ಖಂಡ 68 ವರ್ಷ.
* ಆಫ್ರಿಕಾ ಖಂಡ 52 ವರ್ಷ.

1) ಜಪಾನ್ ಪ್ರಪಂಚದಲ್ಲಿ ಆಯುರ್ನಿರಿಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.
2) ಜಪಾನ್ ಪ್ರಪಂಚದಲ್ಲಿ ಆಯುರ್ನಿರಿಕ್ಷೆಯಲ್ಲಿ 81 ವರ್ಷ.
3) ಪ್ರಪಂಚದ ಅತಿ ಕಡಿಮೆ ಆಯುರ್ನಿರಿಕ್ಷೆ ಹೊಂದಿದ ದೇಶ ಆಫ್ರಿಕಾದ ರುವಾಂಡ.
4) ರುವಾಂಡಾ ದೇಶದ ಸರಾಸರಿ ಆಯುರ್ನಿರಿಕ್ಷೆ 39 ವರ್ಷ.
5) ಬಾಂಗ್ಲಾದೇಶ ಪ್ರಪಂಚದಲ್ಲಿ ಅತಿ ಹೆಚ್ಚು ಜನಸಂಖ್ಯಾ ಬೆಳವಣಿಗೆ ಹೊಂದಿದ ದೇಶವಾಗಿದೆ.
6) ಜಪಾನ್ ದೇಶವು ಅತಿ ಕಡಿಮೆ ಜನಸಂಖ್ಯಾ ಬೆಳವಣಿಗೆ ಹೊಂದಿದ ದೇಶವಾಗಿದೆ.

* 2014ರಂತೆ ವಿಶ್ವದ ಜನಸಾಂದ್ರತೆ 50 ಜನರು ಪ್ರತಿ ಚ.ಕಿ.ಮೀ. (ಅಂಟಾರ್ಟಿಕಾ, ಹೊರತುಪಡಿಸಿ).
* ಸರಾಸರಿ ಸಾಕ್ಷರತೆ 83.7%.
* ಅರಬ್ ದೇಶಗಳು, ದಕ್ಷಿಣ ಮತ್ತು ಪಶ್ಚಿಮ ಏಷಿಯಾ ಮತ್ತು ಉಪ ಸಹರಾ ಆಫ್ರಿಕಾ ಪ್ರದೇಶ ಅತಿ ಕಡಿಮೆ ಸಾಕ್ಷರತೆ ಹೊಂದಿದ ದೇಶಗಳಾಗಿವೆ.
* ಕ್ರಿಸ್ತ್, ಇಸ್ಲಾಂ, ಹಿಂದೂ ಮತ್ತು ಬೌದ್ದ ಇವರು ಪ್ರಪಂಚದ 75% ಜನಸಂಖ್ಯೆ ಹೊಂದಿರುವ 4 ಪ್ರಮುಖ ಧರ್ಮಗಳು.
* ಮ್ಯಾಂಡ್ರಿಯನ್ ಚಿನೀಸ್ (14.1%), ಸ್ಪಾನಿಷ್ಯ (5.85%), ಇಂಗ್ಲೀಷ್ (5.52%), ಪ್ರಪಂಚದಲ್ಲಿ ಅತಿ ಹೆಚ್ಚು ಮಾತನಾಡುವ, ಬಳಕೆಯಲ್ಲಿರುವ ಭಾಷೆಗಳು.
* 1950ರಲ್ಲಿ ನಗರ ಜನಸಂಖ್ಯೆ 29%ರಷ್ಟು ಇದ್ದುದು, 2005ರ ವೇಳೆಗೆ 50.5%ಕ್ಕೆ ಏರಿತ್ತು. ಅದು 2015ಕ್ಕೆ 52%ರ ಗಡಿ ದಾಟಿರಬಹುದು.
* ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜನನ ದರ ತೀವ್ರವಾಗಿ ಕಡಿಮೆ ಆಗಿದೆ. ಇದಕ್ಕೆ ಪ್ರತಿಯಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಜನನ ದರ ಹಾಗೆ ಮುಂದುವರೆದಿದೆ.
* ಪ್ರಪಂಚದ ಒಟ್ಟು ಫಲವತ್ತತೆಯ ದರ 2.52 ಪ್ರತಿ ಮಹಿಳೆಗೆ.
* ಒಂದು ಅಂದಾಜಿನಂತೆ ಪ್ರಪಂಚದಲ್ಲಿ 338 ಕೋಟಿ ಮಹಿಳೆಯರು, 341 ಕೋಟಿ ಪುರುಷರಿದ್ದು, ಇದರಿಂದ ಲಿಂಗಾನುಪಾತದ ವ್ಯತ್ಯಾಸ ಗೋಚರವಾಗುತ್ತದೆ. ಅದರೊಂದಿಗೆ (ಮಹಿಳೆಯರ) ಕುರಿತಾದ ಮನೋಧರ್ಮ ತಿಳಿಯುತ್ತದೆ.

* ಜಾಗತಿಕವಾಗಿ ಒಟ್ಟು 14 ವರ್ಷದ ಕೆಳಗಿನ ಜನಸಂಖ್ಯೆ 26.3%
* ಜಾಗತಿಕವಾಗಿ 65 ಮತ್ತು ಅದಕ್ಕಿಂತ ಹೆಚ್ಚಿನ ವಯೋಮಾನದವರ ಸಂಖ್ಯೆ 7.9%
* ಪ್ರಪಂಚದ ವಾರ್ಷಿಕ ಜನಸಂಖ್ಯಾ ಬೆಳವಣಿಗೆ ದರ 1.09%
* 1927ಕ್ಕೆ 200 ಕೋಟಿ.
* 1960ಕ್ಕೆ 300 ಕೋಟಿ.
* 1974ಕ್ಕೆ 400 ಕೋಟಿ.
* 1987ಕ್ಕೆ 500 ಕೋಟಿ.
* ಯು.ಎನ್. ಪ್ರಕಾರ ಅಂದಾಜಿನಂತೆ ಪ್ರಪಂಚದ ಜನಸಂಖ್ಯೆ 2050ರ ವೇಳೆಗೆ 915 ಕೋಟಿ ಆಗಲಿದೆ.

**ಜನಸಂಖ್ಯಾ ಬದಲಾವಣೆಯ ಅಂಶಗಳು:**

* 19ನೇ ಶತಮಾನದಲ್ಲಿ ಧಾರ್ಮಿಕ ಜನಸಂಖ್ಯೆಯಲ್ಲಿ ಪ್ರಮುಖ ಬದಲಾವಣೆಗಳಾದವು. ಕ್ರಿಶ್ಚಿಯನ್ ಧರ್ಮದ ಜನಸಂಖ್ಯೆಯಲ್ಲಿ ತೀವ್ರ ಇಳಿಕೆ ಕಂಡುಬಂದಿದೆ.
* ಪ್ರಸ್ತುತ ಬಡ ರಾಷ್ಟ್ರಗಳಲ್ಲಿ (ಯು.ಎಸ್. ಮತ್ತು ಕುವೈತ್ ಹೊರತು ಪಡಿಸಿ) ಮಾತ್ರ ಧರ್ಮ ಪ್ರಮುಖ ಆಚರಣೆಯಾಗಿದೆ.
* ಕ್ರಿಸ್ತರು ಚರ್ಚ್‌ಗೆ ಬರುವುದು, ಪ್ರಾರ್ಥಿಸುವುದು ಇತ್ಯಾದಿ ಆಚರಣೆಗಳು ಕಡಿಮೆ ಆಗಿವೆ.
* ಇದರೊಂದಿಗೆ 19ನೇ ಶತಮಾನದಲ್ಲಾದ ಪ್ರಮುಖ ಬೆಳವಣಿಗೆ ಅಂದರೆ ಆಫ್ರಿಕಾದ ಉಪಸಹರಾ ಪ್ರದೇಶವು ವ್ಯಾಪಕವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದೆ.
* ಮತ್ತೊಂದೆಡೆಗೆ ಜಾತ್ಯಾತೀತವಾಗಿ ಗುರುತಿಸಿಕೊಳ್ಳುವ ಪಾಶ್ಚಿಮಾತ್ಯ ಸಂಸ್ಕೃತಿ ಹೆಚ್ಚಳವಾಗಿದೆ.
* ಚೀನಾದಂತಹ ಕಮ್ಯುನಿಷ್ಟ್ ದೇಶಗಳಲ್ಲಿ ಧರ್ಮದ ಆಚರಣೆಗೆ ವಿರೋಧವು ಕಂಡು ಬಂದಿದೆ.

**ವಿವಾಹಗಳು:**

* ದೇಶದಿಂದ ದೇಶಕ್ಕೆ ವ್ಯತ್ಯಾಸ ಹೊಂದಿವೆ.
* ಸಾಮಾನ್ಯವಾಗಿ ಎಲ್ಲೆಡೆ ಮಹಿಳೆಗೆ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುತ್ತಿವೆ.
* ಇಸ್ಲಾಂ ರಾಷ್ಟ್ರ, ಆಫ್ರಿಕಾದ ಕೆಲ ದೇಶಗಳಲ್ಲಿ ಯಥೇಚ್ಚವಾಗಿ ಬಾಲ್ಯ ವಿವಾಹಗಳು ನಡೆಯುತ್ತಿವೆ.
* 2013ರ ಅಂಕಿ ಅಂಶದಂತೆ, 350 ಕೋಟಿ ಬಡವರು ಇರುವ ಅಂದಾಜು.
* ಕೇವಲ 85 ಜನರು ಪ್ರಪಂಚದ ಸಂಪತ್ತಿನಲ್ಲಿ ಪ್ರತಿಯೊಬ್ಬರು 1%ರಷ್ಟು ಹೊಂದಿದ್ದರು.
* ಒಟ್ಟು ಈ 1%ರಷ್ಟು ಇರುವ ಶ್ರೀಮಂತರು, ವಿಶ್ವದ 46%ರಷ್ಟು ಆಸ್ತಿ ಹೊಂದಿದ್ದರು.

**ಲಿಂಗಾನುಪಾತ:**

ಪ್ರಪಂಚದ ಜನಸಂಖ್ಯೆಯನ್ನು ಗಮನಿಸಿದರೆ ಲಿಂಗಾನುಪಾತದ ಕುರಿತಾದ ಕೆಲವು ಪ್ರಮುಖ ವಿಷಯಗಳು ಈ ಕೆಳಗಿನಂತಿದೆ.

* ನಾರ್ಥರ್ನ್ ಮರಿಯಾನಾ ಐಲ್ಯಾಂಡ್ – ಅತಿ ಹೆಚ್ಚು ಮಹಿಳೆಯರನ್ನು ಹೊಂದಿದ ದೇಶ. ಇಲ್ಲಿ 0.77 ಪುರುಷರಿಗೆ ಒಬ್ಬ ಮಹಿಳೆ.
* ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಾಮಾನ್ಯವಾಗಿ ಅತ್ಯುತ್ತಮ ಆರೋಗ್ಯ, ಶಿಕ್ಷಣ, ನಗರೀಕರಣದಿಂದಾಗಿ ಅತಿ ಕಡಿಮೆ ಫಲವತ್ತತೆಯ ದರ ಕಂಡು ಬರುತ್ತದೆ.

**ಜನಸಂಖ್ಯಾ ಹಂಚಿಕೆ:**

ಪ್ರಪಂಚದ ಜನಸಂಖ್ಯೆ ಹಂಚಿಕೆಯ ಮೇಲೆ ಪ್ರಭಾವ ಬೀರಿರುವ ಅಂಶಗಳು ಈ ಕೆಳಗಿನಂತಿವೆ.

**1) ಪ್ರಾಕೃತಿಕ ಅಂಶಗಳು:**

* ಭೂ ಸ್ವರೂಪಗಳು
* ವಾಯುಗುಣ
* ಮಣ್ಣುಗಳು
* ನೀರಿನ ಸೌಕರ್ಯ
* ಖನಿಜ ಸಂಪತ್ತು
* ಇತರೆ.

**2) ಆರ್ಥಿಕ ಅಂಶಗಳು:**

* ಸಾರಿಗೆ ವ್ಯವಸ್ಥೆ
* ಆರ್ಥಿಕ ವೃತ್ತಿಗಳು
* ನಗರೀಕರಣ

3) ರಾಜಕೀಯ ಅಂಶಗಳು

4) ಸಾಮಾಜಿಕ ಅಂಶಗಳು

5) ಇತರೆ ಅಂಶಗಳು

**ಪ್ರಪಂಚದ ಸಾಕ್ಷರತೆಯ ಕುರಿತಾದ ಇತ್ತೀಚಿನ ಅಂಕಿಅಂಶಗಳು:**

* 2007ರ ಅಂಕಿ ಅಂಶದಮತೆ ಜಾಗತಿಕ ಜಿಡಿಪಿಯ 4.4%ನಷ್ಟು ಶಿಕ್ಷಣಕ್ಕೆ ವೆಚ್ಚ ಮಾಡಲಾಗುತ್ತಿದೆ.
* ಪ್ರಪಂಚದ ಒಟ್ಟು 83.7%ರಷ್ಟು ಜನತೆ (15 ವರ್ಷ ಮೇಲ್ಪಟ್ಟವರಲ್ಲಿ) ಓದಲು ಮತ್ತು ಬರೆಯಲು ಶಕ್ತರಾಗಿದ್ದಾರೆ. ಅವರಲ್ಲಿ 88.3% ಪುರುಷ, 79.2% ಮಹಿಳೆಯರು.
* ಒಟ್ಟು ವಯಸ್ಕರ ಜನಸಂಖ್ಯೆಯಲ್ಲಿ 2/3 ಅನಕ್ಷರಸ್ಥರು ಬಾಂಗ್ಲಾ, ಚೀನಾ, ಭಾರತ, ಈಜಿಪ್ಟ್, ಇಂಡೋನೇಷಿಯಾ, ನೈಜೀರಿಯಾ, ಇಥಿಯೋಪಿಯಾ, ಪಾಕಿಸ್ತಾನ ಈ 8 ದೇಶಗಳಲ್ಲಿ ಕಂಡುಬರುತ್ತಾರೆ.
* ಒಟ್ಟು ಪ್ರಪಂಚದ ವಯಸ್ಕ ಅನಕ್ಷರಸ್ಥರಲ್ಲಿ 2/3ರಷ್ಟು ಮಹಿಳೆಯರೇ ಇದ್ದಾರೆ.
* ಅರಬ್ ದೇಶ, ದಕ್ಷಿಣ ಮತ್ತು ಪಶ್ಚಿಮ ಏಷಿಯಾ, ಸಬ್ ಸಹರಾನ್ ಆಫ್ರಿಕಾದಲ್ಲಿಯೇ ಈ ಅನಕ್ಷರತೆ ಹೆಚ್ಚಾಗಿದೆ. ಇಲ್ಲಿ ಒಟ್ಟು 1/3 ಪುರುಷ, 1/2ರಷ್ಟು ಮಹಿಳೆಯರು ಅಕ್ಷರಸ್ಥರು.

**ಜನಸಂಖ್ಯಾ ಬದಲಾವಣೆ:**

ಒಂದು ನಿರ್ದಿಷ್ಟ ಅವಧಿಯಲ್ಲಿ ಜನರ ಸಂಖ್ಯೆಯಲ್ಲಿ ಆದ ಬದಲಾವಣೆಯನ್ನು ಜನಸಂಖ್ಯಾ ಬದಲಾವಣೆ ಎನ್ನುವರು. ವಿಶ್ವದ ಜನಸಂಖ್ಯೆಯು ಸ್ಥಿರವಾಗಿರದೇ ಬದಲಾವಣೆ ಹೊಂದುತ್ತಿದೆ. ಇದು ಮುಖ್ಯವಾಗಿ ಜನನ ಮತ್ತು ಮರಣಗಳಿಂದ ಬದಲಾವಣೆ ಸಂಭವಿಸುವುದು.

**ಜನಸಂಖ್ಯಾ ಸಂಕ್ರಮಣ:**

ಕೈಗಾರಿಕ ಪೂರ್ವ ಆರ್ಥಿಕ ವ್ಯವಸ್ಥೆಯಿಂದ ಕೈಗಾರಿಕರಣಗೊಂಡಂತೆ, ಹೆಚ್ಚಿನ ಜನನ ದರ ಮತ್ತು ಮರಣದರದಿಂದ, ಕಡಿಮೆ ಮರಣದರಕ್ಕೆ ಸಂಕ್ರಮಣವಾಗುವ ಪ್ರಕ್ರಿಯೆಯೇ ಜನಸಂಖ್ಯಾ ಸಂಕ್ರಮಣ. ಈ ಸಿದ್ಧಾಂತವು ಅಮೇರಿಕಾ ಜನಸಂಖ್ಯಾ ಶಾಸ್ತ್ರಜ್ಞ ವಾರೆವ್ ಥಾಮ್ಸನ್ (1887–1973)ರಿಂದ ಅಭಿವೃದ್ಧಿ ಹೊಂದಿತು. ಇದು ಪ್ರಮುಖವಾಗಿ 5 ಹಂತಗಳನ್ನು ಒಳಗೊಂಡಿದೆ. ಈ ಕೈಗಾರಿಕೀಕರಣ, ಮತ್ತು ಅಭಿವೃದ್ಧಿ ಅಂಶಗಳು ಜನಸಂಖ್ಯೆಯ ಅಂಕಿ ಅಂಶಗಳೊಂದಿಗೆ ತಳುಕು ಹಾಕಲಾಗಿದೆ. ಮೇಲ್ನೋಟಕ್ಕೆ ಈ ಹೋಲಿಕೆಯಲ್ಲಿ ಕೆಲವೊಂದು ಅಂಶಗಳನ್ನು ಸರಿ ಎನ್ನಬಹುದು. ಆದರೆ ಸಾರ್ವತ್ರಿಕವಾಗಿ ಒಪ್ಪಿತವಾಗಿಲ್ಲ.

**ಜೀವನದ ಗುಣಮಟ್ಟ:**

ಜೀವನದ ಗುಣಮಟ್ಟ ಸೂಚ್ಯಾಂಕವನ್ನು ದಿ ಎಕಾನೊಮಿಕ್ಸ್ ಇಂಟೆಲಿಜೆನ್ಸಿ ಯೂನಿಟ್ಸ್ ಅಳೆಯುತ್ತದೆ. ಇದು ದೇಶದ ಆರೋಗ್ಯಕರ ಜೀವನಕ್ಕೆ ಅವಕಾಶಗಳು, ಸುರಕ್ಷತೆ, ಸಮೃದ್ದತೆಯ ವರ್ಷ ಇವುಗಳನ್ನು ಪರಿಣಾಮಕಾರಿಯಾಗಿ ಅಳೆಯಲು ಪ್ರಯತ್ನಿಸಲಾಗುತ್ತದೆ. ಇದರಲ್ಲಿ ಜೀವನ ಗುಣಮಟ್ಟದ ಮಾನಕಗಳ ಜೊತೆಗೆ ಭವಿಷ್ಯದಲ್ಲಿ ದೇಶದ ಜಿ.ಡಿ.ಪಿ. ತಲಾವರಮಾನದ ಮೇಲೆ ದೇಶದ ದರ್ಜೆ ನಿರ್ಧರಿಸಲಾಗುತ್ತದೆ.

**ಜೀವನ ಗುಣಮಟ್ಟವನ್ನು ಅಳೆಯಲು ಬಳಸುವಂತಹ ಮಾನಕಗಳು:**

1) ಜಿ.ಡಿ.ಪಿ. ತಲಾವರಮಾನ
2) ಜೀವ ನಿರೀಕ್ಷಿತಾ ಅವಧಿ
3) ವಿಚ್ಛೇದನ ಆಧಾರಿತ ಮತ್ತು ಕುಟುಂಬದ ಗುಣಮಟ್ಟ
4) ರಾಜಕೀಯ ಸ್ವಾತಂತ್ರ್ಯ
5) ಉದ್ಯೋಗ ಸುರಕ್ಷತೆ
6) ವಾತಾವರಣ
7) ಸುರಕ್ಷತೆಯ ಮಾನಕ
8) ಸಮುದಾಯದ ಗುಣಮಟ್ಟ
9) ಆಡಳಿತ
10) ಲಿಂಗ ಸಮಾನತೆ

**ಆಯುರ್‌ನಿರೀಕ್ಷೆ:**

ಒಂದು ದೇಶದಲ್ಲಿಯ ಜನತೆಯ ಒಟ್ಟು ನಿರೀಕ್ಷಿತ ಜೀವಿತಾವಧಿಯನ್ನು ಆಯುರ್ ನಿರೀಕ್ಷೆ ಎನ್ನುವರು. ಈ ಸಮೀಕ್ಷೆಯಿಂದ ಆರೋಗ್ಯ ಕಾಳಜಿ, ಯುದ್ದ, ಬೊಜ್ಜು, ಎಚ್.ಐ.ವಿ ಪೀಡಿತರು ಇತ್ಯಾದಿಗಳ ಕುರಿತಾಗಿ ಅಂಕಿ ಅಂಶಗಳು ದೊರೆಯುತ್ತವೆ. ವರ್ಲ್ಡ್ ಪಾಪುಲೇಷನ್ ಪ್ರೋಸ್ಪೆಕ್ಟ್ಸ್ 2012ರ ಪ್ರಕಾರ ವಿಶ್ವದ ಸಾಮಾನ್ಯ ಆಯುರ್ನಿರಿಕ್ಷೆ 71 ವರ್ಷ. ಅದರಲ್ಲಿ ಪುರುಷರದು 68.5 ವರ್ಷ ಮತ್ತು ಮಹಿಳೆಯರದು 73.5 ವರ್ಷಗಳು. ವರ್ಲ್ಡ್ ಫ್ಯಾಕ್ಟ್ ಬುಕ್ ವರದಿಯಂತೆ ಆಯುರ್‌ನಿರೀಕ್ಷೆಯು 2009ರಲ್ಲಿ ಒಟ್ಟು ಜೀವನಿರೀಕ್ಷಿತಾವಧಿ 70.7 ವರ್ಷಗಳು, ಪುರುಷರದು 68.2 ವರ್ಷಗಳು ಮತ್ತು ಮಹಿಳೆಯರದು 73.2 ವರ್ಷಗಳು. ವರ್ಲ್ಡ್ ಹೆಲ್ತ್ ಆರ್ಗನೈಜೆಷನ್ ಪ್ರಕಾರ ಪ್ರಪಂಚದ ಎಲ್ಲಾ ದೇಶಗಳಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಆಯಸ್ಸನ್ನು ನಿರೀಕ್ಷಿತ ಜೀವಿತಾವಧಿಯನ್ನು ಹೊಂದಿದ್ದಾರೆ.

ವರ್ಲ್ಡ್ ಹೆಲ್ತ್ ಆರ್ಗನೈಜೇಷನ್ (2013)ರಂತೆ ಅತಿ ಹೆಚ್ಚು ನಿರೀಕ್ಷಿತ ಜೀವಿತಾವಧಿ ಹೊಂದಿದ ಹೆಚ್ಚು ದೇಶಗಳು.

| | **ಒಟ್ಟು** | **ಪುರುಷ** | **ಮಹಿಳೆ** |
|---|---|---|---|
| 1) ಜಪಾನ್ | 84 | 80 | 87 |
| 2) ಅಂಡೋರಾ | 83 | 79 | 86 |
| 3) ಆಸ್ಟ್ರೇಲಿಯಾ | 83 | 81 | 85 |
| 4) ಸ್ವಿಝರ್‌ಲ್ಯಾಂಡ್ | 83 | 81 | 85 |
| 5) ಇಟಲಿ | 83 | 80 | 85 |

ಅತಿ ಕಡಿಮೆ ಆಯುರ್ನಿರಿಕ್ಷೆ ಹೊಂದಿದ ದೇಶಗಳು ಸಿಯರ್‍ರಾಲಿಯೆನ್, ಕೇಂದ್ರಿಯ ಆಫ್ರಿಕಾ ರಿಪಬ್ಲಿಕ್ ಭಾರತದ ಆಯುರ್‌ನಿರೀಕ್ಷೆ 139ನೆಯ ಸ್ಥಾನ ಪಡೆದಿದೆ.

**ಜೀವಿಸುವ ಗುಣಮಟ್ಟ:**

ಒಂದು ಭೌಗೋಳಿಕ ಪ್ರದೇಶದಲ್ಲಿ ಕೆಲವು ಸಾಮಾಜಿಕ ಆರ್ಥಿಕ ಅಂಶಗಳ, ಸಂಪತ್ತಿನ ಪ್ರಮಾಣ, ಬಳಸುವ ವಸ್ತುಗಳು, ಅಗತ್ಯತೆಗಳ ಲಭ್ಯತೆಯ ಆಧರಿಸಿ ಜೀವಿಸುವ ಗುಣಮಟ್ಟವನ್ನು ಅಳೆಯಲಾಗುವುದು. ಜೀವಿಸುವ ಗುಣಮಟ್ಟವು ಆದಾಯ, ಉದ್ಯೋಗ ಲಭ್ಯತೆ, ಮತ್ತು ಅದರ ಗುಣಮಟ್ಟ, ವರ್ಗ ಅಸಮಾನತೆ, ಬಡತನ ದರ, ವಸತಿಯ ಗುಣಮಟ್ಟ, ವಸತಿ ಹೊಂದುವ ಶಕ್ತತೆ, ಜನರು, ಅವಶ್ಯಕತೆಗಳನ್ನು ಖರೀದಿಸಲು ಬೇಕಾದ ಕೆಲಸದ ಸಮಯ, ಜಿ.ಡಿ.ಪಿ. ಹಣದುಬ್ಬರ ದರ, ವರ್ಷದಲ್ಲಿನ ರಜಾ ದಿನಗಳು, ಆರೋಗ್ಯದಲ್ಲಿ ಕಾಳಜಿ ಹೊಂದುವಲ್ಲಿನ ಶಕ್ತತೆ, ಶಿಕ್ಷಣದ ಲಭ್ಯತೆ ಮತ್ತು ಗುಣಮಟ್ಟ, ಜೀವ ನಿರೀಕ್ಷಿತಾವಧಿ, ರೋಗಗಳು, ವಸ್ತು ಮತ್ತು ಸೇವೆಗಳ ವೆಚ್ಚ, ಮೂಲಭೂತ ಸೌಕರ್ಯ, ದೇಶದ ಆದಾಯದ ಬೆಳವಣಿಗೆ, ಆರ್ಥಿಕ ಮತ್ತು ರಾಜಕೀಯ ಸ್ಥಿರತೆ, ಧಾರ್ಮಿಕ ಮತ್ತು ರಾಜಕೀಯ ಸ್ವಾತಂತ್ರ್ಯ, ಪರಿಸರದ ಗುಣಮಟ್ಟ, ವಾತಾವರಣ, ಸುರಕ್ಷತೆ, ಎಲ್ಲವುಗಳನ್ನು ಒಳಗೊಂಡಿದೆ.

ಇದು ಉತ್ತಮ ಜೀವನಕ್ಕೆ ತೀರಾ ಹತ್ತಿರವಾದ ಪರಿಕಲ್ಪನೆಯಾಗಿದೆ. ಸಾಮಾನ್ಯವಾಗಿ ಓರ್ವ ವ್ಯಕ್ತಿಯ ಆದಾಯ ಮತ್ತು ಬಡತನ ದರದಿಂದ ಜೀವಿಸುವ ಗುಣಮಟ್ಟ ಅಳೆಯಲಾಗುತ್ತದೆ. ಗುಣಮಟ್ಟ ಎಂಬುದು ಕೇವಲ ವಸ್ತುವಿಗೆ, ಅಥವಾ ಭೌತಿಕ ವಸ್ತುಗಳಿಗೆ ಮಾತ್ರ ಸಂಬಂಧಿಸಿರದೆ ಅದು ಅಭೌತಿಕ ಲಕ್ಷಣಗಳಾದ ಮಾನಸಿಕ ಶಾಂತಿ, ಸುರಕ್ಷತೆ, ಆರೋಗ್ಯಕ್ಕೂ ಸಂಬಂಧಿಸಿದೆ. ಮೂಲಭೂತ ಅವಶ್ಯಕತೆಗಳ ಜೊತೆಗೆ ಮತ್ತಷ್ಟು ಅಗತ್ಯಗಳು ಸುಲಭವಾಗಿ ದೊರಕುವಂತಾದರೆ, ಜೀವನ ಗುಣಮಟ್ಟವನ್ನು ಉತ್ತಮ ಎಂದು ಪರಿಗಣಿಸಬಹುದು.

**ವಲಸೆ:**

ಮಾನವ ಒಂದು ಪ್ರದೇಶದಿಂದ ಮತ್ತೊಂದು ನೂತನ ಪ್ರದೇಶಕ್ಕೆ ಚಲಿಸಿ ಅಲ್ಲಿ ತಾತ್ಕಾಲಿಕವಾಗಿಯೋ, ಶಾಶ್ವತವಾಗಿಯೋ ನೆಲೆಸುವಿಕೆಯನ್ನು 'ವಲಸೆ' ಎನ್ನುವರು. ಈ ಚಲನೆ ಸಾಮಾನ್ಯವಾಗಿ ತುಂಬಾ ದೂರದ ಅಥವಾ ದೇಶದಿಂದ ದೇಶಕ್ಕೆ ಸಂಬಂಧಿಸಿದೆ ಹಾಗೆಯೇ ಆಂತರಿಕ ವಲಸೆಯು ಇದೆ. ಇದರಲ್ಲಿ 3 ರೀತಿಯಾದ ವಲಸೆಯನ್ನು ಗುರುತಿಸಲಾಗಿದೆ. ಅವುಗಳು,

* ವ್ಯಕ್ತಿಗತ ವಲಸೆ
* ಕುಟುಂಬ ವಲಸೆ
* ಬೃಹತ್ ಗುಂಪಿನ / ಸಮುದಾಯದ ವಲಸೆ.

ಅಲೆಮಾರಿ ಜನಾಂಗದ ಚಲನೆಯನ್ನು 'ವಲಸೆ' ಎನ್ನಲಾಗದು. ಕಾರಣ ಅವರು ಹೊಸ ಪ್ರದೇಶದಲ್ಲಿ ನೆಲೆಸುವ ಉದ್ದೇಶ ಇರುವುದಿಲ್ಲ. ಅದರೊಂದಿಗೆ ತಾತ್ಕಾಲಿಕವಾಗಿ ಪ್ರವಾಸ, ಪ್ರಯಾಣ, ಯಾತ್ರಿಕರನ್ನು 'ವಲಸಿ'ಗರು ಎನ್ನಲಾಗುವುದಿಲ್ಲ. ವಲಸೆಯಲ್ಲಿ ಮತ್ತೇ 2 ರೀತಿ ಇದೆ.

1) ಸ್ವಯಂ ವಲಸೆ
2) ಬಲಾತ್ಕಾರದ ವಲಸೆ.

ಹೊರದೇಶದಿಂದ ಬಂದವರಿಗೆ ಇಮ್ಮಿಗ್ರಾಂಟ್ಸ್ ಮತ್ತು ಹೊರದೇಶಕ್ಕೆ ಹೋದವರಿಗೆ ಎಮ್ಮೀಗ್ರಾಂಟ್ಸ್ ಎನ್ನುವರು. ಆಂತರಿಕ ವಲಸೆಯು ಋತುಕಾಲಿಕವಾಗಿದ್ದು ಕೃಷಿ, ಪ್ರವಾಸಗಳಿಗೆ ಸಂಬಂಧಿಸಿದೆ. ಪ್ರಮುಖವಾಗಿ ಅತಿ ಹೆಚ್ಚಿನ ಆದಾಯದ ದೇಶಗಳಿಂದ ಉಳಿದ ಹೆಚ್ಚು ಆದಾಯದ ದೇಶಕ್ಕೆ ವಲಸೆ ಕಂಡು ಬರುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳಿಗಿಂತ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವಲಸೆ ಹೆಚ್ಚು.

**ಒಳ ವಲಸೆಯ ಪ್ರಮುಖ ದೇಶಗಳು:**

| | |
|---|---|
| ಯು.ಎಸ್.ಎ., | ರಷಿಯಾ |
| ಜರ್ಮನಿ | ಸ್ಪೇನ್ |
| ಸೌದಿ ಅರೇಬಿಯಾ | ಕೆನಡಾ |
| ಯೂ.ಕೆ. | ಫ್ರಾನ್ಸ್ |
| ಆಸ್ಟ್ರೇಲಿಯಾ | ಭಾರತ |

**ಹೊರ ವಲಸೆಯ ಪ್ರಮುಖ ದೇಶಗಳು (ವಲಸೆ ಕಾರಿಡಾರ್‌ಗಳು):**

| | | |
|---|---|---|
| ಮೆಕ್ಸಿಕೋ | – | ಯು.ಎಸ್.ಎ |
| ರಷ್ಯಾ | – | ಉಕ್ರೇನ್ |
| ಉಕ್ರೇನ್ | – | ರಷ್ಯಾ |
| ಬಾಂಗ್ಲಾದೇಶ | – | ಭಾರತ |
| ಟರ್ಕಿ | – | ಜರ್ಮನಿ |
| ಖಜಕಿಸ್ತಾನ | – | ರಷ್ಯಾ |
| ಚೀನಾ | – | ಹಾಂಗ್‌ಕಾಂಗ್ |
| ಚೀನಾ | – | ಯೂ.ಎಸ್. |
| ಫಿಲಿಫೈನ್ಸ್ | – | ಯೂ.ಎಸ್. |

**ವಲಸೆಗೆ ಕಾರಣಗಳು:**

**ಒತ್ತುವಿಕೆಯ ಕಾರಣಗಳು:**

1) ಉದ್ಯೋಗದ ಕೊರತೆ / ಅಲಭ್ಯತೆ
2) ಕಡಿಮೆ ಅವಕಾಶಗಳು
3) ಅಸುರಕ್ಷಿತ ಸ್ಥಿತಿ
4) ಬರಗಾಲ
5) ರಾಜಕೀಯ ಭಯ
6) ಒತ್ತಾಯದ ದುಡಿಮೆ
7) ಕೆಳಮಟ್ಟದ ಆರೋಗ್ಯದ ಕಾಳಜಿ
8) ಸಂಪತ್ತಿನ ನಾಶ
9) ನೈಸರ್ಗಿಕ ವಿಪತ್ತು
10) ಸಾವಿನ ಆತಂಕ (ಉದಾ: ಐ.ಎಸ್.ಉಗ್ರರು)
11) ಪರಿಸರ ಮಾಲಿನ್ಯ
12) ಕಳಪೆ ವಸತಿ
13) ಜಮೀನುದಾರರ ಸಂಗತಿ
14) ತಾರತಮ್ಯ
15) ಮದುವೆಯ ಕಡಿಮೆ ಅವಕಾಶ
16) ಯುದ್ಧ

**ವಲಸೆಯ ಸೆಳೆತದ ಅಂಶಗಳು:**

1) ಉದ್ಯೋಗಾವಕಾಶಗಳು
2) ಬದುಕಲು ಉತ್ತಮ ಸ್ಥಿತಿಗತಿ
3) ರಾಜಕೀಯ ಮತ್ತು ಧಾರ್ಮಿಕ, ಸ್ವಾತಂತ್ರ್ಯದ ಭಾವನೆ
4) ಸಂತೋಷದ ಸಂಗತಿಗಳು

5) ಶಿಕ್ಷಣ
6) ಉತ್ತಮ ಆರೋಗ್ಯ ಕಾಳಜಿ
7) ಆಕರ್ಷಕ ವಾತಾವರಣ
8) ಸುರಕ್ಷತೆ
9) ಕುಟುಂಬದ ಜೋಡನೆಗಳು
10) ಕೈಗಾರಿಕೆ
11) ಮದುವೆಗೆ ಇರುವ ಉತ್ತಮ ಅವಕಾಶಗಳು.

# ಅಧ್ಯಾಯ – 2
# ಭಾರತದ ಭೂಗೋಳ ಶಾಸ್ತ್ರ

**ಭಾರತದ ಪ್ರಾಕೃತಿಕ ಭೂಗೋಳ:**

ಭಾರತ ಪರ್ಯಾಯ ಪ್ರಸ್ಥಭೂಮಿಯಾಗಿದ್ದು, ಮೂರು ಕಡೆ ಜಲ ಭಾಗ ಮತ್ತು ಒಂದು ಕಡೆ ಭೂ ಭಾಗದಿಂದ ಆವೃತ್ತವಾಗಿದೆ. ದೇಶದ ಮಧ್ಯಭಾಗದಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತವು ಹಾದು ಹೋಗಿದೆ. ಭಾರತದ ಉಷ್ಣವಲಯದ ಸನ್ನಿವೇಶ, ಜಲಭಾಗಗಳು ಮತ್ತು ಮೇಲ್ಮೈ ಲಕ್ಷಣಗಳು ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ.

**ಭಾರತದ ವಾಯುಗುಣ:**

ಭಾರತದ ವಾಯುಗುಣ, ಉಷ್ಣವಲಯ ಮಾನ್ಸೂನ್ ವಾಯುಗುಣವಾಗಿದೆ. ಇದಕ್ಕೆ ಕಾರಣ ಭಾರತವು ಉಷ್ಣವಲಯದ ಸನ್ನಿವೇಶದಲ್ಲಿದ್ದು, ಋತುಮಾನಿಕವಾಗಿ ಮಾರುತಗಳು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತವೆ. ಮಾನ್ಸೂನ್ ಮಾರುತಗಳು ಋತುಮಾನಗಳಿಗೆ ಅನುಗುಣವಾಗಿ ದಿಕ್ಕುಗಳನ್ನು ಬದಲಿಸಿಕೊಂಡು ಬೀಸುವ ಮಾರುತಗಳಾಗಿವೆ. ಆದ್ದರಿಂದ ಪ್ರಾದೇಶಿಕವಾಗಿ, ಋತುಮಾನಿಕವಾಗಿ ವಾಯುಸ್ಥಿತಿಯಲ್ಲಿ ಬದಲಾವಣೆಯಾಗುವುದರಿಂದ ಭಾರತದ ವಾಯುಗುಣವನ್ನು 'ಹವಾಮಾನದ ವೈಜ್ಞಾನಿಕ ಘಟಕ' ಎಂದು ಕರೆಯಲಾಗಿದೆ.

ಭಾರತದ ಉಪಖಂಡದಲ್ಲಿ ಉಷ್ಣತೆ ಮತ್ತು ಮಳೆ ಹಂಚಿಕೆಯಲ್ಲಿ ಹೆಚ್ಚಿನ ಏರು ಪೇರುಗಳು ಕಂಡು ಬರುತ್ತವೆ. ಬೇಸಿಗೆಯಲ್ಲಿ ರಾಜಸ್ಥಾನದ ಪಶ್ಚಿಮ ಭಾಗದಲ್ಲಿ ಉಷ್ಣಾಂಶವು 55 ಡಿಗ್ರಿ ಸೆ.ಗಿಂತಲೂ ಹೆಚ್ಚಾಗಿರುವುದು ದಾಖಲಾದರೆ, ಚಳಿಗಾಲದಲ್ಲಿ ಜಮ್ಮು ಕಾಶ್ಮೀರದ ಲಡಾಖ್‌ದಲ್ಲಿ ಅದು –25 ಡಿಗ್ರಿ ಸೆ.ಗಿಂತ ಕಡಿಮೆ ದಾಖಲಾಗುತ್ತದೆ.

ಅದೇ ರೀತಿ ಮಳೆ ಹಂಚಿಕೆಯಲ್ಲಿ 'ಮೌಸಿನ್‌ರಾಮ್' ಅತ್ಯಧಿಕ ಮಳೆಯನ್ನು ಪಡೆಯುತ್ತದೆ. (114 ಸೆ.ಮೀ.) ಆದರೆ ರೂಯ್ಲಿ (ರಾಜಸ್ಥಾನ) ಎಂಬಲ್ಲಿ ವಾರ್ಷಿಕ 8 ಸೆ.ಮೀ.ಗಿಂತ ಕಡಿಮೆ ಮಳೆ ಬೀಳುತ್ತದೆ.

**ಭಾರತದ ವಾಯುಗುಣವನ್ನು ನಿಯಂತ್ರಿಸುವ ಅಂಶಗಳು ಈ ಕೆಳಗಿನಂತಿವೆ:**

1) ಅಕ್ಷಾಂಶಗಳು: ಭಾರತದ ಉತ್ತರ ಭಾಗ ಉಪ ಉಷ್ಣವಲಯ ಹಾಗೂ ಸಮಶೀತೋಷ್ಣವಲಯಗಳಲ್ಲಿ ಕಂಡುಬರುತ್ತಿದ್ದು, ಕರ್ಕಾಟಕ ಸಂಕ್ರಾಂತಿ ವೃತ್ತದಿಂದ, ದಕ್ಷಿಣಕ್ಕಿರುವ ಭಾಗವು ಉಷ್ಣವಲಯದಲ್ಲಿ ಕಂಡುಬರುತ್ತದೆ. ದಕ್ಷಿಣದಲ್ಲಿ ಸ್ವಲ್ಪ ಪ್ರಮಾಣದ ದ್ವೈವಾರ್ಷಿಕ ಉಷ್ಣತಾ ಮಾನಗಳಲ್ಲಿ ವ್ಯತ್ಯಾಸ ಕಂಡುಬಂದರೆ, ಉತ್ತರದಲ್ಲಿ ದೈನಂದಿನ ಮತ್ತು ವಾರದ ಉಷ್ಣತೆಯಲ್ಲಿ ಹೆಚ್ಚಿನ ವ್ಯತ್ಯಾಸಗಳು ಕಂಡು ಬರುತ್ತವೆ.
2) ಪರ್ವತ ಶ್ರೇಣಿ: ಉನ್ನತ ಹಿಮಾಲಯ ಪರ್ವತಗಳು, ಇವು ಉತ್ತರ ದಿಕ್ಕಿನ ಶೀತ ಮಾರುತ ಮತ್ತು ಚಳಿಯಿಂದ ರಕ್ಷಿಸುತ್ತವೆ.
3) ಭೂ ಭಾಗ ಮತ್ತು ಜಲಭಾಗಗಳ ಹಂಚಿಕೆ: ಮೂರು ಕಡೆ ಜಲ, ಒಂದು ಕಡೆ ಭೂಮಿ, ಮಾರುತಗಳು, ಋತುಗಳು, ದಿಕ್ಕಿನಲ್ಲಿ ಬದಲಾವಣೆಯನ್ನುಂಟು ಮಾಡುತ್ತವೆ.

4) ಭೂಮೇಲ್ಮೈ ಲಕ್ಷಣಗಳು: ಭಾರತದ ಉಷ್ಣತೆ, ಹವೆಯ ಒತ್ತಡ, ಮಾರುತಗಳ ದಿಕ್ಕು ಮತ್ತು ವೇಗ, ಮಳೆಯ ಹಂಚಿಕೆ ಮತ್ತು ಪ್ರಮಾಣಗಳ ಮೇಲೆ ಪರಿಣಾಮ ಬೀರುತ್ತವೆ. ಪಶ್ಚಿಮ ಘಟ್ಟಗಳಲ್ಲಿ ಅಧಿಕ ಮಳೆ, ಮಳೆ ನೆರಳಿನ ಪ್ರದೇಶದಲ್ಲಿ ಕಡಿಮೆ ಮಳೆಯುಂಟಾಗುತ್ತದೆ.
5) ಮಾನ್ಸೂನ್ ಮಾರುತಗಳು: ಋತುಮಾನಕ್ಕೆ ತಕ್ಕಂತೆ ಮಾನ್ಸೂನ್ ಬೀಸುವ ದಿಕ್ಕಿನಲ್ಲಿ ಆಗುವ ಬದಲಾವಣೆ.
6) ಭೌಗೋಳಿಕ ಸ್ಥಾನ: ಭಾರತದ ಭೌಗೋಳೀಕ ಸ್ಥಾನವು ಅದರ ವಾಯುಗುಣದಲ್ಲಿ ನಿರಂತರ ವ್ಯತ್ಯಾಸ ತರುತ್ತದೆ.
7) ಭಾರತದ ಜಲ ರಾಶಿಗಳು.
8) ಸಮತಲ ವಾಯುಧಾರೆಗಳು.
9) ಆವರ್ತ ಮಾರುತಗಳು.
10) ಎಲ್ ನಿನೋ ಮತ್ತು ವಾಕರ್ ಕೋಶ್.

ಇತ್ಯಾದಿ ಅಂಶಗಳು.

**ಭಾರತದ ಋತುಮಾನಗಳು:**

ಉಷ್ಣತೆ, ಮಾರುತಗಳು ಹಾಗೂ ಮಳೆಯ ಆಧಾರದ ಮೇಲೆ ಭಾರತದ ವಾಯುಗುಣವನ್ನು 4 ಋತುಗಳಾಗಿ ವಿಂಗಡಿಸಲಾಗಿದೆ. ಅವುಗಳು,

1) ಚಳಿಗಾಲ ಅಥವಾ ಶೀತ ವಾಯುಗುಣದ ಋತು (ಆವರ್ತ). – ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಈ ಋತುಮಾನವಿರುತ್ತದೆ.
2) ಬೇಸಿಗೆ ಅಥವಾ ಉಷ್ಣವಾಯುಗುಣದ ಋತು. – ಮಾರ್ಚ್‌ನಿಂದ ಮೇವರೆಗೆ ಈ ಋತುಮಾನವಿರುತ್ತದೆ.
3) ನೈರುತ್ಯ ಮಾನ್ಸೂನ್ ಮಾರುತ ಕಾಲ. – ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಈ ಋತುಮಾನವಿರುತ್ತದೆ.
4) ಮಾನ್ಸೂನ್ ಮಾರುತದ ನಿರ್ಗಮನ ಕಾಲ. – ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಈ ಋತುಮಾನಿರುತ್ತದೆ.

**1) ಚಳಿಗಾಲ:**

ಡಿಸೆಂಬರ್‌ನಿಂದ ಫೆಬ್ರವರಿ ಈ ಅವಧಿಯಲ್ಲಿ ಉತ್ತರ ಭಾರತದಲ್ಲಿ ಅತೀ ಕಡಿಮೆ ಉಷ್ಣತೆ ಇರುತ್ತದೆ. ಮೆಡಿಟರೇನಿಯನ್ ಸಮುದ್ರದಲ್ಲಿ ಉಂಟಾಗುವ ಕಡಿಮೆ ಒತ್ತಡ, ಇರಾಕ್, ಇರಾನ್, ಆಫ್‌ಘಾನಿಸ್ತಾನ, ಪಾಕಿಸ್ತಾನದ ಮೂಲಕ ವಾಯುವ್ಯ ಭಾರತ ತಲುಪುವುದರಿಂದ ಪಂಜಾಬ್, ಹರಿಯಾಣ, ಉತ್ತರ ಪ್ರದೇಶಗಳಲ್ಲಿ ಮಳೆಯಾಗುತ್ತದೆ. ಇದನ್ನು ಪಶ್ಚಿಮ ಕ್ಷೋಭೆ ಎಂದು ಕರೆಯುವರು.

**2) ಬೇಸಿಗೆ ಕಾಲ:**

ಈ ಋತುಮಾನು ಮಾರ್ಚ್‌ನಿಂದ ಮೇ ಕೊನೆಯವರೆಗೆ ಇರುತ್ತದೆ. ಸೂರ್ಯನ ಕಿರಣಗಳು ಉತ್ತರಾರ್ಧಗೋಳದ ಕರ್ಕಾಟಕ ವೃತ್ತದ ಮೇಲೆ ನೇರವಾಗಿ ಬೀಳುವುದರಿಂದ ಈ ಭಾಗದಲ್ಲಿ ಉಷ್ಣಾಂಶ ಹೆಚ್ಚಾಗುತ್ತದೆ. ಉತ್ತರ ಭಾಗದಲ್ಲಿ ಈ ಅವಧಿಯಲ್ಲಿ ಅನೇಕ ಸ್ಥಳೀಯ ಮಾರುತಗಳು ಕಂಡುಬರುತ್ತವೆ. ಉದಾಹರಣೆಗೆ ಲೂ, ನಾವೆಸ್ಟರ್, ಆಂಧೀಸ್, ಕಾಲಬೈಸಾಕಿ ಮುಂತಾದವುಗಳು. ಈ ಅವಧಿಯಲ್ಲಿ ಅಲ್ಪ ಪ್ರಮಾಣದಲ್ಲಿ ಗುಡುಗು ಸಿಡಿಲಿನಿಂದ ಕೂಡಿದ ಮಳೆಯಾಗುತ್ತದೆ. ಈ ಮಳೆ ದಕ್ಷಿಣ ಭಾರತದಲ್ಲಿ ಕಾಫಿ ಹೂ ಬಿಡುವ ಸಮಯದಲ್ಲಿ ಬರುಉದರಿಂದ ಕಾಫಿಯ ತುಂತುರು ಹಾಗೂ ಮಾವಿನ ಗಿಡಗಳು ಹೂ ಬಿಡಲು ಉಪಯೋಗವಾಗುವುದರಿಂದ 'ಮಾವಿನ ಕೊಯ್ಲು' ಎಂತಲೂ ಕರೆಯಲಾಗುತ್ತದೆ.

**3) ನೈರುತ್ಯ ಮಾನ್ಸೂನ್ ಮಾರುತ ಕಾಲ:**

ಮುಂಗಾರು ಮಳೆಗಾಲ. ಈ ಅವಧಿಯಲ್ಲಿ ಉತ್ತರದ ಮೈದಾನ ಪ್ರದೇಶಗಳಲ್ಲಿ ಮತ್ತು ಟಿಬೆಟ್ ಪ್ರಸ್ಥಭೂಮಿಯಲ್ಲಿ ಕಡಿಮೆ ಒತ್ತಡವುಂಟಾಗುವುದರಿಂದ, ಹಿಂದೂ ಮಹಾಸಾಗರದ ಅಧಿಕ ಒತ್ತಡ ಪ್ರದೇಶದ ವಾಯು / ಮಾರುತಗಳು ನೈರುತ್ಯ ಮಾರ್ಗವಾಗಿ ಚಲಿಸಲಾರಂಭಿಸುತ್ತವೆ. ಈ ಅವಧಿಯಲ್ಲಿ ವಾರ್ಷಿಕ ಮಳೆಯ ಶೇ.75ರಷ್ಟು ಈ 4 ತಿಂಗಳ ಅವಧಿಯಲ್ಲಿ ಬೀಳುತ್ತದೆ.

**4) ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ:**

ಈ ಮಾರುತಗಳು ಅಕ್ಟೋಬರ್ ಮತ್ತು ನವೆಂಬರ್ ಅವಧಿಯಲ್ಲಿ ಈಶಾನ್ಯ ದಿಕ್ಕಿನಿಂದ ನೈರುತ್ಯ ದಿಕ್ಕಿನ ಕಡೆಗೆ ಬೀಸುತ್ತವೆ. ಈ ಅವಧಿಯಲ್ಲಿ ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದ ಮಕರ ಸಂಕ್ರಾಂತಿ ವೃತ್ತದ ಮೇಲೆ ನೇರವಾಗಿ ಬೀಳುವುದರಿಂದ ಉಷ್ಣತೆ ಹೆಚ್ಚಾಗಿ ಒತ್ತಡ ಕಡಿಮೆಯಾಗುತ್ತದೆ. ಅದರಿಂದ ಉತ್ತರದ ಮೈದಾನ ಪ್ರದೇಶ ಹಾಗೂ ಟಿಬೆಟ್ ಪ್ರಸ್ಥಭೂಮಿಯಲ್ಲಿ ಅಧಿಕ ಒತ್ತಡವುಂಟಾಗಿ ಅದು ನೈರುತ್ಯ ದಿಕ್ಕು ಅಥವಾ ಹಿಂದೂ ಮಹಾಸಾಗರದ ಕಡೆಗೆ ಬೀಸುತ್ತವೆ.

ಈ ಅವಧಿಯಲ್ಲಿ ಆವರ್ತ ಮಾರುತಗಳು ಅಥವಾ ಚಂಡಮಾರುತಗಳಿಂದ ದಕ್ಷಿಣ ಭಾರತದಲ್ಲಿ ಅಲ್ಪ ಮಳೆಯಾಗುತ್ತದೆ.

**ಭಾರತದಲ್ಲಿಯ ಮಳೆಯ ಹಂಚಿಕೆ:**

ಭಾರತದ ಮಳೆಯ ಹಂಚಿಕೆಯಲ್ಲಿ ಅಸಮರ್ಪಕತೆ ಕಂಡು ಬರುತ್ತದೆ. ದೇಶದ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 118 ಸೆ.ಮೀ. ಇಲ್ಲಿ ಬೀಳುವ ಮಳೆಯ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಈ ರೀತಿಯಾಗಿ ಪ್ರಾದೇಶಿಕವಾದ ಅಸಮರ್ಪಕ ಹಂಚಿಕೆಯನ್ನು ಪ್ರಮುಖವಾಗಿ 3 ವಿಭಾಗಗಳಾಗಿ ವಿಂಗಡಿಸಲಾಗಿದೆ.

1) ಕಡಿಮೆ ಮಳೆಯಾಗುವ ಪ್ರದೇಶ.
2) ಸಾಧಾರಣ ಮಳೆಯಾಗುವ ಪ್ರದೇಶ.
3) ಅತೀ ಹೆಚ್ಚು ಮಳೆಯಾಗುವ ಪ್ರದೇಶ.

**1) ಕಡಿಮೆ ಮಳೆಯಾಗುವ ಪ್ರದೇಶ:**

ಇದು 50 ಸೆ.ಮೀ.ಗಿಂತಲೂ ಕಡಿಮೆ ಮಳೆ ಬೀಳುವ ಪ್ರದೇಶವಾಗಿರುತ್ತದೆ. ರಾಜಸ್ಥಾನದ ಥಾರ್ ಮರುಭೂಮಿ, ಪಂಜಾಬ್, ಹರಿಯಾಣ, ಅರಾವಳಿ ಬೆಟ್ಟಗಳ ಪೂರ್ವ ಭಾಗ, ಕೇಂದ್ರ ಪ್ರಸ್ಥಭೂಮಿ, ಮಹಾರಾಷ್ಟ್ರದ ವಿದರ್ಭ ಪ್ರದೇಶ, ಉತ್ತರ ಕರ್ನಾಟಕ, ಗುಜರಾತಿನ ಕಛ್‌ಭಾಗ ಇತ್ಯಾದಿಗಳಲ್ಲಿ ವ್ಯಾಪಿಸಿದೆ.

**2) ಸಾಧಾರಣ ಮಳೆಯಾಗುವ ಪ್ರದೇಶ:**

ಇದು ಸರಾಸರಿ 50 ಸೆ.ಮೀ. – 250 ಸೆ.ಮೀ.ವರೆಗೆ ಮಳೆ ಪಡೆಯುವ ಪ್ರದೇಶಗಳಾಗಿವೆ. ಒಡಿಸ್ಸಾ, ಬಿಹಾರ, ಪಶ್ಚಿಮ ಬಂಗಾಳ, ಛತ್ತೀಸ್‌ಗಡ, ಜಾರ್ಖಂಡ್, ಮಧ್ಯಪ್ರದೇಶ, ಉತ್ತರ ಪ್ರದೇಶ, ಆಂಧ್ರ ಪ್ರದೇಶ ಇತ್ಯಾದಿಗಳಲ್ಲಿ ಕಾಣಬಹುದಾಗಿದೆ.

**3) ಅಧಿಕ ಮಳೆಯ ಪ್ರದೇಶ:**

250 ಸೆ.ಮೀ.ಗಿಂತ ಅಧಿಕ ವಾರ್ಷಿಕ ಸರಾಸರಿ ಮಳೆ ಪಡೆಯುವ ಪ್ರದೇಶಗಳು. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗ, ಪೂರ್ವಾಚಲ ಬೆಟ್ಟಗಳು, ಲಕ್ಷದ್ವೀಪಗಳು, ಅಂಡಮಾನ್ ಮತ್ತು ನಿಕೋಬಾರ್‌ಗಳು ಅಧಿಕ ಮಳೆ ಪಡೆಯುವ ಪ್ರದೇಶಗಳು.

**ಮಾನ್ಸೂನ್ ಮಾರುತದ ಮಹತ್ವ:**

ಮಾನ್ಸೂನ್ ಮಾರುತಗಳ ಪಾತ್ರವು ದೇಶದ ಎಲ್ಲಾ ರೀತಿಯ ಚಟುವಟಿಕೆಗಳಲ್ಲಿ ಮಹತ್ವದ್ದಾಗಿದೆ. ಬೆಳೆ ಮಾದರಿ, ಬೆಳೆ ಋತುಗಳು, ಅವುಗಳ ಸ್ವಭಾವ ಮತ್ತು ಬೆಳೆಗಳ ಪ್ರಕಾರ, ಬೆಳೆಗಳ ಇಳುವರಿ ಮತ್ತು ಉತ್ಪಾದನೆಯ ಮೇಲೆ ಮಾನ್ಸೂನ್ ಮಾರುತಗಳು ನೇರ ಪ್ರಭಾವವನ್ನು ಬೀರುತ್ತದೆ.

ನೈರುತ್ಯ ಮತ್ತು ಈಶಾನ್ಯ ಮಾರುತಗಳ ಸಹಾಯದಿಂದಾಗಿ ಕೃಷಿ ಆಧಾರಿತ ಕೈಗಾರಿಕೆಗಳು, ಸಾರಿಗೆ ಸಂಪರ್ಕಗಳ ವ್ಯವಸ್ಥೆ ಅಭಿವೃದ್ಧಿ ಹೊಂದುತ್ತವೆ. ಭಾರತದಲ್ಲಿನ ಜಲವಿದ್ಯುತ್ ಉತ್ಪಾದನೆ, ಒಳನಾಡಿನ ಜಲಸಾರಿಗೆ, ಮೀನುಗಾರಿಕೆ ಹಾಗೂ ಕೃಷಿ ಆಧಾರಿತ ಚಟುವಟಿಕೆಗಳು ಸಂಪೂರ್ಣವಾಗಿ ಮಾನ್ಸೂನ್‌ನನ್ನು ಅವಲಂಬಿಸಿದೆ.

ನೈರುತ್ಯ ಮತ್ತು ಈಶಾನ್ಯ ಮಾರುತಗಳಿಂದ ದೇಶವು 88%ರಷ್ಟು ಮಳೆಯನ್ನು ಪಡೆಯುತ್ತದೆ. ಜೂನ್‌ನಿಂದ ಸೆಪ್ಟೆಂಬರ್, ಮತ್ತು ನವೆಂಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ದೇಶದ ಹೆಚ್ಚಿನ ಆರ್ಥಿಕ ಚಟುವಟಿಕೆಗಳು ನಡೆಯುತ್ತವೆ.

**ಭಾರತದಲ್ಲಿಯ ನದಿ ವ್ಯವಸ್ಥೆ:**

ಮುಖ್ಯ ನದಿ ಮತ್ತು ಅದರ ಉಪನದಿಗಳ ವ್ಯೂಹದ ಉಗಮ ಮತ್ತು ಅಭಿವೃದ್ದಿಯನ್ನು 'ನದಿ ವ್ಯವಸ್ಥೆ' ಎಂದು ಕರೆಯುತ್ತೇವೆ. ಮುಖ್ಯ ನದಿ ಮತ್ತು ಅದರ ಎಲ್ಲಾ ಉಪನದಿಗಳು ಹರಿಯುವ ಪ್ರದೇಶವನ್ನು ಜಲಾನಯನ ಪ್ರದೇಶ ಅಥವಾ ನದಿಕೊಳ್ಳ ಎನ್ನುತ್ತೇವೆ.

**ನದಿಗಳ ಪ್ರಾಮುಖ್ಯತೆ:**

ನದಿಗಳು ಒಂದು ದೇಶದ ಜಲಸಂಪನ್ಮೂಲಗಳಾಗಿವೆ. ನದಿಗಳು ನಾಗರೀಕತೆಗಳ ಕೇಂದ್ರಗಳಾಗಿದ್ದು, ಒಂದು ದೇಶದ ಸಂಸ್ಕೃತಿ ಮತ್ತು ಸಂಪ್ರದಾಯ ಹಾಗೂ ಜೀವಸ್ತರಗಳ ಮೇಲೆ ಪ್ರಭಾವ ಬೀರುತ್ತವೆ. ಪ್ರತಿಯೊಂದು ನಾಗರೀಕತೆಯ ಪ್ರಾರಂಭವು ನದಿಗಳ ದಂಡೆಯಲ್ಲಿಯೇ ಪ್ರಾರಂಭವಾಗಿರುವುದು ನದಿಯ ಪ್ರಾಮುಖ್ಯತೆಯ ಕುರಿತು ಅರಿವು ಮೂಡಿಸುತ್ತದೆ.

ಕುಡಿಯಲು ನೀರು, ಗೃಹ ಬಳಕೆ, ಕೃಷಿ, ಮೀನುಗಾರಿಕೆ, ನೀರಾವರಿ ಮುಂತಾದವುಗಳಿಗೆ ಈ ನದಿ ನೀರನ್ನು ಬಳಸಲಾಗುತ್ತದೆ. ಪ್ರಸ್ತುತ ನದಿಗಳನ್ನು ನೌಕಾಯಾನ, ಜಲವಿದ್ಯುಚ್ಛಕ್ತಿ, ಉತ್ಪಾದನೆ, ಕೈಗಾರಿಕೆ, ಮನರಂಜನೆ ಮುಂತಾದುಗಳಿಗೆ ಉಪಯುಕ್ತವಾಗಿದೆ.

ಭಾರತದಲ್ಲಿಯ ನದಿಗಳ ಹಂಚಿಕೆ ಈ ಕೆಳಗಿನಂತಿದೆ.

1) ಹಿಮಾಲಯ ನದಿಗಳು ಅಥವಾ ಉತ್ತರ ಭಾರತದ ನದಿಗಳು.

2) ಪರ್ಯಾಯ ಪ್ರಸ್ಥಭೂಮಿ ಅಥವಾ ದಕ್ಷಿಣ ಭಾರತ ನದಿಗಳು.

**ವಿವರಣೆ:**

ಹಿಮಾಲಯದ ನದಿಗಳಲ್ಲಿನ ಮೂರು ಮುಖ್ಯ ನದಿವ್ಯೂಹಗಳೆಂದರೆ, ಸಿಂಧೂ ನದಿ, ಗಂಗಾ ನದಿ ಮತ್ತು ಬ್ರಹ್ಮಪುತ್ರಾ ನದಿಗಳು.

**ಸಿಂಧೂ ನದಿ:**

ಸಿಂಧೂ ನದಿಯು ಕೈಲಾಸ ಪರ್ವತದಲ್ಲಿ ಉಗಮವಾಯಿತು. ನದಿಯ ಒಟ್ಟು ಉದ್ದ 2880 ಕಿ.ಮೀ.ಗಳು. ಭಾರತದಲ್ಲಿ 709 ಕಿ.ಮೀ.ಗಳವರೆಗೆ ಸಿಂಧೂ ನದಿಯು ವ್ಯಾಪಿಸಿದೆ. ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಲಡಾಖ್ ಮತ್ತು ಝಾಸ್ಕರ್ ಶ್ರೇಣಿಗಳ ಮಧ್ಯೆ ಇರುವ ಕಿರಿದಾದ ಕಂದರದ ಮೂಲಕ ವಾಯುವ್ಯ ದಿಕ್ಕಿಗೆ ಹರಿಯುತ್ತದೆ.

ಇದು ಪ್ರಪಂಚದ ಅತಿ ಪ್ರಾಚೀನ ನದಿವ್ಯೂಹಗಳಲ್ಲಿ ಒಂದಾಗಿದೆ. ಈ ನದಿ ಪಾತ್ರದ ಬಹುತೇಕ ಭಾಗ ಮತ್ತು ಜಲಾಯನ ಪ್ರದೇಶಗಳು ಪಾಕಿಸ್ತಾನದಲ್ಲಿದೆ. ಇದರ ಮುಖ್ಯ ಉಪನದಿಗಳು ಮತ್ತು ಅವುಗಳ ಉಗಮ ಸ್ಥಾನ ಈ ಕೆಳಗಿನಂತಿವೆ.

| **ನದಿ** | | **ಉಗಮ** |
|---|---|---|
| ಝೀಲಂ | – | ಕಾಶ್ಮೀರ ಕಣಿವೆಯ ವೆರಿಗಾನ್ |
| ಚೇನಾಬ್ | – | ಹಿಮಾಚಲ ಪ್ರದೇಶದ ಚಂದ್ರಬಾಗ್ |
| ರಾವಿ | – | ರೋಟ್ಟಾರಿಗ್ ಕಣಿವೆ ಕುಲುಬೆಟ್ಟ |
| ಬಿಯಾಸ್ | – | ಕುಲು– ಬಿಯಾಸ್ ಕುಂಡ |
| ಸಟ್ಲೆಜ್ | – | ಚೀನಾದ ರಾಕಾಸ್ ಸರೋವರ |

ಭಾರತದ ಗಡಿಯಾಚೆಯಲ್ಲಿ ಉಗಮ ಹೊಂದುವ ಸಿಂಧೂ ನದಿಯ ಏಕೈಕ ಉಪನದಿ ಎಂದರೆ ಸಟ್ಲೇಜ್.

**ಗಂಗಾ ನದಿ:**

ಗಂಗಾ ನದಿಯು ದೇಶದ ಅತಿ ಉದ್ದವಾದ (2500 ಕಿ.ಮೀ.) ಮತ್ತು ದೊಡ್ಡದಾದ ನದಿವ್ಯೂಹವಾಗಿದೆ. ಸಾಮಾನ್ಯವಾಗಿ ಇದನ್ನು ಭಾರತದ 'ರಾಷ್ಟ್ರೀಯ ನದಿ' ಎಂದು ಕರೆಯಲಾಗುತ್ತದೆ. ಇದು ಭಾಗೀರಥಿ ಮತ್ತು

ಅಲಕಾನಂದ ಎಂಬ ಎರಡು ಜಲ ಮೂಲಗಳನ್ನು ಹೊಂದಿದೆ. ದೇವ ಪ್ರಯಾಗದಲ್ಲಿ ಈ ಎರಡೂ ನದಿಗಳು ಸಂಗಮವಾಗುತ್ತವೆ.

ಬಿಹಾರ, ಪಶ್ಚಿಮ ಬಂಗಾಳ ರಾಜ್ಯಗಳ ಮೂಲಕ ಚಲಿಸಿ ಬಾಂಗ್ಲಾ ದೇಶವನ್ನು ಪ್ರವೇಶಿಸಿ, ಅಲ್ಲಿ ಬ್ರಹ್ಮಪುತ್ರಾ ನದಿಯೊಡನೆ ಸೇರಿ ಪದ್ಮಾ ಎಂದು ಕರೆಯಲ್ಪಟ್ಟು ಅಂತಿಮವಾಗಿ ಬಂಗಾಳಕೊಲ್ಲಿಯಲ್ಲಿ ಲೀನವಾಗುತ್ತದೆ.

ಹೂಗ್ಲಿ ನದಿಯು ಗಂಗಾ ನದಿಯು ಒಮದು ಪ್ರಮುಖ ಕವಲಾಗಿದ್ದು, ಕೋಲ್ಕತ್ತಾದ ಮೂಲಕ ಹರಿಯುತ್ತದೆ. ಹೂಗ್ಲಿಯು ಉಬ್ಬರದ ನದಿಯಾಗಿದ್ದು, ಇದರ ದಡದ ಮೇಲೆ ಕೋಲ್ಕತ್ತಾ ಬಂದರು ನೆಲೆಗೊಂಡಿದೆ. ಹೂಗ್ಲಿ ನದಿಯ ನೀರಿನ ಮಟ್ಟವನ್ನು ಫರಕ್ಕಾ ಡ್ಯಾಂನಿಂದ ನಿರ್ವಹಣೆ ಮಾಡಲಾಗುತ್ತಿದೆ.

ಭಾಗೀರಥಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ 'ತೆಹ್ರಿ' ಅಣೆಕಟ್ಟೆ ಭಾರತದಲ್ಲಿಯೇ ಅತ್ಯಂತ ಎತ್ತರವಾದುದಾಗಿದೆ.

**ಗಂಗಾನದಿಯ ಉಪನದಿಗಳು:**

1) ಎಡದಂಡೆಯ ಉಪನದಿಗಳು: ರಾಮಗಂಗಾ, ಶಾರದ, ಗೋಮಲೆ, ಘಾಘ್ರ, ಗಂಡಕ್ ಮತ್ತು ಕೋಸಿ.
2) ಬಲದಂಡೆಯ ಉಪನದಿಗಳು: ಯಮುನಾ, ಸೋನ್, ಯಮುನೆಯ ಉಪನದಿಗಳು ಚಂಬಲ್, ಸಿಂಧ್, ಬೆಟ್ವಾ, ಕೆನ್.

**ದಾಮೋದರ್ ನದಿ:**

ಇದು ಛೋಟಾನಾಗಪುರ ಪ್ರಸ್ಥಭೂಮಿಯ ಪೂರ್ವಭಾಗದಲ್ಲಿ ಹರಿಯುತ್ತದೆ. ಇದು ಪಶ್ಚಿಮ ಬಂಗಾಳದ ಕಣ್ಣೀರಿನ ನದಿ. ದಾಮೋದರ್ ವಿವಿಧೋದ್ದೇಶ ಯೋಜನೆಯು ಜಾರ್ಖಂಡ್, ಪಶ್ಚಿಮ ಬಂಗಾಳ ರಾಜ್ಯಗಳಿಗೆ ಬೆನ್ನೆಲುಬಿನಂತಾಗಿದೆ. ಇದು ಪಶ್ಚಿಮ ಬಂಗಾಳ ರಾಜ್ಯದ ಫಾಲ್ತಾ ಎಂಬಲ್ಲಿ ಹೂಗ್ಲಿ ನದಿಯೊಡನೆ ಸಂಧಿಸುತ್ತದೆ.

**ಬ್ರಹ್ಮಪುತ್ರಾ ನದಿ:**

ಇದು ಪ್ರಪಂಚದ ಅತಿ ದೊಡ್ಡ ನದಿವ್ಯೂಹಗಳಲ್ಲೊಂದಾಗಿದೆ. ಮಾನಸ ಸರೋವರ (ಚೀನಾ) ಸಮೀಪದ **'ಚೆಮಯಾಂಗ್ ಡಂಗ್'** ಎಂಬ ಹಿಮಚ್ಛಾದಿತ ಪ್ರದೇಶದಲ್ಲಿ ಈ ನದಿಯು ಹುಟ್ಟುತ್ತದೆ. ಚೀನಾದಲ್ಲಿ ಇದನ್ನು ಸಾಂಗ್ಪೋ ಎಂದೂ, ಬಾಂಗ್ಲಾದೇಶದಲ್ಲಿ ಜಮುನಾ ಎಂದೂ ಕರೆಯುತ್ತಾರೆ. ಈ ನದಿಯ ಒಟ್ಟು ಉದ್ದ 2580 ಕಿ.ಮೀ., ಭಾರತದಲ್ಲಿ ಸುಮಾರು 750 ಕಿ.ಮೀ. ಉದ್ದದವರೆಗೆ ಹರಿಯುತ್ತದೆ.

ಇದು ನಾಮ್ಚಾಬಾರ್ವ (ಅರುಣಾಚಲ ಪ್ರದೇಶ) ಮೂಲಕ ಭಾರತವನ್ನು ಪ್ರವೇಶಿಸಿ, ಉನ್ನತ ಹಿಮಾಲಯ ಶ್ರೇಣಿಗಳ ಮೂಲಕ ಹರಿಯುತ್ತದೆ. ಈ ನದಿಯ ಜಲಾನಯನ ಪ್ರದೇಶವು ಅತ್ಯಧಿಕ ಮಳೆಯನ್ನು ಪಡೆಯುತ್ತದೆ. ಈ ನದಿಯ ಪ್ರಮುಖ ಉಪನದಿಗಳು ಸುಬನ್‌ಸಿರಿ, ಧನ್‌ಸಿರಿ, ಮಾನಸ್, ತೀಸ್ತಾ, ದಿಹಾಂಗ್, ಲೋಹಿರ್, ಬುರ್ಹಿ ದಿಹಾಂಗ್. ಅಸ್ಸಾಂನಲ್ಲಿನ 'ಮಜೂಲಿ'ಯು ಅತಿ ದೊಡ್ಡ ದ್ವೀಪವಾಗಿದೆ. ಮತ್ತು ಪಶ್ಚಿಮ ಬಂಗಾಳದಲ್ಲಿಯ ಸುಂದರ್ ಬನ್ಸ್ ಈ ನದಿಯ ದೊಡ್ಡ ಮುಖಜ ಭೂಮಿಯಾಗಿದೆ.

**ಪರ್ಯಾಯ ಪ್ರಸ್ಥಭೂಮಿಯ ನದಿಗಳು:**

ಇವುಗಳನ್ನು ದಕ್ಷಿಣ ಭಾರತದ ನದಿಗಳೆಂದು ಕರೆಯುವರು. ಪರ್ಯಾಯ ಪ್ರಸ್ಥಭೂಮಿಯು ಇಡೀ ದೇಶದಲ್ಲೇ ಅತಿ ದೊಡ್ಡ ನದಿ ಜಾಲವನ್ನು ಹೊಮದಿದೆ. ಬಹುತೇಕ ನದಿಗಳು ಪಶ್ಚಿಮ ಘಟ್ಟಗಳು ಮತ್ತು ಕೇಂದ್ರದ ಉನ್ನತ ಪ್ರದೇಶಗಳಲ್ಲಿ ಹುಟ್ಟುತ್ತವೆ. ಈ ನದಿಗಳು ಹರಿಯುವ ದಿಕ್ಕಿನ ಆಧಾರದ ಮೇಲೆ ಈ ಕೆಳಗಿನಂತೆ ವಿಂಗಡಿಸಲಾಗಿದೆ.

ಅ) ಪೂರ್ವಾಭಿಮುಖವಾಗಿ ಹರಿಯುವ ನದಿಗಳು

ಬ) ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು.

## ಪೂರ್ವಾಭಿಮುಖವಾಗಿ ಹರಿಯುವ ಪ್ರಮುಖ ನದಿಗಳು:

### ಮಹಾನದಿ:

ಈ ನದಿಯು ಛತ್ತಿಸ್‌ಘಡ್ ರಾಜ್ಯದ ಸಿಹಾವನಲ್ಲಿ ಉಗಮವಾಗುತ್ತದೆ. ಇದು ಒಡಿಸ್ಸಾ ಮತ್ತು ಛತ್ತೀಸ್‌ಘಡ ರಾಜ್ಯದ ಅತಿಮುಖ್ಯ ನದಿಯಾಗಿದೆ. ಇದು 885 ಕಿ.ಮೀ. ಉದ್ದ ಹರಿಯುತ್ತದೆ ಮತ್ತು ಕಟಕ್ ಸಮೀಪ ಬಂಗಾಳಕೊಲ್ಲಿಗೆ ಸೇರುತ್ತದೆ. ಈ ನದಿಯ ಪ್ರಮುಖ ಉಪನದಿಗಳು ಸಿಯೋನಾಥ್, ಹಸ್ಡಿಯಾ, ಮಾಂಡ್ ಮತ್ತು ಜೋಕ್. ಮಹಾನದಿಗೆ ಅಡ್ಡಲಾಗಿ ಹಿರಾಕುಡ್ (ಅತಿ ಉದ್ದವಾದ) ನಾರಾಜ್, ಟಕಾರ್ ಪದ ಎಂಬ ಅಣೆಕಟ್ಟುಗಳಿವೆ.

### ಗೋದಾವರಿ:

ಪರ್ಯಾಯ ಭಾರತದ ಅತಿ ಉದ್ದವಾದ ಮತ್ತು ದೊಡ್ಡದಾದ ನದಿ ಗೋದಾವರಿ. ಇದು ಮಹಾರಾಷ್ಟ್ರ ರಾಜ್ಯದ ನಾಸಿಕ್ ಜಿಲ್ಲೆಯ 'ತ್ರಯಂಬಕೇಶ್ವರ' ಎಂಬಲ್ಲಿ ಹುಟ್ಟುತ್ತದೆ. ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಮೂಲಕ ಒಟ್ಟು 1465 ಕಿ.ಮೀ. ಉದ್ದ ಹರಿವನ್ನು ಈ ನದಿಯು ಒಳಗೊಂಡಿದೆ. ಆಂಧ್ರಪ್ರದೇಶದ ಕಾಕಿನಾಡ ಎಂಬಲ್ಲಿ ಬಂಗಾಳಕೊಲ್ಲಿಗೆ ಇದು ಲೀನವಾಗುತ್ತದೆ. ಗೋದಾರಿ ನದಿಯ ಪ್ರಮುಖ ಉಪನದಿಗಳು ಪೂರ್ಣ, ಪೆನುಗಂಗಾ, ಪ್ರಣಹಿತ, ಸಬರಿ, ಇಂದ್ರಾವತಿ, ಮಾಂಜ್ರ.

ಈ ನದಿಯ ಮುಖಜಭೂಮಿಯು ಅಸಂಖ್ಯಾತ ಕಾಲುವೆಗಳಿಂದ ಕೂಡಿದೆಯಲ್ಲದೇ, ಲಗೂನ್‌ಗಳಿಂದ ಕೂಡಿರುವ ಮ್ಯಾಂಗ್ರೋವ್ ಅರಣ್ಯಗಳನ್ನು ಹೊಂದಿದೆ. ಕೊಲ್ಲೇರು ಸರೋವರವು ಒಂದು ಲಗೂನ್ ದ್ವೀಪವಾಗಿದೆ.

### ಕೃಷ್ಣಾ ನದಿ:

ಪರ್ಯಾಯ ಭಾರತದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ನದಿಗಳಲ್ಲಿ ಕೃಷ್ಣಾ 2ನೇ ಅತಿ ದೊಡ್ಡದಾದ ಮತ್ತು ಉದ್ದವಾದ ನದಿಯಾಗಿದೆ. ಮಹಾರಾಷ್ಟ್ರದ 'ಮಹಾಬಲೇಶ್ವರ'ದಲ್ಲಿ ಹುಟ್ಟಿ 1400 ಕಿ.ಮೀ. ಉದ್ದದವರೆಗೆ ಹರಿಯುತ್ತದೆ. ಆಂಧ್ರಪ್ರದೇಶದ 'ನಿಜಾಮ ಪಟ್ಟಣ' ಎಂಬಲ್ಲಿ ಬಂಗಾಳಕೊಲ್ಲಿಗೆ ಸೇರುತ್ತದೆ. ಈ ನದಿಯ ಉಪನದಿಗಳು ಈ ಕೆಳಗಿನಂತಿವೆ. ಕೊಯ್ನಾ, ಯೆರ್ಲಾ, ಪಂಚಗಂಗಾ, ದೂಧ್ ಗಂಗಾ, ಭೀಮ, ಘಟಪ್ರಭಾ, ತುಂಗಭದ್ರಾ ಮತ್ತು ಮೂಸಿ ನದಿಗಳು.

ಕೃಷ್ಣಾ ಮತ್ತು ಅದರ ಉಪನದಿಗಳಿಗೆ ನಾಗಾರ್ಜುನ ಸಾಗರ, ಆಲಮಟ್ಟಿ, ನಾರಾಯಣಪುರ, ತುಂಗಭದ್ರಾ, ಕೊಯ್ನಾ, ಮುಂತಾದ ಅಣೆಕಟ್ಟುಗಳನ್ನು ಕಟ್ಟಲಾಗಿದೆ.

### ಕಾವೇರಿ ನದಿ:

'ದಕ್ಷಿಣದ ಗಂಗೆ' ಎಂದೇ ಕರೆಯಲಾಗುವ ಕಾವೇರಿ ನದಿಯು 'ಕರ್ನಾಟಕದ ಜೀವ' ನದಿಯಾಗಿದೆ. ಸುಮಾರು 805 ಕಿ.ಮೀ. ಉದ್ದ ಹರಿಯುವ ಈ ನದಿಯು ಕೊಡಗಿನ ಬ್ರಹ್ಮಗಿರಿ ಬೆಟ್ಟದ ತಲಕಾವೇರಿಯಲ್ಲಿ ಉಗಮವಾಗುತ್ತದೆ. ಕಾವೇರಿಪಟ್ಟಣಂ (ತಮಿಳುನಾಡು) ಬಳಿ ಬಂಗಾಳಕೊಲ್ಲಿಯಲ್ಲಿ ಇದು ಲೀನವಾಗುತ್ತದೆ.

ಕಾವೇರಿ ನದಿ ನೀರಿನಿಂದ ಲಾಭ ಪಡೆಯುತ್ತಿರುವ ರಾಜ್ಯಗಳು ಕರ್ನಾಟಕ, ತಮಿಳುನಾಡು, ಕೇರಳ, ಪಾಂಡಿಚೇರಿ. ಕಾವೇರಿಯ ಪ್ರಮುಖ ಉಪನದಿಗಳು ಅರ್ಕಾವತಿ, ಹೇಮಾವತಿ, ಹಾರಂಗಿ, ಲೋಕಪಾವನಿ, ಶಿಂಷಾ, ಲಕ್ಷ್ಮಣತೀರ್ಥ, ಕಬಿನಿ, ಸುವರ್ಣಾವತಿ, ಭವಾನಿ, ಅಮರಾವತಿ.

ಇದು ಶ್ರೀರಂಗಪಟ್ಟಣ, ಶಿವನಸಮುದ್ರ ಮತ್ತು ಶ್ರೀರಂಗಂ ಎಂಬಲ್ಲಿ ಮೂರು ನದಿ ದ್ವೀಪಗಳನ್ನು ನಿರ್ಮಿಸಿದೆ. ಗಗನಚುಕಿ, ಭರಚುಕಿ, ಮೇಕೆದಾಟು, ಹೊಗೆನಿಕಲ್ ಎಂಬಲ್ಲಿ ಜಲಪಾತಗಳನ್ನು ನಿರ್ಮಿಸಿದೆ. 1902ರಲ್ಲಿ ಶಿವನ ಸಮುದ್ರ (ಶಿಂಷಾ) ಎಂಬಲ್ಲಿ ಏಷ್ಯಾದಲ್ಲಿಯೇ ಮೊದಲ ಬಾರಿಗೆ ಜಲ ವಿದ್ಯುತ್‌ಚ್ಛಕ್ತಿ ಉತ್ಪಾದನೆ (1904) ಮಾಡಲಾಯಿತು.

ಶ್ರೀರಂಗಂ ನಂತರ ಈ ನದಿಯು ಎರಡು ಶಾಖೆಗಳಾಗಿ ವಿಭಜಿಸಲ್ಪಡುತ್ತದೆ. ಅವುಗಳು ಉತ್ತರ ಶಾಖೆಯಲ್ಲಿ ಕೊಲೆರೂನ್ ಮತ್ತು ದಕ್ಷಿಣ ಶಾಖೆಯಲ್ಲಿ ಕಾವೇರಿ. ಈ ನದಿಗೆ ನಿರ್ಮಿಸಲಾದ ಅಣೆಕಟ್ಟುಗಳು ಗೋರೂರು, ಹಾರಂಗಿ, ಕಬಿನಿ, ಕೆ.ಆರ್.ಎಸ್. ಮೆಟ್ಟೂರು, ಭವಾನಿ.

ಪೂರ್ವಾಭಿಮುಖವಾಗಿ ಹರಿಯುವ ಪರ್ಯಾಯ ಪ್ರಸ್ಥಭೂಮಿಯ ನದಿಗಳು – ಸುವರ್ಣರೇಖ, ಪಾಲಾರ್, ಪೆನ್ನಾರ್, ವೈಗೈ, ತಾಮ್ರಪರ್ಣಿ ಇತ್ಯಾದಿ.

### 3) ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು:

ಇವು ತುಂಡು ತುಂಡಾಗಿ ಮತ್ತು ರಭಸವಾಗಿ ಹರಿಯುವ ನದಿಗಳು. ಪಶ್ಚಿಮ ಘಟ್ಟಗಳ ಏರಿಳಿತ ಭೂಸ್ವರೂಪಗಳ ಮೂಲಕ ಹರಿಯುತ್ತವೆ. ಪ್ರಮುಖ ನದಿಗಳು ಲೂನಿ, ಸಬರಮತಿ, ಮಾಹಿ, ನರ್ಮದಾ, ತಾಪಿ, ಮಾಂಡೋವಿ, ಜುವಾರಿ, ಕಾಳಿ, ಶರಾವತಿ, ಗಂಗಾವತಿ, ಬೆಡ್ತಿ, ನೇತ್ರಾವತಿ, ಪೆರಿಯಾರ್ ಮುಂತಾದವುಗಳು.

**ಲೂನಿ:**

ಅರಾವಳಿ ಪರ್ವತದ ಅಜ್ಮೀರ್‌ನ ಸಮೀಪ ಉಗಮವಾಗುತ್ತದೆ. ಇದು ಥಾರ್ ಮರುಭೂಮಿ ಮೂಲಕ ಹರಿದು, ರಾಣ್ ಆಫ್ ಕಛ್‌ನ ಮೂಲಕ ಅರಬ್ಬೀ ಸಮುದ್ರದಲ್ಲಿ ಲೀನವಾಗುತ್ತದೆ.

**ನರ್ಮದಾ:**

ಛತ್ತೀಸ್‌ಗರ್‌ನ ಅಮರಕಂಟಕ ಬೆಟ್ಟಗಳಲ್ಲಿ ಉಗಮವಾಗುವ ಈ ನದಿಯು ಮಧ್ಯಪ್ರದೇಶದ ಅಮೃತ ಶಿಲಾ ಕಂದರಗಳ ಮೂಲಕ ಹರಿಯುತ್ತದೆ. ದುವಾಂದರ್ ಮತ್ತು ಪಿಲದಾರಗಳು ನರ್ಮದಾ ನದಿಯ ಪಾತ್ರದಲ್ಲಿನ ಪ್ರಮುಖ ಜಲಪಾತಗಳು. ಈ ನದಿಗೆ 'ಸರ್ದಾರ್ ಸರೋವರ' ವಿವಿಧೊದ್ದೇಶ ನದಿ ಕಣಿವ ಯೋಜನೆಯನ್ನು ನಿರ್ಮಾಣ ಮಾಡಲಾಗಿದೆ. ಭಾರತದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ಅತಿ ಉದ್ದವಾದ ಮತ್ತು ದೊಡ್ಡದಾದ ನದಿಯಾಗಿದ್ದು, ತನ್ನ ಕಣಿವೆಯಲ್ಲಿ ಮೆಕ್ಕಲು ನಿಕ್ಷೇಪವನ್ನು ಹೊಂದಿದೆ. ಈ ನದಿಯು ಗುಜರಾತಿನ ಭರೂಚ್ ಎಂಬಲ್ಲಿ ಅತಿ ದೊಡ್ಡದಾದ ಅಳಿವೆಯನ್ನು ನಿರ್ಮಿಸಿದೆ.

**ತಪತಿ:**

ಪರ್ಯಾಯ ಪ್ರದೇಶದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ಎರಡನೆಯ ದೊಡ್ಡ ನದಿಯಾಗಿರುವ ತಪತಿ ನದಿಯು ಮಧ್ಯಪ್ರದೇಶದ ಮುಲ್ತಾಯ್ ಎಂಬಲ್ಲಿ ಉಗಮವಾಗುತ್ತದೆ. ಸಲ್ಪೂರ ಮತ್ತು ಅಜಂತಾ ಶ್ರೇಣಿಗಳ ನಡುವಿನ ಸೀಳು ಕಣಿವೆಯ ಮೂಲಕ ಹರಿದು, ಸೂರತ್ ಬಳಿ ಅರಬ್ಬೀ ಸಮುದ್ರ ಸೇರುತ್ತದೆ.

**ಕಾಳಿ:**

ಇದು ಉತ್ತರಕನ್ನಡ ಜಿಲ್ಲೆ 'ಸೂಳ್ಯ'ದ ಬಳಿ ಹುಟ್ಟುತ್ತದೆ. ಲಾಲ್ ಗುಳಿ ಜಲಪಾತವನ್ನು ನಿರ್ಮಿಸಿದೆ.

**ಶರಾವತಿ:**

ಈ ನದಿ ಶಿವಮೊಗ್ಗದ ಅಂಬುತೀರ್ಥದಲ್ಲಿ ಉಗಮವಾಗಿದೆ. ಇದು ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮೂಲಕ ಹರಿಯುತ್ತದೆ. ಹೊನ್ನಾವರದ ಮೂಲಕ ಅರಬ್ಬೀ ಸಮುದ್ರ ಸೇರುತ್ತದೆ. ಈ ನದಿಯು ಜೋಗ್ ಜಲಪಾತವನ್ನು (275 ಮೀ. ಎತ್ತರ) ನಿರ್ಮಿಸಿದ್ದು, ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಸಹಕಾರಿಯಾಗಿದೆ. ಮಹಾತ್ಮಾಗಾಂಧಿ ಜಲವಿದ್ಯುತ್ ಸ್ಥಾವರ ಮತ್ತು ಲಿಂಗನಮಕ್ಕಿ ಅಣೆಕಟ್ಟು ಈ ನದಿ ಪಾತ್ರದಲ್ಲಿ ಕಂಡುಬರುತ್ತದೆ.

**ನೇತ್ರಾವತಿ:**

ಈ ನದಿಯು ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನದಿಯಾಗಿದೆ. ಕುದುರೆಮುಖ ಶ್ರೇಣಿಗಳಲ್ಲಿ ಈ ನದಿಯು ಉಗಮವಾಗಿ, ಪಶ್ಚಿಮಾಭಿಮುಖವಾಗಿ ಹರಿದು ಮಂಗಳೂರಿನ ಸಮೀಪ ಅರಬ್ಬೀ ಸಮುದ್ರಕ್ಕೆ ಸೇರುತ್ತದೆ.

**ಪೆರಿಯಾರ್:**

ಇದು ಕೇರಳದ ಅತಿ ದೊಡ್ಡ ನದಿಯಾಗಿದ್ದು ಈ ನದಿಯ ಉಗಮ ಸ್ಥಾನ ಶಿವಗಿರಿ ಅರಣ್ಯ ಪ್ರದೇಶ. ಇದು ಪಶ್ಚಿಮಾಭಿಮುಖವಾಗಿ ಹರಿದು ಪಲ್ಲಿಪುಂ ಸಮೀಪದಲ್ಲಿ ಅರಬ್ಬೀ ಸಮುದ್ರವನ್ನು ಸೇರುತ್ತದೆ.

### ಉತ್ತರ ಮತ್ತು ದಕ್ಷಿಣ ಭಾರತದ ನದಿಗಳಿಗಿರುವ ವ್ಯತ್ಯಾಸಗಳು:

**ಉತ್ತರಭಾರತದ ನದಿಗಳು:**

1) ವರ್ಷವಿಡೀ ತುಂಬಿ ಹರಿಯುತ್ತವೆ.
2) ಉದ್ದ ಮತ್ತು ಅಗಲವಾದ ಕಣಿವೆಗಳಿಂದ ಕೂಡಿದೆ.

3) ಬಳಿದಾದ ಇಳಿಜಾರು ಕಣಿವೆಗಳ ಮೂಲಕ ನಿಧಾನವಾಗಿ ಹರಿಯುತ್ತವೆ.

4) ನದಿಗಳು ಮುಖ್ಯವಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಬಳಕೆ.

5) ವಿಶಾಲವಾದ ಮೈದಾನಗಳು ಮತ್ತು ಮುಖಜ ಭೂಮಿಗಳನ್ನು ನಿರ್ಮಿಸಿವೆ.

6) ಹಿಮಾಲಯದಲ್ಲಿ ಉಗಮ.

7) ನೌಕಾಯಾನಕ್ಕೆ ಸೂಕ್ತ.

8) ಅಂಖ್ಯಾತ ಚೂಪಾದ ತಿರುವುಗಳು.

9) ಅಪಾರ ಪ್ರಮಾಣದ ನಿಕ್ಷೇಪ ಕಣಗಳನ್ನು ಸಾಗಿಸುತ್ತವೆ.

10) ಪ್ರಸ್ಥಭೂಮಿಯ ನದಿಗಳಿಗೆ ಹೋಲಿಸಿದರೆ ಈ ನದಿಗಳು ಕಿರಿಯವು.

11) ನದಿಯ ಅಪಹರಣ ನಿರಂತರ ಅಂಶವಾಗಿವೆ.

**ದಕ್ಷಿಣ ಭಾರತದ ನದಿಗಳು:**

1) ಮಾನ್ಸೂನ್ ಮಳೆಯಿಂದ, ತಾತ್ಕಾಲಿಕವಾಗಿ ಹರಿಯುತ್ತವೆ.

2) ತುಂಡು ನದಿಗಳು, ಕಿರಿದಾದ, ಆಳ ಕಣಿವೆಗಳಿಂದ ಕೂಡಿದೆ.

3) ಕಡಿದಾದ ಪ್ರದೇಶದಲ್ಲಿ ಏರಿಳಿತದಿಂದ ವೇಗವಾಗಿ ಹರಿದು ಜಲಪಾತ ನಿರ್ಮಾಣವಾಗುತ್ತವೆ.

4) ಈ ನದಿಗಳು ಮುಖ್ಯವಾಗಿ ಜಲವಿದ್ಯುತ್ ಉತ್ಪಾದನೆಗೆ ಬಳಕೆ.

5) ಇವುಗಳು ಆಳವಾದ ಕಣಿವೆಗಳು ಮತ್ತು ಅಳಿವೆಗಳು ನಿರ್ಮಾಣ ಮಾಡಿವೆ.

6) ಪರ್ಯಾಯ ಪ್ರಸ್ಥಭೂಮಿಯಲ್ಲಿ ಉಗಮ.

7) ನೌಕಾಯಾನಕ್ಕೆ ಸೂಕ್ತವಲ್ಲ.

8) ಆಳವಿಲ್ಲದ ತಿರುವುಗಳ ನಿರ್ಮಾಣ.

9) ಇವುಗಳ ಕಡಿಮೆ ಸಾಮರ್ಥ್ಯದ ನಿಕ್ಷೇಪ ಮತ್ತು ಕಣಗಳನ್ನು ಸಾಗಿಸುತ್ತವೆ.

10) ಈ ನದಿಗಳು ತುಂಬ ಹಳೆಯ ನದಿಗಳು.

11) ಇಲ್ಲಿ ನದಿಯ ಅಪಹರಗಳಿಲ್ಲ.

**ನದಿಗಳ ಋತುಕಾಲಿಕ ಬದಲಾವಣೆ:**

ನದಿಯಲ್ಲಿನ ನೀರು ಋತುಕಾಲಿಕವಾಗಿ ಹರಿಯುವ ವಿಧಾನವನ್ನೇ ನದಿಯ ಕಾಲಿಕ ಬದಲಾವಣೆ ಎಂದು ಕರೆಯುತ್ತಾರೆ. ವರ್ಷವಿಡೀ ನದಿ ಪಾತ್ರದಲ್ಲಿನ ಮಳೆಯ ಪ್ರಮಾಣ, ಉಷ್ಣಾಂಶ ಮತ್ತು ನದಿ ಮೈದಾನದ ಲಕ್ಷಣಗಳನ್ನು ಆಧರಿಸಿದಂತೆ ನೀರಿನ ಹರಿವಿನ ಪ್ರಮಾಣದಲ್ಲಿ ವ್ಯತ್ಯಾಸವನ್ನು ಕಾಣಬಹುದು. ವಾಯುಗುಣದ ವ್ಯತ್ಯಾಸದ ಪರಿಣಾಮವಾಗಿ ಹಿಮಾಲಯದಲ್ಲಿನ ನದಿಗಳ ನೀರಿನ ಪ್ರಮಾಣವು ಪ್ರಸ್ಥಭೂಮಿಯ ನದಿಗಳಿಗಿಂತ ಭಿನ್ನವಾಗಿದೆ.

ಹಿಮಾಲಯದ ನದಿಗಳು ಜೀವಂತ ನದಿಗಳಾಗಿದ್ದು ಮತ್ತು ಈ ಪ್ರದೇಶದಲ್ಲಿನ ನೀರಿನ ಪೂರೈಕೆಯು ಮುಖ್ಯವಾಗಿ ಹಿಮಾಲಯ ಪರ್ವತವು ಹಿಮ ಕರಗುವ ಮೂಲಕ ನೀರನ್ನು ಪಾದಬೆಟ್ಟಗಳು ಹಾಗೂ ಭಾರತದ ಮೈದಾನಗಳು ಮಳೆಯಿಂದಾಗಿ ನೀರನ್ನು ಪಡೆದುಕೊಳ್ಳುತ್ತವೆ. ಮತ್ತೊಂದು ಕಡೆ ಪ್ರಸ್ಥಭೂಮಿ ಭಾಗದ ನದಿಗಳು ಋತುಕಾಲಿಕವಾಗಿದ್ದು, ಇವು ಮಾನ್ಸೂನ್ ಕಾಲದ ಮಳೆಯಿಂದ ನಿಯಂತ್ರಿಸಲ್ಪಡುತ್ತದೆ.

ಪ್ರಸ್ಥಭೂಮಿಯಲ್ಲಿನ ಎಲ್ಲಾ ನದಿಗಳು ಒಂದೇ ರೀತಿಯಿಲ್ಲ. ಏಕೆಂದರೆ ಮಳೆಯ ಹಂಚಿಕೆಯಲ್ಲಿ ವ್ಯತ್ಯಾಸವಿದೆ. ಗಂಗಾ ನದಿಯಲ್ಲಿ ಜನವರಿಯಿಂದ ಜೂನ್ ಅವಧಿಯಲ್ಲಿ ಕನಿಷ್ಠ ಹರಿವನ್ನು, ಜುಲೈನಿಂದ ಆಗಸ್ಟ್ ತಿಂಗಳಿನಲ್ಲಿ ಹೆಚ್ಚಿನ ಹರಿವನ್ನು ಮತ್ತು ಸೆಪ್ಟೆಂಬರ್ ತಿಂಗಳಿನ ನಂತರ ನೀರಿನ ಹರಿವಿನ ಪ್ರಮಾಣದಲ್ಲಿ ತೀವ್ರ ಇಳಿತವನ್ನು ಕಾಣಬಹುದು. ಆದುದರಿಂದ ನದಿಗಳು ಮಾನ್ಸೂನ್ ಋತುಮಾನಕ್ಕೆ ಸಂಬಂಧಿಸಿದೆ. ಕಾವೇರಿ ನದಿಯು ಸಹ ಜುಲೈ ಮತ್ತು ಆಗಸ್ಟ್‌ನಲ್ಲಿ ಗರಿಷ್ಠ ಹರಿವನ್ನು, ಜನವರಿಯಿಂದ ಮೇ ತಿಂಗಳುಗಳ ನಡುವೆ ಕಡಿಮೆ ಹರಿವು ಹೊಂದಿರುತ್ತದೆ.

**ನದಿ ನೀರಿನ ವಿವಾದಗಳು:**

ನೀರು ಪ್ರಾಥಮಿಕ, ಸ್ವಾಭಾವಿಕವಾದ ಮತ್ತು ಅತಿ ಅಮೂಲ್ಯವಾದ ಸಂಪನ್ಮೂಲವಾಗಿದೆ. ಬಹುತೇಕ ನದಿಗಳು ಒಂದಕ್ಕಿಂತ ಹೆಚ್ಚು ರಾಜ್ಯಗಳ ಮೂಲಕ ಹರಿಯುತ್ತವೆ. ಪ್ರತಿ ರಾಜ್ಯವು ಗರಿಷ್ಠ ನೀರನ್ನು ಅಪೇಕ್ಷಿಸುತ್ತವೆ. ಈ ನದಿ ವಿವಾದಗಳು ಕೆಲವೊಮ್ಮೆ ರಾಷ್ಟ್ರಗಳ ಮಧ್ಯೆಯೂ ಇವೆ. ಭಾರತದ ಸಂವಿಧಾನದಲ್ಲಿ ನೀರು ರಾಜ್ಯದ ವಿಷಯವಾಗಿದೆ. 1956ರ ಜಲವಿವಾದ ಕಾಯಿದೆಯಡಿ ಕೇಂದ್ರವು ಸುಪ್ರೀಂಕೋರ್ಟಿನ ನ್ಯಾಯಾಧೀಶರ ಸಮಿತಿ ನೇಮಿಸಿದ್ದು, ರಾಜ್ಯಗಳಿಂದ ಕೋರಿಕೆ ಬಂದಾಗ ಅಂತರ್ ರಾಜ್ಯ ಜಲ ವಿವಾದವನ್ನು ಬಗೆಹರಿಸುವ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಈವರೆಗಿನ ಪ್ರಮುಖ ನದಿ ವಿವಾದಗಳು ಈ ಕೆಳಗಿನಂತಿವೆ.

1) ಕಾವೇರಿ ನದಿ: ಕರ್ನಾಟಕ, ತಿಮಿಳುನಾಡು, ಕೇರಳ, ಪಾಂಡಿಚೇರಿ ರಾಜ್ಯಗಳ ಮಧ್ಯೆ.
2) ತುಂಗಭದ್ರಾ: ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳ ಮಧ್ಯೆ.
3) ಕೃಷ್ಣಾ: ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳ ಮಧ್ಯೆ.
4) ಮಾಂಡೋವಿ: ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳ ಮಧ್ಯೆ.
5) ನರ್ಮದಾ: ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ರಾಜ್ಯಗಳ ಮಧ್ಯೆ.
6) ಯಮುನಾ: ಉತ್ತರ ಪ್ರದೇಶ, ಹರಿಯಾಣ, ರಾಜಸ್ಥಾನ, ಮಧ್ಯಪ್ರದೇಶ ರಾಜ್ಯಗಳ ಮಧ್ಯೆ.
7) ಗೋದಾವರಿ: ಮಹಾರಾಷ್ಟ್ರ, ಛತ್ತೀಸ್‌ಗರ್, ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳ ಮಧ್ಯೆ.
8) ರಾವಿ ಮತ್ತು ಬಿಯಾಸ್ ಜಲ ವಿವಾದ: ಪಂಜಾಬ್, ಹರಿಯಾಣ, ರಾಜಸ್ಥಾನ, ಜಮ್ಮು ಮತ್ತು ಕಾಶ್ಮೀರ ರಾಜ್ಯಗಳ ಮಧ್ಯೆ.
9) ಮುಲ್ಲಾ ಪೆರಿಯಾರ್: ಕೇರಳ ಮತ್ತು ತಮಿಳುನಾಡು ರಾಜ್ಯಗಳ ಮಧ್ಯೆ.

**ಅಂತರರಾಷ್ಟ್ರೀಯ ಜಲ ವಿವಾದಗಳಿಗೆ ಉದಾಹರಣೆಗಳು:**

1) ಭಾರತ ಮತ್ತು ಪಾಕಿಸ್ತಾನಗಳ ನಡುವೆ ಜೀಲಂ ಮತ್ತು ಚಿನಾಬ್ ಜಲ ವಿವಾದ.
2) ಭಾರತ ಮತ್ತು ಚೀನಾ – ಬ್ರಹ್ಮಪುತ್ರಾ.
3) ಭಾರತ ಮತ್ತು ಬಾಂಗ್ಲಾದೇಶ – ತೀಸ್ತಾ.
4) ಭಾರತ ಮತ್ತು ಬಾಂಗ್ಲಾ – ಬಾರಕ್.
5) ಭಾರತ ಮತ್ತು ಪಾಕಿಸ್ತಾನ – ಸಿಂಧೂ.

ಈ ನದಿ ವಿವಾದಗಳನ್ನು ತಹಬಂದಿಗೆ ತರಲು ಇರುವ ಮಾರ್ಗಗಳು ಈ ಕೆಳಗಿನಂತೆ ಇವೆ.

* ಎಲ್ಲಾ ಪ್ರಮುಖ ನದಿಗಳನ್ನು ರಾಷ್ಟ್ರೀಯ ಆಸ್ತಿ ಎಂದು ಘೋಷಣೆ ಮಾಡುವುದರ ಮೂಲಕ.
* ಕೇಂದ್ರ ಸರ್ಕಾರದ ಸಹಕಾರದಲ್ಲಿ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರ ಮೂಲಕ ಸಂಬಂಧಪಟ್ಟ ರಾಜ್ಯಗಳ ಜಲಾನಯನ ಪ್ರದೇಶದ ಅಭಿವೃದ್ದಿ ಮಾಡಬಹುದು.
* ಈ ದಿಕ್ಕಿನಲ್ಲಿ ಪ್ರತ್ಯೇಕ ಕಾರ್ಪೊರೇಷನ್‌ಗಳನ್ನು ಸ್ಥಾಪಿಸಿ, ನದಿ ತಿರುವು ಮತ್ತು ನದಿ ಜೋಡನಾ ಯೋಜನೆಗಳನ್ನು ಕೈಗೊಳ್ಳುವುದರ ಮೂಲಕ. ಮುಂತಾದ ಅನುಷ್ಠಾಣಯೋಗ್ಯ ಕ್ರಮಗಳನ್ನು ಕೈಗೊಳ್ಳುವುದು.

**ನದಿಗಳ ಅಂತರ್ ಜೋಡಣೆ:**

ಭಾರತದಲ್ಲಿನ ಮಳೆಯ ಹಂಚಿಕೆಯು ಹೆಚ್ಚಾಗಿ ಅಸಮಾನ ಮತ್ತು ಋತುಕಾಲಿಕಾಗಿದೆ. ಹಿಮಾಲಯದ ನದಿಗಳು ಜೀವಂತ ನದಿಗಳಾದರೆ, ಪ್ರಸ್ಥಭೂಮಿಯ ನದಿಗಳು ಋತುಕಾಲಿಕ ಲಕ್ಷಣದಿಂದ ಕೂಡಿದೆ. ಮಳೆಗಾಲದ ಅವಧಿಯಲ್ಲಿ ಬಹುತೇಕ ಪ್ರಮಾಣದ ನೀರು, ಪ್ರವಾಹಗಳ ಮೂಲಕ ಹರಿದು ಸಮುದ್ರಕ್ಕೆ ಸೇರಿದರೆ, ಇತರೆ ಋತುಮಾನದಲ್ಲಿ ನೀರಿನ ಅಭಾವವಿದೆ.

ನಮ್ಮ ದೇಶದಲ್ಲಿ ಒಂದು ಭಾಗದಲ್ಲಿ ಪ್ರವಾಹವಿದ್ದರೆ, ಮತ್ತೊಂದು ಭಾಗದಲ್ಲಿ ಕ್ಷಾಮವಿರುವುದು. ರಾಷ್ಟ್ರೀಯ ಜಲ ಜಾಲದ ಮೂಲಕ ಅಂತರ್ ನದಿಗಳ ಜೋಡಣೆಯನ್ನು ಮಾಡಿದ್ದೇ ಆದರೆ, ಪ್ರವಾಹ ಮತ್ತು ಬರಗಾಲದಂತಹ ಸಮಸ್ಯೆಗೆ ಕಡಿವಾಣ ಹಾಕಬಹುದಾಗಿದೆ.

ಭಾರತದ ನದಿಗಳು ಅಂತರ್ ಜೋಡಣೆಯು ಬೃಹತ್ ಪ್ರಮಾಣದ ಸಿವಿಲ್ ಇಂಜಿನೀಯರಿಂಗ್ ಯೋಜನೆಯಾಗಿದ್ದು, ಇದರ ಮೂಲಕ ಮುಖ್ಯ ನದಿ, ಕಾಲುವೆಗಳನ್ನು ಸಂಪರ್ಕಿಸುವುದಾಗಿದೆ. 1972ರಲ್ಲಿ ಭಾರತ ಸರ್ಕಾರದ ನೀರಾವರಿ ಇಲಾಖೆಯು 2640 ಕಿ.ಮೀ. ದೂರದ ಗಂಗಾ ಕಾವೇರಿ ನದಿ ಜೋಡಣೆಯ ಯೋಜನೆಯನ್ನು ಪ್ರಸ್ತಾಪಿಸಿತು. 1974ರಲ್ಲಿ 'ಮಾಲಾ ಕಾಲುವೆ' (ಗಾರ್ಲೆಂಡ್ ಕಾಲುವೆ) ಯೋಜನೆಯನ್ನು ಮಂಡಿಸಿದೆ. 1982ರಲ್ಲಿ ರಾಷ್ಟ್ರೀಯ ಜಲ ಅಭಿವೃದ್ಧಿ ಏಜೆನ್ಸಿ ಸ್ಥಾಪನೆಗೊಂಡು, ಸಾಧ್ಯವಾಗಬಹುದಾದ ನದಿ ಜೋಡಣೆಗಳ ಬಗ್ಗೆ ಸರ್ವೇಕ್ಷಣೆಯ ವರದಿ ಸಿದ್ಧಗೊಳಿಸಿತು.

ಅಂತರ್ ನದಿ ಜೋಡಣೆಯು ಎರಡು ಭಾಗಗಳನ್ನು ಒಳಗೊಂಡಿದೆ. ಉತ್ತರದ ಹಿಮಾಲಯದ ನದಿಗಳ ಅಭಿವೃದ್ಧಿ ಸಂಯೋಜನೆ ಮತ್ತು ದಕ್ಷಿಣದ ಪ್ರಸ್ಥಭೂಮಿ ನದಿ ಅಭಿವೃದ್ಧಿ ಸಂಯೋಜನೆಯಾಗಿದೆ.

ಉತ್ತರದ ಸಂಯೋಜನೆಯು ಭಾರತದಲ್ಲಿನ ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳುದ್ದಕ್ಕೂ ನಿರಂತರವಾದ ಅಣೆಕಟ್ಟುಗಳನ್ನು ಸಂಗ್ರಹಣಾ ಉದ್ದೇಶಗಳಿಗಾಗಿ ನಿರ್ಮಾಣ ಮಾಡಲಾಗಿದೆ. ಗಂಗಾ ನದಿಯ ಪೂರ್ವದ ಉಪನದಿಗಳಲ್ಲಿ ಅಧಿಕವಾಗಿರುವ ನೀರನ್ನು ಪಶ್ಚಿಮಕ್ಕೆ ವರ್ಗಾಯಿಸುವ ಸಲುವಾಗಿ ಕಾಲುವೆಗಳನ್ನು ನಿರ್ಮಿಸಲಾಗಿದೆ. ಬ್ರಹ್ಮಪುತ್ರಾ ಮತ್ತು ಅದರ ಉಪನದಿಗಳನ್ನು ಗಂಗಾ ನದಿಗೆ ಜೋಡಿಸುವಿಕೆ ಮತ್ತು ಗಂಗಾ ನದಿಯನ್ನು ಮಹಾನದಿಯೊಡನೆ ಸಂಪರ್ಕಿಸಬಹುದಾಗಿದೆ. ಈ ಯೋಜನೆಯ ಭಾಗವು ಹೆಚ್ಚುವರಿ ನೀರಾವರಿ ಮತ್ತು ಜಲ ವಿದ್ಯುಚ್ಛಕ್ತಿಯನ್ನು ಪೂರೈಸುತ್ತದೆ. ಕ್ರಮವಾಗಿ ಇದು ಗಂಗಾ ಬ್ರಹ್ಮಪುತ್ರಾ ನದಿ ಮೈದಾನಗಳಲ್ಲಿ ಹೆಚ್ಚುವರಿಯಾಗಿ ಪ್ರವಾಹವನ್ನು ನಿಯಂತ್ರಿಸುತ್ತದೆ.

ಈ ಯೋಜನೆಯ ಮುಖ್ಯ ಭಾಗವು ಭಾರತದ ಪೂರ್ವ ಭಾಗದಿಂದ ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಗೆ ನೀರನ್ನು ಪೂರೈಸುತ್ತದೆ.

ದಕ್ಷಿಣದ ಅಭಿವೃದ್ಧಿ ಯೋಜನೆಯು ನಾಲ್ಕು ಮುಖ್ಯ ಭಾಗಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಮಹಾನದಿ, ಗೋದಾವರಿ, ಕೃಷ್ಣಾ, ಮತ್ತು ಕಾವೇರಿ ನದಿಗಳನ್ನು ಕಾಲುವೆಗಳಿಂದ ಸಂಪರ್ಕಿಸುವುದು. ಈ ನದಿಗಳ ಪಾತ್ರದುದ್ದಕ್ಕೂ ಹೆಚ್ಚುವರಿ ನೀರು ಸಂಗ್ರಹಣಾ ಅಣೆಕಟ್ಟುಗಳನ್ನು ನಿರ್ಮಾಣ ಮಾಡುವುದು. ಇದರ ಮುಖ್ಯ ಉದ್ದೇಶವೆಂದರೆ ಮಹಾನದಿ ಮತ್ತು ಗೋದಾವರಿ ನದಿಗಳಲ್ಲಿ ಹೆಚ್ಚಾದ ನೀರನ್ನು ದಕ್ಷಿಣ ಭಾರತದ ನದಿಗಳಿಗೆ ಪೂರೈಸುವಿಕೆ ಕೆನ್ ಮತ್ತು ಚಂಬಲ್ ನದಿಗಳನ್ನು ಜೋಡಿಸುವುದರ ಮೂಲಕ ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳಿಗೆ ಉತ್ತಮ ನೀರಿನ ಸೌಲಭ್ಯವನ್ನು ಒದಗಿಸುವುದು.

ಪಶ್ಚಿಮ ಘಟ್ಟಗಳುದ್ದಕ್ಕೂ ಹರಿಯುವ ಅಸಂಖ್ಯಾತ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು ತಮ್ಮಲ್ಲಿನ ನೀರನ್ನು ಅರಬ್ಬೀ ಸಮುದ್ರಕ್ಕೆ ಬಿಡುತ್ತವೆ. ಇವುಗಳಲ್ಲಿ ಸಾಧ್ಯವಾದಷ್ಟನ್ನು ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ಉತ್ಪಾದನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದು.

ಸಂಭವನೀಯ ಪ್ರಮುಖ ಅಂತರ್ ನದಿ ಜೋಡಣಾ ಯೋಜನೆಗಳೆಂದರೆ,

1) ಗಂಗಾ, ಕಾವೇರಿ ಸಂಪರ್ಕ ಕಾಲುವೆ, ಸೋನ್, ನರ್ಮದಾ, ತಪತಿ, ಗೋದಾವರಿ ಮತ್ತು ಪೆನ್ನಾರ್ ನದಿ ಬಯಲುಗಳು.
2) ಬಾಂಗ್ಲಾ ದೇಶದ ಮೂಲಕ ಹಾದು ಹೋಗುವ ಬ್ರಹ್ಮಪುತ್ರಾ, ಗಂಗಾ ಸಂಪರ್ಕ ಕಾಲುವೆ.
3) ಗುಜರಾತ್ ಮತ್ತು ರಾಜಸ್ತಾನಗಳ ಮೂಲಕ ಹಾದು ಹೋಗುವ ನರ್ಮದಾ ಕಾಲುವೆ.
4) ಪಶ್ಚಿಮ ಘಟ್ಟದ ನದಿಗಳಿಂದ ಪೂರ್ವಕ್ಕಿರುವ ನದಿಗಳೊಡನೆ ಸಂಪರ್ಕಿಸುವ ಕಾಲುವೆಗಳು.
5) ಚಂಬಲ್‌ನಿಂದ ಕೇಂದ್ರೀಯ ರಾಜಸ್ತಾನದವರೆಗಿನ ಕಾಲುವೆ.

## ಮಣ್ಣು

ಭೂಮಿಯ ಮೇಲೆ ಕಂಡುಬರುವ ಸೂಕ್ಷ್ಮ ಅಥವಾ ಅತಿ ಸೂಕ್ಷ್ಮ ಶಿಲಾಕಣಗಳ ಸಂಯೋಜನೆಯನ್ನು ಮಣ್ಣು ಎನ್ನುತ್ತೇವೆ. ವಾಯುಗುಣದ ಪ್ರಭಾವದಿಂದ ಶಿಲೆಗಳು ಸ್ವಾಭಾವಿಕವಾಗಿ ಶಿಥಿಲೀಕರಣಗೊಂಡಿದ್ದು ಮಣ್ಣು ಉಂಟಾಗಿದೆ. ಮಣ್ಣು ನೈಸರ್ಗಿಕ ಸಂಪನ್ಮೂಲವಾಗಿದ್ದು, ಸಸ್ಯಗಳಿಗೆ ಅಗತ್ಯವಾದ ಪೋಷಕಾಂಶಗಳು ಮತ್ತು ನೀರನ್ನು ಒದಗಿಸುತ್ತದೆ. ಮಣ್ಣಿನ ವೈಜ್ಞಾನಿಕ ಅಧ್ಯಯನವನ್ನು ಪೆಡೊಲೊಜಿ ಎನ್ನುವರು.

ಭಾರತದ ಮಣ್ಣಿನ ಸಂಶೋಧನಾ ಸಂಸ್ಥೆಯು ಮಧ್ಯಪ್ರದೇಶ ರಾಜ್ಯದ ಭೂಪಾಲ್ ನಗರದಲ್ಲಿ ಸ್ಥಾಪನೆಗೊಂಡಿದೆ. ಭಾರತವು ವಿಶಾಲವಾದ ರಾಷ್ಟ್ರವಾಗಿದ್ದು, ಅದರ ಭೂ ಸ್ವರೂಪ ಮತ್ತು ವಾಯುಗುಣ ಪರಿಸ್ಥಿತಿಗಳಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಹೊಂದಿವೆ. ದೇಶದ ಭೂ ವಾಯುಗುಣ ಪರಿಸ್ಥಿತಿಗಳು ಮಣ್ಣುಗಳ ಸಾಮಾನ್ಯ ಹಂಚಿಕೆ, ಅದರ ಸ್ವರೂಪ, ಸಂಯೋಜನೆ, ಬಣ್ಣ, ಮೌಲ್ಯ ಮತ್ತು ವ್ಯಾಪಕತೆಗಳ ಮೇಲೆ ಪ್ರಭಾವ ಬೀರುತ್ತದೆ. ಭಾರತದಲ್ಲಿ ಕಂಡುಬರುವ ಮಣ್ಣಿನ ವಿಧಗಳು ಮೆಕ್ಕಲು ಮಣ್ಣು, ಕಪ್ಪು ಮಣ್ಣು, ಕೆಂಪು ಮಣ್ಣು, ಜಂಬಿಟ್ಟಿಗೆ ಮಣ್ಣು, ಮರುಭೂಮಿ ಮಣ್ಣು, ಪರ್ವತ ಮಣ್ಣು.

### 1) ಮೆಕ್ಕಲು ಮಣ್ಣು:

ನದಿಗಳ ಸಂಚಯನ ಕಾರ್ಯದಿಂದ ಮೆಕ್ಕಲು ಮಣ್ಣು ಉಂಟಾಗುತ್ತದೆ. ಮುಖ್ಯವಾಗಿ ಪ್ರವಾಹ ಮೈದಾನಗಳು ಮತ್ತು ಮುಖಜ ಭೂಮಿಗಳಲ್ಲಿ ಈ ಮಣ್ಣನ್ನು ಕಾಣಬಹುದು. ಮುಖ್ಯವಾಗಿ ಗಂಗಾ, ಬ್ರಹ್ಮಪುತ್ರಾ ಮತ್ತು ಸಿಂಧೂ ನದಿಗಳ ಮುಖಜ ಭೂಮಿ ಮತ್ತು ಮೈದಾನಗಳಲ್ಲಿ ಹಂಚಿಕೆಯಾಗಿದೆ.

ಉತ್ತರ ಪ್ರದೇಶ ರಾಜ್ಯವು ಅತ್ಯಧಿಕ ಮೆಕ್ಕಲು ಮಣ್ಣಿನ ಭೂಪ್ರದೇಶ ಹೊಂದಿದೆ. ಈ ಮಣ್ಣನ್ನು ಪೂರ್ವಾಭಿಮುಖವಾಗಿ ಹರಿಯುವ ನದಿ ಮುಖಜ ಭೂಮಿಯಲ್ಲಿಯೂ ಸಹ ಕಾಣಬಹುದು. ಮೆಕ್ಕಲು ಮಣ್ಣಿನಲ್ಲಿರುವ ವಿಧಗಳು ತೆರಾಯಿ ಜೌಗು ಮಣ್ಣು, ಖಾದರ್ ಹೊಸ ಮೆಕ್ಕಲು ಮಣ್ಣು ಮತ್ತು ಭಾಂಗರ್ ಹಳೆಯ ಮೆಕ್ಕಲು ಮಣ್ಣು.

ಮೆಕ್ಕಲು ಮಣ್ಣು ಗೋಧಿ, ಕಬ್ಬು, ಭತ್ತ, ಮೆಕ್ಕೇಜೋಳ, ದ್ವಿದಳ ಧಾನ್ಯ, ಮತ್ತಿತರ ಬೆಳೆಗಳ ಬೇಸಾಯಕ್ಕೆ ಹೆಚ್ಚು ಸೂಕ್ತವಾಗಿದೆ.

### 2) ಕಪ್ಪು ಮಣ್ಣು:

ಭಾರತದ ಪರ್ಯಾಯಪೀಠ ಭೂಮಿಯಲ್ಲಿರುವ ಅತಿ ಪ್ರಮುಖವಾದ ಮಣ್ಣು ಕಪ್ಪು ಮಣ್ಣು. ದಕ್ಷಿಣ ಪ್ರಸ್ಥಭೂಮಿ ಪ್ರದೇಶವು ಅತ್ಯಧಿಕ ಭೂಭಾಗದಲ್ಲಿ ಕಪ್ಪು ಮಣ್ಣಿನ ಹಂಚಿಕೆಯನ್ನು ಹೊಂದಿದೆ. ಇದನ್ನು 'ಹತ್ತಿ ಮಣ್ಣು' ಅಥವಾ 'ರೇಗಾರ್ ಮಣ್ಣು' ಎಂತಲೂ ಕರೆಯುತ್ತಾರೆ. ಈ ಮಣ್ಣು ಕಪ್ಪು ಶಿಲೆ (ಬಸಾಲ್ಟ್)ಯ ಶಿಥಿಲೀಕರಣದಿಂದ ನಿರ್ಮಾಣವಾಗಿದೆ.

ಈ ಮಣ್ಣು ಬಹಳ ದೀರ್ಘ ಅವಧಿಯವರೆಗೆ ನೀರನ್ನು ತನ್ನಲ್ಲಿ ಹಿಡಿದಿಟ್ಟುಕೊಂಡಿರುತ್ತದೆಯಲ್ಲದೇ, ಶುಷ್ಕ ಅವಧಿಯಲ್ಲಿ ಇದು ಬಹಳ ಕಠಿಣವಾಗುತ್ತದೆ. ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಅಧಿಕ ಭೂಭಾಗವು ಕಪ್ಪು ಮಣ್ಣನ್ನು ಹೊಂದಿವೆ. ಮಧ್ಯಪ್ರದೇಶ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡಿನಲ್ಲಿಯೂ ಈ ಮಣ್ಣಿದೆ. ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳು ಹತ್ತಿ, ತಂಬಾಕು, ಹುಳಿ ಹಣ್ಣು, ಕಬ್ಬು, ದ್ವಿದಳ ಧಾನ್ಯ, ಸೂರ್ಯಕಾಂತಿ ಇತ್ಯಾದಿ.

### 3. ಕೆಂಪು ಮಣ್ಣು:

ಗ್ರಾನೈಟ್ ಶಿಲೆಗಳ ಶಿಥಿಲೀಕರಣ ಹೊಂದುವುದರಿಂದ ನಿರ್ಮಾಣವಾಗುವ ಮಣ್ಣು ಇದಾಗಿದೆ. ಈ ಮಣ್ಣು ಕೆಂಪು ಬಣ್ಣದಿಂದ ಕೂಡಿದ್ದು, ಸಾಕಷ್ಟು ಕಬ್ಬಿಣಾಂಶವನ್ನು ಹೊಂದಿದೆ. ಇದು ಮೇಲೆ ಕೆಂಪಾಗಿದ್ದರೂ, ಆಳದಲ್ಲಿ ಹಳದಿ ಬಣ್ಣದಿಂದ ಕೂಡಿರುತ್ತದೆ. ಪರ್ಯಾಯ ಪ್ರದೇಶದ ಹೆಚ್ಚು ಭೂಭಾಗವು ಕೆಂಪು ಮಣ್ಣಿನಿಂದ ಕೂಡಿವೆ. ತಮಿಳುನಾಡಿನಲ್ಲಿ ಅತ್ಯಧಿಕ ಕೆಂಪುಮಣ್ಣಿನ ಹಂಚಿಕೆ ಇದೆ. ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಛತ್ತೀಸ್‌ಘಡ್, ಝಾರ್ಖಂಡ್ ಮತ್ತು ಒಡಿಸ್ಸಾದಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳು ಭತ್ತ, ನೆಲೆಗಡಲೆ, ಎಣ್ಣೆ ಬೀಜ, ರಾಗಿ, ತಂಬಾಕು, ಆಲೂಗಡ್ಡೆ, ಜೋಳ, ತೃಣಧಾನ್ಯ ಮುಂತಾದವುಗಳು.

### 4) ಜಂಬಿಟ್ಟಿಗೆ ಮಣ್ಣು:

ಭಾರತದ ಉಷ್ಣ ಮತ್ತು ಆರ್ದ್ರಯುತ ಉಷ್ಣವಲಯ ಪ್ರದೇಶಗಳು ಜಂಬಿಟ್ಟಿಗೆ ಮಣ್ಣಿನಿಂದ ಕೂಡಿವೆ. ಬೆಟ್ಟ ಪರ್ವತ ಸರಣಿಗಳಲ್ಲಿ ಕಂಡುಬರುವ ಶಿಲೆಗಳು ಚೂರಾಗುವ ಮತ್ತು ವಿಭಜನೆಗೊಳ್ಳುವುದರಿಂದ ಈ ಮಣ್ಣು ಉಂಟಾಗುತ್ತದೆ. ಪಶ್ಚಿಮ ಘಟ್ಟ, ಪೂರ್ವ ಘಟ್ಟ, ಭಾರತದ ಈಶಾನ್ಯ ಬೆಟ್ಟಗಳಲ್ಲಿ ಕಾಣಬಹುದು. ಈ ಮಣ್ಣಿನಲ್ಲಿ ಬೆಳೆಯಬಹುದಾದ ಪ್ರಮುಖ ಬೆಳೆಗಳು ರಬ್ಬರ್, ಗೋಡಂಬಿ, ಅಡಿಕೆ ಮತ್ತು ಇತರೆ ತೋಟಗಾರಿಕಾ ಬೆಳೆಗಳು.

### 5) ಮರುಭೂಮಿ ಮಣ್ಣು:

ಶುಷ್ಕ ವಲಯದ ಮಣ್ಣು ಎಂದು ಕರೆಯಲಾಗುವ ಈ ಮರುಭೂಮಿ ಮಣ್ಣನ್ನು ಭಾರತದ ಪಶ್ಚಿಮ ಮತ್ತು ವಾಯುವ್ಯದ ಮರುಭೂಮಿ ಮತ್ತು ಅರೆ ಮರುಭೂಮಿ ಪ್ರದೇಶಗಳಲ್ಲಿ ಕಾಣಬಹುದು.

ಈ ಮಣ್ಣು ಕಡಿಮೆ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಮತ್ತು ಕಡಿಮೆ ಜೈವಿಕ ಸಂಯೋಜನೆಯಿಂದ ಕೂಡಿದೆ. ಇದು ಕೃಷಿ ಬೆಳೆಗೆ ಸೂಕ್ತವಲ್ಲದ ಮಣ್ಣಾಗಿದೆ. ರಾಜಸ್ಥಾನ, ಗುಜರಾತ್, ಹರಿಯಾಣಗಳಲ್ಲಿ ಈ ಮಣ್ಣನ್ನು ಕಾಣಬಹುದಾಗಿದೆ. ನೀರಾವರಿ ಪೂರೈಕೆಯೊಂದಿಗೆ ಬಾಜ್ರಾ, ದ್ವಿದಳ ಧಾನ್ಯ, ಗಾರ್‌ನ್ನು ಬೆಳೆಯಲಾಗುತ್ತದೆ.

### 6) ಪರ್ವತ ಮಣ್ಣು:

ಹಿಮಾಲಯ ಪರ್ವತ ಕಣಿವೆಗಳು ಮತ್ತು ಬೆಟ್ಟದ ಇಳಿಜಾರುಗಳು ಪರ್ವತ ಅಥವಾ ಅರಣ್ಯ ಮಣ್ಣುಗಳಿಂದ ಕೂಡಿದೆ. ಜಮ್ಮು ಮತ್ತು ಕಾಶ್ಮೀರ, ಉತ್ತರಖಂಡ, ಹಿಮಾಚಲ ಪ್ರದೇಶ ಮುಂತಾದವುಗಳಲ್ಲಿ ಈ ಮಣ್ಣು ಕಂಡುಬರುತ್ತದೆ. ರಾಜ್ಯಗಳ ಪರ್ವತಗಳ ಇಳಿಜಾರುಗಳಲ್ಲಿಯೂ ಇದನ್ನು ಕಾಣಬಹುದು. ಇಲ್ಲಿಯ ಬೆಳೆಗಳು ಚಹಾ, ಬಾದಾಮಿ, ಕೇಸರಿ, ವಾಲ್‌ನಟ್.

ಈ ಆರು ಮಣ್ಣಿನ ವಿಧಗಳಲ್ಲದೇ ಕ್ಷಾರೀಯ, ಜೌಗು ಮಣ್ಣುಗಳ ವಿವಿಧ ಭಾಗಗಳಲ್ಲಿ ಕಾಣಬಹುದು.

### ಮಣ್ಣಿನ ಸವಕಳಿ:

ಭೂ ಮೇಲ್ಪದರದ ಮಣ್ಣು ಹಲವಾರು ಸ್ವಾಭಾವಿಕ ಕರ್ತೃಗಳು ಮತ್ತು ಮಾನವ ನಿರ್ಮಿತ ಅಂಶಗಳಿಂದ ಕೊಚ್ಚಲ್ಪಡುವ ಅಥವಾ ನಾಶವಾಗುವಿಕೆಯನ್ನು ಮಣ್ಣಿನ ಸವಕಳಿ ಎಂದು ಕರೆಯಲಾಗುತ್ತದೆ. ಅಧಿಕ ಉಷ್ಣಾಂಶ, ಮಳೆ, ಮಾರುತ, ಮತ್ತು ಅಲೆಗಳು ಸವೆತವನ್ನುಂಟು ಮಾಡುವ ನೈಸರ್ಗಿಕ ಕರ್ತೃಗಳು.

ಅರಣ್ಯನಾಶ, ಸಾಕು ಪ್ರಾಣಿಗಳನ್ನು ಹೆಚ್ಚು ಮೇಯಿಸುವಿಕೆ, ಸ್ಥಳಾಂತರ ಬೇಸಾಯ ಪದ್ದತಿ, ಅನುಚಿತ ಮತ್ತು ಅವೈಜ್ಞಾನಿಕ ಕೃಷಿ ಪದ್ದತಿಗಳಂತಹ ಮಾನವ ಚಟುವಟಿಕೆಗಳು ಮಣ್ಣಿನ ಸವೆತಕ್ಕೆ ಕಾರಣಗಳಾಗಿವೆ.

ವಾಯುಗುಣ ಮತ್ತು ಮಾನವ ನಿರ್ಮಿತ ಅಂಶಗಳ ಆಧಾರದ ಮೇಲೆ ಮಣ್ಣಿನ ಸವೆತದ ಪ್ರಮಾಣವು ಪ್ರದೇಶದಿಂದ ಪ್ರದೇಶಕ್ಕೆ ಹಾಗೂ ಕರ್ತೃವಿನಿಂದ ಕರ್ತೃವಿಗೆ ವ್ಯತ್ಯಾಸಗೊಳ್ಳುತ್ತಾ ಹೋಗುತ್ತದೆ. ಮಳೆ ಮತ್ತು ಉಷ್ಣಾಂಶ ಬೆಟ್ಟ ಪ್ರದೇಶಗಳಲ್ಲಿ ಅಧಿಕ ಮಣ್ಣಿನ ಸವೆತಕ್ಕೆ ಕಾರಣಗಳಾಗಿವೆ.

ಕರಾವಳಿ ಪ್ರದೇಶಗಳಲ್ಲಿ ಸಮುದ್ರದ ಅಲೆಗಳು ಮತ್ತು ಮರುಭೂಮಿಯಲ್ಲಿ ಮಾರುತಗಳು ಮಣ್ಣಿನ ಸವೆತ ಪ್ರಕ್ರಿಯೆಯ ಪ್ರಧಾನ ಅಂಶಗಳು. ಮಣ್ಣಿನ ಸವೆತಕ್ಕೆ ಒಳಗಾದ ಪ್ರಮುಖ ಪ್ರದೇಶಗಳು ಜಮ್ಮು ಮತ್ತು ಕಾಶ್ಮೀರ, ಮಧ್ಯಪ್ರದೇಶ, ಉತ್ತರಖಂಡ, ಪಶ್ಚಿಮ ಬಂಗಾಳ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ. ಒಂದು ಅಂದಾಜಿನ ಪ್ರಕಾರ ದೇಶದ ಒಟ್ಟು ಭೂ ಪ್ರದೇಶದ 40%ರಷ್ಟು ಪ್ರದೇಶವು ಮಣ್ಣಿನ ಸವಕಳಿಯಂತಹ ಪ್ರಭಾವಕ್ಕೆ ಒಳಗಾಗಿದೆ.

### ಮಣ್ಣಿನ ಸವಕಳಿಯಿಂದಾಗುವ ಪರಿಣಾಮಗಳು:

* ಫಲವತ್ತತೆಯು ಕಡಿಮೆಯಾಗುವಿಕೆ.
* ಕೃಷಿ ಭೂಮಿಯಲ್ಲಿ ಫಲವತ್ತತೆ ಇಳಿಕೆ.

* ಅಧಿಕ ಪ್ರವಾಹ.
* ಹೂಳು (ಕೆಸರು).
* ನೀರು ಇಂಗುವಿಕೆ ಕಡಿಮೆ.

**ಮಣ್ಣಿನ ಸಂರಕ್ಷಣೆ:**

ಮಣ್ಣಿನ ಮೇಲ್ಪದರ ಮಣ್ಣಿನ ಸಂರಕ್ಷಣೆ ಮತ್ತು ನಿರ್ವಹಣೆಗೆ ತೆಗೆದುಕೊಳ್ಳಬಹುದಾದ ಮುಂಜಾಗ್ರತ ಕ್ರಮಗಳಲ್ಲಿ ಅಧಿಕ ರಾಸಾಯನಿಕ ವಸ್ತುಗಳ ಬಳಕೆ, ಕ್ಷಾರೀಯತೆ, ಲವಣತೆ ಮತ್ತು ಇತರೆ ರಾಸಾಯನಿಕ ಮಿಶ್ರಣ ವಸ್ತುಗಳನ್ನು ನಿಯಂತ್ರಿಸಬೇಕಾಗಿದೆ. ಮಣ್ಣಿನ ಸ್ಥರದ ಸವೆತವನ್ನು ನಿಯಂತ್ರಿಸುವುದು ಮತ್ತು ಮಣ್ಣಿನ ಫಲವತ್ತತೆಯನ್ನು ಕಾಪಾಡುವ ಕ್ರಮವೇ ಮಣ್ಣಿನ ಸಂರಕ್ಷಣೆ.

**ಮಣ್ಣಿನ ಸಂರಕ್ಷಣೆಯ ಕಾರ್ಯದಲ್ಲಿ ಅನುಸರಿಸಬೇಕಾಗಿರುವ ಪ್ರಮುಖ ಕ್ರಮಗಳು:**

1) ಅರಣ್ಯ ಅಭಿವೃದ್ದಿ
2) ಸಾಕು ಪ್ರಾಣಿಗಳನ್ನು ಅತಿಯಾಗಿ ಮೇಯಿಸದಿರುವಿಕೆ
3) ಇಳಿಜಾರಿಗೆ ಅಡ್ಡಲಾಗಿ ಉಳಿಮೆ ಮಾಡುವುದು
4) ಹಂತ ಬೇಸಾಯ ಪದ್ದತಿ ಅನುಕರಣೆ
5) ಇಳಿಜಾರಿಗೆ ಬದು ನಿರ್ಮಾಣ
6) ಅಡ್ಡಗಟ್ಟೆಗಳ ನಿರ್ಮಾಣ
7) ಬೆಳೆಗಳ ಆವರ್ತಕ್ರಮ
8) ಸ್ಥಳಾಂತರ ಬೇಸಾಯದ ನಿಯಂತ್ರಣ
9) ಪಟ್ಟಿ ಬೇಸಾಯ ಕ್ರಮ ಅಳವಡಿಕೆ
10) ಹೊದಿಸುವಿಕೆ ಪದ್ದತಿ
11) ಪ್ರವಾಹ ನಿಯಂತ್ರಣ
12) ಬಂಜರು ಮತ್ತು ಬರಡು ಪ್ರದೇಶಗಳನ್ನು ಪುನರ್ ಫಲವತ್ತುಗೊಳಿಸುವಿಕೆ
13) ನೀರನ್ನು ಕ್ರಮಬದ್ದವಾಗಿ ಬಳಸುವಿಕೆ
14) ಸಾಕ್ಷರತೆ, ಅರಿವು, ಶಿಕ್ಷಣ.

## ಅರಣ್ಯ (ಸ್ವಾಭಾವಿಕ ಸಸ್ಯವರ್ಗ)

ಅರಣ್ಯಗಳು ನೈಸರ್ಗಿಕವಾಗಿ ಬೆಳೆದಿದ್ದು, ದೀರ್ಘ ಅವಧಿಯವರೆಗೆ ನಾಶ ಹೊಂದದೇ ಇದ್ದರೆ ಅವುಗಳನ್ನು ಸ್ವಾಭಾವಿಕ ಸಸ್ಯವರ್ಗಗಳೆಂದು ಕರೆಯುವರು. ಭಾರತದ ಅರಣ್ಯಗಳು ಅಸಮನಾಗಿ ಹಂಚಿಕೆಯಾಗಿವೆ. ಪ್ರಪಂಚದ ಅಂದಾಜಿನ ಪ್ರಕಾರ ಭಾರತ 22.50%ರಷ್ಟು ಮಾತ್ರ ಅರಣ್ಯ ಕ್ಷೇತ್ರವನ್ನು ಹೊಂದಿದ್ದು, ಇದು ಪ್ರಪಂಚದ ಸರಾಸರಿ 34.5%ಕ್ಕಿಂತ ಕಡಿಮೆ ಇದೆ.

ಅರಣ್ಯ ಮತ್ತು ಅವುಗಳ ಸಂಪನ್ಮೂಲಗಳು ಮಾನವನಿಗೆ ಅನೇಕ ರೀತಿಯಲ್ಲಿ ಉಪಯುಕ್ತವಾಗಿವೆ. ಆದ್ದರಿಂದ ಇದನ್ನು 'ಹಸಿರು ಚಿನ್ನ' ಎನ್ನುವರು. ಭಾರತದ ಪರ್ಯಾಯ ಪೀಠ ಭೂಮಿಯು ಅತ್ಯಧಿಕ ಅರಣ್ಯವನ್ನು ಹೊಂದಿದ್ದು, ಇದು ದೇಶದ ಒಟ್ಟು ಅರಣ್ಯ ಪ್ರದೇಶದ 57%ರಷ್ಟು ಹೊಂದಿದೆ.

ಹಿಮಾಲಯ ಪರ್ವತ ಪ್ರದೇಶವು ದೇಶದ 2ನೇ ಅಧಿಕ ಅರಣ್ಯ ಹೊಂದಿರುವ ಪ್ರದೇಶವಾಗಿದ್ದು 18%ರಷ್ಟನ್ನು ಹೊಂದಿದೆ. ಸಿಂಧೂ, ಗಂಗಾ ಮೈದಾನ ಮತ್ತು ಮರುಭೂಮಿ ಪ್ರದೇಶವು ಅತಿ ಕಡಿಮೆ ಅರಣ್ಯ ಕ್ಷೇತ್ರವನ್ನು ಹೊಂದಿದೆ. ಮಧ್ಯಪ್ರದೇಶ ಅತಿ ಹೆಚ್ಚು. ಹರಿಯಾಣ ಅತಿ ಕಡಿಮೆ ಅರಣ್ಯ ಹೊಂದಿದೆ.

**ಅರಣ್ಯಗಳ ವಿಧಗಳು:**

ಭಾರತದ ಅರಣ್ಯಗಳನ್ನು ಆಡಳಿತ ಮತ್ತು ಕಾನೂನು ಅಂಶಗಳನ್ನಾಧರಿಸಿ ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

1) ಕಾಯ್ದಿರಿಸಿದ ಅರಣ್ಯಗಳು

2) ಸಂರಕ್ಷಿತ ಅರಣ್ಯಗಳು

3) ಅವಿಭಾಜಿತ ಅರಣ್ಯಗಳು

ಇದೂ ಅಲ್ಲದೆ ಭಾರತದ ಅರಣ್ಯಗಳನ್ನು ಭೂ–ವಾಯುಗುಣ ಅಂಶಗಳನ್ನಾಧರಿಸಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.

1) ಸದಾ ಹಸಿರಾಗಿ / ನಿತ್ಯಹರಿದ್ವರ್ಣ ಅರಣ್ಯಗಳು

2) ಎಲೆ ಉದುರುವ / ಮಾನ್ಸೂನ್ ಅರಣ್ಯಗಳು

3) ಕೋನಿಫೆರಸ್ (ಪರ್ವತ) ಅರಣ್ಯಗಳು

4) ಮರುಭೂಮಿ / ಶುಷ್ಕ ಅರಣ್ಯಗಳು

5) ಮ್ಯಾಂಗ್ರೋವ್ ಅರಣ್ಯಗಳು

**1) ನಿತ್ಯಹರಿದ್ವರ್ಣ ಅರಣ್ಯಗಳು:**

ಈ ಅರಣ್ಯಗಳು ಅತಿ ಹೆಚ್ಚು ಮಳೆ ಬೀಳುವ, ಮತ್ತು ಹೆಚ್ಚು ಉಷ್ಣತೆ (27 ಡಿಗ್ರಿಗಿಂತ ಹೆಚ್ಚು) ಹೊಂದಿರುವ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳು ಕೊಡೆಯಾಕಾರದ ಅತ್ಯಂತ ದಟ್ಟವಾದ ಮರಗಳಾಗಿವೆ. ಸದಾ ಹಸಿರಾಗಿರುವ ಇವು ಸಮಭಾಜಕ ವೃತ್ತದ ಸಮೀಪ ಕಂಡು ಬರುವಂತೆ ಭಾರತದಲ್ಲಿ ಈಶಾನ್ಯ ಭಾರತ, ಪಶ್ಚಿಮ ಘಟ್ಟಗಳು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಅಸ್ಸಾಂನ ಕೆಲ ಭಾಗಗಳು ಮತ್ತು ಹಿಮಾಲಯದ ಪಾದ ಬೆಟ್ಟಗಳ ಕೆಲ ಪ್ರದೇಶಗಳಲ್ಲಿ ಕಂಡು ಬರುತ್ತವೆ.

**2) ಎಲೆ ಉದುರಿಸುವ ಅರಣ್ಯಗಳು:**

ಈ ಅರಣ್ಯಗಳ ಹಂಚಿಕೆಯು ಮಳೆಯ ಹಂಚಿಕೆಯನ್ನಾಧರಿಸಿದೆ. ಅರಣ್ಯಗಳಲ್ಲಿರುವ ಮರಗಳು ಋತುಮಾನಕ್ಕೆ ಅನುಗುಣವಾಗಿ ಎಲೆಗಳನ್ನು ಉದುರಿಸುತ್ತವೆ. ಭಾರತದಲ್ಲಿ ಇವು ಮೈದಾನದಿಂದ ಹಿಡಿದು ಬೆಟ್ಟ ಪ್ರದೇಶಗಳಲ್ಲೂ ಹಂಚಿಕೆಯಾಗಿರುತ್ತವೆ. ಈ ಕಾಡುಗಳಲ್ಲಿ ಕಂಡು ಬರುವ ಪ್ರಮುಖ ಪ್ರಾಣಿಗಳು ಹುಲಿ, ಏಷ್ಯಾದ ಆನೆ, ಕಾಡುಕೋಣ, ಗೌರ್. ಈ ಕಾಡುಗಳಲ್ಲಿ ಎರಡು ವಿಧಗಳಿವೆ. ಅವುಗಳು,

**1. ಅರ್ಧ ತೇವಯುತ ಎಲೆ ಉದುರಿಸುವ ಅರಣ್ಯಗಳು (ಮಾನ್ಸೂನ್ ಅರಣ್ಯಗಳು):**

100ರಿಂದ 200 ಸೆ.ಮೀ. ಮಳೆ 25–30 ಡಿಗ್ರಿ ತಾಪವಿರುತ್ತದೆ. ಈ ಮರಗಳು ವಸಂತಕಾಲ ಮತ್ತು ಬೇಸಿಗೆಯ ಆರಂಭದ ಕಾಲಾವಧಿಯಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ. ಇವುಗಳನ್ನು ಭಾರತದಲ್ಲಿ ಪಶ್ಚಿಮ ಘಟ್ಟಗಳು, ಪೂರ್ವ ಇಳಿಜಾರು, ಛೋಟಾ ನಾಗಪುರ ಪ್ರಸ್ಥಭೂಮಿ, ಶಿವಾಲಿಕ್ ಬೆಟ್ಟಗಳಲ್ಲಿ ಕಾಣಬಹುದಾಗಿದೆ. ಈ ಕಾಡುಗಳಲ್ಲಿ ಕಂಡುಬರುವ ಪ್ರಮುಖ ಮರಗಳು ತೇಗ, ಶ್ರೀಗಂಧ, ಸಾಲ್, ಮಾವು, ಬಿದಿರು, ದಿಯೋದರ, ಎಬೋನಿ, ಹಲಸು, ಆಲ.

**2. ಶುಷ್ಕ ಎಲೆ ಉದುರಿಸುವ ಅರಣ್ಯಗಳು ಅಥವಾ ಹುಲ್ಲುಗಾವಲುಗಳು:**

50–150 ಸೆ.ಮೀ. ಮಳೆ ಮತ್ತು 25–30 ಡಿಗ್ರಿ ತಾಪಮಾನದ ಪ್ರದೇಶಗಳಲ್ಲಿ ಈ ಕಾಡುಗಳು ಕಂಡುಬರುತ್ತವೆ. ಭಾರತದಲ್ಲಿ ಇವು ದಖನ್ ಪ್ರಸ್ಥಭೂಮಿಯ ಕೇಂದ್ರಭಾಗ ರಾಜಸ್ತಾನ ಆಗ್ನೇಯ ಭಾಗ, ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶ ಹಾಗೂ ಮಧ್ಯಪ್ರದೇಶದ ಕೆಲಭಾಗಗಳಲ್ಲಿ ಹಂಚಿಕೆಯಾಗಿವೆ. ಅಕೇಶಿಯಾ ಮತ್ತು ಬಿದಿರುಗಳು ಈ ಅರಣ್ಯದಲ್ಲಿವೆ. ಕುಬ್ಜ ಎಲೆ ಉದುರಿಸುವ ಮರಗಳು ಮತ್ತು ಉದ್ದವಾದ ಹುಲ್ಲುಗಳು ಈ ಪ್ರದೇಶಗಳಲ್ಲಿ ಬೆಳೆದಿರುತ್ತವೆ. ಈ ಅರಣ್ಯಗಳ ಬಹು ಪ್ರದೇಶಗಳನ್ನು ಕೃಷಿಗೆ ಬಳಸಲಾಗಿದೆ.

## 3) ಪರ್ವತ / ಕೋನಿಫರಸ್ ಅರಣ್ಯಗಳು:

ಕಡಿಮೆ ಉಷ್ಣತೆ ಹೊಂದಿರುವ ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಈ ಕಾಡುಗಳು ಹಂಚಿಕೆಯಾಗಿವೆ. ಇಲ್ಲಿರುವ ಮರಗಳು ಶಂಕುವಿನಾಕಾರದಲ್ಲಿದ್ದು, ಎಲೆಗಳು ಸೂಜಿಯ ರೂಪದಲ್ಲಿರುತ್ತವೆ. ಇಲ್ಲಿಯ ಪ್ರಮುಖ ಮರಗಳು ಓಕ್, ಫರ್, ಪೈನ, ಸಿಲ್ವರ್, ದೇವದಾರು, ಜುನಿಪರ್, ಪೈಸಿಯಾ, ಚೆಸನೆಟ್ ಇತ್ಯಾದಿಗಳು. ಇವು ಮೃದು ಕಟ್ಟಿಗೆಯನ್ನು ಪೂರೈಸುತ್ತಿದ್ದು, ಸಣ್ಣ ದೋಣಿಗಳು ಪ್ಯಾಕಿಂಗ್ ವಸ್ತುಗಳು ಮತ್ತು ಆಟದ ಸಾಮಾನುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ.

## 4) ಮರುಭೂಮಿ / ಶುಷ್ಕ ಅರಣ್ಯಗಳು:

50 ಸೆ.ಮೀ.ಗಿಂತ ಕಡಿಮೆ ವಾರ್ಷಿಕ ಮಳೆ ಪಡೆಯುವ ಕಾಡುಗಳಾದ ಇವುಗಳಲ್ಲಿ ಮುಳ್ಳುಕಂಟಿಗಳು, ಪೊದೆಗಳು, ಬಣಹುಲ್ಲು, ಅಕೇಶಿಯಾ, ಪಾಪಸ್‌ಕಳ್ಳಿ ಮತ್ತು ಬಬುಲಗಳು ಕಂಡುಬರುತ್ತವೆ. ಮರುಭೂಮಿಯಲ್ಲಿ ಭಾರತೀಯ (ವೈಲ್ಡ್ ಡೇಟ್) ಕರ್ಜೂರದ ಗಿಡಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಇಲ್ಲಿ ಸಸ್ಯಗಳು ಒಂದಕ್ಕೊಂದು ದೂರದಲ್ಲಿ ಬೆಳೆದಿದ್ದು ವಿರಳವಾಗಿರುತ್ತವೆ. ಈ ಮರಗಳು ಹೊಳೆಯುವ ಎಲೆಗಳನ್ನು, (ಮೇಣ ಸ್ರವಿಸಿದ) ಆಳದವರೆಗೆ ಹೋಗಿರುವ ಬೇರುಗಳು ಮತ್ತು ದಪ್ಪನಾದ ಹೊಳೆಯುವ ಕಾಂಡಗಳನ್ನು ಹೊಂದಿದ್ದು ಇವು ಬಹು ದಿನಗಳ ಬರಸ್ಥಿತಿಯಲ್ಲಿ ಜೀವಿಸಲು, ನೀರು ಸಂಗ್ರಹಣೆ ಮಾಡಿಟ್ಟುಕೊಳ್ಳಲು ಸಹಾಯಕವಾಗಿವೆ. ಭಾರತದಲ್ಲಿ ಈ ಸಸ್ಯವರ್ಗ ರಾಜಸ್ತಾನ, ಗುಜರಾತ್, ಪಂಜಾಬ್ ಹಾಗೂ ಹರಿಯಾಣ ರಾಜ್ಯಗಳಲ್ಲಿ ಕಂಡುಬರುತ್ತವೆ.

## 5) ಮ್ಯಾಂಗ್ರೋವ್ (ಉಬ್ಬರವಿಳಿತ) ಅರಣ್ಯಗಳು:

ಇವು ಭಾರತದ ಪೂರ್ವ ಕರಾವಳಿಯುದ್ದಕ್ಕೂ ನದಿಮುಖಜ ಭೂಮಿಗಳು (ಗಂಗಾ, ಮಹಾನದಿ, ಗೋದಾವರಿ ಮತ್ತು ಕೃಷ್ಣಾ) ಮತ್ತು ಕಚ್ಛ, ಕಾತೇವಾರ ಕರಾವಳಿ ಪ್ರದೇಶ ಮತ್ತು ಖಂಬಾತ ಖಾರಿ ಪ್ರದೇಶಗಳಲ್ಲಿ ಹಂಚಿಕೆಯಾಗಿವೆ. ಗಂಗಾ ನದಿ ಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಅರಣ್ಯಗಳಲ್ಲಿ ಸುಂದರ ಮರಗಳು ಹೆಚ್ಚಾಗಿರುವುದರಿಂದ ಅವುಗಳನ್ನು ಸುಂದರ ಬನಗಳೆಂದು ಕರೆಯುವರು. ಇವು ಗಟ್ಟಿಯಾದ ಮತ್ತು ಬಹುಬಾಳಿಕೆ ಬರುವ ಕಟ್ಟಿಗೆಯನ್ನು ಹೊಂದಿದ್ದು ಅವುಗಳನ್ನು ಹಡಗು ನಿರ್ಮಾಣ ಮತ್ತು ಉರುವಲು ಕಟ್ಟಿಗೆಗೆ ಬಳಸಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಉಬ್ಬರದ ಅಲೆಗಳ (ಸುನಾಮಿ) ಪ್ರಭಾವ ಮತ್ತು ತೀರ ಪ್ರದೇಶದ ಸವೆತವನ್ನು ನಿಯಂತ್ರಿಸಲು ಮ್ಯಾಂಗ್ರೋವ್ ಸಸ್ಯಗಳು ತೀರಪ್ರದೇಶದುದ್ದಕ್ಕೂ ಬೆಳೆಸಲಾಗುತ್ತಿದೆ.

## ಅರಣ್ಯಗಳ ಮಹತ್ವ:

ಅರಣ್ಯಗಳು ಪ್ರತಿಯೊಂದು ಜೀವಿಗೂ ಅತಿ ಅವಶ್ಯಕವಾಗಿ ಬೇಕಾದ ನಿಸರ್ಗ ಸಂಪತ್ತು. ಇದು ಅತ್ಯಂತ ಮಹತ್ವದ್ದಾಗಿದೆ. ಹೇಗೆಂದರೆ,

* ಶುದ್ಧ ವಾಯು, ಆಹಾರ, ಮೇವು ಪೂರೈಕೆ, ಉತ್ತಮ ಮಳೆ, ಬರಗಾಲದ ನಿಯಂತ್ರಣ.
* ಮಣ್ಣಿನ ಸವೆತ ನಿಯಂತ್ರಣ.
* ಅನೇಕ ಉತ್ಪನ್ನಗಳ ಆಗರ, ಬಿದಿರು, ಮರ ಮುಟ್ಟುಗಳು, ಅಂಟು, ಅರಗು, ರಾಳ, ಬೆತ್ತ, ಉರವಲು.
* ಔಷಧಿ ಸಸ್ಯಗಳು, ಆಯುರ್ವೇದ–ಬೇವು, ತುಳಸಿ, ಇತ್ಯಾದಿ.
* ನೀರನ್ನು ಹೀರಿ, ಪ್ರವಾಹ ನಿಯಂತ್ರಿಸುತ್ತದೆ.
* ಮಾರುತಗಳನ್ನು ತಡೆದು, ಅವುಗಳಿಂದ ಕೃಷಿ ಬೆಳೆಗಳನ್ನು ರಕ್ಷಿಸುತ್ತವೆ.
* ಅರಣ್ಯ ಮಣ್ಣಿನಲ್ಲಿ ಹ್ಯೂಮಸ್ ಸಮೃದ್ಧವಾಗಿದ್ದು, ಮಣ್ಣಿನ ಫಲವತ್ತತೆ ಕಾಪಾಡುತ್ತವೆ.
* ಅರಣ್ಯಗಳ ಕಾಗದ, ಕಡ್ಡಿಪೊಟ್ಟಣ, ಪ್ಲೈವುಡ್ ಮತ್ತು ಆಟದ ಸಾಮಾನು ತಯಾರಿಕಾ ಕೈಗಾರಿಕೆ ಇತ್ಯಾದಿ ಕಚ್ಚಾವಸ್ತುಗಳನ್ನು ಪೂರೈಸುತ್ತವೆ.
* ಸಾಕು ಪ್ರಾಣಿಗಳಿಗೆ ಮೇವನ್ನು ಒದಗಿಸುತ್ತವೆ.
* ಉಷ್ಣತೆ, ಮಾರುತ, ಮಳೆ ಮುಂತಾದವು ಸ್ಥಳೀಯ ಹವಾಮಾನ ಮತ್ತು ವಾಯುಗುಣ ಪರಿಸ್ಥಿತಿ ನಿಯಂತ್ರಣ.

* ಮನರಂಜನೆ.
* ಉದ್ಯೋಗಾವಕಾಶ, ವಿದೇಶಿ ವ್ಯಾಪಾರ ಹೆಚ್ಚಳ.
* ಜೈವಿಕ ಪರಿಸರ ಸಮತೋಲನ ಕಾಪಾಡುತ್ತವೆ.

**ಅರಣ್ಯಗಳ ಸಂರಕ್ಷಣೆ:**

ಕ್ರಮಬದ್ಧವಾದ ಬಳಕೆ, ವಿನಾಶ ಮತ್ತು ವಿಪರೀತ ಬಳಕೆಯಿಂದ ಕಾಪಾಡುವುದು ಮತ್ತು ಪಾಲನೆ ಮಾಡುವುದು ಅರಣ್ಯಗಳ ಸಂರಕ್ಷಣೆಯ ಉದ್ದೇಶಗಳಾಗಿವೆ. ದನ, ಕರು ಮೇಯಿಸುವಿಕೆ, ಸ್ಥಳಾಂತರ ಬೇಸಾಯ ನಿಯಂತ್ರಣ, ಹೊಸ ಅರಣ್ಯ ಬೆಳೆಸುವಿಕೆ ಮುಂತಾದ ಕ್ರಮಗಳಿಂದ ಅರಣ್ಯ ರಕ್ಷಣೆಯನ್ನು ಮಾಡಬಹುದಾಗಿದೆ.

ವೈಜ್ಞಾನಿಕ ವಿಧಾನಗಳಿಂದ ಕಾಡ್ಗಿಚ್ಚು, ಕೀಟ ಮತ್ತು ರೋಗ ನಿಯಂತ್ರಿಸುವುದು, ಬುಡಕಟ್ಟು ಜನಾಂಗಗಳು ಉರುವಲು ಕಟ್ಟಿಗೆ ಮತ್ತು ಚಾರ್ಕೋಲ್‌ಗಳನ್ನು ಬಳಸುವುದನ್ನು ನಿಷೇದಿಸುವಿಕೆ, ಅತಿಕ್ರಮಣಕಾರರನ್ನು ನಿಷ್ಠೂರವಾಗಿ ಶಿಕ್ಷಿಸುವುದು. ಸರ್ಕಾರವು ನಗರ ಪ್ರದೇಶಗಳಲ್ಲಿ ಮರಗಳನ್ನು ನೆಡುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು. ವನ ಮಹೋತ್ಸವ, ಸಾಮಾಜಿಕ ಅರಣ್ಯ ಪ್ರದೇಶ, ವಾರ್ಷಿಕ ಅರಣ್ಯೀಕರಣ ಕಾರ್ಯಕ್ರಮ, ಶಿಕ್ಷಣ ಸಂಶೋಧನೆ ಮತ್ತು ತರಬೇತಿಗಳ ಮೂಲಕ ಜನತೆಗೆ ಅರಿವು ಮೂಡಿಸುವುದು, ಸಮೂಹ ಮಾಧ್ಯಮಗಳ ಕಾರ್ಯಾಗಾರ, ನೇರ ಕಾರ್ಯಕ್ರಮಗಳ ಮೂಲಕ ಅರಿವು (ಚಿಪ್ಕೊ, ಅಪ್ಪಿಕೋ), ಕೈಗಾರಿಕೆ ಮತ್ತು ಗಣಿಗಾರಿಕೆ ಚಟುವಟಿಕೆಯಿಂದ ಅರಣ್ಯ ನಾಶ ಹೊಂದಿದ ಪ್ರದೇಶಗಳಲ್ಲಿ ಮರು ಅರಣ್ಯ ಬೆಳೆಸುವಿಕೆ, ನಗರ ಪ್ರದೇಶದಲ್ಲಿ ಹಸಿರು ವಲಯ ಅಭಿವೃದ್ಧಿ ಪಡಿಸುವುದು, ಮರಗಳನ್ನು ರಸ್ತೆಗಳು, ರೈಲು ಮಾರ್ಗಗಳು, ನದಿಗಳು, ಕಾಲುವೆಗಳ ದಂಡೆಗಳು, ಕೆರೆಗಳು ಮತ್ತು ಹೊಂಡಗಳ ಬದಿಗಳಲ್ಲಿ ಬೆಳೆಸುವುದು ಮುಂತಾದ ಕ್ರಮಗಳ ಮೂಲಕ ಅರಣ್ಯಗಳನ್ನು ರಕ್ಷಿಸಬಹುದಾಗಿದೆ.

**ಜೈವಿಕ ಸಂರಕ್ಷಣಾ ಪ್ರದೇಶಗಳು:**

ಜೈವಿಕ ಸಂರಕ್ಷಣಾ ಪ್ರದೇಶಗಳು ಪ್ರತಿಯೊಂದು ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿಗೆ ಅಉಗಳಿರುವ ನೈಸರ್ಗಿಕ ಪ್ರದೇಶಗಳಲ್ಲೇ ರಕ್ಷಣೆ ನೀಡುತ್ತದೆ. ಇದರಿಂದ ನೈಸರ್ಗಿಕ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗಬಹುದು, ಈ ಜೈವಿಕ ಸಂರಕ್ಷಣಾ ಪ್ರದೇಶಗಳ ಸುತ್ತಲಿನ ಪ್ರದೇಶಗಳಲ್ಲಿ ಸಂಶೋಧನೆ ಮತ್ತು ಪ್ರಯೋಗಗಳಿಗೆ ಮತ್ತು ಅರಣ್ಯ ಉತ್ಪನ್ನಗಳಿಗಾಗಿ ಅರಣ್ಯಗಳನ್ನು ಬೆಳೆಸಲಾಗುತ್ತದೆ.

ಈ ಜೈವಿಕ ಸಂರಕ್ಷಣಾ ಪ್ರದೇಶಗಳ ಸುತ್ತಲಿನ ಪ್ರದೇಶಗಳಲ್ಲಿ ಸಂಶೋಧನೆ ಮತ್ತು ಪ್ರಯೋಗಗಳಿಗೆ ಮತ್ತು ಅರಣ್ಯ ಉತ್ಪನ್ನಗಳಿಗಾಗಿ ಅರಣ್ಯಗಳನ್ನು ಬೆಳೆಸಲಾಗುತ್ತದೆ. ಜೀವ ಪರಿಸರ ವ್ಯವಸ್ಥೆಯ ಸಂರಕ್ಷಣೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಯೋಗ್ಯ ಬಳಕೆಯಲ್ಲಿ, ನಿರ್ವಹಣೆಯ ಮೂಲಕ ಆಂತರಿಕ ಹೊಂದಾಣಿಕೆಯನ್ನು ಹೆಚ್ಚಿಸುವುದು, ಸಂಶೋಧನೆ ಮತ್ತು ಶಿಕ್ಷಣ ನೀಡಲು ಯುನೆಸ್ಕೋ 1971ರಲ್ಲಿ ಮಾನ ವ ಮತ್ತು ಜೈವಿಕ ಸಂರಕ್ಷಣಾ ಕಾರ್ಯಕ್ರಮಗಳನ್ನು ಪ್ರಾರಂಭಿಸಿತು.

ಪ್ರಸ್ತುತ ಭಾರತ ಸರ್ಕಾರವು 18 ಜೈವಿಕ ಸಂರಕ್ಷಣಾ ವಲಯಗಳನ್ನು ಸ್ಥಾಪಿಸಿದೆ. ಇವು ಒಂದು ಅಥವಾ ಒಂದಕ್ಕಿಂತ ಹೆಚ್ಚು ರಾಷ್ಟ್ರೀಯ ಉದ್ಯಾನಗಳ ಜೊತೆಗೆ ಮಧ್ಯವರ್ತಿ ವಲಯಗಳನ್ನು ಒಳಗೊಂಡಿದ್ದು, ಕೆಲವು ಆರ್ಥಿಕ ಬಳಕೆಗೆ ಉಪಯುಕ್ತವಾಗಿವೆ. ಯುನೆಸ್ಕೋ ಮಾನವ ಮತ್ತು ಜೈವಿಕ ಸಂರಕ್ಷಣಾ ಕಾರ್ಯಕ್ರಮಗಳ ಪಟ್ಟಿಯ ಪ್ರಕಾರ ಭಾರತದ 18ರಲ್ಲಿ 8 ಪ್ರಪಂಚದ ಜೈವಿಕ ಸಂರಕ್ಷಣಾವಲಯದ ಭಾಗಗಳಾಗಿವೆ. ಅವುಗಳು,

1) ನೀಲಗಿರಿ ಜೈವಿಕ ಸಂರಕ್ಷಣಾ ವಲಯ. 2000–ಕರ್ನಾಟಕ, ತಮಿಳುನಾಡು, ಕೇರಳ.
2) ಮನ್ನಾರ ಕಾರಿ – ತಮಿಳುನಾಡು 2001.
3) ಸುಂದರ ಬನ – ಪಂಜಾಬ್ 2001.
4) ನಂದಾದೇವಿ – ಉತ್ತರಖಾಂಡ 2004.
5) ನೊಕ್ರೆಕ್ – ಮೇಘಾಲಯ 2009.
6) ಪಚಮಾರಿ – ಮಧ್ಯಪ್ರದೇಶ 2009.
7) ಸಿಂಪ್ಲಿಪಾಲ – ಓಡಿಸ್ಸಾ 2008.

8) ಅಮರ ಕಂಟಕ – ಝಾರ್ಖಂಡ್ 2012.

ಜೈವಿಕ ಸಂರಕ್ಷಣಾ ವಲಯದ 3 ಕಾರ್ಯಗಳು ಈ ಕೆಳಗಿನಂತಿವೆ.

1) ಜೈವಿಕ ವೈವಿಧ್ಯತೆಯ ಸಂರಕ್ಷಣೆ.

2) ಜೈವಿಕ ವೈವಿಧ್ಯತೆಯ ಪರಿಸರ ಅಭಿವೃದ್ಧಿ.

3) ಅಂತರರಾಷ್ಟ್ರೀಯ ಸಂಶೋಧನೆ ಜಾಲಕ್ಕೆ ಲಾಜಿಸ್ಟಿಕ್ ಸಹಾಯ.

## ಭಾರತದ ಖನಿಜ ಸಂಪನ್ಮೂಲಗಳು

ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ಮತ್ತು ನಿರ್ದಿಷ್ಟ ಪ್ರಮಾಣದ ರಾಸಾಯನಿಕ ಸಂಯೋಜನೆಯನ್ನು ಹೊಂದಿರುವ ಅಜೈವಿಕ ಮೂಲಧಾತುವನ್ನು ಖನಿಜಗಳೆಂದು ಕರೆದರು. ಪ್ರಮುಖವಾಗಿ ಭೂತೊಗಟೆಯ ಮೇಲ್ಭಾಗದ ಸ್ತರದಲ್ಲಿರುವ ಶಿಲೆಗಳಲ್ಲಿ ದೊರೆಯುವ ಖನಿಜಗಳ ಮೂಲರೂಪ ಅದಿರು.

ಅದಿರನ್ನು ವಿವಿಧ ಪದ್ದತಿಗಳಿಂದ ಖನಿಜಗಳನ್ನಾಗಿ ಬೇರ್ಪಡಿಸಲಾಗುತ್ತದೆ. ಈ ರೀತಿಯಾಗಿ ದೊರಕುವ ಅದಿರನ್ನು ಹೊರ ತೆಗೆಯುವ ವೃತ್ತಿಗೆ ಗಣಿಗಾರಿಕೆ ಎನ್ನುವರು. ನಿರ್ದಿಷ್ಟವಾದ ರಾಸಾಯನಿಕ ಸಂಯೋಜನೆ ಹೊಂದಿರುವ ಶಿಲೆಗಳಿಗೆ ಖನಿಜ ಎನ್ನುವರು.

**ಖನಿಜಗಳ ವಿಧಗಳು:**

1) ಲೋಹ ಖನಿಜಗಳು: ಕಬ್ಬಿಣದ ಅದಿರು, ಮ್ಯಾಂಗನಿಸ್, ಚಿನ್ನ ಇತ್ಯಾದಿ.

2) ಅಲೋಹ ಖನಿಜಗಳು: ಸುಣ್ಣದ ಕಲ್ಲು, ಡಾಲೋಮೈಟ, ಅಬ್ರಕ, ಜಿಪ್ಸಂ ಇತ್ಯಾದಿ.

3) ಇಂಧನ ಖನಿಜಗಳು: ಕಲ್ಲಿದ್ದಲು, ಪೆಟ್ರೋಲಿಯಂ, ಯುರೇನಿಸಂ, ಥೋರಿಯಂ.

4) ರಾಸಾಯನಿಕ ಖನಿಜಗಳು: ಗಂಧಕ, ಉಪ್ಪು, ಪಾಸ್ಫೇಟ್, ನೈಟ್ರೇಟ್ ಇತ್ಯಾದಿ.

5) ಅಮೂಲ್ಯ ಖನಿಜಗಳು: ಚಿನ್ನ, ಬೆಳ್ಳಿ, ವಜ್ರ, ಪ್ಲಾಟಿನಂ ಇತ್ಯಾದಿ.

ಭಾರತದಲ್ಲಿ ಒಟ್ಟು 3168 ಗಣಿಗಳಿವೆ. ಅವುಗಳಲ್ಲಿ 570 ಜೀವಾವಶೇಷ ಖನಿಜ ಗಣಿಗಳು, 563 ಲೋಹ ಖನಿಜದ ಗಣಿಗಳು ಮತ್ತು 1975 ಅಲೋಹ ಗಣಿಗಳಿವೆ. ಖನಿಜ ಸಂಪನ್ಮೂಲಗಳಿಂದ ಶೇ.11.5ರಷ್ಟು ಕೈಗಾರಿಕೆಯ ಉತ್ಪಾದನೆಗೆ ಮತ್ತು ರಾಷ್ಟ್ರೀಯ ಆದಾಯಕ್ಕೆ ಶೇ.8ರಷ್ಟು ಖನಿಜ ಸಂಪನ್ಮೂಲಗಳ ಕೊಡುಗೆಯಿದೆ.

ಅತೀ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಸುಣ್ಣದ ಕಲ್ಲು, ಜಿಪ್ಸಂ, ಮತ್ತು ಲವಣ ಕೊರತೆಯಿರುತ್ತದೆ. ಹಿಮಾಲಯ ಪರ್ವತಗಳಲ್ಲಿ ಹೆಚ್ಚಿನ ಖನಿಜ ಸಂಪನ್ಮೂಲಗಳಿವೆ. ಆದರೆ ಅದೆಲ್ಲಾ ಆರ್ಥಿಕವಾಗಿ ಉತ್ಪಾದನೆಗೆ ಸಹಕಾರಿಯಾಗಿಲ್ಲ. ಏಕೆಂದರೆ,

1) ದುಸ್ತರವಾದ ಪ್ರದೇಶ

2) ಸಾರಿಗೆ ಸೌಲಭ್ಯದ ಕೊರತೆ

3) ವಿರಳ ಜನಸಂಖ್ಯೆ

4) ವಾಯುಗುಣದ ವೈಪರೀತ್ಯ

5) ಒಂದೇ ಪ್ರದೇಶದಲ್ಲೇ ಹೆಚ್ಚಿನ ಪ್ರಮಾಣದಲ್ಲಿ ಅಲಭ್ಯತೆ.

ಪರ್ಯಾಯ ಪ್ರಸ್ಥಭೂಮಿಯ ಪ್ರಮುಖ ಭಾಗವಾದ ಚೋಟಾ ನಾಗಪುರ (ಝಾರ್ಖಂಡ್) ಪ್ರಸ್ಥಭೂಮಿಯಲ್ಲಿ ಎಲ್ಲಾ ವಿಧದ ಖನಿಜಗಳು ದೊರಕುವುದರಿಂದ ಇದನ್ನು ಖನಿಜಗಳ ಹೃದಯ ಭಾಗವೆನ್ನುವರು.

**ಕಬ್ಬಿಣದ ಅದಿರು:**

ಆಧುನಿಕ ನಾಗರಿಕತೆಯ ಬೆನ್ನೆಲುಬು ಇದು. ಇದರ ಕಬ್ಬಿಣಾಂಶ ಆಧಾರದ ಮೇಲೆ ಇದನ್ನು ವಿವಿಧ ರೂಪಗಳಲ್ಲಿ ವಿಂಗಡಿಸಲಾಗಿದೆ.

1) ಮ್ಯಾಗ್ನಟೈಟ್ – 72%ರಷ್ಟು ಕಬ್ಬಿಣಾಂಶ. (89% ಕರ್ನಾಟಕ).

2) ಹೆಮೆಟೈಟ್ – 60–70%

3) ಲಿಮೋನೈಟ್ – 40–60%

4) ಸಿಡಿರೈಡ್ – 40–50%

ದೇಶವು ಉತ್ಪಾದಿಸುವ ಒಟ್ಟು ಖನಿಜಗಳ ಮೌಲ್ಯದಲ್ಲಿ ಕಬ್ಬಿಣದ ಅದಿರಿನ ಪಾಲು ಶೇ.14.9ರಷ್ಟಿದೆ. ಭೂಮಿಯ ಮೇಲ್ಮೈ ಪದರಿನ 5%ರಷ್ಟು ಪ್ರಮಾಣವು ಕಬ್ಬಿಣದ ಅದಿರಿನಿಂದ ಕೂಡಿರುವುದು. ಕಬ್ಬಿಣದ ಅದಿರಿನ ನಿಕ್ಷೇಪಗಳಲ್ಲಿ ಮೊದಲ ಸ್ಥಾನದಲ್ಲಿ ಕರ್ನಾಟಕ ಹಾಗೂ ನಂತರದ ಸ್ಥಾನಗಳಲ್ಲಿ ಒಡಿಸ್ಸಾ ಮತ್ತು ಝಾರ್ಖಂಡ್‌ಗಳಿವೆ. ಉತ್ಪಾದನೆಯಲ್ಲಿ ಮೊದಲ ಸ್ಥಾನ ಒಡಿಸ್ಸಾ ನಂತರದ ಸ್ಥಾನಗಳಲ್ಲಿ ಕರ್ನಾಟಕ ಮತ್ತು ಗೋವಾ ರಾಜ್ಯಗಳಿವೆ.

**ಕಬ್ಬಿಣ ನಿಕ್ಷೇಪಗಳು (2006–07):**

| ರಾಜ್ಯಗಳು | ಶೇಕಡಾವಾರು | 2012ರಂತೆ |
|---|---|---|
| ಜಾರ್ಖಂಡ್ | 16 | 23.31 |
| ಓಡಿಸ್ಸಾ | 18.8 | 20.92 |
| ಕರ್ನಾಟಕ | 37.5 | 27.04 |
| ಛತ್ತೀಸ್‌ಘಡ | 10.8 | 16.04 |
| ಗೋವಾ | 3.6 | 7.27 |

ಕರ್ನಾಟಕ ಕೆಮ್ಮಣ್ಣುಗುಂಡಿ (ಬಾಬಾ ಬುಡನ್ ಗಿರಿ) ಸಂಡೂರು, ಹೊಸಪೇಟೆ ಸ್ಥಳಗಳಲ್ಲಿ ಉತ್ತಮ ದರ್ಜೆಯ ನಿಕ್ಷೇಪಗಳಿವೆ. ಛತ್ತೀಸ್‌ಘಡದ ಬೈಲಾಡಿಯಾ ಗಣಿಯ ಏಷ್ಯಾದ ಅತೀ ದೊಡ್ಡ ಯಾಂತ್ರೀಕೃತ ಗಣಿಯಾಗಿದ್ದು ಇದರ ಅದಿರನ್ನು ವಿಶಾಖಪಟ್ಟಣದ ಮುಖಾಂತರ ಜಪಾನಿಗೆ ರಫ್ತು ಮಾಡಲಾಗುತ್ತಿದೆ. 8.4%ರಷ್ಟು ಭಾರತದ ಕಬ್ಬಿಣ ಅದಿರು ಜಪಾನಿಗೆ ರಫ್ತಾಗುತ್ತಿದೆ.

**ಹಂಚಿಕೆ:**

| ರಾಜ್ಯಗಳು | ಪ್ರಮುಖ ಸ್ಥಳಗಳು |
|---|---|
| ಜಾರ್ಖಂಡ್ | ಸಿಂಗಭುಮ್, ಪಲಮೌ, ಧನ್ವಾದ್, ಹಜಾರಿಬಾಗ್, ರಾಂಜಿ |
| ಓಡಿಸ್ಸಾ | ಕಿಯೋಂಜ್ಞಾರ್, ಸುಂದರ್ ಗಡ, ಕಟಕ್, ಕೋರಾಪುತ್, ಸಂಬಾಲ್ಪುರ |
| ಕರ್ನಾಟಕ | ಕೆಮ್ಮಣ್ಣುಗುಂಡಿ, ಕುದುರೆಮುಖ, ಕಾಳಹಸ್ತಿ, ಸಂಡೂರು, ಹೊಸಪೇಟೆ, ಹೊಸದುರ್ಗ |
| ಛತ್ತೀಸ್‌ಘಡ | ಬೈಲಾಂಡಿಯಾ, ರಾವ್ಘಾಟ್, ಅಂದೊಂಗ್ರಿ. |

2014ರ ಅಂಕಿ ಅಂಶದಂತೆ ಭಾರತದ ಕಬ್ಬಿಣ ಅದಿರು 93%ರಷ್ಟು ಚೀನಾಕ್ಕೆ ಹೋದರೆ, ಜಪಾನ್ 4%, ದಕ್ಷಿಣಕೊರಿಯಾ 2% ರಫ್ತಾಗುತ್ತಿದೆ.

**ಮ್ಯಾಂಗನೀಸ್:**

ಭಾರತವು ಮ್ಯಾಂಗನೀಸ್ ನಿಕ್ಷೇಪಗಳಲ್ಲಿ 2ನೇ ಅತಿ ದೊಡ್ಡ ದೇಶವಾಗಿದೆ. ಮೊದಲ ಸ್ಥಾನದಲ್ಲಿ ಜಿಂಬಾಬ್ವೆ ಇದೆ. ಆದರೆ ಭಾರತವು ಉತ್ಪಾದನೆಯಲ್ಲಿ 6ನೇ ದೇಶವಾಗಿದೆ. ಓಡಿಸ್ಸಾ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದ್ದರೆ ನಂತರ ಮಹಾರಾಷ್ಟ್ರ, ಮಧ್ಯಪ್ರದೇಶಗಳಿವೆ. ಮ್ಯಾಂಗನೀಸ್ ಉತ್ಪಾದನೆಯಲ್ಲಿ ಮಹಾರಾಷ್ಟ್ರದ ನಾಗಪುರ ಭಾಂದ್ರ ಜಿಲ್ಲೆಗಳು ಮತ್ತು ಮಧ್ಯಪ್ರದೇಶದ ಚಿಂದ್ವಾರ ಜಿಲ್ಲೆಗಳು ಪ್ರಮುಖವಾದದ್ದು. ದೇಶದ 2/3ರಷ್ಟು ಮ್ಯಾಂಗನೀಸ್ ಅದಿರು ಜಪಾನ್ ದೇಶಕ್ಕೆ ರಫ್ತಾಗುತ್ತಿವೆ.

ಪ್ರಪಂಚದ ಶೇ.7.7ರಷ್ಟು ನಿಕ್ಷೇಪ ಭಾರತದಲ್ಲಿವೆ. ಪ್ರಪಂಚದ ಶೇ.5ರಷ್ಟು ಉತ್ಪಾದನೆ ಭಾರತದಲ್ಲಿ ಆಗುತ್ತದೆ. ಭಾರತದಲ್ಲಿ ಕಂಡು ಬರುವ ಮ್ಯಾಂಗನೀಸ್ ಧಾರವಾಡ ಶಿಲೆಗಳಲ್ಲಿ ಅತಿ ಹೆಚ್ಚು ಕೇಂದ್ರೀಕೃತವಾಗಿದೆ.

**ಹಂಚಿಕೆ:**

| **ರಾಜ್ಯಗಳು** | **ಪ್ರಮುಖ ಸ್ಥಳಗಳು** |
|---|---|
| ಮಧ್ಯಪ್ರದೇಶ | ಚಿಂದ್ವಾರ, ಬಾಲ್ಘಾಟ, ಜಿಬಲ್‌ಪುರ. |
| ಕರ್ನಾಟಕ | ಶಿವಮೊಗ್ಗದ ಕುಂಸಿ, ಶಂಕರಗುಡ್ಡ, ಹೊಸಹಳ್ಳಿ, ಚಿತ್ರದುರ್ಗದ ಸಾದರಹಳ್ಳಿ, ಶಿವಗಂಗೆ, ನಾಗಘಟ್ಟ, ಬಳ್ಳಾರಿಯ ಸಂಡೂರು, ತುಮಕೂರಿನ ಚಿಕ್ಕ ನಾಯಕನ ಹಳ್ಳಿ. |
| ಆಂಧ್ರಪ್ರದೇಶ | ದೇವಡಾ, ಕೊಡುರ್, ಸದಾನಂದಪುರ. |
| ಜಾರ್ಖಂಡ್ | ಹಜಾರಿಬಾಗ್, ಧನ್ಬಾದ್. |
| ಬಿಹಾರ್ | ಗಯಾ, ಮಾಂಗೈರ್. |

**ಮ್ಯಾಂಗನೀಸ್ ಉತ್ಪಾದನೆ:**

| **ರಾಜ್ಯಗಳು** | **ಶೇಕಡಾವಾರು ನಿಕ್ಷೇಪ** | **ಉತ್ಪಾದನೆಯಲ್ಲಿ ಸ್ಥಾನ** |
|---|---|---|
| ಒಡಿಸ್ಸಾ | 24% | 3ನೇ ಸ್ಥಾನ |
| ಮಹಾರಾಷ್ಟ್ರ | 27.3% | 1ನೇ ಸ್ಥಾನ |
| ಮಧ್ಯಪ್ರದೇಶ | 27.7% | 1ನೇ ಸ್ಥಾನ |
| ಕರ್ನಾಟಕ | 5.8% | 2ನೇ ಸ್ಥಾನ |
| ಆಂಧ್ರಪ್ರದೇಶ | 13.7% | 5ನೇ ಸ್ಥಾನ |

**ತಾಮ್ರ:**

ಪ್ರಪಂಚದೆ ಒಟ್ಟು ಉತ್ಪಾದನೆಯಲ್ಲಿ ಭಾರತದ ತಾಮ್ರ ಉತ್ಪಾದನೆ ಶೇ.3.5ರಿಂದ 4ರಷ್ಟಿದೆ. ಪ್ರಮುಖ ತಾಮ್ರದ ನಿಕ್ಷೇಪಗಳು ಜಾರ್ಖಂಡ್‌ನ ಸಿಂಗ್‌ಭೂಮ್ ಜಿಲ್ಲೆ, ಮಧ್ಯಪ್ರದೇಶದ ಬಾಲ್ಘಾಟ್ ಜಿಲ್ಲೆ ಮತ್ತು ರಾಜಸ್ತಾನದ ಜುನ್‌ಜುನು ಮತ್ತು ಅಲ್ವಾರ ಜಿಲ್ಲೆಗಳಲ್ಲಿವೆ.

**ಹಂಚಿಕೆ:**

ಭಾರತದಲ್ಲಿ ತಾಮ್ರದ ನಿಕ್ಷೇಪ ಈ ಕೆಳಗಿನಂತೆ ಹಂಚಿಕೆಯಾಗಿದೆ.

* ಮಧ್ಯಪ್ರದೇಶ – ತರೆಗಾಂ, ಮಲಂಜ್‌ಖಂಡ್, ಬೆತುಲ್.
* ರಾಜಸ್ತಾನ – ಅಜ್ಮೀರ್, ಅಲ್ವಾರ್, ಭಿಲ್ವಾರ್, ಖೇತ್ರಿ, ದುಂಗರ್‌ಪುರ್.
* ಜಾರ್ಖಂಡ್ – ಸಿಂಗಭೂಮ್, ರಾಖಾ, ಸುರ್‌ದಾ, ಧೊಬಾನಿ, ಮೊಸಬಾನಿ ದೇಶದಲ್ಲಿ ಒಟ್ಟು 8 ತಾಮ್ರದ ಗಣಿಗಳಿವೆ.

**ಬಾಕ್ಸೈಟ್:**

ಈ ಅದಿರಿನಿಂದ ಅಲ್ಯೂಮಿನಿಯಂ ಲೋಹ ತಯಾರಿಸಲಾಗುತ್ತದೆ. ಭಾರತದಲ್ಲಿ ಸುಮಾರು 3289.8 ಮೀ. ಟನ್ ಬಾಕ್ಸೈಟ್ ನಿಕ್ಷೇಪವಿದೆ ಎಂದು ಹೇಳಲಾಗುತ್ತದೆ. ಬಾಕ್ಸೈಟ್ ನಿಕ್ಷೇಪಗಳಲ್ಲಿ ಒಡಿಸ್ಸಾ ಮೊದಲಾದರೆ, ಬಾಕ್ಸೈಟ್ ಉತ್ಪಾದನೆಯಲ್ಲಿ ಗುಜರಾತ್ ಮೊದಲು.

ಭಾರತದಲ್ಲಿ ಬಾಕ್ಸೈಟ್‌ನ ಹಂಚಿಕೆ ಈ ಕೆಳಗಿನಂತಿದೆ.

1) ಒಡಿಸ್ಸಾ – ಕಾಹಂದಿ, ಸುಂದರಗಡ, ಕೊರಾಪುಲ್, ಬೊಲಾಂಗಿರ್.
2) ಗುಜರಾತ್ – ಕಛ್, ಬಾವನಗರ್, ಸೂರತ್, ಜಾಮನಗರ್, ಜುನಾಗಡ್, ಅಮ್ರೈಲಿ, ಕೈರಾ.
3) ಜಾರ್ಖಂಡ್ – ರಾಂಚಿ ಇತ್ಯಾದಿ.
4) ಛತ್ತೀಸ್‌ಗಡ – ಕಂಕರ್, ಸರ್ಗುಜ, ಬಸ್ತಾರ್, ದುರ್ಗ.

5) ಮಹಾರಾಷ್ಟ್ರ – ಕೊಲ್ಹಾಪುರ, ಥಾಣೆ, ಸತಾರ ಕೊಲಬ.

6) ಕರ್ನಾಟಕ – ಬೆಳಗಾವಿ.

ಈ ಲೋಹವನ್ನು 20ನೇ ಶತಮಾನದ ಆಶ್ಚರ್ಯದ ಲೋಹ ಎಂದೇ ಕರೆಯಲಾಗುತ್ತದೆ. ಭೂ ಲೇಲ್ಪದರಿನಲ್ಲಿ 8%ರಷ್ಟು ಅಲ್ಯೂಮಿನಿಯಂ ಲೋಹವಿದೆ. ಶುದ್ದ ಬಾಕ್ಸೈಟ್ ಶೇ.73.9ರಷ್ಟು ಅಲ್ಯೂಮಿನಿಯಂ ಹಾಗೂ ಶೇ.26.1ರಷ್ಟು ನೀರನ್ನು ಒಳಗೊಂಡಿದೆ. ಪ್ರಪಂಚದಲ್ಲಿ 2.9ರಷ್ಟು ಅದಿರು8 ಭಾರತದಲ್ಲಿ ಉತ್ಪಾದನೆ ಮಾಡಲಾಗುತ್ತದೆ. ಭಾರತದಲ್ಲಿ ಬಾಕ್ಸೈಟ್ 93 ಗಣಿಗಳಲ್ಲಿ ಇದನ್ನು ಉತ್ಪಾದಿಸಲಾಗುತ್ತಿದೆ. ಚೀನಾ, ಕಾತಾರ್, ಕುವೈತ್, ಯುಎಈ, ಸೌದಿಗಳಿಗೆ ಪ್ರಮುಖವಾಗಿ ಈ ಅದಿರು ರಫ್ತಾಗುತ್ತಿದೆ.

**ಕಲ್ಲಿದ್ದಲು:**

ಕಲ್ಲಿದ್ದಲು ಶಕ್ತಿ ಸಂಪನ್ಮೂಲಗಳಲ್ಲಿ ಪ್ರಮುಖವಾದದ್ದು. ಇದರಿಂದ ಶಕ್ತಿಯ ಉತ್ಪಾದನೆಯಲ್ಲಿ ಶೇ.70ರಷ್ಟು ಶಕ್ತಿ ಕಲ್ಲಿದ್ದಲಿನಿಂದ ಪೂರೈಕೆಯಾಗುತ್ತದೆ. ಭಾರತವು ಕಲ್ಲಿದ್ದಲಿನ ಉತ್ಪಾದನೆಯಲ್ಲಿ 3ನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ಚೀನಾ ಮತ್ತು 2ನೇ ಸ್ಥಾನದಲ್ಲಿ ಅಮೇರಿಕಾ ದೇಶಗಳಿವೆ.

ಕಲ್ಲಿದ್ದಲನ್ನು ಭವಿಷ್ಯದ ಅಭಿವೃದ್ದಿಗೆ ಸೇತುವೆ ಎಂದು ಹೇಳಲಾಗುತ್ತದೆ. ಇದು ಕಾರ್ಬೋನಿಫೆರಸ್ ಯುಗದಲ್ಲಿ ಭೂಪದರಗಳಲ್ಲಿ ಹುದುಗಿದ್ದ ಸಸ್ಯ ಮತ್ತು ಪ್ರಾಣಿಸಂಕುಲ ಕಾಲಾನಂತರ ಶಾಖ ಮತ್ತು ಒತ್ತಡಗಳಿಂದಾಗಿ ಕಲ್ಲಿದ್ದಲಾಗಿ ಮಾರ್ಪಾಡಾಗಿದೆ. ಭಾರತವು ನಿಕ್ಷೇಪದಲ್ಲಿ 5ನೇ ಸ್ಥಾನದಲ್ಲಿದೆ.

ಕಲ್ಲಿದ್ದಲನ್ನು ಇಂಗಾಲ ಪ್ರಮಾಣಾಧರಿಸಿ 4 ವಿಧಗಳಾಗಿ ಮಾಡಲಾಗಿದೆ. ಅವುಗಳು,

1) ಆಂಥ್ರಸೈಟ್: ಇದು ಅತ್ಯಂತ ಉತ್ತಮ ದರ್ಜೆಯ ಕಲ್ಲಿದ್ದಲು. ಇದರಲ್ಲಿ ಇಂಗಾಲದ ಪ್ರಮಾಣ 80–95%ರಷ್ಟು. ಈ ನಿಕ್ಷೇಪಗಳು ತೀರಾ ಕಡಿಮೆ ಇದ್ದು, ಅಲ್ಪ ಪ್ರಮಾಣದಲ್ಲಿ ಮಾತ್ರ ಜಮ್ಮು ಮತ್ತು ಕಾಶ್ಮೀರದಲ್ಲಿ ದೊರೆಯುತ್ತದೆ.

2) ಬಿಟುಮಿನಸ್: (ಟಾರ್) 40–80% ಇಂಗಾಲ ಪ್ರಮಾಣ ಹೇರಳವಾಗಿ ದೊರೆಯುತ್ತದೆ. ಜಾರ್ಖಂಡ್, ಪಶ್ಚಿಮ ಬಂಗಾಳ, ಓಡಿಸ್ಸಾ, ಛತ್ತೀಸ್‌ಗಡ್ ಮತ್ತು ಮಧ್ಯಪ್ರದೇಶದಲ್ಲಿ ನಿಕ್ಷೇಪವಿದೆ.

3) ಲಿಗ್ನೈಟ್: ಇಂಗಾಲ 40–50%. ಇದನ್ನು ಕಂದು ಕಲ್ಲಿದ್ದಲು ಎನ್ನುವರು. ಇದು ಕೆಳದರ್ಜೆಯ ಕಲ್ಲಿದ್ದಲಾಗಿದೆ. ಇದರಿಂದ ದೊರೆಯುವ ಶಾಖ (ಶಕ್ತಿ) ತೀರಾ ಕಡಿಮೆ. ಭಾರತದ ಕಲ್ಲಿದ್ದಲು 99.5%ರಷ್ಟು ಗೊಂಡ್ವಾನ ಅವಧಿಯದು. ತಮಿಳುನಾಡಿನ ನೈವೆಲಿ, ರಾಜಸ್ಥಾನದ ಪಾಲ್ನ, ಅಸ್ಸಾಂನ ಲಕೀಮ್‌ಪುರ ಮತ್ತು ಜಮ್ಮು ಮತ್ತು ಕಾಶ್ಮೀರದ ಕಾರೋವ್‌ನಲ್ಲಿ ಅತಿ ಹೆಚ್ಚು ದೊರೆಯುತ್ತದೆ. ದೇಶದಲ್ಲಿ 80%ರಷ್ಟು ಲಿಗ್ನೈಟ್ ತಮಿಳುನಾಡಿನ ನೈವೆಲಿಯಲ್ಲಿ ದೊರೆಯುತ್ತದೆ.

4) ಪೀಟ್: ಅತ್ಯಂತ ಕೆಳದರ್ಜೆಯ ಕಲ್ಲಿದ್ದಲು. ಇದರಲ್ಲಿ ಇಂಗಾಲದ ಪ್ರಮಾಣ 40%ಕ್ಕಿಂತ ಕಡಿಮೆ. ಭಾರತದಲ್ಲಿನ ಕಲ್ಲಿದ್ದಲಿನ ನಿಕ್ಷೇಪಗಳು ಒಂದು ಅಂದಾಜಿನ ಪ್ರಕಾರ 2,45,693 ಮೀ.ಟನ್‌ಗಳಷ್ಟಿದೆ. ಆದರೆ ಪ್ರಪಂಚದ ಒಟ್ಟು ನಿಕ್ಷೇಪಗಳಲ್ಲಿ ಶೇ.6.7ರಷ್ಟು ಭಾರತ ಹೊಂದಿದೆ.

**ರಾಜ್ಯವಾರು ಕಲ್ಲಿದ್ದಲು ಉತ್ಪಾದನೆ ಮತ್ತು ನಿಕ್ಷೇಪ:**

| ರಾಜ್ಯಗಳು | ಉತ್ಪಾದನೆ | ನಿಕ್ಷೇಪ |
|---|---|---|
| ಜಾರ್ಖಂಡ್ | 20% | 27.3 |
| ಛತ್ತೀಸ್‌ಘಡ್ | 21.1% | 17.3 |
| ಓಡಿಸ್ಸಾ | 19.5% | 24.3 |
| ಮಧ್ಯಪ್ರದೇಶ | 13.2% | 8.3 |
| ಆಂಧ್ರಪ್ರದೇಶ | 9.7% | 7.5 |
| ಮಹಾರಾಷ್ಟ್ರ | 7.2% | – |
| ಪಶ್ಚಿಮ ಬಂಗಾಳ | 10.4% | – |

ಭಾರತದಲ್ಲಿ ಕಲ್ಲಿದ್ದಲು ಹಂಚಿಕೆ ಈ ಕೆಳಗಿನಂತಿದೆ.

1) ಜಾರ್ಖಂಡ್: ಅತೀ ಹೆಚ್ಚಿನ ನಿಕ್ಷೇಪಗಳನ್ನು ಹೊಂದಿದೆ. ಉತ್ಪಾದನೆಯಲ್ಲಿಯೂ ಮೊದಲ ಸ್ಥಾನದಲ್ಲಿದೆ.

2) ಛತ್ತೀಸ್‌ಘಡ

3) ಓಡಿಸ್ಸಾ

4) ಆಂಧ್ರಪ್ರದೇಶ

5) ಪಶ್ಚಿಮ ಬಂಗಾಳ

6) ಮಧ್ಯಪ್ರದೇಶ

**ಪೆಟ್ರೋಲಿಯಂ:**

ಪುರಾತನ ಕಾಲದಲ್ಲಿ ಹುದುಗಿ ಹೋದ ಸಸ್ಯ ಮತ್ತು ಪ್ರಾಣಿಗಳ ಅವಶೇಷಗಳು ಶಾಖ ಮತ್ತು ಒತ್ತಡಗಳಿಂದ ಕಾಲಾನಂತರ ಪೆಟ್ರೋಲಿಯಂ ಆಗಿ ಪರಿವರ್ತನೆಯಾಗಿದೆ. ಹೀಗೆ ಪರಿವರ್ತನೆಗೊಂಡ ಪೆಟ್ರೋಲಿಯಂ ಪ್ರಮುಖವಾಗಿ ಜಲಜನಕ ಮತ್ತು ಇಂಗಾಲವನ್ನು ಹೊಂದಿರುತ್ತದೆ. ಕಚ್ಚಾ ತೈಲದಲ್ಲಿ ಗ್ಯಾಸೋಲಿನ್, ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ, ಕೀಲೆಣ್ಣೆ, ನ್ಯಾಪ್ತ ಮುಖ್ಯವಾದವು. ಕಚ್ಚಾ ತೈಲದ ಜೊತೆಯಲ್ಲಿ ಹಾಗೂ ಪ್ರತ್ಯೇಕವಾಗಿ ಅನಿಲ ರೂಪದಲ್ಲಿರುವ ಜಲಜನಕ ಇಂಗಾಲದ ಮಿಶ್ರಣವು ದೊರೆಯುವುದು. ಇದೇ ಸ್ವಾಭಾವಿಕ ಅನಿಲ.

ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಟರ್ಷಿಯರಿಯುಗದ ಪದರು ಶಿಲೆಗಳನ್ನೊಳಗೊಂಡಿರುವ ಅಸ್ಸಾಂ, ಗುಜರಾತ್ ಮತ್ತು ರಾಜಸ್ತಾನ್ ರಾಜ್ಯಗಳು ಹೆಚ್ಚು ನಿಕ್ಷೇಪಗಳನ್ನು ಒಳಗೊಂಡಿದೆ.

ಪ್ರಸ್ತುತ ಶೋಧನೆಯಲ್ಲಿನ ಪ್ರದೇಶಗಳೆಂದರೆ ನಾಗಾಲ್ಯಾಂಡ್, ತ್ರಿಪುರ, ಮಣಿಪುರ, ಮಿಜೋರಾಮ್, ಅರುಣಾಚಲ ಪ್ರದೇಶ, ಪಶ್ಚಿಮ ಬಂಗಾಳ, ಗಂಗಾ ಮೈದಾನ, ಪೂರ್ವ ತೀರದ ಗೋದಾವರಿ, ಕೃಷ್ಣಾ ಮತ್ತು ಕಾವೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಲಕ್ಷ ದ್ವೀಪಗಳು.

ಈಗಾಗಲೇ ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ತ್ರಿಪುರ, ಕೃಷ್ಣಾ, ಗೋದಾವರಿ, ಕಾವೇರಿ ನದಿ ಮುಖಜ ಭೂಮಿಗಳಲ್ಲಿ ಕಚ್ಚಾ ತೈಲ ಉತ್ಪಾದನೆಯಾಗುತ್ತಿದೆ. ಭಾರತವು ಹೊಂದಿರುವ ತೈಲ ನಕ್ಷೇಪ 762.74 ದಶಲಕ್ಷ ಟನ್. ಇದು ಕೇವಲ ಪ್ರಪಂಚದ ಒಟು ತೈಲ ನಿಕ್ಷೇಪದ ಶೇ.0.6ರಷ್ಟು ಮಾತ್ರ (2014). ಭಾರತದಲ್ಲಿ ಸ್ವಾಭಾವಿಕ ಅನಿಲದ ನಿಕ್ಷೇಪವೂ ಕಡಿಮೆ.

ಅಸ್ಸಾಂ, ಈಶಾನ್ಯದ ರಾಜ್ಯಗಳು, ಗುಜರಾತ್, ಬಾಂಬೆ ಹೈ ಮತ್ತು ಪೂರ್ವ ಕರಾವಳಿಯ ಮುಖಜ ಭೂಮಿಗಳಲ್ಲಿ ವಿದೇಶಿ ಕಂಪನಿಗಳಿಗೂ ತೈಲ ನಿಕ್ಷೇಪ ಶೋಧನೆಯ ಒಪ್ಪಂದಗಳನ್ನು 'ನ್ಯೂ ಎಕ್ಸ್‌ಪ್ಲೋರೇಷನ್ ಲೈಸೆನ್ಸಿಂಗ್' ನೀತಿಯಲ್ಲಿ ನೀಡಲಾಗುತ್ತಿದೆ. ಇದಲ್ಲದೆ ವಿದೇಶಗಳಲ್ಲಿಯೂ ಓಎನ್‌ಜಿಸಿ ತೈಲ ಮತ್ತು ಅನಿಲವನ್ನು ಶೋಧಿಸಲು ಓಎನ್‌ಜಿಸಿ ವಿದೇಶಿ ಲಿ. ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಓಎನ್‌ಜಿಸಿ ವಿದೇಶಿ ಲಿಮಿಟೆಡ್ ಈಗಾಗಲೇ ಸೂಡಾನ್, ಆಸ್ಟ್ರೇಲಿಯಾ, ರಷ್ಯಾ, ವಿಯಟ್ನಾಂ, ಸಿರಿಯಾ, ಕೊಲಂಬಿಯಾ, ವೆನಿಜೂಲಗಳಲ್ಲಿ ಕಾರ್ಯನಿರತವಾಗಿದೆ.

**ಪ್ರಧಾನ ತೈಲ ಕ್ಷೇತ್ರಗಳು:**

1) ಅಸ್ಸಾಂ ಹಾಗೂ ಈಶಾನ್ಯದ ರಾಜ್ಯಗಳು: ಇದನ್ನು ಅಸ್ಸಾಂ ಅರಕಾನ ಕ್ಷೇತ್ರವೆಂದು ಗುರುತಿಸಲಾಗಿದೆ. ಅಸ್ಸಾಂ, ಅರುಣಾಚಲ ಪ್ರದೇಶ, ತ್ರಿಪುರಾ ಮತ್ತು ನಾಗಾಲ್ಯಾಂಡ್‌ಗಳನ್ನು ಒಳಗೊಂಡಿದೆ. ದಿಗ್ಭಾಯ್, ಹುಗ್ರಿಜಿನ್, ಮೊರಾನ್, ನಹರ್‌ಕಟಿಯಾಸಿಟ್, ಸಾಗರ್, ರುದ್ರರ ಸಾಗರ್ ಮತ್ತು ಬದರ್ ಪುರ್‌ಗಳಲ್ಲಿ ತೈಲ ಬಾವಿಗಳಿವೆ.

2) ಗುಜರಾತ್: ಉತ್ಪಾದನೆಯಲ್ಲಿ 3ನೇ ಪ್ರಮುಖ ವಲಯ. ಕ್ಯಾಂಬೆ ಅಖಾತ, ಅಂಕಲೇಶ್ವರ, ಗುಜರಾತ್‌ನ ತೈಲ ಕ್ಷೇತ್ರವನ್ನು ಗಾಂಧಾರ ವಲಯವೆಂದು ಕರೆಯುವರು.

3) ಮುಂಬೈ (ಬಾಂಬೆ) ಹೈ ಪ್ರದೇಶ: ಸುಮಾರು 429 ದಶಲಕ್ಷ ಟನ್ ನಿಕ್ಷೇಪದ ಅಂದಾಜು ಸಾಗರದಲ್ಲಿನ ಅತ್ಯಂತ ಸಂಪದ್ಭರಿತ ನಿಕ್ಷೇಪವಾದ ಇದು ಬಾಂಬೆ ಹೈ, ಬಾಸ್ಸೀನ್, ಪನ್ನಾ, ಮುಕ್ತಾ, ರತ್ನಾ, ದಕ್ಷಿಣ ಬನೇನ್, ನೀಲಮ್ ಮತ್ತು ಹೀರಾ ಪ್ರಮುಖ ತೈಲ ಕೇಂದ್ರಗಳನ್ನು ಹೊಂದಿದೆ.

4) ಪೂರ್ವ ಕರಾವಳಿ ಮುಖಜ ಭೂಮಿ ವಲಯ: ಗೋದಾವರಿ, ಕೃಷ್ಣೆ ಮುಖಜ ಭೂಮಿಗಳ ರವ್ವಾ ಶಿಲಾಸ್ತರಗಳು, ಆಂಧ್ರಪ್ರದೇಶ ತೀರದಲ್ಲಿರುವ 'ಸುರ್ಸಾನಮ್'ವರೆಗೆ ಕೊಳವೆಗಳಿವೆ. ಕಾವೇರಿ ನದಿ ತೀರದಲ್ಲಿ ಚೆನ್ನೈನ ನಾರಿಮನ್ ಶುದ್ಧೀಕರಣ ಕೇಂದ್ರವಿದೆ.

5) ರಾಜಸ್ತಾನ: ಜೈಸಲ್ಮೇರ್, ಬಿಕನೇರ್, ನಗೌರ್ ವಲಯ.

**ರಾಜ್ಯವಾರು ಪೆಟ್ರೋಲಿಯಂ ನಿಕ್ಷೇಪ ಮತ್ತು ಉತ್ಪಾದನೆ–2014:**

| ರಾಜ್ಯ | ನಿಕ್ಷೇಪ ಸಾ.ಟನ್ | ಶೇ. | ಉತ್ಪಾದನೆ | ಶೇ. |
|---|---|---|---|---|
| ಅರುಣಾಲಪ್ರದೇಶ | 2.95 | 0.4% | 116 | 0.3% |
| ಆಂಧ್ರಪ್ರದೇಶ | 11.45 | 1.5% | 301 | 0.8% |
| ನಾಗಾಲ್ಯಾಂಡ್ | 2.69 | 0.3% | – | – |
| ರಾಜಸ್ತಾನ್ | 45.00 | 5.9% | 8549 | 22.6% |
| ಗುಜರಾತ್ | 135.01 | 17.7% | 5230 | 13.8% |
| ಅಸ್ಸಾಂ | 173.08 | 22.7% | 4869 | 12.9% |
| ತಮಿಳುನಾಡು | 9.12 | 1.2% | 225 | 0.6% |
| ತ್ರಿಪುರಾ | 0.07 | – | – | – |
| ಭೂವಲಯ | 379.36 | 49.7% | 19291 | 51.0% |
| ಸಾಗರೀಕ ವಲಯ | 383.37 | 50.3% | 18519 | 49.0% |

**ಕಚ್ಚಾ ತೈಲ ಸಾಗಾಣಿಕ ಕೊಳವೆ ಮಾರ್ಗಗಳು:**

ಭಾರತವು 2 ಪ್ರಮುಖ ಕಚ್ಚಾ ತೈಲ ಸಾಗಾಣಿಕ ಕೊಳವೆ ಮಾರ್ಗಗಳನ್ನು ಹೊಂದಿದೆ. ಅವುಗಳು,

1) ಬರೌನಿ – ಈಶಾನ್ಯದ ತೈಲ ಶುದ್ಧೀಕರಣ ಮತ್ತು ತೈಲ ಕ್ಷೇತ್ರಗಳನ್ನು ಸಂಪರ್ಕಿಸುವ ಕೊಳವೆ ಮಾರ್ಗ.

2) ಕಛ್‌ನಿಂದ ಕೊಯಾಲಿ ಮತ್ತು ಮಥುರಾಗಳನ್ನು ಸಂಪರ್ಕಿಸುವ ಕೊಳವೆ ಮಾರ್ಗ.

ಇತ್ತೀಚೆಗೆ ವಿಸ್ತರಿಸಲಾದ ಮಾರ್ಗಗಳು:

3) ಅಂಕಲೇಶ್ವರ – ಕೊಯಾಲಿ.

4) ಬಾಂಬೆ ಹೈ – ಹೀರಾ – ಮುಂಬೈ ಮಾರ್ಗ ಇತ್ಯಾದಿ.

ಭಾರತವು 11763 ಕಿ.ಮೀ. ಉದ್ದವಾದ ಪೆಟ್ರೋಲಿಯಂ ಉತ್ಪನ್ನ ಸಾಗಾಣಿಕೆಯ ಕೊಳವೆ ಮಾರ್ಗ ಹೊಂದಿದೆ.

**ಸ್ವಾಭಾವಿಕ ಅನಿಲ:**

ಭೂಮಿಯ ಪದರುಗಳಲ್ಲಿ ಜೀವಾವಶೇಷಗಳ ಜಲಜನಕ ಮತ್ತು ಇಂಗಾಲದ ಮಿಶ್ರಣವು ತೈಲದೊಡನೆ ಅನಿಲ ರೂಪದಲ್ಲಿಯೂ ಇರುತ್ತದೆ. ಇದರಲ್ಲಿ ಪ್ರಧಾನವಾಗಿ ಮಿಥೇನ್ ಅನಿಲವು ಇರುತ್ತದೆ. ಭಾರತದಲ್ಲಿ ಈ ಸ್ವಾಭಾವಿಕ ಅನಿಲದ ಹಂಚಿಕೆ ಈ ಕೆಳಗಿನಂತಿದೆ.

ಸ್ವಾಭಾವಿಕ ಅನಿಲ ಪ್ರಮುಖ ಘಟಕಗಳು 2014ರಂತೆ,

| ರಾಜ್ಯ/ವಲಯ | ನಿಕ್ಷೇಪ ಬಿ.ಘ.ಮೀ. | ಶೇ. | ಉತ್ಪಾದನೆ ಮಿ.ಸೆ.ಮೀ. | ಶೇ. |
|---|---|---|---|---|
| ಪೂರ್ವತೀರ | 531.5 | 37.2% | 9082 | 25.2% |
| ಪಶ್ಚಿಮತೀರ | 430.6 | 30.2% | 18019 | 50.0% |
| ಅಸ್ಸಾಂ | 42.2 | 10.0% | 2896 | 8.0% |
| ಗುಜರಾತ್ | 72.9 | 5.1% | 1745 | 4.8% |
| ರಾಜಸ್ಥಾನ | 14.1 | 1.0% | 1745 | 4.8% |
| ತಮಿಳುನಾಡು | 44.9 | 3.1% | 1283 | 3.6% |
| ಆಂಧ್ರಪ್ರದೇಶ | 48.2 | 3.4% | 1190 | 3.3% |

**ಸ್ವಾಭಾವಿಕ ಅನಿಲ ಅಗತ್ಯತೆ ಪೂರೈಸಿಕೊಳ್ಳಲು ಕೈಗೊಂಡಿರುವ ಯೋಜನೆಗಳು:**

1) ಇರಾನ್–ಪಾಕಿಸ್ತಾನ–ಭಾರತ ಅನಿಲ ಕೊಳವೆ ಮಾರ್ಗ.

2) ತುರ್ಕ್‌ಮೆನಿಸ್ತಾನ್, ಆಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಭಾರತ ಸಂಪರ್ಕಿಸುವ ಯೋಜನೆ.

3) ಇಲಟ್–ಆಶ್‌ಕೆಲೋನ್ ಕೊಳವೆ ಮಾರ್ಗ.

4) ಮಯನ್ಮಾರ್–ಬಾಂಗ್ಲಾ–ಭಾರತ ಕೊಳವೆ ಮಾರ್ಗ.

**ಭಾರತದಲ್ಲಿಯ ಅನಿಲ ಸಾಗಾಣಿಕೆಯ ಕೊಳವೆ ಮಾರ್ಗಗಳು ಈ ಕೆಳಗಿನಂತಿವೆ.**

1) ಹಾಜಿರಾ, ವಜೈಪುರ್, ಜಗದೀಶ್‌ಪುರದ ನಡುವೆ 2800 ಕಿ.ಮೀ. ದೂರದ ಪೈಪ್‌ಲೈನ್ ನಿರ್ಮಿಸಲಾಗಿದೆ.

2) ಗುಜರಾತಿನ ಕ್ಯಾಂಬೆ ಪ್ರದೇಶದ ಕೊಳವೆ ಮಾರ್ಗಗಳು.

3) ಕೃಷ್ಣಾ ಗೋದಾವರಿ ಕ್ಷೇತ್ರಗಳನ್ನು ಸಂಪರ್ಕಿಸುವ ಆಂಧ್ರಪ್ರದೇಶ ಕೊಳವೆ ಮಾರ್ಗ.

4) 671 ಕಿ.ಮೀ. ಉದ್ದದ ಮಂಗಳೂರು ಬೆಂಗಳೂರು, ಕೊಯಮತ್ತೂರು ಕೊಳವೆ ಮಾರ್ಗ.

5) ಧಾಬೊಲ್ ಬೆಂಗಳೂರು ಮಧ್ಯದ ಕೊಳವೆ ಮಾರ್ಗ.

**ಭಾರತದಲ್ಲಿಯ ಅಣುಶಕ್ತಿ ನಿಕ್ಷೇಪಗಳು:**

ಯುರೇನಿಯಂ, ಥೋರಿಯಂ, ರೇಡಿಯಂ ಮತ್ತು ಲೀಥಿಯಂ ಖನಿಜಗಳ ಅಣು ವಿದಳನದಿಂದ ವಿದ್ಯುತ್ತನ್ನು ಉತ್ಪಾದಿಸಲಾಗುತ್ತದೆ. ಭಾರತವು ಥೋರಿಯಂ ಉತ್ಪಾದಿಸಲ್ಪಡುವ ಮೋನಜೈಟ್ ಅದಿರಿನ ನಿಕ್ಷೇಪವನ್ನು ಅಪಾರ ಪ್ರಮಾಣದಲ್ಲಿ ಹೊಂದಿದೆ. ಯುರೇನಿಯಂ ಅದಿರನ್ನು ಸಿಂಗಭೂಮ್ ಜಿಲ್ಲೆಯ ಜಾದುಗಡ ಗಣಿಯಿಂದ ಪಡೆಯಲಾಗುತ್ತಿದೆ. ಅಲ್ಲದೆ ಜಾರ್ಖಂಡ್ ಮತ್ತು ರಾಜಸ್ಥಾನದ ತಾಮ್ರದ ಅದಿರಿನ ನಿಕ್ಷೇಪವನ್ನು ಒಳಗೊಂಡಿರುವ ಅರಾವಳಿ ಶಿಲಾಸ್ತರಗಳಲ್ಲಿಯೂ ಯುರೇನಿಯಂ ನಿಕ್ಷೇಪವನ್ನು ಶೋಧಿಸಲಾಗಿದೆ.

ಭಾರತದಲ್ಲಿ ಯುರೇನಿಯಂ, ಥೋರಿಯಂ ಮತ್ತು ಬೇರಿಲಿಯಂ ಖನಿಜಗಳನ್ನು ಅಣು ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿದೆ. ಕರ್ನಾಟಕದಲ್ಲಿ ರಾಯಚೂರಿನ ಗೋಗಿ ಮಠ ಮತ್ತು ಬೆಳಗಾವಿಯ ನೇಸರಗಿಯಲ್ಲಿ ಇತ್ತೀಚೆಗೆ ಯುರೇನಿಯಂ ನಿಕ್ಷೇಪ ಕಂಡುಬಂದಿದೆ. ವಿಶ್ವದಲ್ಲಿ ಭಾರತದ ಯುರೇನಿಯಂ ನಿಕ್ಷೇಪದ ಪಾಲು 1.5%. ಅತಿ ಹೆಚ್ಚು ನಿಕ್ಷೇಪವನ್ನು ಆಸ್ಟ್ರೇಲಿಯಾ (31%)ದಲ್ಲಿ ಕಾಣಬಹುದು.

ಅಣುಶಕ್ತಿಯ ಪ್ರಾಮುಖ್ಯತೆಯಿಂದಾಗಿ ಭಾರತವು ಅದರ ಉತ್ಪಾದನೆಗೆ ಅವಶ್ಯಕವಾದ ಸಂಸ್ಥೆಗಳನ್ನು ಸ್ಥಾಪಿಸಿದೆ. ಅವುಗಳು – ಅಣುಶಕ್ತಿ ಆಯೋಗ, ಯುರೇನಿಯಂ ಕಾರ್ಪ್ ಆಫ್ ಇಂಡಿಯಾ, ಅಣು ವಿಜ್ಞಾನ ಸಂಶೋಧನಾ ಕೇಂದ್ರ–ಟ್ರಾಂಬೆ.

ಅಣುಶಕ್ತಿಗೆ ಭಾರ ಜಲ ಅವಶ್ಯಕವಿದ್ದು, ಅವು ನಂಗಲ್, ಬರೋಡ, ಟುಟಿಕಾರಿನ್, ಕೋಟ ತಾಲ್‌ಗಳಲ್ಲಿವೆ. 83,538 ಮಿಲಿಯನ್ ಟನ್ ನಿಕ್ಷೇಪ ಹೊಂದಿರುವ ಆಂಧ್ರಪ್ರದೇಶ ಮೊದಲ ಸ್ಥಾನದಲ್ಲಿದ್ದು, ನಂತರ ಜಾರ್ಖಂಡ್ (50,978) ಮತ್ತು 3ನೇ ಸ್ಥಾನದಲ್ಲಿ ಮೇಘಾಲಯವಿದೆ.

**ಪ್ರಮುಖ ಬೆಳೆಗಳು:**

ದೇಶದ 66.2%ರಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. 128 ಕೋಟಿ ಜನರಿಗೆ ಆಹಾರಧಾನ್ಯ ನೀಡುವ ಈ ಕೃಷಿಯು ಅಪಾರ ಉದ್ಯೋಗಾವಕಾಶವನ್ನು ನೀಡಿದೆ. ಇದು ಕೈಗಾರಿಕೆಗಳಿಗೆ ಕಚ್ಚಾವಸ್ತು ನೀಡುವಲ್ಲಿ ಮತ್ತು ತೃತೀಯ ರಂಗದ ಆರ್ಥಿಕ ವಲಯದಲ್ಲಿ ಉದ್ಯೋಗ ಸೃಷ್ಟಿ ಮಾಡುವಲ್ಲಿ, ವಿದೇಶಿ ವಿನಿಮಯ ಗಳಿಕೆಗೆ ಅಪಾರ ಅವಕಾಶ ನೀಡುತ್ತಿದೆ.

**ಭಾರತದಲ್ಲಿ ಕೈಗೊಳ್ಳುವ ವ್ಯವಸಾಯ ವಿಧಗಳು:**

1) ಸಾಂದ್ರ ಬೇಸಾಯ: ವಾರ್ಷಿಕ 2–3 ಬೆಳೆಗಳು
2) ಒಣ ಬೇಸಾಯ
3) ಮಿಶ್ರಣ ಬೇಸಾಯ
4) ಜೀವನಾಧಾರ ಬೇಸಾಯ
5) ವಾಣಿಜ್ಯ ಬೇಸಾಯ
6) ನೆಡುತೋಪು ಬೇಸಾಯ
7) ವರ್ಗಾವಣೆ ಬೇಸಾಯ

**ಕೃಷಿ ವಲಯಗಳು:**

ಭೂ ಸ್ವರೂಪ, ಮಣ್ಣಿನ ವಿಧ, ವಾಯುಗುಣ, ಕೃಷಿ ಪದ್ಧತಿ, ಬೆಳೆಗಳು ಇವೆಲ್ಲವುಗಳಲ್ಲಿ ಏಕತೆ ಕಂಡುಬರುವ ವಲಯಗಳಿಗೆ ಕೃಷಿ ವಲಯಗಳು ಎನ್ನುವರು.

**ಭಾರತದಲ್ಲಿಯ ಪ್ರಮುಖ ಕೃಷಿ ವಲಯಗಳು:**

1) ಭತ್ತ, ಸೆಣಬು, ಚಹಾ ವಲಯ
2) ಗೋಧಿ, ಕಬ್ಬು ವಲಯ
3) ಹತ್ತಿ ವಲಯ
4) ಮೆಕ್ಕೇಜೋಳ, ಒರಟು ಧಾನ್ಯ ವಲಯ
5) ತೃಣ ಧಾನ್ಯ, ಎಣ್ಣೆಕಾಳುಗಳ ವಲಯ
6) ಹಣ್ಣು, ತರಕಾರಿ ಮತ್ತು ಬಾರ್ಲಿ ವಲಯ

**ಭಾರತದಲ್ಲಿಯ ವ್ಯವಸಾಯದ ಅವಧಿಗಳು:**

**1) ಮುಂಗಾರು ಅಥವಾ ಖಾರೀಫ್:**

(ನೈರುತ್ಯ) ಮಾನ್ಸೂನ್ ಸಮಯದಲ್ಲಿಯ ಬೆಳೆಗಳು ಭತ್ತ, ಹತ್ತಿ, ರಾಗಿ, ಜೋಳ, ಮೆಕ್ಕೇಜೋಳ, ಎಣ್ಣೆಕಾಳುಗಳು.

**2) ಹಿಂಗಾರು ಅಥವಾ ರಬಿ ಬೇಸಾಯ:**

(ಈಶಾನ್ಯ) ಮಾರುತ ಸಮಯದಲ್ಲಿಯ ಬೆಳೆಗಳು ಗೋಧಿ, ಬಾರ್ಲಿ, ಜೋಳ, ಎಣ್ಣೆಕಾಳು, ಕಡಲೆ.

**3) ಬೇಸಿಗೆ ಅಥವಾ ಬೇಸಾಯ:**

ರಬಿ ಮತ್ತು ಖಾರಿಫ್ ನಡುವಿನ ಅವಧಿಯಲ್ಲಿಯ ಬೆಳೆಗಳು ದ್ವಿದಳ ಧಾನ್ಯಗಳು, ಎಣ್ಣೆಕಾಳು, ತರಕಾರಿ.

**ಹಸಿರು ಕ್ರಾಂತಿ:**

ಆಧುನಿಕ ಕೃಷಿ ಪದ್ದತಿಯನ್ನು ಅಳವಡಿಸಿಕೊಂಡು ಆಹಾರ ಧಾನ್ಯಗಳ ಉತ್ಪಾದನೆಯನ್ನು ವೃದ್ದಿಸಲು ಕೈಗೊಂಡ ಕ್ರಮವೇ ಹಸಿರು ಕ್ರಾಂತಿ. ಹಸಿರು ಕ್ರಾಂತಿಯ ಮೂಲ ದೇಶ ಮೆಕ್ಸಿಕೋ. ಡಾ.ನಾರ್ಮನ್, ಇ.ಬೊರ್ಲಾಗ್ ಹಸಿರು ಕ್ರಾಂತಿ ಪಿತಾಮಹರಾಗಿದ್ದಾರೆ. ಇವರಿಂದ ಪ್ರಥಮ ಬಾರಿಗೆ ಗೋಧಿಯ ಗಿಡ್ಡ, ಹೊಸ ತಳಿಗಳ ಅಭಿವೃದ್ದಿಯಾಯಿತು. ಭಾರತದಲ್ಲಿ 1965–66ರಲ್ಲಿ ಹಸಿರು ಕ್ರಾಂತಿ ಪ್ರಾರಂಭವಾಯಿತು. ಭಾರತದ ಕೃಷಿ ವಿಜ್ಞಾನಿ ಡಾ.ಎಮ್.ಎಸ್. ಸ್ವಾಮಿನಾಥನ್ ಭಾರತದಲ್ಲಿಯ ಹಸಿರು ಕ್ರಾಂತಿಯ ಹರಿಕಾರರಾಗಿದ್ದಾರೆ.

**ಹಸಿರು ಕ್ರಾಂತಿಯ ಪ್ರಮುಖ ಅಂಶಗಳು:**

* ಬೀಜಗಳ, ಅಧಿಕ ಇಳುವರಿಯ ತಳಿಗಳ ಬಳಕೆ
* ನೀರಾವರಿ ಸದ್ಬಳಕೆ
* ರಾಸಾಯನಿಕ ಗೊಬ್ಬರದ ಬಳಕೆ
* ಕೀಟನಾಶಕಗಳ ಬಳಕೆ
* ಜಲಾಯನ ಪ್ರದೇಶ ಅಭಿವೃದ್ದಿ
* ಭೂ ಹಿಡುವಳಿಯ ಕ್ರೋಢೀಕರಣ
* ಭೂ ಸುಧಾರಣೆ
* ಕೃಷಿಗೆ ಆರ್ಥಿಕ ನೆರವು
* ಗ್ರಾಮೀಣ ವಿದ್ಯುದೀಕರಣ ಸೌಲಭ್ಯ
* ಯಾಂತ್ರೀಕೃತ ಬೇಸಾಯ
* ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನೆ ಮತ್ತು ತರಬೇತಿಗೆ ಪ್ರಾಮುಖ್ಯತೆ.

**ಹಸಿರು ಕ್ರಾಂತಿಯಿಂದಾದ ಅನುಕೂಲತೆಗಳು:**

* ಉತ್ಪಾದನೆ ಹೆಚ್ಚಳ
* ಆಹಾರ ಆಮದು ಇಳಿಮುಖ
* ಯಾಂತ್ರಿಕ ಮತ್ತು ವೈಜ್ಞಾನಿಕ ಬೇಸಾಯಕ್ಕೆ ಒತ್ತು
* ಆಹಾರ ಧಾನ್ಯಗಳ ಸ್ವಾವಲಂಬನೆ
* ಕೃಷಿಕರ ಆದಾಯದಲ್ಲಿ ಗಣನೀಯವಾದ ಸುಧಾರಣೆ
* ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿ
* ಸುಧಾರಿತ ಕೃಷಿ ಕ್ಷೇತ್ರದಿಂದಾಗಿ ಕೈಗಾರಿಕೋದ್ಯಮ ಅಭಿವೃದ್ದಿಯಾಯಿತು
* ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ.

**ಪ್ರಮುಖ ಬೆಳೆಗಳು:**

ಭಾರತದ ವಿಸ್ತಾರ, ವೈವಿಧ್ಯತೆಯುಳ್ಳ ವಾಯುಗುಣ, ಮಳೆಯ ಹಂಚಿಕೆ, ಮಣ್ಣಿನ ವಿಧಗಳು, ನೀರಾವರಿ ಲಭ್ಯತೆ, ಪ್ರಮುಖ ಕಾರಣಗಳಿಂದ ವಿವಿಧ ಬೆಳೆ ಬೆಳೆಯಲಾಗುತ್ತದೆ.

1) ಆಹಾರ ಬೆಳೆ: ಭತ್ತ, ಗೋಧಿ, ಮೆಕ್ಕೆಜೋಳ, ರಾಗಿ, ನವಣೆ, ಸಜ್ಜೆ, ದ್ವಿದಳ ಧಾನ್ಯ ಇತ್ಯಾದಿ.
2) ವಾಣಿಜ್ಯ: ಹತ್ತಿ, ಸೆಣಬು, ಕಬ್ಬು, ತಂಬಾಕು, ನೆಲಗಡಲೆ.
3) ನೆಡತೋಪು: ಚಹಾ, ಕಾಫಿ, ಸಾಂಬಾರ್ ಬೆಳೆ, ತೆಂಗು, ಅಡಿಕೆ, ರಬ್ಬರ್ ಇತ್ಯಾದಿ.
4) ತೋಟಗಾರಿಕೆ: ಮಾವು, ಬಾಳೆ, ಕಿತ್ತಳೆ, ಸೇಬು ಇತ್ಯಾದಿ.

**ಭತ್ತ:**

ಭಾರತವು ಪ್ರಪಂಚದ ಒಟ್ಟು ಭತ್ತದ ಕ್ಷೇತ್ರದ ಶೇ.26ರಷ್ಟನ್ನು ಒಳಗೊಂಡಿದ್ದು, 21.2ರಷ್ಟು ಭತ್ತವನ್ನು ಉತ್ಪಾದಿಸುವುದು. ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ಭತ್ತದ ಕ್ಷೇತ್ರವನ್ನು ಹೊಂದಿದ್ದು, ಉತ್ಪಾದನೆಯಲ್ಲಿ ಚೈನಾದ ನಂತರ 2ನೇ ಸ್ಥಾನದಲ್ಲಿದೆ. ದೇಶದ ದಕ್ಷಿಣ ಮತ್ತು ಈಶಾನ್ಯ ಜನರು ಭತ್ತವನ್ನೇ ಪ್ರಮುಖ ಆಹಾರ ಧಾನ್ಯವಾಗಿ ಬಳಸುವರು. ಭಾರತದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಗೆ ಬಳಕೆಯಾಗುತ್ತಿರುವ ಶೇ.33.7ರಷ್ಟು ಪ್ರದೇಶವು ಭತ್ತದ ಉತ್ಪಾದನೆಗೆ ಒಳಪಟ್ಟಿದೆ. ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಭತ್ತದ ಪ್ರಮಾಣವು 40.6%ರಷ್ಟಿರುವುದು. ಭಾರತದಲ್ಲಿ 42.8% ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತವನ್ನು ಬೆಳೆಯಲಾಗುತ್ತಿದೆ. ನೀರಾವರಿಯ ಪ್ರದೇಶ ಹಾಗೂ ಹೆಚ್ಚು ಮಳೆ ಪಡೆಯುವ ಮೈದಾನ ವಲಯಗಳಲ್ಲಿ ಭತ್ತವು 'ಪ್ರಥಮ ಸ್ಥಾನದ ಬೆಳೆ'.

ಭಾರತದ ಒಟ್ಟು ನೀರಾವರಿ ಕ್ಷೇತ್ರದ 50.2%ರಷ್ಟು ಭತ್ತದ ಉತ್ಪಾದನೆಗೆ ಒಳಪಟ್ಟಿದೆ. ಬಹು ಸುದೀರ್ಘ ಕಾಲದಿಂದಲೂ ಅಕ್ಕಿಯನ್ನು ಆಮದು ಮಾಡಿಕೊಳ್ಳುತ್ತಿರುವ ನಾವು ಇಂದು ಅತ್ಯುತ್ತಮ ದರ್ಜೆಯ ಅಕ್ಕಿಯನ್ನು ರಫ್ತು ಮಾಡುತ್ತಿದ್ದೇವೆ. ಭಾರತವು ವಿದೇಶಿ ವಿನಿಮಯವನ್ನು ಗಳಿಸುತ್ತಿರುವ ರಫ್ತಿನ ಮುಖ್ಯ ವ್ಯವಸಾಯೋತ್ಪನ್ನಗಳಲ್ಲಿ ಭತ್ತವೂ ಸಹ ಒಂದಾಗಿದೆ. 2012–13ರಲ್ಲಿ 21.58 ಲಕ್ಷ ಟನ್ ಭತ್ತವನ್ನು ರಫ್ತು ಮಾಡಿದೆ.

ಪೂರ್ವ ಭಾರತಕ್ಕೆ ಹಸಿರು ಕ್ರಾಂತಿ ಯೋಜನೆಯಲ್ಲಿಯ ಭತ್ತಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ಶ್ರೀ (ಎಸ್ಆರ್ಐ– ಸಿಸ್ಟೇಮೆಟಿಕ್ ರೈಸ್ ಇಂಟೆನ್ಸಿಫಿಕೇಷನ್) ಪದ್ದತಿಯನ್ನು ಒತ್ತಡ ಬೇಸಾಯಕ್ಕೆ ಪ್ರಚುರ ಪಡಿಸಲಾಗಿದೆ.

**ಭತ್ತ ಬೆಳೆಯಲು ಬೇಕಾದ ಭೌಗೋಳಿಕ ಅಂಶಗಳು:**

1) ಉಷ್ಣಾಂಶ: ಇದು ಉಷ್ಣವಲಯದ ಬೆಳೆಯಾಗಿದೆ. ಆದ್ದರಿಂದ 21 ಡಿಗ್ರಿ–24 ಡಿಗ್ರಿ ಸೆ. ಉಷ್ಣತೆ ಇರಬೇಕು.
2) ಮಳೆ: ಕನಿಷ್ಠ 125 ಸೆ.ಮೀ.
3) ಮಣ್ಣು: ಜೇಡಿ, ಮರಳು ಮಿಶ್ರಿತ ಜೇಡಿ, ಮೆಕ್ಕಲು ಮಣ್ಣು.
4) ಮೈದಾನ ಸ್ವರೂಪ: ಸದಾ ನೀರು ನಿಲ್ಲಲು, ಸಮತಟ್ಟಾದ ಪ್ರದೇಶ ಅಗತ್ಯ.
5) ಗೊಬ್ಬರ: ನೈಸರ್ಗಿಕ ಮತ್ತು ಕೃತಕ ಗೊಬ್ಬರಗಳ ಬಳಕೆ.
6) ಕ್ರಿಮಿ ಮತ್ತು ರೋಗ ನಾಶಕ.

**ಭತ್ತದ ವಿಧಗಳು:**

ಬೆಳೆಯುವ ಪ್ರದೇಶದ ಆಧಾರದ ಮೇಲೆ ಬೆಟ್ಟಗುಡ್ಡ ಪ್ರದೇಶಗಳ ಭತ್ತ ಮತ್ತು ತಗ್ಗು ಪ್ರದೇಶದ ಭತ್ತ ಎಂದು ವಿಂಗಡಿಸಲಾಗಿದೆ. ಹಾಗೆಯೇ ಬಿತ್ತನೆಯ ಅವಧಿ ಅನುಸರಿಸಿ ವಿಂಗಡಣೆ ಭತ್ತವನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

1) ಅಸ್ (ಕಾರ್) – ಮೇ ತಿಂಗಳು ಬಿತ್ತನೆ
2) ಅಮನ್ (ಕಾರ್ತಿಕ) – ಜೂನ್, ಜುಲೈ ಬಿತ್ತನೆ
3) ಬೊರೋ (ಬೇಸಿಗೆ) – ನವೆಂಬರ್, ಡಿಸೆಂಬರ್

**ಭತ್ತದ ಬೆಳೆಯ ಹಂಚಿಕೆ:**

1) ಗಂಗಾ ನದಿ ಮೈದಾನ ಹಾಗೂ ಮುಕಜಭೂಮಿ, ಬ್ರಹ್ಮಪುತ್ರಾ ನದಿಯ ಕಣಿವೆ ಪ್ರದೇಶ.
2) ಪ್ರಸ್ಥಭೂಮಿಯ ಪೂರ್ವ ಮತ್ತು ಪಶ್ಚಿಮ ಕರಾವಳಿಗಳು: ಪಶ್ಚಿಮ ಬಂಗಾಳವು ಭಾರತದಲ್ಲಿ ಅತಿ ಹೆಚ್ಚು ಭತ್ತವನ್ನು ಉತ್ಪಾದಿಸುವ ರಾಜ್ಯವಾಗಿದೆ. 13.9% ಉತ್ಪಾದನೆ.
3) ಉತ್ತರ ಪ್ರದೇಶ – 13.3%ರಷ್ಟು ಉತ್ಪಾದನೆ.
4) ಆಂಧ್ರಪ್ರದೇಶ – 12.2%ರಷ್ಟು ಉತ್ಪಾದನೆ.
5) ಪಂಜಾಬ್ – 6.6%
6) ತಮಿಳುನಾಡು – 7.1%

**ಗೋಧಿ:**

ಕ್ಷೇತ್ರ ಮತ್ತು ಉತ್ಪಾದನೆಯಲ್ಲಿ ಗೋಧಿಯು ಭತ್ತದ ನಂತರ 2ನೇ ಸ್ಥಾನ ಪಡೆದಿದೆ. ಇದು ನಮ್ಮ ಚಳಿಗಾಲದ ಅತಿ ಮುಖ್ಯ ಬೆಳೆಯಾಗಿದೆ. ದೇಶದ ಉತ್ತರ ಮತ್ತು ವಾಯುವ್ಯ ಭಾಗಗಳ ಜನರ ಅತಿ ಮುಖ್ಯ ಆಹಾರ ಧಾನ್ಯ ಸಹ ಇದಾಗಿದೆ. ಉತ್ಪಾದನೆಯಲ್ಲಿ ಭಾರತವು ಚೀನಾ ನಂತರ 2ನೇ ಸ್ಥಾನ ಪಡೆದಿದೆ.

**ಭೌಗೋಳಿಕ ಅಂಶಗಳು:**

* ಉಷ್ಣಾಂಶ: ಮೂಲತ: ಸಮಶೀತೋಷ್ಣ ವಲಯದ ಹುಲ್ಲುಗಾವಲಿನ ಹುಲ್ಲಿನ ವರ್ಗಕ್ಕೆ ಸೇರಿದ ಬೆಳೆ ಇದಾಗಿರುವುದರಿಂದ ಬೆಳೆಯುವ ಅವಧಿಯಲ್ಲಿ 10–15 ಡಿಗ್ರಿ ಸೆ. ಕಟಾವಿನ ಅವಧಿಯಲ್ಲಿ 18 ಡಿಗ್ರಿ ಸೆ. ಮಳೆರಹಿತ ಉಷ್ಣಾಂಶ ಸೂಕ್ತವಾಗಿದೆ.
* ಮಳೆ: ಸಾಧಾರಣ ಮಳೆ ಅಂದರೆ 50 ಸೆ.ಮೀ. ನಮ್ಮಲ್ಲಿ 81%ರಷ್ಟು ಮಳೆಯೊಂದಿಗೆ ನೀರಾವರಿ ಇದೆ.
* ತಂಪಾದ ಹವಾಮಾನ: ಮಳೆಯಿಂದ ಕೂಡಿದ ತೇವಯುತ ಪ್ರದೇಶ, ಸಾಧಾರಣ ಉಷ್ಣಾಂಶ ಅನುಕೂಲವಾಗಿರುತ್ತದೆ.
* ಮಣ್ಣು: ಮರಳು ಮಿಶ್ರಿತ ಮೆಕ್ಕಲು ಅಥವಾ ಜೇಡಿ ಉತ್ಕೃಷ್ಟವಾದುದು.
* ಭೂ ಸ್ವರೂಪ: ಮಟ್ಟಸವಾದ ಮೈದಾನ, ನೀರಾವರಿ, ಯಂತ್ರೋಪಕರಣಗಳ ಬಳಕೆಗೆ ಇದು ಉಪಯುಕ್ತವಾಗಿದೆ.
* ಕೃತಕ ಗೊಬ್ಬರ, ಔಷಧಿ ಮತ್ತು ಕ್ರಿಮಿನಾಶಕಗಳು ಅಗತ್ಯ.

**ಗೋಧಿಯ ವಿಧಗಳು:**

1) ಟ್ರಿಟಿಕಮ್ ಏಸ್ಟಿವಮ್

2) ಟ್ರಿಟಿಕಮ್ ಡ್ಯೂರಮ್

3) ಟ್ರಿಟಿಕಮ್ ಡೈಕೋಕಮ್ ಅಥವಾ ಬಿತ್ತನೆ ಅವಧಿ ಅನುಸರಿಸಿ ಚಳಿಗಾಲದ ಗೋಧಿ ಮತ್ತು ವಸಂತಕಾಲದ ಗೋಧಿ ಎಂದು ವಿಂಗಡಿಸಲಾಗಿದೆ.

**ಗೋಧಿಯ ಬಿತ್ತನೆ ಕಾಲ:**

ನಮ್ಮಲ್ಲಿ ವರ್ಷದ ಎಲ್ಲಾ ಕಾಲದಲ್ಲಿಯೂ ದೇಶದ ಯಾವುದಾದರೊಂದು ಭಾಗದಲ್ಲಿ ಗೋಧಿಯ ಬಿತ್ತನೆ ಮತ್ತು ಕಟಾವಿನ ಕಾರ್ಯಗಳು ಕಂಡುಬರುತ್ತವೆ.

**ಭಾರತದಲ್ಲಿ ಗೋಧಿ ಬೆಳೆಯುವ ವಲಯಗಳು:**

1) ಹೆಚ್ಚು ಸಾಂದ್ರತೆ ವಲಯ:

* ಉತ್ತರ ಪ್ರದೇಶ – ಮೊದಲ ಸ್ಥಾನ
* ಪಂಜಾಬ್ – ಗೋಧಿಯ ಕಣಜ
* ಹರಿಯಾಣ

2) ಸಾಧಾರಣ ಸಾಂದ್ರತೆಯ ವಲಯ:

* ಮಧ್ಯಪ್ರದೇಶ – 12.2% ಉತ್ಪಾದನೆ
* ರಾಜಸ್ತಾನ – 9.8%
* ಬಿಹಾರ – 5.0%

3) ಕಡಿಮೆ ಸಾಂದ್ರತೆಯ ವಲಯ:

72% ಉತ್ಪಾದನೆ. ಜಾರ್ಖಂಡ್, ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ, ಕರ್ನಾಟಕ, ಆಂಧ್ರಪ್ರದೇಶ ಇತ್ಯಾದಿ.

**ಗೋಧಿಯ ವ್ಯಾಪಾರ ಮತ್ತು ರಫ್ತು:**

ಒಟ್ಟು ಉತ್ಪಾದನೆಯಲ್ಲಿ 30% ಭಾಗವು ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟವಾಗುವುದು. ಗೋಧಿಯು ಕೃಷಿ ಉತ್ಪನ್ನದ ಒಟ್ಟು ರಫ್ತಿನಲ್ಲಿ 2012–13ರಲ್ಲಿ 6.2%ರಷ್ಟು ಪಾಲು ಹೊಂದಿತ್ತು. ನಮ್ಮ ಭಾರತವು ಏಷ್ಯಾ ಖಂಡದ ಅತಿ ಮುಖ್ಯ ಗೋಧಿಯ ರಫ್ತಿನ ರಾಷ್ಟ್ರವಾಗಿದೆ. ರಫ್ತನ್ನು ನಿರಂತರವಾಗಿ ಹೆಚ್ಚಿಸಲು ವಿದೇಶೀ ಮಾರುಕಟ್ಟೆಗಳಿಗೆ ಸೂಕ್ತವಾದ ತಳಿಯ ಗೋಧಿಯ ಉತ್ಪಾದನೆಯನ್ನು ಹೆಚ್ಚಿಸುವುದು ಅಗತ್ಯವಾಗಿದೆ.

**ಒರಟು ಆಹಾರ ಧಾನ್ಯಗಳು:**

ಜೋಳ, ಸಜ್ಜೆ, ಮೆಕ್ಕೆಜೋಳ, ರಾಗಿ, ಬಾರ್ಲಿ ಮತ್ತು ತೃಣ ಧಾನ್ಯಗಳು ನಮ್ಮ ದೇಶದಲ್ಲಿ ಉತ್ಪಾದಿಸಲ್ಪಡುವ ಒರಟು ಧಾನ್ಯಗಳಾಗಿವೆ. ಇವುಗಳನ್ನು ಸಾಮಾನ್ಯವಾಗಿ ಶುಷ್ಕ ಮತ್ತು ಅರೆಶುಷ್ಕ ಪ್ರದೇಶಗಳಲ್ಲಿ ಮಳೆಯ ಆಶ್ರಯದಿಂದಲೇ ಬೆಳೆಯಲಾಗುವುದು. ಈ ಧಾನ್ಯಗಳು ಬಹುತೇಕ ಬಡವರ ಆಹಾರದ ಮೂಲ. ಹೆಚ್ಚು ಖನಿಜಾಂಶದಿಂದ ಕೂಡಿರುತ್ತವೆ. ಈ ಗುಂಪಿನ ಕೆಲವು ಆಹಾರ ಧಾನ್ಯಗಳನ್ನು ಪಶು ಮತ್ತು ಕೋಳಿಗಳಿಗೆ ಆಹಾರ ಧಾನ್ಯವಾಗಿಯೂ ಹಾಗೂ ಕೈಗಾರಿಕೆಗಳಲ್ಲಿಯೂ ಬಳಸುವರು.

ಪ್ರತಿಕೂಲ ಪರಿಸರದಲ್ಲಿ ಈ ಆಹಾರ ಧಾನ್ಯ ಉತ್ಪಾದಿಸುವುದರಿಂದ, ಆಯಾ ಪ್ರದೇಶದಲ್ಲಿ ಇವುಗಳು ಭತ್ತ ಮತ್ತು ಗೋಧಿಗಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಮೆಕ್ಕೆಜೋಳವನ್ನು ಹೊರತುಪಡಿಸಿ, ಇತರ ಎಲ್ಲಾ ಧಾನ್ಯಗಳನ್ನು ಕಾಳಧಾನ್ಯವೆಂತಲೂ ಕರೆಯುವರು. ಉತ್ತರ ಕರ್ನಾಟಕದಲ್ಲಿ ಜೋಳ ಹಾಗೂ ದಕ್ಷಿಣದಲ್ಲಿ ರಾಗಿ ಅತಿ ಮುಖ್ಯ ಒರಟು ಧಾನ್ಯಗಳಾಗಿವೆ. ಬಹುತೇಕ ಸಾಂಪ್ರದಾಯಿಕ ತಳಿಗಳು ಹಾಗೂ ಸಾಂಪ್ರದಾಯಿಕ ವಿಧಾನದಿಮದ ಈ ಧಾನ್ಯಗಳನ್ನು ಉತ್ಪಾದಿಸಲಾಗುತ್ತಿದೆ.

ಒರಟು ಧಾನ್ಯಗಳ ಉತ್ಪಾದನೆಯಲ್ಲಿ ಯುಎಸ್ಎ, ಚೀನಾ, ಬ್ರೆಜಿಲ್, ರಷ್ಯಾ ನಂತರ ಭಾರತವು 5ನೇ ಸ್ಥಾನ ಪಡೆದಿದೆ. 2011ರಲ್ಲಿ ರಫ್ತಾಗುವ ಒರಟು ಧಾನ್ಯಗಳಲ್ಲಿ ಮೆಕ್ಕೆಜೋಳದ ಪಾಲು 84.3% ನಂತರ ಜೋಳ 8.0, ಸಜ್ಜೆ 5ರಷ್ಟಿದೆ.

**ಜೋಳ:**

ಜೋಳ ಬೆಳೆಯಲು ಬೇಕಾದ ಅವಶ್ಯಕ ಭೌಗೋಳಿಕ ಅಂಶಗಳೆಂದರೆ, ಮಳೆಯ ಪ್ರಮಾಣ 30–100 ಸೆ.ಮೀ. ಇರಬೇಕು. ಮಟ್ಟಸ ಪ್ರದೇಶ, ಸಾಮಾನ್ಯ ಇಳಿಜಾರು, 1200 ಮೀ. ಎತ್ತರದಲ್ಲಿಯ ಭೂ ಸ್ವರೂಪಗಳಲ್ಲಿ ಬೆಳೆಯಬಹುದು. ಕೆಂಪು, ಕಪ್ಪು, ಮೆಕ್ಕಲು ಮಿಶ್ರಿತ (ಕಪ್ಪು ಮಣ್ಣಿನಲ್ಲಿ ಉತ್ಪಾದನೆ ಹೆಚ್ಚು) ಮಣ್ಣುಗಳಲ್ಲಿ ಹೆಚ್ಚು ಬೆಳೆಯಲಾಗುತ್ತದೆ. ಜೋಳವು ಮುಂಗಾರು ಅಥವಾ ಹಿಂಗಾರು ಎರಡೂ ಸಮಯದ ಬೆಳೆಯಾಗಿದೆ. ಜೋಳದ ಉತ್ಪಾದನೆಯಲ್ಲಿ ಯುಎಸ್ಎ ನಂತರ ಭಾರತ 2ನೇ ಸ್ಥಾನ ಹೊಂದಿದೆ. ಆದರೆ ಬೆಳೆ ಬೆಳೆಯುವ ಕ್ಷೇತ್ರದಲ್ಲಿ 32.3%ರಷ್ಟು ಹೊಂದಿ, 1ನೇ ಸ್ಥಾನದಲ್ಲಿದೆ. ಬಾಂಗ್ಲಾ, ತೈವಾನ್, ಜಪಾನ್ ಮೊದಲಾದ ದೇಶಗಳಿಗೂ ಜೋಳವನ್ನು ರಫ್ತು ಮಾಡುತ್ತಿದೆ. ಸೂಡಾನ್ ಭಾರತದ ಜೋಳದ ರಫ್ತಿನ ಮುಖ್ಯ ಪೈಪೋಟಿಯ ರಾಷ್ಟ್ರವಾಗಿದೆ.

**ಸಜ್ಜೆ:**

ಇದು ಉಷ್ಣವಲಯದ ಬೆಳೆಯಾಗಿದೆ. ಆದ್ದರಿಂದ 25 ಡಿಗ್ರಿ–35 ಡಿಗ್ರಿ ಸೆ. ಉಷ್ಣಾಂಶದ ವಲಯದಲ್ಲಿ ಇದನ್ನು ಬೆಳೆಯಲಾಗುತ್ತದೆ. ಈ ಬೆಳೆಗೆ ಮಳೆಯ ಪ್ರಮಾಣ 40–50 ಸೆ.ಮೀ. ಮತ್ತು ಸೂಕ್ತವಾದ ಮಣ್ಣು – ಮರಳು ಮಣ್ಣು. ಆದ್ದರಿಂದ ಇದನ್ನು ರಾಜಸ್ತಾನ, ಉತ್ತರಪ್ರದೇಶ, ಉತ್ತರ ಗುಜರಾತ್, ಹರಿಯಾಣ, ಪಂಜಾಬ್ ರಾಜ್ಯಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ. ದಕ್ಷಿಣ ಭಾರತದಲ್ಲಿ ಕೆಂಪು ಮತ್ತು ಕಪ್ಪು ಮಣ್ಣಿನಲ್ಲಿಯೂ ಬೆಳೆಯಲಾಗುತ್ತದೆ. ಇದು 4 ತಿಂಗಳ ಬೆಳೆಯಾಗಿದೆ. ಸಾಮಾನ್ಯವಾಗಿ ಮುಂಗಾರು ಸಮಯದಲ್ಲಿ ಬೆಳೆಯಲಾಗುತ್ತದೆ.

**ಹಂಚಿಕೆ, ಕ್ಷೇತ್ರ, ಉತ್ಪಾದನೆ ಮತ್ತು ಇಳುವರಿ:**

ಭಾರತದ 96 ಲಕ್ಷ ಹೆಕ್ಟೇರ್ ಪ್ರದೇಶ ಸಜ್ಜೆಯ ಉತ್ಪಾದನೆಗೆ ಒಳಪಟ್ಟಿದೆ. ಇದು ಜೀವನಾಧಾರದ ಬೇಸಾಯವಾಗಿದ್ದು ಇದನ್ನು ಅತ್ಯಲ್ಪ ಪ್ರಮಾಣದಲ್ಲಿ ಸೌದಿ, ಈಜಿಪ್ಟ್, ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ರಫ್ತು ಮಾಡಲಾಗುವುದು.

**ಮೆಕ್ಕೆಜೋಳ:**

ನಮ್ಮ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಭತ್ತ ಮತ್ತು ಗೋಧಿಯ ನಂತರ 3ನೇ ಸ್ಥಾನದಲ್ಲಿದ್ದು, ಶೇ.52ರಷ್ಟು ಮೆಕ್ಕೆಜೋಳ ಪಡೆದಿದೆ. ನಮ್ಮಲ್ಲಿ ಈ ಬೆಳೆಯ ಉತ್ಪಾದನೆಯ ಶೇ.45–48ರಷ್ಟು ಮಾನವನ ಆಹಾರಕ್ಕಾಗಿ ಹಾಗೂ ಉಳಿದ ಭಾಗವನ್ನು ಪೌಷ್ಠಿಕ ಆಹಾರ ಹಾಗೂ ಪಶು ಮತ್ತು ಕೋಳಿ ಆಹಾರವಾಗಿ ಬಳಸುವರು. ಪ್ರಪಂಚದ ಸುಮಾರು 20 ದೇಶಗಳ ಅತಿಮುಖ್ಯ ಆಹಾರಬೆಳೆ ಇದಾಗಿದೆ.

ಮೆಕ್ಕೆಜೋಳವು ಉಷ್ಣವಲಯದ ಬೆಳೆಯಾಗಿದೆ. ಆದ್ದರಿಂದ 35 ಡಿಗ್ರಿ ಸೆ. ತಾಪಮಾನದಲ್ಲಿ ಸಾಮಾನ್ಯವಾಗಿ ಇದು ಬೆಳೆಯುತ್ತದೆ. ಮಳೆಯ ಪ್ರಮಾಣ 75–125 ಸೆ.ಮೀ. ಮತ್ತು ಕಪ್ಪು, ಕೆಂಪು ಅಥವಾ ಜೇಡಿ ಜೈವಿಕಾಂಶ ಮಣ್ಣುಗಳಲ್ಲಿ ಇದನ್ನು ಬೆಳೆಯಲಾಗುತ್ತದೆ. ಇದು ಖಾರೀಫ ಮತ್ತು ರಬಿ ಬೆಳೆಯಾಗಿದೆ. ದಕ್ಷಿಣ ಭಾರತದಲ್ಲಿ ಮಾತ್ರ ಇದನ್ನು ಚಳಿಗಾಲದಲ್ಲಿ ಬೆಳೆಯುವರು.

3 ಕ್ಷೇತ್ರ, ಉತ್ಪಾದನೆ ಮತ್ತು ಇಳುವರಿ. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಅತಿ ಹೆಚ್ಚು ಬೆಳೆಯಲಾಗುತ್ತದೆ. ಇತರೆ ಪ್ರಮುಖ ರಾಜ್ಯಗಳೆಂದರೆ ಬಿಹಾರ, ರಾಜಸ್ತಾನ, ತಮಿಳುನಾಡು, ಮಧ್ಯಪ್ರದೇಶ, ಉತ್ತರಪ್ರದೇಶ, ಹಿಮಾಚಲ ಪ್ರದೇಶ, ಗುಜರಾತ್, ಜಮ್ಮು ಕಾಶ್ಮೀರ, ಪಂಜಾಬ್, ಜಾರ್ಖಂಡ್.

**ರಾಗಿ:**

ಕರ್ನಾಟಕ ರಾಜ್ಯದ ಅದರಲ್ಲಿಯೂ ದಕ್ಷಿಣ ಭಾಗದಲ್ಲಿ ಇದು ಅತ್ಯಂತ ಮುಖ್ಯ ಆಹಾರ ಬೆಳೆಯಾಗಿದೆ. ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಜಮ್ಮುಕಾಶ್ಮೀರ, ಓರಿಸ್ಸಾ, ಉತ್ತರಪ್ರದೇಶದಲ್ಲಿ ಇದನ್ನು ಉತ್ಪಾದಿಸಲಾಗುತ್ತದೆ. ಇದು ಉಷ್ಣವಲಯದ ಅಲ್ಪಕಾಲಿಕ ಬೆಳೆಯಾಗಿದೆ. ಈ ಬೆಳೆಗೆ ಶುಷ್ಕ ಹವಾಗುಣ ಸಹಿಸಿಕೊಳ್ಳುವ ಗುಣ ಹೊಂದಿದೆ. ಇದಕ್ಕೆ ಅನುಕೂಲವಾಗುವ ಉಷ್ಣಾಂಶ 20–30 ಡಿಗ್ರಿ ಸೆ. ಮತ್ತು ಮಳೆಯ ಪ್ರಮಾಣ 50–100 ಸೆ.ಮೀ. ಇದಕ್ಕೆ ಸೂಕ್ತವಾಗುವ ಮಣ್ಣು ಕಪ್ಪು, ಮರಳು ಮಿಶ್ರಿತ, ಕೆಂಪು, ಮರಳು ಮಿಶ್ರಿತ ಮೆಕ್ಕಲು ಮಣ್ಣು. ಇದನ್ನು ಕಡಿಮೆ ಮಳೆ, ಅನಿಶ್ಚಿತ ಮಳೆಯ ಪ್ರದೇಶದಲ್ಲಿ ಬೆಳೆಯಬಹುದಾಗಿದೆ.

**ಹಂಚಿಕೆ:**

ಕರ್ನಾಟಕ, ತಮಿಳುನಾಡು, ಉತ್ತರಖಾಂಡಗಳಲ್ಲಿ ಮತ್ತು ಮಹಾರಾಷ್ಟ್ರ, ಆಂಧ್ರಪ್ರದೇಶ, ಓರಿಸ್ಸಾ, ಗುಜರಾತ್, ಪಂಜಾಬ್, ಜಮ್ಮು ಕಾಶ್ಮೀರಗಳಲ್ಲಿ ಬೆಳೆಯಲಾಗುತ್ತದೆ. 2010–11ರಲ್ಲಿ ಒಟ್ಟು 17.76 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 27.41 ಲಕ್ಷ ಟನ್ ಉತ್ಪಾದಿಸಿ, 1540 ಕಿ.ಗ್ರಾಂ ಹೆಚ್ಚಿನ ಇಳುವರಿ ಪಡೆಯಲಾಗಿತ್ತು. ಇದನ್ನು ವಿಸ್ಕಿ, ಮಾಲ್ಟ್ ತಯಾರಿಕೆಯಲ್ಲಿ ಬಳಸಲಾಗುತ್ತದೆ. ರಾಗಿಯನ್ನು ಅಲ್ಪ ಪ್ರಮಾಣದಲ್ಲಿ ಶ್ರೀಲಂಕಾ, ಈಜಿಪ್ಟ್, ಮಲೇಷಿಯಾ, ಇಸ್ರೇಲ್ ದೇಶಗಳಿಗೆ ರಫ್ತು ಮಾಡಲಾಗುತ್ತದೆ.

**ಬಾರ್ಲಿ:**

ಉತ್ತರ ಭಾರತದ ಕೆಲವು ಭಾಗಗಳಲ್ಲಿ ಮುಖ್ಯ ಆಹಾರ ಧಾನ್ಯವಾಗಿದೆ. ಬಿಯರ್, ವಿಸ್ಕಿ, ಮುಂತಾದ ಆಲ್ಕೋಹಾಲಿಕ್ ಪಾನೀಯ ತಯಾರಿಸಲು ಬಳಸಲಾಗುತ್ತದೆ. ಇದು ಸಮಶೀತೋಷ್ಣ ವಲಯದ ಬೆಳೆಯಾಗಿದೆ. 25–50 ಸೆ.ಮೀ. ಮಳೆ ಸಾಕಾಗುತ್ತದೆ. ಕ್ಷಾರಯುಕ್ತ ಮಣ್ಣು, ಸಾಧಾರಣ ಫಲವತ್ತತೆಯ, ನೀರು ಬಸಿದು ಹೋಗುವಂತಹ ಮರಳು ಮಿಶ್ರಿತ ಮಣ್ಣಿನಲ್ಲಿ ಇದು ಹುಲುಸಾಗಿ ಬೆಳೆಯುವುದು. ಇದು ಚಳಿಗಾಲದ ಬೆಳೆಯಾಗಿದೆ. ಭಾರತದಲ್ಲಿ 54.6%ರಷ್ಟು ಬಾರ್ಲಿ ನೀರಾವರಿಯಿಂದ ಬೆಳೆಯಲಾಗುತ್ತದೆ.

ಭಾರತದಲ್ಲಿ ಸುಮಾರು 7.54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಉತ್ತರ ಪ್ರದೇಶ, ರಾಜಸ್ತಾನ, ಮಧ್ಯಪ್ರದೇಶ ಮತ್ತು ಇತರೆ ರಾಜ್ಯಗಳಾದ ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಬಾರ್ಲಿಯ ಹಂಚಿಕೆಯು ಸಂಪೂರ್ಣವಾಗಿ ಎತ್ತರದ ಮೈದಾನದ ರಾಜ್ಯಗಳಿಗೆ ಸೀಮಿತಗೊಂಡಿದೆ.

**ದ್ವಿದಳ ಧಾನ್ಯಗಳು:**

ಭಾರತವು ಪ್ರಪಂಚದ ದ್ವಿದಳ ಧಾನ್ಯಗಳ ಅತಿ ಹೆಚ್ಚು ಕ್ಷೇತ್ರವನ್ನು ಒಳಗೊಂಡಿದ್ದು, ಅತಿ ಹೆಚ್ಚು ದ್ವಿದಳ ಧಾನ್ಯಗಳನ್ನು ಉತ್ಪಾದಿಸುವುದಲ್ಲದೆ ಪ್ರಪಂಚದಲ್ಲಿ ಅತಿ ಹೆಚ್ಚಿನ ಪ್ರಮಾಣದ ದ್ವಿದಳ ಧಾನ್ಯ ಬಳಕೆ ಮಾಡುವ

ರಾಷ್ಟ್ರವಾಗಿದೆ. ಆದರೂ ಈ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿರುವುದು ವಿಪರ್ಯಾಸವಾಗಿದೆ. ದ್ವಿದಳ ಧಾನ್ಯಗಳ ಉತ್ಪಾದನೆಯು ಪಶುಗಳಿಗೆ ಉತ್ತಮ ಹಸಿರು ಆಹಾರವನ್ನು ಪೂರೈಸುವುದು.

ಈ ಬೆಳೆಗಳ ಬೇರುಗಳು ವಾಯುಮಂಡಲದ ಸಾರಜನಕವನ್ನು ಹೀರಿ ಮಣ್ಣಿಗೆ ಸೇರಿಸುತ್ತದೆ. ಪ್ರತಿ ಹೆಕ್ಟೇರ್ ಪ್ರದೇಶದಲ್ಲಿ ಒಂದು ವರ್ಷದಲ್ಲಿ ಹೀಗೆ ಮಣ್ಣಿಗೆ ಸೇರ್ಪಡೆಯಾಗುವ ಸಾರಜನಕದ ಪ್ರಮಾಣ 20–60 ಕೆ.ಜಿ.ಗಳೆಂದು ಅಂದಾಜು ಮಾಡಲಾಗಿದೆ. ದ್ವಿದಳ ಧಾನ್ಯಗಳನ್ನು ಪರ್ಯಾಯವಾಗಿ ಬೆಳೆಯುವುದರಿಂದ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯ ಮಟ್ಟವನ್ನು ಕಾಯ್ದುಕೊಳ್ಳಬಹುದಾಗಿದೆ. ಇದರಿಂದಾಗಿ ದ್ವಿದಳ ಧಾನ್ಯಗಳನ್ನು ರೈತನ ಭೂಮಿಯ ಗೊಬ್ಬರ ಕಾರ್ಖಾನೆಯೆಂದು ಪರಿಗಣಿಸಲಾಗಿದೆ. 2010–11ರಲ್ಲಿ ಭಾರತದ ಒಟ್ಟು 262.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 180.9 ಲಕ್ಷ ಟನ್ ಉತ್ಪಾದನೆ ಕಂಡಿದ್ದು, 689 ಕೆ.ಜಿ. ಹೆಕ್ಟೇರ್ ಇಳುವರಿ ಕಂಡು ಬಂದಿದೆ. ಭಾರತದಲ್ಲಿ ಸುಮಾರು 12 ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತಿದ್ದು, ಇವುಗಳಲ್ಲಿ ಕಡಲೆ, ತೊಗರಿ, ಉದ್ದು, ಹೆಸರು ಮತ್ತು ಅವರೆ ಅತಿ ಮುಖ್ಯವಾದವು. ಮಾನವನ ದೇಹಕ್ಕೆ ಈ ದವಸ ಧಾನ್ಯಗಳು ಅತಿ ಅಗತ್ಯವಾಗಿವೆ. ಡಬ್ಲ್ಯೂಹೆಚ್‌ಓ ಪ್ರತಿಯೊಬ್ಬ ವ್ಯಕ್ತಿ ಪ್ರತಿದಿನ ಸುಮಾರು 80 ಗ್ರಾಂ ದ್ವಿದಳ ಧಾನ್ಯಗಳನ್ನು ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ ಪ್ರತಿನಿತ್ಯ ಪ್ರತಿಯೊಬ್ಬ ಕನಿಷ್ಠ 47 ಗ್ರಾಂಗಳಷ್ಟು ದ್ವಿದಳ ಧಾನ್ಯಗಳನ್ನು ಬಳಸಬೇಕೆಂದು ಶಿಫಾರಸ್ಸು ಮಾಡಿದೆ. ಭಾರತದಲ್ಲಿ ಪ್ರಸ್ತುತ ದೈನಂದಿನ ತಲಾವಾರು ಬಳಕೆ ಕೇವಲ 30–35 ಗ್ರಾಂಗಳಷ್ಟು ಮಾತ್ರ.

**ತೊಗರಿ:**

ಭಾರತದಲ್ಲಿ ಉತ್ಪಾದಿಸಲಾಗುವ ದ್ವಿದಳ ಧಾನ್ಯಗಳ ಒಟ್ಟು ಉತ್ಪಾದನೆಯಲ್ಲಿ ತೊಗರಿಯ ಪಾಲು 20%. ಪ್ರಪಂಚದ ಒಟ್ಟು ತೊಗರಿ ಶೇ.90ರಷ್ಟನ್ನು ಭಾರತವು ಉತ್ಪಾದಿಸುವುದು. ಮಹಾರಾಷ್ಟ್ರ ಅತಿ ಹೆಚ್ಚು ತೊಗರಿಯನ್ನು ಉತ್ಪಾದಿಸುವುದು. ಕರ್ನಾಟಕವು ತೊಗರಿಯ ಉತ್ಪಾದನೆಯಲ್ಲಿ ಭಾರತದಲ್ಲಿ 3ನೇ ಸ್ಥಾನವನ್ನು ಪಡೆದಿದೆ.

**ಕಡಲೆ:**

ಇದು ಭಾರತದ ಅತಿ ಮುಖ್ಯ ದ್ವಿದಳ ಧಾನ್ಯ. ದ್ವಿದಳ ಧಾನ್ಯಗಳ ಒಟ್ಟು ಕ್ಷೇತ್ರದ 40%ರಷ್ಟು ಭಾಗದಲ್ಲಿ ಕಡಲೆಯನ್ನು ಬೆಳೆಯಲಾಗುತ್ತಿದ್ದು, ಇದರ ಉತ್ಪಾದನೆ ಒಟಟು ದ್ವಿದಳ ಧಾನ್ಯಗಳ ಉತ್ಪಾದನೆಯ 33.1%ರಷ್ಟಿರುವುದು. ಮೂಲತ: ಸಮಶೀತೋಷ್ಣವಲಯದ ಬೆಳೆಯಾಗಿದೆ. ಇದನ್ನು ಮಧ್ಯಪ್ರದೇಶದಲ್ಲಿ ಅತಿ ಹೆಚ್ಚು ಉತ್ಪಾದಿಸಲಾಗುತ್ತದೆ. ಉತ್ತರ ಪ್ರದೇಶ, ರಾಜಸ್ತಾನ, ಮಹಾರಾಷ್ಟ್ರ, ಕರ್ನಾಟಕ ಇತರೇ ಪ್ರಮುಖ ರಾಜ್ಯಗಳು.

**ಹೆಸರು:**

ಭಾರತವು ಉತ್ಪಾದಿಸುವ ದ್ವಿದಳ ಧಾನ್ಯಗಳಲ್ಲಿ ಹೆಸರು ಕಾಳು ಸಹ ಒಂದಾಗಿದೆ. ಇದು ಉಷ್ಣವಲಯದ ಹಾಗೂ ಉಪ ಉಷ್ಣವಲಯದ ಬೆಳೆಯಾಗಿದ್ದು ಮಳೆಯಾಶ್ರಯದ ಪ್ರದೇಶಗಳಲ್ಲಿಯೇ ಬೆಳೆಯಲಾಗುವುದು.

**ಅವರೆ:**

ಇದರ ಕ್ಷೇತ್ರ ಹಾಗೂ ಉತ್ಪಾದನೆಗಳೆರಡರಲ್ಲಿಯೂ ಭಾರತ ದೇಶವು ಪ್ರಪಂಚದಲ್ಲಿ ಮೊದಲನೆಯ ಸ್ಥಾನದಲ್ಲಿದೆ. ಇದು ಪ್ರಪಂಚದ ಒಟ್ಟು ಉತ್ಪಾದನೆಯ ಶೇ.34ರಷ್ಟು ಅವರೆಯನ್ನು ಉತ್ಪಾದಿಸುವುದು. ಭಾರತವು ಅವರೆಕಾಳಿನ ರಫ್ತಿಗೂ ಸಹ ಹೆಸರಾಗಿದೆ. ಇದು ಸಮಶೀತೋಷ್ಣವಲಯದ ಬೆಳೆಯಾಗಿದೆ.

**ವಾಣಿಜ್ಯ ಮತ್ತು ನಾರಿನ ಬೆಳೆಗಳು:**

ದೇಶದ ಜೀವನಾಧಾರ ಆಹಾರ ಧಾನ್ಯಗಳ ಉತ್ಪಾದನೆ ಪ್ರಾಧಾನ್ಯತೆಯಿಂದ ಕೂಡಿದೆ. ಸಾಂಪ್ರದಾಯಿಕ ಬೇಸಾಯವು ವಾಣಿಜ್ಯ ಮಾದರಿಯ ಮಾರುಕಟ್ಟೆಯ ಬೇಡಿಕೆಯ ಬೆಳೆಗಳ ಉತ್ಪಾದನೆಗೆ ಬದಲಾವಣೆಯನ್ನು ತಂದಿದೆ. ಆಹಾರ ಧಾನ್ಯಗಳ ಪ್ರಾಧಾನ್ಯತೆಯಿಂದ ಭಾರತದ ಬೇಸಾಯವು ವಾಣಿಜ್ಯ ಬೆಳೆಗಳಿಗೆ ಸ್ಪಷ್ಟ ಮಾರ್ಪಾಡು ಹೊಂದುತ್ತಿದೆ. 2012ರಲ್ಲಿ ಒಟ್ಟು ಸಾಗುವಳಿ ಕ್ಷೇತ್ರದ ಶೇ.14ರಷ್ಟು ಕ್ಷೇತ್ರವು ವಾಣಿಜ್ಯ ಬೆಳೆಗಳ ಉತ್ಪಾದನೆಗೆ ಒಳಪಟ್ಟಿದೆ. ಭಾರತದಲ್ಲಿ ಉತ್ಪಾದಿಸಲಾಗುವ ಮುಖ್ಯ ವಾಣಿಜ್ಯ ಬೆಳೆಗಳೆಂದರೆ ಹತ್ತಿ, ಸೆಣಬು, ಕಬ್ಬು, ಎಣ್ಣೆ, ಕಾಳುಗಳು, ಸಾಂಬಾರ್ ಬೆಳೆಗಳು, ಹೊಗೆ ಸೊಪ್ಪು, ರಬ್ಬರ್, ಹಣ್ಣುಗಳು, ತರಕಾರಿಗಳು ಇತ್ಯಾದಿ.

**ಹತ್ತಿ:**

ನಾರಿನ ಬೆಳೆಯಲ್ಲಿ ಹತ್ತಿ ಅತಿ ಮುಖ್ಯವಾದುದು. ಪ್ರಪಂಚದ ಒಟ್ಟು ಹತ್ತಿಯ ಕ್ಷೇತ್ರದ ಶೇ.27ರಷ್ಟನ್ನು ಹೊಂದಿರುವ ಭಾರತವು ಶೇ.18ರಷ್ಟನ್ನು ಉತ್ಪಾದಿಸುತ್ತಿದ್ದು, ಉತ್ಪಾದನೆಯಲ್ಲಿ ಇದು ಚೈನಾ ನಂತರ 2ನೇ ಸ್ಥಾನದಲ್ಲಿದೆ. ಭಾರತವು ಇಂದು ಕಚ್ಚಾ ಹತ್ತಿಯನ್ನು ರಫ್ತು ಮಾಡುತ್ತಿದ್ದು, ಅಮೂಲ್ಯ ವಿದೇಶೀ ವಿನಿಮಯ ಗಳಿಕೆಗೆ ಸಹಾಯಕವಾಗಿದೆ.

ಹತ್ತಿಯ ಕ್ಷೇತ್ರವು ಸಾಧಾರಣ ಮತ್ತು ಕಡಿಮೆ ಮಳೆ ಪಡೆಯುವ ಪ್ರದೇಶಗಳಲ್ಲಿ ಕೇಂದ್ರೀಕೃತಗೊಂಡಿರುತ್ತದೆ. ಉಷ್ಣಾಂಶ 20 ಡಿಗ್ರಿಯಿಂದ 25 ಡಿಗ್ರಿ ಸೆ.ವರೆಗೆ ಮತ್ತು ಮಳೆಯ ಪ್ರಮಾಣ 75–150 ಸೆ.ಮೀ.ನ ಕೆಂಪು, ಮೆಕ್ಕಲು, ಕಪ್ಪು ಮಣ್ಣುಗಳಲ್ಲಿ ಬೆಳೆಯಲಾಗುತ್ತದೆ.

ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ಹತ್ತಿ ಬೆಳೆಯ ಕ್ಷೇತ್ರವನ್ನು ಒಳಗೊಂಡಿದೆ. ಉತ್ಪಾದನೆಯಲ್ಲಿ ಇದು ಚೈನಾ ನಂತರ 2ನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ 20.6, ಆಂಧ್ರಪ್ರದೇಶ 20.2, ಗುಜರಾತ್ 25.5%, ಪಂಜಾಬ್ 5.8, ಕರ್ನಾಟಕ 4.2, ಹರಿಯಾಣ 6.8ರಷ್ಟು ಬೆಳೆಯಲಾಗುತ್ತದೆ.

**ಕಬ್ಬು:**

ಬಹುತೇಕ ಸಕ್ಕರೆ ಕೈಗಾರಿಕೆಗಳು ಗ್ರಾಮೀಣ ವಲಯದಲ್ಲಿದ್ದು ಗ್ರಾಮೀಣ ಅಭಿವೃದ್ಧಿಯಲ್ಲಿ ಇದರ ಪಾತ್ರ ಅತ್ಯಂತ ಹಿರಿದು. ಇದು ರಾಜ್ಯದ ವಿದ್ಯುತ್ ಜಾಲಕ್ಕೂ ಉತ್ತಮ ಕೊಡುಗೆ ನೀಡುತ್ತಿವೆ. ಭಾರತವು ಕಬ್ಬು ಉತ್ಪಾದನೆಯಲ್ಲಿ ಬ್ರೆಜಿಲ್ ನಂತರ 2ನೇ ಸ್ಥಾನದಲ್ಲಿದೆ.

| ಕ್ಷೇತ್ರ | ಉತ್ಪಾದನೆ |
|---|---|
| ಬ್ರೆಜಿಲ್ 36.5% | 37.8 |
| ಭಾರತ 19.7% | 19.6 |
| ಚೈನಾ 7.0% | 7.0 |

**ಇದರ ಅಗತ್ಯ ಭೌಗೋಳಿಕ ಅಂಶಗಳು:**

1) ಉಷ್ಣಾಂಶ: 21–26 ಡಿಗ್ರಿ ಸೆ.
2) ಮಳೆ ಮತ್ತು ನೀರಾವರಿ: 100–150 ಸೆ.ಮೀ.
3) ಮಣ್ಣು: ವಿವಿಧ ಬಗೆಯ ಫಲವತ್ತಾದ ಮರಳು ಮಿಶ್ರಿತ. ಮೆಕ್ಕಲು ಮಣ್ಣು ಅತ್ಯಂತ ಉಪಯುಕ್ತ. ಜೇಡಿಮಣ್ಣು, ಕ್ಷಾರಯುಕ್ತ ಮಣ್ಣು ನಡೆಯುತ್ತದೆ.

ಭಾರತದಲ್ಲಿ ಕಬ್ಬು ಬೆಳೆಯ ಉತ್ಪಾದನೆ ಈ ಕೆಳಗಿನಂತಿದೆ.

| ರಾಜ್ಯ | ಕ್ಷೇತ್ರ | ಉತ್ಪಾದನೆ |
|---|---|---|
| ಉತ್ತರಪ್ರದೇಶ | 43% | 39.8 |
| ಮಹಾರಾಷ್ಟ್ರ | 18.6% | 18.3 |
| ಕರ್ನಾಟಕ | 8.3% | 10.5 |
| ತಮಿಳುನಾಡು | 7.5% | 10.4 |

**ಹೊಗೆಸೊಪ್ಪು:**

ನಿಕೋಟಿಯಾನ ವರ್ಗಕ್ಕೆ ಸೇರಿದ ಸಸ್ಯವಾದ ಇದರ ಮೂಲ ದಕ್ಷಿಣ ಅಮೇರಿಕಾದ ಆಂಡೀಸ್ ಪರ್ವತ ಪ್ರದೇಶ. ಈ ಬೆಳೆಯಲ್ಲಿ ಎರಡು ವಿಧಗಳಿವೆ. ಅವುಗಳು ನಿಕೋಷಿಯನ್ ಟೊಬಾಕಂ, ನಿಕೋಷಿಯನ್ ರಷ್ಟಿಕ್.

**ಇದರ ಅಗತ್ಯ ಭೌಗೋಳಿಕ ಅಂಶಗಳು:**

* ಉಷ್ಣಾಂಶ: 21–27ಡಿಗ್ರಿ ಸೆ.
* ಸಾಧಾರಣ ಮಳೆಯ ಹಂಚಿಕೆ.

* ಮಣ್ಣು: ಮರಳು ಮಿಶ್ರಿತ, ಜೈವಿಕಾಂಶ ಕಡಿಮೆ. ಹೆಚ್ಚು ಖನಿಜಾಂಶವುಳ್ಳ ಮಣ್ಣು.
* ಗೊಬ್ಬರ: ರಾಸಾಯನಿಕ ಮತ್ತು ಕೊಟ್ಟಿಗೆ ಗೊಬ್ಬರ ಎರಡೂ ಅಗತ್ಯ.
* ಕೆಲಸಗಾರರು ಮತ್ತು ಮಾರುಕಟ್ಟೆ.

ಪ್ರಪಂಚದಲ್ಲಿ ತಂಬಾಕು ಬೆಳೆಯ ಹಂಚಿಕೆ ಈ ಕೆಳಗಿನಂತಿದೆ.

| ದೇಶ | ಕ್ಷೇತ್ರ | ಉತ್ಪಾದನೆ |
|---|---|---|
| ಚೈನಾ | 34.7% | 42.8 |
| ಭಾರತ | 11.6% | 11.25 |
| ಬ್ರೆಜಿಲ್ | 10.8% | 12.90 |

ಭಾರತವು 2012-13ರಲ್ಲಿ ಸುಮಾರು 5030 ಕೋಟಿ ರೂ. ಮೌಲ್ಯದ 230 ಸಾವಿರ ಟನ್ ಹೊಗೆಸೊಪ್ಪನ್ನು ರಫ್ತು ಮಾಡಿತು. ಪ್ರಪಂಚದ ಸಿಗರೇಟ್ ರಫ್ತು ಮಾಡುವ ಮುಖ್ಯ ರಾಷ್ಟ್ರಗಳಲ್ಲಿ ಭಾರತವು 9ನೇ ಸ್ಥಾನವನ್ನು ಪಡೆದಿದೆ. ಕಚ್ಚಾ ಹೊಗೆಸೊಪ್ಪು ಭಾರತದಿಂದ ರಷ್ಯಾ, ಜಪಾನ್, ಜರ್ಮನಿ, ಪಶ್ಚಿಮ ಯೂರೋಪಿನ ದೇಶಗಳು ಹಾಗೂ ಅರಬ್ ದೇಶಗಳಿಗೆ ರಫ್ತಾಗುವುದು.

**ಸೆಣಬು:**

ಭಾರತವು ಉತ್ಪಾದಿಸುವ ನಾರಿನ ಬೆಳೆಗಳಲ್ಲಿ ಸೆಣಬು ಹತ್ತಿಯ ನಂತರ 2ನೇ ಸ್ಥಾನ ಪಡೆದಿದೆ. ಭಾರತವು ಪ್ರಪಂಚದಲ್ಲಿ ಸೆಣಬಿನ ಶೇ.64.6ರಷ್ಟನ್ನು ಉತ್ಪಾದಿಸುತ್ತಿದ್ದು, ಕ್ಷೇತ್ರ ಮತ್ತು ಉತ್ಪಾದನೆಗಳೆರಡರಲ್ಲಿಯೂ ದೇಶವು ಮೊದಲ ಸ್ಥಾನದಲ್ಲಿದೆ. ಇದು ಪಶ್ಚಿಮ ಬಂಗಾಳದ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಸೆಣಬಿನ ಕೈಗಾರಿಕೆಗಳಲ್ಲಿ ಈ ನಾರನ್ನು ಕಚ್ಚಾ ವಸ್ತುವನ್ನಾಗಿ ಬಳಸಿ ಗೋಣಿಚೀಲ, ಹಗ್ಗ, ದಾರ, ಟಾರ್ಪಲಿನ್, ಪ್ಯಾಕಿಂಗ್ ಬಟ್ಟೆ ಮುಂತಾದ ವಸ್ತುಗಳನ್ನು ತಯಾರಿಸಲಾಗುವುದು.

ಇತ್ತೀಚಿನ ವರ್ಷಗಳಲ್ಲಿ ಹತ್ತಿ, ಎಣ್ಣೆ ಮತ್ತು ರೇಷ್ಮೆ ಬಟ್ಟೆಗಳ ತಯಾರಿಕೆಯಲ್ಲಿಯೂ ಸೆಣಬಿನ ನಾರನ್ನು ಮಿಶ್ರ ಮಾಡಲಾಗುತ್ತದೆ. ಇದರ ಉತ್ಪನ್ನಗಳು ಸುಲಭವಾಗಿ ಕೊಳೆಯುವುದರಿಂದ ಪ್ಲಾಸ್ಟಿಕ್‌ನಂತೆ ಪರಿಸರ ನೈರ್ಮಲ್ಯಕ್ಕೆ ಧಕ್ಕೆಯುಂಟಾಗುವುದಿಲ್ಲ.

**ಇದರ ಭೌಗೋಳಿಕ ಅಂಶಗಳು:**

* ಉಷ್ಣಾಂಶ: 24.35 ಡಿಗ್ರಿ ಸೆ.
* ಮಳೆ: 150 ಸೆ.ಮೀ.
* ಮಣ್ಣು: ಮರಳು ಮಿಶ್ರಿತ ಜೇಡಿ ಮತ್ತು ಮೆಕ್ಕಲು, ನೀರು, ಗೊಬ್ಬರ.
* ಉಷ್ಣವಲಯದ ತಗ್ಗಾದ ನೀರು ನಿಲ್ಲುವ ಜೌಗು ಪ್ರದೇಶಗಳು ಅತಿ ಸೂಕ್ತ. ತಗ್ಗು ಜೌಗಿನ ಪ್ರದೇಶ ಇತರ ಬೆಳೆಗಳ ಉತ್ಪಾದನೆಗೆ ಸೂಕ್ತವಲ್ಲ.

**ಸೆಣಬು ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಹಂಚಿಕೆ:**

| | |
|---|---|
| ಭಾರತ | 64.6% |
| ಬಾಂಗ್ಲಾ | 28.7% |
| ಚೈನಾ | 3% ಇತರೇ. |

ಇದರ ಉತ್ಪಾದನೆ ಭಾರತ ಮತ್ತು ಬಾಂಗ್ಲಾಕ್ಕೆ ಮಾತ್ರ ಸೀಮಿತವಾಗಿದೆ.

**ಭಾರತದಲ್ಲಿ ಹಂಚಿಕೆ (ಉತ್ಪಾದನೆ):**

ಭಾರತದಲ್ಲಿ 2010-11ರಲ್ಲಿ 7.7 ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ 113 ಲಕ್ಷ ಟನ್ ಉತ್ಪಾದನೆಯಾಗಿ, ಸರಾಸರಿ 2390 ಕೆ.ಜಿ. ಹೆಕ್ಟೇರ್ ಇಳುವರಿ ಕಂಡುಬಂದಿದೆ. ಭಾರತದಲ್ಲಿ ಸೆಣಬಿನ ಉತ್ಪಾದಕರ ಹಿತಾಸಕ್ತಿಯ ನಿರ್ವಹಣೆಗಾಗಿ

ಸೆಣಬಿನ ಮಂಡಳಿಗಳನ್ನು ಸ್ಥಾಪಿಸಿದೆ. ಭಾರತವು ಕಚ್ಚಾ ಸೆಣಬನ್ನು ನೇಪಾಳ, ದಕ್ಷಿಣ ಕೊರಿಯಾ, ಮತ್ತು ಜಪಾನ್‌ಗಳಿಗೆ ರಫ್ತು ಮತ್ತು ಅಗತ್ಯವಿದ್ದರೆ ಬಾಂಗ್ಲಾದಿಂದ ಆಮದು ಮಾಡಿಕೊಳ್ಳುತ್ತದೆ.

**ಹಿಪ್ಪು ನೇರಳೆ:**

ಹಿಪ್ಪು ನೇರಳೆ ಗಿಡದ ಎಲೆಗಳನ್ನು ರೇಷ್ಮೆ ಹುಳುಗಳ ಸಾಕಾಣಿಕೆಗೆ ಬಳಸಲಾಗುವುದು. ಇದರಲ್ಲಿ ನಾಲ್ಕು ಬಗೆಯ ರೇಷ್ಮೆಗಳಿವೆ. ಅವುಗಳ ಹೆಸರು ಮತ್ತು ಉತ್ಪಾದನೆ ಪ್ರಮಾಣ ಈ ಕೆಳಗಿನಂತಿದೆ.

| ಸ್ಥಾನ | ವಿಧ | ಉತ್ಪಾದನೆ |
|---|---|---|
| 1 | ಹಿಪ್ಪುನೇರಳೆ | 80.2% |
| 2 | ಈರಿ | 13.5% |
| 3 | ಟಸಾರ್ | 5.8% |
| 4 | ಮುಗ | 0.5% |

ಭಾರತವು ಪ್ರಪಂಚದ ಒಟ್ಟು ಉತ್ಪಾದನೆಯ 20%ರಷ್ಟು ರೇಷ್ಮೆಯನ್ನು ಉತ್ಪಾದಿಸುವುದು.

ಇದರ ಭೌಗೋಳಿಕ ಅಂಶಗಳು ಈ ಕೆಳಗಿನಂತಿವೆ.

* ಉಷ್ಣಾಂಶ: 24–29 ಡಿಗ್ರಿ ಸೆ.
* ಮಳೆ: 60–250 ಸೆ.ಮೀ. ನೀರಾವರಿ ಅಗತ್ಯ.
* ಉತ್ತಮ ಇಳುವರಿಗೆ 65–80%ರಷ್ಟು ಆದ್ರತೆ ಅಗತ್ಯ.
* 300–900 ಮೀಟರ್ ಎತ್ತರದ ಪ್ರದೇಶದಲ್ಲಿ ಉತ್ತಮ ಬೆಳೆ.
* ಗಿಡಗಳ ಬೆಳವಣಿಗೆಗೆ ಸೂರ್ಯರಶ್ಮಿ ಅತ್ಯಗತ್ಯ.

ಪ್ರಪಂಚದ ರೇಷ್ಮೆ ಉತ್ಪಾದನೆಯಲ್ಲಿ ಭಾರತದ ಪಾಲು ಈ ಕೆಳಗಿನಂತಿದೆ.

| | |
|---|---|
| ಚೈನಾ | 81.1% |
| ಭಾರತ | 15.8% |
| ಇತರೆ | 3.1% |

ಕರ್ನಾಟಕ 42.7%, ಆಂಧ್ರಪ್ರದೇಶ 35.3%, ತಮಿಳುನಾಡು 7.8%, ಪಂಜಾಬ್ 10.5% ರಾಜ್ಯಗಳು ರೇಷ್ಮೆ ಉತ್ಪಾದನೆಯ ಪ್ರಮುಖ ರಾಜ್ಯಗಳಾಗಿವೆ. ಭಾರತ ರೇಷ್ಮೆ ಬಟ್ಟೆ ತಯಾರಿಕೆ ಹಾಗೂ ರಫ್ತಿನಲ್ಲಿ ಜಗತ್ತಿನ ಒಂದು ಪ್ರಮುಖ ರಾಷ್ಟ್ರವಾಗಿದೆ.

**ಸಾಂಬಾರ್ ಬೆಳೆಗಳು:**

ಭಾರತವನ್ನು 'ಸಾಂಬಾರ್ ಬೆಳೆಗಳ ದೇಶ'ವೆಂದು ಕರೆಯಲಾಗಿದೆ. ಭಾರತ ಪ್ರಪಂಚದಲ್ಲಿ ಅತಿ ಹೆಚ್ಚು ಸಾಂಬಾರ್ ಬೆಳೆಗಳನ್ನು ಬೆಳೆಯುವ, ಬಳಕೆ ಮಾಡುವ ಹಾಗೂ ರಫ್ತು ಮಾಡುವ ರಾಷ್ಟ್ರವಾಗಿರುವುದು. ಭಾರತವು ಕೆಲವು ಸಾಂಬಾರ್ ಉತ್ಪನ್ನಗಳನ್ನು ಆಮದು ಮಾಡಿಕೊಂಡು ಪುನ: ರಫ್ತು ಮಾಡುವುದು.

**ಸಾಂಬಾರ್ ಉತ್ಪನ್ನಗಳ ರಾಜ್ಯವಾರು ಕ್ಷೇತ್ರ ಮತ್ತು ಉತ್ಪಾದನೆ:**

| ರಾಜ್ಯ | ಕ್ಷೇತ್ರ (ಲ.ಹೆ.) | ಉತ್ಪಾದನೆ (ಶೇ) |
|---|---|---|
| ಆಂಧ್ರಪ್ರದೇಶ | 15.7 | 25.6 |
| ಗುಜರಾತ್ | 6.8 | 8.3 |
| ಕರ್ನಾಟಕ | 9.3 | 6.2 |
| ಮಧ್ಯಪ್ರದೇಶ | 12.4 | 10.6 |
| ರಾಜಸ್ತಾನ್ | 17.8 | 12.4 |
| ತಮಿಳುನಾಡು | 5.1 | 7.0 |

**ಎಣ್ಣೆಕಾಳುಗಳು:**

ಭಾರತ ಪ್ರಪಂಚದಲ್ಲಿ ಎಣ್ಣೆಗಳ ಕ್ಷೇತ್ರದಲ್ಲಿ ಮಾತ್ರವಲ್ಲದೆ ಉತ್ಪಾದನೆಯಲ್ಲಿಯೂ ಮೊದಲ ಸ್ಥಾನ. ಆದಾಗ್ಯೂ ಭಾರತದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ಹಾಗೂ ಆಂತರಿಕ ಮಾರುಕಟ್ಟೆಗಳ ನಡುವೆ ಅಂತರವಿರುವುದು. ಇದರಿಂದಾಗಿ ಇಮದಿಗೂ ಭಾರತವು ಬೇಡಿಕೆಯ 50%ರಷ್ಟು ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಎಣ್ಣೆಕಾಳುಗಳಲ್ಲಿ ಉತ್ಪಾದನೆ ಹೆಚ್ಚಿಸಲು 'ಹಳದಿ ಕ್ರಾಂತಿ' ಜಾರಿಗೆ ಮಾಡಲಾಯಿತು. ಪ್ರಪಂಚದ ಒಟ್ಟು ಎಣ್ಣೆಕಾಳುಗಳ ಕ್ಷೇತ್ರದ 19%ರಷ್ಟನ್ನು ಭಾರತ ಹೊಂದಿದೆ. ಶೇ.9ರಷ್ಟು ಉತ್ಪಾದಿಸುತ್ತದೆ. ಎಣ್ಣೆಕಾಳುಗಳ ಬಳಕೆಯಲ್ಲಿಯೂ ಭಾರತವೇ ಪ್ರಥಮವಾಗಿದೆ.

ಕೇವಲ ಎಣ್ಣೆ ಅಲ್ಲದೇ ಈ ಕಾಳುಗಳಿಂದ ಬಣ್ಣ, ವಾರ್ನಿಷ್, ಸೋಪ್, ಸುಗಂಧ, ಕೀಲೆಣ್ಣೆ ತಯಾರಿಸಲಾಗುತ್ತದೆ. ಭಾರತದಲ್ಲಿ ವಾಣಿಜ್ಯ ಮಾದರಿಯಲ್ಲಿ ಉತ್ಪಾದಿಸಲಾಗುವ 9 ಎಣ್ಣೆಕಾಳುಗಳಿವೆ. ಅವುಗಳು, ನೆಲಗಡಲೆ, ನೈಜರ್‌ಸೀಡ್, ಕುಸುಬೆ, ಹರಳು (ಔಡಲು), ಸಾಸಿವೆ, ಸೂರ್ಯಕಾಂತಿ, ಎಳ್ಳು, ಲಿನ್‌ಸೀಡ್, ಸೋಯಾ, ಇವುಗಳಲ್ಲಿ ಔಡಲ, ಲಿನ್‌ಸೀಡ್‌ಗಳನ್ನು ಕೈಗಾರಿಕಾ ತೈಲ ಉತ್ಪಾದನೆಗೆ ಬೆಳೆಸಲಾಗುವುದು. ನೆಲಗಡಲೆ, ಸೋಯಾ ಇವು ಮುಂಗಾರು ಬೆಳೆಗಳಾಗಿವೆ. ಸಾಸಿವೆ, ಲಿನ್‌ಸೀಡ್, ಕುಸುಬೆ ಇವು ರಬಿ ಬೆಳೆಗಳಾಗಿವೆ. ಸೂರ್ಯಕಾಂತಿ ಬೇಸಿಗೆ ಬೆಳೆಯಾಗಿದೆ.

ಹಳದಿ ಕ್ರಾಂತಿಯಿಂದಾಗಿ 2012ರಲ್ಲಿ ಒಟ್ಟು 27.22 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 29.80 ದಶಲಕ್ಷ ಟನ್ ಉತ್ಪಾದನೆಯಾಗಿ, 1130 ಕೆ.ಜಿ. ಹೆಕ್ಟೇರ್ ಇಳುವರಿಯಾಗಿದೆ.

**ತೋಟಗಾರಿಕೆ ಬೆಳೆಗಳು:**

ಚಹ, ಕಾಫಿ, ರಬ್ಬರ್, ಕೋಕೋ, ಅಡಿಕೆ, ತೆಂಗು ಇವುಗಳನ್ನು ತೋಟಗಾರಿಕೆಯ ಬೆಳೆಗಳು ಎನ್ನುವರು. ನಾವು (ಭಾರತೀಯರು) ತೋಟಗಾರಿಕೆಯ ಬೆಳೆಗಳನ್ನು ಉತ್ಪಾದಿಸುವ ಮತ್ತು ರಫ್ತು ಮಾಡುವ ಮುಖ್ಯ ದೇಶದವರಾಗಿದ್ದೇವೆ. ಈ ಬೆಳೆಗಳಿಗೆ ಉತ್ಪಾದನೆಗೆ ಒಳಪಟ್ಟಿರುವ ಒಟ್ಟು ವ್ಯವಸಾಯ ಕ್ಷೇತ್ರ ಕೇವಲ 1.46 ದಶಲಕ್ಷ ಹೆಕ್ಟೇರ್. ಇದು ದೇಶದ ಒಟ್ಟು ವ್ಯವಸಾಯ ಕ್ಷೇತ್ರದ 0.6%ರಷ್ಟೇ ಇದ್ದರೂ, ಉತ್ಪಾದನೆಯ ಪ್ರಾಮುಖ್ಯತೆ ಅಪಾರವಾಗಿದೆ.

**ಚಹ:**

ಇದು ಉತ್ತೇಜಕಾರಕ ಪಾನೀಯ ಬೆಳೆಗಳಾಗಿವೆ. ಭಾರತವು ಚಹವನ್ನು 'ರಾಷ್ಟ್ರೀಯ ಪಾನೀಯ'ವಾಗಿ ಪರಿಗಣಿಸಲು ಮುಂದಾಗಿದೆ. ಇದನ್ನು ಪಾನೀಯಗಳ ರಾಣಿ ಎಂದು ಕರೆಯುವರು. ಅಸ್ಸಾಂ 55.6%, ಪಂಜಾಬ್ 19.9%, ತಮಿಳುನಾಡು 13.9% ಗಳಲ್ಲಿ ಹೆಚ್ಚು ಬೆಳೆಯಲಾಗುತ್ತದೆ.

**ಕಾಫಿ:**

ಕಾಫಿಯು 2ನೇ ಅತಿ ಮುಖ್ಯವಾದ ಪಾನೀಯ ಬೆಳೆಯಾಗಿದೆ. ಭಾರತದ ಒಟ್ಟು ಕ್ಷೇತ್ರದ ಶೇ.2.8 ಕ್ಷೇತ್ರದಲ್ಲಿ, ಶೇ.3.6ರಷ್ಟು ಉತ್ಪಾದಿಸುತ್ತದೆ. ಕಾಫಿಯಲ್ಲಿ ಅರೇಬಿಕಾ, ರೊಬಸ್ಟ, ಲೈಬೀರಕಾ ಎಂಬ 3 ವಿಧಗಳಿವೆ. ಕರ್ನಾಟಕ 70% (ಚಿಕ್ಕಮಗಳೂರು, ಕೊಡಗು, ಹಾಸನ), ಕೇರಳ 21.4%, ತಮಿಳುನಾಡು 6.5%, ಈ ಮೂರು ರಾಜ್ಯಗಳಲ್ಲಿ ಅತಿ ಹೆಚ್ಚು ಕಾಫಿ ಉತ್ಪಾದನೆಯಾಗುತ್ತದೆ. ಉತ್ಪಾದನೆಯ 70%ರಷ್ಟು ಕಾಫಿಯು ರಫ್ತಾಗುತ್ತದೆ.

**ರಬ್ಬರ್:**

ಇದನ್ನು 'ಹೀವಿಯ ಬ್ರೆಸಿಲಿಯೆನ್ಸಿಸ್' ಎಂಬ ಜಾತಿಗೆ ಸೇರಿದ ಮರಗಳ ಹಾಲಿನಂತಹ ರಸದಿಂದ ತಯಾರಿಸಲಾಗುವುದು. ಭಾರತ ರಬ್ಬರಿನ ಉತ್ಪಾದನೆಯಲ್ಲಿ ಥೈಲ್ಯಾಂಡ್ ಮತ್ತು ಇಂಡೋನೇಷಿಯಾ, ಮಲೇಷಿಯಾ ನಂತರ ನಾಲ್ಕನೆಯ ಸ್ಥಾನದಲ್ಲಿದೆ. ಇದು ತೇವಯುತ ಉಷ್ಣವಲಯದ ಬೆಳೆಯಾಗಿದೆ. ಇದಕ್ಕೆ ಸರಾಸರಿ ಉಷ್ಣತೆ 25–35 ಡಿಗ್ರಿ ಸೆ. ಅವಶ್ಯಕವಾಗಿದೆ. ಕೇರಳ 91.8%, ತಮಿಳುನಾಡು 3.4%, ಕರ್ನಾಟಕ 2.5%ರಷ್ಟು ಬೆಳೆಯಲಾಗುತ್ತದೆ. ಪ್ರಪಂಚದಲ್ಲಿ ಭಾರತದ ಪಾಲು 8.1%. ಆಂತರಿಕ ಬೇಡಿಕೆ ಪೂರೈಸಲಾರದೇ ನಾವು ಕೃತಕ ರಬ್ಬರನ್ನು ಅಪಾರ ಪ್ರಮಾಣದಲ್ಲಿ ಉತ್ಪಾದಿಸುತ್ತಿದ್ದೇವೆ.

**ಕೋಕೋ:**

ಕೋಕೋ ಬೀಜಗಳು ಸಿಹಿ ತಿಂಡಿ ತಿನಿಸುಗಳು, ಪಾನೀಯಗಳು, ಚಾಕೋಲೇಟ್ ಹಾಗೂ ಇತರ ಆಹಾರ ವಸ್ತುಗಳ ಉತ್ಪಾದನೆಯಲ್ಲಿ ಬಳಕೆಯಾಗುತ್ತದೆ. ನಮ್ಮಲ್ಲಿ ತೆಂಗು ಮತ್ತು ಅಡಿಕೆಯ ಜೊತೆಗೆ ಕೋಕೋ ಬೆಳೆಯನ್ನು ಬೆಳೆಯಲಾಗುತ್ತಿದೆ. ಕೇರಳ 60.47%, ಕರ್ನಾಟಕ 25.07%, ತಮಿಳುನಾಡು 2.6%ರಷ್ಟು ಕೋಕೋ ಬೆಳೆಯಲಾಗುತ್ತದೆ. ಇಂದು ಇದರ ಉತ್ಪಾದನೆ ಆಂತರಿಕ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಿ ಇದನ್ನು ಸ್ವಲ್ಪ ಪ್ರಮಾಣದಲ್ಲಿ ರಫ್ತು ಮಾಡಲಾಗುವುದು.

**ಅಡಿಕೆ:**

ಇದರ ಉತ್ಪಾದನೆಯಲ್ಲಿ ಭಾರತವೇ ಪ್ರಥಮ ಧಾರ್ಮಿಕ ಕಾರ್ಯಗಳಿಗೆ ಯಥೇಚ್ಛವಾಗಿ ಇದನ್ನು ಬಳಸಲಾಗುತ್ತದೆ. ಇದು ಉಷ್ಣವಲಯದ ತಾಳೆ ಜಾತಿಯ ಮರ. ಇಲ್ಲಿಯ ಸಾಮಾನ್ಯ ಉಷ್ಣತೆ 15–35 ಡಿಗ್ರಿ ಸೆ. ಮತ್ತು ಮಳೆಯ ಪ್ರಮಾಣ 150–180 ಸೆ.ಮೀ. ಕರ್ನಾಟಕ 46.5%, ಕೇರಳ 24.3%, ಅಸ್ಸಾಂ 13.7%ರಷ್ಟು ಉತ್ಪಾದನೆ ಮಾಡುತ್ತವೆ.

**ತೆಂಗು:**

ಭಾರತ ತೆಂಗು ಉತ್ಪಾದನೆಯಲ್ಲಿ 3ನೇ ಸ್ಥಾನ ಪಡೆದಿದೆ. ಇದು ಬಹುಪಯೋಗಿ ಮರವಾಗಿದೆ. ಆದ್ದರಿಂದ ಇದನ್ನು ಕಲ್ಪವೃಕ್ಷ ಎಂದು ಕರೆಯಲಾಗುತ್ತದೆ. ಇದರ ಉತ್ಪನ್ನಗಳು ಕಾಯಿ, ಕೊಬ್ಬರಿ, ಮರ, ನಾರು, ಗರಿ, ಎಳನೀರು, ಕೊಬ್ಬರಿ ತಯಾರಿಕೆಗೆ ಮತ್ತು ಎಣ್ಣೆಯ ತಯಾರಿಕೆ ಬಳಕೆ.

ತಲೆಗೂದಲು ಎಣ್ಣೆ, ಸಾಬೂನು, ವನಸ್ಪತಿ ತುಪ್ಪದ ತಯಾರಿಕೆಯಲ್ಲಿ ಅಪಾರವಾಗಿ ಬಳಸುತ್ತಾರೆ. ಇದು ಉಷ್ಣವಲಯದ ಬೆಳೆ. ಇದು ಸಾಮಾನ್ಯವಾಗಿ 25–30 ಡಿಗ್ರಿ ಸೆ. ಮತ್ತು 120–130 ಡಿಗ್ರಿ ಸೆ.ಮೀ.ನ ಮಳೆಯ ಪ್ರಮಾಣದಲ್ಲಿ ಬೆಳೆಯುತ್ತದೆ. ತಮಿಳುನಾಡು 39.11%, ಕರ್ನಾಟಕ 13.83%, ಆಂಧ್ರಪ್ರದೇಶ 6.167%ರಷ್ಟು ತೆಂಗು ಉತ್ಪಾದಿಸುತ್ತವೆ. ಪಂಜಾಬ್, ಓಡಿಸ್ಸಾ, ಮಹಾರಾಷ್ಟ್ರ, ಗುಜರಾತ್, ಅಸ್ಸಾಂ, ಗೋವಾ, ಪಾಂಡಿಚೇರಿ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಇನ್ನಿತರ ಪ್ರಮುಖ ತೆಂಗು ಬೆಳೆಯುವ ರಾಜ್ಯಗಳು. ತೆಂಗಿನಕಾಯಿ ಮತ್ತು ಅದರ ಉತ್ಪನ್ನಗಳು ವಿದೇಶಿ ವಿನಿಮಯ ಗಳಿಸುತ್ತಿವೆ. ತೆಂಗಿನ ನಾರಿನ ಉತ್ಪನ್ನಗಳ 15% ರಫ್ತಾಗುತ್ತಿವೆ.

**ಜನಸಂಖ್ಯೆ:**

ಭಾರತದ ಜನಸಂಖ್ಯೆಯ ಅತಿ ಮುಖ್ಯ ಲಕ್ಷಣವೆಂದರೆ ಅದರ ನಿರಂತರ ಬೆಳವಣಿಗೆ. ಇತ್ತೀಚಿನ ಗಣತಿಗಳು ಜನಸಂಖ್ಯಾ ಗಾತ್ರವನ್ನು ಮಾತ್ರವಲ್ಲದೆ, ಮಾನವ ಸಂಪನ್ಮೂಲದ ಲಕ್ಷಣಗಳಾದ ಸಾಕ್ಷರತೆ, ವಯೋಮಾನದ ರಚನೆ, ಉದ್ಯೋಗ ಮಾಹಿತಿ, ಜನನ ಮರಣ ಪ್ರಮಾಣ, ನಿರೀಕ್ಷಿತ ಜೀವಿತಾವಧಿ, ವಲಸೆ, ಭೂಹಿಡುವಳಿಯ ಗಾತ್ರ ಮುಂತಾದ ಅಂಕಿಅಂಶಗಳನ್ನು ಸಂಗ್ರಹಿಸಲಾಗುತ್ತಿದೆ.

ಈ ಎಲ್ಲಾ ಅಂಕಿಅಂಶಗಳು ದೇಶದ ಮುಂದಿನ ಹತ್ತು ವರ್ಷಗಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಯೋಜನೆಗಳನ್ನು ರೂಪಿಸಲು ಮೂಲಾಧಾರವಾಗಿರುತ್ತವೆ.

1901ರಲ್ಲಿ 238 ದಶಲಕ್ಷವಿದ್ದ ಜನಸಂಖ್ಯೆ, ಇದು 2001ರಲ್ಲಿ 1027 ದಶಲಕ್ಷಕ್ಕೆ ಮುಟ್ಟಿತು. ಹೀಗೆ ಒಂದು ಶತಮಾನದ ಅವಧಿಯಲ್ಲಿ 4 ಪಟ್ಟು ಅಧಿಕಗೊಂಡಿದೆ. 2006ರಲ್ಲಿ ಚೀನಾಕ್ಕಿಂತ 238 ದಶಲಕ್ಷ ಜನಸಂಖ್ಯೆ ವ್ಯತ್ಯಾಸ ಹೊಂದಿದ್ದ ಭಾರತವು, 2011ರಲ್ಲಿ ಈ ವ್ಯತ್ಯಾಸವು 131 ದಶಲಕ್ಷಕ್ಕೆ ಇಳಿಕೆಯಾಗಿದೆ. ಭಾರತದ ಜನಸಂಖ್ಯೆ ಯು.ಎಸ್.ಎ., ಇಂಡೋನೇಷಿಯಾ, ಬ್ರೆಜಿಲ್, ಪಾಕ್, ಬಾಂಗ್ಲಾ, ಜಪಾನ್ ದೇಶಗಳ ಜನಸಂಖ್ಯೆಗೆ ಸಮನಾಗಿದೆ. ಭಾರತದ ಈ ಶೀಘ್ರಗತಿಯ ಜನಸಂಖ್ಯೆ ಬೆಳವಣಿಗೆಯ ಹಂತಗಳು ಈ ಕೆಳಗಿನಂತಿವೆ.

1) 1901–1921 ಸ್ಥಿರ ಜನಸಂಖ್ಯೆ

2) 1921–1951 ನಿರಂತರ ಬೆಳವಣಿಗೆ

3) 1951–1981 ಶೀಘ್ರ ಅಧಿಕ ಬೆಳವಣಿಗೆ

4) 1981–2011 ಅಧಿಕ ಬೆಳವಣಿಗೆ ಹಾಗೂ ಕಡಿಮೆಯಾಗುವ ಸ್ಪಷ್ಟ ಸೂಚನೆ.

ಭಾರತದ ಜನಸಂಖ್ಯಾ ಬೆಳವಣಿಗೆಯು ಪ್ರಸಿದ್ಧ ಜನಸಂಖ್ಯಾ ಆವರ್ತನ ಸಿದ್ಧಾಂತಕ್ಕೆ ಅನುಗುಣವಾಗಿದೆ. ಆವರ್ತನ ಸಿದ್ಧಾಂತವನ್ನು ಸಂಕ್ಷೇಪಿಸಿ ಈ 4 ಹಂತಗಳಲ್ಲಿ ಹೇಳಬಹುದು.

1) ಮೊದಲನೇ ಹಂತ: ಅಧಿಕ ಜನನ, ಅಧಿಕ ಮರಣ, ಜನಸಂಖ್ಯೆಯ ನಿಧಾನ ಬೆಳವಣಿಗೆ.
2) ಎರಡನೇ ಹಂತ: ಅಧಿಕ ಜನನ, ಮರಣ ಪ್ರಮಾಣ ಇಳಿಕೆ, ಜನಸಂಖ್ಯೆಯ ಅಧಿಕ ಹೆಚ್ಚಳ, ಬಾಲ್ಯಾವಸ್ಥೆಯ ಜನಸಂಖ್ಯೆ ಅತ್ಯಧಿಕ.
3) ಮೂರನೇ ಹಂತ: ಜನನ ಪ್ರಮಾಣದ ಇಳಿಕೆಯ ಆರಂಭ, ಕಡಿಮೆ ಮರಣದ ಪ್ರಮಾಣ, ಜನಸಂಖ್ಯೆಯ ಬೆಳವಣಿಗೆ ನಿಧಾನ.
4) ನಾಲ್ಕನೇ ಹಂತ: ಅತ್ಯಲ್ಪ ಜನನ ಮರಣ, ಜನಸಂಖ್ಯೆಯಲ್ಲಿ ವೃದ್ದರ ಸಂಖ್ಯೆ ಅಧಿಕ, ಅತಿ ನಿಧಾನವಾದ ಬೆಳವಣಿಗೆ, ಸ್ಥಿರ ಜನಸಂಖ್ಯೆ.

**ನಿವ್ವಳ ಜನಸಂಖ್ಯಾ ಹೆಚ್ಚಳ:**

| ಜನಗಣತಿ | ನಿವ್ವಳ ಹೆಚ್ಚಳ | ಹಿಂದಿನ ದಶಕ್ಕಿಂತ ಹೆಚ್ಚಳ (ದ.ಲ) |
|---|---|---|
| 1961–71 | 109 | – |
| 1971–81 | 135 | 26 |
| 1981–91 | 163 | 18 |
| 1991–2001 | 176 | 13 |
| 2001–2011 | 181 | 05 |

**ರಾಜ್ಯವಾರು ದಶಕದ ಜನಸಂಖ್ಯಾ ಬೆಳವಣಿಗೆ ಪ್ರಮಾಣ:**

2011ರ ಜನಗಣತಿಯು 1951ರ ನಂತರದ ದಶಕದಲ್ಲಿನ ದಾಖಲಿಸಲ್ಪಟ್ಟ ಅತಿ ಕಡಿಮೆ ದಶಕವಾರು ಬೆಳವಣಿಗೆಯ ಪ್ರಮಾಣವಾಗಿದೆ. ದೇಶದ ಸರಾಸರಿ ಬೆಳವಣಿಗೆ ದರ –17.64%. ಆದರೆ ಇದು ಕೇರಳದಲ್ಲಿ ಕೇವಲ 4.9% ಮತ್ತು ಮೇಘಾಲಯದಲ್ಲಿ 27.8%ರಷ್ಟಿದೆ. ದಶಕದ ಬೆಳವಣಿಗೆ ದರ ಹಿಂದಿನ ಗಣತಿಗೆ ಹೋಲಿಸಿದರೆ ಕೇವಲ ಛತ್ತೀಸ್‌ಘರ್, ಜಾರ್ಖಂಡ್, ಮತ್ತು ತಮಿಳುನಾಡು ರಾಜ್ಯಗಳಲ್ಲಿ ಮಾತ್ರವೇ ಹೆಚ್ಚಾಗಿದೆ. ನಾಗಾಲ್ಯಾಂಡ್, ಪಂಜಾಬ್, ರಾಜಸ್ತಾನ್, ಸಿಕ್ಕಿಂಗಳಲ್ಲಿ ಹಿಂದಿನ ಗಣತಿಗಿಂತ ಶೇ.5 ಹಾಗು ಅದಕ್ಕಿಂತ ಹೆಚ್ಚು ದಶಕವಾರು ಬೆಳವಣಿಗೆ ಇಳಿಕೆ ಹೊಂದಿದೆ. 2011ರ ಜನಗಣತಿಯಲ್ಲಿ ದಶಕವಾರು ಹೆಚ್ಚಳದಲ್ಲಿ ನಾಗಾಲ್ಯಾಂಡ್, ಹರಿಯಾಣ ಮತ್ತು ಸಿಕ್ಕಿಂ ರಾಜ್ಯಗಳು ಗರಿಷ್ಠ ಇಳಿಕೆಯನ್ನು ದಾಖಲಿಸಿವೆ. ದೇಶದ ಎಂಟು ಈಎಜಿ (ಎಂಪವರ್ಡ್ ಆಕ್ಷನ್ ಗ್ರೂಪ್) ರಾಜ್ಯಗಳಲ್ಲಿಯೂ ಬೆಳವಣಿಗೆಯ ಪ್ರಮಾಣ ಕಡಿಮೆಯಾಗಿದೆ. 2011ರಲ್ಲಿ ದೇಶದಲ್ಲಿ ಅತಿ ಹೆಚ್ಚು ಬೆಳವಣಿಗೆಯನ್ನು ದಾಖಲಿಸಿದ್ದ ನಾಗಾಲ್ಯಾಂಡ್ 2001ರಲ್ಲಿ ಋಣಾತ್ಮಕ ಬೆಳವಣಿಗೆಯನ್ನು ದಾಖಲಿಸಿದೆ. 'ಬಿಮಾರು' (ಬಿಹಾರ್, ಮಧ್ಯಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶ) ರಾಜ್ಯಗಳಲ್ಲಿ ಗರಿಷ್ಠ ಜನಸಂಖ್ಯೆ ಇದೆ.

**ಸ್ಥಿರ ಜನಸಂಖ್ಯಾ ಬೆಳವಣಿಗೆಯತ್ತ ಭಾರತ:**

ಜನನ ಮರಣ ಪ್ರಮಾಣ ಒಂದೇ ಸಮನಾಗಿದ್ದು ಜನಸಂಖ್ಯಾ ಗಾತ್ರದಲ್ಲಿ ಹೆಚ್ಚು ಬದಲಾವಣೆಯಿಲ್ಲದಿರುವುದೇ ಸ್ಥಿರ ಜನಸಂಖ್ಯೆ ಅಥವಾ ಶೂನ್ಯ ಜನಸಂಖ್ಯಾ ಬೆಳವಣಿಗೆ. ಭಾರತವು 2020ರ ವೇಳೆಗೆ ಈ ಹಂತವನ್ನು ತಲುಪುವ ಸಾಧ್ಯತೆಯನ್ನು 'ಸ್ಯಾಂಪಲ್ ರಿಜಿಸ್ಟ್ರೇಷನ್ ಸರ್ವೇ' ವರದಿಯಲ್ಲಿ ವಿವರಿಸಲಾಗಿದೆ. ಭಾರತದಲ್ಲಿ ಫಲವಂತಿಕೆಯ ಪ್ರಮಾಣ ಅತಿ ಶೀಘ್ರವಾಗಿ ಕಡಿಮೆಯಾಗುತ್ತಿದೆ. (ಜೀವಿತಾವಧಿಯಲ್ಲಿ ಒಬ್ಬ ಮಹಿಳೆ ಪಡೆಯಬಹುದಾದ ಮಕ್ಕಳ ಪ್ರಮಾಣವೇ ಫಲವಂತಿಕೆ). ಇಂದು ಬಡತನ ಹಾಗೂ ಸಾಕ್ಷರರಲ್ಲದವರಲ್ಲಿಯೂ ಮಕ್ಕಳ ಪ್ರಮಾಣ ಕಡಿಮೆಯಾಗುತ್ತಿರುವುದು ಇದಕ್ಕೆ ಕಾರಣವಾಗಿದೆ. ದೇಶದ 8 ರಾಜ್ಯಗಳಲ್ಲಿ ಫಲವಂತಿಕೆ 2ಕ್ಕಿಂತ ಕಡಿಮೆಯಾಗಿದೆ.

ಈ ಪಟ್ಟಿಯಲ್ಲಿ ಉತ್ತರದ ಎಲ್ಲಾ ರಾಜ್ಯಗಳು ಅಂದರೆ ಜಮ್ಮು ಕಾಶ್ಮಿರ, ಪಂಜಾಬ್, ಹಿಮಾಚಲ ಪ್ರದೇಶ, ಓಡಿಸ್ಸಾ, ಪಂಜಾಬ್‌ಗಳು ಸೇರಿವೆ. ಭಾರತದ ಸರಾಸರಿ ಫಲವಂತಿಕೆಯ ಪ್ರಮಾಣ ಇಂದು 2.3ರಷ್ಟಿದ್ದು ನಿರಂತರವಾಗಿ

ಇಳಿಕೆಯಾಗುತ್ತಿದೆ. ಕೇವಲ 0.2ರಷ್ಟು ಫಲವಂತಿಕೆ ಕಡಿಮೆಯಾದಲ್ಲಿ ಇದು ಸ್ಥಿರ ಜನಸಂಖ್ಯೆ ಬೆಳವಣಿಗೆಯ ಮಟ್ಟವನ್ನು ತಲುಪುವುದು.

ಈಗಾಗಲೇ ಶಿಶು ಮರಣದ ಪ್ರಮಾಣವು ಪ್ರತಿ ಸಾವಿರಕ್ಕೆ 30ಕ್ಕೆ ಇಳಿಕೆಯಾಗಿದೆ. 2020ಕ್ಕೆ ಸ್ಥಿರವಾದರೆ ಇದೇ ಜನಸಂಖ್ಯಾ ಆವರ್ತನದ ಕೊನೆಯ ಹಂತವಾಗುತ್ತದೆ.

**ಜನಸಂಖ್ಯಾ ಲಾಭಾಂಶ: (ಡೆಮೋಗ್ರಫಿಕ್ ಡಿವಿಡೆಂಡ್)**

ಭಾರತವು ಪ್ರಪಂಚದ ಅತಿ ಹೆಚ್ಚು ಯುವ ಜನತೆಯನ್ನು ಹೊಂದಿದೆ. ಇತ್ತೀಚಿನ ವಿಶ್ವ ಸಂಸ್ಥೆಯ ಜನಸಂಖ್ಯಾ ವರದಿಯಂತೆ (2014) 10 ರಿಂದ 24 ವಯಸ್ಸಿನ ಜನರ ಸಂಖ್ಯೆ ಭಾರತದಲ್ಲಿ 355.3 ದಶಲಕ್ಷಗಳು (35 ಕೋಟಿ.)

ಪ್ರಪಂಚದ ಒಟ್ಟು ಯುವ ಜನಸಂಖ್ಯೆ 797 ದಶಲಕ್ಷಗಳಾಗಿದ್ದು ಇದರ 1/5 ಭಾಗವನ್ನು ಭಾರತ ಒಳಗೊಮಡಿದೆ. ಚೈನಾ 278.6 ದಶಲಕ್ಷಗಳು, ಯುಎಸ್‌ಎ 65, ಬ್ರೆಜಿಲ್ 50.09, ಪಾಕಿಸ್ತಾನ 59 ದಶಲಕ್ಷಗಳು. ಅಗಾಧ ಯುವ ಜನತೆಯನ್ನು ಹೊಂದಿರುವ ಭಾರತದಲ್ಲಿ ಮಾನವ ಶಕ್ತಿ ಅತ್ಯಮೂಲ್ಯ ಸಂಪತ್ತಾಗಿದೆ. ಇದೇ ಜನಸಂಖ್ಯಾ ಲಾಭಾಂಶ. ಅಂದರೆ ಬದಲಾಗುತ್ತಿರುವ ವಯೋರಚನೆಯಿಂದಾಗುವ ಪ್ರಯೋಜನ.

ಭಾರತದ ಜನಸಂಖ್ಯಾ ವಯೋರಚನೆಯನ್ನು ಚಿತ್ರಿಸಿದರೆ ಅದು 1991ರವರೆಗೆ ಪಿರಮಿಡ್ ಆಕಾರವನ್ನು ಹೋಲುತ್ತಿತ್ತು. ಈಗ ಇದು ಬದಲಾಗಿದೆ. 1991ರ ನಂತರದ ವರ್ಷಗಳಲ್ಲಿ ಜನನ ನಿಯಂತ್ರಣ ಹೆಚ್ಚು ಪರಿಣಾಮಕಾರಿಯಾಗಿದ್ದು, ಇದರಿಂದ 0–10 ವರ್ಷ ವಯೋಮಾನದ ಮಕ್ಕಳ ಸಂಖ್ಯೆಯಲ್ಲಿ ಅಧಿಕ ಹೆಚ್ಚಳ ಉಂಟಾಗಿಲ್ಲ. 10–30 ವಯೋಮಾನದ ಜನತೆಯ ಜನಸಂಖ್ಯಾ ಹೆಚ್ಚಳವು ಸ್ಪಷ್ಟವಾಗಿದೆ. ದುಡಿಯುವ ಈ ವರ್ಗದ ಜನಸಂಖ್ಯೆ ಸೂಕ್ತ ಬಳಕೆಯಾದಲ್ಲಿ ಇದು ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವುದು. ಚೀನಾಕ್ಕೆ ಹೋಲಿಸಿದರೆ 65 ವರ್ಷ ಮೀರಿದ ವೃದ್ಧರ ಸಂಖ್ಯೆ ಭಾರತದಲ್ಲಿ ಕಡಿಮೆ (7%) ಇದೆ. ಇದನ್ನೇ 'ಪಾಪುಲೇಷನ್ ಏಜಿಂಗ್' ಎನ್ನುವರು.

ವೃದ್ಧಾಪ್ಯದ ಜನರ ಕೊಡುಗೆಯೂ ದೇಶದ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಮಹತ್ವಪೂರ್ಣವಾದುದು. ಈ ಜನರಿಗೆ 'ತರಬೇತಿ' ಮೊದಲಾದ ಬಂಡವಾಳ ಹೂಡಿಕೆಯ ಅಗತ್ಯವಿರುವುದಿಲ್ಲ. ಜನಸಂಖ್ಯಾ ಲಾಭಾಂಶದ ಕೊಡುಗೆಯಲ್ಲಿ ಇವರ ಪಾಲು ಅತಿಮುಖ್ಯವಾಗಿದೆ. ಭಾರತದ ಜನಸಂಖ್ಯೆಯಲ್ಲಿ ಇಂದು ದುಡಿಯುವ ವರ್ಗ (15>56 ವರ್ಷ) ಹೆಚ್ಚಾಗಿದ್ದು, ಬಾಲ್ಯಾವಸ್ಥೆಯ ಜನಸಂಖ್ಯೆ ಕಡಿಮೆಯಾಗುತ್ತಿದೆ. ಇದು ದೇಶದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಪರಿಣಮಿಸಿದೆ. ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಅವರಿಗೆ ಉತ್ತಮ ಆರೋಗ್ಯ ಸೇವೆ, ವಿದ್ಯೆ, ಆಹಾರ, ಸ್ತ್ರೀ ಆರೋಗ್ಯ ಸುಧಾರಣೆ ಕಂಡುಬಂದು ಅವರ ದುಡಿಮೆಯ ಗಳಿಕೆಯೂ ಹೆಚ್ಚುವುದು. ಯುವಕರಿಗೆ ಉದ್ಯೋಗ ನಿಡಿ ಅವರ ಸಾಮರ್ಥ್ಯ ಬಳಸಿಕೊಳ್ಳುವುದು ಅಗತ್ಯವಾಗಿದೆ. ಅಲ್ಲದೆ ಯುವಕರಲ್ಲಿ ಉಳಿತಾಯ ಮನೋಭಾವನೆಯನ್ನು ರೂಢಿಸಿ ಬಂಡವಾಳವನ್ನು ರೂಪಿಸುವುದು ಅಗತ್ಯವಾಗಿದೆ.

ಭಾರತದಲ್ಲಿ ಜನಸಾಂದ್ರತೆಯು ನಿರಂತರವಾಗಿ ದಶಕದಿಂದ ದಶಕಕ್ಕೆ ಅಧಿಕಗೊಳ್ಳುತ್ತಿದೆ. 1901ರಲ್ಲಿ 77, 2011ರಲ್ಲಿ 382, 2001–2011ರ ಅವಧಿಯಲ್ಲಿ ಪ್ರತಿ ಚ.ಕಿ.ಮೀ.ಗೆ ಹೆಚ್ಚುವರಿಯಾಗಿ 57 ಜನ ಸೇರ್ಪಡೆಯಾಗಿರುವುದು. ಭಾರತದ ಅತಿ ಹೆಚ್ಚು ಜನಸಂಖ್ಯೆ ಕೆಲವೇ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿದ್ದು, ಈ ರಾಜ್ಯಗಳು ದೇಶದ ಒಟ್ಟು ಜನಸಂಖ್ಯೆಯ ಸಿಂಹಪಾಲನ್ನು ಒಳಗೊಂಡಿವೆ.

**ವಲಯವಾರು ರಾಜ್ಯಗಳ ಕ್ಷೇತ್ರ ಮತ್ತು ಜನಸಂಖ್ಯೆ–2011:**

1) ಉತ್ತರ ಮೈದಾನದ ರಾಜ್ಯಗಳು: ಉತ್ತರ ಪ್ರದೇಶ, ಬಿಹಾರ, ಪಂಜಾಬ್, ಹರಿಯಾಣ, ರಾಜ್ಯಗಳ ಒಟ್ಟು ಭೌಗೋಳಿಕ ಪ್ರದೇಶ 15.62ರಷ್ಟು ಇದೆ. ಆದರೆ ಒಟ್ಟು ಜನಸಂಖ್ಯೆ ಶೇ.37.0

2) ದಕ್ಷಿಣದ ರಾಜ್ಯಗಳು: ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳ ಒಟ್ಟು ಭೌಗೋಳಿಕ ಪ್ರದೇಶ 28.68% ಮತ್ತು ಜನಸಂಖ್ಯೆ 30.2%

3) ಈಶಾನ್ಯದ ರಾಜ್ಯಗಳು: ಅಸ್ಸಾಂ, ಆಂಧ್ರಪ್ರದೇಶ, ನಾಗಾಲ್ಯಾಂಡ್ ರಾಜ್ಯಗಳ ಒಟ್ಟು ಭೌಗೋಳಿಕ ಪ್ರದೇಶ 7.73% ಮತ್ತು ಜನಸಂಖ್ಯೆ 3.7%

ರಾಜ್ಯವಾರು ಜನಸಾಂದ್ರತೆ ಅರುಣಾಚಲ ಪ್ರದೇಶದಲ್ಲಿ 17 ಇದ್ದರೆ, ಬಿಹಾರದಲ್ಲಿ ಪ್ರತಿ ಚ.ಕಿ.ಮೀ.ಗೆ 1102 ಗರಿಷ್ಟ ಜನರಿಗೆ ವ್ಯತ್ಯಾಸ ಹೊಂದಿದೆ. ಪಶ್ಚಿಮ ಬಂಗಾಳ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿದೆ. ಕೇಂದ್ರಾಡಳಿತ ಪ್ರದೇಶದಲ್ಲಿ ದೆಹಲಿ 1129 (ಪ್ರತಿ ಚ.ಕಿ.ಮೀ.) ಜನರನ್ನು ಹೊಂದಿ ಮೊದಲ ಸ್ಥಾನದಲ್ಲಿವೆ.

**ಜನಸಾಂದ್ರತೆ ಪ್ರವೃತ್ತಿ 1901–2011:**

ಜನಸಂಖ್ಯಾ ಹಂಚಿಕೆಯ ಮೇಲೆ ಪ್ರಭಾವ ಬೀರಿರುವ ಅಂಶಗಳು ಈ ಕೆಳಗಿನಂತಿವೆ.

1) ಭೂ ಸ್ವರೂಪಗಳು

2) ವಾಯುಗುಣ

   * ಮಳೆ ಹಂಚಿಕೆ

   * ಉಷ್ಣಾಂಶ

3) ಮಣ್ಣು

4) ನೀರಾವರಿ

5) ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

6) ಕೈಗಾರಿಕಾಭಿವೃದ್ಧಿ

7) ಸಂಚಾರ ಸೌಲಭ್ಯಗಳು

8) ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು

**ಜನಸಂಖ್ಯೆಯ ರಚನೆ:**

ಜನಸಂಖ್ಯೆಯು ಒಳಗೊಂಡಿರುವ ಆಂತರಿಕ ಲಕ್ಷಣಗಳನ್ನು ಜನಸಂಖ್ಯೆ ಸಂಯೋಜನೆ ಎಂದು ಕರೆಯುವರು. ಇದನ್ನು ಹಲವಾರು ಅಂಶಗಳು ನಿರ್ಧರಿಸುತ್ತವೆ.

1) ಲಿಂಗ

2) ಸಾಕ್ಷರತೆ

3) ನಗರೀಕರಣ

ಜನಸಂಖ್ಯಾ ಸಂಯೋಜನೆಯ ಅಧ್ಯಯನವು ಜನರ ಆರ್ಥಿಕ-ಸಾಮಾಜಿಕ ಹಾಗೂ ಜನಸಂಖ್ಯಾತ್ಮಕ ಗುಣಗಳನ್ನು ತಿಳಿಯಲು ಸಹಾಯವಾಗುವುದಲ್ಲದೇ ಜನಸಂಖ್ಯೆಯ ಮುಂದಿನ ಬೆಳವಣಿಗೆಯ ಪ್ರವೃತ್ತಿಯನ್ನು ಸಹ ತಿಳಿಯಲು ಸಹಾಯಕವಾಗುವುದು.

1) ಲಿಂಗವಾರು ಸಂಯೋಜನೆ: ಪ್ರವೃತ್ತಿ ಮತ್ತು ಹಂಚಿಕೆ. ಇದು ಯಾವುದೇ ಒಂದು ಸಮುದಾಯದಲ್ಲಿ ಕಂಡು ಬರುವ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳಿಗೆ ಮೂಲ ಕಾರಣವಾಗಿದೆ. ಈ ಲಿಂಗವಾರು ಸಂಯೋಜನೆಯಲ್ಲಿನ ಯಾವುದೇ ಬದಲಾವಣೆಗಳು ಸಮಾಜದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳ ಮೇಲೂ ನಿರ್ಣಾಯಕವಾದ ಪ್ರಭಾವವನ್ನು ಬೀರುತ್ತವೆ.

ಭಾರತದ ಜನಗಣತಿಯ ವರದಿಯಲ್ಲಿ ವಿವರಿಸಿರುವಂತೆ ಲಿಂಗವಾರು ಸಂಯೋಜನೆಯು ಒಂದು ಸಮಾಜದಲ್ಲಿ ಯಾವುದೇ ಒಂದು ಕಾಲದಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಇರುವ ಸಮಾನತೆಯನ್ನು ಸೂಚಿಸುವ ಲಕ್ಷಣವೆಂದು ವಿವರಿಸಲಾಗಿದೆ. ಯುಎನ್‌ಓ ಅಂದಾಜಿನಂತೆ 2011ರ ಪ್ರಪಂಚದ ಲಿಂಗವಾರು ಅನುಪಾತವು ಪ್ರತಿಸಾವಿರ ಪುರುಷರಿಗೆ 984 ಆಗಿರುವುದು.

**ಲಿಂಗಾನುಪಾತ:**

| **ಭಾರತ** | **ಶಿಶುಲಿಂಗಾನುಪಾತ** | **7 ವರ್ಷಕ್ಕಿಂತ ಮೇಲ್ಪಟ್ಟು** |
|---|---|---|
| 2001 | 927 | 933 |
| 2011 | 914 | 943 |

ಲಿಂಗವಾರು ಅನುಪಾತವು 1961–71ರ ದಶಕದಲ್ಲಿ ಸುಮಾರು 11 ಅಂಶಗಳಷ್ಟು ಅತಿ ಹೆಚ್ಚು ಇಳಿಮುಖಗೊಂಡಿತ್ತು. ವಯಸ್ಕರ ಲಿಂಗಾನುಪಾತದಲ್ಲಿ ಅಲ್ಪ ಸುಧಾರಣೆ ಕಂಡುಬಂದರೆ, ಶಿಶು ಲಿಂಗಾನುಪಾತ ನಮಗೆ ಎಚ್ಚರಿಕೆ ಘಂಟೆಯಾಗಿದೆ. ಸ್ತ್ರೀಯರ ಅನುಪಾತ ಕಡಿಮೆಯಾಗಿರಲು ವರದಿಯಲ್ಲಿ ನೀಡಿರುವ ಕಾರಣಗಳೆಂದರೆ,

1) ಹೆಣ್ಣು ಶಿಶುವನ್ನು ಸರಿಯಾಗಿ ಪೋಷಿಸದೇ ಇರುವುದು, ಬಾಲ್ಯಾವಸ್ಥೆಯಲ್ಲಿ ಆರೈಕೆ ಕೊರತೆ.

2) ಹೆರಿಗೆಯ ಸಮಯದಲ್ಲಿ ಹೆಚ್ಚು ಸಾವು.

3) ಲಿಂಗದ ಆಯಕೆಯ ಗರ್ಭಪಾತ.

4) ನೈಸರ್ಗಿಕವಾಗಿ ಕಡಿಮೆ ಹೆಣ್ಣು ಶಿಶು ಜನನ.

ರಾಜ್ಯಗಳು ಹೊಂದಿರುವ ಲಿಂಗವಾರು ಅನುಪಾತದಲ್ಲಿ ಹರಿಯಾಣದ 877ರಿಂದ ಕೇರಳದ 1084ರವರೆಗೆ ವ್ಯತ್ಯಾಸವನ್ನು ಹೊಂದಿವೆ. 2013ರ ವರದಿಯಂತೆ ಹರಿಯಾಣದ ಶಿಶು ಲಿಂಗಾನುಪಾತ ಮತ್ತಷ್ಟು ಇಳಿಕೆಯಾಗಿದೆ. ಅದರ ಪ್ರಮಾಣ 864.

**ಲಿಂಗವಾರು ಅನುಪಾತ ವಲಯಗಳು:**

1) 900ಕ್ಕಿಂತ ಕನಿಷ್ಠ: ಪಂಜಾಬ್, ಜಮ್ಮು ಕಾಶ್ಮೀರ, ಹರಿಯಾಣ.

2) 901–925: ಉತ್ತರ ಪ್ರದೇಶ, ಬಿಹಾರ, ಗುಜರಾತ್, ಮಹಾರಾಷ್ಟ್ರ.

3) 925–950 ಸಾಧಾರಣ: ರಾಜಸ್ತಾನ್, ಮಧ್ಯಪ್ರದೇಶ, ಜಾರ್ಖಂಡ್, ಪಂಜಾಬ್.

4) 951–975 ಹೆಚ್ಚು: ಕರ್ನಾಟಕ, ಗೋವಾ, ಹಿಮಾಚಲ ಪ್ರದೇಶ, ಉತ್ತರಖಾಂಡ.

5) 976ಕ್ಕಿಂತ ಅತಿ ಹೆಚ್ಚು: ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಒಡಿಸ್ಸಾ, ಮೇಘಾಲಯ, ಮಣಿಪುರ, ಪುದುಚೇರಿ ಇತ್ಯಾದಿ.

ಶಿಶು ಲಿಂಗಾನುಪಾತದಲ್ಲಿ ಛತ್ತೀಸ್‌ಗಡ 970ರೊಂದಿಗೆ ಮೊದಲ ಸ್ಥಾನ ಮತ್ತು ಹರಿಯಾಣ 864ರೊಂದಿಗೆ ಕೊನೆಯ ಸ್ಥಾನ ಪಡೆದಿವೆ.

2) ಸಾಕ್ಷರತೆಯ ಪ್ರವೃತ್ತಿ ಮತ್ತು ಹಂಚಿಕೆ: ಸಾಕ್ಷರತೆಯು ಜನಸಂಖ್ಯೆಯ ಎಲ್ಲಾ ಗುಣಾತ್ಮಕ ಲಕ್ಷಣಗಳಲ್ಲಿ ಅತೀ ಮುಖ್ಯವಾದುದಾಗಿದೆ. ಯುಎನ್‌ಓ ಪ್ರಕಾರ ಯಾವುದೇ ಭಾಷೆಯಲ್ಲಿ ಒಂದು ಸರಳ ವಾಕ್ಯವನ್ನು ಅರ್ಥಮಾಡಿಕೊಂಡು ಓದುವ ಮತ್ತು ಬರೆಯುವ ಸಾಮರ್ಥ್ಯವೆಂದು ಅರ್ಥೈಸಲಾಗಿದೆ. ಯುಎನ್‌ಓ 2015ರ ವೇಳೆಗೆ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಒದಗಿಸುವ ಗುರಿ ಹೊಂದಿತ್ತು. ಭಾರತದ ಸಾಕ್ಷರತಾ ಪ್ರಮಾಣ 2011ರಲ್ಲಿ 74% ಇದ್ದು 2001ರಲ್ಲಿ 65%ರಷ್ಟಿತ್ತು. 2011ರ ಜನಗಣತಿಯಲ್ಲಿ ಸಾಕ್ಷರತೆಯು ಹೆಚ್ಚಾಗಿರುವುದಲ್ಲದೇ ಮಹಿಳಾ ಸಾಕ್ಷರತೆಯು ಗಮನಾರ್ಹವಾಗಿ ಹೆಚ್ಚಳವಾಗಿದೆ. 1991–2001ರ ದಶಕವನ್ನು ಸಾಕ್ಷರತೆಯ ದಶಕ ಎಂದು ಕರೆಯಲಾಗಿದ್ದು, ಆ ಸಮಯದಲ್ಲಿಯ ಬೆಳವಣಿಗೆಯು 39.29ರಿಂದ 53.67 ಏರಿಕೆಯಾಗಿರುವುದು ಶ್ಲಾಘನೀಯವಾಗಿದೆ.

**ಸಾಕ್ಷರತೆಯ ವಲಯವಾರು ಹಂಚಿಕೆ:**

1) ಹೆಚ್ಚು ಸಾಕ್ಷರತೆಯ ವಲಯ – 90ಕ್ಕಿಂತ ಹೆಚ್ಚು: ಕೇರಳ.

2) ಸಾಧಾರಣ ಸಾಕ್ಷರತೆಯ ವಲಯ – 81ರಿಂದ 90: ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ತಮಿಳುನಾಡು, ಗೋವಾ, ತಿರುವನಂತಪುರಂ, ಸಿಕ್ಕಿಂ, ದೆಹಲಿ, ಪಾಂಡಿಚೇರಿ.

3) ಕಡಿಮೆ ಸಾಕ್ಷರತೆಯ ವಲಯ (71ರಿಂದ 80): ಉತ್ತರಖಾಂಡ, ಗುಜರಾತ್, ಪಂಜಾಬ್, ಹರಿಯಾಣ, ಕರ್ನಾಟಕ, ಅಸ್ಸಾಂ, ಛತ್ತೀಸ್‌ಘಡ, ಮಧ್ಯಪ್ರದೇಶ.

4) ಅತಿ ಕಡಿಮೆ ಸಾಕ್ಷರತೆಯ ರಾಜ್ಯಗಳು: ಉತ್ತರಪ್ರದೇಶ, ಜಾರ್ಖಂಡ್, ಆಂಧ್ರಪ್ರದೇಶ, ಜಮ್ಮು ಕಾಶ್ಮೀರ, ಅರುಣಾಚಲ ಪ್ರದೇಶ, ಬಿಹಾರ.

2011ರಲ್ಲಿ ದೇಶದ ಸರಾಸರಿ ಮಹಿಳಾ ಸಾಕ್ಷರತೆಯ ಪ್ರಮಾಣ ಕೇವಲ ಶೇ.65.46ರಷ್ಟಿದ್ದಿತು.

3) ನಗರೀಕರಣ: 2011ರ ಪ್ರಕಾರ ದೇಶದಲ್ಲಿ ಗ್ರಾಮಗಳು 68.84ರಷ್ಟಿದ್ದು, ನಗರಗಳು 31.16ರಷ್ಟಿವೆ. ಭಾರತದ ನಗರ ಜನಸಂಖ್ಯೆಯು ಅಮೇರಿಕಾದ ಒಟ್ಟು ಜನಸಂಖ್ಯೆಗಿಂತ ಹೆಚ್ಚು. ಭಾರತದ ನಗರ ಜನಸಂಖ್ಯೆಯು ಪ್ರಪಂಚದ ಒಟ್ಟು ಜನಸಂಖ್ಯೆಯ ಶೇ.5ರಷ್ಟಿದೆ. ನಗರ ಜನಸಂಖ್ಯೆಯ ಬೆಳವಣಿಗೆ 1981ರಲ್ಲಿ 46.1%ರಷ್ಟು ಇದ್ದು, ಭಾರತದ ಜನಗಣತಿ ಇತಿಹಾಸದಲ್ಲಿ ನಗರ ಜನಸಂಖ್ಯೆಯ ಗರಿಷ್ಠ ಬೆಳವಣಿಗೆಯಾಗಿದ್ದಿತು.

**ಮಾನವ ಅಭಿವೃದ್ಧಿ:**

ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ಮಹಾಬುಲ್–ಉಲ್–ಹಕ್ ಇರ ನೇತೃತ್ವದಲ್ಲಿ 1995ರಲ್ಲಿ ಯೂಎನ್‌ಡಿಪಿ ಯಿಂದ ಹೆಚ್‌ಡಿಐ ಅಳವಡಿಸಲಾಯಿತು. ಮಾನವ ಅಭಿವೃದ್ಧಿಯು 3 ಮುಖ್ಯ ವಿಷಯಗಳನ್ನು ಒಳಗೊಂಡಿರುತ್ತದೆ. ಅವುಗಳು,

1) ಸುದೀರ್ಘ ಜೀವಿತ ಅವಧಿ.

2) ಆರೋಗ್ಯಕರ ಜೀವನ ಜ್ಞಾನ ಪಡೆಯಲು ಅವಕಾಶ.

3) ಸಾಕಷ್ಟು ಉನ್ನತ ಮಟ್ಟದ ಜೀವನವನ್ನು ನಿರ್ವಹಿಸಲು ಬೇಕಾದ ಸಂಪನ್ಮೂಲಗಳನ್ನು ಪಡೆಯಲು ಅವಕಾಶ.

ಆದಾಯವು ಹೆಚ್‌ಡಿಐ ಅಂಶಗಳಲ್ಲಿ ಅತಿ ಮುಖ್ಯವಾದುದು. ಆದರೆ ಅದು ಜೀವನದ ಒಟ್ಟು ಲಕ್ಷಣಗಳನ್ನು ಪ್ರತಿಬಿಂಬಿಸುವುದಿಲ್ಲ. ಹೆಚ್‌ಡಿಐ ಮೂರು ಪ್ರಾಥಮಿಕ ಸೂಚ್ಯಾಂಕಗಳನ್ನು ಪರಿಗಣಿಸುತ್ತದೆ. ಅವುಗಳು,

1) ಮಾನವ ಅಭಿವೃದ್ಧಿ ಸೂಚ್ಯಾಂಕ – ಹೆಚ್‌ಡಿಐ

2) ಮಹಿಳಾ ಅಭಿವೃದ್ಧಿ ಸೂಚ್ಯಾಂಕ – ಜಿಡಿಐ

3) ಮಾನವ ಬಡತನ ಸೂಚ್ಯಾಂಕ – ಹೆಚ್‌ಪಿಐ

ಮಾನವ ಅಭಿವೃದ್ಧಿ ಸೂಚ್ಯಾಂಕದ (ಹೆಚ್‌ಡಿಐ) ಮೂರು ಮುಖ್ಯ ಗುಣಲಕ್ಷಣಗಳು ನಿರೀಕ್ಷಿತಾ ಜೀವಿತಾ ಅವಧಿ, ಜನರ ಆರೋಗ್ಯ ಜ್ಞಾನದ ಪ್ರಮಾಣ ಮತ್ತು ಜೀವನಮಟ್ಟ.

**ಎಚ್.ಡಿ.ಐ.ನ ಪ್ರಸ್ತುತ ಘಟಕಾಂಶಗಳು:**

1) ಜೀವನ ಗುಣಮಟ್ಟ

2) ನಿರೀಕ್ಷಿತ ಜೀವಿತಾವಧಿ

3) ಸಾಕ್ಷರತೆ

4) ತಲಾ ಆದಾಯ

5) ಲಿಂಗ ಸಮಾನತೆ

ಮಾನವ ಅಭಿವೃದ್ಧಿ ಸೂಚ್ಯಾಂಕ 2001ರ ವರದಿಯಲ್ಲಿ 1999ರಲ್ಲಿ ದಾಖಲಾದ ಸೂಚ್ಯಾಂಕದ ಆಧಾರದ ಮೇಲೆ ಪ್ರಪಂಚದ ರಾಷ್ಟ್ರಗಳನ್ನು 3 ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

1) ಹೆಚ್‌ಡಿಐ – 0.8ಕ್ಕೆ ಹೆಚ್ಚು

2) ಹೆಚ್‌ಡಿಐ – 0.5–0.8 ಸಾಧಾರಣ ಕಡಿಮೆ

3) ಹೆಚ್‌ಡಿಐ – 0.5 ಕಡಿಮೆ

2011ರ ಪರಿಸ್ಥಿತಿ ಅಂದಾಜಿನಂತೆ ಭಾರತವು 134ನೇಯ ಸ್ಥಾನವನ್ನು ಹೊಂದಿದೆ. ಭಾರತವು ಮಾನವ ಅಭಿವೃದ್ಧಿಯ ಮಾರ್ಗದಲ್ಲಿ ಸಾಗಬೇಕಾದ ದಾರಿ ಬಹುದೂರವಿದೆ. 2015ರ ಅಂಕಿ ಅಂಶಗಳ ಪ್ರಕಾರ ವಿಶ್ವದ 188 ದೇಶಗಳ ಪೈಕಿ ಭಾರತ 130ನೇ ಸ್ಥಾನದಲ್ಲಿ ಇದ್ದು, ಭಾರತ 0.609 ಮೌಲ್ಯ ಹೊಂದಿತ್ತು. ಅದೇ 2014ರಲ್ಲಿ 187 ದೇಶಗಳ ಪೈಕಿ ಭಾರತ 135ನೇ ಸ್ಥಾನ ಹೊಂದಿ 0.586 ಮೌಲ್ಯ ಹೊಂದಿತ್ತು.

**ಮಹಿಳಾ ಅಭಿವೃದ್ಧಿ ಸೂಚ್ಯಾಂಕ:**

ಮಹಿಳಾ ಅಭಿವೃದ್ಧಿ ಸೂಚ್ಯಾಂಕ (ಡಬ್ಲ್ಯೂಡಿಐ) ಪರಿಗಣನೆಗೆ 3 ಲಕ್ಷಣಗಳನ್ನು ಪ್ರಧಾನವಾಗಿ ಪರಿಗಣಿಸಲಾಗುವುದು. ಅವುಗಳು,

1) ಮಹಿಳೆಯರ ನಿರೀಕ್ಷಿತ ಜೀವಿತ ಅವಧಿ

2) ಮಹಿಳೆಯ ಸಾಕ್ಷರತೆ

3) ಮಹಿಳೆಯರ ತಲಾವಾರು ಆದಾಯ

ಇದು ನೇರವಾಗಿ ಹೆಚ್‌ಡಿಐಗೆ ಸಂಬಂಧಿಸಿದೆ. ಮಹಿಳಾ ಅಭಿವೃದ್ದಿ ಸೂಚ್ಯಾಂಕವು ಮಾನವ ಅಭಿವೃದ್ದಿ ಸೂಚ್ಯಾಂಕಕ್ಕಿಂತ ಕಡಿಮೆಯಿರುವುದು. ಮಾನವ ಅಭಿವೃದ್ದಿಯನ್ನು ಅಧಿಕವಾಗಿ ಹೊಂದಿರುವ ದೇಶಗಳಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಹೆಚ್ಚು ಸಮಾನತೆ ಇದ್ದು ಇದರಿಂದ ಮಾನವ ಅಭಿವೃದ್ದಿ ಸೂಚ್ಯಾಂಕ ಮತ್ತು ಮಹಿಳಾ ಅಭಿವೃದ್ದಿ ಸೂಚ್ಯಾಂಕಗಳೆರಡೂ ಒಂದೇ ಮಟ್ಟದಲ್ಲಿರುತ್ತವೆ.

## ಕೈಗಾರಿಕೆಗಳು

ಕೈಗಾರಿಕೆಗಳು ಆಧುನಿಕ ನಾಗರೀಕತೆಯ ಮೇರು ಲಕ್ಷಣಗಳಾಗಿವೆ. ಭಾರತವು ಇಂದು ರಫ್ತು ಮಾಡುತ್ತಿರುವ ಪ್ರಧಾನ ವಸ್ತುಗಳೆಂದರೆ ಕೈಗಾರಿಕೋತ್ಪನ್ನಗಳು ಮತ್ತು ಬಂಡವಾಳ ವಸ್ತುಗಳು. ರಫ್ತಿನಿಂದ ವಿದೇಶೀ ವಿನಿಮಯವನ್ನು ಗಳಿಸಲಾಗುವುದು. ದೇಶದ ಜಿಡಿಪಿಯಲ್ಲಿ ಕೈಗಾರಿಕೆಗಳ ಪಾಲ ಶೇ.26ರಷ್ಟಿದೆ. (2013–14). ಈ ಕ್ಷೇತ್ರವು ಇಂದು 100.7 ದಶಲಕ್ಷ ಉದ್ಯೋಗಾವಕಾಶವನ್ನು ನೀಡಿದೆ. ಈ ಕ್ಷೇತ್ರವು ಅಪಾರ ವಿದೇಶೀ ವಿನಿಮಯ ಮತ್ತು ವಿದೇಶೀ ಬಂಡವಾಳ ಹೂಡಿಕೆಗೆ ನೆರವು ನೀಡಿದೆ.

### ಕೈಗಾರಿಕಾ ಅಭಿವೃದ್ದಿ:

ಭಾರತದಲ್ಲಿ ಪುರಾತನ ಕಾಲದಿಂದಲೂ ಗೃಹ ಕೈಗಾರಿಕೆಗಳು ಅಭಿವೃದ್ದಿ ಹೊಂದಿದ್ದವು. ಬ್ರಿಟೀಷರ ಅವಧಿಯಲ್ಲಿ ಅನುಸರಿಸಿದ ಕೈಗಾರಿಕಾ ನೀತಿಯು ದೇಶಿಯ ಗೃಹ ಕೈಗಾರಿಕೆಗಳಿಗೆ ಉತ್ತೇಜಕವಾಗಿರಲಿಲ್ಲ. ಇದರಿಂದ ದೇಶದಿಂದ ರಫ್ತು ಮಾಡಿಸಿದ್ದ ಕಚ್ಚಾ ವಸ್ತುಗಳನ್ನು, ಆಮದು ಮಾಡಿಕೊಳ್ಳಬೇಕಾಯಿತು.

20ನೇ ಶತಮಾನದ ಮೊದಲ ದಶಕಗಳಲ್ಲಿ ಕೆಲವೇ ಕೈಗಾರಿಕೆಗಳು ಬೆಳೆದವು. ಸ್ವಾತಂತ್ರ್ಯ ನಂತರ ಅದರಲ್ಲೂ 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಉತ್ತೇಜನವನ್ನು ನೀಡಲಾಯಿತು. ಭಾರತದ ಆರ್ಥಿಕಾಭಿವೃದ್ದಿ ಯೋಜನೆಗಳು ಕೈಗಾರಿಕಾಭಿವೃದ್ದಿಯನ್ನೇ ಪ್ರಧಾನವಾಗಿ ಒಳಗೊಂಡಿವೆ. ದೇಶದ ಕೈಗಾರಿಕಾ ನೀತಿಯಿಂದ ಅಪಾರ ಪ್ರಮಾಣದ ಬಂಡವಾಳ ಹೂಡಿಕೆಯೊಂದಿಗೆ ವಿವಿಧ ಬಗೆಯ ಕೈಗಾರಿಕೆಗಳು ಅಭಿವೃದ್ದಿ ಹೊಂದಿದೆ. ಇವುಗಳ ಉತ್ಪಾದನೆ ಮತ್ತು ಗುಣಮಟ್ಟದಲ್ಲಿ ವೈವಿಧ್ಯತೆಯನ್ನು ಕಾಣಬಹುದು.

ದೇಶವು ಒಳಗೊಂಡಿರುವ ವಿವಿಧ ಬಗೆಯ ಪ್ರಾಕೃತಿಕ ಪರಿಸರದಿಂದಾಗಿ ಉತ್ಪಾದಿಸಲ್ಪಡುತ್ತಿರುವ ಕಚ್ಚಾ ವಸ್ತುಗಳು ಅನೇಕ ಬಗೆಯವುಗಳಾಗಿವೆ. ಅಲ್ಲದೇ ದೇಶವು ಒಳಗೊಂಡಿರುವ ಅಪಾರ ಪ್ರಮಾಣದ ಜನಸಂಖ್ಯೆ, ಸಾಂಸ್ಕೃತಿಕ, ತಾಂತ್ರಿಕ ಹಾಗೂ ಆರ್ಥಿಕ ವೈವಿಧ್ಯತೆಗಳೂ ಸಹ ವಿವಿಧ ಪ್ರಕಾರದ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸಿದೆ.

ಇದರಿಂದಾಗಿ ಬಟ್ಟೆ ಕೈಗಾರಿಕೆ, ಲೋಹ ಕೈಗಾರಿಕೆ ಮಾತ್ರವಲ್ಲದೆ, ಇಂಜಿನಿಯರಿಂಗ್, ವೈಜ್ಞಾನಿಕ ಉಪಕರಣಗಳು, ವಿದ್ಯುತ್ ಉಪಕರಣಗಳು, ಔಷಧಗಳು ಹಾಗೂ ವಿವಿಧ ಬಗೆಯ ವ್ಯವಸಾಯೋತ್ಪನ್ನ, ಕಚ್ಚಾ ವಸ್ತುಗಳನ್ನು ಆಧರಿಸಿದ ವಿವಿಧ ಭಾಗಗಳಲ್ಲಿ ಅಭಿವೃದ್ದಿ ಹೊಂದಿದೆ. ದೇಶದ ಆರ್ಥಿಕ ತಾಂತ್ರಿಕ ಅಭಿವೃದ್ದಿಯೊಡನೆ ವಿವಿಧ ಬಗೆಯ ಕೈಗಾರಿಕೆಗಳೂ ಸಹ ಸ್ಥಾಪಿಸಲ್ಪಡುತ್ತಿವೆ. ವೈವಿಧ್ಯತೆಯ ಲಕ್ಷಣಗಳನ್ನು ಭಾರತೀಯ ಕೈಗಾರಿಕಾ ರಂಗದಲ್ಲಿಯೂ ಸ್ಪಷ್ಟವಾಗಿ ಕಾಣಬಹುದು.

### ಕೈಗಾರಿಕೆಗಳ ಸ್ಥೂಲವಾದ ವಿಂಗಡಣೆ:

1) ಬಟ್ಟೆ ಕೈಗಾರಿಕೆಗಳು–ಉದಾ: ಹತ್ತಿ ಬಟ್ಟೆ ಕೈಗಾರಿಕೆ, ಸೆಣಬಿನ ಕೈಗಾರಿಕೆ, ರೇಷ್ಮೆ ಕೈಗಾರಿಕೆ, ಉಣ್ಣೆ ಬಟ್ಟೆ.

2) ಖನಿಜಾಧಾರಿತ–ಉದಾ: ಕಬ್ಬಿಣ ಮತ್ತು ಉಕ್ಕು, ಅಲ್ಯೂಮಿನಿಯಂ ಕೈಗಾರಿಕೆಗಳು.

3) ಅರಣ್ಯ ವಸ್ತುವಾಧಾರಿತ–ಉದಾ: ಕಾಗದದ ಕೈಗಾರಿಕೆ.

4) ರಾಸಾಯನಿಕ ಕೈಗಾರಿಕೆಗಳು–ಉದಾ: ರಸಗೊಬ್ಬರ ಕೈಗಾರಿಕೆ.

5) ವ್ಯವಸಾಯಾಧಾರಿತ ಕೈಗಾರಿಕೆಗಳು–ಉದಾ: ಸಕ್ಕರೆ ಕೈಗಾರಿಕೆ.

6) ಇಂಜಿನಿಯರಿಂಗ್ ಕೈಗಾರಿಕೆ–ಉದಾ: ಹಡಗು ನಿರ್ಮಾಣ, ಯಂತ್ರೋಪಕರಣ, ವಾಹನ ಕೈಗಾರಿಕೆ.

7) ಜ್ಞಾನಾಧಾರಿತ ಕೈಗಾರಿಕೆಗಳು–ಉದಾ: ಸಾಫ್ಟ್‌ವೇರ್ ಕೈಗಾರಿಕೆ.

**ಕೈಗಾರಿಕೆಗಳು ಸ್ಥಾನೀಕರಣ ಹೊಂದಲು ಇರಬೇಕಾದ ಅವಶ್ಯಕ ಅಂಶಗಳು:**

1) ಕಚ್ಚಾ ವಸ್ತುಗಳ ಪೂರೈಕೆ

2) ಶಕ್ತಿ ಸಂಪನ್ಮೂಲಗಳು

3) ಮಾರುಕಟ್ಟೆ

4) ಸಾರಿಗೆಯ ಅನುಕೂಲತೆ

5) ಕಾರ್ಮಿಕರ ಪೂರೈಕೆ

6) ಕಡಿಮೆ ಬೆಲೆಯ ಭೂಮಿ

7) ಸರ್ಕಾರದ ನೀತಿ ಮತ್ತು ಬಂಡವಾಳ

8) ನೀರಿನ ಪೂರೈಕೆ

ಮುಂತಾದ ಅಂಶಗಳು.

**ಅತಿ ಸಣ್ಣ, ಸಣ್ಣ, ಮಧ್ಯಮ ಕೈಗಾರಿಕಾ ನೀತಿಗಳು:**

ಎಂಎಸ್ಎಂಡಿ ಕಾಯಿದೆ 2006ರ ಅನ್ವಯ ಸಣ್ಣ ಕೈಗಾರಿಕೆಗಳ ಯಂತ್ರೋಪಕರಣ ಮಿತಿ 5 ಕೋಟಿ ರೂಪಾಯಿಗಳು. ಮಧ್ಯಮ ಕೈಗಾರಿಕೆಗಳ ಯಂತ್ರೋಪಕರಣ ಮಿತಿ 10 ಕೋಟಿ ರೂಪಾಯಿಗಳು. ಜೊತೆಗೆ 19 ವಸ್ತುಗಳ ತಯಾರಿಕೆಯನ್ನು ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಮೀಸಲು ಇಡಲಾಗಿದೆ. ಉದಾ: ಬ್ರೆಡ್, ಉಪ್ಪಿನಕಾಯಿ, ಶೇಂಗಾಎಣ್ಣೆ, ಅಗರ್‌ಬತ್ತಿ ಮುಂತಾದವು.

ಭಾರತದಲ್ಲಿಯ ಪ್ರಮುಖ ಕೈಗಾರಿಕೆಗಳ ಉತ್ಪಾದನೆಯ ಬೆಳವಣಿಗೆ ಈ ಕೆಳಗಿನಂತಿದೆ.

| | **2010–11** | **2013–14** |
|---|---|---|
| ಕಲ್ಲಿದ್ದಲು | 0.2% | 0.7% |
| ಕಚ್ಚಾ ತೈಲ | 11.0% | 0.2% |
| ನೈಸರ್ಗಿಕ ಅನಿಲ | 10.0% | 13.0% |
| ರಸಗೊಬ್ಬರ | 0 | 1.5% |
| ಕಬ್ಬಿಣ | 13.2% | 6.8% |
| ಸಿಮೆಂಟ್ | 4.5% | 3.0% |
| ವಿದ್ಯುತ್ | 5.6% | 5.7% |
| ಎಲ್ಲಾ | 6.6% | 3.1% |

**ತಯಾರಿಕೆ ಮತ್ತು ಸೇವಾ ಕೈಗಾರಿಕೆಗಳು:**

ತಯಾರಿಕೆ ಕೈಗಾರಿಕೆಗಳು ಎಂದರೆ ಹತ್ತಿ ಬಟ್ಟೆ, ಸಕ್ಕರೆ ಉದ್ಯಮ, ಯಂತ್ರೋಪಕರಣ, ರಾಸಾಯನಿಕಗಳು ಇತ್ಯಾದಿಗಳ ತಯಾರಿಕೆ. ಸೇವಾ ಕೈಗಾರಿಕೆಗಳು ಎಂದರೆ ಸಾರಿಗೆ, ಸಂಪರ್ಕ, ವ್ಯಾಪಾರ, ಹೋಟೆಲ್, ವಿಮೆ, ಪ್ರವಾಸೋದ್ಯಮ, ಮುಂತಾದ ಸಾಮುದಾಯಿಕ ಸೇವೆಗಳು.

**ಕೈಗಾರಿಕೆಯ ವಿಧಗಳು:**

ಬಂಡವಾಳ ಹೂಡಿಕೆಯ ಆಧಾರದ ಮೇಲೆ ಕೈಗಾರಿಕೆಗಳನ್ನು 4 ರೀತಿಯಾಗಿ ವರ್ಗೀಕರಿಸಲಾಗಿದೆ. ಅವುಗಳು,

1) ದೊಡ್ಡ ಕೈಗಾರಿಕೆ: 10 ಕೋಟಿಗಿಂತ ಅಧಿಕ ಹೂಡಿಕೆ.

2) ಮಧ್ಯಮ ಕೈಗಾರಿಕೆ: 5–10 ಕೋಟಿ ಹೂಡಿಕೆ.

3) ಸಣ್ಣ ಕೈಗಾರಿಕೆ: 1–5 ಕೋಟಿ ಹೂಡಿಕೆ.

4) ಅತಿ ಸಣ್ಣ ಕೈಗಾರಿಕೆ: 1 ಕೋಟಿಗಿಂತ ಕಡಿಮೆ ಹೂಡಿಕೆ.

ಒಡೆತನದ ಆಧಾರದ ಮೇಲೆ ಕೈಗಾರಿಕೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

1) ಖಾಸಗಿ ವಲಯ

2) ಸಾರ್ವಜನಿಕ ವಲಯ

3) ಜಂಟಿ ವಲಯ

ಅಲ್ಲದೇ ಭಾರತ ಸರ್ಕಾರ ಅತಿ ಹೆಚ್ಚು ಆದಾಯ ತರುವ ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಮಿನಿರತ್ನ (500 ಕೋಟಿಗಿಂತ ಅಧಿಕ ಲಾಭ) ನವರತ್ನ ಕಂಪನಿಗಳು ಉದಾ: ಎಮ್‌ಟಿಎನ್‌ಎಲ್, ಹೆಚ್‌ಎಎಲ್, ಓಐಎಲ್ ಇತ್ಯಾದಿ. ಮತ್ತು ಮಹಾರತ್ನಗಳ ಕಂಪನಿಗಳು, ಉದಾ: ಓಎನ್‌ಜಿಸಿ, ಐಓಸಿ, ಜಿಎಐಎಲ್, ಸಿಐಎಲ್ ಇತ್ಯಾದಿ ಎಂದು ವಿಂಗಡಿಸಲಾಗಿದೆ.

**ಭಾರತದಲ್ಲಿಯ ಪ್ರಮುಖ ಕೈಗಾರಿಕೆಗಳು:**

**1) ಹತ್ತಿ ಬಟ್ಟೆ ಕೈಗಾರಿಕೆ:**

ಭಾರತದ 175 ನಗರಗಳಲ್ಲಿ ಈ ಕೈಗಾರಿಕೆಗಳು ಹಂಚಿಕೆಯಾಗಿವೆ. ಭಾರತವು 2013ರವರೆಗೆ 1771 ನೂಲುವ ಹಾಗೂ 198 ಸಂಯುಕ್ತ. ಹೀಗೆ ಒಟ್ಟು 1969 ಕೈಗಾರಿಕೆಗಳನ್ನು ಹೊಂದಿತ್ತು. ಇವು ದೇಶದ 25 ರಾಜ್ಯಗಳಲ್ಲಿ ಹಂಚಿಕೆಯಾಗಿವೆ. 2012–13ರಲ್ಲಿ 33870 ದಶಲಕ್ಷ ಮೀಟರ್ ಹತ್ತಿ ಬಟ್ಟೆ ಉತ್ಪಾದನೆಯಾಗಿದೆ. ಹತ್ತಿ ಬಟ್ಟೆಯ ಉತ್ಪಾದನೆಯಲ್ಲಿ ಭಾರತ ಪ್ರಪಂಚದಲ್ಲಿ ಚೈನಾ ದೇಶದ ನಂತರ 2ನೇ ಸ್ಥಾನವನ್ನು ಹೊಂದಿದೆ. ಯುಎಸ್‌ಎ ದೇಶವು ಭಾರತದ ಬಟ್ಟೆಗೆ ಪ್ರಮುಖ ಮಾರುಕಟ್ಟೆಯಾಗಿದೆ.

**2) ಸೆಣಬಿನ ಕೈಗಾರಿಕೆ:**

ಸೆಣಬು ಸುಲಭವಾಗಿ ಕೊಳೆಯುವ ವಸ್ತುವಾಗಿದ್ದು 'ಪರಿಸರ ಸ್ನೇಹಿ' ಪ್ಯಾಕೇಜಿಂಗ್ ವಸ್ತುವಾಗಿದೆ. ಭಾರತದಲ್ಲಿ ಒಟ್ಟು 79 ಕೈಗಾರಿಕೆಗಳಿವೆ. ಪಶ್ಚಿಮ ಬಂಗಾಳದಲ್ಲೇ 62 ಇವೆ. 2011–12ರಲ್ಲಿ ಸುಮಾರು 2226.0 ಕೋಟಿ ಮೌಲ್ಯದ ಸೆಣಬನ್ನು ಭಾರತವು ರಫ್ತು ಮಾಡಿದೆ.

**3) ಉಣ್ಣೆ ಬಟ್ಟೆ ಕೈಗಾರಿಕೆ:**

ಭಾರತದಲ್ಲಿ ಉಣ್ಣೆಯ ಸುಮಾರು 224 ಸಂಘಟಿತ ಕೈಗಾರಿಕೆಗಳಿವೆ. ಹರಿಯಾಣ, ರಾಜಸ್ಥಾನ, ಪಂಜಾಬ್‌ಗಳಲ್ಲಿ ಇವು ಹೆಚ್ಚಾಗಿ ಹಂಚಿಕೆಯಾಗಿವೆ. ಭಾರತದಲ್ಲಿ ವಾರ್ಷಿಕ ಸುಮಾರು 170 ದಶಲಕ್ಷ ಮೀಟರ್ ಉತ್ಪಾದನೆಯಾಗುತ್ತದೆ.

**4) ರೇಷ್ಮೆ ಕೈಗಾರಿಕೆ:**

ದೇಶದಲ್ಲಿ 2,58,000 ರೇಷ್ಮೆ ಕೈ ಮಗ್ಗಗಳು, 29,340 ಶಕ್ತಿಚಾಲಿತ ಮಗ್ಗಗಳಿವೆ. 2011ರಲ್ಲಿ ಹಿಪ್ಪುನೇರಳೆ ಉತ್ಪಾದನೆ 80.2%ರಷ್ಟಿತ್ತು. ಪ್ರಮುಖವಾಗಿ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಪಂಜಾಬ್‌ಗಳಲ್ಲಿ ಈ ಕೈಗಾರಿಕೆಗಳು ಹಂಚಿಕೆಯಾಗಿವೆ.

**5) ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ:**

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯನ್ನು 'ಮೂಲ ಕೈಗಾರಿಕೆ' ಎಂದು ಕರೆಯುವರು. ಭಾರತ ಉಕ್ಕಿನ ಉತ್ಪಾದನೆಯಲ್ಲಿ ಚೈನಾ, ಜಪಾನ್ ಮತ್ತು ಯುಎಸ್‌ಎ ನಂತರ 4ನೇ ಸ್ಥಾನದಲ್ಲಿದೆ. ಭಾರತದಲ್ಲಿ ಭದ್ರಾವತಿ,

ಭಿಲಾಯ್, ರೂರ್ಕೆಲಾ, ದುರ್ಗಾಪುರ, ಬೊಕಾರೋ, ಸೇಲಂ, ವಿಶಾಖ ಪಟ್ಟಣಗಳಲ್ಲಿ ಹೆಚ್ಚಾಗಿ ಹಂಚಿಕೆಯಾಗಿದೆ. 2014ರಲ್ಲಿ 87.6 ದಶಲಕ್ಷ ಟನ್ ಉತ್ಪಾದನೆಯಾಗಿದೆ.

**6) ಅಲ್ಯೂಮಿನಿಯಂ ಕೈಗಾರಿಕೆ:**

ಕಬ್ಬಿಣೇತರ ಲೋಹಗಳಲ್ಲಿ ಅಲ್ಯೂಮಿನಿಯಂ ಅತಿ ಮುಖ್ಯವಾದುದು. ಕರ್ನಾಟಕ, ಮಧ್ಯಪ್ರದೇಶಗಳಲ್ಲಿ ಹೆಚ್ಚಾಗಿ ಹಂಚಿಕೆಯಾಗಿದೆ.

7) ಕಾಗದದ ಕೈಗಾರಿಕೆ:

ಭಾರತದ್ಲಲಿ ಇಂದು 515 ಕಾಗದದ ಕೈಗಾರಿಕೆಗಳಿವೆ. ಕಾಗದದ ಒಟ್ಟು ಉತ್ಪಾದನಾ ಸಾಮರ್ಥ್ಯ 74.10 ಲಕ್ಷ ಟನ್‌ಗಳಾಗಿದೆ. ಭಾರತದ ಮಹಾರಾಷ್ಟ್ರ, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ತಮಿಳುನಾಡು, ಓಡಿಸ್ಸಾ, ಕರ್ನಾಟಕ, ಮಧ್ಯಪ್ರದೇಶಗಳಲ್ಲಿ ಇದರ ಕೈಗಾರಿಕೆಗಳು ಹಂಚಿಕೆಯಾಗಿವೆ.

**8) ಸಕ್ಕರೆ ಕೈಗಾರಿಕೆ:**

ಸಕ್ಕರೆ ಉತ್ಪಾದನೆಯಲ್ಲಿ ಬ್ರೆಜಿಲ್ ನಂತರ 2ನೇ ಸ್ಥಾನ ಭಾರತದ್ದಾಗಿದೆ. 2011ರ ವೇಳೆಗೆ 527 ಕೈಗಾರಿಕೆಗಳು ಭಾರತದಾದ್ಯಂತ ಮತ್ತು ಕರ್ನಾಟಕದಲ್ಲಿ 70 ಕೈಗಾರಿಕೆ ಇದ್ದವು. 2014ರಲ್ಲಿ 232 ಲಕ್ಷ ಟನ್ ಉತ್ಪಾದನೆ ಸಕ್ಕರೆಯ ಉತ್ಪಾದನೆಯಾಗಿದೆ.

**9) ರಾಸಾಯನಿಕ ಗೊಬ್ಬರ ತಯಾರಿಕೆ:**

ಭಾರತದಲ್ಲಿ ಉತ್ತರ ಪ್ರದೇಶ ಅತಿ ಹೆಚ್ಚು ರಾಸಾಯನಿಕ ಗೊಬ್ಬರವನ್ನು ಉತ್ಪಾದಿಸುವುದು. ಶೇ.43ರಷ್ಟು ರಾಸಾಯನಿಕ ಗೊಬ್ಬರವನ್ನು ದೇಶವು ಆಮದು ಮಾಡಿಕೊಳ್ಳುತ್ತಿದೆ.

**10) ಸಿಮೆಂಟ್ ಕೈಗಾರಿಕೆ:**

ಭಾರತದಾದ್ಯಂತ ಒಟ್ಟು 141 ಕೈಗಾರಿಕೆಗಳಿವೆ. ಸುಮರು 2012ರಲ್ಲಿ 169.00 ದಶಲಕ್ಷ ಟನ್ ಸಿಮೆಂಟ್ ಉತ್ಪಾದನೆಯಾಗಿದೆ. ಆಂಧ್ರಪ್ರದೇಶ, ರಾಜಸ್ತಾನ, ಮಧ್ಯಪ್ರದೇಶ, ತಮಿಳುನಾಡು, ಗುಜರಾತ್, ಛತ್ತೀಸ್‌ಗಡಗಳಲ್ಲಿ ಇದರ ಕೈಗಾರಿಕೆಗಳು ಹಂಚಿಕೆಯಾಗಿವೆ.

## ಭಾರತದ ಕೈಗಾರಿಕಾ ಪ್ರದೇಶಗಳು

ಸ್ವಾತಂತ್ರ್ಯ ಪೂರ್ವದಲ್ಲಿಯೇ ತ್ರಿವಾರ್ಥ ಮತ್ತು ಬರ್ನೆಟ್ ಉದ್ಯೋಗದ ಅಂಕಿಅಂಶಗಳನ್ನು ಆಧರಿಸಿ ಕೈಗಾರಿಕಾ ಪ್ರದೇಶಗಳನ್ನು ಪ್ರತ್ಯೇಕಿಸಲು ಪ್ರಯತ್ನಿಸಿದ್ದರು. ಭಾರತದ ಕೈಗಾರಿಕಾ ವಲಯಗಳನ್ನು ಸಿನ್ಹಾ ಈ ಕೆಳಕಂಡಂತೆ ಮೂರು ವಲಯಗಳಾಗಿ ವಿಂಗಡಿಸಿರುವರು.

1) ಪ್ರಧಾನ ಕೈಗಾರಿಕಾ ವಲಯಗಳು: ಪ್ರತಿದಿನ 1.5 ಲಕ್ಷ ಕೈಗಾರಿಕಾ ಕಾರ್ಮಿಕರನ್ನು ಒಳಗೊಂಡಿರುವ ಭಾಗ.

2) ಉಪ ಕೈಗಾರಿಕಾ ಪ್ರದೇಶ: ಪ್ರತಿದಿನ ಕೈಗಾರಿಕೆಗಳಲ್ಲಿ 25,000ಕ್ಕಿಂತ ಹೆಚ್ಚು ಕಾರ್ಮಿಕರನ್ನು ಒಳಗೊಂಡಿದೆ.

3) ಕೈಗಾರಿಕಾ ಜಿಲ್ಲೆ: ಸುಮಾರು 25,000ಕ್ಕಿಂತ ಕಡಿಮೆ ಕಾರ್ಮಿಕರು.

ಪ್ರಸ್ತುತ ಕೈಗಾರಿಕಾ ವಲಯಗಳನ್ನು ಗುರುತಿಸಲು ಹಲವಾರು ಅಂಶಗಳನ್ನು ಪರಿಗಣಿಸಲಾಗುವುದು. ಅವುಗಳು,

1) ಕೈಗಾರಿಕಾ ಘಟಕಗಳ ಸಂಖ್ಯೆ

2) ಕೈಗಾರಿಕಾ ಕಾರ್ಮಿಕರ ಸಂಖ್ಯೆ

3) ಕೈಗಾರಿಕೆಗಳ ಉತ್ಪಾದನೆ

4) ಕೈಗಾರಿಕಾ ಪ್ರಕ್ರಿಯೆಯಿಂದ ಆಗುವ ಮೌಲ್ಯವರ್ಧನೆಯ ಪ್ರಮಾಣ. ಇತ್ಯಾದಿ.

ಭಾರತದಲ್ಲಿ 8 ಪ್ರಧಾನ ಕೈಗಾರಿಕಾ ವಲಯಗಳು ಹಾಗೂ 13 ಉಪಕೈಗಾರಿಕಾ ವಲಯಗಳನ್ನು ಗುರುತಿಸಲಾಗಿದೆ. ದೇಶದ ಪ್ರಧಾನ ಕೈಗಾರಿಕಾ ವಲಯಗಳೆಂದರೆ,

1) ಹೂಗ್ಲಿ ಪ್ರದೇಶ
2) ಮುಂಬೈ ಪೂನಾ ಪ್ರದೇಶ
3) ಅಹಮದಾಬಾದ್ ವಡೋದರ ಪ್ರದೇಶ
4) ದಾಮೋದರ ಕಣಿವೆ ಪ್ರದೇಶ
5) ದಕ್ಷಿಣದ ಕೈಗಾರಿಕಾ ಪ್ರದೇಶ
6) ನ್ಯಾಷನಲ್ ಕ್ಯಾಪಿಟಲ್ ರೀಜನ್
7) ವಿಶಾಖಪಟ್ಟಣ ಗುಂಟೂರು ಪ್ರದೇಶ
8) ಕೊಲ್ಲಂ ತಿರುವನಂತಪುರಂ ಪ್ರದೇಶ

ಉಪಪ್ರಧಾನ ಕೇಂದ್ರಗಳು ಈ ಕೆಳಗಿನಂತಿವೆ.

1) ಅಸ್ಸಾಂ ಕಣಿವೆಯ ಪ್ರದೇಶ
2) ಡಾರ್ಜಿಲಿಂಗ್ ಪ್ರದೇಶ
3) ಕಾನ್ಪುರ ಪ್ರದೇಶ
4) ದುರ್ಗ ರಾಯಪುರ ಪ್ರದೇಶ
5) ಬೆಳಗಾವಿ ಧಾರವಾಡ ಪ್ರದೇಶ
6) ಚೆನ್ನೈ ಪ್ರದೇಶ
7) ಸೊಲ್ಲಾಪುರ ಪ್ರದೇಶ
8) ಇಂಡೋರ್ ಉಜ್ಜೈನಿ ಇತ್ಯಾದಿ.

ಭಾರತವು ತನ್ನ ರಾಷ್ಟ್ರೀಯ ಕೈಗಾರಿಕಾ ನೀತಿ 2011ರಲ್ಲಿ ಅಲ್ಲಲ್ಲಿ ಕೈಗಾರಿಕಾ ಸಮೂಹ ಹಾಗೂ ಕೇಂದ್ರೀಕರಣವನ್ನು ಅಳವಡಿಸಿಕೊಂಡಿದೆ. ಕೈಗಾರಿಕಾ ವಲಯಗಳನ್ನು ಗುರುತಿಸಿ ಅವುಗಳಲ್ಲಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಿದೆ. ಇವುಗಳನ್ನು ಕಾರಿಡಾರ್‌ಗಳೆಂದು ಕರೆದಿದೆ. ದೇಶದಲ್ಲಿ ಇಂತಹ 16 ಕೈಗಾರಿಕಾ ಕೇಂದ್ರಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಎಂಟು ಕೇಂದ್ರಗಳು ದೆಹಲಿ ಮುಂಬೈ ಕಾರಿಡಾರ್‌ನಲ್ಲಿವೆ. ಉದಾಹರಣೆಗೆ ಬೆಂಗಳೂರು ಮುಂಬೈ ಇಕ್ನಾಮಿಕ್ ಕಾರಿಡಾರ್, ಚೆನ್ನೈ ಬೆಂಗಳೂರು ಕೈಗಾರಿಕಾ ಕಾರಿಡಾರ್ ಇತ್ಯಾದಿ.

## ಸಾರಿಗೆ

ಕೈಗಾರಿಕೆಗಳು ಸಾರಿಗೆಯನ್ನು ಅತಿ ಅವಶ್ಯಕವಾಗಿ ಹೊಂದಲೇಬೇಕಾದ ಮೂಲ ಸೌಕರ್ಯವಾಗಿದೆ. ಸಾರಿಗೆಯು ಆರ್ಥಿಕ ಪ್ರಗತಿಯ ಸೂಚಕ. ಇದು ತೃತೀಯ ಆರ್ಥಿಕ ವೃತ್ತಿಯೂ ಆಗಿದೆ.

**ಸಾರಿಗೆಯ ಪ್ರಾಮುಖ್ಯತೆ:**

1) ವ್ಯವಸಾಯಾಭಿವೃದ್ಧಿಗೆ ಪೂರಕ
2) ಕೈಗಾರಿಕಾಭಿವೃದ್ಧಿಗೆ ಪೂರಕ
3) ವ್ಯಾಪಾರಾಭಿವೃದ್ಧಿಗೆ ಪೂರಕ
4) ನಗರ ಮತ್ತು ಬಂದರುಗಳ ಅಭಿವೃದ್ಧಿಗೆ ಪೂರಕ
5) ಸಂಪನ್ಮೂಲಗಳ ಬಳಕೆಗೆ ಪೂರಕ
6) ಕೆಲಸಗಾರರ ಸಂಚಾರಕ್ಕೆ ಪೂರಕ
7) ಆಡಳಿತ ನಿರ್ವಹಣೆ ಹಾಗೂ ರಕ್ಷಣೆಗೆ ಪೂರಕ

8) ಸಾಮಾಜಿಕ ಅಭಿವೃದ್ಧಿಗೆ ಪೂರಕ

9) ರಾಷ್ಟ್ರೀಯ ಆದಾಯ ಹೆಚ್ಚಳಕ್ಕೆ ಪೂರಕ

10) ಬೆಳೆಗಳ ನಿಯಂತ್ರಣಕ್ಕೆ ಪೂರಕ

**ರಸ್ತೆ ಸಾರಿಗೆ:**

ಸಮಗ್ರ ರಾಷ್ಟ್ರೀಯ ಆದಾಯಕ್ಕೆ ಸಾರಿಗೆ ಅತಿ ಅವಶ್ಯಕವಾಗಿದೆ. ಭಾರತವು ಪ್ರಪಂಚದಲ್ಲಿ ಅತಿ ಹೆಚ್ಚು ರಸ್ತೆ ಜಾಲದಿಂದ ಕೂಡಿದ ರಾಷ್ಟ್ರಗಳಲ್ಲಿ ಮೂರನೇಯದು. 2011ರಲ್ಲಿ ಸುಮಾರು 4.3 ದಶಲಕ್ಷ ಕಿ.ಮೀ. ರಸ್ತೆ ಹೊಂದಿದೆ. ಭಾರತದ ರಸ್ತೆಗಳನ್ನು ಅವುಗಳ ಕಾರ್ಯಶೀಲತೆಯ ಆಧಾರದ ಮೇಲೆ 1943ರ ನಾಗಪುರ ಯೋಜನೆಯಲ್ಲಿ ನಾಲ್ಕು ಪ್ರಮುಖ ವಿಧಗಳಾಗಿ ವರ್ಗೀಕರಿಸಲಾಗಿವೆ. ಅವುಗಳು,

1) ರಾಷ್ಟ್ರೀಯ ಹೆದ್ದಾರಿ

2) ರಾಜ್ಯ ಹೆದ್ದಾರಿ

3) ಜಿಲ್ಲಾ ರಸ್ತೆ

4) ಗ್ರಾಮೀಣ ರಸ್ತೆಗಳು

ಅತಿ ಹೆಚ್ಚು ಉದ್ದದ ರಾಷ್ಟ್ರೀಯ ಹೆದ್ದಾರಿ ಹೊಂದಿರುವ ರಾಜ್ಯ ಉತ್ತರ ಪ್ರದೇಶ. (ಒಟ್ಟು ದೇಶದ 58112 ಕಿ.ಮೀ. ರಸ್ತೆಯಲ್ಲಿ 4942 ಕಿ.ಮೀ.ನಷ್ಟು ಹೊಂದಿದೆ.) ಒಟ್ಟು 24,566,647 ಕಿ.ಮೀ. ರಸ್ತೆಯ ಉದ್ದದಲ್ಲಿ ಶೇ.10.9 (267452)ರಷ್ಟು ಹೊಂದಿರುವ ಮಹಾರಾಷ್ಟ್ರ ಮೊದಲನೆಯದು. ಪ್ರಧಾನ ನಗರ, ಬಂದರುಗಳನ್ನು, ವಿಮಾನ ನಿಲ್ದಾಣಗಳನ್ನು ಸಂಪರ್ಕಿಸುವ ಮೂಲಕ ಕೈಗಾರಿಕಾ ಅಭಿವೃದ್ಧಿಯಲ್ಲಿ ರಸ್ತೆಗಳು ಪ್ರಮುಖ ಪಾತ್ರ ವಹಿಸಿವೆ. ಕೇರಳವು ಅತಿ ಹೆಚ್ಚು ರಸ್ತೆ ಸಾಂದ್ರತೆ ಹೊಂದಿದ ರಾಜ್ಯವಾಗಿದೆ.

**ರೈಲು ಸಾರಿಗೆ:**

ಕೈಗಾರಿಕಾಭಿವೃದ್ಧಿಯು ಬಹುವಾಗಿ ರೈಲು ಮಾರ್ಗಗಳನ್ನೇ ಆಧರಿಸಿದೆ. ಕೈಗಾರಿಕೆಗಳಿಗೆ ಅಗತ್ಯವಾದ ಅಗಾಧ ಕಚ್ಚಾವಸ್ತುಗಳು ಹಾಗೂ ಉತ್ಪಾದಿಸಿದ ಸಿದ್ದ ವಸ್ತುಗಳು ರೈಲುಗಳ ಮೂಲಕವೇ ಸಾಗಿಸಲ್ಪಡುತ್ತವೆ. ಖನಿಜಗಳು, ಕಲ್ಲಿದ್ದಲು, ಕಬ್ಬಿಣ ಮತ್ತು ಉಕ್ಕು, ಸಿಮೆಂಟ್, ರಾಸಾಯನಿಕ ಗೊಬ್ಬರ, ಪೆಟ್ರೋಲಿಯಂ, ಉತ್ಪನ್ನಗಳು, ಆಹಾರ ಧಾನ್ಯ ಹಾಗೂ ಪ್ರಯಾಣಿಕರನ್ನು ರೈಲುಗಳು ಸಾಗಿಸುತ್ತವೆ.

ಭಾರತದಲ್ಲಿ ಸಾಗಿಸಲ್ಪಡುವ ಶೇ.80ರಷ್ಟು ಸರಕು ಹಾಗೂ ಶೇ.70ರಷ್ಟು ಪ್ರಯಾಣಿಕರನ್ನು ರೈಲುಗಳು ಸಾಗಿಸುತ್ತವೆ. ಇದಲ್ಲದೇ ವಿದೇಶಕ್ಕೆ ರಫ್ತಾಗುವ ವಸ್ತುಗಳನ್ನು ಬಂದರುಗಳಿಗೆ ಹಾಗೂ ಆಮದಾಗುವ ವಸ್ತುಗಳನ್ನು ಬಂದರುಗಳಿಂದ ಒಳನಾಡಿಗೆ ಸಾಗಿಸಲು ರೈಲು ಸಾರಿಗೆಯನ್ನು ಆಧರಿಸಲಾಗಿದೆ. ಸಾರಿಗೆ ಕ್ಷೇತ್ರದಿಂದ ದೊರೆಯುವ ಸಮಗ್ರ ರಾಷ್ಟ್ರೀಯ ಆದಾಯದ ಶೇ.22ರಷ್ಟು ರೈಲು ಸಾರಿಗೆಯಿಂದ ಪಡೆಯಲಾಗುತ್ತಿದೆ. ಭಾರತದಲ್ಲಿಯ ರೈಲು ಮಾರ್ಗದ ಹಂಚಿಕೆ ಈ ಕೆಳಗಿನಂತಿದೆ.

* ಬ್ರಾಡ್‌ಗೇಜ್ – 54257 ಕಿ.ಮೀ. – 84.8%
* ಮೀಟರ್‌ಗೇಜ್ – 7180 ಕಿ.ಮೀ. – 11.2%
* ನ್ಯಾರೋಗೇಜ್ – 2537 ಕಿ.ಮೀ. – 4.0%
* ಒಟ್ಟು – 63974 ಕಿ.ಮೀ. – 100%

**ಭಾರತದ ಪ್ರಧಾನ ಬಂದರುಗಳು:**

ಭಾರತವು 13 ಪ್ರಧಾನ 140 ಮಧ್ಯಮ ಮತ್ತು ಚಿಕ್ಕ ಬಂದರುಗಳನ್ನು ಹೊಂದಿದೆ. ಭಾರತವು 8 ಹಾಗೂ 9ನೇಯ ಪಂಚವಾರ್ಷಿಕ ಯೋಜನೆಗಳಲ್ಲಿ ಬಂದರುಗಳ ಸಾಮರ್ಥ್ಯವನ್ನು ಹೆಚ್ಚಿಸಿದೆ. 2013ರ ವೇಳೆಗೆ ಬಂದರುಗಳ ಒಟ್ಟು ಸಾಮರ್ಥ್ಯ 689 ದಶಲಕ್ಷ ಟನ್‌ಗಳಿಗೆ ಹೆಚ್ಚಿದೆ.

**ಪ್ರಧಾನ ಬಂದರುಗಳು:**

| | |
|---|---|
| 1) ಮುಂಬೈ | 2) ಜವಹರಲಾಲ್ ನೆಹರೂ |
| 3) ಕಾಂಡ್ಲಾ | 4) ಮರ್ಮಗೋವಾ |
| 5) ನವ ಮಂಗಳೂರು | 6) ಕೊಚ್ಚಿನ್ |
| 7) ಕೊಲ್ಕತ್ತಾ | 8) ಪಾರದೀಪ |
| 9) ವಿಶಾಖಪಟ್ಟಣ | 10) ಚೆನ್ನೈ |
| 11) ಟುಟಿಕೋರಿನ್ | 12) ಎನ್ನೋರ್ |

**ಒಳನಾಡಿನ ಜಲಸಾರಿಗೆ:**

ಪ್ರಸ್ತುತ 145,000 ಕಿ.ಮೀ.ಗಳಷ್ಟು ಉದ್ದವಾದ ಆಂತರಿಕ ಜಲಸಾರಿಗೆಯ ಮಾರ್ಗವನ್ನು ಭಾರತವು ಒಳಗೊಂಡಿದೆ. ಆಂತರಿಕ ಜಲಸಾರಿಗೆ ಪರಿಸರ ಮಾಲಿನ್ಯರಹಿತ ಸಾರಿಗೆಯಾಗಿದೆ. ಇತರ ಮಾಧ್ಯಮಗಳಿಂದ ಲಾಭದಾಯಕ ಹಾಗೂ ಉದ್ಯೋಗ ಸೃಷ್ಟಿಯ ಪ್ರಾಮುಖ್ಯತೆಯನ್ನು ಸಹ ಇದು ಹೊಂದಿದೆ. ಭಾರತೀಯ ಆಂತರಿಕ ಜಲಸಾರಿಗೆ ಪ್ರಾಧಿಕಾರ (1980)ವು ಈ ಆಂತರಿಕ ಜಲಮಾರ್ಗಗಳ ಅಭಿವೃದ್ಧಿ, ಸಂರಕ್ಷಣೆ, ನಿರ್ವಹಣೆ, ಸರ್ವೇಕ್ಷಣೆ ಕಾರ್ಯ ಮಾಡುತ್ತದೆ.

**ಭಾರತವು ಹೊಂದಿರುವ 6 ರಾಷ್ಟ್ರೀಯ ಜಲಮಾರ್ಗಗಳು:**

1) ಅಲಹಾಬಾದ್‌ನಿಂದ ಹಾಲ್ದಿಯಾ (ಗಂಗಾ)
2) ಸೈದ್ಯಾ–ಧೂಬ್ರಿ–ಬ್ರಹ್ಮಪುತ್ರ
3) ಕೊಳ್ಳಂ–ಕೊಟ್ಟಪುರಂ
4) ರಾಷ್ಟ್ರೀಯ ಜಲಮಾರ್ಗ 4
5) ರಾಷ್ಟ್ರೀಯ ಜಲಮಾರ್ಗ 5
6) ರಾಷ್ಟ್ರೀಯ ಜಲಮಾರ್ಗ 6

**ಕೈಗಾರಿಕೆಯ ಹಿಂದುಳಿದ ಪ್ರದೇಶಗಳು:**

ಗ್ರಾಮೀಣ ಕೈಗಾರಿಕೆಗಳನ್ನು ಬೆಳೆಸಲು 1960ರಲ್ಲಿ ಮೊದಲಿಗೆ ಸಣ್ಣ ಕೈಗಾರಿಕೆಗಳ ಬೋರ್ಡ್ ಕೈಗಾರಿಕೆಗಳ ಹಿಂದುಳಿದ ಪ್ರದೇಶ ಗುರುತಿಸಲು ಸಮಿತಿ ರಚಿಸಿತು. 1968ರಲ್ಲಿ ಪಾಂಡೆ ಸಮಿತಿಗೆ ಈ ಹಿಂದುಳಿದ ಕೈಗಾರಿಕಾ ಪ್ರದೇಶ ಗುರುತಿಸುವ ಕಾರ್ಯ ವಹಿಸಲಾಯಿತು. ನಂತರ ವಾಂಚೂ ಸಮಿತಿಗೆ 1968ರಲ್ಲಿ ಈ ಹಿಂದುಳಿದ ಕೈಗಾರಿಕಾ ಪ್ರದೇಶಗಳನ್ನು ಹೋಗಲಾಡಿಸಲು ಹಣಕಾಸಿನ ಮತ್ತು ಆರ್ಥಿಕ ಸಲಹೆಗಳನ್ನು ನೀಡಬಹುದೆಂದು ಹೇಳಿತು. ಪಾಂಡೆ ಸಮಿತಿಯು ಕೈಗಾರಿಕಾ ಹಿಂದುಳಿದ ಪ್ರದೇಶಗಳನ್ನು ಗುರುತಿಸಲು ಈ ಕೆಳಗಿನ 6 ಮಾನಕ ಬಳಸಿತ್ತು. ಅವುಗಳು,

1) ತಲಾ ಆದಾಯ.
2) ಗಣಿ ಮತ್ತು ಕೈಗಾರಿಕೆಯಿಂದ ತಲಾ ಆದಾಯ.
3) ಕೈಗಾರಿಕೆಯಲ್ಲಿ ನೋಂದಣಿಯಾದ ಕಾರ್ಮಿಕರು.
4) ಕೈಗಾರಿಕೆಯಲ್ಲಿ ತಲಾ ವಿದ್ಯುತ್ ಬಳಕೆ.
5) ಜನಸಂಖ್ಯೆ ಸಂಬಂಧಿಸಿದಂತೆ ಇರುವ ರಸ್ತೆಯ ಉದ್ದ.
6) ಪ್ರದೇಶಕ್ಕೆ ಸಂಬಂಧಿಸಿದಂತೆ ಇರುವ ರಸ್ತೆಯ ಉದ್ದ.

ಪಾಂಡೆ ಸಮಿತಿಯು ಈ ಕೆಳಗಿನ ಮಾನಕಗಳ ಮೂಲಕ ಕೈಗಾರಿಕೆಗಳ ಹಿಂದುಳಿದ ಜಿಲ್ಲೆಗಳೆಂದು ಗುರುತಿಸಿತು.

1) ಜಿಲ್ಲೆಯ ಭೌಗೋಳಿಕ ಸ್ಥಾನ (80 ಕಿ.ಮೀ. ಸುತ್ತಲೂ)

2) ತಲಾ ಆದಾಯ (ರಾಜ್ಯಕ್ಕಿಂತ ಶೇ.25 ಕಡಿಮೆ ತಲಾ ಆದಾಯ)

3) ಜನಸಾಂದ್ರತೆ

4) ವಿದ್ಯುತ್ ಬಳಕೆ

5) ರಸ್ತೆ ಮತ್ತು ರೈಲಿನ ವಿಸ್ತರಣೆ

6) ನೀರಿನ ಲಭ್ಯತೆ

ಈ ಎಲ್ಲಾ ಮಾನಕಗಳಿಂದ ಪಾಂಡೆ ಸಮಿತಿಯು ಒಟ್ಟು 238 ಜಿಲ್ಲೆಗಳನ್ನು ಕೈಗಾರಿಕಾ ಹಿಂದುಳಿದ ಜಿಲ್ಲೆಗಳು ಎಂದು ಗುರುತಿಸಿತು.

ಯೋಜನಾ ಆಯೋಗದ 1983ರ ಸಮೀಕ್ಷೆ ಹಿಂದುಳಿದ ಕೈಗಾರಿಕಾ ಪ್ರದೇಶಗಳ ಕುರಿತು ವಿವರಿಸಿತು. ಅದು 279 ಜಿಲ್ಲೆ ಮತ್ತು 20 ಉಪಜಿಲ್ಲೆಗಳು ಹಿಂದುಳಿದಿವೆ. ಅದರಲ್ಲಿ 131 ಅಂಚಿನಲ್ಲಿ ಅಭಿವೃದ್ಧಿಯಾದರೆ, 55 ಅಲ್ಪ ಪ್ರಮಾಣದಲ್ಲಿ ಅಭಿವೃದ್ಧಿಯಾಗಿದ್ದು, 133 ತೀರಾ ಹಿಂದುಳಿದ ಜಿಲ್ಲೆಗಳೆಂದು ಗುರುತಿಸಿತು. ಸಾಮಾನ್ಯವಾಗಿ ಈ ಅತಿ ಹಿಂದುಳಿದ (ಹೆಚ್ಚಿನ) ಪ್ರದೇಶಗಳಲ್ಲಿ ಪೂರ್ವದ ಉತ್ತರ ಪ್ರದೇಶ, ಅಸ್ಸಾಂ, ಪಶ್ಚಿಮದ ರಾಜಸ್ತಾನ, ತೆಲಂಗಾಣ ಮತ್ತು ವಿದರ್ಭ, ಪಶ್ಚಿಮ ಘಟ್ಟ, ಕೇರಳದ ಪ್ರಸ್ಥಭೂಮಿ ಪ್ರಮುಖವಾಗಿದ್ದವು.

ಈ ಪ್ರದೇಶಗಳು ಹಿಂದುಳಿದಿರುವಿಕೆಗೆ ಕಾರಣಗಳು ಈ ಕೆಳಗಿನಂತಿವೆ.

1) ಪರಿಸರದ ಕಾರಣಗಳು: ಅತಿ ಮಳೆ, ಕಡಿಮೆ ಮಳೆ.

2) ಆರ್ಥಿಕ ಕಾರಣಗಳು: ಕಡಿಮೆ ಅಭಿವೃದ್ಧಿಯ ಸಂಪನ್ಮೂಲ.

3) ಸಾಂಸ್ಕೃತಿಕ ಕಾರಣಗಳು: ಕಡಿಮೆ ಸಾಕ್ಷರತೆ, ಕಡಿಮೆ ಕೌಶಲ್ಯದ ಕಾರ್ಮಿಕರು, ಕಡಿಮೆ ಕೈಗಾರಿಕಾ ವಾತಾವರಣ, ಬಡತನ.

4) ಮೂಲ ಸೌಕರ್ಯದ ಕಾರಣಗಳು: ಸಾರಿಗೆ, ಸಂಪರ್ಕ, ವಿದ್ಯತ್, ಕಚ್ಚಾ ವಸ್ತುಗಳ ಕೊರತೆ.

5) ಜನಸಂಖ್ಯಾ ಕಾರಣಗಳು: ಅತಿಯಾದ ಬೆಳವಣಿಗೆ, ಅತಿಯಾದ ಫಲವತ್ತತೆ, ಪಾರಂಪರಿಕ ಕಾರಣಗಳು.

ಈ ಪ್ರದೇಶಗಳನ್ನು ಅಭಿವೃದ್ಧಿಯತ್ತ ನಡೆಸಲು ಕೈಗೊಳ್ಳಬಹುದಾದ ಕ್ರಮಗಳು ಈ ಕೆಳಗಿನಂತಿವೆ. ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗೆ ಪ್ರಾಶಸ್ತ್ಯ ನೀಡುವುದು. ದಕ್ಷಿಣದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆ ಮಾಡುವುದು. ಚಿಕ್ಕ ಚಿಕ್ಕ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು. ಬಡತನ ನಿರ್ಮೂಲನೆ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೂಲ ಸೌಕರ್ಯ ಒದಗಿಸುವ ಮೂಲಕ ಪರೋಕ್ಷವಾಗಿ ಕೈಗಾರಿಕಾ ಬೆಳವಣಿಗೆ ಮಾಡುವುದು.

ವಾಂಛೂ ಕಮಿಟಿಯು ಸರ್ಕಾರ ಕೈಗಾರಿಕೆ ಸ್ಥಾಪಿಸುವವರಿಗೆ ಭೂಮಿಯನ್ನು ಉದಾರವಾಗಿ ಒದಗಿಸಬೇಕು ಮತ್ತು ಸಾರಿಗೆಗೆ ಸಹಾಯಧನ ನೀಡಬೇಕು ಎಂದು ಶಿಫಾರಸ್ಸು ಮಾಡಿತು. 1980ರ ಕೈಗಾರಿಕಾ ನೀತಿ ಈ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ವಿಶೇಷ ಗಮನ ಕೇಂದ್ರೀಕರಿಸಬೇಕು ಎಂದು ಶಿಫಾರಸ್ಸು ಮಾಡಿತು. 1991ರ ಕೈಗಾರಿಕಾ ನೀತಿ ಮತ್ತು 8ನೇ ಯೋಜನೆಯಲ್ಲಿ ಗ್ರಾಮೀಣ ಕೈಗಾರಿಕೀಕರಣ ಬೆಳೆಸಲು ಮೊದಲ ಪ್ರಾಶಸ್ತ್ಯ ನೀಡಲಾಯಿತು. ಅದರಂತೆ 19 ವಸ್ತುಗಳನ್ನು ಗ್ರಾಮೀಣ ಕೈಗಾರಿಕೀಕರಣಕ್ಕೆ ಮೀಸಲು ಇಡಲಾಯಿತು. ಮುಖ್ಯವಾಗಿ ಕೈಮಗ್ಗ (ವಿದ್ಯುತ್)ಮಗ್ಗ, ಖಾದಿ, ಗ್ರಾಮ, ರೇಷ್ಮೆ, ಕಸೂತಿ, ನಾರು ಇತ್ಯಾದಿಗಳು. ಲೈಸೆನ್ಸ್ ರಾಜ್ ರದ್ದತಿ, ರಾಜ್ಯಗಳ ವಿಶೇಷ ಅವಕಾಶಗಳು, ಪ್ರೋತ್ಸಾಹಕಗಳು ಇತ್ಯಾದಿ ಕ್ರಮಗಳ ಮೂಲಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಾಡಲಾಯಿತು.

## ಪಟ್ಟಣದ ವರ್ಗೀಕರಣ

ನಗರ ಕೇಂದ್ರಗಳು ಅಸಂಖ್ಯ ಜನಸಂಖ್ಯೆ, ವಿವಿಧ ಗಾತ್ರ, ಕಾರ್ಯ, ಸ್ಥಳ, ಸಾಮಾಜಿಕ ಸಂಯೋಜನೆ, ಸಾಂಸ್ಕೃತಿಕ, ಪಾರಂಪರಿಕ ಭಿನ್ನತೆಗಳಿರುವುದರಿಂದ ಅವುಗಳ ಸಮಗ್ರ ಅರಿವಿಗಾಗಿ ಅವುಗಳನ್ನು ವ್ಯವಸ್ಥಿತವಾಗಿ ವರ್ಗೀಕರಣ ಮಾಡುವ ಅಗತ್ಯವಿದೆ. ಭಾರತದಲ್ಲಿಯ ಪಟ್ಟಣಗಳು 5 ಸಾವಿರದಿಂದ 1 ಕೋಟಿ ಜನಸಂಖ್ಯೆವರೆಗೆ ಗಾತ್ರದಲ್ಲಿ ವ್ಯತ್ಯಾಸವಿರುವುದು ಪಟ್ಟಣಗಳ ವರ್ಗೀಕರಣಕ್ಕೆ ಬಹು ಕಠಿಣವಾಗಿದೆ.

ಅಲ್ಲದೆ ಪ್ರತಿ ಪಟ್ಟಣಗಳು ತುಂಬಾ ಐತಿಹಾಸಿಕ ಹಿನ್ನೆಲೆ ಹೊಂದಿರುತ್ತದೆ ಮತ್ತು ಪಟ್ಟಣಗಳ ಕಾರ್ಯಗಳು, ಆರ್ಥಿಕತೆಯ ಕುರಿತು ಅಧಿಕೃತವಾದ ದತ್ತಾಂಶ ಇರದೇ ಇರುವುದು ಈ ವರ್ಗೀಕರಣವನ್ನು ಕಠಿಣವಾಗಿಸುತ್ತವೆ. ಅಲ್ಲದೇ ಈ ದತ್ತಾಂಶ ಸಂಗ್ರಹಣೆಗೆ ಸೂಕ್ತವಾದ ನಿಯೋಗವಿಲ್ಲದಿರುವುದು ಪಟ್ಟಣಗಳ ವರ್ಗೀಕರಣ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗುತ್ತದೆ.

ಪಟ್ಟಣವನ್ನು ಕಾರ್ಯಾಧಾರಿತ ವರ್ಗಈಕರಣ ಮಾಡುವುದು ಬಹುವಾಗಿ ಒಪ್ಪಿತವಾಗಿದೆ ಮತ್ತು ವಿಶ್ವಾಸನೀಯವಾದ ಕ್ರಮವಾಗಿದೆ. ಸಾಮಾನ್ಯವಾಗಿ ಎಲ್ಲಾ ಪಟ್ಟಣಗಳು ಆರೋಗ್ಯ, ಶಿಕ್ಷಣ, ನೀರು, ವಿದ್ಯುತ್, ಶುಚಿತ್ವ (ಮುನ್ಸಿಪಲ್), ಸಾರಿಗೆ, ಮಾರುಕಟ್ಟೆ ಇತ್ಯಾದಿಗಳನ್ನು ಒದಗಿಸಬೇಕು. ಅದಕ್ಕಾಗಿ ನಗರ ಪ್ರದೇಶಗಳನ್ನು ಅವುಗಳ ಒಂದು ಕಾರ್ಯದ ಮೇಲೆ ವರ್ಗೀಕರಿಸುವುದು ಸೂಕ್ತವಲ್ಲ. 1921ರಲ್ಲಿ ಆರೋಸಿಯಾಲಿಸ್‌ನು ಈ ವರ್ಗೀಕರಣವನ್ನು ಪ್ರಯತ್ನಿಸಿದನು. ಅವನು 6 ವಿಧಗಳಲ್ಲಿ ಆಡಳಿತ, ರಕ್ಷಣೆ, ಸಂಸ್ಕೃತಿ, ಪಟ್ಟಣದ ಉತ್ಪಾದನೆ, ಸಂಪರ್ಕ ಮತ್ತು ಮನರಂಜನೆಯ ಆಧಾರದ ಮೇಲೆ ವರ್ಗೀಕರಣ ಮಾಡಲು ಪ್ರಯತ್ನಿಸಿದನು. ಆದರೆ ಇದು ಸರ್ವಸಮ್ಮತವಾಗಲಿಲ್ಲ. ಇದರಲ್ಲಿ ಆರ್ಥಿಕ ಕಾರ್ಯಗಳನ್ನು ನಿರ್ಲಕ್ಷಿಸಲಾಗಿತ್ತು.

ನಂತರ ಹ್ಯಾರಿ ಎಂಬಾತ ಬಹು ಕಾರ್ಯದ ನಗರಗಳಲ್ಲಿನ ಪ್ರಧಾನವಾದ ಕಾರ್ಯ ಆಧಾರಿತ, ಪ್ರಮಾಣ ಆಧರಿಸಿದ ವರ್ಗೀಕರಿಸಿ ಪ್ರತಿಪಾದಿಸಿದ. ಜೊತೆಗೆ ಉದ್ಯೋಗ, ವೃತ್ತಿಯ ಸಂಖ್ಯೆ ಬಳಸಿದ. ಇದು ಸಹ ಸರ್ವಸಮ್ಮತವಾಗಲಿಲ್ಲ. ಇದು ವಿಷಯಾಧಾರಿತ ವರ್ಗೀಕರಣವಾಗಿತ್ತು.

ನಂತರ ಹೋವಾರ್ಡ್ ನೆಲ್ಸನ್ ಈ ಮೊದಲು ವರ್ಗೀಕರಿಸಿದವರ ನ್ಯೂನ್ಯತೆಗಳನ್ನು ಹೋಗಲಾಡಿಸಿದನು. ಇವನು ಪ್ರಧಾನವಾಗಿ ವರ್ಗೀಕರಣವನ್ನು ಕೈಗಾರಿಕಾ ಗುಂಪುಗಳು, ಜನಸಂಖ್ಯೆ ಗುಣಮಟ್ಟ, ನಗರೀಕರಣ ಪ್ರದೇಶಗಳು, ನಗರದ ಸ್ಥಳ, 10000 ಅಥವಾ ಹೆಚ್ಚು ಜನಸಂಖ್ಯೆಯನ್ನು ಆಧರಿಸಿ ಮಾಡಿದನು. ಇವನು ಪಟ್ಟಣವನ್ನು ಪ್ಲಸ್–1, ಪ್ಲಸ್–2, ಪ್ಲಸ್–3 ಎಂದು ಪಟ್ಟಿ ಮಾಡಿದನು.

**ನಗರಗಳ ವಿಂಗಡನೆ:**

ಇದೊಂದು ದರ್ಜೆಯನ್ನು ತಿಳಿಸುವ ವ್ಯವಸ್ಥೆಯಾಗಿದ್ದು, ಸರ್ಕಾರಿ ಸೇವಾ ನಿರತರಿಗೆ ಹೆಚ್‌ಆರ್‌ಎಯನ್ನು ನಿರ್ಧರಿಸಲು ವಿಂಗಡನೆ ಮಾಡಿದೆ. ನಗರಗಳನ್ನು ಎಕ್ಸ್, ವೈ, ಜ಼ಡ್ ಎಂದು ಅದರ ಜನಸಂಖ್ಯೆ ಆಧರಿಸಿ 6ನೇ ವೇತನ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ವಿಂಗಡನೆ ಮಾಡಲಾಗಿದೆ.

ಈ ಮುಂಚೆ ವಿಂಗಡನೆಯು 2 ಮಾನಕಗಳ ಆಧಾರದ ಮೇಲೆ ಇತ್ತು. ಅದು 5ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯವಿತ್ತು.

ಅವು ಸಿಸಿಎ ಮತ್ತು ಹೆಚ್‌ಆರ್‌ಎ. ಸಿಸಿಎನಲ್ಲಿ ಎ–1, ಎ, ಬಿ–1 ಮತ್ತು ಬಿ–2 ಎಂದು, ಹೆಚ್‌ಆರ್‌ಎನಲ್ಲಿ ಎ–1, ಎ, ಬಿ–1, ಬಿ–2 ಮತ್ತು ಸಿ–3 ಎಂದು ಮತ್ತೇ ವರ್ಗೀಕರಿಸಲಾಗಿತ್ತು. 1997ರಲ್ಲಿ ಚೆನ್ನೈ, ನವದೆಹಲಿ, ಕೋಲ್ಕತ್ತಾ, ಮುಂಬಾಯಿಗಳನ್ನು ಎ1 ನಗರಗಳೆಂದು ಗುರುತಿಸಲಾಗಿತ್ತು. ನಂತರ 2001ರ ಜನಗಣತಿಯ ನಂತರ ಹೈದರಾಬಾದ್ ಮತ್ತು ಬೆಂಗಳೂರನ್ನು 2007ರಲ್ಲಿ ಎ1 ನಗರಗಳೆಂದು ಮೇಲ್ದರ್ಜೆಗೆ ಏರಿಸಲಾಯಿತು.

ಪ್ರಸ್ತುತ 6ನೇ ವೇತನ ಆಯೋಗ ಸಿಸಿಎಯನ್ನು ರದ್ದುಪಡಿಸಿತು. ಈ ಮೊದಲಿನ ಹೆಚ್‌ಆರ್‌ಎ ವರ್ಗೀಕರಣವನ್ನು ಎ1ನಿಂದ ಎಕ್ಸ್ ಎಂದು, ಎ ಬಿ–1 ಮತ್ತು ಬಿ–2ನ್ನು 'ವಯ್' ಎಂದು ಮತ್ತು ಸಿ ಮತ್ತು ಅವರ್ಗೀಕೃತ ನಗರಗಳನ್ನು 'ಝಡ್' ಎಂದು ವಿಂಗಡಿಸಲಾಯಿತು. ಎಕ್ಸ್, ವೈ, ಝಡ್‌ಗಳನ್ನು ಸಾಮಾನ್ಯವಾಗಿ ಟೈಯರ್–1, ಟೈಯರ್–2 ಮತ್ತು ಟೈಯರ್–3 ಎಂದು ಕರೆಯುವರು.

**ನಗರ ರಚನೆ**

ನಗರ ರಚನೆ ಎಂದರೆ, ನಗರ ಪ್ರದೇಶದಲ್ಲಿ ಭೂಮಿಯನ್ನು ಬಳಸಿಕೊಳ್ಳುವ ವ್ಯವಸ್ಥೆ. ನಗರ ವ್ಯವಸ್ಥೆಯಲ್ಲಿ ಜನರು ಮತ್ತು ವ್ಯವಹಾರಗಳು ಹೇಗೆ ಬೆಳೆಯುತ್ತವೆ ಎಂಬುದನ್ನು ಸಮಾಜವಾದಿಗಳು, ಆರ್ಥಿಕ ತಜ್ಞರು ಮತ್ತು ಭೂಗೋಳ ಶಾಸ್ತ್ರಜ್ಞರು ಅನೇಕ ವಿಧಗಳನ್ನು ಹೇಳಿದ್ದಾರೆ. ನಗರ ರಚನೆಯನ್ನು ನಗರದ ಪ್ರಾದೇಶಿಕ ರಚನೆ ಎಂದು ಪರಿಗಣಿಸಲಾಗಿದೆ. ಇದು ಸಾರ್ವಜನಿಕ ಮತ್ತು ಖಾಸಗಿಯವರ ನಗರದಲ್ಲಿನ ಸ್ಥಳ ವ್ಯವಸ್ಥೆ ಕುರಿತು ಮತ್ತು ಅವುಗಳ ನಡುವಿನ ಜೋಡಣೆ ಮತ್ತು ಪ್ರದೇಶದ ಕುರಿತು ವಿವೇಚಿಸುತ್ತದೆ.

**ಜೋನಲ್ ಮೋಡ್ – ವಲಯ ಮಾದರಿ:**

ಇದನ್ನು ಸಾಮಾಜಿಕ ಗುಂಪುಗಳ ನಗರ ಪ್ರದೇಶದಲ್ಲಿನ ಹಂಚಿಕೆಯ ಕುರಿತು ವಿವರಿಸುತ್ತದೆ. ಪ್ರಮುಖ / ಪ್ರಧಾನ ವಲಯ, ಉಪವಲಯ, ವಿಸ್ತರಿತ ವಲಯ ಎಂಬುದಾಗಿ ರಚನೆ ಇರುತ್ತದೆ.

**ಕ್ಷೇತ್ರಿಯ ಮಾದರಿ:**

ಇಲ್ಲಿ ವೃತ್ತ ಮಾದರಿಯ ವಲಯಕ್ಕೆ ಬದಲಾಗಿ 'ಕ್ಷೇತ್ರ'ದ ಆಧಾರಿತ ರಚನೆ ಇರುತ್ತದೆ. ಈ ಕ್ಷೇತ್ರಿಯ ಮಾದರಿಯು ಬಹುತೇಕ ಭೌಗೋಳಿಕ ಕಾರಣಗಳಿಂದ ನಿರ್ಮಿಸಲ್ಪಟ್ಟಿರುತ್ತವೆ.

**ಬಹು ನ್ಯೂಕ್ಲಿಯಸ್ ಮಾದರಿ:**

ಡಿ.ಪಟೇಲ ಮತ್ತು ಈ.ಎಲ್.ಉಲ್‌ಮೆನ್ ಈ ಮಾದರಿಯನ್ನು 1995ರಲ್ಲಿ ಅಭಿವೃದ್ಧಿ ಪಡಿಸಿದರು. ಒಂದೇ ಕೇಂದ್ರೀಯ ಪ್ರದೇಶವಿರದೇ, ಪ್ರತಿ ನಗರದ ಚಟುವಟಿಕೆ ನಡೆಯುವ ಹಲವು ಕೇಂದ್ರಗಳಿರುತ್ತವೆ. ಕೆಲವು ಈ ಮಾದರಿ ನಿರ್ಮಿತವಾಗಿರುತ್ತದೆ. ಉದಾಹರಣೆಗೆ ಒಂದು ವಿ.ವಿ.ಯು ಶಿಕ್ಷಿತ ಸಮುದಾಯಗಳನ್ನು, ಬುಕ್ಸ್ಟಾಲ್‌ಗಳನ್ನು ಇತ್ಯಾದಿಗಳನ್ನು ಆಕರ್ಷಿಸುತ್ತದೆ. ಅದೇ ರೀತಿ ವಿಮಾನ ನಿಲ್ದಾಣವು ಹೋಟೆಲ್‌ಗಳನ್ನು, ಸಂಗ್ರಹಾರಗಳನ್ನು ಆಕರ್ಷಿಸುತ್ತವೆ. ಭಾರತದಲ್ಲಿ ಈ ಎಲ್ಲ ಮಾದರಿಯ ನಗರಗಳನ್ನು ಕಾಣಬಹುದು.

# ಅಧ್ಯಾಯ – 3

# ಕರ್ನಾಟಕದ ಭೂಗೋಳ

ಕರ್ನಾಟಕ ಹವಾಮಾನ:

ಕರ್ನಾಟಕದಲ್ಲಿ ಹವಾಮಾನ ಪರಿಸ್ಥಿತಿಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ. ಮಲೆನಾಡು ಮತ್ತು ಪಶ್ಚಿಮಘಟ್ಟ ಪ್ರದೇಶಗಳು ಸಮುದ್ರಮಟ್ಟದಿಂದ ಎತ್ತರದಲ್ಲಿರುವುದರಿಂದ ಈ ಪ್ರದೇಶಗಳಲ್ಲಿ ತಂಪಾದ ಮತ್ತು ಸಮಶೀತೋಷ್ಣದ ಹವಾಮಾನವಿರುತ್ತದೆ. ಕರಾವಳಿ ಪ್ರದೇಶವು ಬಿಸಿಯಾದ ವಾತಾವರಣದಿಂದ ಕೂಡಿರುತ್ತದೆ. ಉತ್ತರ ಒಳನಾಡು ಪ್ರದೇಶದಲ್ಲಿ ಒಣಹವೆ ಇರುವುದಲ್ಲದೇ, ಉಷ್ಣಾಂಶವು ಅಧಿಕವಾಗಿರುತ್ತದೆ. ಈ ಭಾಗದಲ್ಲಿ ಚಳಿಗಾಲದಲ್ಲಿ ಅತಿಯಾದ ಚಳಿಯೂ, ಬೇಸಿಗೆಯಲ್ಲಿ ಅತೀ ಬಿಸಿಲು ಇರುತ್ತದೆ. ದಕ್ಷಿಣ ಒಳನಾಡು ಪ್ರದೇಶದಲ್ಲಿ ಸಮಶೀತೋಷ್ಣ ಹವಾಮಾನ ಇರುತ್ತದೆ.

**ಕರ್ನಾಟಕದ ಋತುಮಾನಗಳನ್ನು 4 ಭಾಗವಾಗಿ ವಿಂಗಡಿಸಲಾಗಿದೆ. ಅವುಗಳು,**

**1) ಮುಂಗಾರು ಮಳೆಗಾಲ:**

ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆಗಿನ ಅವಧಿಯನ್ನು ಅಧಿಕ ಮುಂಗಾರು ಮಳೆಗಾಲದ ಅವಧಿ ಎನ್ನಲಾಗುತ್ತದೆ. ಕರ್ನಾಟಕ ರಾಜ್ಯ ಸಾಮಾನ್ಯವಾಗಿ ವಾರ್ಷಿಕ ಸರಾಸರಿ ಮಳೆಯ ಶೇ.71ರಷ್ಟು ಮಳೆಯನ್ನು ಈ ಅವಧಿಯಲ್ಲಿ ಪಡೆಯುವುದು. ಆಹಾರ ಧಾನ್ಯದ ಒಟ್ಟು ಉತ್ಪಾದನೆಯ ಶೇ.70ರಷ್ಟು ಈ ಅವಧಿಯಲ್ಲಿ ಉತ್ಪಾದನೆ ಆಗುವುದು.

**2) ಹಿಂಗಾರು ಮಳೆಗಾಲ (ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ):**

ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿಯು ಹಿಂಗಾರು ಮಳೆಗಾಲದ ಅವಧಿಯಾಗಿದೆ. ಈ ಅವಧಿಯಲ್ಲಿ ಹಿಂಗಾರು ಬೆಳೆಗಳಾದ ಜೋಳ, ಗೋಧಿ, ಸೂರ್ಯಕಾಂತಿ, ಕಡಲೆ ಬೆಳೆಗಳನ್ನು ಬಿತ್ತನೆ ಮಾಡಲಾಗುವುದು. ಭಾರತದ ಎತ್ತರ ಭಾಗದಲ್ಲಿ ಅಧಿಕ ಒತ್ತಡದ ಪಟ್ಟಿ ಉಂಟಾಗಿ ದಕ್ಷಿಣದಲ್ಲಿ ಒತ್ತಡ ಕಡಿಮೆಯಾಗುವುದು. ಈ ತದ್ವಿರುದ್ಧವಾದ ಪರಿಸ್ಥಿತಿಯಲ್ಲಿ ನೈರುತ್ಯ ಮಾನ್ಸೂನ್ ಮಾರುತಗಳು ಹಿಂತಿರುಗುತ್ತದೆ. ಬಂಗಾಳ ಕೊಲ್ಲಿಯಲ್ಲಿ ಹಾದು ಬರುವಾಗ ತೇವಾಂಶಗಳನ್ನು ಪಡೆಯುವುದರಿಂದ ಫೆಬ್ರವರಿ ಮಧ್ಯ ಭಾಗದವರೆಗೆ ಚಳಿಗಾಲ ಅವಧಿ ಇರುತ್ತದೆ. ಈ ಅವಧಿಯ ವಿಶಿಷ್ಟ ಲಕ್ಷಣಗಳೆಂದರೆ ಕಡಿಮೆ ಉಷ್ಣಾಂಶ, ಆರ್ದ್ರತೆ, ಅಲ್ಪ ಮಳೆ ಮತ್ತು ಶುಭ್ರವಾದ ಆಕಾಶ. ರಾಜ್ಯಾದ್ಯಂತ ಜನವರಿಯಲ್ಲಿ ಕನಿಷ್ಠ ಉಷ್ಣಾಂಶ ಕಂಡುಬರುವುದು. ಈ ಅವಧಿಯಲ್ಲಿ 10 ಸೆ.ಮೀ.ಗಿಂತ ಕಡಿಮೆ ಮಳೆ ಪಡೆಯುವುದು.

**3) ಬೇಸಿಗೆ ಕಾಲ:**

ಮಾರ್ಚ್ ತಿಂಗಳಿನಿಂದ ಉಷ್ಣಾಂಶ ಏರುತ್ತಾ ಹೋಗಿ ಏಪ್ರಿಲ್, ಮೇನಲ್ಲಿ ಗರಿಷ್ಠ ಮಟ್ಟವನ್ನು ತಲುಪುವುದು. ಪ್ರಾರಂಭದಲ್ಲಿ ತೇವಾಂಶ ಕಡಿಮೆ ಇದ್ದರೂ ಮೇ ತಿಂಗಳ ನಂತರ ತೇವಾಂಶ ಹೆಚ್ಚಾಗುತ್ತಾ ಹೋಗುತ್ತದೆ. ಮಧ್ಯಾಹ್ನದ ನಂತರ ಕೆಲವೊಮ್ಮೆ ಗುಡುಗು ಸಿಡಿಲಿನಿಂದ ಕೂಡಿದ ಪರಿಸರಣ ಮಳೆ ಬೀಳುವುದು ಸಾಮಾನ್ಯ. ಉತ್ತರ ಕರ್ನಾಟಕದಲ್ಲಿ ಶಾಖ ಮತ್ತು ಸೂಕ್ಷ್ಮ ವಾತಾವರಣ ಇರುವುದು.

## ಕರ್ನಾಟಕದ ಪ್ರಮುಖ ನದಿಗಳು

ದೇಶದ ಒಟ್ಟು ಜಲಸಂಪತ್ತಿನ ಶೇ.6ರಷ್ಟು ಜಲಸಂಪತ್ತನ್ನು ಕರ್ನಾಟಕ ರಾಜ್ಯ ಹೊಂದಿದೆ. ಕರ್ನಾಟಕದಲ್ಲಿ ಉಗಮಿಸುವ ನದಿಗಳು ಅಂತಿಮವಾಗಿ ಬಂಗಾಳಕೊಲ್ಲಿಯಲ್ಲಿ ಮತ್ತು ಅರಬ್ಬೀ ಸಮುದ್ರದಲ್ಲಿ ಸೇರುತ್ತವೆ. ಪೂರ್ವಕ್ಕೆ ಹರಿಯುವ ನದಿಗಳು ಬಹುತೇಕ ಪಶ್ಚಿಮಘಟ್ಟಗಳಲ್ಲಿ ಉಗಮಿಸಿ ಪೂರ್ವದ ಕಡೆಗೆ ಸಾಕಷ್ಟು ದೂರ ಪ್ರವಹಿಸುತ್ತವೆ. ಇವು ರಾಜ್ಯದ ಅತೀ ಉದ್ದವಾದ ನದಿಗಳು. ಇವು ರಾಜ್ಯದ ಒಟ್ಟು ವಿಸ್ತಾರ 86.32%ರಷ್ಟನ್ನು ಆವರಿಸಿವೆ. ಇದಕ್ಕೆ ಬದಲಾಗಿ ಪಶ್ಚಿಮಕ್ಕೆ ಹರಿಯುವ ನದಿಗಳ ನೀರಿನ ಪ್ರಮಾಣ 13.68%ರಷ್ಟು ಇರುತ್ತದೆ.

**ನದಿ ವ್ಯವಸ್ಥೆಗಳು:**

ಕರ್ನಾಟಕವು ಒಟ್ಟು 5 ನದಿ ವ್ಯವಸ್ಥೆಗಳನ್ನು ಒಳಗೊಂಡಿದೆ. ಇವುಗಳನ್ನು ಮೂರು ಮುಖ್ಯ ಜಲವಿಭಾಜಕಗಳೆಂದು ಬೇರ್ಪಡಿಸಲಾಗಿದೆ. ಅವುಗಳು,

1) ಪಶ್ಚಿಮ ಘಟ್ಟಗಳು
2) ಹರಿಶ್ಚಂದ್ರ ಬಾಲಘಟ್ ಶ್ರೇಣಿ
3) ನಂದಿದುರ್ಗ ಶ್ರೇಣಿ

**ಪಶ್ಚಿಮ ಘಟ್ಟಗಳು:**

ರಾಜ್ಯದಲ್ಲಿ ಪೂರ್ವಕ್ಕೆ ಹರಿಯುವ ಹಾಗೂ ಪಶ್ಚಿಮಕ್ಕೆ ಹರಿಯುವ ನದಿಗಳ ಜಲಾನಯನ ಪ್ರದೇಶಗಳ ಮುಖ್ಯ ಜಲವಿಭಾಜಕ ಪಶ್ಚಿಮ ಘಟ್ಟಗಳಾಗಿವೆ.

**ರಾಜ್ಯದ ಉತ್ತರದಲ್ಲಿ ಹರಿಶ್ಚಂದ್ರ ಬಾಲಘಟ್ ಶ್ರೇಣಿ:**

ಇದು ಕೃಷ್ಣಾ ಮತ್ತು ಗೋದಾವರಿ ನದಿಗಳ ಜಲಾನಯನ ಪ್ರದೇಶಗಳನ್ನು ಬೇರ್ಪಡಿಸುವುದು.

**ನಂದಿದುರ್ಗ ಶ್ರೇಣಿ:**

ಇದು ಕಾವೇರಿ ಹಾಗೂ ನಂದಿದುರ್ಗ ನದಿಗಳ ಜಲಾನಯನ ಕ್ಷೇತ್ರಗಳನ್ನು ಪ್ರತ್ಯೇಕಿಸುವುದು.

**ಕೃಷ್ಣಾ ನದಿವ್ಯೂಹ:**

ಕೃಷ್ಣಾ ನದಿಯು ಕರ್ನಾಟಕದಲ್ಲಿ ಒಟಟು 2,59,000 ಚ.ಕಿ.ಮೀ.ಗಳ ಜಲಾನಯನ ಪ್ರದೇಶವನ್ನು ಒಳಗೊಂಡಿದೆ. ಈ ನದಿಯು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ವಿಸ್ತರಿಸಿದೆ. ಕರ್ನಾಟಕವು ಇದರ ಜಲಾನಯನ ಕ್ಷೇತ್ರ 43.74%ರಷ್ಟು ಹೊಂದಿದೆ. ಮಹಾರಾಷ್ಟ್ರ 26.81%, ಆಂಧ್ರಪ್ರದೇಶ 29.45%ರಷ್ಟು ಹೊಂದಿದೆ. ಈ ನದಿಯು ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಉಗಮಿಸಿ ಮೂರು ರಾಜ್ಯಗಳನ್ನು ಅಡ್ಡಹಾಯ್ದು, ರಾಜ್ಯದಲ್ಲಿ 483 ಕಿ.ಮೀ. ದೂರ ಹರಿದು ಆಂಧ್ರದ ನಿಜಾಮ ಪಟ್ಟಣದ ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ತುಂಗಭದ್ರಾ ಇದರ ಪ್ರಮುಖ ಉಪನದಿ. ಆರಂಭದಲ್ಲಿ ಕೊಯ್ನಾ, ಎರ್ಲಾ, ವರ್ಣ ಮತ್ತು ಪಂಚಗಂಗಾ ಈ ನದಿಯನ್ನು ಕೂಡುತ್ತವೆ. ಕರ್ನಾಟಕದಲ್ಲಿ ಘಟಪ್ರಭಾ ಮತ್ತು ಮಲಪ್ರಭಾ ಕೃಷ್ಣೆಯನ್ನು ಕ್ರಮವಾಗಿ ಆಲಮಟ್ಟಿ ಹಾಗೂ ಸಂಗಮದ ಬಳಿ ಕೂಡುತ್ತವೆ. ಭೀಮಾ ನದಿಯು ರಾಯಚೂರಿನ ಉತ್ತರದಲ್ಲಿ ಕೃಷ್ಣಾನದಿಯನ್ನು ಸೇರುವುದು. ಕೃಷ್ಣಾನದಿಗೆ ಕರ್ನಾಟಕದಲ್ಲಿ ಆಲಮಟ್ಟಿ ಹಾಗೂ ನಾರಾಯಣಪುರದಲ್ಲಿ ಬೃಹತ್ ಅಣೆಕಟ್ಟನ್ನು ನಿರ್ಮಿಸಿದ್ದು ಇವುಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಗಳೆಂದು (ಹೆಚ್‌ಕೆಪಿ) ಕರೆಯಲಾಗುತ್ತದೆ. ಕೃಷ್ಣಾ ನದಿಯು ರಾಯಚೂರಿನ ಮೈದಾನದಲ್ಲಿ ಧುಮುಕಿ ಛಾಯಾಭಗವತಿ ಜಲಪಾತವನ್ನು ನಿರ್ಮಿಸಿದೆ.

**ಕೃಷ್ಣೆಯ ಉಪನದಿಗಳು:**

1) ಘಟಪ್ರಭಾ: ಈ ನದಿಯು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಲ್ಲಿ ಉಗಮ. ಇದರ ಮುಖ್ಯ ಉಪನದಿಗಳು ಹಿರಣ್ಯಕೇಶಿ ಮತ್ತು ಮಾರ್ಕಂಡೇಯ. ಇದು ಗೋಕಾಕ್ ಬಳಿ 53 ಮೀ. ಎತ್ತರದಿಂದ ಧುಮುಕಿ ಗೋಕಾಕ್ ಜಲಪಾತ ಸೃಷ್ಟಿಸಿದೆ. ಇದು ಆಲಮಟ್ಟಿ ಬಳಿ ಕೃಷ್ಣಾ ನದಿಯನ್ನು ಸೇರುತ್ತದೆ. ಬಎಳಗಾವಿ ಜಿಲ್ಲೆಯಲ್ಲಿ ಈ ನದಿಗೆ ಹಿಡಕಲ್ ಜಲಾಶಯ ನಿರ್ಮಿಸಲಾಗಿದೆ.
2) ಮಲಪ್ರಭಾ: ಈ ನದಿಯು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕನಕುಂಬಿಯಲ್ಲಿ ಉಗಮಿಸಿ ಕೂಡಲಸಂಗಮದಲ್ಲಿ ಕೃಷ್ಣಾ ನದಿಯನ್ನು ಸೇರುತ್ತದೆ. ಇದರ ತೀರದಲ್ಲೇ ಇತಿಹಾಸ ಪ್ರಸಿದ್ಧ ಐಹೊಳೆ ಮತ್ತು ಪಟ್ಟದಕಲ್ಲು ವ್ಯಾಪಿಸಿವೆ. ಸವದತ್ತಿಯ ಬಳಿ ಇದಕ್ಕೆ 'ನವಿಲು ತೀರ್ಥ' ಜಲಾಶಯ ನಿರ್ಮಿಸಲಾಗಿದೆ. ಬೆಣ್ಣಿಹಳ್ಳ, ಹಿರೇಹಳ್ಳ, ತಾಸಿ ಇತರ ಚಿಕ್ಕ ನದಿಗಳು ಈ ನದಿಯನ್ನು ಸೇರುತ್ತದೆ.
3) ಭೀಮಾನದಿ: ಮಹಾರಾಷ್ಟ್ರದ ಭೀಮಾ ಶಂಕರ ಬಳಿಯಲ್ಲಿ ಉಗಮಿಸಿ ಸೊಲ್ಲಾಪುರ ವಿಜಯಪುರಕ್ಕೆ ಸುಮಾರು 83 ಕಿ.ಮೀ. ಗಡಿ ರೇಖೆಯಾಗಿ ಹರಿದು ಆಂಧ್ರದ ಜಲದುರ್ಗದ ಬಳಿ ಕೃಷ್ಣಾ ನದಿಯನ್ನು ಸೇರುತ್ತದೆ.

4) ತುಂಗಭದ್ರಾ ನದಿ: ಚಿಕ್ಕಮಂಗಳೂರಿನ ಗಂಗಾ ಮೂಲ ಎಂಬಲ್ಲಿ ತುಂಗಾ, ಭದ್ರಾ ಎಂಬ ಎರಡು ಪ್ರತ್ಯೇಕ ನದಿಗಳಾಗಿ ಉಗಮಿಸುತ್ತವೆ. ಶಿವಮೊಗ್ಗದ ಸಮೀಪ ಕೂಡ್ಲಿ ಎಂಬಲ್ಲಿ ಈ ಎರಡೂ ನದಿಗಳು ಸಂಗಮವಾಗಿ ತುಂಗಭದ್ರಾ ನದಿಯಾಗಿ ರಾಜ್ಯದ ನೈರುತ್ಯದಿಂದ ಈಶಾನ್ಯ ಕಡೆಗೆ ಹರಿಯುತ್ತವೆ. ಮತ್ತು ಆಂಧ್ರದ ಕರ್ನೂಲ ಬಳಿ ಕೃಷ್ಣಾ ನದಿಯನ್ನು ಸೇರುತ್ತದೆ. ಶಿವಮೊಗ್ಗದ ಗಾಜನೂರು ಬಳಿ ತುಂಗಾ ಜಲಾಶಯ ಮತ್ತು ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಭದ್ರಾ ಜಲಾಶಯ ನಿರ್ಮಿಸಲಾಗಿದೆ. ಮುಂದೆ ಹೊಸಪೇಟೆಯ ಮಲ್ಲಾಪುರದ ಬಳಿ ಅಣೆಕಟ್ಟನ್ನು ನಿರ್ಮಿಸಿ ನೀರಾವರಿಗೆ ಮತ್ತು ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿದೆ. ಮಧ್ಯ ಕರ್ನಾಟಕದ ಬಹುಭಾಗ ಇದರ ಜಲಾನಯನ ಕ್ಷೇತ್ರವಾಗಿದ್ದು ಕೃಷ್ಣೆಗೆ ತುಂಬಾ ಅನುಕೂಲಕರವಾಗಿದೆ.

5) ಕಾವೇರಿ ನದಿ: ಈ ನದಿಯನ್ನು ದಕ್ಷಿಣ ಗಂಗೆಯೆಂದು ಕರೆಯುವರು. ಈ ನದಿಯ ಒಟ್ಟು ಜಲಾನಯನ ಪ್ರದೇಶ 81,150 ಚ.ಕಿ.ಮೀ. ಇದೆ. ಕರ್ನಾಟಕದಲ್ಲಿ 42.2%, ತಮಿಳುನಾಡಿನಲ್ಲಿ 54.2%, ಕೇರಳದಲ್ಲಿ 3.6% ಹಂಚಿಕೆಯಾಗಿದೆ. ಕರ್ನಾಟಕದ ಬ್ರಹ್ಮಗಿರಿ ಬೆಟ್ಟದ ತಲಕಾವೇರಿ ಎಂಬಲ್ಲಿ ಹುಟ್ಟಿ, ಕರ್ನಾಟಕ ಮತ್ತು ತಮಿಳುನಾಡಿನ ಮೂಲಕ ಪೂರ್ವಾಭಿಮುಖವಾಗಿ ಹರಿದು ತಮಿಳುನಾಡಿನ ಕಾವೇರಿ ಪಟ್ಟಣಂ ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಇದು ದಕ್ಷಿಣ ಕರ್ನಾಟಕ ಭಾಗದ ರೈತರ ಜೀವನಾಡಿಯಾಗಿದೆ. 1902ರಲ್ಲಿ ಏಷ್ಯಾದ ಮೊದಲ ಜಲವಿದ್ಯುತ್ ಕೇಂದ್ರವನ್ನು ಈ ನದಿಗೆ ನಿರ್ಮಿಸಲಾಯಿತು. 1931ರಲ್ಲಿ9 ಕೆ.ಆರ್.ಎಸ್. ಡ್ಯಾಂನ್ನು ನಿರ್ಮಿಸಲಾಗಿದೆ. ಈ ನದಿಯ ಮಾರ್ಗದಲ್ಲಿನ ಮೂರು ಮುಖ್ಯ ಜಲಪಾತಗಳು ಚುಂಚನಕಟ್ಟೆ, ಶಿವನಸಮುದ್ರ, ಹೊಗೆನೆಕಲ್. ಈ ನದಿಯ ಮೂರು ಅಂತರ್ನದಿ ದ್ವೀಪಗಳನ್ನು ಒಳಗೊಂಡಿದೆ. ಅವುಗಳು,

1) ಶ್ರೀರಂಗಪಟ್ಟಣ ಆದಿ ರಂಗ

2) ಶೀಂಷಾ ಮಧ್ಯ ರಂಗ

3) ಶ್ರೀರಂಗಂ ಅಂತ್ಯರಂಗ

### ನಂದಿ ದುರ್ಗ ನದಿ ವ್ಯವಸ್ಥೆ:

ಕರ್ನಾಟಕದ 5 ಮುಖ್ಯನದಿ ವ್ಯವಸ್ಥೆಯಲ್ಲಿ ಇದು ಒಂದು. ರಾಜ್ಯದ ಆಗ್ನೇಯ ಭಾಗವನ್ನು ಒಳಗೊಂಡಿದ್ದು ನಂದಿದುರ್ಗದ ಉತ್ತರ ಭಾಗದ ಸುತ್ತಲೂ ಉಗಮಿಸುವ ನದಿಗಳು ಇದರ ಸುತ್ತಲೂ ಹರಿಯುತ್ತದೆ. ಇದರಿಂದಾಗಿ ಇದು (ವೃತ್ತಾಕಾರ) ನದಿ ವ್ಯವಸ್ಥೆಗೆ ಉತ್ತಮ ಉದಾಹರಣೆಯಾಗಿದೆ. ಚಿಕ್ಕಬಳ್ಳಾಪುರದ ದಕ್ಷಿಣದಲ್ಲಿರುವ ನಂದಿದುರ್ಗದಿಂದ ಎತ್ತರಕ್ಕೆ ಪೆನ್ನೇರ್ ಗೌರಿಬಿದನೂರಿನ ಮೂಲಕ ಹರಿಯುವುದು. ಈ ನದಿಯು ಚಿತ್ರಾವತಿ ಭಾಗೇಪಲ್ಲಿ ಮೂಲಕ ಹರಿದು ಆಂದ್ರ ಸೇರುವುದು. ಪಾಪಾಗ್ನಿ ನದಿಯು ಶಿಡ್ಲುಗಟ್ಟದ ಮೂಲಕ ಹರಿದು ಈಶಾನ್ಯದ ಕಡೆ ಹರಿಯುತ್ತದೆ. ಪಾಲಾರ್ ನದಿ ಆಗ್ನೇಯ ಕಡೆಗೆ ಮತ್ತು ಅರ್ಕಾವತಿ, ಕಣ್ವಾ, ಶಿಂಷಾ ನದಿಗಳು ದಕ್ಷಿಣದ ಕಡೆಗೆ ಹರಿಯುತ್ತದೆ.

### ಗೋದಾವರಿ ನದಿ ವ್ಯವಸ್ಥೆ:

ಬೀದರ್ ಜಿಲ್ಲೆಯ ಉತ್ತರ ಮತ್ತು ಮಧ್ಯಭಾಗದ ಸುಮಾರು 4430 ಚ.ಕಿ.ಮೀ. ಪ್ರದೇಶವು ಮಾತ್ರ ಈ ಜಲಾನಯನ ಪ್ರದೇಶಕ್ಕೆ ಒಳಪಟ್ಟಿದೆ. 'ಮಾಂಜರಿ' ನದಿಯ ಈ ನದಿ ವ್ಯವಸ್ಥೆಯ ಪ್ರಮುಖ ಉಪನದಿಯಾಗಿದೆ. ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಮೂಲಕ ಹರಿಯುವ ಈ ನದಿಯು 723 ಕಿ.ಮೀ. ಉದ್ದವಿದ್ದು, ಕರ್ನಾಟಕದಲ್ಲಿ 155 ಕಿ.ಮೀ. ಉದ್ದವಿದೆ.

### ಕರ್ನಾಟಕದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು:

ಕರ್ನಾಟಕದಲ್ಲಿ ಅನೇಕ ನದಿಗಳು ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರ ಸೇರುತ್ತದೆ. ಇವುಗಳು ಸಮಾಂತರ ನದಿ ವ್ಯವಸ್ಥೆಗೆ ಉತ್ತಮವಾದ ಉದಾಹರಣೆಯಾಗಿದೆ. ಪಶ್ಚಿಮದ ನದಿಗಳಲ್ಲಿ ಕಾಳಿ ಅತೀ ಉತ್ತರದಲ್ಲಿದ್ದರೆ, ನೇತ್ರಾವತಿಯು ದಕ್ಷಿಣದ ನದಿಯಾಗಿದೆ. ಕಾಳಿ, ಗಂಗಾವತಿ (ಬೇಡ್ತಿ), ಶರಾವತಿ, ಅಘನಾಶಿನಿ, ನೇತ್ರಾವತಿ, ವರಾಹಿ, ಹಾಲಾಡಿ, ಚಕ್ರ, ಇಲ್ಲಿನ ಪ್ರಮುಖ ನದಿಗಳು. ಇಲ್ಲಿಯ ಅತಿ ಚಿಕ್ಕ ನದಿಗಳು ಕಡಿದಾದ ಇಳಿಜಾರುಳ್ಳ ಬೆಟ್ಟಗುಡ್ಡಗಳ ನಡುವೆ ವೇಗವಾಗಿ ಹರಿಯುತ್ತದೆ. ಇವುಗಳು ಜಲ ವಿದ್ಯುತ್ ಉತ್ಪಾದನೆಗೆ ಅತಿ ಸಹಕಾರಿಯಾಗಿವೆ.

**ಕಾಳಿ ನದಿ:**

ಕಾಳಿ ನದಿಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಉಗಮವಾಗುತ್ತದೆ. ಈ ನದಿಯು 184 ಕಿ.ಮೀ. ಉದ್ದ, 4297 ಕಿ.ಮೀ. ಜಲಾನಯನ ಪ್ರದೇಶ ಹೊಂದಿದೆ. ಈ ನದಿಯು 62 ಮೀ. ಎತ್ತರದಿಂದ ಧುಮುಕಿ 'ಲಾಲಗುಳಿ' ಜಲಪಾತ ಸೃಷ್ಟಿಸಿದೆ.

**ಶರಾವತಿ ನದಿ:**

ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿಯ ಅಂಬುತೀರ್ಥದ ಬಳಿ ಉಗಮವಾಗುತ್ತದೆ. ಇದು ಪಶ್ಚಿಮಕ್ಕೆ 128 ಕಿ.ಮೀ. ಹರಿಯುತ್ತದೆ. ಈ ನದಿಯು ಶಿವಮೊಗ್ಗಾ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿದು ಹೊನ್ನಾವರದ ಬಳಿ ಅರಬ್ಬೀ ಸಮುದ್ರ ಸೇರುವುದು. ಈ ನದಿಯು ಗೇರುಸೊಪ್ಪದ ಬಳಿ 253 ಮೀ. ಉತ್ತರದಿಂದ ಧುಮುಕಿ ಜೋಗ್ ಜಲಪಾತವನ್ನು ಸೃಷ್ಠಿಸಿದೆ.

**ನೇತ್ರಾವತಿ:**

ಚಿಕ್ಕಮಗಳೂರಿನ ಬಲ್ಲಾಳರಾಯದುರ್ಗದ ಬಳಿ ಉಗಮವಾಗುತ್ತದೆ. 96 ಕಿ.ಮೀ. ಉದ್ದ ಇರುವ ನದಿ 3355 ಚ.ಕಿ.ಮೀ. ಜಲಾನಯನ ಪ್ರದೇಶ ಸೃಷ್ಟಿಸಿದೆ.

## ಕರ್ನಾಟಕದಲ್ಲಿ ಮಳೆಯ ಹಂಚಿಕೆ

ವಾರ್ಷಿಕ ಮಳೆಯ ಶೇ.80ರಷ್ಟು 4 ತಿಂಗಳ ಅವಧಿಯನ್ನು ಒಳಗೊಂಡಿರುವ ನೈರುತ್ಯ ಮಾನ್ಸೂನ್ ಮಾರುತಗಳ ಅವಧಿಯಲ್ಲಿಯೇ ಕೇಂದ್ರೀಕೃತವಾಗಿದೆ. ಚಳಿಗಾಲದ 3 ತಿಂಗಳಿನ ಅವಧಿಯಲ್ಲಿ ರಾಜ್ಯವು ಕೇವಲ 1%ರಷ್ಟನ್ನು ಮಾತ್ರ ಮಳೆ ಪಡೆಯುತ್ತದೆ. ಇದು ರಾಜ್ಯದ ಅತ್ಯಂತ ಶುದ್ದ ಅವಧಿ. ರಾಜ್ಯವು ಬೇಸಿಗೆಯಲ್ಲಿ ಸುಮಾರು 7% ಮಳೆ ಪಡೆಯುವುದು ಮತ್ತು ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಶೇ.12ರಷ್ಟು ಪಡೆಯುತ್ತದೆ.

**ಮಳೆ ಹಂಚಿಕೆ:**

ರಾಜ್ಯದ ಸರಾಸರಿ ಮಳೆಯ ಪ್ರಮಾಣ 113.9 ಸೆ.ಮೀ. ಇದೆ. ಇದರ ಪ್ರಾದೇಶಿಕ ಹಂಚಿಕೆಯಲ್ಲಿ ಅಪಾರ ವ್ಯತ್ಯಾಸ ಕಾಣಬಹುದು. ಪಶ್ಚಿಮಘಟ್ಟ ವಲಯ ರಾಜ್ಯದಲ್ಲಿ ಅತೀ ಹೆಚ್ಚು ಮಳೆ ಪಡೆದರೆ ಪೂರ್ವದಲ್ಲಿ ಚಿತ್ರದುರ್ಗದ ಚಳ್ಳೀಕೆರೆ ಅತೀ ಕಡಿಮೆ ಮಳೆ ಪಡೆಯುವ ಪ್ರದೇಶವಾಗಿದೆ. ರಾಜ್ಯದಲ್ಲಿ ಹೆಚ್ಚು ಮಳೆ ಪಡೆಯುವ ಶಿವಮೊಗ್ಗ ಜಿಲ್ಲೆಯ ಆಗುಂಬೆ (827.6 ಸೆ.ಮೀ.) ಮತ್ತು ಕೊಡಗು ಜಿಲ್ಲೆಯ ಭಾಗಮಂಡಲ, ಪುಲ್ಲಿನ್‌ಗೋಥ, ಮಾಕುಟ್ಟ ಮುಂತಾದ ಸ್ಥಳಗಳು 500 ಸೆ.ಮೀ.ಗಿಂತ ಹೆಚ್ಚಿನ ಮಳೆ ಪಡೆಯುತ್ತವೆ.

**ರಾಜ್ಯದ ಮಳೆ ಹಂಚಿಕೆಯ ವಲಯಗಳು:**

1) 400 ಸೆ.ಮೀ.ಗಳಿಗಿಂತ ಹೆಚ್ಚು ಮಳೆ ಪಡೆಯುವ ಸ್ಥಳಗಳು: ಪಶ್ಚಿಮ ಘಟ್ಟಗಳ ದಕ್ಷಿಣಭಾಗ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಕೊಡಗು ಅತ್ಯಧಿಕ ಮಳೆ ಪಡೆಯುವ ಭಾಗಗಳು ಈ ವಲಯದಲ್ಲಿವೆ.

2) 200ರಿಂದ 400 ಸೆ.ಮೀ. ಮಳೆ ಪಡೆಯುವ ಪ್ರದೇಶ: ಇದು 400 ಸೆ.ಮೀ. ಮಳೆ ಪಡೆಯುವ ಪ್ರದೇಶದ ಸುತ್ತಲೂ ಆವರಿಸಿದೆ. ಇದು ಪಶ್ಚಿಮಘಟ್ಟ ವಲಯದ ಕರಾವಳಿ ಮೈದಾನಗಳನ್ನು ಒಳಗೊಂಡಿದೆ. ಉತ್ತರದಲ್ಲಿ ಬೆಳಗಾವಿ ತಾಲ್ಲೂಕಿನಿಂದ ದಕ್ಷಿಣದಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನವರೆಗೂ ವಿಸ್ತರಿಸಿದೆ.

3) 100ರಿಂದ 200 ಸೆ.ಮೀ. ಮಳೆ ಪಡೆಯುವ ಪ್ರದೇಶ: ಇದು ಪಶ್ಚಿಮ ಘಟ್ಟದಿಂದ ಪೂರ್ವಕ್ಕಿರುವ ಮೈದಾನದ ಬಹುತೇಕ ಪ್ರದೇಶವನ್ನು ಒಳಗೊಂಡಿದೆ. ಬೀದರ್, ಕಲ್ಬುರ್ಗಿ, ರಾಯಚೂರು ಜಿಲ್ಲೆಯ ಕೆಲವು ಭಾಗಗಳು ಸಹ ಈ ವಲಯಕ್ಕೆ ಸೇರಿವೆ.

4) 60ರಿಂದ 100 ಸೆ.ಮೀ. ಮಳೆ ಪಡೆಯುವ ಪ್ರದೇಶ: ಇದು ರಾಜ್ಯದ ಮೈದಾನ ಪ್ರದೇಶ ಬಹುತೇಕ ಎಲ್ಲಾ ಭಾಗಗಳನ್ನು ಹೊಂದಿದೆ.

5) 60 ಸೆ.ಮೀ. ಕಡಿಮೆ ಮಳೆ ಪಡೆಯುವ ಪ್ರದೇಶ: ಈ ವಲಯವು ಬಿಜಾಪುರ ಜಿಲ್ಲೆ ಹಾಗೂ ಬೆಳಗಾವಿ ಜಿಲ್ಲೆಯ ಪೂರ್ವದ ತಾಲ್ಲೂಕುಗಳನ್ನು ಒಳಗೊಂಡಿದೆ. ಬಾಗಲಕೋಟೆ, ಕೊಪ್ಪಳ, ರಾಯಚೂರು, ಬಳ್ಳಾರಿ ಜಿಲ್ಲೆಗಳ ಮೂಲಕ ಮುಂದುವರೆದು ಚಿತ್ರದುರ್ಗ, ತುಮಕೂರಿನ ಕೆಲವು ಭಾಗಗಳನ್ನು ಹೊಂದಿದೆ. ಈ ವಲಯದಲ್ಲಿ ಮಳೆ ಹಂಚಿಕೆ ಅತಿ ವ್ಯತ್ಯಾಸದಿಂದ ಕೂಡಿದ್ದು ಕೆಲವೊಮ್ಮೆ ಬರಗಾಲಗಳಿಗೆ ತುತ್ತಾಗಿದೆ.

**ಕರ್ನಾಟಕ ಸ್ವಾಭಾವಿಕ ಸಸ್ಯವರ್ಗ:**

ಸ್ವಾಭಾವಿಕ ಸಸ್ಯವರ್ಗ, ಪ್ರಾಕೃತಿಕ ಭೂ ದೃಶ್ಯಾವಳಿಯ ಅತಿ ಮುಖ್ಯ ಲಕ್ಷಣಗಳಲ್ಲಿ ಒಂದು. ಭೂ ಸ್ವರೂಪಗಳು, ವಾಯುಗುಣ, ಮಣ್ಣಿನ ಲಕ್ಷಣಗಳ ಜೊತೆಗೆ ಮಾನವನ ಪ್ರಭಾವವನ್ನು ಸಹ ಸ್ವಾಭಾವಿಕ ಸಸ್ಯ ವರ್ಗಗಳಲ್ಲಿ ಕಾಣಬಹುದು.

ಕರ್ನಾಟಕ ರಾಜ್ಯದ ಸ್ವಾಭಾವಿಕ ಸಸ್ಯವರ್ಗಗಳನ್ನು 5 ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

1) ಕರಾವಳಿಯ ಸಸ್ಯವರ್ಗ
2) ನಿತ್ಯ ಹರಿದ್ವರ್ಣದ ಸಸ್ಯವರ್ಗ
3) ಪರ್ವತವಲಯ ಸಸ್ಯವರ್ಗ
4) ಎಲೆಯುದುರುವ ಸಸ್ಯವರ್ಗ
5) ಕುರುಚಲು ಸಸ್ಯವರ್ಗ

**ಕರಾವಳಿಯ ಸಸ್ಯವರ್ಗ:**

ಸಮುದ್ರ ಅಂಚಿನಲ್ಲಿ ದಕ್ಷಿಣದಲ್ಲಿ ಮಂಗಳೂರಿನಿಂದ ಉತ್ತರದಲ್ಲಿ ಕಾರವಾರದವರೆಗೆ ಸುಮಾರು 400 ಕಿ.ಮೀ. ದೂರ ವಿಸ್ತರಿಸಿದೆ. ಇದನ್ನು ಮ್ಯಾಂಗ್ರೋವ ಸಸ್ಯವರ್ಗವೆಂದು ಕರೆಯುವರು. ಕರಾವಳಿಯ ಸಸ್ಯವರ್ಗವು ನಿತ್ಯ ಹರಿದ್ವರ್ಣ ಮರಗಳಾಗಿದ್ದು ಉಪ್ಪು ನೀರಿನಲ್ಲಿ ಬೆಳೆಯುವ ವಿಶಿಷ್ಟ ಸಾಮರ್ಥ್ಯ ಹೊಂದಿರುತ್ತದೆ. ಭೀಕರ ಚಂಡಮಾರುತಗಳನ್ನು ತಡೆದು ನಿಲ್ಲಿಸುವ ಸ್ಥಿತಿಸ್ಥಾಪಕತ್ವ ಗುಣಗಳನ್ನು ಹೊಂದಿದೆ. ಇಲ್ಲಿಯ ಮುಖ್ಯ ಮರಗಳು ಬೃಗುಯೇರ, ಕಂಜುಗಾಟ, ಮೆರ್ರಿಲ್, ಕಾಂಡೇಲಿಯಾ, ರೈಜೋಪೋರ.

**ನಿತ್ಯಹರಿದ್ವರ್ಣ ಸಸ್ಯವರ್ಗ:**

ಪಶ್ಚಿಮಘಟ್ಟ ಮತ್ತು ಅದರ ಭಾಗ 250 ಸೆ.ಮೀ.ಗಿಂತಲೂ ಹೆಚ್ಚು ಮಳೆ ಪಡೆಯುವ ಪ್ರದೇಶದಲ್ಲಿ ಈ ಸಸ್ಯವರ್ಗ ವ್ಯಾಪಿಸಿದೆ. ಈ ಪ್ರದೇಶಗಳೆಂದರೆ ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಹಾಸನದ ಸ್ವಲ್ಪ ಭಾಗ. ಈ ಸಸ್ಯವರ್ಗದ ಮರಗಳು 20–30 ಮೀ. ಎತ್ತರ ಬೆಳೆದಿರುತ್ತದೆ. ಇಲ್ಲಿ ಹೆಬ್ಬಲಸು, ಕರಿದೂಪ, ಹಿರೇಭೋವಿ, ವಲವಾರ, ನಾಗಸಂಪಿಗೆ ಮುಂತಾದ ಮರಗಳನ್ನು ಕಾಣಬಹುದು.

**ಪರ್ವತ ವಲಯದ ಸಸ್ಯವರ್ಗ:**

ಕರ್ನಾಟಕವು 1400 ಮೀ.ಗಳಿಗಿಂತಲೂ ಎತ್ತರವಾದ ಘಟ್ಟ ಶ್ರೇಣಿಯನ್ನು ಒಳಗೊಂಡಿದೆ. ಈ ವಲಯ ಸಸ್ಯವರ್ಗವನ್ನು ನೀಲಗಿರಿ ಬೆಟ್ಟಗಳು, ಪಳನಿ ಬೆಟ್ಟಗಳು, ಕುದುರೆ ಮುಖ, ಬಿಳಿಗಿರಿ ರಂಗನ ಬೆಟ್ಟ, ಬ್ರಹ್ಮಗಿರಿ ಶ್ರೇಣಿಯಲ್ಲಿ ಕಾಣಬಹುದು. ಇವುಗಳ ಅಂಚಿನಲ್ಲಿ ಶೋಲಾ ಕಾಡುಗಳನ್ನು ಕಾಣಬಹುದು. ಮಸ್ಸಿವಾಳ, ಮೆಲ್ಟೋಸ್, ಪನ್ನಾಟ, ನಾಗಟೆ, ಬಿಳಿ ಸಂಪಿಗೆ ಮುಂತಾದ ಸಸ್ಯಗಳು ಇಲ್ಲಿ ಕಾಣಬಹುದಾಗಿದೆ. 'ಗ್ಯಾಂಬಲ್' ಈ ವಲಯದ ಅರಣ್ಯಗಳಲ್ಲಿ ಪ್ರಮುಖವಾದುದು.

**ಎಲೆಯುದುರುವ ಸಸ್ಯವರ್ಗ:**

ಇದು ಮಾನ್ಸೂನ್ ವಾಯುಗುಣದ ವಿಶಿಷ್ಟ ಸಸ್ಯವರ್ಗವಾಗಿದೆ. ಇಲ್ಲಿ ರಾಜ್ಯದ ಅತಿ ಬೆಲೆ ಬಾಳುವ ಮರಗಳನ್ನು ಇಲ್ಲಿ ಕಾಣಬಹುದು. ಇವುಗಳು ಜಲಾಂಶದ ಕೊರತೆಯನ್ನು ನೀಗಿಸಲು ತಮ್ಮ ಎಲೆಗಳನ್ನು ಉದುರಿಸುತ್ತವೆ. ಈ ವಲಯ ಸುಮಾರು 100ರಿಂದ 150 ಸೆ.ಮೀ. ಮಳೆ ಪಡೆಯುತ್ತದೆ. ಇಲ್ಲಿಯ ಪ್ರಮುಖ ಮರಗಳು ತೇಗ, ಬೀಟೆ, ಸಾಗವಾನಿ, ಹೊನ್ನೆ, ಮತ್ತಿ, ನಂದಿ ಮುಂತಾದವುಗಳು.

**ಕುರುಚಲು ಸಸ್ಯವರ್ಗ:**

ಕರ್ನಾಟಕದ ಉತ್ತರ ಭಾಗ ಈ ಸಸ್ಯವರ್ಗದಿಂದ ಕೂಡಿದೆ. ಬೀದರ್, ಗುಲ್ಬರ್ಗಾ, ಬಿಜಾಪುರ, ದಕ್ಷಿಣದಲ್ಲಿ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಈ ಸಸ್ಯವರ್ಗ ವ್ಯಾಪಿಸಿವೆ. ಈ ವಲಯದ ಮೂಲ ಸಸ್ಯವರ್ಗ ಸ್ಟೆಪೀ ಮಾದರಿಯದ್ದಾಗಿದೆ. ಕರಿಜಾಲಿ, ಅಕೇಶಿಯಾ, ಹಲಸು, ಬೋರೆಗಿಡ, ಕಳ್ಳಿ ಪ್ರಮುಖ ಮರಗಳನ್ನು ಕಾಣಬಹುದು. ಈ ವಲಯ ವಾರ್ಷಿಕ 100 ಸೆ.ಮೀ.ಗಿಂತ ಕಡಿಮೆ ಮಳೆ ಪಡೆಯುವುದು. ಈ ಸಸ್ಯವರ್ಗಕ್ಕೆ ಜಲಾಂಶದ ಅತೀವ ಕೊರತೆ ಇರುತ್ತದೆ.

**ಕರ್ನಾಟಕದ ಮಣ್ಣುಗಳು:**

ಕರ್ನಾಟಕ ಹೊಂದಿರುವ ಭೂ ಇತಿಹಾಸ, ಶಿಲಾರಚನೆ, ವಾಯುಗುಣ ಹಾಗೂ ಭೂ ಸ್ವರೂಪಗಳು ಭಿನ್ನವಾಗಿವೆ. ಜೊತೆಗೆ ಸಸ್ಯವರ್ಗದ ಹಂಚಿಕೆಗಳಲ್ಲಿಯೂ ಅಪಾರ ವ್ಯತ್ಯಾಸ ಇದೆ. ಇದರಿಂದಾಗಿ ರಾಜ್ಯದಲ್ಲಿ ವಿವಿಧ ರೀತಿಯ ಮಣ್ಣು ಕಾಣಬಹುದು.

ರಾಜ್ಯದ ಮಣ್ಣುಗಳು ಸ್ಥೂಲವಾಗಿ ನಾಲ್ಕು ಪ್ರಧಾನ ವಿಭಾಗಗಳಾಗಿ ವಿಂಗಡಿಸಬಹುದು. ಮತ್ತು ಮುಂದುವರೆದು ರಾಜ್ಯದ ವ್ಯವಸಾಯ ಇಲಾಖೆಗಳನ್ನು ಒಂಭತ್ತು ವಿಧಾನಗಳಾಗಿ ವಿಂಗಡಿಸಿದೆ.

1) ಕರಾವಳಿಯ ಮೆಕ್ಕಲು ಮಣ್ಣು
2) ಜಂಬಿಟ್ಟಿಗೆ ಮಣ್ಣು
   * ಜಂಬಿಟ್ಟಿಗೆ ಮತ್ತು ನುರುಜು ಮಣ್ಣು
3) ಕಪ್ಪು ಮಣ್ಣು
   * ಹೆಚ್ಚು ಆಳವಿರದ ಕಪ್ಪು ಮಣ್ಣು
   * ಸಾಧಾರಣ ಆಳವಿರುವ ಕಪ್ಪು ಮಣ್ಣು
   * ಹೆಚ್ಚು ಆಳವಿರುವ ಮೆಕ್ಕಲು ಮಣ್ಣು
4) ಕೆಂಪು ಮಣ್ಣು
   * ಮರಳು ಮಿಶ್ರಿತ ಕೆಂಪು ಮಣ್ಣು
   * ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣು
   * ಕೆಂಪು ಮರಳು ಮಿಶ್ರಿತ ಜೇಡಿ ಮಣ್ಣು

**1) ಕರಾವಳಿಯ ಮೆಕ್ಕಲು ಮಣ್ಣು:**

ರಾಜ್ಯದ ಕರಾವಳಿಯ ಉದ್ದಕ್ಕೂ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ. ಪಶ್ಚಿಮ ಘಟ್ಟಗಳಲ್ಲಿ ಹರಿಯುವ ನದಿ ಝರಿ, ತೊರೆಗಳು ಹೊತ್ತು ತಂದು ಸಂಚರಿಸಿರುವ ಮಣ್ಣುಗಳೇ ಮೆಕ್ಕಲು ಮಣ್ಣು,. ಅಧಿಕ ಪ್ರಮಾಣದ ಕೊಳೆತ ಜೈವಿಕಾಂಶ ಹೊಂದಿದ್ದು ಫಲವತ್ತಾಗಿವೆ. ಈ ಮಣ್ಣು ಭತ್ತ, ರಾಗಿ, ತೆಂಗು, ಗೋಡಂಬಿ ಬೆಳೆಗಳಿಗೆ ಪ್ರಸಿದ್ದಿಯಾಗಿದೆ.

**2) ಜಂಬಿಟ್ಟಿಗೆ ಮಣ್ಣು:**

ಈ ಮಣ್ಣು ಹೆಚ್ಚು ಉಷ್ಣಾಂಶ ಅಧಿಕ ಮಳೆ ಬೀಳುವ ಪ್ರದೇಶದಲ್ಲಿ ಹಂಚಿಕೆಯಾಗಿದೆ. ಇದರ ನಿರ್ಮಾಣ ಕ್ರಿಯೆಯನ್ನು ಲ್ಯಾಟರೈಜೇಷನ್ ಎನ್ನುವರು. ಇದು ಕೆಂಪು ಬಣ್ಣದಿಂದ ಕೂಡಿದ್ದು ಗಟ್ಟಿಯಾಗಿರುತ್ತದೆ. ಕರಾವಳಿಯ ಮೆಕ್ಕಲು ಮಣ್ಣಿನ ಪೂರ್ವದಲ್ಲಿ ಉತ್ತರದಲ್ಲಿ ಬೆಳಗಾವಿಯಿಂದ ದಕ್ಷಿಣದಲ್ಲಿ ಕೊಡಗುವರೆಗೂ ಪಶ್ಚಿಮಘಟ್ಟ ಪ್ರದೇಶದಲ್ಲಿ ವಿಸ್ತರಿಸಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡದ ಪೂರ್ವಭಾಗ, ಕೊಡಗು, ಹಾಸನ, ಚಿಕ್ಕಮಂಗಳೂರು, ಶಿವಮೊಗ್ಗ, ಧಾರವಾಡ, ಬೆಳಗಾವಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಈ ಮಣ್ಣು ಹಂಚಿಕೆಯಾಗಿದೆ. ಇದಲ್ಲದೆ ಬೀದರ್, ಗುಲ್ಬರ್ಗಾ, ಕೋಲಾರ, ಬೆಂಗಳೂರು ಜಿಲ್ಲೆಯಲ್ಲೂ ವಿಸ್ತರಿಸಿದೆ. ಭತ್ತ, ಬಾಳೆ, ಅಡಿಕೆ, ಏಲಕ್ಕಿ, ಮೆಣಸು, ಕಾಫಿ, ಚಹ, ಕಿತ್ತಳೆ ಉತ್ಪಾದನೆಗೆ ಸಹಕಾರಿಯಾಗಿದೆ.

### 3) ಕಪ್ಪು ಮಣ್ಣು:

ಕಪ್ಪು ಮಣ್ಣು ರಾಜ್ಯದಲ್ಲಿ ಭೌಗೋಳಿಕವಾಗಿ ಕೆಂಪು ಮಣ್ಣಿನ ನಂತರ 2ನೇ ಸ್ಥಾನದಲ್ಲಿದೆ. ರಾಜ್ಯವು ಉಷ್ಣವಲಯದಲ್ಲಿದ್ದು ಇಲ್ಲಿ ಕಂಡು ಬರುವ ಕಪ್ಪು ಮಣ್ಣನ್ನು ರೆಗಾರ್ ಎನ್ನುವರು. ಇದು ಹತ್ತಿ ಬೆಳೆಗೆ ಅತೀ ಸೂಕ್ತವಾದ ಮಣ್ಣು. ಉತ್ತರ ಕರ್ನಾಟಕದಲ್ಲಿ ಇದನ್ನು ಎರಮಣ್ಣು ಎನ್ನುವರು. ದೀರ್ಘಕಾಲದವರೆಗೆ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಇದೆ. ಇದರಲ್ಲಿ ಸುಣ್ಣ ಮತ್ತು ಮ್ಯಾಗ್ನೇಷಿಯಂ ಪ್ರಮಾಣ ಹೆಚ್ಚು.

1. ಹೆಚ್ಚು ಆಳವಿರದ ಕಪ್ಪು ಮಣ್ಣು: ಉತ್ತರ ಕರ್ನಾಟಕದ ಕೆಲವು ಉನ್ನತ ಭಾಗಗಳಲ್ಲಿ ಕಪ್ಪು ಮಣ್ಣು ಇದ್ದರೂ ಆಳ ಕಡಿಮೆ ಇರುತ್ತದೆ. ಬೆಳಗಾವಿ ಜಿಲ್ಲೆಯ ವಾಯುವ್ಯ ಭಾಗ, ಬಿಜಾಪುರ, ಗುಲ್ಬರ್ಗಾ, ಬೀದರ್ ಜಿಲ್ಲೆಯ ಕೆಲವು ಭಾಗದಲ್ಲಿ ವಿಸ್ತರಿಸಿದೆ. ಮಣ್ಣು ಚೂರ್ಣಾಧಿಕ್ಯವಾಗಿದ್ದು ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಸಾಧಾರಣವಾಗಿರುತ್ತದೆ. ಜೋಳ, ಸಜ್ಜೆ, ದ್ವಿದಳ ಧಾನ್ಯಗಳು, ಭತ್ತ, ಮೆಣಸಿನಕಾಯಿ ಬೆಳೆಯಲಾಗುವುದು.
2. ಸಾಧಾರಣ ಆಳವಿರುವ ಕಪ್ಪು ಮಣ್ಣು: ಬೀದರ್, ಗುಲ್ಬರ್ಗಾ, ಬಿಜಾಪುರ, ಬೆಳಗಾವಿ ಜಿಲ್ಲೆಯಲ್ಲಿ ಹಂಚಿಕೆಯಾಗಿದೆ. ಜೇಡಿಯ ಪ್ರಮಾಣ ಅಧಿಕವಾಗಿರುತ್ತದೆ. ಜೋಳ, ಗೋಧಿ, ಹತ್ತಿ, ಎಣ್ಣೆಕಾಳುಗಳು, ಮೆಣಸಿನಕಾಯಿ, ತೊಗರಿ ಮತ್ತು ನೀರಾವರಿ ಕಡೆಗಳಲ್ಲಿ ಭತ್ತ, ಕಬ್ಬು, ಹತ್ತಿ, ಹೊಗೆಸೊಪ್ಪು ಮುಖ್ಯ ಬೆಳೆಗಳು.
3. ಹೆಚ್ಚು ಆಳದ ಕಪ್ಪು ಮಣ್ಣು: ಕೆಲವು ಕಡೆ ಈ ಮಣ್ಣುಗಳು ಸಾಗಿಸಲ್ಪಟ್ಟು ತಗ್ಗಾದ ನದಿ ಕಣಿವೆಯಲ್ಲಿ ಸಂಚಯತಗೊಂಡಿರುವುದರಿಂದ ಆಳವಾದ ಕಪ್ಪು ಮಣ್ಣು ನಿರ್ಮಾಣವಾಗಿರುತ್ತದೆ. ಮೈಸೂರು, ಚಾಮರಾಜನಗರ, ರಾಯಚೂರು, ಬಳ್ಳಾರಿ, ಧಾರವಾಡ, ಗದಗ ಮತ್ತು ಚಿತ್ರದುರ್ಗದಲ್ಲಿ ಹಂಚಿಕೆಯಾಗಿದೆ. ಇದು ಕಡುಕಪ್ಪು ಬಣ್ಣದಿಂದ ಕೂಡಿದ್ದು ಹತ್ತಿ, ತೊಗರಿ, ಈರುಳ್ಳಿ ಮತ್ತು ದಕ್ಷಿಣ ಭಾಗಗಳಲ್ಲಿ ಹಿಪ್ಪು ನೇರಳೆಯನ್ನು ವ್ಯಾಪಕವಾಗಿ ಬೆಳೆಯಲಾಗುವುದು.

### 4) ಕೆಂಪು ಮಣ್ಣು:

ಈ ಮಣ್ಣುಗಳು ಅಗ್ನಿಶಿಲೆಯ ಶಿಥಿಲೀಕರಣದಿಂದ ನಿರ್ಮಿತವಾದುದಾಗಿದೆ. ಇದು ಕಬ್ಬಿಣದ ಆಕ್ಸೈಡನ್ನು ಹೊಂದಿದ್ದು ಅದರಿಂದ ಕೆಂಪು ಬಣ್ಣದಿಂದ ಕೂಡಿದೆ. ರಾಜ್ಯದಲ್ಲಿ ಇದು ಅತೀ ಹೆಚ್ಚು ವಿಸ್ತರಿಸಿದ ಮಣ್ಣಾಗಿದೆ. ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಅತಿ ಕಡಿಮೆ ಮತ್ತು ಫಲವತ್ತತೆಯು ಕಡಿಮೆ ಇರುತ್ತದೆ. ಉತ್ತರ ಕರ್ನಾಟಕದಲ್ಲಿ ಇದಕ್ಕೆ ಮಸಾರಿ ಎನ್ನುವರು.

1. ಮರಳು ಮಿಶ್ರಿತ ಕೆಂಪು ಮಣ್ಣು: ಇವು ನೀರಾವರಿಗೆ ಅತೀ ಸೂಕ್ತವಾಗಿದ್ದು, ರಾಗಿ ಈ ಮಣ್ಣಿನ ಮುಖ್ಯ ಬೆಳೆಯಾಗಿದೆ. ಅಲ್ಲದೆ ಜೋಳ, ನೆಲಗಡಲೆ, ಜೌಡಲ, ಹತ್ತಿ, ದ್ವಿದಳ ಧಾನ್ಯಗಳು, ತೆಂಗು, ಹೊಗೆಸೊಪ್ಪು ಮಳೆಯಾಶ್ರಯದಲ್ಲಿ ಬೆಳೆಯಲಾಗುವುದು. ನೀರಾವರಿ ಭಾಗದಲ್ಲಿ ಕಬ್ಬು, ಭತ್ತ, ತರಕಾರಿ, ತೆಂಗು, ಅಡಿಕೆ ಬೆಳೆಯುತ್ತಾರೆ.
2. ಕೆಂಪು ಮತ್ತು ಕಪ್ಪು ಮಿಶ್ರಿತ ಮಣ್ಣು: ಇವು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಮಣ್ಣು ಧಾರವಾಡ, ಚಿತ್ರದುರ್ಗ, ರಾಯಚೂರು, ಬಳ್ಳಾರಿ, ಬಿಜಾಪುರ, ಬೆಳಗಾವಿ, ಕೊಪ್ಪಳ, ದಾವಣಗೆರೆ ಜಿಲ್ಲೆಗಳಲ್ಲಿ ವಿಸ್ತರಿಸಿದೆ. ಜೋಳ, ಹತ್ತಿ, ಗೋಧಿ, ಮೆಣಸಿನಕಾಯಿ ಮತ್ತು ನೀರಾವರಿ ಭಾಗಗಳಲ್ಲಿ ಭತ್ತ, ಕಬ್ಬು, ಬಾಳೆ ಮುಖ್ಯ ಬೆಳೆಗಳಾಗಿವೆ.
3. ಜೇಡಿ ಮಿಶ್ರಿತ ಕೆಂಪು ಮಣ್ಣು: ಪಶ್ಚಿಮಘಟ್ಟಗಳು ಪೂರ್ವದಲ್ಲಿ ಈ ಮಣ್ಣುಗಳು ವ್ಯಾಪಕವಾಗಿ ಹಂಚಿಕೆಯಾಗಿದೆ. ಬೆಳಗಾವಿ, ಶಿವಮೊಗ್ಗ, ಹಾಸನ, ಕೊಡಗು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ವಿಸ್ತರಿಸಿದೆ.

### ವ್ಯವಸಾಯ – ಕರ್ನಾಟಕ ವ್ಯವಸಾಯದ ಪ್ರದೇಶಗಳು:

ವ್ಯವಸಾಯ ಪ್ರದೇಶ ಎಂಬ ಪದವನ್ನು ಸಾಮಾನ್ಯವಾಗಿ ಏಕ ರೀತಿಯ ವ್ಯವಸಾಯ ದೃಶ್ಯಾವಳಿ ಹಾಗೂ ಇದರ ಹಿನ್ನೆಲೆಯಾಗಿರುವ ಏಕರೀತಿಯ ಪ್ರಾಕೃತಿಕ ಆರ್ಥಿಕ ಗುಣಲಕ್ಷಣಗಳನ್ನು ಸೂಚಿಸಲು ಬಳಸಲಾಗುವುದು. ಇಂತಹ ಪ್ರದೇಶಗಳು ಒಂದೇ ರೀತಿಯ ಭೂಸ್ವರೂಪ, ವಾಯುಗುಣ, ಮಣ್ಣು, ಬೆಳೆಗಳು, ವ್ಯವಸಾಯ ಪದ್ಧತಿ, ತಾಂತ್ರೀಕತೆ, ಮಾರುಕಟ್ಟೆ ಮೊದಲಾದವುಗಳನ್ನು ಹೊಂದಿದ್ದು, ಸುತ್ತಲಿನ ಇತರ ಭಾಗಗಳಿಗಿಂತ ಭಿನ್ನವಾಗಿರುತ್ತದೆ.

ರಾಜ್ಯವು ಅತಿ ಸಾಂಪ್ರದಾಯಿಕ ಜೀವನಾಧಾರ ಬೇಸಾಯದಿಂದ ಮೊದಲುಗೊಮಡು ಅತ್ಯಾಧುನಿಕ ಅತೀವ ವಾಣಿಜ್ಯ ಪ್ರಕಾರದ ಬೇಸಾಯವನ್ನು ಸಹ ಹೊಂದಿದೆ.

ಕರ್ನಾಟಕ ವ್ಯವಸಾಯ ಇಲಾಖೆಯು ರಾಜ್ಯವನ್ನು 10 ಪ್ರಮುಖ ವ್ಯವಸಾಯ ಪ್ರದೇಶಗಳಾಗಿ ವಇಂಗಡಿಸಿದೆ. ಈ ವಿಂಗಡನೆಗೆ ಬಳಸಿದ ಪ್ರಮುಖ ಆಧಾರಗಳು,

1) ಮಳೆಯ ಪ್ರಮಾಣ ಹಂಚಿಕೆ ಋತುಮಾನ

2) ಮಣ್ಣಿನ ವಿಧಗಳು

3) ಭೂ ಸ್ವರೂಪಗಳು

4) ಉತ್ಪಾದಿಸುವ ಬೆಳೆಗಳು ಮಾರುಕಟ್ಟೆ ಮತ್ತು ವ್ಯವಸಾಯ ಪದ್ಧತಿ.

ಕರ್ನಾಟಕ ವ್ಯವಸಾಯ ಪ್ರದೇಶ,

1) ಈಶಾನ್ಯ ವಲಯ

2) ಈಶಾನ್ಯ ಬಣ ವಲಯ

3) ಉತ್ತರ ಬಣ ವಲಯ

4) ಕೇಂದ್ರ ಬಣ ವಲಯ

5) ಪೂರ್ವ ಬಣ ವಲಯ

6) ದಕ್ಷಿಣ ಬಣ ವಲಯ

7) ದಕ್ಷಿಣ ಸ್ಥಿತ್ಯಂತರ

8) ಉತ್ತರ ಸ್ಥಿತ್ಯಂತರ ವಲಯ

9) ಗುಡ್ಡಗಾಡು ಮಲೆನಾಡು ವಲಯ

10) ಕರಾವಳಿ ವಲಯ

1) ಈಶಾನ್ಯ ವಲಯ: ಈ ವಲಯವು ರಾಜ್ಯದ ಅತ್ಯಂತ ಈಶಾನ್ಯದ ಭೂ ಭಾಗವನ್ನು ಹೊಂದಿದ್ದು ಬೀದರ್ ಜಿಲ್ಲೆ ನೆರೆಯ ಗುಲ್ಬರ್ಗಾ ಜಿಲ್ಲೆಯ ಆಳಂದ, ಚಿಂಚೋಳಿ ಮತ್ತು ಗುಲ್ಬರ್ಗಾ ತಾಲ್ಲೂಕಿನ ಉತ್ತರಭಾಗ ಈ ವಲಯಕ್ಕೆ ಸೇರಿದೆ. ಈ ವಲಯವು ಕಡಿಮೆ ಮಳೆ ಮತ್ತು ಬೇಸಿಗೆಯಲ್ಲಿ 40 ಡಿಗ್ರಿಗಿಂತ ಹೆಚ್ಚು ಉಷ್ಣಾಂಶ ಹೊಂದಿದೆ. ಸರಾಸರಿ ವಾರ್ಷಿಕ ಮಳೆ 83ರಿಂದ 89 ಮಳೆಯ ಅನಿಶ್ಚಿತತೆಯಿಂದ ಕೂಡಿದೆ. ಇದು ಕೃಷ್ಣಾ, ಗೋದಾವರಿ ನದಿಗಳ ಜಲಾನಯನ ಪ್ರದೇಶವನ್ನು ಆವರಿಸಿದೆ. ಇಲ್ಲಿ ಆಳವಾದ ಕಪ್ಪು ಮಣ್ಣು ಇದ್ದು, ಇಲ್ಲಿಯ ಮುಖ್ಯ ಬೆಳೆಗಳು ಜೋಳ, ತೊಗರಿ, ನೆಲಗಡಲೆ, ಸಜ್ಜೆ ಮತ್ತು ಹತ್ತಿಗಳಾಗಿವೆ.

2) ಈಶಾನ್ಯದ ಬಣ ವಲಯ: ಗುಲ್ಬರ್ಗಾ ಜಿಲ್ಲೆಯ ಆಳಂದ, ಚಿಂಚೋಳಿ ಕೆಲವು ಭಾಗಗಳನ್ನು ಹೊರತುಪಡಿಸಿ ಯಾದಗಿರಿ, ರಾಯಚೂರು ಜಿಲ್ಲೆಯ ದೇವದುರ್ಗ ಮಾನ್ವಿ ಈ ವಲಯಕ್ಕೆ ಸೇರಿವೆ. ಇಲ್ಲಿಯ ಸರಾಸರಿ ಮಳೆ 63ರಿಂದ 80 ಸೆ.ಮೀ. ವಾರ್ಷಿಕ. ಮಳೆಯಾಶ್ರಿತ ಜೋಳ, ಸಜ್ಜೆ ಮತ್ತು ಹತ್ತಿ, ಈರುಳ್ಳಿ, ದ್ವಿದಳ ಧಾನ್ಯಗಳು ಇಲ್ಲಿನ ಪ್ರಮುಖ ಬೆಳೆಗಳು. ಈ ವಲಯವು ಪ್ರಸ್ತುತ ರಾಜ್ಯದಲ್ಲಿ ಅತ್ಯುತ್ತಮವಾದ ಒತ್ತಡ ಉತ್ಪಾದನೆಗೆ ಹೆಸರಾಗಿದೆ

3) ಉತ್ತರದ ಬಣ ವಲಯ: ಇದು ರಾಜ್ಯದ ಅತ್ಯಂತ ವಿಸ್ತಾರವಾದ ವ್ಯವಸಾಯ ಪ್ರದೇಶ. ಉತ್ತರದಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಿಂದ ಪೂರ್ವದಲ್ಲಿ ಬಳ್ಳಾರಿ ತಾಲ್ಲೂಕಿನವರೆಗೂ ವಿಸ್ತರಿಸಿದೆ. ಇಲ್ಲಿಯ ಮಳೆಯ ಪ್ರಮಾಣ 45ರಿಂದ 90 ಸೆ.ಮೀ. ಇದು ಕೃಷ್ಣಾ ಮತ್ತು ಭೀಮಾ ನದಿಗಳು ಜಲಾನಯನ ಪ್ರದೇಶವಾಗಿದೆ. ಇದು ರಾಜ್ಯದಲ್ಲಿ ಅತೀ ಬರಗಾಲ ಪೀಡಿತ ಪ್ರದೇಶವಾಗಿದೆ. ಆಳವಾದ ಮತ್ತು ಮಧ್ಯಮ ಆಳವಾದ ಕಪ್ಪು ಮಣ್ಣಿನಿಂದ ಕೂಡಿದೆ. (ಧಾರವಾಡ ಮತ್ತು ಗದಗ ಜಿಲ್ಲೆಯ ಕೆಲವು ಭಾಗ ಕೆಂಪು ಮಣ್ಣು). ಇಲ್ಲಿಯ ಪ್ರಮುಖ ಬೆಳೆಗಳು ಜೋಳ, ಗೋಧಿ, ನೆಲಗಡಲೆ, ಸಜ್ಜೆ ಮತ್ತು ಹತ್ತಿ, ಕಬ್ಬು, ತೊಗರಿ, ಸೂರ್ಯಕಾಂತಿ.

4) ಕೇಂದ್ರ ಬಣ ವಲಯ: ಇದು ರಾಜ್ಯದ ಅತ್ಯಂತ ಶುಷ್ಕವಾದ ಪ್ರದೇಶವಾಗಿದೆ. ಇದು ಚಿತ್ರದುರ್ಗ, ತುಮಕೂರು, ದಾವಣಗೆರೆಯ ಕೆಲವು ಭಾಗಗಳನ್ನು ಒಳಗೊಂಡಿದೆ. ಇಲ್ಲಿಯ ವಾರ್ಷಿಕ ಮಳೆಯ ಪ್ರಮಾಣ 45–70 ಸೆ.ಮೀ. ರಾಜ್ಯದಲ್ಲಿ ಅತ್ಯಂತ ಕಡಿಮೆ ಮಳೆ ಪಡೆಯುವ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಈ ವಲಯದಲ್ಲಿದೆ. ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಮಾರಿಕಣಿವೆ ಯೋಜನೆ ಈ ವಲಯದ ಪ್ರಮುಖ ನೀರಾವರಿ ಯೋಜನೆಯಾಗಿದೆ. ಇಲ್ಲಿ ತೀವ್ರ ಬರಗಾಲವಿದ್ದು ಶುಷ್ಕ ವಲಯದ ಬೆಳೆಗಳನ್ನು ಬೆಳೆಯುತ್ತಾರೆ. ಜೋಳ, ನೆಲಗಡಲೆ, ರಾಗಿ, ತೆಂಗು ಮುಂತಾದ ಬೆಳೆ ಬೆಳೆಯುತ್ತಾರೆ.

5) ಪೂರ್ವ ಬಣ ವಲಯ: ಕೋಲಾರ, ಚಿಕ್ಕ ಬಳ್ಳಾಪುರ, ಬೆಂಗಳೂರು ಗ್ರಾಮ, ರಾಮನಗರ ಈ ವಲಯಕ್ಕೆ ಸೇರಿವೆ. ಇಲ್ಲಿಯ ಮಳೆಯ ಪ್ರಮಾಣ 68–89 ಸೆ.ಮೀ. ವಾರ್ಷಿಕ. ಈ ವಲಯವು ಬೇಸಿಗೆಯ ಕೊನೆಯ ಭಾಗದಲ್ಲಿ ಹೆಚ್ಚು ಮಳೆ ಪಡೆಯುವುದು ಮತ್ತು ಮಾನ್ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಸಹ ಮಳೆ ಪಡೆಯುತ್ತದೆ. ಇದು ಬಹುತೇಕ ಕೆಂಪು ಮಣ್ಣಿನಿಂದ ಕೂಡಿದೆ. ಇದು ರಾಗಿ ಬೆಳೆಗೆ ಪ್ರಸಿದ್ಧವಾದ ವಲಯವಾಗಿದೆ. ಈ ವಲಯವು ತೋಟಗಾರಿಕೆಗೆ ಹೆಚ್ಚು ಸಹಾಯಕವಾಗಿದೆ. ತೆಂಗು, ಮಾವು, ಪುಷ್ಪ ಕೃಷಿ ಹೆಚ್ಚಾಗಿ ಕಂಡು ಬರುತ್ತದೆ. ಈ ವಲಯದಲ್ಲಿನ ಹಾಸನದ ಅರಕಲಗೂಡು ದೇಶದಲ್ಲಿ ಅತ್ಯುತ್ತಮವಾದ ವರ್ಜೀನಿಯಾ ಹೊಗೆಸೊಪ್ಪನ್ನು ಉತ್ಪಾದಿಸಿ ರಫ್ತು ಮಾಡುತ್ತದೆ.

6) ಉತ್ತರ ಸ್ಥಿತ್ಯಂತರ ವಲಯ: ಬೆಳಗಾಇಯ ಚಿಕ್ಕೋಡಿ, ರಾಯಭಾಗ, ಹುಕ್ಕೇರಿ, ಗೋಕಾಕ್, ಧಾರವಾಡ ಜಿಲ್ಲೆಯ ಕೆಲವು ಭಾಗ ಹಾವೇರಿಯಲ್ಲಿನ ಆಯ್ದ ಭಾಗ ಈ ವಲಯಕ್ಕೆ ಸೇರಿದೆ. ಇಲ್ಲಿಯ ಸರಾಸರಿ ಮಳೆಯ ಪ್ರಮಾಣ 62–130 ಸೆ.ಮೀ. ಇದು ಕಪ್ಪು ಮಣ್ಣನ್ನು ಹೊಂದಿದ್ದು, ಅಲ್ಲಲ್ಲಿ ಮಸಾಂ ಮಣ್ಣು ಕಂಡು ಬರುವುದು. ಇದು ಶುಷ್ಕ ಬೆಳೆಗೆ ಪ್ರಸಿದ್ಧವಾದ ವಲಯವಾಗಿದೆ. ಜೋಳ, ಮೆಣಸಿನಕಾಯಿ, ಹತ್ತಿ, ಸೂರ್ಯಕಾಂತಿ, ಕಬ್ಬು, ಪ್ರಮುಖ ಬೆಳೆಗಳಾಗಿವೆ. ಹಾವೇರಿಯ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸಲಾಗಿದೆ.

7) ಮಲೆನಾಡು ಪ್ರದೇಶ: ಇದು ಬೆಟ್ಟಗುಡ್ಡಗಳಿಂದ ಕೂಡಿದ ವಿಶಿಷ್ಟ ಭೂ ಪ್ರದೇಶ. ಇದು ಬೆಳಗಾವಿಯಿಂದ ದಕ್ಷಿಣದಲ್ಲಿ ಕೊಡಗುವರೆಗೂ ವಿಸ್ತರಿಸಿದೆ. ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ ಕೆಲವು ಭಾಗಗಳನ್ನು ಇದು ಒಳಗೊಂಡಿದೆ.

8) ದಕ್ಷಿಣದ ಬಣ ವಲಯ: ಈ ವಲಯವು ಮಂಡ್ಯ, ಚಾಮರಾಜನಗರ, ಮೈಸೂರು ಮತ್ತು ಹಾಸನದ ಕೆಲವು ಭಾಗಗಳನ್ನು ಹೊಂದಿದೆ. ಇಲ್ಲಿಯ ಸರಾಸರಿ ಮಳೆಯ ಪ್ರಮಾಣ 67–88.8 ಸೆ.ಮೀ. ಇದು ನೈರುತ್ಯ ಮಾನ್ಸೂನ್ ಮಾರುತಗಳಿಂದ ಹೆಚ್ಚು ಮಳೆ ಪಡೆಯುತ್ತದೆ. ರಾಗಿ, ಭತ್ತ, ಹಿಪ್ಪುನೇರಳೆ, ದ್ವಿದಳ ಧಾನ್ಯಗಳು, ಹೊಗೆಸೊಪ್ಪು, ಇಲ್ಲಿನ ಪ್ರಮುಖ ಬೆಳೆಗಳು.

9) ದಕ್ಷಿಣ ಸ್ಥಿತ್ಯಂತರ ವಲಯ: ಈ ವಲಯವು ಪಶ್ಚಿಮ ಘಟ್ಟಗಳು ಮತ್ತು ಪೂರ್ವಗಳ ನಡುವೆ ಬರುವ ಭೂಭಾಗ. ಇದು ರಾಜ್ಯದ ಅತೀ ಪ್ರಮುಖ ವ್ಯವಸಾಯ ವಲಯ ಆಗಿರುವುದರಿಂದ ಇದನ್ನು ಬೆಳವಲನಾಡು ಎನ್ನುವರು. ಇದು ದಕ್ಷಿಣದಲ್ಲಿ ಚಾಮರಾಜನಗರ ಮೈಸೂರಿನಿಂದ ಉತ್ತದಲ್ಲಿ ಬೆಳಗಾವಿವರೆಗೆ ವಿಸ್ತರಿಸಿದೆ. ಇಲ್ಲಿಯ ಸರಾಸರಿ ಮಳೆ 65–105 ಸೆ.ಮೀ. ಮರಳು ಮಿಶ್ರಿತ ಕೆಂಪು ಮಣ್ಣು ಹೆಚ್ಚಾಗಿ ಕಂಡು ಬರುವುದರಿಂದ ರಾಗಿ, ಜೋಳ, ನೆಲಗಡಲೆ, ಹೊಗೆಸೊಪ್ಪು ಮತ್ತು ಬೆಳಗಾವಿ ಜಿಲ್ಲೆಯ ನೀರಾವರಿ ಪ್ರದೇಶದಲ್ಲಿ ಕಬ್ಬು ಪ್ರಮುಖವಾಗಿ ಬೆಳೆಯಲಾಗುತ್ತದೆ. ಇದು ದಕ್ಷಿಣ ಭಾರತದಲ್ಲಿ ಆಲೂಗಡ್ಡೆ ಬೇಸಾಯಕ್ಕೆ ಹೆಸರುವಾಸಿಯಾಗಿದೆ. ರಾಜ್ಯದಲ್ಲಿ ಅತೀ ಹೆಚ್ಚು ಮಳೆಯನ್ನು ಪಡೆಯುವ ಪ್ರದೇಶ (ತೀರ್ಥಹಳ್ಳಿ) ತಾಲ್ಲೂಕಿನ ಆಗುಂಬೆ ಈ ವಲಯದಲ್ಲಿದೆ. ಜೇಡಿ ಮಿಶ್ರಿತ ಕೆಂಪು ಮಣ್ಣು ಮತ್ತು ಜಂಬಿಟ್ಟಿಗೆ ಮಣ್ಣು ವ್ಯಾಪಕವಾಗಿ ವಿಸ್ತರಿಸಿದೆ. ತೋಟಗಾರಿಕೆ ಬೇಸಾಯಕ್ಕೆ ಹೆಸರುವಾಸಿ. ಕಾಫಿ, ಟೀ, ಏಲಕ್ಕಿ, ಲವಂಗ, ಶುಂಠಿ, ಮೆಣಸು, ಅಡಿಕೆ ಪ್ರಮುಖ ಬೆಳೆಗಳಾಗಿವೆ.

10) ಕರಾವಳಿ ಪ್ರದೇಶ: ಈ ವಲಯವು ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡದ ತಾಲ್ಲೂಕುಗಳನ್ನು ಒಳಗೊಂಡಿದೆ. ಇಲ್ಲಿಯ ಸರಾಸರಿ ಮಳೆ 300–450 ಸೆ.ಮೀ. ವಾರ್ಷಿಕ. ಇಲ್ಲಿ ಜಂಬಿಟ್ಟಿಗೆ ಮಣ್ಣು ವ್ಯಾಪಕವಾಗಿದೆ. ಭತ್ತ, ತೆಂಗು, ಕಬ್ಬು, ಅಡಿಕೆ, ಗೋಡಂಬಿ ಕೈ ತೋಟಗಾರಿಕೆಗೆ ಪ್ರಸಿದ್ಧಿ ಪಡೆದಿದೆ.

**ಕರ್ನಾಟಕದ ಪ್ರಮುಖ ಬೆಳೆಗಳು:**

ಕರ್ನಾಟಕ ರಾಜ್ಯವು 10 ಪ್ರಮುಖ ವ್ಯವಸಾಯ ಪ್ರದೇಶ ಹೊಂದಿದ್ದು ಬೇಸಾಯದ ಅಪಾರ ವೈವಿಧ್ಯತೆಯನ್ನು ಹೊಂದಿದೆ. ಇದರಿಂದ ರಾಜ್ಯದ ಹಲವಾರು ಆಹಾರ ಧಾನ್ಯಗಳು, ತೃಣ ಧಾನ್ಯಗಳು, ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ವಾಣಿಜ್ಯ ಬೆಳೆಗಳು, ತೋಟಗಾರಿಕೆ ಬೆಳೆಗಳನ್ನು ವಿವಿಧ ಭಾಗಗಳಲ್ಲಿ ಉತ್ಪಾದಿಸಲಾಗುವುದು. ಇದಲ್ಲದೆ ಕರ್ನಾಟಕವು ಕಾಫಿ ಮತ್ತು ಸಾಂಬಾರ್ ಬೆಳೆಗಳಿಗೆ ಹಾಗೂ ತೋಟಗಾರಿಕೆ ಬೇಸಾಯಕ್ಕೆ ದೇಶದಲ್ಲಿ ಅತ್ಯಂತ ಪ್ರಸಿದ್ಧಿಯಾಗಿದೆ.

## ಪ್ರಮುಖ ಆಹಾರ ಬೆಳೆಗಳು

**ಭತ್ತ:**

ಭತ್ತವು ರಾಜ್ಯದ ಪ್ರಮುಖ ಆಹಾರ ಬೆಳೆಯಾಗಿದೆ. ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಗೆ ಬಳಕೆಯಾಗುವ ಶೇ.28ರಷ್ಟು ಕ್ಷೇತ್ರ ಭತ್ತ ಉತ್ಪಾದನೆಗೆ ಬಳಕೆಯಾಗುತ್ತಿದೆ. ಇದು ರಾಜ್ಯದ ಒಟು ಆಹಾರ ಧಾನ್ಯಗಳ ಉತ್ಪಾದನೆಯ ಅಂದಾಜು ಶೇ.38ರಷ್ಟಿದೆ. ಮೈಸೂರು ರಾಜ್ಯದ ಗಜೆಟೆಯರ್ ಗ್ರಂಥದ ಕೃರನಕಾರ ರೈಸ್ ಅವರು 108 ಬಗೆಯ ಭತ್ತದ ತಳಿಗಳನ್ನು ಹೆಸರಿಸಿದ್ದಾರೆ. ಸಾಂಪ್ರದಾಯಿಕ ಭತ್ತವನ್ನು ಜೂನ್, ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ ನವೆಂಬರ್, ಡಿಸೆಂಬರ್ ಕಟಾವು ಮಾಡುತ್ತಾರೆ. ಇದು ನೀರಾವರಿಯ ಪ್ರಮುಖ ಬೆಳೆಯಾಗಿದ್ದು ಪ್ರಥಮ ಪ್ರಾಶಸ್ತ್ಯದ ಬೆಳೆಯಾಗಿದೆ. ಕೊಡಗು, ಚಿಕ್ಕಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಗ್ಗಾದ ಕಣಿವೆ ಪ್ರದೇಶದಲ್ಲಿ ಬೆಳೆಯುತ್ತಾರೆ. ರಾಜ್ಯಾದ್ಯಂತ ಭತ್ತವನ್ನು ನಾಟಿಯ ವಿಧಾನದಿಂದಲೇ ಬೆಳೆಯುವರು. (ಈ ವಿಧಾನದಲ್ಲಿ ಭತ್ತದ ಪೈರನ್ನು ಸಸಿ, ಮಡಿಗಳಲ್ಲಿ ಬೆಳೆಸಿ 3–4 ವಾರಗಳ ನಂತರ ಸಿದ್ದಪಡಿಸಿ ನಾಟಿ ಮಾಡುವರು.) ಮಲೆನಾಡು ಮತ್ತು ಕರಾವಳಿಯ ಕೆಲವು ಭಾಗಗಳಲ್ಲಿ ಇದನ್ನು ಎರಡು ವಿಧಾನದಿಂದಲೂ ಬೆಳೆಯುತ್ತಾರೆ.

ರಾಜ್ಯದಲ್ಲಿ ಭತ್ತ ಬೆಳೆಯುವ ಪ್ರದೇಶ: ಬಹುತೇಕ ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ ಭತ್ತನ್ನು ಬೆಳೆಯುತ್ತಾರೆ. ಆದರೆ ಪ್ರಮುಖವಾಗಿ, ಕೃಷ್ಣಾ, ತುಂಗಭದ್ರಾ ಕಣಿವೆ, ಕಾವೇರಿ ಜಲಾನಯನದ ಸ್ವಲ್ಪ ಭಾಗ ಭತ್ತದ ಉತ್ಪಾದನೆಗೆ ಪ್ರಸಿದ್ದವಾಗಿದೆ. ರಾಯಚೂರು, ಬಳ್ಳಾರಿ ಜಿಲ್ಲೆಗಳು ಭತ್ತದ ಉತ್ಪಾದನೆಯಲ್ಲಿ ಕ್ರಮವಾಗಿ 1ನೇ, 2ನೇ ಸ್ಥಾನದಲ್ಲಿದೆ.

**ರಾಗಿ:**

ಇದು ರಾಜ್ಯದ ಪ್ರಮುಖ 3ನೇ ಆಹಾರ ಬೆಳೆಯಾಗಿದೆ. ಇದನ್ನು ಹೆಚ್ಚಾಗಿ ಕರ್ನಾಟಕದ ದಕ್ಷಿಣದ ಭಾಗದಲ್ಲಿ ಬೆಳೆಯಲಾಗುವುದು. ಇದು ಭತ್ತದ ಅತೀ ಮುಖ್ಯ ಪರ್ಯಾಯ ಬೆಳೆಯಾಗಿದೆ. ಮಳೆಗಾಲದಲ್ಲಿ ಭತ್ತ ಬೆಳೆಯುವ ಭೂಮಿಯಲ್ಲಿ ಬೇಸಿಗೆಯಲ್ಲಿ ರಾಗಿ ಬೆಳೆಯುತ್ತಾರೆ. ಇದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುವುದು ರಾಗಿಯ ಹುಲ್ಲು ಉತ್ತಮ ಪಶು ಆಹಾರವಾಗಿದೆ. ಇದರಲ್ಲಿ ಪ್ರಮುಖವಾಗಿ 2 ತಳಿಗಳಿವೆ. ಅವುಗಳು,

1) ಕರಿ ರಾಗಿ

2) ಕೆಂಪು ರಾಗಿ

ಇದಲ್ಲದೆ ಗಿಡ್ಡ ರಾಗಿ, ದೊಡ್ಡ ರಾಗಿ ಎಂಬ ತಳಿಗಳಿವೆ.

ರಾಗಿಯನ್ನು ಹಿಂಗಾರು ಮುಂಗಾರು ಬೇಸಿಗೆ ಹೀಗೆ ಎಲ್ಲಾ ಋತುವಿನಲ್ಲಿ ಬೆಳೆಯಬಹುದು. ಆದರೆ ಮುಂಗಾರು ರಾಗಿಯನ್ನು ಹೆಚ್ಚಾಗಿ ಬೆಳೆಯಲಾಗುವುದು. ರಾಗಿಯನ್ನು ಕೆಂಪು ಮಣ್ಣು, ಮರಳು ಮಿಶ್ರಿತ ಕೆಂಪು, ಕಪ್ಪು ಮಣ್ಣುಗಳಲ್ಲಿ ಬೆಳೆಯುವುದು ಸಾಮಾನ್ಯವಾಗಿದೆ.

ರಾಜ್ಯದಲ್ಲಿ ರಾಗಿ ಬೆಳೆಯುವ ಕ್ಷೇತ್ರವು ಕರ್ನಾಟಕದ ದಕ್ಷಿಣದ ಹಳೆ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ. ಇದು ಕ್ಷೇತ್ರ, ಹಂಚಿಕೆ ಮತ್ತು ಉತ್ಪಾದನೆಯಲ್ಲಿ ಸಾಮ್ಯತೆಯಿಂದ ಕೂಡಿದ್ದು ಇತ್ತೀಚೆಗೆ ಇದರ ಕ್ಷೇತ್ರ ವಾಣಿಜ್ಯ ಬೆಳೆಗಳ ಕಡೆಗೆ ವಾಲುತ್ತಿದೆ. ತುಮಕೂರು ಜಿಲ್ಲೆಯು ರಾಗಿಯ ಕ್ಷೇತ್ರ ಮತ್ತು ಉತ್ಪಾದನೆ ಎರಡರಲ್ಲಿಯೂ ಮುಂಚೂಣಿಯಲ್ಲಿದೆ. ಇದು ರಾಜ್ಯದ ಒಟ್ಟು ರಾಗಿ ಕ್ಷೇತ್ರದ 24%ರಷ್ಟು ಹೊಂದಿದ್ದು, 23% ಉತ್ಪಾದಿಸುತ್ತವೆ. ನಂತರದಲ್ಲಿ ರಾಮನಗರ, ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ ಇತ್ಯಾದಿಗಳು.

**ಜೋಳ:**

ಇದು ಕ್ಷೇತ್ರ ಮತ್ತು ಉತ್ಪಾದನೆಯಲ್ಲಿ ಭತ್ತದ ನಂತರ 2ನೇ ಸ್ಥಾನದಲ್ಲಿದೆ. ಇದೊಂದು ಮಳೆಯಾಶ್ರಿತ ಬೆಳೆಯಾಗಿದೆ. ರಾಜ್ಯದ ಉತ್ತರ ಭಾಗದಲ್ಲಿ ಇದು ಅತ್ಯಂತ ಪ್ರಮುಖವಾದ ಆಹಾರದ ಬೆಳೆಯಾಗಿದೆ. ಇದರಿಂದಾಗಿ ಈ ವಲಯದಲ್ಲಿ ಜೋಳದ ಪ್ರಾಮುಖ್ಯತೆ ಹೆಚ್ಚು. ದಕ್ಷಿಣ ಜಿಲ್ಲೆಗಳಲ್ಲಿ ಇದನ್ನು ಹಸಿರು ಇರುವಾಗಲೇ ಕಟಾವು ಮಾಡಿ ಪಶುಗಳಿಗೆ ಆಹಾರವಾಗಿ ಬಳಸುತ್ತಾರೆ. ಇದೊಂದು ಉಷ್ಣವಲಯ ಬೆಳೆಯಾಗಿದ್ದು ಹಿಂಗಾರು ಮತ್ತು ಮುಂಗಾರು ಎರಡೂ ಅವಧಿಯಲ್ಲಿ ಬೆಳೆಯುತ್ತಾರೆ. ಸಾಮಾನ್ಯವಾಗಿ ಮುಂಗಾರು ಆರಂಭದೊಮದಿಗೆ ಅಂದರೆ ಮೇ ತಿಂಗಳಿನಲ್ಲಿ ಬಿತ್ತನೆ ಮಾಡುತ್ತಾರೆ. ಕರ್ನಾಟಕದ ಉತ್ತರ ಭಾಗದಲ್ಲಿ ಕಪ್ಪು ಎರೆ ಮಣ್ಣು ಜೋಳ ಉತ್ಪಾದನೆ ಹೆಸರುವಾಸಿಯಾಗಿದೆ. ಅಲ್ಲದೇ ಈ ವಲಯದ ಜೋಳ ಗುಣಮಟ್ಟ ಮತ್ತು ಪೌಷ್ಠಿಕಾಂಶ ಸಹ ಹೆಚ್ಚು. ಕಡಿಮೆ ಪ್ರಮಾಣದ ಮಳೆ ಬರುವ ಪ್ರದೇಶದಲ್ಲಿಯೂ ಜೋಳವನ್ನು ಹೇರಳವಾಗಿ ಬೆಳೆಯಬಹುದು. ಇದೇ ಕಾರಣಕ್ಕೆ ಇದು ಕಪ್ಪು ಮಣ್ಣು ಪ್ರದೇಶದಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ.

ಜೋಳವನ್ನು ಕರಾವಳಿ ಮತ್ತು ಮಲೆನಾಡನ್ನು ಹೊರತುಪಡಿಸಿ ಉಳಿದೆಲ್ಲಾ ಭಾಗಗಳಲ್ಲಿ ಬೆಳೆಯಲಾಗುವುದು. ಆದರೆ ಬಹುಪಾಲು ಉತ್ತರ ಕರ್ನಾಟಕದ ಕಪ್ಪು ಮಣ್ಣಿನ ಗುಲ್ಬರ್ಗಾ, ಬಿಜಾಪುರ, ಬೆಳಗಾವಿ, ಬಾಗಲಕೋಟೆ, ರಾಯಚೂರು ಇತ್ಯಾದಿ ಜಿಲ್ಲೆಗಳಲ್ಲಿ ಹೆಚ್ಚು ಬೆಳೆಯಲಾಗುತ್ತದೆ. ಬಿಜಾಪುರ ಜೋಳ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ.

**ಗೋಧಿ:**

ಕರ್ನಾಟಕವು ಉಷ್ಣವಲಯದಲ್ಲಿದ್ದು, ವಾಯುಗುಣವು ಸಮಶೀತೋಷ್ಣ ವಲಯದ ಗೋಧಿಯನ್ನು ಬೆಳೆಯಲಾಗದು. ಚಳಿಗಾಲದಲ್ಲಿ ಉಷ್ಣಾಂಶವು ಅತೀ ಕಡಿಮೆ ಇರುವುದರಿಂದ ಈ ಅವಧಿಯಲ್ಲಿ ಮಾತ್ರ ಗೋಧಿ ಬೆಳೆಯಲಾಗುತ್ತದೆ. ರಾಜ್ಯದಲ್ಲಿ ಕಂಡು ಬರುವ ಗೋಧಿಯ ಎರಡು ಪ್ರಮುಖ ತಳಿಗಳೆಂದರೆ,

1) ಆವೆ ಗೋಧಿ
2) ಹೊಟ್ಟೆ ಗೋಧಿ

ಇದರ ಉತ್ಪಾದನೆ ರಾಜ್ಯದ ಉತ್ತರದ ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತದೆ. ಬೆಳಗಾವಿ, ಬಿಜಾಪುರ, ಯಾದಗಿರಿ, ಗದಗ, ಧಾರವಾಡ, ಬಾಗಲಕೋಟೆ, ಬೀದರ್, ಗುಲ್ಬರ್ಗಾ ಇತ್ಯಾದಿ ಸಾಮಾನ್ಯವಾಗಿ ಅಕ್ಟೋಬರ್ ನವೆಂಬರ್‌ನಲ್ಲಿ ಬಿತ್ತನೆ ಮಾಡಿ ಜನವರಿ ಫೆಬ್ರವರಿಯಲ್ಲಿ ಕಟಾವು ಮಾಡಲಾಗುತ್ತದೆ. ಮಳೆಯಾಶ್ರಿತ ಮತ್ತು ನೀರಾವರಿ ಪ್ರದೇಶಗಳೆರಡರಲ್ಲಿಯೂ ಇದು ಹಂಚಿಕೆಯಾಗಿದೆ.

**ಮೆಕ್ಕೆಜೋಳ:**

ಇದು ಮೂಲತ: ದಕ್ಷಿಣ ಅಮೇರಿಕಾದ ಬೆಳೆಯಾಗಿದ್ದು ರಾಜ್ಯಕ್ಕೆ ಪರಿಚಯಿಸಲ್ಪಟ್ಟಿದೆ. ಭಾರತದಲ್ಲಿ ಮೆಕ್ಕೆಜೋಳ ಉತ್ಪಾದಿಸುವ ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕವು ಒಂದು. ಇದನ್ನು ಪಶು ಕೋಳಿಗಳಿಗೆ ಆಹಾರವಾಗಿ ಬಳಸುತ್ತಾರೆ. ವರ್ಷದ ಎಲ್ಲಾ ಕಾಲದಲ್ಲೂ ಇದನ್ನು ಬೆಳೆಯಬಹುದು. ಆದರೆ ಸಾಮಾನ್ಯವಾಗಿ ಜೂನ್ ಜುಲೈನಲ್ಲಿ ಬಿತ್ತನೆ ಮಾಡುತ್ತಾರೆ. ಇದರ ಉತ್ಪಾದನೆ ದಾವಣಗೆರೆ, ಬೆಳಗಾವಿ, ಹಾವೇರಿ, ಬಳ್ಳಾರಿ, ಬಾಗಲಕೋಟೆ, ಶಿವಮೊಗ್ಗ, ಮೈಸೂರು, ಹಾಸನ ಮುಂತಾದ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿದೆ. ಉತ್ಪಾದನೆಯಲ್ಲಿ ದಾವಣಗೆರೆ ಪ್ರಥಮ ಸ್ಥಾನದಲ್ಲಿದೆ ಮತ್ತು ಬೆಳಗಾವಿ, ಹಾವೇರಿ ನಂತರದ ಸ್ಥಾನದಲ್ಲಿದೆ. ರಾಜ್ಯದಲ್ಲಿ ಇದರ ಉತ್ಪಾದನೆ ಮಾರುಕಟ್ಟೆ ಬೆಲೆಯನ್ನು ಅವಲಂಬಿಸಿದೆ.

**ಕರ್ನಾಟಕದಲ್ಲಿ ಬೆಳೆಯುವ ಪ್ರಮುಖ ದ್ವಿದಳ ಧಾನ್ಯಗಳು:**

ಕರ್ನಾಟಕವು ಉಷ್ಣವಲಯದಲ್ಲಿದೆ. ಹಾಗೆಯೇ ಭೂ ಸ್ವರೂಪಗಳ ವೈವಿಧ್ಯತೆಗಳ ಜೊತೆಗೆ ವಾಯುಗುಣದ ಅದರಲ್ಲೂ ಪ್ರಮುಖವಾಗಿ ಮಳೆ3 ಹಂಚಿಕೆ ಅತೀವ ವ್ಯತ್ಯಾಸದಿಮದ ಕೂಡಿದೆ. ಇದರಿಂದಾಗಿ ರಾಜ್ಯವು ಹಲವಾರು ಬಗೆಯ ದ್ವಿದಳ ಧಾನ್ಯಗಳು ಉತ್ಪಾದಿಸುವುದು. ಕೆಲವು ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ರಾಜ್ಯವು ದೇಶದಲ್ಲಿಯೇ ಪ್ರಸಿದ್ಧಿಯಾಗಿದೆ.

ಕೆಲವು ದ್ವಿದಳ ಧಾನ್ಯಗಳು ಇತರ ಬೆಳೆಗಳ ಜೊತೆಯಲ್ಲಿ ಮಿಶ್ರ ಬೆಳೆಯಾಗಿ ಅಥವಾ ಪರ್ಯಾಯವಾಗಿ ಬೆಳೆಯುವ ರೂಢಿಯು ಇದೆ. ರಾಜ್ಯದಲ್ಲಿ ಸುಮಾರು 19.8 ಲಕ್ಷ ಹೆಕ್ಟೇರ್ ಭೂಮಿ ದ್ವಿದಳ ಧಾನ್ಯಗಳು ಉತ್ಪಾದನೆಗೆ ಒಳಪಟ್ಟಿದೆ. ಮತ್ತು ವಾರ್ಷಿಕ 9.5 ಲಕ್ಷ ಟನ್‌ಗಳಷ್ಟು ಉತ್ಪಾದನೆ ಇದೆ. ಇವುಗಳು ಆಹಾರದ ಪೌಷ್ಠಿಕತೆಯನ್ನು ಹೆಚ್ಚಿಸುವುದರಲ್ಲಿ ಮಹತ್ತರ ಪಾತ್ರ ವಹಿಸುವುದು. ಇವುಗಳು ಅಲ್ಪಾವಧಿ ಬೆಳೆಗಳಾಗಿದ್ದು, ಮಣ್ಣಿನ ಫಲವತ್ತತೆ ಹೆಚ್ಚಿಸಲು ಕೂಡಾ ಸಹಕಾರಿಯಾಗುತ್ತದೆ. ಹವಾಮಾನ ಮತ್ತು ವಾಯುಗುಣ ಆಧರಿಸಿ ವರ್ಷದ ಎಲ್ಲಾ ಅವಧಿಯಲ್ಲಿ ಒಂದಿಲ್ಲೊಂದು ದ್ವಿದಳ ಧಾನ್ಯ ಬೆಳೆ ಬೆಳೆಯಬಹುದಾಗಿದೆ.

**ತೊಗರಿ:**

ಇದು ರಾಜ್ಯದ ಅತೀ ಪ್ರಮುಖ ದ್ವಿದಳ ಧಾನ್ಯವಾಗಿದೆ. ದೇಶದಲ್ಲಿ ತೊಗರಿ ಉತ್ಪಾದನೆಯಲ್ಲಿ ರಾಜ್ಯವು ಪ್ರಥಮ ಸ್ಥಾನದಲ್ಲಿದೆ. ರಾಜ್ಯದ ಗುಲ್ಬರ್ಗಾ, ಬೀದರ್, ಬಿಜಾಪುರ, ಜಿಲ್ಲೆಗಳಲ್ಲಿ ಇದೊಂದು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಇದನ್ನು ದಕ್ಷಿಣ ಭಾರತದಲ್ಲಿ ಸಾಂಬಾರ್ ಮತ್ತು ಉತ್ತರ ಭಾರತದಲ್ಲಿ ದಾಲ್ ತಯಾರಿಕೆಯಾಗಿ ವ್ಯಾಪಕವಾಗಿ ಬಳಸಲಾಗುತ್ತದೆ. ಇದನ್ನು ಮುಂಗಾರು ಬೆಳೆಯಾಗಿ ಬೆಳೆಯುತ್ತಾರೆ. ತೊಗರಿಯನ್ನು ಬಹುತೇಕ ಎಲ್ಲಾ ವಲಯದಲ್ಲೂ ಬೆಳೆಯುತ್ತಾರೆ. ಶುಷ್ಕ ವಾಯುಗುಣ ಈ ಬೆಳೆಗೆ ಅತ್ಯಂತ ಉಪಕಾರಿಯಾಗಿದೆ. ರಾಜ್ಯದ ಉತ್ತರ ಭಾಗದ ಕಪ್ಪು ಮಣ್ಣಿನ ಪ್ರದೇಶ ಇದರ ಉತ್ಪಾದನೆಗೆ ಹೆಸರುವಾಸಿ. ಗುಲ್ಬರ್ಗಾ, ಯಾದಗಿರಿ ಜಿಲ್ಲೆಗಳು ರಾಜ್ಯದ ಕ್ಷೇತ್ರದ 63%ರಷ್ಟನ್ನು ಹೊಂದಿದ್ದು, 69%ರಷ್ಟನ್ನು ಉತ್ಪಾದಿಸುತ್ತಿವೆ. ಇತರ ಜಿಲ್ಲೆಗಳಾದ ಬಿಜಾಪುರ, ಬಳ್ಳಾರಿ, ರಾಯಚೂರು, ಕೋಲಾರ, ಹಾವೇರಿಯಲ್ಲಿ ಬೆಳೆಯುವುದು ಕಂಡು ಬರುತ್ತದೆ.

**ಹುರುಳಿ:**

ಇದನ್ನು ಬಡವರ ಆಹಾರವೆಂತಲೂ ಕರೆಯುತ್ತಾರೆ. ಪಶುಗಳಿಗೆ ಆಹಾರವಾಗಿಯೂ ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಇದನ್ನು ದಕ್ಷಿಣ ಕರ್ನಾಟಕದಲ್ಲಿ ರಾಗಿಯೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಯುತ್ತಾರೆ. ಇದು ರಬಿ ಅವಧಿಯ ಪ್ರಮುಖ ಬೆಳೆಯಾಗಿದೆ. ಮೈಸೂರು ಜಿಲ್ಲೆ ಹುರುಳಿ ಬೇಸಾಯಕ್ಕೆ ಪ್ರಸಿದ್ದವಾಗಿದೆ. ಇನ್ನೂ ಮುಂತಾದ ತುಮಕೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿಯೂ ಬೆಳೆಯುತ್ತಾರೆ.

**ಹೆಸರು:**

ಇದನ್ನು ಮುಂಗಾರಿನ ಅವಧಿಯಲ್ಲಿ ಬಿತ್ತನೆ ಮಾಡುತ್ತಾರೆ. ಗದಗ ಜಿಲ್ಲೆ ಇದರ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

**ಉದ್ದು:**

ಇದನ್ನು ಖರೀಫ್ ಅವಧಿಯಲ್ಲಿ ಬೆಳೆಯಲಾಗುತ್ತದೆ. ಹೆಚ್ಚು ಮಳೆ ಬೀಳುವ ಪ್ರದೇಶಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಗುಲ್ಬರ್ಗಾ ಜಿಲ್ಲೆಯು ಇದನ್ನು ಬೆಳೆಯುವಲ್ಲಿ ಪ್ರಥಮ ಸ್ಥಾನದಲ್ಲಿದೆ.

**ಕಡಲೆ:**

ರಾಜ್ಯವು ಉತ್ಪಾದಿಸುವ 2ನೇ ಅತೀ ಪ್ರಮುಖ ದ್ವಿದಳ ಧಾನ್ಯ ಕಡಲೆಯಾಗಿದೆ. ಕ್ಷೇತ್ರ ಮತ್ತು ಉತ್ಪಾದನೆಯಲ್ಲಿ ಇದು ತೊಗರಿಯ ನಂತರ 2ನೇ ಸ್ಥಾನದಲ್ಲಿದೆ. ಇದನ್ನು ರಾಜ್ಯದಲ್ಲಿ ಪ್ರಧಾನವಾಗಿ ಚಳಿಗಾಲದ (ರಬಿ) ಬೆಳೆಯಾಗಿ ಬೆಳೆಯುತ್ತಾರೆ. ಕರ್ನಾಟಕದ ಚಳಿಗಾಲದ ಹವಾಮಾನ ಇದಕ್ಕೆ ಸೂಕ್ತವಾಗಿದೆ. ಮಳೆಯಾಶ್ರಿತ ಮತ್ತು ನೀರಾವರಿ ಎರಡು ಕ್ಷೇತ್ರಗಳಲ್ಲಿ ಇದನ್ನು ಬೆಳೆಯುತ್ತಾರೆ. ರಾಜ್ಯದಲ್ಲಿ ಉತ್ತರ ಮೈದಾನದ ಜಿಲ್ಲೆಗಳಲ್ಲಿ ಕಡಲೆಯ ಉತ್ಪಾದನೆಯು ಕೇಂದ್ರೀಕೃತಗೊಂಡಿರುವುದು ಕಂಡು ಬರುತ್ತದೆ. ಗುಲ್ಬರ್ಗಾ, ಯಾದಗಿರಿ, ಬಿಜಾಪುರ, ಧಾರವಾಡ, ಗದಗ, ಕೊಪ್ಪಳ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಕಾಣಬಹುದು. ಗುಲ್ಬರ್ಗಾ ಇದರ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಬೆಳಗಾವಿ, ಬೀದರ್, ಬಿಜಾಪುರ, ಧಾರವಾಡ ನಂತರದ ಸ್ಥಾನದಲ್ಲಿದೆ.

### ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಗಳು:

ಕರ್ನಾಟಕವು ಹಲವಾರು ಬಗೆಯ ವಾಣಿಜ್ಯ ಬಗೆಯ ಬೆಳೆಗಳನ್ನು ಉತ್ಪಾದಿಸುತ್ತದೆ. ಇಂತಹ ಕೆಲವು ವಾಣಿಜ್ಯ ಬೆಳೆಗಳು ರಾಜ್ಯದಲ್ಲಿ ಹಲವಾರು ಕೈಗಾರಿಕೆಗಳನ್ನು ಸಹ ಪೋಷಿಸುತ್ತವೆ. ಇವುಗಳು ಕೈಗಾರಿಕೆಗಳಿಗೆ ಮುಖ್ಯ ಕಚ್ಚಾ ವಸ್ತುಗಳಾಗಿರುತ್ತವೆ. ಇವು ಹೆಚ್ಚಿನ ಲಾಭದಾಯಕವಾಗಿವೆ. ರಾಜ್ಯದ ಹವಾಗುಣಕ್ಕೆ ತಕ್ಕಂತೆ ವಿವಿಧ ಪ್ರದೇಶದಲ್ಲಿ ವಿವಿಧ ರೀತಿಯ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹತ್ತಿ, ಕಬ್ಬು, ಹೊಗೆಸೊಪ್ಪು, ಹಿಪ್ಪುನೇರಳೆ, ಎಣ್ಣೆಕಾಳುಗಳು ಹಾಗೂ ಸಾಂಬಾರ್ ಪದಾರ್ಥಗಳು ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ.

### ಹತ್ತಿ:

ಭಾರತದ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಕರ್ನಾಟಕ ಕ್ಷೇತ್ರ ಹಾಗೂ ಉತ್ಪಾದನಾ ದೃಷ್ಟಿಯಿಂದ 8ನೇ ಸ್ಥಾನದಲ್ಲಿದೆ. ಇದು ಉಷ್ಣವಲಯದ ಬೆಳೆಯಾಗಿದ್ದು, ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ವ್ಯಾಪಕವಾಗಿ ವಿಸ್ತರಿಸಿರುವ ಕಪ್ಪು ಮಣ್ಣು ಹತ್ತಿ ಬೇಸಾಯಕ್ಕೆ ಅತ್ಯಂತ ಸೂಕ್ತವಾದುದು. ಹತ್ತಿಯು ಸಾಮಾನ್ಯವಾಗಿ ಮುಂಗಾರಿನಲ್ಲಿ ಬೆಳೆಯುವ ಬೆಳೆ. ವರ್ಷದಲ್ಲಿ ಸುಮಾರು 3ರಿಂದ 3.5 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆಯಲಾಗುವುದು. ಕರ್ನಾಟಕವು ಅಂದಾಜಾಗಿ ಭಾರತದ ಹತ್ತಿಯ ಕ್ಷೇತ್ರದ 4.2%ರಷ್ಟನ್ನು ಶೇ.3ರಷ್ಟು ಉತ್ಪಾದನೆ ಮಾಡುತ್ತಿದೆ. ಮಾನ್ಸೂನ್ ಮಳೆಯ ಅನಿಶ್ಚಿತತೆಯಿಂದ ಇದರ ಪ್ರದೇಶ ಕಡಿಮೆಯಾಗುತ್ತಿದೆ.

ಕರ್ನಾಟಕದ ಉತ್ತರ ಭಾಗವು ಹತ್ತಿ ಉತ್ಪಾದನೆ ಹೆಸರುವಾಸಿಯಾಗಿದೆ. ಕಪ್ಪು ಮಣ್ಣು ಹೊಂದಿರುವ ಭೂಮಿಯಲ್ಲಿ ಯಥೇಚ್ಛವಾಗಿ ಬೆಳೆಯಲಾಗುತ್ತಿದೆ. ಗುಲ್ಬರ್ಗಾ, ಹಾವೇರಿ, ಧಾರವಾಡ, ಗದಗ, ಮಯಸೂರು, ದಾವಣಗೆರೆ ಹತ್ತಿಯ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿವೆ.

### ಕಬ್ಬು:

ಕರ್ನಾಟಕವು ಭಾರತದಲ್ಲಿ ಕಬ್ಬಿನ ಕ್ಷೇತ್ರ ಹಾಗೂ ಉತ್ಪಾದನೆಗಳ ಎರಡರಲ್ಲೂ 4ನೇ ಸ್ಥಾನದಲ್ಲಿದೆ. ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾದ ಇದನ್ನು ವಿವಿಧ ಮಣ್ಣುಗಳಲ್ಲಿ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ 3.1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಕರ್ನಾಟಕದಲ್ಲಿ ಕರಾವಳಿ ಮೈದಾನ, ಮಲೆನಾಡು ಮತ್ತು ಕೇಂದ್ರದ ಪ್ರಮುಖ ಎರಡು ಕ್ಷೇತ್ರದಲ್ಲಿ ಕಬ್ಬಿನ ಹಂಚಿಕೆ ಕೇಂದ್ರೀಕೃತವಾಗಿದೆ. ಅವುಗಳು,

1) ಉತ್ತರದಲ್ಲಿನ ಕೃಷ್ಣಾ ನದಿ ಮೈದಾನ
2) ಕಾವೇರಿ ಕಣಿವೆ ಜಿಲ್ಲೆಗಳು

1960ನೇ ದಶಕದ ಆಸುಪಾಸು ಕಬ್ಬಿನ ಕೈಗಾರಿಕೆ ಮತ್ತು ಉತ್ಪಾದನಾ ವಲಯಗಳು ಮಂಡ್ಯ, ಮೈಸೂರು ಜಿಲ್ಲೆಗಳಿಗೆ ಸೀಮಿತವಾಗಿದ್ದವು. ನಂತರದಲ್ಲಿ ಕೃಷ್ಣಾ ಮೇಲ್ದಂಡೆ, ಆಲಮಟ್ಟಿ, ಮಲಪ್ರಭಾ, ನಾರಾಯಣಪುರ ಯೋಜನೆಗಳಿಂದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯದಿಂದ ಕಬ್ಬು ಉತ್ಪಾದನೆ ಆರಂಭವಾಯಿತು. ಕರ್ನಾಟಕವು ಭಾರತದಲ್ಲಿ ಕಬ್ಬು ಉತ್ಪಾದನೆಯಲ್ಲಿ ಶೇ.7.54ರಷ್ಟು ಉತ್ಪಾದಿಸುತ್ತಿದ್ದು, ಒಟ್ಟು ಕ್ಷೇತ್ರದ ಶೇ.6.13ರಷ್ಟು ಕ್ಷೇತ್ರವನ್ನು ಹೊಂದಿದೆ. ಬೆಳಗಾವಿಯು ರಾಜ್ಯದಲ್ಲಿ ಅತಿ ಹೆಚ್ಚು ಕಬ್ಬನ್ನು ಉತ್ಪಾದಿಸುವ ಜಿಲ್ಲೆಯಾಗಿದೆ. ನಂತರದಲ್ಲಿ ಬಾಗಲಕೋಟೆ.

### ಹೊಗೆಸೊಪ್ಪು:

ಭಾರತದಲ್ಲಿ ಹೊಗೆಸೊಪ್ಪಿನ ಬೇಸಾಯವು ಆರಂಭಗೊಂಡ ಸ್ಥಳಗಳಲ್ಲಿ ಕರ್ನಾಟಕವು ಒಂದು. ಪೋರ್ಚುಗೀಸರು 17ನೇಯ ಶತಮಾನದಲ್ಲಿ ಭಾರತಕ್ಕೆ ಹೊಗೆಸೊಪ್ಪು ಪರಿಚಯಿಸಿದರು. ಇದು ನಿಕೋಷಿಯಾನ ವರ್ಗಕ್ಕೆ ಸೇರಿದ ಸಸ್ಯವಾಗಿದೆ. ಕ್ಷೇತ್ರದಲ್ಲಿ ಮತ್ತು ಉತ್ಪಾದನೆಯಲ್ಲಿ ಕರ್ನಾಟಕ ಮೊದಲನೆಯ ಸ್ಥಾನದಲ್ಲಿದೆ. ರಾಜ್ಯವು ವಿವಿಧ ಉದ್ದೇಶಗಳಿಗಾಗಿ ಬಳಸುವ ಬೀಡಿ ಹೊಗೆಸೊಪ್ಪು, ಅಗಿಯಲು ಬಳಸುವ ಹೊಗೆಸೊಪ್ಪು, ಸಿಗರೇಟ್ ತಯಾರಿಕೆಯಲ್ಲಿ ಬಳಸುವ ಹೊಗೆಸೊಪ್ಪನ್ನು ಮೊದಲಾದ ಬಗೆಯ ಹೊಗೆಸೊಪ್ಪು ಉತ್ಪಾದಿಸಲಾಗುವುದು.

ರಾಜ್ಯದಲ್ಲಿ ಹೊಗೆಸೊಪ್ಪಿನ ಉತ್ಪಾದನೆ ಪಶ್ಚಿಮಘಟ್ಟಗಳು ಪೂರ್ವದ ಅಂಚಿನಲ್ಲಿರುವ ಅರೆಮಲೆನಾಡು ವಲಯದಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ. ಈ ವಲಯವು 30ರಿಂದ 40 ಕಿ.ಮೀ.ಗಳಷ್ಟು ಅಗಲವಾಗಿದ್ದು, ದಕ್ಷಿಣದಲ್ಲಿ

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಮೈಸೂರು, ಚಾಮರಾಜನಗರ, ಹಾಸನ, ಶಿವಮೊಗ್ಗ, ಕೊಡಗಿನಲ್ಲಿ ವರ್ಜೀನೀಯ ಹೊಗೆಸೊಪ್ಪು ಉತ್ಪಾದಿಸಲಾಗುತ್ತಿದೆ. ಕರ್ನಾಟಕದ ಅರೆಮಲೆನಾಡು ವಲಯದ ಉತ್ತರ ಭಾಗ ಬೀಡಿ ಹೊಗೆಸೊಪ್ಪು ಉತ್ಪಾದನೆಗೆ ಪ್ರಸಿದ್ದಿ ಪಡೆದಿದೆ. ಬೆಳಗಾಇಯ ನಿಪ್ಪಾಣಿ ಬೀಡಿ ಹೊಗೆಸೊಪ್ಪು ಮಾರುಕಟ್ಟೆಯ ಹೆಸರಾದ ಸ್ಥಳ. ದಕ್ಷಿಣ ಕನ್ನಡ ಜಿಲ್ಲೆಯ ಅಗಿಯುವ ಹೊಗೆಸೊಪ್ಪಿಗೆ ಹೆಸರುವಾಸಿಯಾಗಿದೆ.

ಮಾಹಿತಿಗಾಗಿ – (ಪ್ಲೊಕ್ಯೊರಿಂಗ್, ವರ್ಜೀನೀಯಾ ಹೊಗೆಸೊಪ್ಪನ್ನು ಬೆಳೆದ ನಂತರ ಎಲೆಗಳನ್ನು ಮುಂದುವರಿದು ಕಡ್ಡಿಗೆ ಕಟ್ಟಿ ವಿಶೇಷವಾಗಿ ನಿರ್ಮಿಸಿದ ಬ್ಯಾರೆನ್‌ಗಳಲ್ಲಿ ನೇತು ಹಾಕಿ ಹೊರಗಿಂದ ಸಂಪರ್ಕ ಹೊಂದಿದ ಒಲೆಗಳಲ್ಲಿ ಬೆಂಕಿ ಹಾಕಿ ಪೈಪುಗಳನ್ನು ಬಿಸಿ ಮಾಡಲಾಗುವುದು. ಇದರಿಂದ ಬ್ಯಾರೆನ್‌ನಲ್ಲಿ ಬಿಸಿ ಹೆಚ್ಚಾಗಿ ಎಲೆಗಳು ಒಣಗುತ್ತವೆ. ಈ ವಿಧಾನಕ್ಕೆ ಪ್ಲೊಕ್ಯೋರಿಂಗ್ ಎನ್ನುವರು. ಇದನ್ನೇ ಸೂರ್ಯನ ಶಾಖದಲ್ಲಿ ಒಣಗಿಸಿದರೆ ಸನ್‌ಕ್ಯೂರಿಂಗ್ ಎನ್ನುವರು.)

## ಕರ್ನಾಟಕ ತೋಟಗಾರಿಕೆ ಬೆಳೆಗಳು

**ಕಾಫಿ:**

ಇದು ಕರ್ನಾಟಕದ ಅತ್ಯಂತ ಪ್ರತಿಷ್ಠಿತವಾದ ತೋಟಗಾರಿಕೆ ಬೆಳೆ. ಕರ್ನಾಟಕವು ದೇಶದ ಒಟ್ಟು ಕಾಫಿಯ ಕ್ಷೇತ್ರದ ಶೇ.50ರಷ್ಟನ್ನು ಒಳಗೊಂಡಿದ್ದು, ಶೇ.70ರಷ್ಟು ಉತ್ಪಾದಿಸುತ್ತದೆ. ಇದು ರಾಜ್ಯದ ಅತಿ ಮುಖ್ಯ ಪಾನೀಯ ಬೆಳೆಯಾಗಿದ್ದು, ದೇಶದ ರಫ್ತುವಿನಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕರ್ನಾಟಕವು ಅರೇಬಿಕಾ ಮತ್ತು ರೋಬಸ್ಟಾ ಎಂಬ ಎರಡು ಪ್ರಭೇದದ ಕಾಫಿಯನ್ನು ಉತ್ಪಾದಿಸುತ್ತದೆ. ಅರೇಬಿಕಾ ಕಾಫಿ ರಾಜ್ಯದಲ್ಲಿ ಅತೀ ಮುಖ್ಯವಾಗಿದ್ದು, ಉತ್ತಮ ದರ್ಜೆಯ ಕಾಫಿಯಾಗಿದೆ. ಇದರ ಉತ್ಪಾದನೆಯು ಒಟ್ಟು ಕಾಫಿ ಉತ್ಪಾದನೆಯ ಶೇ.52ರಷ್ಟಿದೆ. 1670ರ ಸಮಯದಲ್ಲಿ ಚಿಕ್ಕಮಗಳೂರಿನಲ್ಲಿ ಪ್ರಥಮ ಬಾರಿಗೆ ಇಥಿಯೋಪಿಯಾದಿಂದ ತಂದು ಕಾಫಿ ಸಸಿ ನೆಡಲಾಯಿತು.

**ಹಂಚಿಕೆ:**

ಕಾಫಿಯು ಚಿಕ್ಕಮಗಳೂರು, ಕೊಡಗು, ಜಿಲ್ಲೆಗಳ ಮಾದರಿ ಬೆಳೆಯಾಗಿದೆ. ಕೊಡಗು, ಚಿಕ್ಕಮಗಳೂರು, ಹಾಸನ ಹಾಗೂ ಮೈಸೂರು ಜಿಲ್ಲೆ, ಮಲೆನಾಡಿನಲ್ಲಿ ಕಾಫಿಯ ಮೊದಲ ಸ್ಥಾನದ ಬೆಳೆಯಾಗಿದೆ. ರಾಜ್ಯದಲ್ಲಿ ಕೊಡಗು ಪ್ರಥಮ ಸ್ಥಾನದಲ್ಲಿದ್ದು, ದೇಶದಲ್ಲಿ ಕರ್ನಾಟಕ ಕಾಫಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

**ತೆಂಗು:**

ಕರಾವಳಿ ಮೈದಾನ ಮತ್ತು ದಕ್ಷಿಣದ ಮೈದಾನಗಳಲ್ಲಿ ಈ ಬೆಳೆ ಅತ್ಯಂತ ಪ್ರಸಿದ್ಧಿಯಾಗಿದೆ. ಇದು ಉಷ್ಣವಲಯದ ಬಹು ವಾರ್ಷಿಕ ವೃಕ್ಷವಾಗಿದ್ದು ಕರ್ನಾಟಕವು ಭಾರತದ ಕೆಲವೇ ರಾಜ್ಯಗಳಲ್ಲಿ ಇದನ್ನು ಬೆಳೆಯುವ ರಾಜ್ಯಗಳಲ್ಲಿ ಒಂದಾಗಿದೆ. ತೆಂಗಿನ ಎಣ್ಣೆಯನ್ನು ಅಡುಗೆ, ಸೋಪ್ ತಯಾರಿಕೆಯಲ್ಲಿ ಬಳಸುವರು. ತೆಂಗು ಬೆಳೆಯಲ್ಲಿ ಕರ್ನಾಟಕವು ಭಾರತದಲ್ಲಿ ಕೇರಳ ಮತ್ತು ತಮಿಳುನಾಡಿನ ನಂತರ 3ನೇ ಸ್ಥಾನದಲ್ಲಿದೆ.

**ಹಂಚಿಕೆ:**

ತುಮಕೂರು, ಹಾಸನ, ಚಿಕ್ಕಮಗಳೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಉಡುಪಿ, ದಾವಣಗೆರೆ ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ತುಮಕೂರು ರಾಜ್ಯದಲ್ಲಿ ತೆಂಗು ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

**ಅಡಿಕೆ:**

ಇದು ಪ್ರಮುಖ ವಾಣಿಜ್ಯ ಬೆಳೆಗಳಲ್ಲೊಂದು. ಇದು ಔಷಧಿ ಗುಣವನ್ನು ಹೊಂದಿದ್ದಲ್ಲದೇ, ಧಾರ್ಮಿಕ ಕಾರ್ಯಗಳಲ್ಲಿ ಅವಶ್ಯಕವಾಗಿ ಬಳಸಲ್ಪಡುವ ವಸ್ತುವಾಗಿದೆ. ಕರ್ನಾಟಕವು ದೇಶದಲ್ಲಿ ಅಡಿಕೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಭಾರತದ ಒಟ್ಟು ಅಡಿಕೆ ಉತ್ಪಾದನೆಯಲ್ಲಿ ಶೇ.41ರಷ್ಟು ಕರ್ನಾಟಕ ಉತ್ಪಾದಿಸುತ್ತಿದೆ. ರಾಜ್ಯದಲ್ಲಿ ಶಿವಮೊಗ್ಗ ಜಿಲ್ಲೆಯು ಅಡಿಕೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

**ಹಂಚಿಕೆ:**

ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ, ತುಮಕೂರು, ಮುಂತಾದ ಜಿಲ್ಲೆಗಳಲ್ಲಿ ಅಡಿಕೆ ಬೆಳೆಯಲಾಗುವುದು. ಇತ್ತೀಚೆಗೆ ಅಡಿಕೆಯಿಂದ ಚಹಾ ತಯಾರಿಕೆ ಮಾಡಿ ರಾಷ್ಟ್ರೀಯ ಮನ್ನಣೆ ಗಳಿಸಿದೆ.

**ಗೋಡಂಬಿ:**

ಗೋಡಂಬಿಯನ್ನು ಅಡಿಕೆ ಮತ್ತು ಆಲ್ಕೋಹಾಲಿಕ್ ಪಾನೀಯ ತಯಾರಿಕೆಯಲ್ಲಿ ಬಳಸಲಾಗುತ್ತಿದೆ. ಇದನ್ನು ತೀರ ಪ್ರದೇಶದಲ್ಲಿ ಕಡಲ ಕೊರೆತ ತಪ್ಪಿಸಲು ಪರ್ಯಾಯವಾಗಿ ಬೆಳೆಯಲಾಗುವುದು. ಇದು ಉಪ್ಪು ನೀರಿನ ಜೌಗು ಭೂಮಿಯಲ್ಲಿ ಸಹ ಬೆಳೆಯುವ ಗುಣ ಹೊಂದಿದೆ. ತೀರ ಪ್ರದೇಶದ ಆರ್ದ್ರ ವಾಯುಗುಣ ಇದಕ್ಕೆ ಅತೀ ಸೂಕ್ತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿ ಅತಿ ಹೆಚ್ಚು ಗೋಡಂಬಿಯನ್ನು ಉತ್ಪಾದಿಸುತ್ತಿದ್ದು, ಉಡುಪಿ ಜಿಲ್ಲೆ 2ನೇ ಸ್ಥಾನದಲ್ಲಿದೆ.

**ಕೈ ತೋಟಗಾರಿಕೆ:**

ಕರ್ನಾಟಕವು ಭಾರತದಲ್ಲಿ ಕೈ ತೋಟಗಾರಿಕೆ ಬೆಳೆಗಳಿಗೆ ಅತ್ಯಂತ ಪ್ರಸಿದ್ಧಿ ಪಡೆದಿರುವ ರಾಜ್ಯಗಳಲ್ಲಿ ಒಂದು. ರಾಜ್ಯದ ಒಟ್ಟು ಸಾಗುವಳಿ ಪ್ರದೇಶದ ಶೇ.14.4ರಷ್ಟು ಈ ಬೆಳೆಗಳ ಉತ್ಪಾದನೆಗೆ ಒಳಪಟ್ಟಿದೆ. ಇದರಿಂದ ರಾಜ್ಯವು ತನ್ನ ಒಟ್ಟು ವ್ಯವಸಾಯೋತ್ಪನ್ನಗಳ ಆದಾಯದ ಶೇ.40ರಷ್ಟನ್ನು ಪಡೆಯುತ್ತಿದೆ.

ಕೈ ತೋಟಗಾರಿಕೆ ಅಂದರೆ 'ಹಾರ್ಟಿಕಲ್ಚರ್' ಎಂಬ ಪದವು ಎಲ್ಲಾ ಬಗೆಯ ಹಣ್ಣು ತರಕಾರಿ ಹಾಗೂ ಪುಷ್ಪ ಕೃಷಿಯನ್ನು ಒಳಗೊಂಡಿರುತ್ತದೆ. ಇವುಗಳು ಅಲ್ಪಾವಧಿ ಬೆಳೆಯಾಗಿದ್ದು, ಕೆಲವೇ ತಿಂಗಳಲ್ಲಿ ಬೆಳೆ ಬರುವುದರಿಂದ ಬೇಸಾಯಗಾರನ ಜೀವನದಲ್ಲಿ ಕೈ ತೋಠಗಾರಿಕೆಯು ಅತ್ಯಂತ ಮಹತ್ವಪೂರ್ಣವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕೈ ತೋಟಗಾರಿಕೆ, ಬೆಳೆಗಳ ಕ್ಷೇತ್ರ ಹಾಗೂ ಉತ್ಪಾದನೆಯಲ್ಲಿ ಗಮನಾರ್ಹದ ಅಭಿವೃದ್ಧಿ ಕಂಡು ಬರುತ್ತಿದ್ದು, ಈ ಬೆಳವಣಿಗೆಯನ್ನೇ 'ಸುವರ್ಣ ಕ್ರಾಂತಿ' ಎನ್ನುವರು.

ಕರ್ನಾಟಕದ ಕೈ ತೋಟಗಾರಿಕೆ ಬೆಳೆಗಳ ಒಟ್ಟು ಕ್ಷೇತ್ರ 17.64 ಲಕ್ಷ ಹೆಕ್ಟೇರ್ ಮತ್ತು ವಾರ್ಷಿಕ ಉತ್ಪಾದನೆ 136.64 ಲಕ್ಷ ಟನ್ ಒಳಗೊಂಡಿದೆ. ರಾಜ್ಯದ ಒಟ್ಟು ಕೈ ತೋಟಗಾರಿಕೆಯಲ್ಲಿ ಶೇ.40ರಷ್ಟು ಹಣ್ಣುಗಳ ಉತ್ಪಾದನೆ ಒಳಗೊಂಡಿದ್ದು, ಶೇ.56.7ರಷ್ಟು ತರಕಾರಿ ಉತ್ಪಾದನೆ ಹೊಂದಿದೆ. ಕೇವಲ 3.3ರಷ್ಟು ಪುಷ್ಪ ಕೃಷಿ ಹೊಂದಿದೆ.

**ಹಣ್ಣುಗಳು:**

ರಾಜ್ಯವು ಹೊಂದಿರುವ ವಾಯುಗುಣದಿಂದ ಕೇವಲ ಉಷ್ಣವಲಯ ಹಣ್ಣುಗಳನ್ನು ಬೆಳೆಯಲು ಸಹಕಾರಿಯಾಗಿದೆ. ಭಾರತದ ಹಣ್ಣಿನ ಬೇಸಾಯದ ಶೇ.83ರಷ್ಟು ಕ್ಷೇತ್ರ ಹೊಂದಿದ್ದು, ಶೇ.12ರಷ್ಟು ಹಣ್ಣು ಉತ್ಪಾದಿಸುತ್ತಿದೆ. ಹಣ್ಣಿನ ಉತ್ಪಾದನೆಯಲ್ಲಿ ಕರ್ನಾಟಕವು 3ನೇ ಸ್ಥಾನದಲ್ಲಿದೆ. ಬಾಳೆಹಣ್ಣು ರಾಜ್ಯವು ಉತ್ಪಾದಿಸುವ ಹಣ್ಣುಗಳಲ್ಲಿ ಅತೀ ಪ್ರಮುಖವಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ಮೈಸೂರು ಜಿಲ್ಲೆಗಳು ಮಾವು ಉತ್ಪಾದನೆಗೆ ಪ್ರಸಿದ್ಧಿ ಪಡೆದಿವೆ. ಉತ್ತರ ಕರ್ನಾಟಕದಲ್ಲಿ ನಿಂಬೆಹಣ್ಣನ್ನು ಉತ್ಪಾದಿಸಲಾಗುತ್ತಿದೆ. ಕೊಡಗು ರಾಜ್ಯದಲ್ಲಿ ಕಿತ್ತಳೆ ಉತ್ಪಾದನೆಗೆ ಹೆಸರುವಾಸಿಯಾಗಿದೆ.

**ಪುಷ್ಪ ಬೆಳೆ / ಪ್ಲೋರಿಕಲ್ಚರ್:**

ಪುಷ್ಪ ಬೇಸಾಯವು ಕೈತೋಟಗಾರಿಕೆಯ ಪ್ರಮುಖ ಬೆಳೆಯಾಗಿದ್ದು, ಸ್ಥಳೀಯವಾಗಿ ಬಳಸಲ್ಪಟ್ಟ ಬಹುಪಾಲು ರಫ್ತಾಗುತ್ತಿದೆ. ಬೆಂಗಳೂರು ಪುಷ್ಪ ಮಾರುಕಟ್ಟೆಗೆ ಹೆಸರಾದ ನಗರ. ರಾಜ್ಯವು ಪುಷ್ಪ ಕೃಷಿಯ ಡಚ್ ಮತ್ತು ಪುಷ್ಪ ಕೃಷಿಯಲ್ಲಿ ಮೊದಲನೆಯ ಸ್ಥಾನದಲ್ಲಿದ್ದು ಒಟ್ಟು ಹೂವಿನ ಶೇ.75ರಷ್ಟನ್ನು ರಾಜ್ಯದಲ್ಲಿ ಬೆಳೆಯಲಾಗುತ್ತಿದೆ.

**ಕೈ ತೋಟಗಾರಿಕೆ ಅಭಿವೃದ್ಧಿ ಯೋಜನೆಗಳು:**

ಕರ್ನಾಟಕ ಸರ್ಕಾರವು ಕೈ ತೋಟಗಾರಿಕೆ ಬೇಸಾಯವನ್ನು ಅಭಿವೃದ್ಧಿಪಡಿಸಲು ಹಾಗೂ ರೈತರು ಕೈ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತೇಜನವನ್ನು ನೀಡಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದೆ. ಅವುಗಳು,

* ಹಾವೇರಿಯ ದೇವಿ ಹೊಸೂರು ಗ್ರಾಮದಲ್ಲಿ ತೋಟಗಾರಿಕೆಯ ಕಾಲೇಜು ಸ್ಥಾಪಿಸಲು ಸರ್ಕಾರ ಅನುಮೋದಿಸಿದೆ.
* ಬಾಗಲಕೋಟೆಯಲ್ಲಿ ಹಾರ್ಟಿಕಲ್ಚರ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.
* ಇದಕ್ಕಿಂತ ಮೊದಲೇ 1968ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹಾರ್ಟಿಕಲ್ಚರ್ ರೀಸರ್ಚ್ (ಐಐಹೆಚ್‌ಆರ್) ಸಂಸ್ಥೆಯನ್ನು ಸ್ಥಾಪಿಸಲಾಗಿದೆ.
* ಗಿಡಗಳನ್ನು ಬೆಳೆಸಿ ರೈತರಿಗೆ ವಿತರಿಸುವ ಕಾರ್ಯಕ್ರಮ.
* ರಾಜ್ಯದಲ್ಲಿ ತೋಟಗಾರಿಕೆಗೆ ಪ್ರತ್ಯೇಕ ಇಲಾಖೆ ಇದ್ದು 411 ಫಾರ್ಮ್‌ಗಳು ಹಾಗೂ ಸಸ್ಯೋದ್ಯಾನಗಳಿವೆ.
* ಕರ್ನಾಟಕ ರಾಜ್ಯ ಕೈ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯು 'ಕೈ ತೋಟಗಾರಿಕೆ ಫಾರ್ಮ್‌ಗಳನ್ನು ಅಭಿವೃದ್ಧಿ ಪಡಿಸಿ ರೈತರಿಗೆ ಸಹಾಯ ನೀಡುವ ಹೊಣೆಗಾರಿಕೆ ನಿರ್ವಹಿಸುತ್ತದೆ.'
* ಕೈ ತೋಟಗಾರಿಕೆ ಉತ್ಪಾದಕರ ಸಹಕಾರ ಮಾರುಕಟ್ಟೆ ಮತ್ತು ಸಂಸ್ಕರಣಾ ಮಂಡಳಿ (ಹಾಪ್‌ಕಾಮ್ಸ್) ಸುಮಾರು 326 ಕೇಂದ್ರಗಳನ್ನು ಹೊಂದಿದ್ದು ಸ್ಥಳೀಯ ಮಾರುಕಟ್ಟೆಗಳನ್ನು ಹೊಂದಿವೆ.
* ಕೇಂದ್ರ ಸರ್ಕಾರವು ಕೈ ತೋಟಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್ (ಎನ್‌ಹೆಚ್‌ಎಂ) ಯೋಜನೆಯನ್ನು 10ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಷ್ಠಾನಗೊಳಿಸಿದ್ದು.
* ಇದರ ಫಲವಾಗಿ ರಾಜ್ಯದಲ್ಲಿ ಮೈಸೂರು, ಹಾಸನ, ಕೋಲಾರ, ಬೆಳಗಾವಿ, ರಾಮನಗರ, ಮುಂತಾದ ಜಿಲ್ಲೆಗಳಲ್ಲಿ ಕೈ ತೋಟಗಾರಿಕೆ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ.
* ದ್ರಾಕ್ಷಾರಸ ನೀತಿ ದ್ರಾಕ್ಷಿ ಬೆಳೆಗೆ ತುಂಬಾ ಪ್ರೋತ್ಸಾಹಕರವಾಗಿದೆ.
* ಔಷಧಿಯ ಸಸ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ನ್ಯಾಷನಲ್ ಮಿಷನ್ ಆಫ್ ಮೆಡಿಸಿನ್ ಪ್ಲಾಂಟ್ಸ್ ಯೋಜನೆಯನ್ನು ಜಾರಿಗೊಳಿಸಲಾಗಿದೆ.

## ಕರ್ನಾಟಕದ ಖನಿಜ ಸಂಪನ್ಮೂಲಗಳು

ಕರ್ನಾಟಕವು ಪುರಾತನ ಗೊಂಡ್ವಾನ ಭೂ ರಾಶಿಯ ಭಾಗವಾಗಿದ್ದು ಹಲವಾರು ಬಗೆಯ ಖನಿಜ ಸಂಪನ್ಮೂಲಗಳಿಗೆ ಪ್ರಸಿದ್ಧಿಯನ್ನು ಹೊಂದಿದೆ. ರಾಜ್ಯದಲ್ಲಿ 1880ರಲ್ಲಿ ಭೂ ವಿಜ್ಞಾನ ಸರ್ವೇಕ್ಷಣಾ ಇಲಾಖೆ (ಜಿಯೋಲಜಿ ಸರ್ವೇ ಆಫ್ ಇಂಡಿಯಾ) ಪ್ರಾರಂಭವಾಯಿತು. ಇದು ರಾಜ್ಯದಲ್ಲಿ ವ್ಯಾಪಕ ಖನಿಜ ಶೋಧನಾ ಸರ್ವೇಕ್ಷಣಾ ಕೈಗೊಂಡು ಅಪಾರ ಪ್ರಮಾಣದ ಖನಿಜ ಇರುವಿಕೆಯನ್ನು ಗುರುತಿಸಿತು. ರಾಜ್ಯವು ಉತ್ತಮವಾದ ರಸ್ತೆ ಮತ್ತು ರೈಲು ಸಂಪರ್ಕ ಹೊಂದಿದ್ದು ಉತ್ತಮ ಹಡಗು ಬಂದರುಗಳನ್ನು ಹೊಂದಿದೆ. ಇದರಿಂದ ಅದಿರು ರಫ್ತಿಗೆ ತುಂಬಾ ಸಹಕಾರಿಯಾಗಿದೆ.

### ಕರ್ನಾಟಕದಲ್ಲಿ ದೊರೆಯುವ ಮುಖ್ಯ ಖನಿಜಗಳು:

### ಚಿನ್ನ:

ರಾಜ್ಯದಲ್ಲಿ ಖನಿಜಗಳನ್ನು ಅಗಾಧ ಪ್ರಮಾಣದಲ್ಲಿ ಉತ್ಪಾದಿಸುವ ಗಣಿಗಾರಿಕೆ ಉದ್ಯಮವು ಕೋಲಾರದ ಚಿನ್ನದ ಗಣಿಗಳಿಂದ ಚಿನ್ನದ ಉತ್ಪಾದನೆಯೊಂದಿಗೆ ಆರಂಭವಾಯಿತು. ಇದರಿಂದಲೇ ಕರ್ನಾಟಕ ಚಿನ್ನದ ನಾಡು ಎಂದು ಖ್ಯಾತಿಯಾಯಿತು. ಪ್ರಸಕ್ತವಾಗಿ ರಾಯಚೂರು ಜಿಲ್ಲೆಯ ಹಟ್ಟಿ ಭಾರತದ ಅತಿ ದೊಡ್ಡ ಚಿನ್ನದ ಉತ್ಪಾದನೆ ಗಣಿಯಾಗಿದೆ. ಅತ್ಯುತ್ತಮ ಗುಣಮಟ್ಟದ ಚಿನ್ನವನ್ನು ಉತ್ಪಾದಿಸುತ್ತದೆ. ವಾರ್ಷಿಕ ಸುಮಾರು 3000 ದಿಂದ 3300 ಕಿಲೋ ಅಷ್ಟು ಚಿನ್ನ ಉತ್ಪಾದಿಸಲಾಗುತ್ತದೆ. ಇದಲ್ಲದೆ ಗದುಗಿನ ಮುಳಗುಂದ ಮತ್ತು ಕಪ್ಪತ್ತಗುಡ್ಡ ಹಾಸನದಲ್ಲಿಯೂ ಚಿನ್ನವನ್ನು ಉತ್ಪಾದಿಸಲಾಗುತ್ತಿದೆ. ಭಾರತದಲ್ಲಿ ಕರ್ನಾಟಕ ಚಿನ್ನ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ.

### ಕಬ್ಬಿಣದ ಅದಿರು:

ಕರ್ನಾಟಕವು ಕಬ್ಬಿಣದ ಅದಿರಿನ ಉತ್ಪಾದನೆಗೆ ಅತ್ಯಂತ ಪ್ರಸಿದ್ಧ ಪಡೆದಿದೆ. ಕಬ್ಬಿಣದ ಅದಿರಿನ ನಿಕ್ಷೇಪ ಮತ್ತು ಉತ್ಪಾದನೆ ಎರಡರಲ್ಲೂ ರಾಜ್ಯವು ಮೊದಲನೇ ಸ್ಥಾನದಲ್ಲಿದೆ. ರಾಜ್ಯವು ಸುಮಾರು 3446 ದಶಲಕ್ಷ ಟನ್ ಉತ್ತಮ ದರ್ಜೆಯ ಅದಿರನ್ನು ಹೊಂದಿದೆ ಎಂದು ಅಂದಾಜು ಮಾಡಲಾಗಿದೆ. ರಾಜ್ಯದಲ್ಲಿ ದೊರೆಯುವ ಶೇ.80

ಅದಿರು ಮ್ಯಾಗ್ನಟೈಟ್ ವಿಧದಾಗಿದೆ. ಭಾರತದ ಒಟ್ಟು ಉತ್ಪಾದನೆ ಶೇ.26ರಷ್ಟು ಕರ್ನಾಟಕದಲ್ಲಿ ಉತ್ಪಾದಿಸಲಾಗುವುದು. ಕಬ್ಬಿಣದ ಅದಿರಿನ ಮೂರು ಮುಖ್ಯ ವಲಯಗಳು ಈ ಕೆಳಗಿನಂತಿವೆ.

* ಬಳ್ಳಾರಿ, ಹೊಸಪೇಟೆ ಪ್ರದೇಶ: ರಾಜ್ಯದಲ್ಲಿ ಅತಿ ಹೆಚ್ಚು ಅದಿರನ್ನು ಉತ್ಪಾದಿಸುವ ವಲಯ ಇದಾಗಿದೆ. ಇಲ್ಲಿನ ಸಂಡೂರಿನಲ್ಲಿ 1947ರಲ್ಲಿಯೇ ಭೂ ವಿಜ್ಞಾನ ಸರ್ವೇಕ್ಷಣಾ ಇಲಾಖೆ ಉತ್ತಮ ದರ್ಜೆ ಅದಿರನ್ನು ಶೋಧಿಸಿತ್ತು. ದೋಣಿಮಲೈ, ದೇವಾದ್ರಿ, ಕುಮಾರಸ್ವಾಮಿ ಬೆಟ್ಟ, ಕಣಿವೆಹಳ್ಳ, ರಾಮದುರ್ಗ ಮತ್ತು ತಿಮ್ಮಪ್ಪನ ಗುಂಡಿ ಈ ವಲಯದಲ್ಲಿನ ಪ್ರಮುಖ ಅದಿರು ಕೇಂದ್ರಗಳು ಇವೆ.
* ಚಿಕ್ಕ ಮಂಗಳೂರು ಜಿಲ್ಲೆ: ರಾಜ್ಯದ ಕಬ್ಬಿಣದ ಅದಿರಿನ ನಿಕ್ಷೇಪದಲ್ಲಿ ದೊರೆಯುವುದರಲ್ಲಿ ಚಿಕ್ಕ ಮಂಗಳೂರು 2ನೇಯದು. ಬಾಬಾಬುಡನ್‌ಗಿರಿ ಬೆಟ್ಟ, ಕಮ್ಮಣಗುಂಡಿ, ಕುದುರೆಮುಖ, ಗಂಗಾಮೂಲ, ಕಲ್ಪತಗಿರಿ, ಜೇನು ಸುರಿಗುಡ್ಡ ಮೊದಲಾದ ಸ್ಥಳಗಳಲ್ಲಿ ಅದಿರನ್ನು ಶೋಧಿಸಲಾಗಿದೆ. ಬಾಬಾಬುಡನ್‌ಗಿರಿ ಬೆಟ್ಟ ಇದು ಕರ್ನಾಟಕದಲ್ಲಿ ಅತೀ ಎತ್ತರವಾದ ಬೆಟ್ಟ ಶ್ರೇಣಿ. ಈ ಬೆಟ್ಟಗಳ ದಕ್ಷಿಣ ಭಾಗದಲ್ಲಿ ಮುಳ್ಳಯನಗಿರಿ ಶಿಖರ ಇದೆ. 30 ಕಿ.ಮೀ. ವಿಸ್ತಾರವಾದ ಮ್ಯಾಗ್ನಟೈಟ್ ಮತ್ತು ಹೆಮಟೈಟ್ ದರ್ಜೆಯ ಅದಿರನ್ನು ಹೊಂದಿದೆ. ಕೆಮ್ಮಣ್ಣಗುಂಡಿಯು ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗೆ ಅದಿರನ್ನು ಪೂರೈಸುತ್ತಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿದ್ದು ಮಾನ್ಯ ಸರ್ವೋಚ್ಚ ನ್ಯಾಯಾಲಯ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಆದೇಶಿಸಿದೆ. ಇದು ಕಬ್ಬಿಣದ ಅದಿರು ನಿಕ್ಷೇಪ ಮತ್ತು ಉತ್ಪಾದನೆಯಲ್ಲಿ ರಾಜ್ಯದ 3ನೇ ವಲಯ. ಪ್ರಮುಖ ಕೇಂದ್ರಗಳು ವಜ್ರ, ಕುದುರೆಕಣಿವೆ, ಲಕ್ಕಿಹಳ್ಳಿ, ಕೆಂಕರೆ, ಭೀಮ ಸಮುದ್ರ, ಮದರಿಕಂಪುರ. ಇಲ್ಲಿ ಹೆಮಟೈಟ್ ದರ್ಜೆ ಅದಿರು ದೊರೆಯುತ್ತಿದೆ. ಇದನ್ನು ಮಂಗಳೂರು ಬಂದರಿನ ಮೂಲಕ ರಫ್ತು ಮಾಡಲಾಗುತ್ತಿದೆ.

**ಮ್ಯಾಂಗನೀಸ್ ಅದಿರು:**

ರಾಜ್ಯವು ದೇಶದಲ್ಲಿ ಮ್ಯಾಂಗನೀಸ್ ಉತ್ಪಾದನೆಯಲ್ಲಿ 4ನೇ ಸ್ಥಾನದಲ್ಲಿದೆ. ಬಳ್ಳಾರಿ ಜಿಲ್ಲೆಯ ರಾಮದುರ್ಗ 2ನೇ ಪ್ರಮುಖ ನಿಕ್ಷೇಪ ಇರುವ ಸ್ಥಳ. ಇದಲ್ಲದೆ ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ದಾವಣಗೆರೆಯಲ್ಲಿ ಅದಿರು ದೊರೆಯುತ್ತಿದ್ದು ಬಹುಪಾಲು ರಫ್ತಾಗುತ್ತಿದೆ.

**ತಾಮ್ರ ಅದಿರು:**

ಕರ್ನಾಟಕವು ಹೊಂದಿರುವ ತಾಮ್ರದ ನಿಕ್ಷೇಪ ಅತಿ ಕಡಿಮೆ. ಚಿತ್ರದುರ್ಗ ಮತ್ತು ಹಾಸನದಲ್ಲಿ ಮಾತ್ರ ಉತ್ಪಾದಿಸಲಾಗುತ್ತಿದೆ. ಇದರ ಗಣಿಗಾರಿಕೆ 1973ರಲ್ಲಿ ಆರಂಭಿಸಲಾಗಿದ್ದು ಇಂಗಳದಲ್ಲಿ ಸಂಸ್ಕರಣ ಘಟಕ ಇದೆ. ಹಾಸನದ ಕಲ್ಯಾಡಿ ಬಳಿ ಮತ್ತೊಂದು ಘಟಕ ಇದೆ.

**ಸುಣ್ಣದ ಕಲ್ಲು:**

ದೇಶದಲ್ಲಿಯೇ ಸುಣ್ಣದ ಕಲ್ಲನ್ನು ಅಪಾರವಾಗಿ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವು ಒಂದು. ಸಿಮೆಂಟ್ ಉತ್ಪಾದನೆಯಲ್ಲಿ ಕಚ್ಚಾವಸ್ತುವಾಗಿ ಬಳಕೆಯಾಗುವ ಸುಣ್ಣದ ಕಲ್ಲು ಗುಲ್ಬರ್ಗಾದಲ್ಲಿ ಅತಿ ಹೆಚ್ಚು ಕಂಡುಬರುವುದು. ಶಹಾಪುರ ಸಿಮೆಂಟ್ ಕೈಗಾರಿಕೆಗೆ ಸುಣ್ಣದ ಕಲ್ಲನ್ನು ಸರಬರಾಜು ಮಾಡಲಾಗುತ್ತಿದೆ. ಇದಲ್ಲದೆ ರಾಜ್ಯವು ಅನೇಕ ಪ್ರಮುಖ ಬೇರೆ ಬೇರೆ ಅದಿರಿನ ನಿಕ್ಷೇಪಗಳನ್ನು ಹೊಂದಿದ್ದು ರಾಜ್ಯ, ದೇಶಕ್ಕೆ ಬಳಕೆಯಾಗಿ ವಿದೇಶಕ್ಕೂ ರಫ್ತಾಗುತ್ತಿದೆ.

**ವಿದ್ಯುಚ್ಛಕ್ತಿ:**

ಕರ್ನಾಟಕದ ಅತಿ ಮುಖ್ಯ ಸಮಸ್ಯೆಗಳ ಪಂಕ್ತಿಯಲ್ಲಿ ವಿದ್ಯುಚ್ಛಕ್ತಿ ಮೊದಲನೆಯದು. ರಾಜ್ಯದ ಮತ್ತು ರಾಷ್ಟ್ರದ ವಿದ್ಯುಚ್ಛಕ್ತಿಯ ದೃಶ್ಯಾವಳಿಯನ್ನು ಗಮನಿಸಿದರೆ ಅತೀ ಭಿನ್ನತೆಯಿಂದ ಕೂಡಿದೆ. ಭಾರತದಲ್ಲಿ 2010ರಲ್ಲಿ ಉತ್ಪಾದಿಸಿದ ಒಟ್ಟು ವಿದ್ಯುತ್ತಿನ ಪ್ರಮಾಣ 746.6 ಮೆ.ವ್ಯಾ. ಇದರಲ್ಲಿ ಜಲವಿದ್ಯುತ್ ಹಾಗೂ ಪವನ ವಿದ್ಯುತ್ ಪಾಲು ಶೇ.15.3 ಅಣು ವಿದ್ಯುತ್ತಿನ ಪಾಲು ಶೇ.2 ಶಾಖ ವಿದ್ಯುತ್ತಿನ ಪಾಲು ಶೇ.82.7 ಆದರೆ ಕರ್ನಾಟಕ ಇದಕ್ಕೆ ಭಿನ್ನವಾಗಿದೆ. ರಾಜ್ಯವು ದೇಶದಲ್ಲಿ ಮೊದಲ ಜಲವಿದ್ಯುತ್ ಕೇಂದ್ರವನ್ನು ಸ್ಥಾಪಿಸಿದ್ದು, ಇಂದಿಗೂ ಬಹುಪಾಲು ಜಲವಿದ್ಯುತ್ತನ್ನೇ ಅವಲಂಬಿಸಿದೆ. ಕಾರಣ ಪ್ರಮುಖ ವಿದ್ಯುತ್ ಉತ್ಪಾದನೆಯ ಇಂಧನದ ಕೊರತೆ ಹೆಚ್ಚು ಇದೆ.

ರಾಜ್ಯವು ಉತ್ಪಾದಿಸುವ ಒಟ್ಟು ವಿದ್ಯುತ್‌ನಲ್ಲಿ ಜಲವಿದ್ಯುತ್ 48.3%, ಶಾಖವಿದ್ಯುತ್ 43.5%, ಗಾಳಿವಿದ್ಯುತ್ 0.1%. ರಾಜ್ಯವು ತನ್ನ ಬಳಕೆಯ 26.6%ರಷ್ಟನ್ನು ನೆರೆಯ ರಾಜ್ಯಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಇದರಿಂದ ತಿಳಿಯುವುದೇನೆಂದರೆ, ಅತ್ಯಂತ ವಿದ್ಯುತ್ ಕೊರತೆ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ನಾವು ನಮ್ಮ ಬೇಡಿಕೆಯ 74%ರಷ್ಟು ವಿದ್ಯುತ್ತನ್ನು ಮಾತ್ರ ಉತ್ಪಾದಿಸುತ್ತಿದ್ದೇವೆ. ರಾಜ್ಯವು 2009–10ರಲ್ಲಿ ಆಮದು ಮಾಡಿಕೊಂಡ ವಿದ್ಯುತ್ ಒಟ್ಟು ಬಳಕೆಯ 30%ಕ್ಕಿಂತ ಹೆಚ್ಚು ಇದೆ. ಇದರ ಜೊತೆಗೆ ವಿದ್ಯುತ್ ಉತ್ಪಾದನೆಗೆ ಬೇಕಾಗಿರುವ ಕಲ್ಲಿದ್ದಲನ್ನು ಸಹ ನೆರೆಯ ಆಂಧ್ರಪ್ರದೇಶದಿಂದ ಆಮದು ಮಾಡಿಕೊಳ್ಳುತ್ತಿದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಬೇಡಿಕೆ ನಡುವೆ ಅಪಾರ ಅಂತರವಿದ್ದು, ಕೈಗಾರಿಕೆ ಮತ್ತು ಆರ್ಥಿಕಾಭಿವೃದ್ಧಿ ಪೂರಕವಾಗಿ ವಿದ್ಯುತ್ತಿನ ಅವಶ್ಯಕತೆ ಹೆಚ್ಚಾಗುತ್ತಿರುವುದು ಗಮನಿಸಬೇಕಾಗಿದೆ.

ಇದರಿಂದಾಗಿ ವಿದ್ಯುತ್ತಿನ ಕೊರತೆಯನ್ನು ನೀಗಿಸಲು ರಾಜ್ಯವು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದಲ್ಲದೇ ದೀರ್ಘಾವಧಿಯಲ್ಲಿ ರಾಜ್ಯವು ವಿದ್ಯುತ್ತಿನಲ್ಲಿ ಸ್ವಾವಲಂಬನೆಯಾಗಬಹುದಾದ ಯೋಜನೆಗಳನ್ನು ರೂಪಿಸುವುದು ಅತ್ಯಗತ್ಯವಾಗಿದೆ.

## ಕರ್ನಾಟಕದ ಉಷ್ಣ ವಿದ್ಯುತ್ ಯೋಜನೆಗಳು

ವಿದ್ಯುತ್ತಿನ ಉತ್ಪಾದನೆ ಮತ್ತು ಬಳಕೆಯ ಇತಿಹಾಸವನ್ನು ಅವಲೋಕಿಸಿದರೆ 1970ರವರೆಗೂ ರಾಜ್ಯವು ಬಹುಪಾಲು ಜಲವಿದ್ಯುತ್ತನ್ನು ಅವಲಂಬಿಸಿತ್ತು. ರಾಜ್ಯದ ಜಲವಿದ್ಯುತ್ತಿನ ಚರಿತ್ರೆಯನ್ನು ವೈಭವಪೂರಿತವಾಗಿ ಪ್ರಾಥಮಿಕ ಹಂತಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಬೋಧಿಸಲಾಗುತ್ತಿತ್ತು. ನಂತರದ ದಿನಗಳಲ್ಲಿ ಚಿತ್ರಣ ಬದಲಾಯಿತು. 1970ರ ದಶಕದ ಅಂತ್ಯದಲ್ಲಿ ಮಲೆನಾಡಿನಲ್ಲಿ ಮಳೆಯ ಕೊರತೆಯಿಂದ, ಜಲವಿದ್ಯುತ್ ಉತ್ಪಾದನೆಗೆ ಅತೀವ ಹಿನ್ನಡೆ ಆಯಿತು. ವಿದ್ಯುತ್‌ನ ಕೊರತೆಯನ್ನು ನೀಗಿಸುವ ಅನಿವಾರ್ಯವಾಗಿ ಪರ್ಯಾಯ ವ್ಯವಸ್ಥೆ ಕಡೆ ಚಿಂತಿಸಬೇಕಾಯಿತು. ನಂತರ ನಿರ್ಮಾಣವಾದವುಗಳೇ ಈ ಕೆಳಗಿನ ಶಾಖ ವಿದ್ಯುತ್ ಕೇಂದ್ರಗಳು.

### ರಾಯಚೂರು ಶಾಖವಿದ್ಯುತ್ ಉತ್ಪಾದನಾ ಕೇಂದ್ರ:

ರಾಯಚೂರಿನಿಂದ 18 ಕಿ.ಮೀ. ದೂರದಲ್ಲಿ 'ಎಡ್ಲಾಪೂರ' ಹಳ್ಳಿಯಲ್ಲಿ ಸ್ಥಾಪಿಸಲಾಗಿದೆ. ಇದು ರಾಷ್ಟ್ರೀಯ ಹೆದ್ದಾರಿ. ರೈಲ್ವೆ ಮಾರ್ಗವನ್ನು ಅತೀ ಸಮೀಪದಲ್ಲಿ ಹೊಂದಿದ್ದು, ತುಂಗಭದ್ರಾ ನದಿಯಿಂದ ನೀರನ್ನು ಪೂರೈಸಲಾಗುತ್ತಿದೆ. ಅಲ್ಲದೆ ಆಂಧ್ರದ ಸಿಂಗರೇಣಿ ಗಣಿಗಳಿಂದ ಕಲ್ಲಿದ್ದಲು ಆಮದಿಗೆ ಸೂಕ್ತವಾಗಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರ 1978ರಲ್ಲಿ ಅನುಮೋದಿಸಿತು. ಇದರ ಮೊದಲ ಘಟಕ 1985ರಲ್ಲಿ ಮತ್ತು 2ನೇ ಘಟಕ 1986 ಕಾರ್ಯಾರಂಭ ಮಾಡಿದವು. ಈ ಪ್ರದೇಶವನ್ನು ಶಕ್ತಿನಗರವೆಂದು ಕರೆಯಲಾಗುತ್ತದೆ. ಇದು ಪ್ರಸ್ತುತ 8 ಘಟಕಗಳನ್ನು ಹೊಂದಿದೆ. ಪ್ರಸ್ತುತ 2014ರಲ್ಲಿ ಒಂದೇ ದಿನದಲ್ಲಿ 41 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಿ ದಾಖಲೆಗೆ ಪಾತ್ರವಾಗಿದೆ.

### ಕುಡಿತಿನಿ / ಬಳ್ಳಾರಿ ಶಾಖ ವಿದ್ಯುತ್ ಉತ್ಪಾದನಾ ಕೇಂದ್ರ:

ಬಳ್ಳಾರಿ ನಗರದಿಂದ 27 ಕಿ.ಮೀ. ದೂರದಲ್ಲಿ ಕುಡಿತಿನಿ ಹಳ್ಳಿಯ ಬಳಿ ಇದನ್ನು ಸ್ಥಾಪಿಸಲಾಗಿದೆ. ಇಲ್ಲಿ 500 ದಶಲಕ್ಷ ಯೂನಿಟ್‌ನ ಸಾಮರ್ಥ್ಯದ 3 ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದರ 1ನೇ ಘಟಕ ನವೆಂಬರ್ 03, 2008ರಲ್ಲಿ ಉದ್ಘಾಟನೆಯಾಗಿದೆ. ನಾಗಪುರ 'ದ ವೆಸ್ಟರ್ನ್ ಕೋಲ್ ಫಿಲ್ಡ್'ನಿಂದ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಗಂಗಾವತಿಯ ಸಮೀಪ 'ಮರಳಿ' ಹಳ್ಳದಿಂದ ನೀರನ್ನು ಪೂರೈಸಲಾಗುತ್ತಿದೆ.

### ಕರ್ನಾಟಕದ ಯೋಜಿತ ಶಾಖ ವಿದ್ಯುತ್ ಘಟಕಗಳು:

* ರಾಯಚೂರು ಬಳಿಯ ಯರಮರಾಸ್ ಶಾಖ ವಿದ್ಯುತ್ ಕೇಂದ್ರ.
* ಯಾದಗಿರಿ ಶಾಖವಿದ್ಯುತ್ ಕೇಂದ್ರ.
* ಅಣ್ಣೇಚಾಕನ ಹಳ್ಳಿ ಶಾಖವಿದ್ಯುತ್ ಕೇಂದ್ರ (ಹಾಸನ).
* ಕಲ್ಕುಣಿಕ ಶಾಖವಿದ್ಯುತ್ ಕೇಂದ್ರ (ಬಿಜಾಪುರ).
* ಕೂಡ್ಲಗಿ ಶಾಖ ಘಟಕ (ಬಿಜಾಪುರ).
* ಹಣಕೋಣ ಶಾಖ ವಿದ್ಯುತ್ ಕೇಂದ್ರ (ಉತ್ತರ ಕನ್ನಡ).

### ಅಣು ವಿದ್ಯುತ್ ಉತ್ಪಾದನಾ ಕೇಂದ್ರ:

ಅಣುಶಕ್ತಿ ಒಂದು ನೂತನ ಇಂಧನ ಮೂಲವಾಗಿದ್ದು ಅಗ್ಗದ ಶಕ್ತಿಯ ಮೂಲವು ಕೂಡಾ ಹೌದು. ಯುರೇನಿಯಂ, ಥೋರಿಯಂ, ಮೊನಾಜೈಟ್‌ಗಳು ಇದರ ಮೂಲಗಳಾಗಿವೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಅರಬೈಲ ಬೆಟ್ಟದಲ್ಲಿ ಯುರೇನಿಯಂ ಧಾತುವಿನ ನಿಕ್ಷೇಪ ಇದೆ. ಇತ್ತೀಚೆಗೆ ಯಾದಗಿರಿ ಮತ್ತು ಬೆಳಗಾವಿಯ ಬಳಿ ನೇಸರ್ಗಿ ಎಂಬಲ್ಲಿ ಯುರೇನಿಯಂ ಪತ್ತೇ ಹಚ್ಚಲಾಗಿದೆ. ಭಾರತೀಯ ಅಣು ವಿದ್ಯುತ್ ನಿಗಮ (ಎನ್‌ಪಿಸಿಐಎಲ್)ವು ರಾಜ್ಯದ ಕಾರವಾರ ಬಳಿಯ (ಕೈಗಾ) ಎಂಬಲ್ಲಿ ಅಣುವಿದ್ಯುತ್ ಕೇಂದ್ರವನ್ನು ಸ್ಥಾಪಿಸಿದೆ. ಇಲ್ಲಿ ಒಟ್ಟು 2 ಘಟಕಗಳನ್ನು ಸ್ಥಾಪಿಸಲಾಗಿದೆ.

### ಪವನ ವಿದ್ಯುತ್ ಉತ್ಪಾದನಾ ಕೇಂದ್ರಗಳು:

ಪ್ರಪಂಚದಲ್ಲಿ 'ಹಾಲೆಂಡ್' ಗಾಳಿಯಿಂದ ವಿದ್ಯುತ್ತನ್ನು ಉತ್ಪಾದಿಸುವುದರಲ್ಲಿ ಪ್ರಸಿದ್ಧಿ ಪಡೆದಿದೆ. ಇದು ಪ್ರಾಕೃತಿಕ ಮೂಲ ಮಾತ್ರವಾಗಿರದೇ ಇತರ ಸಾಂಪ್ರದಾಯಿಕ ಮೂಲಗಳಂತೆ ಮುಗಿದು ಹೋಗದ ಮತ್ತು ಪರಿಸರ ಮಾಲಿನ್ಯ ಉಂಟು ಮಾಡದ (ಪರಿಸರ ಸ್ನೇಹಿ, ಇಕೋ ಫ್ರೇಂಡ್ಲಿ) ವಿದ್ಯುತ್ ಮೂಲವಾಗಿದೆ. ರಾಜ್ಯದಲ್ಲಿ ಮೊದಲಬಾರಿಗೆ ಗಾಳಿಯಿಂದ ವಿದ್ಯುತ್ ಉತ್ಪಾದನೆ ಆರಂಭವಾದುದು 1992ರಲ್ಲಿ ಕೊಡಗು ಜಿಲ್ಲೆಯ ಬ್ರಹ್ಮಗಿರಿ ಬೆಟ್ಟಗಳ ಗಾಳಿ ಬೀಡು ಎಂಬಲ್ಲಿ. ನಂತರ 2ನೇ ಘಟಕ ಗದುಗಿನ ಕಪ್ಪತ್ತಗುಡ್ಡ ಬಳಿ ಪ್ರಾರಂಭವಾಯಿತು. 1995ರಲ್ಲಿ ಕರ್ನಾಟಕ ವಿದ್ಯುತ್ ಮಂಡಳಿ 2 ದಶಲಕ್ಷ ಯೂನಿಟ್ ಸಾಮರ್ಥ್ಯದ 'ಗಾಳಿ ವಿದ್ಯುತ್ ಪಾರ್ಕ್'ನ್ನು ಕಪ್ಪತ್ತಗುಡ್ಡದಲ್ಲಿ ಸ್ಥಾಪಿಸಿತು. ಇದು 225 ಕಿ.ವ್ಯಾ. ಸಾಮರ್ಥ್ಯದ 9 ಘಟಕಗಳನ್ನು ಹೊಂದಿದೆ. ಹಾಗೆಯೇ ಚಿತ್ರದುರ್ಗ 'ಜೋಗಿಮಟ್ಟಿ'ಯಲ್ಲಿ ಖಾಸಗಿ ವಲಯದಲ್ಲಿ ಸ್ಥಾಪಿಸಲಾಗಿದೆ.

## ಕರ್ನಾಟಕದ ಬೃಹತ್ ಕೈಗಾರಿಕೆಗಳು

### ಕರ್ನಾಟಕದಲ್ಲಿ ಕೈಗಾರಿಕೆಗಳ ಅಭಿವೃದ್ಧಿ:

ಭಾರತದಲ್ಲಿ ಮೊದಲ ಬಾರಿಗೆ ರಾಕೆಟ್‌ಗಳನ್ನು ಬಳಸಿದವರು ಕರ್ನಾಟಕ–ಮೈಸೂರಿನ ಟಿಪ್ಪು ಸುಲ್ತಾನ್. ರಾಜ್ಯಕ್ಕೆ ಹೊಸ ಕೈಗಾರಿಕೆಗಳನ್ನು ಪರಿಚಯಿಸಿಕೊಟ್ಟಿದ್ದು ಟಿಪ್ಪುಸುಲ್ತಾನ್. ಸಕ್ಕರೆ ಕೈಗಾರಿಕೆ, ಬಟ್ಟೆ ಕೈಗಾರಿಕೆ, ಕಾಗದ ಕೈಗಾರಿಕೆ, ವಾಚ ತಯಾರಿಕೆಗಳನ್ನು ಅಭಿವೃದ್ಧಿಗೊಳಿಸಿದನು. ನಂತರದ ಅವಧಿಯಲ್ಲಿ ಮೈಸೂರಿನ ದಿವಾನರಾದ ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ಸರ್.ಎಂ.ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಕೈಗಾರಿಕಾಭಿವೃದ್ಧಿಯನ್ನು ಪ್ರೋತ್ಸಾಹಿಸಿದರು. ಸರ್.ಎಂ.ವಿಶ್ವೇಶ್ವರಯ್ಯನವರು ದಿವಾನ ಅವಧಿಗಿಂತ ಮೊದಲು ಕರ್ನಾಟಕದಲ್ಲಿದ್ದ ಕೈಗಾರಿಕೆಗಳು ಹೀಗಿವೆ.

* 1880ರಲ್ಲಿ ಕೆ.ಜಿ.ಎಫ್.ನಲ್ಲಿ ಚಿನ್ನದ ಗಣಿ ಆರಂಭ.
* ಬೆಂಗಳೂರಿನಲ್ಲಿ ಬೃಹತ್ ಬಟ್ಟೆ ಕೈಗಾರಿಕೆಗಳು 1884, 1894ರಲ್ಲಿ.
* 1897ರಲ್ಲಿ ಸರ್ಕಾರಿ ಸೆಂಟ್ರಲ್ ವರ್ಕಶಾಪ.
* 1894ರಲ್ಲಿ ಗುಲ್ಬರ್ಗಾದಲ್ಲಿ ಮಹಬೂಬ್‌ಶಾಹಿ ಕಲ್ಬುರ್ಗಿ.
* ಎನ್.ಎಸ್.ಕೆ. ಮಿಲ್ಸ್ 1898.
* ಶಹಬಾದ್ ಮತ್ತು ವಾಡಿಗಳಲ್ಲಿ ಸಿಮೆಂಟ್ ಕಾರ್ಖಾನೆ.
* ಮಂಗಳೂರಿನಲ್ಲಿ ಹಂಚಿನ ಕೈಗಾರಿಕೆ.
* ಸೆರಾಮಿಕ್ ಕೈಗಾರಿಕೆ ಖಾನಾಪುರ.
* ಬೀಡಿ ಕೈಗಾರಿಕೆಗಳು.

ಸರ್.ಎಂ.ವಿಶ್ವೇಶ್ವರಯ್ಯನವರ ಸಮಯದ ಕೈಗಾರಿಕಾಭಿವೃದ್ಧಿ–

* 1909ರಲ್ಲಿ ಯೋಜನಾ ಬದ್ಧ ಅಭಿವೃದ್ಧಿ ಪರಿಭಾವನೆಯೊಂದಿಗೆ ಕರ್ನಾಟಕದಲ್ಲಿ ಯೋಜನೆಗಳನ್ನು ಪ್ರಾರಂಭಿಸಿದರು.
* 1911ರಲ್ಲಿ ಮೈಸೂರ್ ಎಕನಾಮಿಕ್ ಕಾನ್ಫರೆನ್ಸ್ ಪ್ರಮುಖ ಪಾತ್ರ.

* 1913ರಲ್ಲಿ ದಿ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆ.
  - 1913 ಮೈಸೂರ್ ಬ್ಯಾಂಕ್
  - 1915 ದಿ ಮೈಸೂರ್ ಚೇಂಬರ್ ಆಫ್ ಕಾಮರ್ಸ್
  - 1916 ಮೈಸೂರು ವಿ.ವಿ.
  - 1915 ದಿ ಮೈಸೂರ್ ಎಕ್‌ನಾಮಿಕ್ ರಿವ್ಯೂ ಆರಂಭ
  - 1927 ಕೃಷ್ಣರಾಜೇಂದ್ರ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್
  - 1915 ಶಿವಮೊಗ್ಗದಲ್ಲಿ ಗಂಧದ ಎಣ್ಣೆ ಕೈಗಾರಿಕೆ
  - 1919 ಮಿನರ್ವ ಮಿಲ್ಸ್
  - 1923 ಭದ್ರಾವತಿ ಉಕ್ಕಿನ ಕಾರ್ಖಾನೆ
  - 1932 ರೇಷ್ಮೆ ಕೈಗಾರಿಕೆ - ಮೈಸೂರು
  - 1936 ಕಾಗದ ಕೈಗಾರಿಕೆ - ಭದ್ರಾವತಿ

**1982-83ರ ಕರ್ನಾಟಕದ ಹೊಸ ಕೈಗಾರಿಕಾ ನೀತಿ:**

ರಾಜ್ಯದ ಸಮಗ್ರ ಆಂತರಿಕ ಉತ್ಪಾದನೆಯನ್ನು ಹೆಚ್ಚಿಸುವುದು. ಕೈಗಾರಿಕಾ ನೀತಿಯ ಮುಖ್ಯ ಕ್ಷೇತ್ರಗಳೆಂದರೆ ಎರೋಸ್ಪೇಸ್, ಎಂಜಿನಿಯರಿಂಗ್, ಆಟೋಮೊಬೈಲ್, ಮಷಿನ್‌ಟೂಲ್ಸ್, ಕಬ್ಬಿಣ ಮತ್ತು ಉಕ್ಕು, ಸಿಮೆಂಟ್, ಔಷಧಿ, ಆಹಾರ ಸಂಸ್ಕರಣೆ, ಬಟ್ಟೆ, ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇವುಗಳಲ್ಲಿ ಅಪಾರವಾದ ಕೈಗಾರಿಕೆ ಅಭಿವೃದ್ಧಿ ಸಾಧಿಸುವುದು.

**ಕರ್ನಾಟಕದಲ್ಲಿ ಕೈಗಾರಿಕಾ ಕ್ಷೇತ್ರದ ಹಂಚಿಕೆ:**

* ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ತುಮಕೂರು, ಒಳಗೊಂಡ ಅತಿ ದೊಡ್ಡ ವಲಯ.
* ಎರಡನೆಯ ದೊಡ್ಡ ಕೈಗಾರಿಕಾ ವಲಯ ಬೆಳಗಾಂ, ಧಾರವಾಡ.
* ದಕ್ಷಿಣ ಕನ್ನಡ ಉಡುಪಿ.
* ಬಳ್ಳಾರಿ, ರಾಯಚೂರು, ಕೊಪ್ಪಳ
* ಮೈಸೂರು, ಗುಲ್ಬರ್ಗಾ.

**ರಾಜ್ಯದ ಕೈಗಾರಿಕಾ ಅಭಿವೃದ್ಧಿಯ ಪ್ರಮುಖ ಕಾರ್ಯಕ್ರಮಗಳು:**

* ಸೂಕ್ಷ್ಮ, ಚಿಕ್ಕ, ಮಧ್ಯಮ ಗಾತ್ರದ ಉದ್ದಿಮೆಗಳ ಅಭಿವೃದ್ಧಿ
* ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ
* ರಾಜ್ಯ ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಮಂಡಳಿ ಕೈಗಾರಿಕಾ ಪ್ರದೇಶ, ಒದಗಿಸುವುದು.
* ಕರ್ನಾಟಕ ಉದ್ಯೋಗ ಮಿತ್ರ, ಕೈಗಾರಿಕೆಗಳ ಸ್ಥಾಪನೆಗೆ ಏಕಗವಾಕ್ಷಿ ಯೋಜನೆ
* ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳು
* ಭೂಮಿ ಯೋಜನೆ
* ಕರ್ನಾಟಕ ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್

**ಸಕ್ಕರೆ ಕೈಗಾರಿಕೆ:**

ರಾಜ್ಯದ ಅತಿ ಮುಖ್ಯ ವ್ಯವಸಾಯ ಆಧಾರಿತ ಕೈಗಾರಿಕೆ. 1847ರಲ್ಲಿ ಪ್ರಥಮ ಸಕ್ಕರೆ ಕೈಗಾರಿಕೆ ಶ್ರೀರಂಗಪಟ್ಟಣದ ಅಷ್ಟಗ್ರಾಮದಲ್ಲಿ ನಂತರ 1933ರಲ್ಲಿ ಮಂಡ್ಯದಲ್ಲಿ, ಬೆಳಗಾವಿಯ ಕಿತ್ತೂರು ಮತ್ತು ಉಗಾರ ಖುರ್ದಗಳಲ್ಲಿ ಆರಂಭವಾದವು. ಕಬ್ಬನ್ನು ವಾಣಿಜ್ಯ ಬೆಳೆಯಾಗಿ ಉತ್ಪಾದಿಸಲು ಸಹಾಯಕವಾಗಿದೆ. ರಾಜ್ಯದಲ್ಲಿ 47 ಸಕ್ಕರೆ ಕೈಗಾರಿಕೆಗಳಿದ್ದು 41

ಕಾರ್ಯ ನಿರ್ವಹಿಸುತ್ತಿವೆ. ಸಕ್ಕರೆ ಉತ್ಪಾದನೆಯಲ್ಲಿ, ಮಹಾರಾಷ್ಟ್ರ ನಂತರ ಕರ್ನಾಟಕಕ್ಕೆ ಮೂರನೇಯ ಸ್ಥಾನ ಹೊಂದಿದೆ. ಸಕ್ಕರೆ ಕೈಗಾರಿಕೆಗಳಿಗೆ ರಾಜ್ಯದಲ್ಲಿಯ ಅನುಕೂಲಕರ ವಾತಾವರಣವಿದೆ. ಕಬ್ಬು ಉತ್ತಪಾದನೆಯಲ್ಲಿ ನಾಲ್ಕನೆಯ ಸ್ಥಾನ. ಇದು ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಕಾರಣ ಕರ್ನಾಟಕದ ಉಷ್ಣವಲಯ ವಾತಾವರಣ.

**ಹಂಚಿಕೆ:**

* ಬೆಳಗಾವಿ, ಬಾಗಲಕೋಟೆ – ಕ್ರಮವಾಗಿ 15.8 ಕೈಗಾರಿಕೆ ಹೊಂದಿವೆ.
* ಮಂಡ್ಯ – 5 ಕೈಗಾರಿಕೆಗಳು.

**ಕರ್ನಾಟಕದಲ್ಲಿ ರೇಷ್ಮೆ:**

ಇದು ರಾಜ್ಯದ ಪ್ರತಿಷ್ಟಿತ ಬೆಳೆಯಾಗಿದೆ. ಇದು ಪ್ರಮುಖ ಜವಳಿ ಉದ್ಯಮವಾಗಿದೆ. 1932ರಲ್ಲಿ ರೇಷ್ಮೆ ಕೈಗಾರಿಕೆಯನ್ನು ಸರ್.ಎಮ್.ವಿಶ್ವೇಶ್ವರಯ್ಯನವರು ಪ್ರಾರಂಭಿಸಿದರು. ಹಿಪ್ಪನೇರಳೆಯನ್ನು 91.43 ಸಾವಿರ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತದ.ಎ ಈ ಉದ್ಯಮವು 11.89 ಲಕ್ಷ ಜನರಿಗೆ ಉದ್ಯೋಗ ನೀಡಿದೆ. ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಕೋಲಾರ, ದೊಡ್ಡಬಳ್ಳಾಪುರ, ತುಮಕೂರು, ಬೆಳಗಾವಿಯಲ್ಲಿ ಬೆಳೆಯುತ್ತವೆ. ರೇಷ್ಮೆ ನೂಲು ತೆಗೆಯುವ ಕೈಗಾರಿಕೆಗಳು–ಕೊಳ್ಳೇಗಾಲ, ಮುಡಿಗುಂಡು, ಟಿ.ನರಸೀಪುರ, ಮೈಸೂರು, ಬೆಂಗಳೂರು, ಆನೇಕಲ್‌ಗಳಲ್ಲಿ ವ್ಯಾಪಿಸಿವೆ.

**ರೇಷ್ಮೆ ಅಭಿವೃದ್ದಿ ಕಾರ್ಯಕ್ರಮ:**

* ರೇಷ್ಮೇ ವರ್ಧನಾ ಯೋಜನೆ
* ರೇಷ್ಮೆ ಮಾರುಕಟ್ಟೆ ಮಂಡಳಿ 1979
* ಬ್ಯಾಂಕ್‌ಗಳಿಂದ ಸಾಲ – ಸಹಾಯ ಧನ
* ಸರ್ಕಾರದಿಂದ ತರಬೇತಿ

**ಸಮಸ್ಯೆಗಳು:**

* ನೆರೆಯ ರಾಷ್ಟ್ರಗಳಿಂದ ಪ್ರಮುಖವಾಗಿ ಚೀನಾದಿಂದ ಆಮದು ಮಾಡುತ್ತಿರುವುದು.
* ರೇಷ್ಮೆ ಕೈಗಾರಿಕೆಯಲ್ಲಿಯ ಹಳೆಯ ಯಂತ್ರೋಪಕರಣಗಳು.
* ಕಡಿಮೆ ರೇಷ್ಮೆ ಇಳುವರಿ.
* ರೈತರ ಈ ಕೃಷಿಯ ಬಗೆಗೆ ತಿಳುವಳಿಕೆ ಕಡಿಮೆ.
* ರೇಷ್ಮೆ ಉತ್ಪಾದಕರು ಅಸಂಘಟಿತರಾಗಿರುವುದು.
* ಉತ್ಪಾದನಾ ವೆಚ್ಚ ಹೆಚ್ಚಳ.
* ಮಳೆಯಾಶ್ರಯದ ಈ ಬೆಳೆಗೆ ಬರಗಾಲವು ಹಾನಿಯನ್ನುಂಟು ಮಾಡುತ್ತಿದೆ.

## ಕರ್ನಾಟಕದಲ್ಲಿ ಸಾರಿಗೆ

ಸಾರಿಗೆ ಎಂದರೆ ಸರಕುಗಳು ಮತ್ತು ಜನರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವ ಚಟುವಟಿಕೆಯಾಗಿದೆ. ಸಾರ್ವಜನಿಕರಿಗೆ ಉಪಯುಕ್ತ ಸೇವೆಯಾಗಿದ್ದು, ಇದು ಸರಕು ಮತ್ತು ಸೇವೆಗಳಿಗೆ ಸ್ಥಳ ಮತ್ತು ಕಾಲ ತುಷ್ಟಿಗುಣವನ್ನು ನೀಡುತ್ತದೆ. ಸಾರಿಗೆ ಉತ್ಪಾದನಾ ಕೇಂದ್ರಗಳು ವಿತರಣಾ ವಲಯಗಳು ಮತ್ತು ಅಂತಿಮ ಅನುಭೋಗಿಗಳ ನಡುವೆ ಸಂಪರ್ಕ ಕಲ್ಪಿಸುವ ಸೇತುವೆಯಾಗಿದ್ದು, ಆರ್ಥಿಕ ವ್ಯವಸ್ಥೆಯನ್ನು ಬೆಸೆಯುವ ಕಾರ್ಯದಲ್ಲಿ ತೊಡಗುತ್ತದೆ. ಕೃಷಿ ಮತ್ತು ಕೈಗಾರಿಕೆಗಳನ್ನು ಕ್ರಮವಾಗಿ ಮಾನವನ ಶರೀರ ಮತ್ತು ಮೂಳೆಗಳಿಗೆ ಹೋಲಿಸಿದರೆ ಸಾರಿಗೆಯನ್ನು ದೇಹದ ನರಮಂಡಲಕ್ಕೆ ಹೋಲಿಸಲಾಗಿದೆ. ಚಲಿಸುವ ಚಕ್ರಗಳು ನಾಗರೀಕತೆಯನ್ನು ಸೃಷ್ಟಿಸುತ್ತವೆ ಎಂದು ಹೇಳುವಂತೆ, ಸಾರಿಗೆ ನಾಡಿನ ಸರ್ವಾಂಗೀಣ ಅಭಿವೃದ್ದಿಗೆ ಸಹಕರಿಸುತ್ತದೆ. ಆದ್ದರಿಂದ ಸಾರಿಗೆಯೇ ನಾಗರಿಕತೆ ಎನ್ನಬಹುದು.

ಕರ್ನಾಟಕದಲ್ಲಿ 4 ಪ್ರಕಾರದ ಸಾರಿಗೆ ವ್ಯವಸ್ಥೆ ಅಸ್ತಿತ್ವದಲ್ಲಿದೆ.

1) ರಸ್ತೆ ಸಾರಿಗೆ

2) ರೈಲು ಸಾರಿಗೆ

3) ಜಲ ಸಾರಿಗೆ

4) ವಾಯು ಸಾರಿಗೆ

**ರಸ್ತೆ ಸಾರಿಗೆ:**

ರಸ್ತೆ ಸಾರಿಗೆ ಅತ್ಯಂತ ಪ್ರಾಚೀನವಾದ ಸಾರಿಗೆ ವ್ಯವಸ್ಥೆಯಾಗಿದೆ. ಕರ್ನಾಟಕದ ಆರ್ಥಿಕತೆಯಲ್ಲಿ ರಸ್ತೆ ಸಾರಿಗೆಯು ಪ್ರಮುಖ ಪಾತ್ರವಹಿಸಿದ್ದು, ಸುಮಾರು 29406ಕ್ಕಿಂತಲೂ ಹೆಚ್ಚು ಹಳ್ಳಿಗಳಿರುವ ಕರ್ನಾಟಕವು ಶೇ.66ಕ್ಕಿಂತ ಅಧಿಕ ಸಂಖ್ಯೆಯ ಜನ ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಹಾಗಾಗಿ ಹಳ್ಳಿ ಹಳ್ಳಿಗಳ ನಡುವೆ ಹಳ್ಳಿ, ನಗರಗಳ ನಡುವೆ ಸಂಪರ್ಕಕ್ಕೆ ರಸ್ತೆ ಸಾರಿಗೆ ಸೂಕ್ತವಾದುದು.

1) ರಾಷ್ಟ್ರೀಯ ಹೆದ್ದಾರಿಗಳು: ರಾಷ್ಟ್ರೀಯ ಹೆದ್ದಾರಿಗಳು ರಾಷ್ಟ್ರದ ರಾಜಧಾನಿ, ರಾಜ್ಯದ ರಾಜಧಾನಿ ಮುಖ್ಯ ಪಟ್ಟಣಗಳು ಮತ್ತು ಬಂದರುಗಳ ನಡುವೆ ಸಂಪರ್ಕ ಕಲ್ಪಿಸುತ್ತವೆ. ಈ ರಸ್ತೆಗಳ ನಿರ್ಮಾಣ ದುರಸ್ತಿ ನಿರ್ವಹಣೆ ಸಂಪೂರ್ಣವಾಗಿ ಕೇಂದ್ರ ಸರ್ಕಾರಕ್ಕೆ ಒಳಪಟ್ಟಿರುತ್ತದೆ. ಕರ್ನಾಟಕದಲ್ಲಿ 2009–10ರ ಅಂತ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದ 4490 ಕಿ.ಮೀ. ಆಗಿತ್ತು.

**ಪ್ರಮುಖ ಹೆದ್ದಾರಿಗಳು:**

1. ಎನ್‌ಹೆಚ್ 4 – ಚೆನ್ನೈ, ಕೋಲಾರ, ಬೆಂಗಳೂರು, ಬೆಳಗಾವಿ, ಪುಣೆ, ಮುಂಬೈ.
2. ಎನ್‌ಹೆಚ್ 7 – ಬೆಳಗಾವಿ, ಖಾನಾಪುರ, ಅನಮೋಡ, ಪಣಜಿ.
3. ಎನ್‌ಹೆಚ್ 9 – ಪುಣೆ, ಸೊಲ್ಲಾಪುರ, ಹುಮ್ನಾಬಾದ್, ಹೈದರಾಬಾದ್, ವಿಜಯವಾಡ.
4. ಎನ್‌ಹೆಚ್ 13 – ಚಿತ್ರದುರ್ಗ, ಹೊಸಪೇಟೆ, ಬಿಜಾಪುರ, ಸೊಲ್ಲಾಪುರ.

2) ರಾಜ್ಯ ಹೆದ್ದಾರಿಗಳು: ರಾಜ್ಯ ಹೆದ್ದಾರಿಗಳು ರಾಜ್ಯದಲ್ಲಿನ ಪ್ರಮುಖ ಪಟ್ಟಣಗಳು, ಜಿಲ್ಲಾ ಕೇಂದ್ರಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಸಂಪರ್ಕಿಸುತ್ತದೆ. 2009–10ರಲ್ಲಿ ರಾಜ್ಯದಲ್ಲಿದ್ದ ರಾಜ್ಯ ಹೆದ್ದಾರಿಗಳ ಒಟ್ಟು ಉದ್ದ ಸುಮಾರು 20528 ಕಿ.ಮೀ. ಆಗಿತ್ತು. ಈ ರಸ್ತೆಗಳ ನಿರ್ಮಾಣ, ದುರಸ್ತಿ, ನಿರ್ವಹಣೆ ರಾಜ್ಯ ಸರ್ಕಾರದ ಅಧೀನದಲ್ಲಿರುತ್ತದೆ. 2009–10ರವರೆಗೆ 50436 ಕಿ.ಮೀ. ಈ ತರಹದ ರಸ್ತೆ ಇದೆ.

3) ಮುನಿಸಿಪಾಲಿಟಿ ರಸ್ತೆಗಳು: ರಾಜ್ಯದ ಮಹಾನಗರ ಪಾಲಿಕೆಗಳು, ನಗರ ಪ್ರದೇಶಗಳ ವ್ಯಾಪ್ತಿಯ ನಗರ ಪಟ್ಟಣ ಪ್ರದೇಶಗಳ ರಸ್ತೆಗಳೇ ಮುನಿಸಿಪಾಲಿಟಿ ರಸ್ತೆಗಳು. ಈ ರಸ್ತೆಗಳ ನಿರ್ಮಾಣ, ದುರಸ್ತಿ, ನಿರ್ವಹಣೆ, ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿದೆ. 2009–10ರವರೆಗೆ ರಾಜ್ಯದಲ್ಲಿ ಈ ತರಹದ 8366 ಕಿ.ಮೀ. ರಸ್ತೆ ಕಾಣಬಹುದು.

4) ಇತರೆ ಜಿಲ್ಲಾ ಮತ್ತು ಗ್ರಾಮಾಂತರ ರಸ್ತೆಗಳು: ಜಿಲ್ಲಾ ರಸ್ತೆಗಳು ತಾಲ್ಲೂಕು ಕೇಂದ್ರ ಮತ್ತು ವಿವಿಧ ಹಳ್ಳಿಗಳನ್ನು ಸಂಪರ್ಕಿಸುವ ರಸ್ತೆಗಳು. ಈ ರಸ್ತೆಗಳನ್ನು ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಅವರು ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ಮಿಸಿ ಅದರ ಉಸ್ತುವಾರಿ ನೋಡಿಕೊಳ್ಳುತ್ತದೆ. 2009–10ರವರೆಗೆ ಸುಮಾರು 1,47,212 ಕಿ.ಮೀ. ಈ ತರಹದ ರಸ್ತೆಯನ್ನು ರಾಜ್ಯ ಹೊಂದಿದೆ.

**ರೈಲು ಸಾರಿಗೆ:**

ರಾಜ್ಯದಲ್ಲಿ ರಸ್ತೆ ನಂತರ ರೈಲು ಸಾರಿಗೆ ಪ್ರಮುಖ ಸಾರಿಗೆ ವ್ಯವಸ್ಥೆಯಾಗಿದೆ. ಭಾರತದಲ್ಲಿ ಮೊದಲ ರೈಲು ಸಂಚಾರ 1853ರಲ್ಲಿ ಮುಂಬಯಿಯಿಂದ ಠಾಣಾ ನಡುವೆ ಆರಂಭವಾಯಿತು. ಕರ್ನಾಟಕದಲ್ಲಿ 1864ರಲ್ಲಿ ಬೆಂಗಳೂರು ಚೆನ್ನೈ ನಡುವೆ ರೈಲು ಸಾರಿಗೆ ಪ್ರಾರಂಭವಾಯಿತು. ಕೊಡಗು ಜಿಲ್ಲೆ ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳು ಸಹ ರೈಲು ಸಂಪರ್ಕ ಹೊಂದಿದೆ. ರಾಜ್ಯದಲ್ಲಿ ಒಟ್ಟು ರೈಲು ಮಾರ್ಗಗಳ ಉದ್ದ 3127 ಕಿ.ಮೀ. ಇದು ದೇಶದ ಒಟ್ಟು ರೈಲು ಮಾರ್ಗದ ಶೇ.5ರಷ್ಟು ಇದೆ. ಹುಬ್ಬಳ್ಳಿಯಲ್ಲಿ ನೂತನವಾಗಿ ನೈರುತ್ಯ ರೈಲ್ವೆ ವಲಯ ಏಪ್ರಿಲ್ 01, 2003ರಿಂದ

ಕಾರ್ಯಾರಂಭ ಮಾಡಿದೆ. ಬೆಂಗಳೂರಿನಲ್ಲಿ 4899 ಕೋಟಿ ರೂ. ವೆಚ್ಚದಲ್ಲಿ ಮೆಟ್ರೋ ಕಾಮಗಾರಿ ಪ್ರಗತಿಯಲ್ಲಿದೆ. 1885ರಲ್ಲಿ ಹುಬ್ಬಳ್ಳಿ ಮತ್ತು 1938ರಲ್ಲಿ ಮೈಸೂರಿನಲ್ಲಿ ರೈಲ್ವೆ ವರ್ಕ್‌ಶಾಪ್ ಸ್ಥಾಪಿಸಲಾಗಿದೆ. 1983ರಲ್ಲಿ ಯಲಹಂಕದಲ್ಲಿ ಅಚ್ಚು ಮತ್ತು ಗಾಲಿ ಕಾರ್ಖಾನೆ ಪ್ರಾರಂಭವಾಗಿದೆ.

**ಜಲ ಸಾರಿಗೆ:**

ಕಾಲುವೆ, ನದಿ, ಸಮುದ್ರ ಮೂಲಕ ಸರಕು ಮತ್ತು ಪ್ರಯಾಣಿಕರ ಸಾಗಾಟ ಮಾಡುವುದನ್ನು ಜಲಸಾರಿಗೆ ಎನ್ನುವರು. ಜಲಸಾರಿಗೆಯಲ್ಲಿ 2 ವಿಧಗಳು. ಅವುಗಳು–

1) ಆಂತರಿಕ ಒಳನಾಡು ಜಲಸಾರಿಗೆ: ಸಣ್ಣ ಸಣ್ಣ ದೋಣಿಗಳು ಮತ್ತು ಸ್ಟೀಮರ್‌ಗಳ ಮೂಲಕ ನದಿ ಹಾಗೂ ಕಾಲುವೆಗಳಲ್ಲಿ ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುವ ಕಾರ್ಯಕ್ಕೆ ಒಳನಾಡು ಜಲಸಾರಿಗೆ ಎಂದು ಹೆಸರು. ಇದಕ್ಕೆ ನಾಡದೋಣಿ, ಬುಟ್ಟಿದೋಣಿ, ತೆಪ್ಪ, ಹಾಯಿಗಡ ಉಪಯೋಗಿಸುತ್ತಾರೆ. ಆಂತರಿಕ ಜಲಸಾರಿಗೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಸೇರಿ ಒಟ್ಟು 312 ಕಿ.ಮೀ. ಒಳನಾಡು ಜಲಮಾರ್ಗಗಳಿವೆ.
2) ಸಮುದ್ರ ಸಾರಿಗೆ: ಹಡಗುಗಳ ಮೂಲಕ ಸಮುದ್ರ ಮತ್ತು ಸಾಗರಗಳಲ್ಲಿ ಪ್ರಯಾಣಿಕರು ಮತ್ತು ಸರಕುಗಳನ್ನು ಸಾಗಾಟ ಮಾಡುವುದಕ್ಕೆ ಸಾಗರೋತ್ತರ ಜಲಸಾರಿಗೆ ಎನ್ನುವರು. ಸಮುದ್ರ ಸಾರಿಗೆ ಅತಿ ಕಡಿಮೆ ವೆಚ್ಚದ ಸಾರಿಗೆ ಮೂಲವಾಗಿದೆ. ರಾಜ್ಯವು 320 ಕಿ.ಮೀ. ಕರಾವಳಿ ತೀರ ಹೊಂದಿದ್ದು, ಸುಮಾರು 20ಕ್ಕೂ ಹೆಚ್ಚು ಬಂದರುಗಳನ್ನು ಹೊಂದಿದೆ. ನವಮಂಗಳೂರು, ಮಲ್ಪೆ, ಭಟ್ಕಳ, ಹೊನ್ನಾವರ, ಅಂಕೋಲಾ, ಕಾರವಾರ ಇತ್ಯಾದಿಗಳಲ್ಲಿ ಸಮುದ್ರ ಸಾರಿಗೆ ಕಾಣಬಹುದಾಗಿದೆ. ಇವುಗಳಲ್ಲಿ ನವಮಂಗಳೂರು, ಕಾರವಾರ ಮಾತ್ರ ಸರ್ವಋತು ಬಂದರುಗಳು.

**ವಾಯು ಸಾರಿಗೆ:**

1911ರಲ್ಲಿ ಭಾರತದಲ್ಲಿ ವಾಯು ಸಾರಿಗೆ ಪ್ರಾರಂಭವಾಯಿತು. 1946ರಲ್ಲಿ ಹೈದರಾಬಾದ್ ಸರ್ಕಾರದಿಂದ ಡೆಕ್ಕನ್ ಏರ್‌ವೇಸ್‌ನಿಂದ ಬೆಂಗಳೂರು ಹೈದರಾಬಾದ್ ನಡುವೆ ವಿಮಾನ ಆರಂಭವಾಯಿತು. 1953ರಲ್ಲಿ ವಾಯು ಸಾರಿಗೆ ಭಾರತದಲ್ಲಿ ರಾಷ್ಟ್ರೀಕರಣಗೊಂಡಿತು. ಬೆಂಗಳೂರು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ದೇಶದ ನಾನಾ ಭಾಗಕ್ಕೆ ವಿಮಾನಯಾನ ಆರಂಭವಾಯಿತು. 2002 ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಆಯಿತು. ಇದು 2008ರಲ್ಲಿ ಕಾರ್ಯಾರಂಭಗೊಂಡಿತು. ಇದಕ್ಕೆ ಕೆಂಪೇಗೌಡ ನಿಲ್ದಾಣ ಎಂದು ನಾಮಕರಣ ಮಾಡಲಾಗಿದೆ.

## ಕರ್ನಾಟಕದಲ್ಲಿ ಸಂಪರ್ಕ ವ್ಯವಸ್ಥೆ

ಸುದ್ದಿಗಳ ಸಂಚಾರ ಅಥವಾ ವರ್ಗಾವಣೆಯು ಕೈಗಾರಿಕೆ ವ್ಯಾಪಾರ ಮತ್ತು ವಾಣಿಜ್ಯದ ಅಭಿವೃದ್ಧಿಗೆ ಅತ್ಯಂತ ಅವಶ್ಯಕವಾಗಿದೆ. ಹೀಗಾಗಿ ಸಂಪರ್ಕ ವ್ಯವಸ್ಥೆಯು ಅಭಿವೃದ್ಧಿ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗವಾಗಿದೆ. ಸಂಪರ್ಕ ವ್ಯವಸ್ಥೆ ಎಂದರೆ ಸುದ್ದಿಗಳ ಸಂಚಾರ ಅಥವಾ ವರ್ಗಾವಣೆಯ ವ್ಯವಸ್ಥೆಯಾಗಿದೆ. ಇನ್ನೊಂದು ಅರ್ಥದಲ್ಲಿ ಸುದ್ದಿಗಳ ರವಾನೆಯು ಸಂಪರ್ಕ ವ್ಯವಸ್ಥೆಯಾಗುತ್ತದೆ. ಸಾರಿಗೆ ಮತ್ತು ಸಂಪರ್ಕಗಳ ನಡುವಿನ ವ್ಯತ್ಯಾಸವೆಂದರೆ ಸಾರಿಗೆ ಸರಕು ಮತ್ತು ಪ್ರಯಾಣಿಕರ ಸಾಗಾಟವಾದರೆ ಸಂಪರ್ಕವು ಸುದ್ದಿಗಳ ಸಾಗಾಟವಾಗಿದೆ.

**ಅಂಚೆ ಸೇವೆ:**

ಅತ್ಯಂತ ಕಡಿಮೆ ವೆಚ್ಚದ ಸಂಪರ್ಕ ವಿಧಾನವಾಗಿದ್ದು, ಇದು ಸಾರಿಗೆ ಮತ್ತು ಸಂಪರ್ಕವನ್ನು ಸಾಧಿಸುವ ಪ್ರಮುಖ ವ್ಯವಸ್ಥೆಯಾಗಿದೆ. 1837ರಲ್ಲಿ ಭಾರತದಲ್ಲಿ ಅಂಚೆ ಸೇವೆಯನ್ನು ಸಾರ್ವಜನಿಕಗೊಳಿಸಿದ ನಂತರ ಈ ಸೇವೆ ಸಾಕಷ್ಟು ಜನಪ್ರಿಯ ಪಡೆಯಿತು. 1886–87ರಲ್ಲಿ ಮೈಸೂರು ರಾಜ್ಯದಲ್ಲಿ ಸುಮಾರು 231 ಅಂಚೆ ಕಛೇರಿಗಳು ಇದ್ದವು. ಏಪ್ರಿಲ್ 01, 1960ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಅಂಚೆ ಮತ್ತು ತಂತಿ ವೃತ್ತದ ಮುಖ್ಯ ಕಛೇರಿ ಸ್ಥಾಪನೆ ಆಯಿತು. 1960ರಲ್ಲಿ 3966 ಅಂಚೆ ಕಛೇರಿಗಳು. ಕರ್ನಾಟಕ ಅಂಚೆ ವೃತ್ತವನ್ನು ಬೆಂಗಳೂರು, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಎಂದು ಮೂರು ಭಾಗಗಳಾಗಿ ವಿಂಗಡನೆ ಮಾಡಲಾಗಿದೆ. 2009–10ರವರೆಗೆ

ರಾಜ್ಯದಲ್ಲಿ 9820 ಅಂಚೆ ಕಛೇರಿಗಳಿವೆ. ರಾಜ್ಯದಲ್ಲಿ ಅಂಚೆ ಇಲಾಖೆಯು 38ಕ್ಕೂ ಸೇವೆಗಳನ್ನು ಒದಗಿಸುತ್ತಿದ್ದು, ಇವುಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ.

1) ಸಂಪರ್ಕ ಸೇವೆಗಳು

2) ಹಣಕಾಸು ಸೇವೆಗಳು

3) ಹೆಚ್ಚಿನ ಸುಮೌಲ್ಯ ಸೇವೆಗಳು

4) ಇ. ಸೇವೆಗಳು

ಇತ್ತೀಚೆಗೆ ಅಂಚೆ ಸೇವೆಗಳು ವೈವಿಧ್ಯಮಯಗೊಳ್ಳುತ್ತಿದ್ದು, ಮ್ಯೂಚುವಲ್ ಫಂಡ್ ಯೋಜನೆ, ಜೀವ ವಿಮೇತರ ಉತ್ಪನ್ನಗಳು, ಕೆಲ ಸಾಮಾನ್ಯ ಬಳಕೆಯ ಔಷಧಿಗಳು ಇತ್ಯಾದಿ ಚಿಲ್ಲರೆ ಮಾರಾಟಗಳನ್ನು ಪ್ರಾರಂಭಿಸಿದೆ. ಹೀಗೆ ರಾಜ್ಯದಲ್ಲಿ ಅಂಚೆ ಇಲಾಖೆಯು ಗಣನೀಯ ಸೇವೆ ಸಲ್ಲಿಸುತ್ತಿದೆ.

**ದೂರ ಸಂಪರ್ಕ:**

ದೂರ ಸಂಪರ್ಕ ವ್ಯವಸ್ಥೆ ಅತೀ ವೇಗದ ಸಂಪರ್ಕ ವಿಧಾನವಾಗಿದೆ. ಇದು ಜಾಗತಿಕ ಪೈಪೋಟಿ, ಸಾಮರ್ಥ್ಯದ ವೃದ್ಧಿಗೆ ಪ್ರಮುಖ ಆಧಾರವಾಗಿದೆ. ದೂರ ಸಂಪರ್ಕ ಸೇವೆಯ ರೇಡಿಯೋ ಮತ್ತು ದೂರದರ್ಶನ ಇತ್ಯಾದಿಗಳನ್ನು ಒಳಗೊಂಡಿದೆ. ಭಾರತದ ತಾಂತ್ರಿಕ ಸೇವೆಯು ವಿಶ್ವದ ಅತ್ಯಂತ ಹಳೆಯ ಸರ್ಕಾರಿ ಮಾಲೀಕತ್ವದ ಸಾರ್ವಜನಿಕ ಸೇವಾ ಸಂಸ್ಥೆಯಾಗಿದೆ. 1857ರಲ್ಲಿ ಪ್ರಥಮವಾಗಿ ಕೊಲ್ಕತ್ತ ಮತ್ತು ಡೈಮಂಡ್ ಬಂದರುಗಳ ನಡುವೆ ತಂತಿ ಸೇವೆ ಪ್ರಾರಂಭವಾಯಿತು.

**ದೂರವಾಣಿ ಸೇವೆಗಳು:**

ಕರ್ನಾಟಕದಲ್ಲಿ 1887–88ರಲ್ಲಿ ಬೆಂಗಳೂರಿಗೆ ಪ್ರಥಮವಾಗಿ ದೂರವಾಣಿ ಸೇವೆ ಪ್ರಾರಂಭವಾಯಿತು. 1896 ಹೆಸರಘಟ್ಟ, ಚಿಕ್ಕಭಾಗವರ ನಡುವೆ 11 ಮೈಲು ಉದ್ದದ ತಾತ್ಕಾಲಿಕ ದೂರವಾಣಿ ಆರಂಭವಾಯಿತು. 1918ರ ಸುಮಾರಿಗೆ ಹಳೆ ಮಯಸೂರು ಪ್ರಾಂತ್ಯದಲ್ಲಿ ಸುಮಾರು 533 ಮೈಲು ಉದ್ದದ ದೂರವಾಣಿ ಮಾರ್ಗ ಲಭ್ಯವಿತ್ತು. ಇಂದು ರಾಜ್ಯಾದ್ಯಂತ ದೂರವಾಣಿ ಸೇವೆಯನ್ನು ವಿಸ್ತರಿಸಲಾಗಿದೆ. ಸ್ಥಿರ ದೂರವಾಣಿಗಳ ಜೊತೆಗೆ ಮೊಬೈಲ್ ದೂರವಾಣಿಗಳು ಹೆಚ್ಚು ಜನಪ್ರಿಯತೆ ಹೊಂದಿದೆ. 2009–10ರವರೆಗೆ ರಾಜ್ಯದಲ್ಲಿ 2778 ದೂರವಾಣಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

**ರೇಡಿಯೋ:**

1935ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಡಾ.ಗೋಪಾಲಸ್ವಾಮಿಯವರು ದೇಶದ ಪ್ರಥಮ ರೇಡಿಯೋ ನಿಲಯವನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಆಕಾಶವಾಣಿ ಎಂಬ ಪದ ನಾ.ಕಸ್ತೂರಿ ಅವರ ಕೊಡುಗೆಯಾಗಿದೆ. 1942ರಲ್ಲಿ ಮೈಸೂರು ಆಕಾಶವಾಣಿ ಸರ್ಕಾರಿ ಸಂಸ್ಥೆಯಾಯಿತು. ನಂತರ ಭದ್ರಾವತಿ 1965, ಧಾರವಾಡ 1950, ಗುಲ್ಬರ್ಗಾ 1966, ಚಿತ್ರದುರ್ಗ 1991, ಹೊಸಪೇಟೆ 1992, ಮಡಿಕೇರಿ, ಕಾರವಾರ ಮುಂತಾದ ಸ್ಥಳಗಳಲ್ಲಿ ಆಕಾಶವಾಣಿ ಕೇಂದ್ರಗಳು ಸ್ಥಾಪನೆಯಾದವು. ಇತ್ತೀಚೆಗೆ ರಾಜ್ಯದಲ್ಲಿ ಖಾಸಗಿ ಚಾನೆಲ್‌ಗಳು ಮನರಂಜನಾ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿವೆ.

**ದೂರದರ್ಶನ:**

ಸೆಪ್ಟೆಂಬರ್ 15, 1959ರಲ್ಲಿ ಭಾರತದಲ್ಲಿ ಪ್ರಾರಂಭವಾಯಿತು. 1965ರಿಂದ ನಿಯಮಿತ ಸೇವೆ ಪ್ರಾರಂಭವಾಯಿತು. ನವೆಂಬರ್ 03, 1977ರಂದು ಗುಲ್ಬರ್ಗಾದಲ್ಲಿ ರಾಜ್ಯದ ಪ್ರಥಮ ದೂರದರ್ಶನ ಮರುಪ್ರಸಾರ ಕೇಂದ್ರ ಸ್ಥಾಪನೆ ಆಯಿತು. ಇಂದು ರಾಜ್ಯದಲ್ಲಿ ಅನೇಕ ಖಾಸಗಿ ಚಾನೆಲ್‌ಗಳಿದ್ದು, ಮನರಂಜನೆಯೊಂದಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ಷಣದ ಮಾಹಿತಿಯನ್ನು ಬಿತ್ತರಿಸುತ್ತಿವೆ.

**ಜಿಯಾಗ್ರಫಿಕ್ ಇನ್‌ಫರ್‌ಮೇಷನ್ ಸಿಸ್ಟಂ:**

ಇದು ಕಂಪ್ಯೂಟರ್, ಮಲ್ಟಿ ಮಿಡಿಯಾ, ಟೆಲಿ ಸಂಪರ್ಕಗಳಲ್ಲಿಯ ಕ್ರಾಂತಿಯಿಂದಾಗಿ ನಕ್ಷಾಶಾಸ್ತ್ರದಲ್ಲಿ ಸಂಪೂರ್ಣ ಮಾರ್ಪಾಟು ಆಗಿದೆ. ಭೂ ಮೇಲ್ಮೈನ ಅಂಕಿ ಅಂಶಗಳ ವಿಶ್ಲೇಷಣೆ, ನಕ್ಷೆಗಳ ರಚನೆಯಲ್ಲಿ ಕಂಪ್ಯೂಟರನ್ನು

ಅಧಿಕವಾಗಿ ಬಳಸಲಾಗುತ್ತಿದೆ. ನಕ್ಷೆಗಳ ರಚನೆಯಲ್ಲಿ ಆಪಲ್, ಆರ್ಕ ಇನ್‌ಫೋ, ಆಟೋಕ್ಯಾಡ್ ತಂತ್ರಾಂಶಗಳಾಗಿವೆ. ನೈಜ ಪ್ರಪಂಚದ ಭೂ ಮೇಲ್ಮೈನ ಅಂಕಿ ಅಂಶ ಮತ್ತು ಮಾಹಿತಿಯನ್ನು ಕಲೆಹಾಕುವ, ಸಂಗ್ರಹಿಸುವ, ಅಗತ್ಯವಿದ್ದಾಗ ಬಳಕೆ ಮಾಡುವ, ಮಾರ್ಪಡಿಸುವ, ತೋರಿಸುವ ಪ್ರಬಲ ಸಲಕರಣೆಯ ಸಮೂಹವನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆ ಎನ್ನುವರು.

**ಉಪಯೋಗಗಳು:**

* ವಿವಿಧ ಭೌಗೋಳಿಕ, ಸಾಮಾಜಿಕ, ಆರ್ಥಿಕ ಭೂ ಮೇಲ್ಮೈಯನ್ನು ಸುಲಭವಾಗಿ ವಿಶ್ಲೇಷಿಸಬಹುದು. ಅವುಗಳ ಮಾದರಿಯನ್ನು ರಚಿಸಬಹುದು.
* ಸಾಂಪ್ರದಾಯಿಕವಾದ ನಕ್ಷೆಯನ್ನು ಕಂಪ್ಯೂಟರ್‌ನಲ್ಲಿ ಗಣಕೀಕರಣಗೊಳಿಸಿ ಪ್ರಸ್ತುತ ಇರುವ ಮಾರ್ಪಾಡುಗಳೊಂದಿಗೆ ಅಪ್ ಡೇಟ್ ಮಾಡಲು ಸಾಧ್ಯ.
* ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸಿಐಎಸ್ ಪ್ರಮಾಣ.
* ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದೆ. ಅತಿ ಕಡಿಮೆ ಅವಧಿ, ನಿಖರ ಮಾಹಿತಿ.
* ನಕ್ಷೆಗಳು ಹೆಚ್ಚು ಆಕರ್ಷಕ ಮತ್ತು ಸೃಷ್ಟಿ ಮಾಹಿತಿ.
* ಮಾರುತಗಳ ಮುನ್ಸೂಚನೆ.
* ಭೂಗೋಳ ಶಾಸ್ತ್ರ ಅಭಿವೃದ್ಧಿಗೆ ದೊರೆತ ವಿಶೇಷ ಆಯಾಮ.

**ನಗರ ಭೂ ಬಳಕೆ ನೀತಿ ಮತ್ತು ನಗರೀಕರಣ:**

ಕರ್ನಾಟಕದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ 10 ನಗರ ಪಾಲಿಕೆಗಳಿವೆ. ಇತರ ನಗರ ಪಾಲಿಕೆಗಳು ಎಂದರೆ, ಬೆಳಗಾವಿ, ಮೈಸೂರು, ಶಿವಮೊಗ್ಗ, ದಾವಣಗೆರೆ, ತುಮಕೂರು, ವಿಜಯಪುರ, ಕಲ್ಬುರ್ಗಿ, ಬಳ್ಳಾರಿ, ಮಂಗಳೂರು, ಹುಬ್ಬಳ್ಳಿ, ಧಾರವಾಡ.

* ಇತರೆ ನಗರಾಭಿವೃದ್ಧಿ ಪ್ರಾಧಿಕಾರಗಳು 30
* ನಗರ ಸಭೆಗಳು 57
* ಪುರಸಭೆಗಳು 113
* ಪಟ್ಟಣ ಪಂಚಾಯತಿಗಳು 90
* ರಾಜ್ಯದಲ್ಲಿರುವ ಒಟ್ಟು ನಗರ ಸ್ಥಳೀಯ ಸಂಸ್ಥೆಗಳು 271

ಕರ್ನಾಟಕವು ದೇಶದಲ್ಲಿಯೇ ಅತೀ ವೇಗವಾಗಿ ನಗರೀಕರಣಗೊಳ್ಳುತ್ತಿರುವ 7ನೇ ರಾಜ್ಯವಾಗಿದೆ. 2011ರ ಜನಗಣತಿಯ ಪ್ರಕಾರ, ರಾಜ್ಯದಲ್ಲಿ 6.1 ಕೋಟಿ ಜನಸಂಖ್ಯೆಯಿದ್ದು, ಇದರಲ್ಲಿ 38.6% (2.35 ಕೋಟಿ)ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ನಗರದ ಜನಸಂಖ್ಯೆ ಬೆಳವಣಿಗೆಯು ಗ್ರಾಮೀಣ ಜನಸಂಖ್ಯೆಗಿಂತ ಹೆಚ್ಚಾಗಿದೆ. ಮುಂದಿನ 10 ವರ್ಷಗಳಲ್ಲಿ, ನಗರ ಜನಸಂಖ್ಯೆಯು ಶೇ.50ರಷ್ಟು ಆಗುವುದೆಂದು ನಿರೀಕ್ಷಿಸಲಾಗಿದೆ. ಬೆಂಗಳೂರು ಅತೀ ಹೆಚ್ಚಿನ ನಗರೀಕರಣವಾಗುತ್ತಿರುವ ಜಿಲ್ಲೆಯಾಗಿ ಹೊರ ಹೊಮ್ಮುತ್ತಿದ್ದು, ಶೇ.90.94ರಷ್ಟು ಜನರು ಜಿಲ್ಲೆಯ ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಧಾರವಾಡ, ದಕ್ಷಿಣ ಕನ್ನಡ, ಮೈಸುರು, ಬಳ್ಳಾರಿ ಕ್ರಮವಾಗಿ ಹೆಚ್ಚು ಜನ ನಗರದಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದಲ್ಲಿ ಕೊಡಗು ಜಿಲ್ಲೆ ಅತಿ ಕಡಿಮೆ ಜನಸಂಖ್ಯೆ ಹೊಂದಿದೆ. ನಗರ ಆಶ್ರಯ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ, ನನ್ನ ಮನೆ, ಮುಂತಾದ ಯೋಜನೆಗಳ ಮೂಲಕ ನಗರಗಳಲ್ಲಿ ವಸತಿ ಕಲ್ಪಿಸಲಾಗುತ್ತಿದೆ. ನಗರದ ಕೊಳಗೇರಿಯ ಜನಸಂಖ್ಯೆ ಶೇ.13.9ರಷ್ಟಾಗಿದೆ. ಬೆಂಗಳೂರು ಶೇ.21.5ರಷ್ಟು ಕೊಳಚೆ ನಿವಾಸಿಗಳನ್ನು ಹೊಂದಿದೆ. ಪ್ರಸ್ತುತ ಅಮೃತ, ಸ್ಮಾರ್ಟ್ ಸಿಟಿ ಮುಂತಾದ ಯೋಜನೆಗಳ ಮೂಲಕ ನಗರಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

**ಕರ್ನಾಟಕದ ಜನಸಂಖ್ಯಾ ವೈಶಿಷ್ಟ್ಯಗಳು:**

* ಒಟ್ಟು ಜನಸಂಖ್ಯೆ 6.11 ಕೋಟಿ
  - ಪುರುಷರು 3.09 ಕೋಟಿ
  - ಮಹಿಳೆಯರು 3.01 ಕೋಟಿ
* ಕರ್ನಾಟಕದ ಜನಸಂಖ್ಯೆ ಬೆಳವಣಿಗೆ ದರ ಶೇ.15.60
* ಲಿಂಗಾನುಪಾತ 973 / 1000
* ಗ್ರಾಮೀಣ ಲಿಂಗಾನುಪಾತ 979 / 1000
* ನಗರ ಪ್ರದೇಶದ ಲಿಂಗಾನುಪಾತ 963 / 1000
* ಜನಸಾಂದ್ರತೆ ಪ್ರತಿ ಚ.ಮೀ.319
* ಅತಿ ಹೆಚ್ಚು ಬೆಂಗಳೂರು ನಗರ 4381
* ಅತಿ ಕಡಿಮೆ ಕೊಡಗು 135
* ಅತಿ ಹೆಚ್ಚು ಲಿಂಗಾನುಪಾತ ಹೊಂದಿರುವ ಜಿಲ್ಲೆ ಉಡುಪಿ 1094 / 1000
* ಅತಿ ಕಡಿಮೆ ಲಿಂಗಾನುಪಾತ ಹೊಂದಿರುವ ಜಿಲ್ಲೆ ಬೆಂಗಳೂರು ನಗರ 916 / 1000
* ಸಾಕ್ಷರತೆ ಒಟ್ಟು 75.4%
* ಪುರುಷ 82.47%
* ಮಹಿಳೆ 68.08%

**ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಜಿಲ್ಲೆಗಳು:**

* ಬೆಂಗಳೂರು 96.21 ಲಕ್ಷ
* ಬೆಳಗಾವಿ 47.79 ಲಕ್ಷ
* ಮೈಸೂರು 30.01 ಲಕ್ಷ

ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ಜಿಲ್ಲೆ ಕೊಡಗು 5.54 ಲಕ್ಷ.

ಅತಿ ಹೆಚ್ಚು ಸಾಕ್ಷರ ಜಿಲ್ಲೆಗಳು:

* ದಕ್ಷಿಣ ಕನ್ನಡ 88.57%
* ಬೆಂಗಳೂರು ನಗರ 87.67%
* ಉಡುಪಿ 86.24%

ಅತಿ ಕಡಿಮೆ ಸಾಕ್ಷರತೆ ಹೊಂದಿರುವ ಜಿಲ್ಲೆಗಳು:

* ಯಾದಗಿರಿ 51.83%
* ರಾಯಚೂರು 59.56%
* ಚಾಮರಾಜನಗರ 64.85%

**ಕರ್ನಾಟಕದ ಶಿಶು ಲಿಂಗಾನುಪಾತ (0–6) 948**

* ಅತಿ ಹೆಚ್ಚು ಶಿಶು ಲಿಂಗಾನುಪಾತ – ಕೊಡಗು 978
* ಅತಿ ಕಡಿಮೆ ಶಿಶು ಲಿಂಗಾನುಪಾತ – ವಿಜಯಪುರ 931

**ಜನಸಂಖ್ಯಾ ಸಮಸ್ಯೆಗಳು:**

* ಅತಿ ಹೆಚ್ಚು ಜನನ ದರ
* ಕಡಿಮೆ ಮರಣ ದರ
* ಕಡಿಮೆ ತಲಾ ಆದಾಯ
* ನಿರುದ್ಯೋಗ ಸಮಸ್ಯೆ
* ಬಡತನ
* ಅನಕ್ಷರತೆ
* ಮಿತಿಮೀರಿದ ನಗರೀಕರಣ
* ಆಹಾರದ ಸಮಸ್ಯೆ
* ನೀರಿನ ಸಮಸ್ಯೆ
* ಅರಣ್ಯ ನಾಶ
* ಮೂಲ ಸೌಕರ್ಯಗಳ ಸಮಸ್ಯೆ
* ಜನದಟ್ಟನೆ

ಇತ್ಯಾದಿ.

## ಜನಸಂಖ್ಯಾ ನೀತಿಗಳು

**ಜನಸಂಖ್ಯಾ ರಾಷ್ಟ್ರೀಯ ಆಯೋಗ:**

ಭಾರತವು ಮೇ 11, 2000ರಂದು ಒಂದು ಬಿಲಿಯನ್ ಜನಸಂಖ್ಯೆ ತಲುಪಿತು. ಇದರ ಸವಿ ನೆನಪಿಗಾಗಿ ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಇದನ್ನು ಸ್ಥಾಪಿಸಲಾಯಿತು.

**ರಾಷ್ಟ್ರೀಯ ಜನಸಂಖ್ಯಾ ನಿತಿ 2000**

**ಗುರಿಗಳು:**

* ಒಟ್ಟು ಫಲವತ್ತತೆಯ ಪ್ರಮಾಣವನ್ನು 2.1ಕ್ಕೆ ತಗ್ಗಿಸುವುದು.
* ಜನನ, ಮರಣ ಮತ್ತು ವಿವಾಹಗಳ ದಾಖಲೆ.
* ಜನನದ ನಿಯಂತ್ರಣ.
* ಶಿಶು ಮರಣ ದರವನ್ನು ಸಾವಿರಕ್ಕೆ 30ಕ್ಕಿಂತ ಕಡಿಮೆ ಮಾಡುವುದು.
* ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ.
* ತಾಯಂದಿರ ಮರಣ ಪ್ರಮಾಣವನ್ನು 100ಕ್ಕಿಮತ ಕಡಿಮೆ ಮಾಡುವುದು.
* 2045ರ ವೇಳೆಗೆ ಸ್ಥಿರ ಜನಸಂಖ್ಯೆಯನ್ನು ಹೊಂದುವುದು.

**ಗ್ರಾಮೀಣ ನಗರ ಅಂಚಿನಲ್ಲಿರುವ ನಗರ ಬೆಳವಣಿಗೆ ಸಮಸ್ಯೆಗಳು:**

1) ಗ್ರಾಮೀಣ ಆಚರಣೆಗಳಿಗೆ ಕುತ್ತು
2) ಗ್ರಾಮದ ಜನರ ವಿರೋಧ
3) ನಗರ ವಿಸ್ತರಣೆಗೆ ಕೃಷಿಕರ ವಿರೋಧ
4) ಮೂಲ ಸೌಕರ್ಯಗಳ ಕೊರತೆ
5) ಯೋಜಿತ ನಗರ ನಿರ್ಮಾಣ ಇಲ್ಲದಿರುವುದು
6) ರಾಜಕೀಯ ಇಚ್ಛಾ ಶಕ್ತಿ ಕೊರತೆ

7) ಆಡಳಿತ ವೈಫಲ್ಯ

8) ಗ್ರಾಮೀಣ ಜನ ಜೀವನ ಅಸ್ತವ್ಯಸ್ಥ

9) ಹಣಕಾಸಿನ ಕೊರತೆ

10) ಸಾಮಾಜಿಕ ಸಮಸ್ಯೆಗಳು

ಇತ್ಯಾದಿ.

**ನಗರ ಯೋಜನೆ:**

1) ಕರ್ನಾಟಕ ಗೃಹ ಮಂಡಳಿ 225 ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

2) 100 ವಸತಿ ಯೋಜನೆಗಳನ್ನು 2002ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

3) ಸುವರ್ಣ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ 50 ವಸತಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

4) ನಗರ ಆಶ್ರಯ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ, ನನ್ನ ಮನೆ ಮುಂತಾದ ಯೋಜನೆಗಳ ಮೂಲಕ ನಗರಗಳಲ್ಲಿ ವಸತಿ ಕಲ್ಪಿಸಲಾಗುತ್ತಿದೆ.

5) ಅಮೃತ ಮತ್ತು ಸ್ಮಾರ್ಟ್‌ಸಿಟಿ ಯೋಜನೆಗಳ ಮೂಲಕ ನಗರದ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

6) ನಗರಗಳಲ್ಲಿ ನೀರು ಸರಬರಾಜು, ಚರಂಡಿ ವ್ಯವಸ್ಥೆ, ನೈರ್ಮಲ್ಯ, ರಸ್ತೆ, ಇಂಧನ, ಸಾರಿಗೆ, ಸಂಪರ್ಕ, ಘನ ತ್ಯಾಜ್ಯ ವಿಲೇವಾರಿ ಮತ್ತು ವಸತಿ ಯೋಜನೆಗಳ ಮೂಲಕ ನಗರಗಳನ್ನು ಯೋಜಿಸಲಾಗುತ್ತಿದೆ.

**ಕೊಳಚೆ ಮತ್ತು ನಗರ ವಸತಿ:**

1) ಕಳೆದ ಒಂದು ದಶಕದಲ್ಲಿ ರಾಜ್ಯದ ಕೊಳಚೆ ಪ್ರದೇಶದ ಜನಸಂಖ್ಯೆ 14.02 ಲಕ್ಷದಿಂದ 32.91 ಲಕ್ಷಕ್ಕೆ ಹೆಚ್ಚಿದೆ.

2) 2001ರ ಜನಗಣತಿಯ ಪ್ರಕಾರ 7.6%ರಷ್ಟಿದ್ದ ಕೊಳಚೆ ನಿವಾಸಿಗಳ ಜನಸಂಖ್ಯೆ 13.9ರಷ್ಟಾಗಿದೆ.

3) ಬೆಂಗಳೂರು ಜಿಲ್ಲೆಯಲ್ಲಿ ಶೇ.21.5ರಷ್ಟು ಕೊಳಚೆ ಪ್ರದೇಶದ ನಿವಾಸಿಗಳಿದ್ದಾರೆ.

4) ಬಳ್ಳಾರಿಯಲ್ಲಿ 6.1ರಷ್ಟು ಧಾರವಾಡದಲ್ಲಿ ಶೇ.6ರಷ್ಟು ಕೊಳಚೆ ನಿವಾಸಿಗಳಿದ್ದಾರೆ.

5) ಉಡುಪಿ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಶೇ.1ರಷ್ಟು ಕೊಳಚೆ ನಿವಾಸಿಗಳಿದ್ದಾರೆ.

6) ಕೊಳಚೆ ಪ್ರದೇಶದಲ್ಲಿ ಲಿಂಗಾನುಪಾತ ಸಾವಿರಕ್ಕೆ 1015 ಮಹಿಳೆಯರು ಇದ್ದಾರೆ.

7) ಶಿಶು ಲಿಂಗಾನುಪಾತ ಕೊಳಚೆ ಪ್ರದೇಶದಲ್ಲಿ 964ರಷ್ಟಿದೆ.

**ಆಂತರಿಕ ಮತ್ತು ಪ್ರಾದೇಶಿಕ ವ್ಯಾಪಾರ:**

* ಕರ್ನಾಟಕವು ಸುವ್ಯವಸ್ಥಿತವಾದ ಆಂತರಿಕ ವ್ಯಾಪಾರಕ್ಕೆ ವ್ಯವಸ್ಥೆಯನ್ನು ಹೊಂದಿದೆ.
* ಕೃಷಿ, ಸೇವಾ ಕ್ಷೇತ್ರಗಳು ಆಂತರಿಕ ಮತ್ತು ಪ್ರಾದೇಶಿಕ ವ್ಯಾಪಾರ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳುತ್ತಿವೆ.
* ಗಡಿಭಾಗದಲ್ಲಿಯೂ ಕೂಡಾ ಕರ್ನಾಟಕದ ಪ್ರಾದೇಶಿಕ ವ್ಯಾಪಾರವು ಪಸರಿಸಿದೆ.
* ಪ್ರಾದೇಶಿಕ ಮತ್ತು ಆಂತರಿಕ ವ್ಯಾಪಾರದಿಂದ ಗ್ರಾಮೀಣ ಮತ್ತು ನಗರ ಆದಾಯವು ಹೆಚ್ಚಿದೆ.

**ಗ್ರಾಮೀಣ ಮಾರುಕಟ್ಟೆ ಕೇಂದ್ರಗಳ ಪಾತ್ರ:**

1) ನಮ್ಮ ಗ್ರಾಮೀಣ ಭಾಗದಲ್ಲಿ ಸಾಮಾನ್ಯವಾಗಿ ವಾರದ ಸಂತೆಗಳೆಂದು ಕರೆಯುವ ರೂಢಿ ಇದೆ.

2) ಆರ್ಥಿಕ ಸ್ವಾವಲಂಬನೆಗೆ ಸಹಾಯಕವಾಗಿವೆ.

3) ಗ್ರಾಮದ ಅಗತ್ಯತೆಗಳನ್ನು ಪೂರೈಸುತ್ತವೆ.

4) ಜನರ ನಗರ ವಲಸೆಯನ್ನು ತಪ್ಪಿಸುತ್ತದೆ.

5) ಉದ್ಯೋಗ ಅವಕಾಶ ಕೊಡುತ್ತದೆ.

6) ಸ್ಥಳೀಯ ಸಂಪನ್ಮೂಲಗಳ ಸದುಪಯೋಗ.

7) ಸ್ಥಳೀಯ ಉತ್ಪಾದನೆಗಳಿಗೆ ಸುಲಭವಾದ ಮಾರುಕಟ್ಟೆ.

8) ಗ್ರಾಮೀಣ ಭಾಗದ ಜನರಿಗೆ ಮಾರುಕಟ್ಟೆಗಳ ಅರಿವು ಮೂಡಿಸುತ್ತದೆ.

9) ಸ್ಥಳೀಯ ಸಂಸ್ಥೆಗಳಿಗೆ ಆದಾಯ ಒದಗಿಸುತ್ತಿದೆ.

10) ಇಂತಹ ಮಾರುಕಟ್ಟೆ ಕೇಂದ್ರಗಳು ಗ್ರಾಮದ ಏಳಿಗೆಗೆ ಕಾರಣವಾಗುತ್ತದೆ.

# ವಿಭಾಗ – 2

# ಭಾರತ ಸಂವಿಧಾನ

ಸಂವಿಧಾನದ ಇಂಗ್ಲೀಷ್ ರೂಪ 'ಕಾನ್ಸ್ಟಿಟ್ಯೂಷನ್' ಎಂಬ ಪದವು ಲ್ಯಾಟಿನ್ ಮೂಲದ 'ಕಾನ್ಸ್ಟಿಯೋ'ದಿಂದ ಬಂದಿದೆ. 'ಕಾನ್ಸ್ಟಿಯೋ' ಎಂಬ ಪದವನ್ನು ಆದೇಶ, ಮತ್ತು ರೆಗ್ಯೂಲೇಷನ್‌ಗಾಗಿ ಬಳಸಲಾಗುತ್ತಿತತು. ಸಂವಿಧಾನ ಒಂದು ದೇಶದ ಪರಮೋಚ್ಚ ಕಾನೂನು ಹಾಗೂ ದೇಶದ ಮೂಲಭೂತ ರಾಜಕೀಯ ದಾಖಲೆ. ತನ್ನ ಪ್ರಜೆಗಳನ್ನು ಆಳ್ವಿಕೆಗೆ ಒಳಪಡಿಸಬೇಕಾದ ಮೂಲಭೂತ ರಾಜಕೀಯ ವ್ಯವಸ್ಥೆಯನ್ನು ಸಂವಿಧಾನ ರೂಪಿಸುತ್ತದೆ.

ಸಂವಿಧಾನ ರಾಜ್ಯದ ಅಂಗಗಳನ್ನು ಸೃಷ್ಟಿಸುತ್ತದೆ. ಹಾಗೂ ಅಂಗಗಳ ನಡುವಿನ ಪರಸ್ಪರ ಸಂಬಂಧಗಳು, ಅಧಿಕಾರಗಳು, ಕ್ರಿಯೆಗಳು ಹೊಣೆಗಾರಿಕೆಗಳನ್ನು ನಿರೂಪಿಸುತ್ತದೆ. ಮತ್ತೊಂದೆಡೆ ಸಂವಿಧಾನ ಅಂಗಗಳ ಹಾಗೂ ಜನರ ನಡುವಿನ ಸಂಬಂಧದ ರೂಪುರೇಷೆಗಳನ್ನು ಸೂಚಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಮಾನವರ ಆಳ್ವಿಕೆಗಿಂತ ಕಾನೂನಿನ ಆಳ್ವಿಕೆಯನ್ನು ಸಂವಿಧಾನ ಬೆಂಬಲಿಸುತ್ತದೆ.

**ಸಂವಿಧಾನದ ವರ್ಗೀಕರಣ:**

ಸಾಮಾನ್ಯವಾಗಿ ಸಂವಿಧಾನವನ್ನು ಈ ಕೆಳಗಿನಂತೆ ವರ್ಗೀಕರಣ ಮಾಡಲಾಗಿದೆ.

* ಲಿಖಿತ ಸಂವಿಧಾನ: ಇಲ್ಲಿ ಸಂವಿಧಾನ ಲಿಖಿತ ರೂಪದಲ್ಲಿ ಇರುತ್ತದೆ. ಉದಾ: ಆಸ್ಟ್ರೇಲಿಯಾ, ಭಾರತ, ಕೆನಡಾ.
* ಅಲಿಖಿತ ಸಂವಿಧಾನ: ಉದಾ: ನ್ಯೂಜಿಲ್ಯಾಂಡ್ ಸಂವಿಧಾನ, ಇಂಗ್ಲೇಂಡ್ ಸಂವಿಧಾನ.
* ಅಧಿನಿಯಮಿತ ಸಂವಿಧಾನ: ಉದಾ: ಭಾರತದ ಸಂವಿಧಾನ.
* ವಿಕಸಿತ ಸಂವಿಧಾನ: ಉದಾ: ಬ್ರಿಟೀಷ್ ಸಂವಿಧಾನ.
* ಒಕ್ಕೂಟ ಸಂವಿಧಾನ: ಅಮೇರಿಕಾದ ಸಂವಿಧಾನ.
* ಏಕಾತ್ಮಕ ಸಂವಿಧಾನ: ಈ ಸಂವಿಧಾನ ಪ್ರಧಾನ ಲಕ್ಷಣವೆಂದರೆ ಅಧಿಕಾರ ಕೇಂದ್ರೀಕರಣ.
* ನಮ್ಯ ಸಂವಿಧಾನ ಅಂದರೆ ಸುಲಭವಾಗಿ ಬದಲಿಸಬಹುದಾದ ಸಂವಿಧಾನ.
* ಅನಮ್ಯ ಸಂವಿಧಾನ ಅಂದರೆ ಸುಲಭವಾಗಿ ಬದಲಿಸಲಾರದ ಸಂವಿಧಾನ.

**ಸಂವಿಧಾನಾತ್ಮಕ ಕಾನೂನಿನ ವಿಕಾಸ:**

ಆಧುನಿಕ ರಾಜ್ಯಗಳು ಕಲ್ಯಾಣ ರಾಜ್ಯಗಳಾಗಿದ್ದು, ಅವುಗಳ ಕಾರ್ಯ ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆ ಹಾಗೂ ದೇಶವನ್ನು ಬಾಹ್ಯ ಆಕ್ರಮಣದಿಂದ ರಕ್ಷಿಸುವುದಷ್ಟೇ ಅಲ್ಲದೆ ಇವುಗಳನ್ನು ಮೀರಿದ್ದಾಗಿದೆ.

ದೇಶದ ಎಲ್ಲಾ ಜನರ ಕಲ್ಯಾಣಕ್ಕಾಗಿ ರಾಜ್ಯದ ಅಂಗಗಳನ್ನು ಸೃಷ್ಟಿಸಿ ಅವುಗಳ ಕಾರ್ಯ ಮತ್ತು ಹೊಣೆಗಾರಿಕೆಗಳನ್ನು ನಿರೂಪಿಸುವುದು ಅಗತ್ಯವಾಗುತ್ತದೆ. ಸಾಂಪ್ರದಾಯಿಕವಾಗಿ ರಾಜ್ಯದ ಅಂಗಗಳನ್ನು ಮೂರು ವಿಧವಾಗಿ ವಿಭಜಿಸಬಹುದು. ಅವುಗಳೆಂದರೆ, ಕಾನೂನುಗಳನ್ನು ರೂಪಿಸುವ ಶಾಸಕಾಂಗ, ಕಾನೂನುಗಳನ್ನು ಜಾರಿಗೊಳಿಸಿ ಕಾರ್ಯಗತಗೊಳಿಸುವುದು ಕಾರ್ಯಾಂಗ, ಕಾನೂನುಗಳನ್ನು ಅರ್ಥೈಸಿ, ನ್ಯಾಯ ದೊರಕಿಸುವುದು ನ್ಯಾಯಾಂಗ.

ರಾಜ್ಯದ ಕಾರ್ಯನಿರ್ವಹಣೆಗೆ ಅಗತ್ಯವಾಗಬಹುದಾದ ಬೇರಾವುದೇ ಅಂಗಗಳನ್ನು ಸಂವಿಧಾನ ಸೃಷ್ಟಿಸಬಹುದು. ಆಧುನಿಕ ಸಂವಿಧಾನಾತ್ಮಕ ಕಾನೂನುಗಳು ಪ್ರಜೆಗಳಿಗೆ, ಅವರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ರಾಜ್ಯದೊಡನೆ ಅವರ ಸಂಬಂಧಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ.

**ಭಾರತೀಯ ಸಂವಿಧಾನದ ಚಾರಿತ್ರಿಕ ಬೆಳವಣಿಗೆ:**

ಭಾರತದ ಸಂವಿಧಾನ ಶೂನ್ಯದಿಂದ ಜನ್ಮ ತಾಳಿಲ್ಲ. ಅದು ವಿಕಸನದ ಸುಧಾರಣೆಗಳ ಹಾಗೂ ಆಯಾಕಾಲದ ಪ್ರಮುಖ ವ್ಯಕ್ತಿಗಳಿಂದಾದ ಆಡಳಿತಾತ್ಮಕ ವ್ಯವಸ್ಥೆಯ ಪುನ: ಸೃಷ್ಟಿಯ ಒಂದು ಅವ್ಯಾಹತ ಪ್ರಕ್ರಿಯೆ.

ಪ್ರತಿ ಪೀಳಿಗೆಯೂ ನಿರಂತರವಾಗಿ ತಮ್ಮ ಕೊಡುಗೆಗಳನ್ನು ನೀಡಿ ಇಂದಿನ ಭಾರತೀಯ ಸಂವಿಧಾನ ರಚನೆ ಆಗಿದೆ.

ಋಗ್ವೇದ ಕಾಲದ ಸಭೆ, ಸಮಿತಿ ಮತ್ತು ವಿಧಾತದಂತಹ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜಾತಂತ್ರ ಪದ್ದತಿ ಕಂಡು ಬರುತ್ತಿತ್ತು. ರಾಮಾಯಣ, ಮಹಾಭಾರತ, ಬೌದ್ದ ಸಂಘಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ, ಅಶೋಕನ ಧರ್ಮ, ನೀತಿ ಧರ್ಮ ಸೂತ್ರಗಳಲ್ಲಿ ಆಳುವವರ ದೈವದತ್ತ ಹಕ್ಕುಗಳು ಜನರ ಬಗೆಗಿನ ಅವರ ಹೊಣೆಗಾರಿಕೆ, ರಾಜ್ಯಕ್ಕೆ ಜನರ ಕರ್ತವ್ಯ, ಪ್ರಜಾಸತ್ತಾತ್ಮಕ ಸಭೆಗಳು ಮತ್ತು ಮಂಡಳಿಗಳ ಬಗ್ಗೆ ಹಲವು ಪರಿಕಲ್ಪನೆಗಳಿವೆ.

ಮಧ್ಯಕಾಲೀನ ಭಾರತದಲ್ಲಿ ಅದರಲ್ಲೂ ಪ್ರಮುಖವಾಗಿ ಚೋಳರು ಸ್ಥಳೀಯ ಸ್ವಾಯತ್ತ ಸರ್ಕಾರಗಳನ್ನು ರೂಪಿಸಿದರು. ಇದನ್ನು ವಿಜಯನಗರ ರಾಜರುಗಳು ಮತ್ತು ಆ ಕಾಲದ ಇನ್ನಿತರ ರಾಜರುಗಳೂ ಅನುಸರಿಸಿದರು.

ಮುಸ್ಲಿಮ್ ದೊರೆಗಳು ಇಕ್ತಾ, ತರಫ್ ಮತ್ತು ಸುಭಾಗಳಂತಹ ಪ್ರಾಂತೀಯ ಆಡಳಿತ ವ್ಯವಸ್ಥೆಗಳನ್ನು ಸೃಜಿಸಿದರು. ಆದ್ದರಿಂದ ಪ್ರಜಾಸತ್ತಾತ್ಮಕ ಜೀವನ ಶೈಲಿ ಭಾರತಕ್ಕೆ ಹೊಸತೇನೂ ಆಗಿರಲಿಲ್ಲ. ಅನಾದಿಕಾಲದಿಂದಲೂ ಸಹ ಪ್ರತಿನಿಧಿಗಳ ಆಯ್ಕೆಗೆ ಚುನಾವಣೆಗಳೇ ಜನಪ್ರಿಯ ಸಾಧನಗಳಾಗಿದ್ದವು.

ಬ್ರಿಟೀಷ್ ಭಾರತದಲ್ಲಿ 1757ರ ಪ್ಲಾಸಿ ಕದನದಿಂದಾಗಿ ಬಂಗಾಳ ಪ್ರದೇಶ ಬ್ರಿಟೀಷರ ಅಧಿಕಾರ ವ್ಯಾಪ್ತಿಗೆ ಬಂದಿತು. ಬಂಗಾಳದಲ್ಲಿ ರಾಬರ್ಟ್ ಕ್ಲೈವ ದ್ವಿಮುಖ ಸರ್ಕಾರವನ್ನು ರೂಪಿಸಿದನು.

## 1773ರ ನಿಯಂತ್ರಣ ಅಧಿನಿಯಮ:

ಭಾರತದ ಸಂವಿಧಾನದ ಇತಿಹಾಸದಲ್ಲಿ ಇದೇ ಪ್ರಥಮ ಲಿಖಿತ ದಾಖಲೆ. ಇದು ಬಂಗಾಳದ ಗೌರ್ನರ್‌ರನ್ನು ಗೌರ್ನರ್ ಜನರಲ್ ಆಗಿ ಬದಲಾಯಿಸಿತು. ವಾರ್ನ್ ಹೆಸ್ಟಿಂಗ್ಸ್ ಮೊದಲು ಗೌರ್ನರ್ ಜನರಲ್ ಆದನು. ಅವನಿಗೆ ಬಂಗಾಳದ ಸಂಪೂರ್ಣ ನಾಗರಿಕ ಮತ್ತು ಸೇನಾ ಆಡಳಿತಗಳ ಹೊಣೆಗಾರಿಕೆ ವಹಿಸಲಾಯಿತು. ಈ ಅಧಿನಿಯಮದ ಪ್ರಮುಖ ಅಂಶಗಳು,

* ಸದಸ್ಯರ ಕಾರ್ಯ ನಿರ್ವಾಹಕ ಪರಿಷತ್ತು ಸ್ಥಾಪನೆ.
* ಮದ್ರಾಸ್ ಮತ್ತು ಮುಂಬಯಿ ಪ್ರಾಂತುಯಗಳು ಬಂಗಾಳದ ಅಧೀನಕ್ಕೆ ಒಳಪಟ್ಟವು.
* ಮೊಟ್ಟ ಮೊದಲಿಗೆ ಸುಪ್ರೀಂಕೋರ್ಟ್ ಸ್ಥಾಪನೆ.
* ನಿರ್ದೇಶಕರ ಸಭೆಯನ್ನು ಒಂದು ಶಾಶ್ವತ ಮಂಡಳಿಯನ್ನಾಗಿ ಗುರುತಿಸಿ ಶೇ.25 ನಿರ್ದೇಶಕರ ಪ್ರತಿವರ್ಷ ನಿವೃತ್ತರಾಗುವಂತಾಯಿತು.

## ಪಿಟ್‌ನ ಭಾರತದ ಕಾಯಿದೆ 1784:

ಪಿಟ್ ಇಂಡಿಯಾ ಕಾನೂನು ಕಂಪನಿಯ ವ್ಯಾಪಾರಿ ಮತ್ತು ರಾಜಕೀಯ ಚಟುವಟಿಕೆಗಳನ್ನು ಬೇರ್ಪಡಿಸಿತು.

1786ರ ಕಾಯಿದೆ: ಗೌರ್ನರ್ ಜನರಲ್ ಭಾರತದಲ್ಲಿನ ಕಂಪನಿ ಸೇವೆಗಳ ಮಹಾದಂಡನಾಯಕನನ್ನಾಗಿ ಮಾಡಿತು.

1793ರ ಕಾಯಿದೆ: ಭಾರತದೊಡನೆ ಕಂಪನಿಯ ವ್ಯಾಪಾರದ ಏಕಸ್ವಾಮ್ಯವನ್ನು ಇನ್ನೂ 20 ವರ್ಷಗಳಿಗೆ ವಿಸ್ತರಿಸಿತು.

1813ರ ಕಾಯಿದೆ: ಭಾರತದಲ್ಲಿ ಕಂಪನಿಯ ಏಕಸ್ವಾಮ್ಯ ವ್ಯಾಪಾರವನ್ನು ರದ್ದುಗೊಳಿಸಿತು.

1833ರ ಕಾಯಿದೆ: ಕಂಪನಿಯ ಎಲ್ಲಾ ವ್ಯಾಪಾರ ವಹಿವಾಟುಗಳನ್ನು ರದ್ದು ಮಾಡಿತು.

* ಭಾರತದಲ್ಲಿನ ಕಂಪನಿಯ ವ್ಯವಹಾರ ಕೇವಲ ರಾಜಕೀಯಕ್ಕೆ ಮಾತ್ರ ಸೀಮಿತಗೊಂಡಿತು.
* ಯಾವುದೇ ತಾರತಮ್ಯವಿಲ್ಲದೇ ಭಾರತೀಯರಿಗೆ ಕೆಲಸದ ಅರ್ಹತೆ ಮಾತ್ರ ನೇಮಕಾತಿಯ ಷರತ್ತಾಯಿತು.
* ಐಪಿಸಿ 1860ರಿಂದ ಜಾರಿಗೆ ಬಂದಿತು.

**1853ರ ಸನ್ನದು:**

* ಈ ಅಧಿನಿಯಮದಿಂದ ಭಾರತದಲ್ಲಿ ಸಂಸದೀಯ ಪದ್ದತಿ ಪ್ರಾರಂಭವಾಯಿತು.
* ಶಾಸನ ಸಭೆ ಸೃಷ್ಟಿಯಾಯಿತು.

**ರಾಣಿಯ ಉದ್ಘೋಷಣೆ ಭಾರತ ಸರ್ಕಾರದ ಅಧಿನಿಯಮ 1858:**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಗೌರ್ನರ್ ಜನರಲ್ ಭಾರತದ ದೇಶೀಯ ರಾಜ್ಯಗಳಿಗೆ ಸಾರ್ವಭೌಮದ ಪ್ರತಿನಿಧಿಯನ್ನಾಗಿ ಮಾಡಿ ಅವನನ್ನು ಭಾರತದ ವೈಸ್‌ರಾಯ್ ಎಂದು ಕರೆಯಲಾಯಿತು.
* ಅಧೀನ ಪ್ರತ್ಯೇಕೀಕರಣದ ನೀತಿಯನ್ನು ಅಧೀನ ಒಕ್ಕೂಟದ ನೀತಿಗೆ ಬದಲಾಯಿಸಲಾಯಿತು.
* ಈ ಅಧಿನಿಯಮ ಒಡಂಬಡಿಕೆಯ ನಾಗರಿಕ ಸೇವೆಯನ್ನು ಭಾರತೀಯ ನಾಗರಿಕ ಸೇವೆ ಐಸಿಎಸ್ ಎಂದು ಮಾಡಿ ಭಾರತೀಯರಿಗೆ ಮುಕ್ತಗೊಳಿಸಲಾಯಿತು.

**ಭಾರತೀಯ ಪರಿಷತ್ ಅಧಿನಿಯಮ 1861:**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಶಾಸನ ಸಭೆಗೆ ಭಾರತೀಯರು ಪ್ರವೇಶಿಸಲು ಅವಕಾಶ.
* ಖಾತೆಗಳ ಪದ್ದತಿ ರೂಢಿಗೆ ಬಂದಿತು.
* ಪ್ರಾಂತ್ಯಗಳಿಗೆ ಕಾನೂನು ರಚಿಸುವ ಅಧಿಕಾರ ಮರಳಿಸಲಾಯಿತು.

**1891ರ ಭಾರತೀಯ ಪರಿಷತ್ ಅಧಿನಿಯಮ:**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಪರಿಷತ್ ಸದಸ್ಯರನ್ನು ಆಯ್ಕೆ ಮಾಡುವ ಮೂಲಕ ಆಧುನಿಕ ಚುನಾವಣೆ ವ್ಯವಸ್ಥೆಯ ಉಗಮವಾಯಿತು.
* ಕೆಲವು ಮಿತಿಗಳೊಂದಿಗೆ ವಾರ್ಷಿಕ ಮುಂಗಡ ಪತ್ರವನ್ನು ಚರ್ಚಿಸುವ ಅಧಿಕಾರವನ್ನು ಶಾಸನ ಸಭೆಗೆ ಕೊಡಲಾಯಿತು.
* ಮುಂಚಿತ ಮುನ್ಸೂಚನೆ ಕೊಟ್ಟು ಪ್ರಶ್ನಿಸುವ ಹಕ್ಕು ದೊರಕಿತು.

**ಭಾರತೀಯ ಪರಿಷತ್ತುಗಳ ಅಧಿನಿಯಮ 1909:**

(ಮಿಂಟೋ ಮಾರ್ಲೆ ಸುಧಾರಣೆಗಳು) ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಮೂಲ ಲಕ್ಷಣ: ಕೋಮು ಆಧಾರಿತ ಮತದಾರ ಸಮುದಾಯಗಳನ್ನು ಸೃಷ್ಟಿಸಲಾಯಿತು.
* ಕೋಮು ಆಧಾರಿತ ಚುನಾವಣೆ ವ್ಯವಸ್ಥೆ ಜಾರಿಗೆ ಬಂದಿತು.

**1919ರ ಭಾರತ ಸರ್ಕಾರದ ಅಧಿನಿಯಮ:**

( ಮಾಂಟೆಗ್ಯೂ ಘೋಷಣೆ) ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಕೇಂದ್ರೀಯ ಶಾಸನ ಸಭೆ 2 ಸದನಗಳ ವಿಧಾನಮಂಡಲಕ್ಕೆ ಅವಕಾಶ.
* ಈ ಅಧಿನಿಯಮ 2 ವಿಷಯಗಳ ಸೂಚಿಗೆ ಅವಕಾಶ ಮಾಡಿತು.
* ಕೇಂದ್ರ ಸೂಚಿ ವಿಷಯಗಳು: ರಕ್ಷಣೆ, ನೋಟುಗಳು, ವ್ಯಾಪಾರ ಸಂಪರ್ಕ, ಅಂಚೆ, ವಿದೇಶಿ, ಸಿವಿಲ್ ಇತ್ಯಾದಿ.
* ಪ್ರಾಂತೀಯ ಸೂಚಿ ವಿಷಯಗಳು: ಸ್ಥಳೀಯ ಸ್ವಯಂ ಆಡಳಿತ, ಶಿಕ್ಷಣ ಸಾರ್ವಜನಿಕ ಕಾರ್ಯ, ನೀರಾವರಿ, ಆರೋಗ್ಯ ಇತ್ಯಾದಿ.
* ಪ್ರಾಂತ್ಯಗಳಲ್ಲಿ ದ್ವಿ ಪ್ರಭುತ್ವ ಪದ್ದತಿ ಜಾರಿಗೆ ಬಂದಿತು.
* 1927ರಲ್ಲಿ ಸೈಮನ್ ಆಯೋಗ ದ್ವಿ ಪ್ರಭುತ್ವ ವ್ಯವಸ್ಥೆ ಸೋತಿದೆಯೆಂದು ರದ್ದುಗೊಳಿಸಲು ಸೂಚಿಸಿತು.

* ಮೋತಿಲಾಲ್ ನೆಹರು ನೇತೃತ್ವದ ನೆಹರು ವರದಿ ಒಂದು ಪ್ರಮುಖ ಸಂವಿಧಾನ ಬೆಳವಣಿಗೆಯ ಭಾರತೀಯರ ಕೊಡುಗೆ.
* 1929ರ ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯ ಘೋಷಣೆ.
* ದುಂಡುಮೇಜಿನ ಸಮ್ಮೇಳನಗಳು ಇವೆಲ್ಲದರ ಫಲ.

**1935ರ ಭಾರತ ಸರ್ಕಾರದ ಕಾಯಿದೆ:**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಇದೊಂದು ಸುಧೀರ್ಘ ದಾಖಲೆ. ಇದರಲ್ಲಿ 321 ಪ್ರಕರಣಗಳು 12 ಅನುಸೂಚಿಗಳು ಇದ್ದವು.
* ಸಂಯುಕ್ತ ಸಂಘದ ರಚನೆ – ಇದರ ಲಕ್ಷಣಗಳು.
* ಲಿಖಿತ ಸಂವಿಧಾನ.
* ಕೇಂದ್ರ ಮತ್ತು ಘಟಕಗಳ ನಡುವೆ ಅಧಿಕಾರದ ವಿಭಜನೆ.
* ಶಕ್ತಿಯುತ ನ್ಯಾಯಾಂಗ.

**ಪಟ್ಟಿಗಳು:**

1) ಸಂಯುಕ್ತ ಸೂಚಿ: 49 ವಿಷಯಗಳು ಕೇಂದ್ರದ ಅಧೀನದಲ್ಲಿ.
2) ಪ್ರಾಂತೀಯ ಸೂಚಿ: 54 ವಿಷಯಗಳು ಪ್ರಾಂತ್ಯದ ಅಧೀನದಲ್ಲಿ.
3) ಸಮವರ್ತಿ ಸೂಚಿ: 36 ವಿಷಯಗಳು ಕೇಂದ್ರ ಮತ್ತು ಪ್ರಾಂತ್ಯ.

* ಈ ಅಧಿನಿಯಮ ಕೇಂದ್ರದಲ್ಲಿ ದ್ವಿ ಪ್ರಭುತ್ವ ಸ್ಥಾಪಿಸಿತು.
* ಈ ಅಧಿನಿಯಮ ಪ್ರಾಂತೀಯ ಮಟ್ಟದಲ್ಲಿ ದ್ವಿ ಪ್ರಭುತ್ವವನ್ನು ರದ್ದುಗೊಳಿಸಿತು. ಪ್ರಾಂತೀಯ ಸ್ವಾಯತ್ತತೆಯನ್ನು ತಂದುಕೊಟ್ಟಿತು.
* 11 ಪ್ರಾಂತ್ಯಗಳ ಪೈಕಿ, 6 ಪ್ರಾಂತ್ಯಗಳಲ್ಲಿ ದ್ವಿ ಸದನ ಶಾಸಕಾಂಗ ಪದ್ದತಿಗೆ ಅವಕಾಶ. ಉದಾ: ಬಾಂಬೆ, ಮದ್ರಾಸ್.
* ಕೋಮುವಾರು ಪ್ರಾತಿನಿಧ್ಯತೆಗೆ ಪ್ರಾಮುಖ್ಯತೆ ನೀಡಿತು.
* 1858ರಲ್ಲಿ ರಚಿಸಲಾದ ಭಾರತೀಯ ಮಂಡಳಿಯನ್ನು ರದ್ದುಪಡಿಸಲಾಯಿತು.
* ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪಿಸಲಾಯಿತು.
* ಲೋಕ ಸೇವಾ ಆಯೋಗಗಳ ರಚನೆ.
* ಒಕ್ಕೂಟ ನ್ಯಾಯಾಲಯದ ಸ್ಥಾಪನೆ.

**1940ರ ಆಗಸ್ಟ ಕೊಡುಗೆ:**

(ಲಾರ್ಡ್ ಲಿನ್ ಲಿತ್ ಗೊ) ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಹೊಸ ಸಂವಿಧಾನದ ರಚನೆ ಪ್ರಮುಖವಾಗಿ ಭಾರತೀಯರ ಹೊಣೆಗಾರಿಕೆಯಾಗುತ್ತದೆ.
* 2ನೇ ವಿಶ್ವಸಮರದ ಮುಕ್ತಾಯದ ನಂತರವೇ ಸಂವಿಧಾನ ರಚನಾ ಸಮಿತಿ ರಚಿಸಲ್ಪಡುತ್ತದೆ.
* ಮುಂದಿನ ಯಾವುದೇ ಸಂವಿಧಾನಾತ್ಮಕ ಬದಲಾವಣೆಯಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿ ರಕ್ಷಿಸಲ್ಪಡಬೇಕು.

ಈ ಪ್ರಸ್ತಾಪಗಳು ಯುದ್ದ ಮುಗಿದ ನಂತರ ಜಾರಿಗೆ ಬರಲಿದ್ದ ಕಾರಣ ಗಾಂಧೀಜಿ ಅದನ್ನು ಮುಂದಿನ ದಿನಾಂಕದ ಚೆಕ್ಕು ಎಂದು ಕರೆದರು. ಗಾಂಧೀಜಿ ತಮ್ಮ ಹರಿಜನ ಪತ್ರಿಕೆಯಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಗೆ ಕರೆ ನೀಡಿದರು. ಮಾಡು ಇಲ್ಲವೇ ಮಡಿ ಎಂಬ ಕರೆ ಇತ್ತರು. ಇದು ಮುಂದೆ ಕ್ವಿಟ್ ಇಂಡಿಯಾ ಚಳುವಳಿಯಾಗಿ ಪ್ರಸಿದ್ದವಾಯಿತು.

**1942ರ ಕ್ರಿಪ್ಸ್‌ನ ಪ್ರಸ್ತಾಪ:**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಒಂದು ಡೊಮಿನಿಯನ ಸ್ಥಾಪನೆ / ಸ್ಥಾನಮಾನ.
* ಹೊಸ ಸಂವಿಧಾನ ರಚನೆಗಾಗಿ ಒಂದು ಚುನಾಯಿತ ಸಭೆಯ ಸ್ಥಾಪನೆ ಮತ್ತು ಹೊಸ ಸಂವಿಧಾನದ ರಚನೆ ಪೂರ್ಣವಾಗಿ ಭಾರತೀಯರ ಹೊಣೆಗಾರಿಕೆ.
* ಚುನಾಯಿತ ಸಂವಿಧಾನ ರಚನಾ ಮಂಡಳಿಯ ಪ್ರಸ್ತಾಪ.
* ವಿಶ್ವಸಮರದಲ್ಲಿ ಭಾರತದ ರಕ್ಷಣೆ ಭಾರತೀಯರ ಹೊಣೆ.
* ಸಂವಿಧಾನ ರಚನಾ ಸಭೆಯಲ್ಲಿ ಭಾರತದ ರಾಜ್ಯಗಳಿಗೆ ಅವಕಾಶ.
* ಹೊಸ ಸಂವಿಧಾನವನ್ನು ಒಪ್ಪುವುದು ಒಪ್ಪದಿರುವುದು ಪ್ರಾಂತ್ಯಗಳ ಹಕ್ಕು.

**ವೇವಲ್ ಯೋಜನೆ 1945:**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ವೈಸ್‌ರಾಯ್ ಕಾರ್ಯಕಾರಿ ಸಮಿತಿಯನ್ನು ಪುನರ್ ರಚಿಸುವುದು.
* 1935ರ ಭಾರತ ಸರ್ಕಾರ ಕಾಯ್ದೆಯ ಚೌಕಟ್ಟಿನಲ್ಲಿ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸತಕ್ಕದ್ದು.
* ಗಡಿ ಪ್ರಾಂತ್ಯಗಳು ಮತ್ತು ಬುಡಕಟ್ಟು ವಿಷಯಗಳನ್ನು ಬಿಟ್ಟು ಉಳಿದೆಲ್ಲ ವಿಷಯಗಳನ್ನು ಭಾರತೀಯ ಸದಸ್ಯರಿಗೆ ವಹಿಸಿಕೊಡತಕ್ಕದ್ದು.

**ಕ್ಯಾಬಿನೆಟ್ ಮಿಷನ್: ಮೇ 16. 1946**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಬ್ರಿಟೀಷ್ ಭಾರತ ಮತ್ತು ದೇಶೀಯ ಸಂಸ್ಥಾನಗಳಿಂದ ಕೂಡಿದ ಭಾರತ ಒಕ್ಕೂಟವನ್ನು ರಚಿಸತಕ್ಕದ್ದು.
* ಸ್ವತಂತ್ರ ಪಾಕಿಸ್ತಾನದ ಬೇಡಿಕೆಯನ್ನು ತಿರಸ್ಕರಿಸಿತು.
* ಭಾರತದ ರಾಜ್ಯಗಳ ಮೇಲಿನ ಬ್ರಟೀಷ್ ಸಾರ್ವಭೌಮತ್ವ ಅಂತ್ಯಗೊಳ್ಳಬೇಕು.
* ಒಕ್ಕೂಟದಲ್ಲಿ ಬ್ರಿಟೀಷ್ ಭಾರತ ಮತ್ತು ಭಾರತೀಯ ರಾಜ್ಯ ಪ್ರತಿನಿಧಿಗಳಿಂದ ಕೂಡಿದ ಶಾಸಕಾಂಗ ಮತ್ತು ಕಾರ್ಯಾಂಗಗಳನ್ನು ಹೊಂದಿರಬೇಕು.
* ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳನ್ನು ಬಿಟ್ಟು ಉಳಿದ ವಿಷಯಗಳು ಪ್ರಾಂತ್ಯಗಳ ವಶದಲ್ಲಿ ಇರಬೇಕು.
* ಸಂವಿಧಾನ ರಚನಾ ಸಭೆಯನ್ನು ಪರೋಕ್ಷ ಚುನಾವಣೆಯ ಮೂಲಕ ರಚಿಸತಕ್ಕದ್ದು. ಆಡಳಿತ (ಸಂವಿಧಾನ ರಚನೆಯವರೆಗೆ) ನೋಡಿಕೊಳ್ಳಲು ಒಂದು ಮಧ್ಯಂತರ ಸರ್ಕಾರ ರಚನೆ ಮಾಡಬೇಕು.
* ಪ್ರಾಂತ್ಯಗಳನ್ನು ಎ.ಬಿ.ಸಿ. ಎಂಬ 3 ವಿಭಾಗಗಳಾಗಿ ವಿಭಜಿಸಲು ಶಿಫಾರಸ್ಸು ಮಾಡಲಾಯಿತು.

**ಭಾರತ ಸ್ವಾತಂತ್ರ್ಯ ಕಾಯ್ದೆ 1947:**

ಈ ಅಧಿನಿಯಮದ ಪ್ರಮುಖ ಅಂಶಗಳೆಂದರೆ,

* ಸಂವಿಧಾನ ಬೆಳವಣಿಗೆಯ ಇತಿಹಾಸದಲ್ಲಿ ಬ್ರಿಟೀಷ್‌ರಿಂದ ರೂಪಿಸಿದ ಕೊನೆಯ ಕಾಯ್ದೆ.
* 1947 ಆಗಸ್ಟ್ 15, ಭಾರತ ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಯಿತು.
* ಭಾರತದ ವಿಭಜನೆಯಾಗಿ, ಪಾಕಿಸ್ತಾನ ರಚನೆಯಾಯಿತು.
* ವೈಸ್‌ರಾಯ್ ಹುದ್ದೆ ರದ್ದುಗೊಳಿಸಲಾಯಿತು.
* ಸಂವಿಧಾನ ರಚನೆಗೆ 2 ದೇಶಗಳಿಗೆ ಸ್ವಾತಂತ್ರ್ಯ ನೀಡಲಾಯಿತು.
* ದೇಶೀಯ ಸಂಸ್ಥಾನಗಳಿಗೆ ಯಾವುದೇ ಡೊಮಿನಿಯನ್ ಸೇರುವ ಅಥವಾ ಸ್ವತಂತ್ರವಾಗಿ ಉಳಿಯುವ ಅವಕಾಶ ನೀಡಲಾಯಿತು.

* ಹೊಸ ಸಂವಿಧಾನ ರಚನೆಯಾಗುವವರೆಗೆ 1935ರ ಅನ್ವಯ ಆಡಳಿತ ನಡೆಸಲು ಅವಕಾಶ ನೀಡಲಾಯಿತು.
* ಮಸೂದೆಗಳ ಮೇಲಿನ ಬ್ರಿಟೀಷ್ ಚಕ್ರವರ್ತಿಯ ವಿಟೋ ಅಧಿಕಾರ ಅಂತ್ಯವಾಯಿತು.
* ಭಾರತೀಯ ಕಾರ್ಯದರ್ಶಿಯಿಂದ ನಾಗರಿಕ ಸೇವೆಗಳಿಗೆ ನಡೆಯುತ್ತಿದ್ದ ನೇಮಕಾತಿಯನ್ನು ಸ್ಥಗಿತಗೊಳಿಸಲಾಯಿತು.

**ಭಾರತೀಯ ಸಂವಿಧಾನ ರಚನಾ ಸಭೆ:**

ಒಂದು ಸಾರ್ವಭೌಮ ಪ್ರಜಾಪ್ರಭುತ್ವ ರಾಷ್ಟ್ರ ಹೊಸ ಸಂವಿಧಾನವನ್ನು ರಚಿಸಲು ಜನರಿಂದ ಚುನಾಯಿಸಲ್ಪಟ್ಟ ಪ್ರಾತಿನಿಧಿಕ ಮಂಡಳಿಯೇ ಸಂವಿಧಾನ ಸಭೆ.

ಈ ರೀತಿಯ ಸಭೆಯನ್ನು ಸೃಷ್ಟಿಸಿಕೊಳ್ಳುವ ಅಗತ್ಯ ಮೂರು ಸಂದರ್ಭಗಳಲ್ಲಿ ಉದ್ಭವಿಸುತ್ತದೆ.

* ಒಂದು ಬೃಹತ್ ಸಾಮಾಜಿಕ ಕ್ರಾಂತಿಯಾದಾಗ.
* ಒಂದು ರಾಷ್ಟ್ರ ಪರಕೀಯ ಆಡಳಿತದಿಂದ ಮುಕ್ತವಾದಾಗ.
* ಸಣ್ಣ ಪ್ರಾಂತ್ಯಗಳು ಒಟ್ಟುಗೂಡಿ ಒಂದು ಸ್ವತಂತ್ರ್ಯ ರಾಷ್ಟ್ರ ಉದಯಿಸಿದಾಗ.

ಈ ಮೇಲಿನ 2ನೇ ವರ್ಗದಲ್ಲಿ ಭಾರತ ಬ್ರಿಟೀಷರ ಸಹಾದೊಡನೆ ಸಂವಿಧಾನ ಸಭೆಯನ್ನು ರೂಪಿಸಿ ಡಿಸೆಂಬರ್ 9, 1946ರಿಂದ ನವೆಂಬರ್ 26, 1949ರ ನಡುವೆ (2 ವರ್ಷ 11 ತಿಂಗಳು 18 ದಿನ) ದೇಶದ ಪರಮೋಚ್ಚ ಕಾನೂನಾದ ಭಾರತದ ಸಂವಿಧಾನವನ್ನು ರಚಿಸಿತು.

ಭಾರತಕ್ಕೆ ಒಂದು ಸಂವಿಧಾನವನ್ನು ಬರೆಯುವ ಮೂಲಕ ಮೊದಲ ಪ್ರಯತ್ನ ಮೋತಿಲಾಲ ನೆಹರು ನೇತೃತ್ವದ ಒಂದು ಸಮಿತಿಯಿಂದ ಮಾಡಲ್ಪಟ್ಟಿತ್ತು. ಇದನ್ನು ನೆಹರೂ ವರದಿ ಎಂಬ ಪ್ರಚಲಿತ ಹೆಸರಿನಿಂದ ಕರೆಯಲಾಗುತ್ತದೆ.

* ಸಂವಿಧಾನ ರಚನಾ ಸಭೆಯ ಸಂಖ್ಯಾ ಬಲ 389.
* ಬ್ರಿಟೀಷ್ ಇಂಡಿಯಾದ ಹನ್ನೊಂದು ಪ್ರಾಂತ್ಯಗಳಿಂದ 292 ಪ್ರತಿನಿಧಿಗಳು.
* ಭಾರತೀಯ ರಾಜ್ಯಗಳ 93 ಪ್ರತಿನಿಧಿಗಳು.

**ಸಂವಿಧಾನ ರಚನಾ ಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಕನ್ನಡಿಗರು:**

**ಮೈಸೂರಿನ ಪ್ರತಿನಿಧಿಗಳು:**

* ಕೆ. ಚೆಂಗಲ್‌ರಾಯ್ ರೆಡ್ಡಿ
* ಸಿದ್ದಲಿಂಗಯ್ಯ
* ಹೆಚ್.ಆರ್. ಗುರುದೇವ ರೆಡ್ಡಿ
* ಎಸ್.ವಿ.ಕೃಷ್ಣಮೂರ್ತಿ ರಾವ್
* ಕೆ. ಹನುಮಂತಯ್ಯ
* ಹೆಚ್. ಸಿದ್ದವೀರಪ್ಪ
* ಟಿ. ಚೆನ್ನಯ್ಯ

**ಕೂರ್ಗ್ ಪ್ರತಿನಿಧಿಗಳು:**

* ಕೆ.ಎಂ. ಪುನ್ನಚ್ಚ

**ಬಾಂಬೆ ಪ್ರಾಂತ್ಯದ ಪ್ರತಿನಿಧಿಗಳು:**

* ಎಸ್. ನಿಜಲಿಂಗಪ್ಪ
* ಆರ್. ದಿವಾಕರ್

**ಸಂವಿಧಾನ ರಚನಾ ಸಭೆಯ ಕಾರ್ಯ ನಿರ್ವಹಣೆ:**

* 09.12.1946 ಪ್ರಥಮ ಸಭೆ ಮುಸ್ಲಿಂ ಲೀಗ್‌ನಿಂದ ಬಹಿಷ್ಕಾರ. ಕೇವಲ 211 ಸದಸ್ಯರು ಹಾಜರಾದರು. ತಾತ್ಕಾಲಿಕ ಅಧ್ಯಕ್ಷರಾಗಿ ಸಚ್ಚಿದಾನಂದ ಸಿನ್ಹ ಆಯ್ಕೆ ಆದರು.
* 11.12.1946ರಂದು ಡಾ. ರಾಜೇಂದ್ರ ಪ್ರಸಾದ್‌ರನ್ನು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ಮತ್ತು ಹೆಚ್.ಸಿ. ಮುಖರ್ಜಿಯನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.
* 13.12.1946 ಜವಹರಲಾಲ್ ನೆಹರು ಅವರು ಧ್ಯೇಯಗಳ ನಿರ್ಣಯ ಮಂಡಿಸಿದರು.
* ಒಟ್ಟು ಸಂವಿಧಾನ ರಚನೆಗೆ 22 ಸಮಿತಿಗಳನ್ನು ರಚಿಸಿದರು.
* ಕರಡು ಸಮಿತಿ ಅತಿ ಮುಖ್ಯವಾದುದು. ಡಾ.ಬಿ.ಆರ್.ಅಂಬೇಡ್ಕರ್ ಇದರ ಅಧ್ಯಕ್ಷರು. ಕರಡು ಸಮಿತಿ, ಡಾ.ಬಿ.ಆರ್.ಅಂಬೇಡ್ಕರ್‌ರು ಒಳಗೊಂಡು 7 ಸದಸ್ಯರಿಂದ ಕೂಡಿತ್ತು.

**ಪಮುಖ ಸಮಿತಿಗಳು ಮತ್ತು ಅವುಗಳ ಅಧ್ಯಕ್ಷರು:**

| ಕ್ರಮ.ಸಂಖ್ಯೆ | ಪ್ರಮುಖ ಸಮಿತಿಗಳು | ಅಧ್ಯಕ್ಷರು |
|---|---|---|
| 1) | ನಿಯಮ ರಚನಾ ಸಮಿತಿ – | ಡಾ. ರಾಜೇಂದ್ರ ಪ್ರಸಾದ್ |
| 2) | ಸದನ ಸಮಿತಿ – | ಬಿ. ಪಟ್ಟಾಭಿ ಸೀತಾರಾಮಯ್ಯ |
| 3) | ರಾಜ್ಯಗಳ ಸಮಿತಿ – | ಜವಹರಲಾಲ್ ನೆಹರು |
| 4) | ಸಂವಿಧಾನ ಕರಡು ಸಮಿತಿ – | ಡಾ.ಬಿ.ಆರ್. ಅಂಬೇಡ್ಕರ್ |
| 5) | ಮೂಲಭೂತ ಹಕ್ಕುಗಳು, ಅಲ್ಪ ಸಂಖ್ಯಾತರ ಸಲಹಾ ಸಮಿತಿ – | ವಲ್ಲಭಬಾಯಿ ಪಟೇಲ್ |
| 6) | ಮೂಲಭೂತ ಹಕ್ಕುಗಳ ಉಪಸಮಿತಿ – | ಶ್ರೀ.ಜೆ.ಬಿ.ಕೃಪಲಾನಿ |
| 7) | ರಾಷ್ಟ್ರಧ್ವಜ ಸಮಿತಿ – | ಡಾ. ರಾಜೇಂದ್ರ ಪ್ರಸಾದ್ |
| 8) | ಸಂವಿಧಾನ ಸಭೆಯ ಕಾರ್ಯಗಳಿಗೆ ಸಂಬಂಧಿಸಿದ ಸಮಿತಿ – | ಜಿ.ವಿ. ಮಾಳವಂಕರ್ |

**ಸಂವಿಧಾನ ರಚನಾ ಸಭೆಯ ವಿರುದ್ದದ ಟೀಕೆಗಳು:**

* ಜನರ ಪ್ರಾತಿನಿಧಿಕ ಸಂಸ್ಥೆ ಅಲ್ಲ.
* ಸಾರ್ವಭೌಮ ಸಂಸ್ಥೆ ಅಲ್ಲ
* ಕಾಂಗ್ರೆಸ್ ಪ್ರಾಬಲ್ಯ
* ವಕೀಲರು ಮತ್ತು ರಾಜಕಾರಣಿಗಳ ಪ್ರಾಬಲ್ಯ
* ಹಿಂದೂಗಳ ಪ್ರಾಬಲ್ಯ

**ಭಾರತ ಸಂವಿಧಾನದ ಪ್ರಧಾನ ಲಕ್ಷಣಗಳು:**

ಅವು ಈ ಕೆಳಗಿನಂತಿವೆ.

1) ಸಂವಿಧಾನ ಸರ್ವೋಚ್ಛತೆಯನ್ನು ಹೊಂದಿದೆ.
2) ಅತಿ ದೀರ್ಘವಾದ ಲಿಖಿತ ಸಂವಿಧಾನ.
3) ಸಾರ್ವಭೌಮತ್ವ
4) ಜಾತ್ಯಾತೀತತೆ ಪಾಲನೆ
5) ಪ್ರಜಾಸತ್ತಾತ್ಮಕ ವ್ಯವಸ್ಥೆ
6) ಸ್ವರೂಪದಿಂದ ಗಣರಾಜ್ಯ
7) ಏಕ ಪೌರತ್ವ ವ್ಯವಸ್ಥೆ ಹೊಂದಿದೆ

8) ಮೂಲಭೂತ ಹಕ್ಕುಗಳಿವೆ

9) ರಾಜ್ಯ ನಿರ್ದೇಶಕ ತತ್ವಗಳಿವೆ

10) ಮೂಲಭೂತ ಕರ್ತವ್ಯಗಳಿವೆ

11) ಸಂಸದೀಯ ಸ್ವರೂಪದ ಸರ್ಕಾರ

12) ಸಂಯುಕ್ತ ವ್ಯವಸ್ಥೆ

13) ವಯಸ್ಕ ಮತದಾನ

14) ಭಾಗಶ: ಬದಲಿಸಲಾಗದ ಭಾಗಶ: ಬದಲಾಗಬಲ್ಲ ಸಂವಿಧಾನ

15) ಸ್ವತಂತ್ರ ನ್ಯಾಯಾಂಗ

**ಭಾರತ ಸಂವಿಧಾನದಲ್ಲಿ ಸಂಯುಕ್ತ ಲಕ್ಷಣಗಳು:**

ನಮ್ಮ ಸಂವಿಧಾನದ ಸಂಯುಕ್ತ ಲಕ್ಷಣಗಳನ್ನು ಈ ಕೆಳಗಿನ ಅಂಶಗಳಿಂದ ತಿಳಿಯಬಹುದು.

* ಸಂವಿಧಾನದ ಪರಮಾಧಿಕಾರ
* ಲಿಖಿತ ಸಂವಿಧಾನ
* ಅನಮ್ಯ ಅಥವಾ ಕಠಿಣ ಸಂವಿಧಾನ
* ದ್ವಿ ಸರ್ಕಾರ ಪದ್ದತಿ
* ಅಧಿಕಾರಗಳ ಹಂಚಿಕೆ – ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ, ಸಮವರ್ತಿ ಪಟ್ಟಿ
* ನ್ಯಾಯಾಂಗ ಪರಾಮರ್ಶೆಗೆ ಅವಕಾಶವಿದೆ.

**ಸಂವಿಧಾನದಲ್ಲಿ ಏಕಾತ್ಮಕ ಲಕ್ಷಣಗಳು:**

ನಮ್ಮ ಸಂವಿಧಾನದ ಯಾವ ರೀತಿ ಏಕಾತ್ಮಕತೆಯ ಲಕ್ಷಣಗಳನ್ನು ಹೊಂದಿದೆ ಎಂದು, ಈ ಕೆಳಗಿನ ಅಂಶಗಳಿಂದ ತಿಳಿಯಬಹುದು.

* ಏಕ ಸಂವಿಧಾನ – ಅಮೇರಿಕಾದಲ್ಲಿ 2
* ಏಕ ನಾಗರಿಕತ್ವ
* ಸ್ವತಂತ್ರ ನ್ಯಾಯಾಂಗ – ಅದು ನ್ಯಾಯಾಧೀಶರ ನೇಮಕ, ರಾಜೀನಾಮೆ ಇತ್ಯಾದಿ ಪ್ರಸಂಗಗಳಲ್ಲಿ
* ತುರ್ತು ಪರಿಸ್ಥಿತಿಯ ಅಧಿಕಾರಗಳು (ವಿಧಿ 356)
* ಶೇಷಾಧಿಕಾರಗಳು
* ನಿಯಂತ್ರಣಾಧಿಕಾರಿ ಮತ್ತು ಮಹಾಲೆಕ್ಕ ಪರಿಶೋಧಕ
* ಅಖಿಲ ಭಾರತ ಸೇವೆಗಳು

## ಭಾರತ ಸಂವಿಧಾನದ ಮೂಲಗಳು

ಭಾರತದ ಸಂವಿಧಾನ, ಅನೇಕ ಮೂಲಗಳ ಸಂಗಮವಾಗಿದೆ.

ಭಾರತ ಸರ್ಕಾರ ಕಾಯ್ದೆ 1935ರಿಂದ ಪಡೆದ ಅಂಶಗಳು:

* ಒಕ್ಕೂಟ ವ್ಯವಸ್ಥೆ
* ರಾಜ್ಯಪಾಲರ ಹುದ್ದೆ
* ನ್ಯಾಯಾಂಗ ವ್ಯವಸ್ಥೆ

* ಸಾರ್ವಜನಿಕ ಸೇವಾ ಆಯೋಗಗಳು
* ತುರ್ತು ಪರಿಸ್ಥಿತಿ ಉಪಬಂಧಗಳು

**ಬ್ರಿಟೀಷ್ ಸಂವಿಧಾನದಿಂದ ಪಡೆದ ವಿಷಯಗಳು:**

* ಸಂಸದೀಯ ಪದ್ದತಿ
* ಕಾನೂನಿನ ಅಧಿಪತ್ಯ
* ಶಾಸನೀಯ ನಿಯಮಗಳು
* ಏಕಪೌರತ್ವ
* ಕ್ಯಾಬಿನೆಟ್ ಪದ್ದತಿ
* ದ್ವಿ ಸದನ ಶಾಸಕಾಂಗ ಪದ್ದತಿ

**ಅಮೇರಿಕಾ ಸಂವಿಧಾನದಿಂದ ಪಡೆದ ವಿಷಯಗಳು:**

* ಪ್ರಸ್ತಾವನೆ
* ಮೂಲಭೂತ ಹಕ್ಕುಗಳು
* ನ್ಯಾಯಾಂಗದ ಸ್ವಾತಂತ್ರ್ಯ
* ನ್ಯಾಯಿಕ ವಿಮರ್ಶೆ
* ರಾಷ್ಟ್ರಾಧ್ಯಕ್ಷರ ಮಹಾಭಿಯೋಗ
* ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ನ್ಯಾಯಾಧೀಶರು
* ಉಪ ರಾಷ್ಟ್ರಪತಿ

**ಐರ್ಲೆಂಡ್ ಸಂವಿಧಾನದಿಂದ ಪಡೆದ ವಿಷಯಗಳು:**

* ರಾಜ್ಯ ನಿರ್ದೇಶಕರ ತತ್ವಗಳು
* ರಾಜಸಭೆಗೆ ಸಂವಿಧಾನ ಸದಸ್ಯರ ನಾಮಕರಣ
* ರಾಷ್ಟ್ರಪತಿ ಚುನಾವಣೆ ವಿಧಾನ

**ಕೆನಡಾ ಸಂವಿಧಾನದಿಂದ ಪಡೆದ ವಿಷಯಗಳು:**

* ಪ್ರಬಲ ಒಕ್ಕೂಟ ವ್ಯವಸ್ಥೆ
* ಶೇಷಾಧಿಕಾರ
* ಕೇಂದ್ರಕ್ಕೆ ರಾಜ್ಯಪಾಲರ ನೇಮಕಾತಿ
* ಸುಪ್ರೀಂಕೋರ್ಟ್‌ನ ಸಲಹಾ ವ್ಯಾಪ್ತಿ

**ಆಸ್ಟ್ರೇಲಿಯಾ ಸಂವಿಧಾನದಿಂದ ಪಡೆದ ವಿಷಯಗಳು:**

* ಸಮವರ್ತಿ ಪಟ್ಟಿ
* ವ್ಯಾಪಾರ ವಾಣಿಜ್ಯಗಳಿಗೆ ಸಂವಿಧಾನ ಸಂಬಂಧಿಸಿದ ಸ್ವಾತಂತ್ರ್ಯ
* ಸಂಸತ್ತಿನ 2 ಸದನಗಳ ಜಂಟಿ ಸಭೆ

**ಜರ್ಮನಿ ಸಂವಿಧಾನದಿಂದ ಪಡೆದ ವಿಷಯಗಳು:**

* ತುರ್ತು ಪರಿಸ್ಥಿತಿಯ ಉಪಬಂಧಗಳು

**ರಷ್ಯಾ ಸಂವಿಧಾನದಿಂದ ಪಡೆದ ವಿಷಯಗಳು:**

* ಮೂಲಭೂತ ಕರ್ತವ್ಯಗಳು
* ಪ್ರಸ್ತಾವನೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ.

**ಫ್ರೆಂಚ್ ಸಂವಿಧಾನದಿಂದ ಪಡೆದ ವಿಷಯಗಳು:**

* ಪ್ರಸ್ತಾವನೆಯಲ್ಲಿರುವ ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವ

**ದಕ್ಷಿಣ ಆಫ್ರಿಕಾ ಸಂವಿಧಾನದಿಂದ ಪಡೆದ ವಿಷಯಗಳು:**

* ಸಂವಿಧಾನ ತಿದ್ದುಪಡಿ ವಿಧಾನ
* ರಾಜ್ಯಸಭಾ ಸದಸ್ಯರ ಚುನಾವಣಾ ವಿಧಾನ

**ಪ್ರಸ್ತಾವಣೆ:**

ಜನವರಿ 22, 1947ರಂದು ಅಂಗೀಕೃತವಾದ ಉದ್ದೇಶಗಳ ನಿರ್ಣಯದಿಂದ ರೂಪಿಸಲಾಗಿದೆ.

**ಮೂಲಭೂತ ಹಕ್ಕುಗಳು:**

ಅಮೇರಿಕಾ ಹಕ್ಕುಗಳು ಮಸೂದೆ, ಫ್ರಾನ್ಸ್ ಹಕ್ಕುಗಳ ಘೋಷಣೆ ಮತ್ತು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಗಳಿಂದ ರೂಪಗೊಂಡಿವೆ.

## ಭಾರತದ ಸಂವಿಧಾನದ ಪ್ರಸ್ತಾವನೆ

ಪ್ರಸ್ತಾವನೆ ಒಂದು ಪ್ರಾರಂಭಿಕ ಅಥವಾ ಪರಿಚಯಾತ್ಮಕ ಹೇಳಿಕೆ. ಪ್ರಸ್ತಾವನೆ ದೀರ್ಘ ಶೀರ್ಷಿಕೆಯಂತೆ, ಶಾಸನದ ಒಂದು ಭಾಗವಾಗಿದ್ದು ಶಾಸನದ ಅರ್ಥ ವಿವರಣೆಗೆ ಅಂಗೀಕಾರಾರ್ಹ ನೆರವು ನೀಡುತ್ತವೆ.

ಸಂವಿಧಾನದ ಪ್ರಸ್ತಾವನೆಯು ಫ್ರಾನ್ಸ್ ಮತ್ತು ರಷ್ಯಾ ಕ್ರಾಂತಿಗಳ ತತ್ವಗಳನ್ನು ಸಂಯೋಜಿಸಿಕೊಂಡಿದೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ನ್ಯಾಯಾಲಯಗಳ ಪರಿಕಲ್ಪನೆಯನ್ನು ರಷ್ಯಾ ಕ್ರಾಂತಿಯಿಂದಲೂ ಮತ್ತು ಸವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ತತ್ವಗಳನ್ನು ಫ್ರಾನ್ಸ್‌ನ ಕ್ರಾಂತಿಯಿಂದಲೂ ತೆಗೆದುಕೊಳ್ಳಲಾಗಿದೆ.

13ನೇ ಡಿಸೆಂಬರ್ 1946ರಲ್ಲಿ ಮಂಡಿಸಲ್ಪಟ್ಟ, 22ನೇ ಜನವರಿ 1947ರಲ್ಲಿ ಸಂವಿಧಾನ ಸಭೆಯ ಪ್ರಾರೂಪಣಾ ಸಮಿತಿ ಪ್ರಸ್ತಾವನೆಯನ್ನು ರೂಪಿಸುವಾಗ ಹೊಸ ರಾಜ್ಯದ ಲಕ್ಷಣಗಳ ಮತ್ತು ಅದರ ಮೂಲಭೂತ ಸಾಮಾಜಿಕ, ರಾಜಕೀಯ ಉದ್ದೇಶಗಳ ನಿರೂಪಣೆಗೆ ಮಾತ್ರ ಪ್ರಸ್ತಾವನೆ ಸೀಮಿತವಾಗಿರಬೇಕೆಂದು ಬಯಸಿತು.

ಪ್ರಸ್ತಾವನೆಯಲ್ಲಿ ನಮ್ಮ ಸಂವಿಧಾನ ಪ್ರವರ್ತಕರ ಕಾಣಿಕೆ ಮತ್ತು ಆಶೋತ್ತರಗಳು ಸೂಕ್ಷ್ಮ ರೂಪದಲ್ಲಿ ಅಡಕವಾಗಿದೆ.

ಸಮಿತಿಯು ಉದ್ದೇಶಗಳ ನಿರ್ಣಯದಲ್ಲಿ ಉಪಯೋಗಿಸಲಾದ ಸಾರ್ವಭೌಮ, ಸ್ವತಂತ್ರ ಗಣರಾಜ್ಯ ಎಂಬ ಉಕ್ತಿಯ ಬದಲು ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯ ಎಂಬ ಉಕ್ತಿಯನ್ನು ಅಂಗೀಕರಿಸಿತು.

**ಪ್ರಸ್ತಾವನೆ ಹೀಗಿದೆ:**

'ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಸರ್ವಧರ್ಮ ಸಮಭಾವದ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ವಿಚಾರ ಅಭಿವ್ಯಕ್ತಿ ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ, ಸ್ಥಾನಮಾನ ಹಾಗೂ ಅವಕಾಶಗಳ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ, ಅವರಲ್ಲಿ ಭ್ರಾತೃ ಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ'.

ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಕಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

**ಪ್ರಸ್ತಾವನೆಯ ಅರ್ಥ ವಿವರಣೆ:**

ಭಾರತ ಸಂವಿಧಾನದ ಮೂಲಭೂತ ಲಕ್ಷಣಗಳನ್ನು ಪ್ರಸ್ತಾವನೆ ವಿವರಿಸುತ್ತದೆ.

**ಸಾರ್ವಭೌಮ:**

ಅಂದರೆ ರಾಷ್ಟ್ರದ ಪರಮೋಚ್ಛ ನಿರುಪಾಧಿಕ, ಪ್ರಶ್ನಾತೀತವಾದುದು ಮತ್ತು ಅಂತಿಮವಾದುದು. ಎಲ್ಲ ಆಂತರಿಕ ಮತ್ತು ಬಾಹ್ಯ ವ್ಯವಹಾರಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಮತ್ತು ಯಾವುದೇ ಹೊರ ದೇಶದೊಡನೆ ಯಾವುದೇ ಒಪ್ಪಂದಗಳನ್ನು ಹೊಂದುವ ಸ್ವಾತಂತ್ರ್ಯವನ್ನು ರಾಷ್ಟ್ರ ಹೊಂದಿದೆ.

ಸಾರ್ವಭೌಮತ್ವವು ಭಾರತದ ಆಂತರಿಕ ಮತ್ತು ಬಾಹ್ಯ ಸಾರ್ವಭೌಮಗಳೆರಡನ್ನೂ ಒಳಗೊಳ್ಳುತ್ತದೆ.

**ಸಮಾಜವಾದಿ:**

1976ರ 42ನೇ ತಿದ್ದುಪಡಿಯ ಮೂಲಕ ಸಮಾಜವಾದಿ ಪದ ಪ್ರಸ್ತಾವನೆಗೆ ಸೇರಿಸಲ್ಪಟ್ಟಿತು.

ಸಮಾಜವಾದವೆಂದರೆ ವರಮಾನ ಸ್ಥಾನಮಾನ ಹಾಗೂ ಅವಕಾಶಗಳ ಅಸಮತೆಯ ನಿರ್ಮೂಲನೆ ಮತ್ತು ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಶೋಷಣೆಗಳಿಂದ ಮುಕ್ತಿ. ಪ್ರಜಾಸತ್ತಾತ್ಮಕ ಸಾಮಾಜಿಕವಾದದ ಗುರಿ ಬಡತನ ಮತ್ತು ಅಜ್ಞಾನಗಳ ಅಂತ್ಯ.

**ಸರ್ವಧರ್ಮದ ಸಮಭಾವ:**

(ಜಾತ್ಯಾತೀತ) 1976ರ 42ನೇ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ. ಇದರ ಪ್ರಕಾರ ಯಾವುದೇ ಧರ್ಮವನ್ನು ರಾಜ್ಯ ಧರ್ಮವೆಂದು ಘೋಷಿಸುವುದಿಲ್ಲ. ಧರ್ಮ ಓರ್ವ ವ್ಯಕ್ತಿಯ ಖಾಸಗಿ ವ್ಯವಹಾರವೆಂದು ಪರಿಗಣಿಸಲಾಗುತ್ತದೆ. ಸರ್ವಧರ್ಮ ಸಮಭಾವದ ಅರ್ಥ ಧಾರ್ಮಿಕ ಸ್ವಾತಂತ್ರ್ಯ ಮತ್ತು ಪರಧರ್ಮ ಸಹಿಷ್ಣುತೆ. ಎಲ್ಲಾ ಧರ್ಮಗಳನ್ನು ಸಮನಾಗಿ ಪರಿಗಣಿಸುವುದು ಮತ್ತು ಗೌರವದಿಂದ ಕಾಣಬೇಕು.

ಬೊಮ್ಮಾಯಿ ಪ್ರಕರಣದಲ್ಲಿ, ಜಾತ್ಯಾತೀತತೆ ಸಂವಿಧಾನದ ಮೂಲಭೂತ ಲಕ್ಷಣ ಎಂದು ಸರ್ವೋಚ್ಛ ನ್ಯಾಯಾಲಯ ಹೇಳಿದೆ.

**ಪ್ರಜಾಸತ್ತಾತ್ಮಕ:**

ಅಂದರೆ ದೇಶದ ಆಳ್ವಿಕೆಯಲ್ಲಿ ಜನರ ಭಾಗವಹಿಸುವಿಕೆ. ಲಿಂಕನ್ 'ಜನರಿಂದ ಜನರಿಗಾಗಿ ಮತ್ತು ಜನರ ಸರ್ಕಾರ' ಎಂದಿದ್ದಾರೆ.

**ಗಣರಾಜ್ಯ:**

ರಾಷ್ಟ್ರದ ಮುಖ್ಯಸ್ಥ ಅನುವಂಶಿಕ ರಾಜನಾಗಿರದೆ ಒಮದು ನಿಗದಿತ ಅವಧಿಗೆ ಮಾತ್ರ ಇರುವ ಚುನಾಯಿತ ಕಾರ್ಯನಿರ್ವಾಹಕನೆಂಬ ಅರ್ಥ ಅಡಗಿದೆ.

**ನ್ಯಾಯ:**

ಸಮಾಜದ ಸಾಮಾನ್ಯ ಕಲ್ಯಾಣ ಮತ್ತು ವೈಯಕ್ತಿಕ ನಡವಳಿಕೆಯ ಸಮರಸ ಸಮನ್ವಯವೇ ನ್ಯಾಯ. ಈ ಕೆಳಗಿನ ನ್ಯಾಯಗಳನ್ನು ಒಳಗೊಂಡಿದೆ.

* ಸಾಮಾಜಿಕ ನ್ಯಾಯ * ಆರ್ಥಿಕ ನ್ಯಾಯ * ರಾಜಕೀಯ ನ್ಯಾಯ

**ಸ್ವಾತಂತ್ರ್ಯ:**

ಸ್ವಾತಂತ್ರ್ಯವೆಂದರೆ ಕೇವಲ ನಿರ್ಬಂಧದ ಅಭಾವವಾಗಿರದೆ ಅಗತ್ಯವಾದ ಪರಿಸರವನ್ನು ನಿರ್ಮಾಣ ಮಾಡುವ ಒಂದು ಹಕ್ಕು.

**ಸಮಾನತೆ:**

ಸಮಾನತೆ ಇಲ್ಲದ ಸ್ವಾತಂತ್ರ್ಯ ಅರ್ಥಹೀನ. ಎಲ್ಲ ನಾಗರೀಕರಿಗೂ ಕಾನೂನಿನ ದೃಷ್ಟಿಯಲ್ಲಿ ಸಮಾನರಾಗಿರುವ ವ್ಯವಸ್ಥೆಯೇ ಸಮಾನತೆ.

**ಭ್ರಾತೃತ್ವ ಭಾವನೆ:**

ಅಂದರೆ 'ಸಹೋದರತ್ವ'. ಕುವೆಂಪುರವರ ವಿಶ್ವ ಮಾನವತ್ವದ ಪರಿಕಲ್ಪನೆಯು ಭ್ರಾತೃತ್ವದ ಸಂಕೇತವಾಗಿದೆ.

## ಭಾರತದ ಒಕ್ಕೂಟ ಮತ್ತು ಅದರ ಭೂ ಪ್ರದೇಶ:

**(ವಿಧಿ 1ರಿಂದ 4ರವರೆಗೆ) – ಭಾಗ 1**

ಡಾ. ಫಜಲ್ ಆಲಿ ಆಯೋಗವು 16 ರಾಜ್ಯ 3 ಕೇಂದ್ರಾಡಳಿತ ಪ್ರದೇಶ ರಚಿಸಬೇಕೆಂದು ಹೇಳಿತು. ಆದರೆ ಸರ್ಕಾರ 1956 ನವೆಂಬರ್ 1ರಂದು 14 ರಾಜ್ಯ 6 ಕೇಂದ್ರಾಡಳಿತ ಪ್ರದೇಶಗಳನ್ನು ರಚಿಸಿತು.

1956ರ ನಂತರ ರಚಿಸಲ್ಪಟ್ಟ ಹೊಸ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು.

1) 1960 ಗುಜರಾತ್ (ಬಾಂಬೆಯಿಂದ ಪ್ರತ್ಯೇಕ) 15ನೇ ರಾಜ್ಯ
2) 1961 ದಾದ್ರ ಮತ್ತು ನಗರ ಹವೇಲಿ (10ನೇ ತಿದ್ದುಪಡಿ)
3) 1961 ಗೋವಾ (ಆಗ ಕೇ.ಪ್ರದೇಶ), ದಮನ್ ಮತ್ತು ದಿಯು (12ನೇ ತಿದ್ದುಪಡಿ)
4) 1962 ಪಾಂಡಿಚೇರಿ (14ನೇ ತಿದ್ದುಪಡಿ)
5) 1962 ನಾಗಾಲ್ಯಾಂಡ್ ಭಾರತದ 16ನೇ ರಾಜ್ಯ
6) 1966 ಹರಿಯಾಣ, ಚಂಡೀಗಡ್ ಮತ್ತು ಹಿಮಾಚಲ ಪ್ರದೇಶ
7) 1971ರಲ್ಲಿ ಹಿಮಾಚಲ ಪ್ರದೇಶ 18ನೇ ರಾಜ್ಯ
8) 1971 ಮಣಿಪುರ, ತ್ರಿಪುರ ಮತ್ತು ಮೇಘಾಲಯ
9) 1975 ಸಿಕ್ಕಿಂ (36ನೇ ತಿದ್ದುಪಡಿ)
10) 1987 ಮಿಜೋರಾಂ, ಅರುಣಾಚಲ ಪ್ರದೇಶ ಮತ್ತು ಗೋವಾ ಕ್ರಮವಾಗಿ 23, 24, 25ನೇ ರಾಜ್ಯಗಳಾಗಿ
11) 2000 ಛತ್ತೀಸ್‌ಗಡ್, ಉತ್ತರಾಂಚಲ ಮತ್ತು ಜಾರ್ಖಂಡ್
12) 2014 ಜೂನ್ 2, ತೆಲಂಗಾಣ ರಾಜ್ಯ 29ನೇ ರಾಜ್ಯವಾಗಿ ರಚನೆಯಾಯಿತು.

ಸಂಸತ್ತು ಭಾರತದ ರಾಜಕೀಯ ನಕ್ಷೆಯನ್ನು ತಾನು ಇಚ್ಛಿಸಿದಂತೆ ಬದಲಾಯಿಸುವ ಅಧಿಕಾರ ಹೊಂದಿದೆ. ಗಡಿ ವಿವಾದಕ್ಕೆ ಸಂವಿಧಾನ ತಿದ್ದುಪಡಿಯ ಅಗತ್ಯತೆ ಇಲ್ಲ. ಸುಪ್ರೀಂಕೋರ್ಟ್ ಹೇಳಿದೆ.

**ನಾಗರಿಕತ್ವ (ಪೌರತ್ವ)**

**ಸಂವಿಧಾನದ ಭಾಗ 2 (ಅನುಚ್ಛೇದ 5 ರಿಂದ 11):**

ಒಂದು ದೇಶದ ನಾಗರೀಕ ಮತ್ತು ರಾಜಕೀಯ ಹಕ್ಕುಗಳನ್ನು ಪೂರ್ತಿಯಾಗಿ ಅನುಭವಿಸುವ ವ್ಯಕ್ತಿಯು ಆ ದೇಶದ ಪೌರನಾಗಿರುತ್ತಾನೆ.

ಭಾರತೀಯ ಸಂವಿಧಾನ ಅದರ ಪ್ರಜೆಗಳಿಗೆ ಏಕನಾಗರಿಕತ್ವವನ್ನು ಖಾತರಿಪಡಿಸುತ್ತದೆ.

**ಪೌರತ್ವದ ನಿರ್ಣಯ:**

ಅನುಚ್ಛೇದ 5ರ ಪ್ರಕಾರ ಸಂವಿಧಾನ ರಚಿಸುವ ವೇಳೆಯಲ್ಲಿ ಭಾರತದ ಪ್ರಾಂತ್ಯದಲ್ಲಿ ವಾಸವಿರಬೇಕು.

**ನಿಯಮಗಳು:**

* ಭಾರತದಲ್ಲಿ ಹುಟ್ಟಿರಬೇಕು. ಇಲ್ಲವೇ ಅವನ ಪೋಷಕರು ಭಾರತದಲ್ಲಿ ಹುಟ್ಟಿರಬೇಕು.
* ಸಂವಿಧಾನ ರಚಿಸುವ 5 ವರ್ಷ ಮುಂಚಿತವಾಗಿಂದಲೂ ಭಾರತದ ಸಾಮಾನ್ಯ ಪ್ರಜೆಯಾಗಿರಬೇಕು.
* 1948 ಜುಲೈ 19ಕ್ಕಿಂತ ಮೊದಲು ಪಾಕಿಸ್ತಾನದಿಂದ ವಲಸೆ ಬಂದವರು.

**1955ರ ಪೌರತ್ವ ಕಾಯ್ದೆಯಡಿಯಲ್ಲಿ ನಾಗರಿಕತ್ವ ನಿರ್ಧಾರ:**

ಈ ಕೆಳಗಿನ 5 ಸಂದರ್ಭದಲ್ಲಿ ನಾಗರಿಕತ್ವ ನಿರ್ಧಾರವಾಗುತ್ತದೆ.

* ಹುಟ್ಟಿನಿಂದ: 1950 ಜನವರಿ 26ರ ನಂತರ ಆದರೆ ಪೌರತ್ವ ಕಾಯಿದೆ (ತಿದ್ದುಪಡಿ) ಅಧಿನಿಯಮ 1986 ಪ್ರಾರಂಭವಾಗುವ ಮುಂಚೆ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿ ಹುಟ್ಟಿನಿಂದ ಭಾರತದ ಪೌರನಾಗಿರುತ್ತಾನೆ.
* ವಂಶದಿಂದ: 1950 ಜನವರಿ 26ರಂದು ಅಥವಾ ನಂತರ ಭಾರತದ ಹೊರಗೆ ಭಾರತೀಯ ಕುಟುಂಬಗಳಲ್ಲಿ ಜನಿಸಿದವರು.
* ನೊಂದಾಯಿಸುವುದರಿಂದ: ಸೂಕ್ತ ಪ್ರಾಧಿಕಾರದ ಮುಂದೆ ನೋಂದಾಯಿಸುವಿಕೆ.

**ವಿದೇಶಿಯರಿಗೆ ಪೌರತ್ವ ಈ ಕೆಳಗಿನ ನಿಯಮಗಳಿಗೆ ಒಳಪಟ್ಟು:**

* ಪರದೇಶದ ಪೌರತ್ವ ತ್ಯಾಗ ಮಾಡಿರಬೇಕು
* ಭಾರತ ದೇಶಕ್ಕೆ ವಿಧೇಯನಾಗಿರಲು ಪ್ರಮಾಣ ಸ್ವೀಕರಿಸಬೇಕು
* ಸಂವಿಧಾನ ಗುರುತಿಸಿದ ಭಾಷೆಯ ಮೇಲೆ ಸಾಕಷ್ಟು ಜ್ಞಾನ ಹೊಂದಿರಬೇಕು
* ಭಾರತೀಯರ ಪೌರತವ ಪಡೆಯಲು ಅವಕಾಶ ನೀಡಿರುವ ದೇಶದವನಾಗಿರಬೇಕು

**ಪ್ರಾಂತ್ಯಗಳ ಸಂಯೋಜನೆಯಿಂದ ಸೇರ್ಪಡೆ:**

* ಯಾವುದೇ ಹೊಸ ಪ್ರಾಂತ್ಯ ಭಾರತದ ಭಾಗವಾದರೆ.

**ಪೌರತ್ವವನ್ನು ಕಳೆದುಕೊಳ್ಳುವಿಕೆ:**

* ಪೌರತ್ವ ಪರಿತ್ಯಾಗ: ಪ್ರಾಪ್ತವಯಸ್ಕ ನಿಗದಿತ ರೀತಿಯಲ್ಲಿ ಘೋಷಣೆ ಮಾಡುವುದರ ಮೂಲಕ
* ಪೌರತ್ವದ ರದ್ದಾಗುವಿಕೆ: ಪೌರನು ಸ್ವ ಇಚ್ಛೆಯಿಂದ ಬೇರೆ ದೇಶದ ಪೌರತ್ವ ಪಡೆದಾಗ
* ಸಂವಿಧಾನದಿಂದ ಪೌರತ್ವ ನಿರಾಕರಣೆ: ಈ ಕೆಳಕಂಡ ಕಾರಣಗಳಿಗೆ ಪೌರತ್ವ ನಿರಾಕರಣೆಯಾಗುತ್ತದೆ.

1) ಮೋಸ, ಸುಳ್ಳು ವಂಚನೆಗಳಿಂದ ಪೌರತ್ವ ಪಡೆದಾಗ,

* ಭಾರತೀಯ ಸಂವಿಧಾನಕ್ಕೆ ಮಾತಿನಿಂದ ನಡತೆಯಿಂದ ಅವಿಧೇಯತೆಯನ್ನು ತೋರಿದಾಗ.
* ಯುದ್ದ ಸಮಯದಲ್ಲಿ ಶತೃವಿನೊಂದಿಗೆ ವ್ಯವಹರಿಸಿದರೆ.
* ನೋಂದಣಿಯಾದ 5 ವರ್ಷಗಳಲ್ಲಿ 2 ವರ್ಷಕ್ಕಿಂತ ಹೆಚ್ಚು ಸೆರೆವಾಸ ಅನುಭವಿಸಿದರೆ.
* ಭಾರತದ ಹೊರಗೆ 7 ವರ್ಷಗಳ ಕಾಲ ಸಾಮಾನ್ಯ ವಾಸಸ್ಥಾನ ಹೊಂದಿದ್ದರೆ. (ವಿದ್ಯಾರ್ಥಿ, ಐಎಫ್‌ಎಸ್, ಯುಎನ್‌ಎ ಸದಸ್ಯ ರಾಯಭಾರಿಗಳಿಗೆ ಇದು ಅನ್ವಯಿಸುವುದಿಲ್ಲ).

## ಮೂಲಭೂತ ಹಕ್ಕುಗಳು (ಅನುಚ್ಛೇದ 12ರಿಂದ 35)

ಸಂವಿಧಾನದ ಭಾಗ 3, ಭಾಗ 4 ಮತ್ತು ಭಾಗ 4ಎ ಇವುಗಳನ್ನು ಸಂವಿಧಾನದ ತಿರುಳು ಎಂದು ಪರಿಗಣಿಸಲಾಗಿದೆ. ಹಕ್ಕುಗಳನ್ನು,

1) ನೈತಿಕ ಹಕ್ಕು: ಉದಾ: ಹಸಿವಿನಿಂದ ಬಳಲುವ ವ್ಯಕ್ತಿ
2) ಕಾನೂನು ಸಮ್ಮತಿ ಹಕ್ಕು: ಉದಾ: ಆಸ್ತಿ ಹಕ್ಕು
3) ಮೂಲಭೂತ ಹಕ್ಕು: ಉದಾ: ಸಮಾನತೆ ಎಂದು ವರ್ಗೀಕರಿಸಲಾಗಿದೆ.

ಮೂಲಭೂತ ಹಕ್ಕುಗಳು ಅಸಾಧಾರಣ ಕಾನೂನು ಸಮ್ಮತ ಹಕ್ಕುಗಳಾಗಿವೆ.

**ಮೂಲಭೂತ ಹಕ್ಕುಗಳು ಮತ್ತು ಕಾನುನು ಸಮ್ಮತ ಹಕ್ಕುಗಳ ವ್ಯತ್ಯಾಸಗಳು:**

**ಮೂಲಭೂತ ಹಕ್ಕುಗಳು:**

* ಇವು ಸಂವಿಧಾನದಿಂದ ಖಾತರಿ ಹೊಂದಿವೆ.

* ಸಂವಿಧಾನದ ರಕ್ಷಣೆ ಪಡೆದಿದೆ.
* ಉಲ್ಲಂಘಿಸಿದಾಗ ನಿರುಪಾಧಿಕವಾಗಿ ಜಾರಿಯಾಗದೆ ಇರಬಹುದು.
* ಎಸ್‌ಸಿ ಮತ್ತು ಹೆಚ್‌ಸಿ ದಿಂದ ಮಾತ್ರ ಜಾರಿಗೊಳಿಸಲ್ಪಡುತ್ತದೆ.

**ಕಾನೂನು ಸಮ್ಮತ ಹಕ್ಕುಗಳು:**

* ಇವು ಶಾಸನಗಳ ಖಾತರಿ ಹೊಂದಿವೆ.
* ಶಾಸನಗಳ ರಕ್ಷಣೆ ಪಡೆದಿದೆ.
* ಉಲ್ಲಂಘಿಸಿದಾಗ ನಿರುಪಾಧಿಕವಾಗಿ ಜಾರಿಗೊಳಿಸಲ್ಪಡುತ್ತದೆ.
* ಸಿವಿಲ್ ನ್ಯಾಯಾಲಯಗಳಿಂದ ಜಾರಿಗೊಳಿಸಲ್ಪಡುತ್ತದೆ.

**ಮೂಲಭೂತ ಹಕ್ಕುಗಳ ಪ್ರಧಾನ ಲಕ್ಷಣಗಳು:**

* ಇವು ಸಂವಿಧಾನದ ಅವಿಭಾಜ್ಯ ಅಂಗಗಳಾಗಿವೆ. ಇವುಗಳ ಹೊರತಾಗಿ ಶಾಸಕಾಂಗದ ಯಾವುದೇ ಕಾನೂನು ಅಕೃತ ಮತ್ತು ಶೂನ್ಯ.
* ಸಕಾರಾತ್ಮಕ ಮತ್ತು ನಕಾರಾತ್ಮಕ ಹಕ್ಕುಗಳು, ಸರ್ಕಾರಕ್ಕೆ ನಿರ್ಬಂಧಿಸುವ ಮೂಲಕ ನಕಾರಾತ್ಮಕ. ನಾಗರಿಕರಿಗೆ ವಿಶೇಷ ಸವಲತ್ತಿನ ಮೂಲಕ ಸಕಾರಾತ್ಮಕ.
* ಯುಕ್ತ ಪರಿಮಿತಿಗಳು ನಿರ್ಬಂಧಗಳು. ಇವು ನಿರಂಕುಶ ಹಕ್ಕುಗಳಲ್ಲ. ಕೆಲವೊಮ್ಮೆ ನಿರ್ಬಂಧಿಸಲ್ಪಡುತ್ತವೆ.
  – ಹಕ್ಕುಗಳ ಅಮಾನತು ಅನುಚ್ಛೇದ 359 (20.2) ಹೊರತು ಪಡಿಸಿ.
  – ಪ್ರಜೆಗಳಿಗೆ ಇರುವ ವಿಶೇಷ ಹಕ್ಕುಗಳು ಇವಾಗಿವೆ.
  – ಇವುಗಳನ್ನು ತಿದ್ದುಪಡಿ ಮಾಡಬಹುದು.
  – ವಿಧಿ 14, 20, 21, 21ಎ, 22 ವಿದೇಶಿಯರಿಗೆ ಅನ್ವಯವಾಗುತ್ತದೆ.

**ಸಮಾನತಗೆಯ ಹಕ್ಕು: ಅನುಚ್ಛೇದ 14**

ಕಾನೂನಿನ ಮುಂದೆ ಸಮಾನತೆ ಮತ್ತು ಕಾನೂನಿನಿಂದ ಸಮಾನ ರಕ್ಷಣೆ, ಕಾನೂನಿನ ಅದಿಪತ್ಯವೇ ಆಗಿದೆ. ಈ ಸಮಾನತೆಯು ಕೆಲವು ಅಪವಾದಗಳಿಗೆ ಅವಕಾಶ ನೀಡಿದೆ.

* ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ವಿಧಿ 361 ಪ್ರಕಾರ ವಿನಾಯಿತಿ.
* ಕೆಲವು ವರ್ಗಗಳ ವ್ಯಕ್ತಿಗಳು ವಿಶೇಷ ಕಾನೂನುಗಳಿಗೆ ಒಳಪಡುವುದನ್ನು ತಪ್ಪಿಸುವುದಿಲ್ಲ. ಉದಾ: ಸೇನಾ ಪಡೆಗೆ ಸೇನಾ ಕಾನೂನು, ವೈದ್ಯರಿಗೆ ವೈದ್ಯಕೀಯ ಕಾನೂನು.
* ಅಂತರರಾಷ್ಟ್ರೀಯ ಕಾನೂನಿನಡಿಯಲ್ಲಿ ರಾಯಭಾರಿ ಮತ್ತು ವಿದೇಶಿ ಸಾರ್ವಭೌಮರಿಗೆ ನ್ಯಾಯಿಕ ಪ್ರಕ್ರಿಯೆ ವಿನಾಯಿತಿ.
* ಕಾನೂನಿನ ಸಮಾನ ರಕ್ಷಣೆಯೆಂಬುದು ಒಂದು ಸಕಾರಾತ್ಮಕ ಪರಿಕಲ್ಪನೆಯಾಗಿದೆ.

**ಅನುಚ್ಛೇದ – 15:**

ಧರ್ಮ, ಮೂಲವಂಶ, ಜಾತಿ ಲಿಂಗ ಅಥವಾ ಜನ್ಮಸ್ಥಳದ ಆಧಾರದ ಮೇಲೆ ತಾರತಮ್ಯ ನಿಷೇಧ.

* 15(3) ಹೆಂಗಸರು ಮತ್ತು ಮಕ್ಕಳಿಗೆ ವಿಶೇಷ ಉಪಬಂಧ ಕಲ್ಪಿಸಲು ಅವಕಾಶ.
* 15(4) ಎಸ್‌ಸಿ / ಎಸ್‌ಟಿಗೆ ವಿಶೇಷ ಉಪಬಂಧ ಕಲ್ಪಿಸಲು ಅವಕಾಶ.
* 15(5) ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲರಿಗೂ ಪ್ರವೇಶಾವಕಾಶ ಆದರೆ ಅಲ್ಪಸಂಖ್ಯಾತ ಸಂಸ್ಥೆಗಳನ್ನು ಹೊರತುಪಡಿಸಿ.

**ಅನುಚ್ಛೇದ 16:**

ಸಾರ್ವಜನಿಕ ನಿಯೋಜನೆಯಲ್ಲಿ ಸಮಾನ ಅವಕಾಶ.

* 16(4) ಮೀಸಲಾತಿಗೆ ಅವಕಾಶ.

**ಅನುಚ್ಛೇದ 17:**

ಅಸ್ಪೃಶ್ಯತೆ ನಿವಾರಣೆ.

**ಅನುಚ್ಛೇದ 18:**

ಬಿರುದು ಬಾವಲಿಗಳ ರದ್ದತಿ.

* 18(1) ಸೇನಾ ಅಥವಾ ವಿದ್ಯಾ ಸಂಬಂಧದ ಪ್ರಶಸ್ತಿಗೆ ಮಾತ್ರ ಅವಕಾಶ.
* 18(2) ವಿದೇಶಗಳಿಂದ ಪ್ರಶಸ್ತಿ ಪಡೆಯಲು ನಿಷೇಧ.
* ಭಾರತ ರತ್ನ ಮತ್ತು ಪದ್ಮ ಪ್ರಶಸ್ತಿಗಳು ಬಿರುದುಗಳಲ್ಲ.

**ಸ್ವಾತಂತ್ರ್ಯದ ಹಕ್ಕು: ಅನುಚ್ಛೇದ 19**

ವಾಕ್ ಸ್ವಾತಂತ್ರ್ಯ ಮುಂತಾದವುಗಳ ಬಗ್ಗೆ ಕೆಲ ಹಕ್ಕುಗಳ ಸಂರಕ್ಷಣೆ. ಅದರಲ್ಲಿ ನಾಗರಿಕರಿಗೆ ಇರುವ 6 ಸ್ವಾತಂತ್ರ್ಯಗಳು.

* 19(1) ಎ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ
* 19(1) ಬಿ. ಸಭೆ ಸೇರುವ ಹಕ್ಕು
* 19(1) ಸಿ. ಸಂಘ (ಸಹಕಾರ ಸಂಘ – 97ನೇ ತಿದ್ದುಪಡಿ) ರಚಿಸುವ ಹಕ್ಕು.
* 19(1) ಡಿ. ಸಂಚಾರ ಮಾಡುವ ಹಕ್ಕು (ಜಮ್ಮು ಕಾಶ್ಮೀರ ಹೊರತು ಪಡಿಸಿ).
* 19(1) ಇ. ವಾಸ ಮಾಡುವ ಹಕ್ಕು.
* 19(1) ಎಫ್. ಇದನ್ನು ನಿರಸಿತಗೊಳಿಸಲಾಗಿದೆ.
* 19(1) ಜಿ. ಯಾವುದೇ ವೃತ್ತಿ, ವ್ಯಾಪಾರ, ಕಸುಬು ಇತ್ಯಾದಿ ನಡಸುವ ಹಕ್ಕು.

ಈ ಮೇಲಿನ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಚಲಾಯಿಸುವುದಕ್ಕಿರುವ ಸಂವಿಧಾನಾತ್ಮಕ ನಿರ್ಬಂಧಗಳೇನೆಂದರೆ,

* ರಾಜ್ಯದ ಭದ್ರತೆಗೆ ಧಕ್ಕೆ ಬರಬಾರದು
* ವಿದೇಶ ರಾಜ್ಯಗಳೊಂದಿಗೆ ಸ್ನೇಹ ಸಂಬಂಧಗಳು ಹಾಳಾಗದಂತೆ ನಮ್ಮ ವಾಕ್ ಸ್ವಾತಂತ್ರ್ಯ ಇರಬೇಕು
* ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಬರಬಾರದು
* ಸಭ್ಯತೆ ಮತ್ತು ನೈತಿಕತೆ ಎಲ್ಲೇ ಮೀರಬಾರದು
* ನ್ಯಾಯಾಲಯ ನಿಂದನೆ ಸಿವಿಲ್ ನಿಂದನೆ ಮತ್ತು ಕ್ರಿಮಿನಲ್ ನಿಂದನೆ ಆಗುವಂತಿರಬಾರದು
* ಮಾನ ನಷ್ಟ ಲೇಖನ ಅಥವಾ ಹೇಳಿಕೆ ಪ್ರಕಟಿಸಬಾರದು
* ಅಪರಾಧಕ್ಕೆ ಪ್ರೇರೇಪಣೆ ನೀಡುವಂತಿರಬಾರದು
* ಭಾರತದ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ದಕ್ಕೆ ಬಾರದಂತೆ ಅನು.19ರಲ್ಲಿನ ಆರು ಹಕ್ಕು / ಸ್ವಾತಂತ್ರ್ಯಗಳನ್ನು ಬಳಸಬೇಕು.

**ಅನುಚ್ಛೇದ 20:**

ಅಪರಾಧಗಳ ಬಗೆಗೆ ಅಪರಾಧಿಯೆಂದು ನಿರ್ಣಯಿಸುವ ಸಂಬಂಧದಲ್ಲಿ ಸಂರಕ್ಷಣೆ. ಇದಕ್ಕೆ ಇರುವ ಷರತ್ತುಗಳು,

* ಹಿಂದಿನ ತಪ್ಪಿಗೆ ಇಂದಿನ ಕಾನೂನು ಅನ್ವಯಿಸುವುದಿಲ್ಲ\
* ಇಮ್ಮಡಿ ವಿಪತ್ತು (ಒಂದು ತಪ್ಪಿಗೆ ಒಂದೇ ಶಿಕ್ಷೆ)
* ತನ್ನ ವಿರುದ್ಧ ತಾನೇ ಸಾಕ್ಷಿ ಹೇಳುವಂತಿಲ್ಲ

**ಅನುಚ್ಛೇದ 21:**

ಜೀವ ಸಂರಕ್ಷಣೆ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ. (ವಿಧಿ 20 ಮತ್ತು 21, 21ಎ ನ್ನು ರಾಷ್ಟ್ರೀಯ ತುರ್ತು ಪರಿಸ್ಥಿತಿ ಇದ್ದರೂ, ಈ ಹಕ್ಕುಗಳನ್ನು ಅಮಾನತು ಮಾಡಲು ಬರುವುದಿಲ್ಲ.)

**ಅನುಚ್ಛೇದ 21ಎ:**

ವಿದ್ಯಾಭ್ಯಾಸದ ಹಕ್ಕು.

**ಅನುಚ್ಛೇದ 22:**

ಕೆಲವು ಸಂದರ್ಭಗಳಲ್ಲಿ ದಸ್ತಗಿರಿಯಿಂದ ಮತ್ತು ಸ್ಥಾನ ಬದ್ಧತೆಯಿಂದ ಸಂರಕ್ಷಣೆ.

* ಪ್ರತಿಬಂಧಕ ಸ್ಥಾನ ಬದ್ದತೆ , 3 ತಿಂಗಳಿಗೆ ಹೆಚ್ಚಿಲ್ಲದಂತೆ ಇರಬೇಕು.

**ಶೋಷಣೆ ವಿರುದ್ದ ಹಕ್ಕುಗಳು: ಅನುಚ್ಛೇದ 23**

ಮಾನವ ದುರ್ವ್ಯವಹಾರ ಮತ್ತು ಬಲಾತ್ಕಾರದ ದುಡಿಮೆಯನ್ನು ನಿಷೇಧಿಸುತ್ತದೆ.

**ಅನುಚ್ಛೇದ 24:**

ಕಾರ್ಖಾನೆ ಮುಂತಾದವುಗಳಲ್ಲಿ ಮಕ್ಕಳ ನಿಯೋಜನೆಗೆ ನಿಷೇಧ ಹೇರುತ್ತದೆ. (ಜೀತ ರದ್ದತಿ 1986, 14 ವಯಸ್ಸಿನ ಕೆಳಗಿನ ಮಕ್ಕಳ ನಿಯೋಜನೆಗೆ ನಿಷೇಧ ವಿಧಿಸಿದೆ.)

* ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

**ಅನುಚ್ಛೇದ 25:**

ಅಂತ: ಸಾಕ್ಷಿ, ಸ್ವಾತಂತ್ರ್ಯ ಮತ್ತು ಧರ್ಮದ ಅಭಾದಿತ ಅವಲಂಬನೆ ಆಚರಣೆ ಮತ್ತು ಪ್ರಚಾರದ ಕುರಿತು ಹೇಳುತ್ತದೆ. ಇದು ಭಾರತೀಯ ಸಂವಿಧಾನದ ಜಾತ್ಯಾತೀತ ಸ್ವರೂಪವನ್ನು ನಿರೂಪಿಸುತ್ತದೆ.

**ಅನುಚ್ಛೇದ 26:**

ನಿರ್ವಹಿಸುವ ಸ್ವಾತಂತ್ರ್ಯ.

**ಅನುಚ್ಛೇದ 27:**

ಯಾವುದೇ ನಿರ್ದಿಷ್ಟ ಧರ್ಮದ ಉನ್ನತಿಗಾಗಿ ತೆರಿಗೆಗಳ ಸಂದಾಯದ ಬಗೆಗೆ ಸ್ವಾತಂತ್ರ್ಯ.

**ಅನುಚ್ಛೇದ 28:**

ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುವ ಧಾರ್ಮಿಕ ಶಿಕ್ಷಣದಲ್ಲಿ ಅಥವಾ ಉಪಾಸನೆಯಲ್ಲಿ ಹಾಜರಾಗುವ ಸ್ವಾತಂತ್ರ್ಯ.

**ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು: ಅನುಚ್ಛೇದ 29**

ಅಲ್ಪ ಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ.

**ಅನುಚ್ಛೇದ 30:**

ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ನಡೆಸಲು ಅಲ್ಪಸಂಖ್ಯಾತರ ಹಕ್ಕು. ಎಲ್ಲ ಅಲ್ಪಸಂಖ್ಯಾತ ವರ್ಗದವರು ತಮ್ಮ ಇಷ್ಟಕ್ಕನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತವನ್ನು ನಡೆಯಿಸಲು ಹಕ್ಕುಳ್ಳವರಾಗಿರಬೇಕು.

**ಅನುಚ್ಛೇದ 31:**

ಸ್ವತ್ತಿನ ಹಕ್ಕು ನಿರಸಿತಗೊಳಿಸಲಾಗಿದೆ. (300 ಎ ಗೆ ಕಾನೂನು ಸಮ್ಮತ ಹಕ್ಕಾಗಿ ತಿದ್ದುಪಡಿ ಮಾಡಲಾಗಿದೆ.)

## ಸಂವಿಧಾನಾತ್ಮಕ ಪರಿಹಾರೋಪಾಯಗಳು: ಅನುಚ್ಛೇದ 32

ಇದನ್ನು ಸಂವಿಧಾನದ ಆತ್ಮ ಎಂದು ಡಾ.ಬಿ.ರ್.ಅಂಬೇಡ್ಕರ್ ಹೇಳಿದ್ದಾರೆ. 32ರ ಪ್ರಕಾರ ಸುಪ್ರೀಂ ಕೋರ್ಟ್ ಪರಿಹಾರ ಒದಗಿಸುತ್ತದೆ. 226ನೇ ವಿಧಿಯ ಪ್ರಕಾರ ಹೈಕೋರ್ಟ್ ಪರಿಹಾರ ಒದಗಿಸುತ್ತದೆ.

## ಮೂಲಭೂತ ಹಕ್ಕುಗಳ ಕಾರ್ಯಾಚರಣೆಯಲ್ಲಿ ಅಪವಾದಗಳು:

1) ಕಾನೂನಿನಲ್ಲಿ ಎಲ್ಲರೂ ಸಮಾನರು ಎಂದು ತಿಳಿಸಿದ್ದರೂ ಕೂಡ 361ನೆಯ ವಿಧಿ ಅನ್ವಯ ರಾಜ್ಯಪಾಲರು ಮತ್ತು ರಾಷ್ಟ್ರಪತಿಗೆ ವಿನಾಯಿತಿ ನೀಡಿರುವುದು.
2) ಕೆಲವು ವರ್ಗದ ಜನರಿಗೆ ವಿಶೇಷವಾದ ಕಾನೂನು ಅನ್ವಯವಾಗದಿರುವುದು (ಮಿಲಿಟರಿ).
3) ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶವಿದ್ದರೂ ಸ್ಥಳೀಯ ಪ್ರಾಧಿಕಾರದ ನೇಮಕಾತಿಯಲ್ಲಿ ವಾಸಸ್ಥಾನವನ್ನು ಅರ್ಹತೆಯಾಗಿ ಗೊತ್ತು ಪಡಿಸಿರುವುದು.
4) ಎಸ್‌ಸಿ / ಎಸ್‌ಟಿ ಯವರ ಬಡ್ತಿಯಲ್ಲಿ ಮೀಸಲಾತಿ ನೀಡಿರುವುದು.
5) 19ನೇಯ ವಿಧಿ ಅನ್ವಯ ಸಾರ್ವಭೌಮತೆ, ಸಮಗ್ರತೆ, ರಾಜ್ಯದ ಭದ್ರತೆ, ವಿದೇಶಗಳೊಡನೆ ಮೈತ್ರಿ ಸಂಬಂಧ, ಶಾಂತಿ, ನ್ಯಾಯಾಂಗ ನಿಂದನೆ, ಮಾನಹಾನಿ ಇಂತಹ ಸಮಯದಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸಕಾರಣವಾದ ನಿರ್ಬಂಧ ಹೇರುವುದು.
6) ಆರೋಗ್ಯದ ದೃಷ್ಟಿಯಿಂದ ವೇಶ್ಯೆಯರ ಮತ್ತು ಎಚ್.ಐ.ವಿ. ಪೀಡಿತರ ಸಂಚಾರದ ಮೇಲೆ ನಿರ್ಬಂಧ ವಿಧಿಸುವುದು.
7) ಅನೈತಿಕವಾದ ಮತ್ತು ಅಪಾಯಕಾರಿಯಾದ ಉದ್ಯೋಗ ಕೈಗೊಳ್ಳುವಲ್ಲಿ ನಿರ್ಬಂಧ ವಿಧಿಸುವುದು.
8) 23ನೇಯ ವಿಧಿಗೆ ಅಪವಾದವೆಂಬಂತೆ ರಾಜ್ಯವು ಸೈನಿಕ ಸೇವೆ, ಸಮಾಜ ಸೇವೆಗೆ ಪ್ರತಿಫಲ ನೀಡದೇ ಕಡ್ಡಾಯವಾಗಿ ಜನರಿಂದ ಸೇವೆ ಪಡೆಯುತ್ತಿರುವುದು.
9) ಮುನ್ನೆಚ್ಚರಿಕಾ ಬಂಧನ ಕಾಯ್ದೆ.
10) ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಧಾರ್ಮಿಕ ಸ್ವಾತಂತ್ರ್ಯದ ಮೇಲೂ ನಿರ್ಬಂಧ ವಿಧಿಸುವುದು.
11) 32ನೇ ವಿಧಿಯ ರಿಟ್‌ಗಳು ಖಾಸಗಿಯವರಿಗೆ ಅನ್ವಯವಿರುವುದಿಲ್ಲ.

## ಅನುಚ್ಛೇದ 32ರ ಅಡಿಯಲ್ಲಿ ಕೆಲವು ರಿಟ್ ಅರ್ಜಿಗಳು:

### ಹೇಬಿಯಸ್ ಕಾರ್ಪಸ್:

ಯಾವುದೇ ಸ್ಥಾನಬದ್ಧತೆಗೊಳಗಾದ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವಂತೆ ಹಾಗೆ ಸ್ಥಾನಬದ್ಧತೆ ಮಾಡಿದ ವ್ಯಕ್ತಿಗೆ ನ್ಯಾಯಾಲಯ ನೀಡುವ ಆದೇಶ. ಹೇಬಿಯಸ್ ಎಂದರೆ ದೇಹವನ್ನು ಹಾಜರು ಪಡಿಸು ಎಂದರ್ಥ. ಇದನ್ನು ಸಾರ್ವಜನಿಕ ಮತ್ತು ಖಾಸಗಿ ವ್ಯಕ್ತಿಗಳ ವಿರುದ್ಧ ಹೂಡಬಹುದು.

### ಮ್ಯಾಂಡಮಸ್:

ಒಬ್ಬ ವ್ಯಕ್ತಿಗೆ ಒಂದು ಪ್ರಾಧಿಕಾರಕ್ಕೆ ಅಥವಾ ಒಂದು ಸಂಸ್ಥೆಗೆ ಅವರು ಮಾಡಬೇಕಾದ ಸಾರ್ವಜನಿಕ ಕರ್ತವ್ಯವನ್ನು ಮಾಡುವಂತೆ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯ ಮಾಡುವ ಆಜ್ಞೆಯೇ ಇದು.

### ಸರ್ಸಿಯೋರರಿ:

ಇದು ಕೆಳ ನ್ಯಾಯಾಲಯದಿಂದ ವರಿಷ್ಠ ನ್ಯಾಯಾಲಯಕ್ಕೆ ದಾವೆಗಳನ್ನು ವರ್ಗಾಯಿಸುವ ಆದೇಶದ ರೂಪದಲ್ಲಿರುವ ರಿಟ್. ಇದನ್ನು ಆಧಿ ವಿಚಾರಣೆಗೆ ಮುನ್ನ ಅಧಿಕಾರ ವ್ಯಾಪ್ತಿಯ ಅತಿಕ್ರಮಣ ಅಥವಾ ದುರ್ಬಳಕೆ ಪ್ರತಿಬಂಧಿಸಲು ಉಪಯೋಗಿಸಲಾಗುತ್ತದೆ.

**ಪ್ರೊಹಿಬಿಷನ್:**

ಅಧೀನ ನ್ಯಾಯಾಲಯ, ಯಾವುದೇ ನಿರ್ದಿಷ್ಟ ವಿಷಯದಲ್ಲಿ ಅದರ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದರೆ ಆಗ ಆ ವಿಷಯದ ವ್ಯವಹರಣೆಯನ್ನು ಮುಂದುವರೆಸದಂತೆ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯ ಆ ಅಧೀನ ನ್ಯಾಯಾಲಯಕ್ಕೆ ಹೊರಡಿಸುವ ರಿಟ್.

**ಕೋ ವಾರೆಂಟೋ:**

ಸಾರ್ವಜನಿಕ ಅಧಿಕಾರದಲ್ಲಿರುವ ಯಾವುದೇ ವ್ಯಕ್ತಿಯ ವಿರುದ್ಧ ವರಿಷ್ಠ ನ್ಯಾಯಾಲಯ ಹೊರಡಿಸುವ ರಿಟ್. ಈ ರಿಟ್ ಮೂಲಕ ಓರ್ವ ವ್ಯಕ್ತಿ ಸಾರ್ವಜನಿಕ ಪದವಿಯನ್ನು ಒಪ್ಪಿಕೊಳ್ಳಲು ಇರುವ ಬೇಡಿಕೆಯ ಕಾನೂನು ಸಮ್ಮತಿಯನ್ನು ನ್ಯಾಯಾಲಯ ಪ್ರಶ್ನಿಸುತ್ತದೆ.

ಸಾರ್ವಜನಿಕ ಪದವಿಯನ್ನು ಆಕ್ರಮಿಸಿರುವ ವ್ಯಕ್ತಿಯನ್ನು ಅವನು ಯಾವ ಹಕ್ಕಿನಿಂದ ಅದಕ್ಕೆ ಅರ್ಹನಾಗುತ್ತಾನೆ ಎಂದು ನ್ಯಾಯಾಲಯ ಕೇಳುತ್ತದೆ.

**ರಾಜ್ಯ ನಿರ್ದೇಶಕ ತತ್ವಗಳು: (ಅನುಚ್ಛೇದ 36ರಿಂದ 51)**

ಇದನ್ನು ಸಂವಿಧಾನದ 4ನೇ ಭಾಗದಲ್ಲಿ ವಿವರಿಸಲಾಗಿದೆ. ನಿರ್ದೇಶಕ ತತ್ವಗಳು ಎಂಬುದು ಶಾಸನಗಳಿಗೆ ಕೇವಲ ಇನ್ನೊಂದು ಹೆಸರು ಅಷ್ಟೇ. ಒಂದೇ ಒಂದು ವ್ಯತ್ಯಾಸವೆಂದರೆ ಅವು ಶಾಸನ ಸಭೆಗಳು ಮತ್ತು ಕಾರ್ಯಾಂಗಕ್ಕೆ ನೀಡಿದ ಆದೇಶಗಳು. ಅಧಿಕಾರವನ್ನು ಯಾವನು ಆಕ್ರಮಿಸಿಕೊಳ್ಳುತಾನೆಯೋ ಆತನಿಗೆ ಅದರಲ್ಲಿ ತನಗೆ ಹೇಗೆ ಬೇಕೋ ಹಾಗೆ ವರ್ತಿಸಲು ಸ್ವಾತಂತ್ರ್ಯವಿಲ್ಲ. ಅಧಿಕಾರವನ್ನು ಚಲಾಯಿಸುವುದರಲ್ಲಿ ನಿರ್ದೇಶಕ ತತ್ವಗಳೆಂದು ಕರೆಯುವ ಈ ಆದೇಶ ಶಾಸನಗಳನ್ನು ಗೌರವಿಸಬೇಕು. ಅವುಗಳನ್ನು ಅವನು ಅಲಕ್ಷಿಸುವ ಹಾಗಿಲ್ಲ.

ಯಾವುದೇ ಸಂವಿಧಾನ ಅದು ರಚಿಸಲ್ಪಟ್ಟಿರುವ ಪದಗಳಿಂದ ಶ್ರೇಷ್ಠವಾಗುವುದಿಲ್ಲ. ಎಷ್ಟೇ ಸಮರ್ಥ ಪದ ಪುಂಜಗಳನ್ನು ಬಳಸಿ ರಚಿಸಿದ ಅಸಮರ್ಥರಿದ್ದರೆ, ಕೆಟ್ಟವರಿದ್ದರೆ, ಸಂವಿಧಾನ ಕುಡಾ ಕೆಟ್ಟ ಹಾಗೂ ನಿಶಕ್ತ ಸಂವಿಧಾನವಾಗುತ್ತದೆ. ಎಷ್ಟೋ ಕೆಟ್ಟ ಪದ ಬಳಸಿ ರಚಿಸಿದ ಸಂವಿಧಾನವಾಗಿದ್ದರೂ ಕೂಡ ಅದನ್ನು ಬಳಸುವ ಜನ ಕಾರ್ಯದಕ್ಷರೂ, ಗುಣವಂತರೂ ಮತ್ತು ರಾಷ್ಟ್ರಪ್ರೇಮಿಗಳು ಆಗಿದ್ದರೆ ಅಂತಹ ಸಂವಿಧಾನ ಶ್ರೇಷ್ಠ ಸಂವಿಧಾನವಾಗುತ್ತದೆ.

ಈ ಎರಡನೇ ಹೇಳಿಕೆ, ಸಂವಿಧಾನ ಅಧಿನಿಯಮಿಸಿದ ದಿನ ಪತ್ರಿಕಾ ಗೋಷ್ಠಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನೀಡಿದ್ದರು.

ರಾಜ್ಯ ನಿರ್ದೇಶಕ ತತ್ವಗಳನ್ನು ಐರ್ಲೆಂಡ್ ಸಂವಿಧಾನದಿಮದ ಎರವಲು ಪಡೆಯಲಾಗಿದೆ. ಮೂಲತ: ಇದು ಸ್ಪೇನ್ ಗಣರಾಜ್ಯ ಸಂವಿಧಾನದ ಮೂಲ. ಡಾ. ಅಂಬೇಡ್ಕರ್ ರಾಜ್ಯ ನಿರ್ದೇಶಕ ತತ್ವಗಳನ್ನು ಸಂವಿಧಾನದ ನೂತನ ಲಕ್ಷಣ ಎಂದಿದ್ದಾರೆ ಎಲ್.ಎಂ.ಸಿಂಘ್ವಿ. ರಾಜ್ಯ ನಿರ್ದೇಶನಗಳು ಸಂವಿಧಾನಕ್ಕೆ ಜಿವ ಪ್ರಧಾನ ಮಾಡುವ ಉಪಬಂಧಗಳು.

**ಅನುಚ್ಛೇದ 37:**

ಸಂವಿಧಾನದ ನಾಲ್ಕನೇ ಭಾಗದಲ್ಲಿ ಅಡಕವಾಗಿರುವ ಉಪಬಂಧಗಳನ್ನು ಯಾವುದೇ ನ್ಯಾಯಾಲಯದ ಮೂಲಕ ಜಾರಿಗೆ ಮಾಡಲು ಅವಕಾಶವಿರತಕ್ಕದ್ದಲ್ಲ.

**ಅನುಚ್ಛೇದ 38:**

ಜನತೆಯ ಕಲ್ಯಾಣೋನ್ನತಿಗಾಗಿ ರಾಜ್ಯವು ಸಾಮಾಜಿಕ ಸುವ್ಯವಸ್ಥೆಯನ್ನು ಸುಸಿಕ್ಷಿತಗೊಳಿಸುವುದು.

**ಅನುಚ್ಛೇದ 39(ಎ):**

ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು.

**ಅನುಚ್ಛೇದ 39(ಡಿ):**

ಸಮಾನ ಕೆಲಸಕ್ಕೆ ಸಮಾನ ವೇತನ 1976.

**ಅನುಚ್ಛೇದ 39(ಇ):**

ಕೆಲಸದ ಸ್ಥಳದಲ್ಲಿ ನ್ಯಾಯಯುತ ಮತ್ತು ಮಾನವೀಯ ಪರಿಸರ.

**ಅನುಚ್ಛೇದ 40:**

ಗ್ರಾಮ ಪಂಚಾಯಿತಿಗಳ ಸಂಘಟನೆ.

**ಅನುಚ್ಛೇದ 42:**

ಕೆಲಸ ಮಾಡಲು ನ್ಯಾಯಯುತ ಮತ್ತು ಮಾನವೋಚಿತ ಪರಿಸ್ಥಿತಿಗಳಿರುವಂತೆ ಮತ್ತು ಪ್ರಸೂತಿ ಪ್ರಯೋಜನವು ದೊರೆಯುವಂತೆ ರಾಜ್ಯವು ಉಪಬಂಧ ಮಾಡತಕ್ಕದ್ದು.

**ಅನುಚ್ಛೇದ 44:**

ನಾಗರಿಕರಿಗೆ ಏಕರೂಪದ ಸಿವಿಲ್ ಸಂಹಿತೆ.

**ಅನುಚ್ಛೇದ 45:**

6 ವರ್ಷ ವಯಸ್ಸಿನ ಕೆಳಗಿನ ಮಕ್ಕಳಿಗೆ ಶೈಶವಾವಸ್ಥೆಯ ರಕ್ಷಣೆ ಮತ್ತು ಶಿಕ್ಷಣದ ಅವಕಾಶ.

**ಅನುಚ್ಛೇದ 46:**

ಎಸ್‌ಸಿ, ಎಸ್‌ಟಿ ಮತ್ತು ಇತರ ದುರ್ಬಲ ವರ್ಗಗಳ ಹಿತಾಸಕ್ತಿಗಳ ಸಂವರ್ಧನೆ.

**ಅನುಚ್ಛೇದ 48(ಎ):**

ಪರಿಸರ ಸಂರಕ್ಷಣೆ ಮತ್ತು ಸುಧಾರಣೆ ಮತ್ತು ಅರಣ್ಯಗಳ ಹಾಗೂ ವನ್ಯ ಜೀವಿಗಳ ರಕ್ಷಣೆ.

**ಅನುಚ್ಛೇದ 49:**

ರಾಷ್ಟ್ರೀಯ ಮಹತ್ವವುಳ್ಳ ಸ್ಮಾರಕಗಳ, ಸ್ಥಳಗಳ ಮತ್ತು ವಸ್ತುಗಳ ಸಂರಕ್ಷಣೆ.

**ಅನುಚ್ಛೇದ 50:**

ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು.

**ಅನುಚ್ಛೇದ 51:**

ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ವೃದ್ಧಿಸುವುದು.

ರಾಜ್ಯ ನಿರ್ದೇಶಕ ತತ್ವಗಳಿಗೂ ಮತ್ತು ಮೂಲಭೂತ ಹಕ್ಕುಗಳಿಗೆ ಇರುವ ಪ್ರಮುಖ ವ್ಯತ್ಯಾಸಗಳು ಈ ಕೆಳಗಿನಂತೆ ಇವೆ.

**ಮೂಲಭೂತ ಹಕ್ಕುಗಳು:**

* ಭಾಗ 3 ವೈಯಕ್ತಿಕ ಸ್ವಾತಂತ್ರ್ಯಗಳ ಲಕ್ಷಣಗಳನ್ನು ಕುರಿತದ್ದಾಗಿದೆ.
* ಇವುಗಳನ್ನು ರಾಜ್ಯದ ಕೃತ್ಯಗಳ ವಿರುದ್ದದ ಮಿತಿಗಳಾಗಿವೆ.
* ಇವು ಉಲ್ಲಂಘನೆಯಾದಾಗ ನ್ಯಾಯಾಲಯದ ಮೂಲಕ ಜಾರಿಗೊಳಿಸಬಹುದು.
* ರಾಜ್ಯದ ವಿರುದ್ದ ಇವು ನಕಾರಾತ್ಮಕ ಹೊಣೆಗಾರಿಕೆಗಳನ್ನು ವಿಧಿಸುತ್ತದೆ.
* ರಾಜಕೀಯ ಪ್ರಜಾಸತ್ತೆಯನ್ನು ಖಾತರಿಗೊಳಿಸುತ್ತದೆ.

**ರಾಜ್ಯನೀತಿ ನಿರ್ದೇಶಕ ತತ್ವಗಳು:**

* ಸಾಮಾಜಿಕ, ಆರ್ಥಿಕ ನ್ಯಾಯದ ಆದರ್ಶ ಸಾಧನೆಗಾಗಿ ರಾಜ್ಯದ ಕರ್ತವ್ಯಗಳು ಅಥವಾ ಹೊಣೆಗಾರಿಕೆಗಳನ್ನು ಕುರಿತು ತಿಳಿಸುತ್ತದೆ.
* ಇವು ರಾಜ್ಯಕ್ಕೆ ನಿರ್ದೇಶನಗಳು ಅಥವಾ ಮಾರ್ಗದರ್ಶಕ ರೂಪದಲ್ಲಿವೆ.

* ಇವು ನ್ಯಾಯಾಲಯಗಳ ಮೂಲಕ ಜಾರಿಗೊಳಿಸಲು ಬರುವುದಿಲ್ಲ.
* ರಾಜ್ಯದ ವಿರುದ್ದ ಇವು ಸಕಾರಾತ್ಮಕ ದೃಢೀಕರಣವನ್ನು ರಾಜ್ಯಕ್ಕೆ ವಿಧಿಸುತ್ತವೆ.
* ಸಾಮಾಜಿಕ ಆರ್ಥಿಕ ಪ್ರಜಾಪ್ರಭುತ್ವವನ್ನು ಖಾತರಿಗೊಳಿಸುತ್ತದೆ ಮತ್ತು ಸಾಮಾಜಿಕ ಆರ್ಥಿಕ ಅಸಮಾನತೆ ಕಡಿಮೆ ಮಾಡಿ ಕಲ್ಯಾಣ ರಾಜ್ಯದ ನಿರ್ಮಾಣದ ಗುರಿಯನ್ನು ಹೊಂದಿದೆ.

**ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳ ನಡುವಿನ ಸಂಘರ್ಷ:**

1) ಚಂಪಕಂ ದೊರೈ ರಾಜನ್ ಮತ್ತು ಮದ್ರಾಸ್ ಪ್ರಕರಣ 1950: ಈ ಪ್ರಕರಣದಲ್ಲಿ ಮೂಲಭೂತ ಹಕ್ಕುಗಳು, ರಾಜ್ಯ ನಿರ್ದೇಶಕ ತತ್ವಗಳ ನಡುವಿನ ಸಂಘರ್ಷದಲ್ಲಿ ರಾಜ್ಯ ನಿರ್ದೇಶಕ ತತ್ವಗಗಳು ಮೂಲಭೂತ ಹಕ್ಕುಗಳ ಅಧೀನವಾಗಿರಬೇಕು ಎಂದು ಹೇಳುತ್ತದೆ.
2) ಗೋಲ್ಕನಾಥ ಪ್ರಕೃಣ 1967: ರಾಜ್ಯ ನಿರ್ದೇಶಕ ತತ್ವಗಳನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಮೂಲಭೂತ ಹಕ್ಕುಗಳಲ್ಲಿ ತಿದ್ದುಪಡಿ ತರುವಂತಿಲ್ಲ ಎಂದು ಹೇಳುತ್ತದೆ.
3) ಕೇಶವಾನಂದ ಪ್ರಕರಣ 1973: ಈ ಪ್ರಕರಣದಲ್ಲಿ ಸಂವಿಧಾನದ 31(ಸಿ) ವಿಧಿಯನ್ನು ಸಂವಿಧಾನ ಬಾಹಿರ ಎಂದು ಸರ್ವೋಚ್ಚ ನ್ಯಾಯಾಲಯ ಘೋಷಣೆ ಮಾಡುವುದರ ಮೂಲಕ ನ್ಯಾಯಾಂಗೀಯ ಪುನರ್ ಪರಿಶೀಲನೆಯನ್ನು 9ನೇ ಅನುಸೂಚಿಗೆ ಸೇರಿಸಲಾಯಿತು. ಸರ್ವೋಚ್ಚ ನ್ಯಾಯಾಲಯವು ಸಂಸತ್ತು ಸೀಮಿತವಾದ ತಿದ್ದುಪಡಿ ಅಧಿಕಾರವನ್ನು ಹೊಂದಿದ್ದು ಮೂಲ ರಚನೆಗೆ ಮತ್ತು ಸ್ವರೂಪಕ್ಕೆ ಧಕ್ಕೆ ಬಾರದಂತೆ ತಿದ್ದುಪಡಿ ಮಾಡಬಹುದೆಂದಿತು.
4) ಮಿನರ್ವ ಮಿಲ್ಸ್ ಪ್ರಕರಣ: ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳು ಎರಡೂ ಸಮಾನವಾದವುಗಳು ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿತು. ಈ ಎರಡೂ ವಿಷಯಗಳು ಭಾರತದ ಸಂವಿಧಾನದ ರಥದ ಎರಡು ಚಕ್ರಗಳು. ಇವು ಸಮತೋಲನದಲ್ಲಿರಬೇಕು. ಒಂದು ಮತ್ತೊಂದರ ಮೇಲೆ ಅಧಿಪತ್ಯ ಸಾಧಿಸಬಾರದೆಂದಿತು.

## ರಾಜ್ಯ ನೀತಿ ನಿರ್ದೇಶಕ ತತ್ವಗಳ ಉಪಯೋಗಗಳು

1) ಇವು ಭಾರತ ಒಕ್ಕೂಟದಲ್ಲಿರುವ ಎಲ್ಲಾ ಪ್ರಾಧಿಕಾರಗಳಿಗೆ ಸಲಹೆ ಮತ್ತು ಸೂಚನೆಗಳಿದ್ದಂತೆ.
2) ಇದು ನ್ಯಾಯಿಕ ವಿಮರ್ಶೆಯ ಅಧಿಕಾರವನ್ನು ಚಲಾಯಿಸಲು ನ್ಯಾಯಾಲಯಗಳಿಗೆ ಅವಕಾಶ ನೀಡಿದೆ.
3) ಇದು ಸಂವಿಧಾನದ ಪ್ರಸ್ತಾವನೆಯ ಆಶೋತ್ತರಗಳಿಗೆ ಅನುಗುಣವಾಗಿದೆ.
4) ಇದು ಭಾರತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ ಸಾಧನೆಗೆ ಸಹಕಾರಿಯಾಗಿದೆ.
5) ಇವು ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಪೂರಕವಾಗಿದ್ದು ಸಂವಿಧಾನದ 3ನೇಯ ಭಾಗದಲ್ಲಿನ ನ್ಯೂನ್ಯತೆಯನ್ನು ತುಂಬುತ್ತದೆ.
6) ವಿರೋಧ ಪಕ್ಷಗಳಿಗೆ ಸರ್ಕಾರದ ಕಾರ್ಯ ನಿರ್ವಹಣೆ ವಿರುದ್ದ ನಿಯಂತ್ರಣ ತರುತ್ತದೆ.

**ರಾಜ್ಯ ನಿರ್ದೇಶಕ ತತ್ವಗಳ ಅನುಷ್ಠಾನ ಪ್ರಸ್ತುತ ಹೀಗಿದೆ.**

1) ಕೃಷಿ ಮತ್ತು ಗ್ರಾಮೀಣ ಜನರ ಸ್ಥಿತಿಗತಿ ಸುಧಾರಿಸಲು ಭೂ ಸುಧಾರಣೆ ಕಾಯ್ದೆ ಜಾರಿಯಾಗಿದೆ.
2) ಕಾರ್ಮಿಕರ ಹಿತ ರಕ್ಷಣೆಗೆ ಕನಿಷ್ಠ ಕೂಲಿ, ಬೋನಸ್ ಕಾಯ್ದೆ, ಜೀತ ಪದ್ದತಿ ನಿರ್ಮೂಲನೆ, ಕೈಗಾರಿಕೆ ಕಾಯ್ದೆ ಜಾರಿಗೊಳಿಸಲಾಗಿದೆ.
3) ಮಹಿಳಾ ಹಿತಾಸಕ್ತಿಗೆ, ಹೆರಿಗೆ ಸೌಲಭ್ಯ ಕಾಯ್ದೆ ಮತ್ತು ಸಮಾನ ವೇತನ ಕಾಯ್ದೆ ಜಾರಿ ಮಾಡಲಾಗಿದೆ.
4) ಗುಡಿ ಕೈಗಾರಿಕೆ ಅಭಿವೃದ್ದಿಗೆ ಬಾವಿ ಮತ್ತು ಗ್ರಾಮೋದ್ಯೋಗ ಮಂಡಳಿ, ರಾಷ್ಟ್ರೀಯ ಕೈಗಾರಿಕಾ ನಿಗಮ ಸ್ಥಾಪಿಸಲಾಗಿದೆ.
5) ಸಾಮಾಜಿಕ ಅಭಿವೃದ್ದಿಪರ ಯೋಜನೆಗಳನ್ನು ಜಾರಿ ಮಾಡಲಾಗಿದೆ.

6) ಸಂವಿಧಾನಕ್ಕೆ 73, 74ನೇಯ ತಿದ್ದುಪಡಿಯನ್ನು ಮಾಡಲಾಗಿದ್ದು, ಅದರ ಪ್ರಕಾರ ಪಂಚಾಯತ್ ರಾಜ್ ಸ್ಥಾಪಿಸಲಾಗಿದೆ. ಅಧಿಕಾರ ವಿಕೇಂದ್ರೀಕರಣವನ್ನು ಜಾರಿ ಮಾಡಲಾಗಿದೆ.

## ಸಂವಿಧಾನದ ಭಾಗ 4 ಎ

## ಮೂಲಭೂತ ಕರ್ತವ್ಯಗಳು ಅನುಚ್ಛೇದ 51(ಎ)

ಮೂಲತ: ಸಂವಿಧಾನದಲ್ಲಿ ಈ ಕರ್ತವ್ಯಗಳ ಪರಿಕಲ್ಪನೆ ಇರಲಿಲ್ಲ. ಸರ್ದಾರ್ ಸ್ವರಣ್ ಸಿಂಗ್ ನೇತೃತ್ವದ ಸಮಿತಿ ಈ ಕರ್ತವ್ಯಗಳನ್ನು ಶಿಫಾರಸ್ಸು ಮಾಡಿತ್ತು. 1976ರ 42ನೇಯ ತಿದ್ದುಪಡಿಯ ಮೂಲಕ ಭಾಗ 4ಎ ಯನ್ನು ಸೇರಿಸಲಾಯಿತು.

**ಮೂಲಭೂತ ಕರ್ತವ್ಯಗಳಿಗೆ ಸಂಬಂಧಿಸಿದ ಪ್ರಕರಣಗಳು:**

1) ರಿಟ್ ಮೂಲಕ ಮೂಲಭೂತ ಕರ್ತವ್ಯಗಳನ್ನು ಜಾರಿಗೊಳಿಸಲಾಗುವುದಿಲ್ಲ – ಮುಂಬೈ ಕಾಮ್ಗಾರ್ ಸಭಾ ವಿರುದ್ದ ಭಾರತ ಒಕ್ಕೂಟ.

2) ಕಾನೂನು ಇಲ್ಲವೇ ವ್ಯಕ್ತಿಗೆ ಆಜ್ಞೆ ಮಾಡುವಂತಿಲ್ಲ – ಸೂರ್ಯನಾರಾಯಣ ವಿರುದ್ದ ಭಾರತ ಸರ್ಕಾರ.

**ಸಂವಿಧಾನವದಲ್ಲಿನ ಮೂಲಭೂತ ಕರ್ತವ್ಯಗಳು ಈ ಕೆಳಗಿನಂತಿವೆ.**

* 51(ಎ) ಎ: ಸಂವಿಧಾನ ಅನುಸರಣೆ ಅದರ ಸಂಸ್ಥೆ ಆದರ್ಶ, ರಾಷ್ಟ್ರ ಧ್ವಜ, ಗೀತೆಗೆ ಗೌರವ.
* 51(ಎ) ಬಿ: ಸ್ವಾತಂತ್ರ್ಯ ಸಂಗ್ರಾಮ ಸ್ಫೂರ್ತಿಯ ಉದಾತ್ತ ಆದರ್ಶಗಳಿಗೆ ಗೌರವ ಮತ್ತು ಅನುಸರಣೆ.
* 51(ಎ) ಸಿ: ದೇಶದ ಸಾರ್ವಭೌಮತ್ವವನ್ನು ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಮತ್ತು ಸಂರಕ್ಷಿಸುವುದು.
* 51(ಎ) ಡಿ: ದೇಶವನ್ನು ರಕ್ಷಿಸುವುದು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆಬಂದರೆ ಸಿದ್ದರಾಗುವುದು.
* 51(ಎ) ಇ: ವೈವಿಧ್ಯತೆಯಿಂದ ಕೂಡಿದ ಭಾರತದ ಜನತೆಯಲ್ಲಿ ಸಾಮರಸ್ಯ ಭ್ರಾತೃತ್ವ ಭಾವನೆಯನ್ನು ಬೆಳೆಸುವುದು ಮತ್ತು ಸ್ತ್ರೀಯರಿಗೆ ಗೌರವ ಕೊಡುವುದು.
* 51(ಎ) ಎಫ್: ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸಿ ಕಾಪಾಡುವುದು.
* 51(ಎ) ಜಿ: ನೈಸರ್ಗಿಕ ಪರಿಸರದ ಸಂರಕ್ಷಣೆ ಅಭಿವೃದ್ದಿ, ಪ್ರಾಣಿಗಳಿಗೆ ಅನುಕಂಪ.
* 51(ಎ) ಹೆಚ್: ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಸುಧಾರಣೆಯ ಪ್ರವೃತ್ತಿ ಅಭಿವೃದ್ಧಿಗೊಳಿಸುವುದು.
* 51(ಎ) ಐ: ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.
* 51(ಎ) ಜೆ: ರಾಷ್ಟ್ರವು ನಿರಂತರವಾಗಿ ಸಾಧನೆಯ ಶಿಖರ ತಲುಪಲು ವೈಯಕ್ತಿಕ ಮತ್ತು ಸಾಮಾಜಿಕವಾಗಿ ಎಲ್ಲಾ ಕಾರ್ಯಕ್ಷೇತ್ರದಲ್ಲಿ ಶ್ರಮಿಸುವುದು.
* 51(ಎ) ಕೆ: ಮಕ್ಕಳ ತಂದೆ ತಾಯಿಗಳು ಅಥವಾ ಪೋಷಕರು 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣದ ಅವಕಾಶ ಕಲ್ಪಿಸಬೇಕು. ಈ ಹನ್ನೊಂದನೆ ಕರ್ತವ್ಯವನ್ನು 2002ರಲ್ಲಿ 86ನೇಯ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ.

### ಸಂವಿಧಾನ ಭಾಗ – 5

### ಕಾರ್ಯಾಂಗ (ಅನುಚ್ಛೇದ 52 ರಿಂದ 78)

* ಸಂವಿಧಾನದ ಅನ್ವಯ ರಾಜ್ಯಸಭೆಗೆ ಗರಿಷ್ಠ ಸದಸ್ಯರು 250
* ಸಂವಿಧಾನದ ಅನ್ವಯ ಲೋಕಸಭೆಗೆ ಗರಿಷ್ಠ ಸದಸ್ಯರು 552
* ರಾಜ್ಯಸಭೆಗೆ ಆಯ್ಕೆಯಾಗುವ ಸದಸ್ಯರು 238 ಮತ್ತು ನಾಮ ನಿರ್ದೇಶನ ಆಗುವ ಸದಸ್ಯರು 12
* ಲೋಕಸಭೆಗೆ ಆಯ್ಕೆಯಾಗುವ, ಎಲ್ಲಾ ರಾಜ್ಯಗಳ ಗರಿಷ್ಟ ಸದಸ್ಯರ ಸಂಖ್ಯೆ 530

* ಕೇ.ಪ್ರ.ದಿಂದ ಲೋಕಸಭೆಗೆ ಆಯ್ಕೆಯಾಗುವ ಗರಿಷ್ಠ ಸದಸ್ಯರ ಸಂಖ್ಯೆ 20
* ಲೋಕಸಭೆಗೆ ಆಯ್ಕೆಯಾಗುವ ಆಂಗ್ಲೋ ಇಂಡಿಯನ್ ಸದಸ್ಯರು 2
* ಪ್ರಸ್ತುತ ಲೋಕಸಭಾ ಸದಸ್ಯರ ಸಂಖ್ಯೆ 545 (543+2)

**ಭಾರತದ ರಾಷ್ಟ್ರಪತಿ: ಅನುಚ್ಛೇದ 52**

ಅನುಚ್ಛೇದ 53:

ದೇಶದ ಅಧಿಪತಿಯಾದ ರಾಷ್ಟ್ರಪತಿ ಒಕ್ಕೂಟದ ಕಾರ್ಯಾಂಗದ ಅಧಿಕಾರವನ್ನು ನೇರವಾಗಿ ಅಥವಾ ಪರೋಕ್ಷವಾಗಿ ಚಲಾಯಿಸುವರು.

ರಾಷ್ಟ್ರಪತಿ ಪದವಿ ಪ್ರಮಾಣ: ಅನುಚ್ಛೇದ 60ರ ಪ್ರಕಾರ ರಾಷ್ಟ್ರಪತಿ ಅವರನ್ನು 'ಸಂವಿಧಾನ ಮತ್ತು ಕಾನೂನುಗಳನ್ನು ಪರೀಕ್ಷಿಸಲು, ಸಂರಕ್ಷಿಸಲು ಮತ್ತು ಪ್ರತಿರಕ್ಷಿಸಲು ಮತ್ತು ಭಾರತ ಜನತೆಯ ಸೇವೆ ಮತ್ತು ಯೋಗಕ್ಷೇಮ ಸಾಧನೆಯಲ್ಲಿ ನಿರತರಾಗಿರಲು' ಒತ್ತಾಯ ಮಾಡುತ್ತದೆ.

**ಅನುಚ್ಛೇದ 54:**

ರಾಷ್ಟ್ರಪತಿಯು ಚುನಾಯಿತ ಗಣದ ಮೂಲಕ ಚುನಾಯಿತರಾಗುತ್ತಾರೆ.

ಚುನಾಯಿತ ಗಣ, ಇದು ಈ ಕೆಳಗಿನವರನ್ನು ಒಳಗೊಂಡಿರುತ್ತದೆ.

* ಲೋಕಸಭೆ ಮತ್ತು ರಾಜ್ಯಸಭೆಯ ಎಲ್ಲಾ ಚುನಾಯಿತ ಸದಸ್ಯರು
* ಎಲ್ಲಾ ರಾಜ್ಯಗಳ ವಿಧಾನ ಸಭೆಗಳ ಚುನಾಯಿತ ಸದಸ್ಯರು
* ದೆಹಲಿ ಮತ್ತು ಪಾಂಡಿಚೇರಿ ವಿಧಾನ ಸಭೆಗಳ ಚುನಾಯಿತ ಸದಸ್ಯರು

**ಅನುಚ್ಛೇದ 55:**

ರಾಷ್ಟ್ರಪತಿಯವರ ಚುನಾವಣೆಯ ರೀತಿ –

* ಎಲ್ಲಾ ರಾಜ್ಯಗಳಿಗೂ ಪ್ರಮಾಣುಸಾರ ಪ್ರಾತಿನಿಧ್ಯ ಪ್ರಮಾಣದಲ್ಲಿ ಏಕರೂಪತೆ ಕೊಡುವ ತತ್ವವನ್ನು ಅನುಸರಿಸಲಾಗುತ್ತದೆ.
* ಇತ್ತೀಚಿನ (ಅಂದರೆ ಪ್ರಸ್ತುತ 1971ರ) ಜನಗಣತಿಯ ಆಧಾರದ ಮೇಲೆ ಮತಗಳ ಮೌಲ್ಯದ ನಿರ್ಧಾರ ಮಾಡಲಾಗುತ್ತದೆ.

ಅ) ಓರ್ವ ವಿಧಾನ ಸಭಾ ಚುನಾಯಿತ ಸದಸ್ಯನ ಮತದ ಮೌಲ್ಯ = ರಾಜ್ಯದ ಒಟ್ಟು ಜನಸಂಖ್ಯೆ / ವಿಧಾನ ಸಭೆಯ ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ * 1 / 1000.

ಹೀಗೆ ಒಂದು ಸಾವಿರ ಗುಣಕಗಳನ್ನು ತೆಗೆದುಕೊಂಡು ನಂತರ ಶೇಷವು 500ಕ್ಕಿಂತ ಹೆಚ್ಚಿದ್ದರೆ ಅದನ್ನು ಒಂದು ಮರವೆಂದು ಪರಿಗಣಿಸಲಾಗುತ್ತದೆ.

ಆ) ಓರ್ವ ಲೋಕಸಭಾ ಚುನಾಯಿತ ಸದಸ್ಯನ ಮತದ ಮೌಲ್ಯ = ಎಲ್ಲಾ ವಿಧಾನ ಸಭಾ ಸದಸ್ಯರಿಗೆ ಮಂಜೂರಾದ ಒಟ್ಟು ಮತಗಳ ಸಂಖ್ಯೆ / ಚುನಾಯಿತ ಸಂಸತ್ ಸದಸ್ಯರ ಒಟ್ಟು ಸಂಖ್ಯೆ * 1 / 1000.

ಮತದಾರರು ತಮ್ಮ ಮತ ಚಲಾಯಿಸುವಾಗ ರಾಷ್ಟ್ರಪತಿ ಪದವಿಯ ವಿವಿಧ ಅಭ್ಯರ್ಥಿಗಳಿಗೆ ತಮ್ಮ ಪ್ರಾಶಸ್ತ್ಯಗಳನ್ನು ಸೂಚಿಸಬೇಕು.

ಪಾಲು=ಚಲಾಯಿಸಲಾದ ಮತಗಳ ಸಂಖ್ಯೆ + 1

ಚುನಾಯಿಸಬೇಕಾದ ಅಭ್ಯರ್ಥಿಗಳ ಸಂಖ್ಯೆ + 1

**ಅನುಚ್ಛೇದ 56:**

ರಾಷ್ಟ್ರಪತಿಯವರ ಪದವಿಯ ಅವಧಿಯು ಪದವಿಯನ್ನು ವಹಿಸಿಕೊಂಡ ದಿನಾಂಕದಿಂದ 5 ವರ್ಷಗಳವರೆಗೆ ಆ ಪದವಿ ಧಾರಣೆ ಮಾಡುವರು. ಮರು ಚುನಾವಣೆಗೂ ಅವರು ಅರ್ಹರಾಗಿರುತ್ತಾರೆ. ಒಬ್ಬ ವ್ಯಕ್ತಿ ಎಷ್ಟು ಬಾರಿ

ರಾಷ್ಟ್ರಪತಿಯಾಗಬಹುದೆಂಬ ಬಗೆಗೆ ಯಾವುದೇ ನಿರ್ಬಂಧವಿಲ್ಲ. ರಾಷ್ಟ್ರಪತಿಯವರು ತಮ್ಮ ರಾಜೀನಾಮೆ ಪತ್ರವನ್ನು ಉಪರಾಷ್ಟ್ರಪತಿಗೆ ನೀಡುತ್ತಾರೆ.

**ಅನುಚ್ಛೇದ 57:**

ಮರುಚುನಾವಣೆಗೆ ಅರ್ಹತೆ.

**ಅನುಚ್ಛೇದ 58:**

ರಾಷ್ಟ್ರಪತಿಯಾಗಿ ಚುನಾಯಿಸಲ್ಪಡುವ ಅರ್ಹತೆಗಳು–

* ಭಾರತದ ನಾಗರೀಕನಾಗಿರಬೇಕು
* ಅವರಿಗೆ 35 ವರ್ಷ ವಯಸ್ಸು ಪೂರ್ತಿಯಾಗಿರಬೇಕು
* ಲೋಕಸಭೆಯ ಸದಸ್ಯರಾಗಿ ಚುನಾಯಿತರಾಗಲು ಅರ್ಹರಾಗಿರಬೇಕು
* ಕೇಂದ್ರ ಅಥವಾ ರಾಜ್ಯ ಸರ್ಕಾರದಡಿಯಲ್ಲಿನ ಯಾವುದೇ ಲಾಭದಾಯಕ ಪದವಿಯನ್ನು ಧಾರಣೆ ಮಾಡಿರಬಾರದು.

**ಅನುಚ್ಛೇದ 60:**

ರಾಷ್ಟ್ರಪತಿಯಿಂದ ಪ್ರಮಾಣ ವಚನ. ಭಾರತದ ಮುಖ್ಯ ನ್ಯಾಯಾಧೀಶರಿಂದ ಅಥವಾ ಅವರ ಅನುಪಸ್ಥಿತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಜೇಷ್ಠತಮ ನ್ಯಾಯಾಧೀಶರಿಂದ ಬೋಧಿಸಲ್ಪಡುತ್ತಾರೆ.

**ಅನುಚ್ಛೇದ 61:**

ರಾಷ್ಟ್ರಪತಿ ಪದಚ್ಯುತಿ–ಮಹಾಭಿಯೋಗ. ಮಹಾಭಿಯೋಗ ಪ್ರಕ್ರಿಯೆಯನ್ನು ಯಾವುದೇ ಸದನದಲ್ಲಿ ಪ್ರಾರಂಭಿಸಬಹುದು.

ಮಹಾಭಿಯೋಗ ಪ್ರಕ್ರಿಯೆಯನ್ನು ರಾಷ್ಟ್ರಪತಿಯವರ ಮೇಲೆ ಆಪಾದನೆಗಳನ್ನು ಮಾಡಿದ ಆರೋಪ ಪಟ್ಟಿಗೆ ಸದನದ ಕನಿಷ್ಠ 1/4 ಸದಸ್ಯರು ಸಹಿ ಮಾಡಬೇಕು. ರಾಷ್ಟ್ರಪತಿಗೆ 14 ದಿನಗಳ ಲಿಖಿತ ನೋಟಿಸ್ಸನ್ನು ಕೊಡಬೇಕು. ಆ ಸದನದ ಸದ್ಯರ 2/3 ಭಾಗ ಬಹುಮತದಿಂದ ದೋಷಾರೋಪಣೆಯ ನಿರ್ಣಯ ಅಂಗೀಕೃತವಾದ ನಂತರ ಅದನ್ನು ದೋಷಾರೋಪಣೆಗಳ ವಿಚಾರಣೆಗಾಗಿ ಇನ್ನೊಂದು ಸದನಕ್ಕೆ ಕಳುಹಿಸಲಾಗುತ್ತದೆ.

ಅಂತಹ ತನಿಖೆಯಲ್ಲಿ ಹಾಜರಾಗುವ ಮತ್ತು ಪ್ರತಿನಿಧಿಸಲ್ಪಡುವ ಹಕ್ಕು ರಾಷ್ಟ್ರಪತಿಗೆ ಇರುತ್ತದೆ. ಇನ್ನೊಂದು ಸದನವೂ 2/3 ಸದಸ್ಯರಿಂದ ನಿರ್ಣಯ ಸಮರ್ಥಿಸಿ, ಅಂಗೀಕರಿಸಿದರೆ ಆಗ ಹಾಗೆ ನಿರ್ಣಯ ಅಂಗೀಕೃತವಾದ ದಿನಾಂಕದಿಂದ ರಾಷ್ಟ್ರಪತಿಯನ್ನು ತೆಗೆದು ಹಾಕಲ್ಪಡುತ್ತಾರೆ. ರಾಷ್ಟ್ರಪತಿ ಚುನಾವಣೆಯನ್ನು ಪದವಿಯ ಅವಧಿ ಮುಗಿಯುವ ಮುನ್ನವೇ ಪದವಿಯನ್ನು ಭರ್ತಿ ಮಾಡಬೇಕು.

ರಾಜೀನಾಮೆ ಅಥವಾ ತೆಗೆದುಹಾಕುವಿಕೆ ಅಥವಾ ಅನ್ಯಥಾ ಉಂಟಾಗುವ ಖಾಲಿ ಪದವಿಯನ್ನು ಭರ್ತಿ ಮಾಡಲು ಚುನಾವಣೆಯನ್ನು ಹಾಗೆ ಖಾಲಿಯಾದ ಆರು ತಿಂಗಳ ಅವಧಿಯೊಳಗೆ ಮುಗಿಸಬೇಕು.

ರಾಷ್ಟ್ರಪತಿ ಚುನಾವಣೆ ಬಗೆಗೆ ಉಂಟಾಗುವ ವಿವಾದಗಳನ್ನು ಸುಪ್ರೀಂಕೋರ್ಟ್ ನ್ಯಾಯಾಲಯದಲ್ಲಿ ಮಾತ್ರ ವಿಚಾರಣೆ ನಡೆಸಲಾಗುತ್ತದೆ. ಮತ್ತು ಆ ತೀರ್ಮಾನವೇ ಅಂತಿಮವಾಗಿರುತ್ತದೆ.

## ರಾಷ್ಟ್ರಪತಿಯವರ ಅಧಿಕಾರ ಮತ್ತು ಕಾರ್ಯಗಳು

**ಕಾರ್ಯಾಂಗೀಯ ಅಧಿಕಾರಗಳು:**

* ಅನುಚ್ಛೇದ 77(1): ಭಾರತ ಸರ್ಕಾರದ ಕಾರ್ಯಾಂಗದ ಎಲ್ಲಾ ಕಾರ್ಯಗಳು ರಾಷ್ಟ್ರಪತಿಯವರ ಹೆಸರಿನಲ್ಲಿ ನಡೆಯುವಂತೆ ವ್ಯಕ್ತವಾಗುತ್ತದೆ.
* ಪ್ರಧಾನಮಂತ್ರಿ ಮತ್ತು ಕೇಂದ್ರಮಂತ್ರಿ ಮಂಡಲದ ನೇಮಕ.
* ಅಟಾರ್ನಿ ಜನರಲ್ ಅವರ ನೇಮಕ ಮತ್ತು ಅವರ ಸಂಭಾವಣೆ ನಿರ್ಧಾರ.

* ಸಿಎಜಿ ಮತ್ತು ಮುಖ್ಯ ಚುನಾವಣಾ ಆಯುಕ್ತರನ್ನು, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು, ರಾಜ್ಯಗಳ ರಾಜ್ಯಪಾಲರನ್ನು, ವಿತ್ತ ಆಯೋಗದ ಅಧ್ಯಕ್ಷರನ್ನು ಸದಸ್ಯರನ್ನು ನೇಮಕ ಮಾಡುತ್ತಾರೆ.
* ಸರ್ಕಾರದ ವ್ಯವಹಾರಗಳ ಆಡಳಿತಕ್ಕೆ ಮತ್ತು ಕಾನೂನು ರಚನೆಯ ಪ್ರಸ್ತಾವಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪ್ರಧಾನಮಂತ್ರಿಗಳಿಂದ ರಾಷ್ಟ್ರಪತಿಯವರು ಪಡೆಯಬಹುದು. (ಅನುಚ್ಛೇದ 78ಎ).
* ಒಬ್ಬ ಮಂತ್ರಿಯ ತೀರ್ಮಾನ ಕೈಗೊಂಡಿರುವ ವಿಷಯಗಳನ್ನು ಮಂತ್ರಿಮಂಡಲದ ಪರ್ಯಾಲೋಚನೆಗೆ ಒಪ್ಪಿಸಬೇಕೆಂದು (ಅನುಚ್ಛೇದ 78ಸಿ) ಪ್ರಧಾನಮಂತ್ರಿಯವರಿಗೆ ರಾಷ್ಟ್ರಪತಿಯವರು ಅಗತ್ಯಪಡಿಸಬಹುದು.
* ದೇಶದಲ್ಲಿನ ಎಸ್‌ಸಿ/ಎಸ್‌ಟಿಗಳ ಸ್ಥಿತಿಗತಿಗಳ ಬಗೆಗೆ ತನಿಖೆ ಮಾಡಲು ರಾಷ್ಟ್ರಪತಿಯವರು ಒಂದು ಆಯೋಗವನ್ನು ನೇಮಿಸಬಹುದು.
* ಕೇಂದ್ರ, ರಾಜ್ಯ ಮತ್ತು ಅಂತರ ರಾಜ್ಯ ಸಹಕಾರವನ್ನು ವರ್ಧಿಸಲು ರಾಷ್ಟ್ರಪತಿಯವರು ಒಂದು ಅಂತರ್‌ರಾಜ್ಯ ಪರಿಷತ್ತನ್ನು ನೇಮಿಸಬಹುದು.
* ಒಕ್ಕೂಟ ರಾಜ್ಯಕ್ಷೇತ್ರಗಳ ಆಡಳಿತವು ರಾಷ್ಟ್ರಪತಿಯವರಿಂದ ನೇರವಾಗಿ ನಿರ್ವಹಿಸಲ್ಪಡುತ್ತದೆ.

**ಶಾಸನೀಯ ವಿಧಾಯೀ ಅಧಿಕಾರಗಳು:**

* ಸಾಹಿತ್ಯ, ವಿಜ್ಞಾನ, ಕಲೆ ಮತ್ತು ಸಮಾಜ ಸೇವೆಗಳಲ್ಲಿ ಕ್ರೀಡೆ, ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವವನ್ನು ಪಡೆದಿರುವ 12 ಜನ ಸದಸ್ಯರನ್ನು ರಾಷ್ಟ್ರಪತಿಯವರು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡುತ್ತಾರೆ.
* ಅನುಚ್ಛೇದ 331: ಆಂಗ್ಲೋ ಇಂಡಿಯನ್ ನೇಮಕ.
* ಅನುಚ್ಛೇದ 95; ಸಂಸತ್ತಿನ ಯಾವುದೇ ಸದನವನ್ನು ಕಾಲಕಾಲಕ್ಕೆ ಸಭೆ ಸೇರುವಂತೆ ಕರೆಯಬಹುದು ಅಥವಾ ಅಧಿವೇಶನವನ್ನು ಮುಕ್ತಾಯಗೊಳಿಸಬಹುದು ಮತ್ತು ಲೋಕಸಭೆಯನ್ನು ವಿಸರ್ಜಿಸಬಹುದು.
* ಅನುಚ್ಛೇದ 86(2): ಒಂದು ಸದನ ಅಥವಾ ಜಂಟಿ ಸದನದಲ್ಲಿ ಭಾಷಣ ಮಾಡಬಹುದು.
* ಇತ್ಯರ್ಥವಾಗದೆ ಉಳಿದ ವಿಧೇಯಕಕ್ಕೆ ಸಂಬಂಧಿಸಿದಂತೆ ಸಂದೇಶ ರವಾನಿಸಬಹುದು.
* ಚುನಾವಣೆ ನಂತರದ ಮೊದಲ ಅಧಿವೇಷನ ಮತ್ತು ಪ್ರತಿ ವರ್ಷದ ಮೊದಲ ಅಧಿವೇಷನದ ಯಾವುದೇ ಸದನದಲ್ಲಿ ಭಾಷಣ ಮಾಡಬಹುದು.
* ಅನುಚ್ಛೇದ 91: ರಾಜ್ಯಸಭೆಯ ಸಭಾಪತಿ ಉಪಸಭಾಪತಿ ಹುದ್ದೆ ಖಾಲಿಯಿದ್ದಾಗ ಯಾವುದೇ ಸದಸ್ಯನ ನೇಮಕ ಮಾಡಬಹುದು.
* ಅನುಚ್ಛೇದ 95: ಲೋಕಸಭೆಯಲ್ಲಿ ಸಭಾಪತಿ / ಉಪಸಭಾಪತಿ ಹುದ್ದೆ ಖಾಲಿಯಿದ್ದಾಗ ಯಾವುದೇ ಸದಸ್ಯರ ನೇಮಕ ಮಾಡಬಹುದು.
* ಅನುಚ್ಛೇದ 103: ಸದಸ್ಯತ್ವ ಅನರ್ಹತೆಯ ಬಗೆಗೆ, ಚುನಾವಣಾ ಆಯೋಗದ ಅಭಿಪ್ರಾಯ ಪಡೆದು ತೀರ್ಮಾನಿಸುವುದು.
* ಒಂದು ವಿಧೇಯಕವು ಅವರಿಗೆ ಬಂದಾಗ:

1) ವಿಧೇಯಕಕ್ಕೆ ಅನುಮತಿ ಕೊಡಬಹುದು
2) ಅನುಮತಿ ತಡೆ ಹಿಡಿಯಬಹುದು
3) ವಿಧೇಯಕವನ್ನು ಅದು ಧನ ವಿಧೇಯಕವಲ್ಲದಿದ್ದರೆ ಸಂಸತ್ತಿನ ಪುನ: ಪರಿಶೀಲನೆಗಾಗಿ ಹಿಂದುರುಗಿಸಬಹುದು

* ಅನುಚ್ಛೇದ 123: ಸಂಸತ್ತು ಅಧಿವೇಷಣದಲ್ಲಿ ಇಲ್ಲದಿರುವಾಗ ಆಧ್ಯಾದೇಶ / ಸುಗ್ರೀವಾಜ್ಞೆಗಳನ್ನು ಹೊರಡಿಸಬಹುದು.
* ಸಿಎಜಿ ಮತ್ತು ಕೇಂದ್ರ ಲೋಕಸೇವಾ ಆಯೋಗಗಳ ಹಣಕಾಸು ಆಯೋಗಗಳ ವರದಿಗಳು ಸಂಸತ್ತಿನೆದುರಿಗೆ ಇವರ ಮೂಲಕ ಮಂಡಿಸಲ್ಪಡುತ್ತದೆ.

**ಹಣಕಾಸಿನ ಅಧಿಕಾರಗಳು:**

* ಅನುಚ್ಛೇದ 117: ರಾಷ್ಟ್ರಪತಿಯ ಪೂರ್ವ ಶಿಫಾರಸ್ಸಿನಿಂದ ಮಾತ್ರ ಹಣಕಾಸು ವಿಧೇಯಕ ಮಂಡಿಸಬಹುದು.
* ಅನುಚ್ಛೇದ 112: ವಾರ್ಷಿಕ ಹಣಕಾಸು ಪತ್ರ ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಉಭಯ ಸದನಗಳಲ್ಲಿ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.
* ಅನುಚ್ಛೇದ 113(3): ರಾಷ್ಟ್ರಪತಿಯವರ ಶಿಫಾರಸ್ಸಿನ ಹೊರತು, ಅನುದಾನಕ್ಕೆ ಸಂಬಂಧಿಸಿದ ಯಾವ ಬೇಡಿಕೆಯನ್ನು ಮಂಡಿಸುವಂತಿಲ್ಲ.
* ಅನುಚ್ಛೇದ 267: ಸಾದಿಲ್ವಾರು ನಿಧಿಯಿಂದ ಮುಂಗಡವನ್ನು ಒದಗಿಸಬಹುದು.
* ಅನುಚ್ಛೇದ 148: ಸಿಎಜಿ ನೇಮಕ ಮಾಡುವರು.
* ಅನುಚ್ಛೇದ 280: ಹಣಕಾಸು ಆಯೋಗದ ರಚನೆ ಮಾಡುವರು.

**ನ್ಯಾಯಿಕ ಅಧಿಕಾರಗಳು:**

* ಅನುಚ್ಛೇದ 124(2): ಎಸ್‌ಸಿ/ಹೆಚ್‌ಸಿ ನ ಮುಖ್ಯ ನ್ಯಾಯಮೂರ್ತಿ ಮತ್ತು ಇತರ ನ್ಯಾಯಮೂರ್ತಿಗಳ ನೇಮಕ ಮಾಡುವರು.
* ಅನುಚ್ಛೇದ 126: ಸಿಜೆಐ ಪದವಿ ಖಾಲಿಯಾದಾಗ ಕಾರ್ಯಾರ್ಥ ಮುಖ್ಯ ನ್ಯಾಯಾಧೀಶರ ನೇಮಕ ಮಾಡುವರು.
* ಅನುಚ್ಛೇದ 143: ಕಾನೂನಿನ ಅಥವಾ ಸಂಗತಿಯ ಬಗೆಗೆ ಪ್ರಶ್ನೆಗಳ ಬಗೆಗೆ ಸುಪ್ರೀಂಕೋರ್ಟ್ ಸಲಹೆ ಪಡೆಯಬಹುದು. ಆದರೆ ಅದಕ್ಕೆ ಬದ್ದರಾಗಬೇಕಿಲ್ಲ.
* ಅನುಚ್ಛೇದ 72 ಕ್ಷಮಾದಾನ.
* ಸೇನಾ ನ್ಯಾಯಾಲಯ ವಿಧಿಸಿದ ಎಲ್ಲಾ ದಂಡನೆಯ ಶಿಕ್ಷೆ ಪ್ರಕರಣಗಳಲ್ಲಿ ಕ್ಷಮಾದಾನ ನೀಡಬಹುದು.
* ಶಿಕ್ಷೆಯು ಮರಣದಂಡನೆಯ ಶಿಕ್ಷೆಯಾಗಿರುವ ಎಲ್ಲಾ ಪ್ರಕರಣಗಳಲ್ಲಿ ಕ್ಷಮಾದಾನ ನೀಡಬಹುದು.
* ಯಾವುದೇ ಕಾನೂನಿನ ವಿರುದ್ದ ಅಪರಾಧಕ್ಕಾಗಿ ವಿಧಿಸಿರುವ ದಂಡನೆಯ ಅಥವಾ ಶಿಕ್ಷೆಯ ಎಲ್ಲಾ ಪ್ರಕರಣಗಳಲ್ಲಿ.

**ರಾಜತಾಂತ್ರಿಕ ಅಧಿಕಾರಗಳು:**

* ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕೌಲುಗಳು ಮತ್ತು ಒಡಂಬಡಿಕೆಗಳು ಭಾರತದ ರಾಷ್ಟ್ರಪತಿಯವರ ಹೆಸರಿನಲ್ಲಿ ವ್ಯವಹರಿಸಲ್ಪಡುತ್ತದೆ ಮತ್ತು ನಿರ್ಣಯಿಸಲ್ಪಡುತ್ತದೆ. ಆದಾಗ್ಯೂ ಸಂಸತ್ತಿನ ಅಂಗೀಕಾರಕ್ಕೊಳಪಡುತ್ತವೆ.
* ರಾಯಭಾರಿಗಳು ಹೈಕಮೀಶನರ್ ಮೊದಲಾದ ರಾಯಭಾರಿ ಪ್ರತಿನಿಧಿಗಳನ್ನು ರಾಷ್ಟ್ರಪತಿಯವರು ಕಳಿಸುತ್ತಾರೆ ಮತ್ತು ಬರಮಾಡಿಕೊಳ್ಳುತ್ತಾರೆ.

**ಸೇನಾ ಅಧಿಕಾರಗಳು:**

* ಇವರು ಭಾರತದ ರಕ್ಷಣಾ ಪಡೆಗಳ ಸರ್ವೋಚ್ಚ ಅಧಿಪತಿ.
* ಈ ಪದವಿಯ ಸಾಮರ್ಥ್ಯದಲ್ಲಿ ಅವರು ಭೂ, ನೌಕಾ ಮತ್ತು ವಾಯುಪಡೆಗಳ ಮುಖ್ಯ ಅಧಿಕಾರಿಗಳನ್ನು ನೇಮಿಸುತ್ತಾರೆ.
* ಸಂಸತ್ತಿನ ಅಂಗೀಕಾರದಂತೆ ರಾಷ್ಟ್ರಪತಿಯವರು ಯುದ್ದ ಘೋಷಣೆ ಮಾಡಬಹುದು ಮತ್ತು ಶಾಂತಿ ಒಪ್ಪಂದಗಳನ್ನು ನಿರ್ಣಯಿಸಬಹುದು.

**ತುರ್ತು ಅಧಿಕಾರಗಳು:**

* ರಾಷ್ಟ್ರೀಯ ತುರ್ತು ಪರಿಸ್ಥಿತಿ (ಅನುಚ್ಛೇದ 352).
* ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿ–ರಾಷ್ಟ್ರಪತಿ ಆಡಳಿತ (ಅನುಚ್ಛೇದ 356).
* ಆರ್ಥಿಕ ತುರ್ತು ಪರಿಸ್ಥಿತಿ (ಅನುಚ್ಛೇದ 360).

* ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಘೋಷಣೆಯಾದ ಸಮಯದಲ್ಲಿ ರಾಷ್ಟ್ರಪತಿಯವರ ಅಧಿಕಾರಗಳು–

– ಅನುಚ್ಛೇದ 353: ಯಾವುದೇ ರಾಜ್ಯಕ್ಕೆ ರಾಜ್ಯದ ಕಾರ್ಯಗಳನ್ನು ಯಾವ ರೀತಿ ಕಾರ್ಯಗತಗೊಳಿಸಬೇಕೆಂಬ ಬಗ್ಗೆ ನಿರ್ದೇಶನಗಳನ್ನು ನೀಡಬಹುದು.

– ಒಕ್ಕೂಟ ಮತ್ತು ರಾಜ್ಯಗಳ ನಡುವಿನ ಆರ್ಥಿಕ ಸಂಪನ್ಮೂಲಗಳ ವಿತರಣೆಯ ಮಾದರಿಯಲ್ಲಿ ಬದಲಾವಣೆ ತರಬಹುದು (ಅನುಚ್ಛೇದ 354).

– ಯುದ್ಧ ಅಥವಾ ಬಾಹ್ಯ ಆಕ್ರಮಣದ ಕಾರಣಗಳಿಂದಾಗಿ ಉದ್ಘೋಷಣೆ ಮಾಡಲ್ಪಟ್ಟಿದ್ದರೆ ಅನುಚ್ಛೇದ 19ರ 6 ಸ್ವಾತಂತ್ರ್ಯಗಳ ಹಕ್ಕುಗಳನ್ನು ಅಮಾನತ್ತಿನಲ್ಲಿಡಬಹುದು (ಅನುಚ್ಛೇದ 358).

– ರಾಷ್ಟ್ರಪತಿಯವರು ನಾಗರಿಕ ಮೂಲಭೂತ ಹಕ್ಕುಗಳನ್ನು ಜೀವ ಮತ್ತು ವ್ಯಕ್ತಿಗತ ಸ್ವಾತಂತ್ರ್ಯದ ಹಕ್ಕು (ಅನುಚ್ಛೇದ 21) ಮತ್ತು ಅಪರಾಧಗಳಿಗಾಗಿ ಆದ ಅಪರಾಧ ನಿರ್ಣಯದ ಬಗೆಗೆ ರಕ್ಷಣೆಯ ಹಕ್ಕು (ಅನುಚ್ಛೇದ 20)ಗಳ ಹೊರತಾಗಿ ಉಳಿದ ಹಕ್ಕುಗಳನ್ನು ಅಮಾನತು ಮಾಡಬಹುದು (ಅನುಚ್ಛೇದ 359).

**ಆರ್ಥಿಕ ತುರ್ತು ಪರಿಸ್ಥಿತಿಯ ಉದ್ಘೋಷಣೆಯ ವೇಳೆ ರಾಷ್ಟ್ರಪತಿಯವರ ಅಧಿಕಾರಗಳು:**

1) ಅನುಚ್ಛೇದ 360(3): ರಾಷ್ಟ್ರಪತಿಯವರು ರಾಜ್ಯಗಳಿಗೆ ಹಣಕಾಸಿನ ಔಚಿತ್ಯಕ್ಕೆ ಸಂಬಂಧಿಸಿದ ಸೂತ್ರಗಳನ್ನು ಪಾಲಿಸಲು ನಿರ್ದೇಶನ ನೀಡಬಹುದು.
2) ಅನುಚ್ಛೇದ 360(4): ಎಲ್ಲಾ ವರ್ಗಗಳ ಅಥವಾ ಯಾವುದೇ ವರ್ಗದ ವ್ಯಕ್ತಿಗಳ ವೇತನ ಮತ್ತು ಭತ್ಯೆಗಳನ್ನು ಕಡಿಮೆ ಮಾಡಲು ರಾಷ್ಟ್ರಪತಿ ನಿರ್ದೇಶನ ನೀಡಬಹುದು.
3) ರಾಜ್ಯ ವಿಧಾನ ಮಂಡಲ ಅಂಗೀಕರಿಸಿದ ಎಲ್ಲಾ ಧನ ವಿಧೇಯಕಗಳನ್ನು ಮತ್ತು ಇತರ ಹಣಕಾಸು ವಿಧೇಯಕಗಳನ್ನು ರಾಷ್ಟ್ರಪತಿಯವರು ತಮ್ಮ ಪರ್ಯಾಲೋಚನೆಗಾಗಿ ಕಾದಿರಿಸುವಂತೆ ಮಾಡಬಹುದು.
4) ಒಕ್ಕೂಟದಲ್ಲಿ ಸೇವೆ ಸಲ್ಲಿಸುತ್ತಿರುವ ಯಾವುದೇ ವರ್ಗ, ವ್ಯಕ್ತಿಗಳ, ಸುಪ್ರೀಂಕೋರ್ಟ್ / ಹೈಕೋರ್ಟ್‌ಗಳ ನ್ಯಾಯಾಧೀಶರುಗಳು ಸೇರಿದದಂತೆ ವೇತನ ಮತ್ತು ಭತ್ಯೆಗಳನ್ನು ಕಡಿಮೆ ಮಾಡಲು ನಿರ್ದೇಶನಗಳನ್ನು ಹೊರಡಿಸಬಹುದು.

**ಉಪರಾಷ್ಟ್ರಪತಿ:**

ಅನುಚ್ಛೇದ 63: ಉಪರಾಷ್ಟ್ರಪತಿ ಪದವಿಗೆ ಉಪಬಂಧ ಮಾಡಿದೆ. ಇವರು ಸಂಸತ್ತಿನ ಉಭಯ ಸದನಗಳ ಸದಸ್ಯರ ಜಂಟಿ ಅಧಿವೇಶನದಲ್ಲಿ ಪ್ರಮಾಣುಸಾರ ಪ್ರಾತಿನಿಧ್ಯ ಪದ್ಧತಿಗನುಸಾರವಾಗಿ ಏಕ ವರ್ಗಾವಣೀಯ ಮತದ ಆಧಾರದ ಮೇಲೆ ಚುನಾಯಿಸಲ್ಪಡುತ್ತಾರೆ ಮತ್ತು ಚುನಾವಣೆಯ ಮತದಾನವು ರಹಸ್ಯ ಮತದಾನದ ಮೂಲಕ ನಡೆಯುತ್ತದೆ.

ಸಂವಿಧಾನದ ಅನುಚ್ಛೇದ 64ರ ಪ್ರಕಾರ ಅವರು ತಮ್ಮ ಪದವಿ ನಿಮಿತ್ತವಾಗಿ ರಾಜ್ಯಸಭೆಯ ಸಭಾಪತಿಯಾಗಿರುತ್ತಾರೆ.

ಅನುಚ್ಛೇದ 65 ಪ್ರಕಾರ ರಾಷ್ಟ್ರಪತಿಯ ಮರಣ, ರಾಜೀನಾಮೆ, ತೆಗೆದುಹಾಕುವಿಕೆ ಮುಂತಾದ ಕಾರಣಗಳ ಸಂದರ್ಭದಲ್ಲಿ ರಾಷ್ಟ್ರಪತಿಯವರ ಅಧಿಕಾರವನ್ನು ಉಪರಾಷ್ಟ್ರಪತಿಯವರಿಗೆ ಕೊಡುತ್ತದೆ.

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಯವರ ಪದವಿಯ ಸಾಮ್ಯತೆಗಳು ಈ ಕೆಳಗಿನಂತಿವೆ.

1) ಚುನಾಯಿತರಾಗಲು ಅರ್ಹತೆಗಳು
2) ಚುನಾವಣೆ ಪ್ರಮಾಣುಸಾರ ಪ್ರಾತಿನಿದ್ಯ ಪದ್ಧತಿ
3) ಪದವಿಯ ಅವಧಿ 5 ವರ್ಷ
4) ಚುನಾವಣೆ ಎಷ್ಟು ಸಲ ಬೇಕಾದರೂ ಆಗಬಹುದು.

## ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಯವರ ಪದವಿಯ ಅಸಾಮ್ಯತೆಗಳು

**ರಾಷ್ಟ್ರಪತಿ:**

* ಲೋಕಸಭೆಗೆ ಚುನಾಯಿತರಾಗಲು ಅರ್ಹತೆ ಹೊಂದಿರಬೇಕು.
* ಸಂಸತ್ತಿನ ಉಭಯ ಸದನಗಳ ಮತ್ತು ರಾಜ್ಯಗಳ ವಿಧಾನ ಸಭೆಗಳ ಚುನಾಯಿತ ಸದಸ್ಯರನ್ನೊಳಗೊಂಡ ಚುನಾಯಕ ಗಣದ ಮೂಲಕ ಮತ್ತು ದೆಹಲಿ ಮತ್ತು ಪಾಂಡಚೇರಿ ವಿಧಾನ ಸಭೆಯ ಚುನಾಯಿತ ಸದಸ್ಯರು.
* ಉಪರಾಷ್ಟ್ರಪತಿಗೆ ತಮ್ಮ ರಾಜೀನಾಮೆ ಪತ್ರವನ್ನು ಕೊಡುತ್ತಾರೆ.
* ಮಹಾಭಿಯೋಗ ಪ್ರಕ್ರಿಯೆ ಮೂಲಕ ಇವರನ್ನು ತೆಗೆದುಹಾಕಲಾಗುತ್ತದೆ.
* ಒಕ್ಕೂಟದ ಕಾರ್ಯಾಂಗ ಅಧಿಕಾರಗಳು ರಾಷ್ಟ್ರಪತಿಯವರಲ್ಲಿ ನಿಹಿತವಾಗಿದ್ದು, ಒಕ್ಕೂಟದ ಮಂತ್ರಿಮಂಡಲದ ಸಲಹೆಗೆ ಅನುಗುಣವಾಗಿ ರಾಷ್ಟ್ರಪಿಯವರಿಂದ ಚಲಾಯಿಸಲ್ಪಡುತ್ತವೆ.

**ಉಪರಾಷ್ಟ್ರಪತಿ:**

* ರಾಜ್ಯಸಭೆ ಚುನಾಯಿತರಾಗಲು ಅರ್ಹತೆ ಹೊಂದಿರಬೇಕು.
* ಸಂಸತ್ತಿನ ಎರಡು ಸದನಗಳ ಸದಸ್ಯರುಗಳನ್ನು ಒಳಗೊಂಡ ಚುನಾಯಕಗಣದ ಮೂಲಕ ಚುನಾಯಿಸಲಾಗುತ್ತದೆ.
* ರಾಷ್ಟ್ರಪತಿಗೆ ತಮ್ಮ ರಾಜೀನಾಮೆ ಪತ್ರವನ್ನು ಕೊಡುತ್ತಾರೆ.
* ರಾಜ್ಯಸಭೆಯ ಬಹುಮತ ಸದಸ್ಯರಿಂದ ಅಂಗೀಕೃತವಾದ ನಿರ್ಣಯದ ಮೂಲಕ ಲೋಕಸಭೆಯ ಒಪ್ಪಿಗೆ ಪಡೆದು ತೆಗೆದು ಹಾಕುತ್ತಾರೆ.
* ಉಪರಾಷ್ಟ್ರಪತಿಯವರಾಗಿ ಚಲಾಯಿಸಲ್ಪಡಬೇಕಾದ ಯಾವ ವಿಶೇಷ ಪ್ರಕಾರ್ಯಗಳೂ ಇಲ್ಲ. ಆದರೂ ರಾಷ್ಟ್ರಪತಿಯವರ ಚುನಾವಣೆ ಪದವಿ ಸ್ವೀಕಾರ ಮಾಡುವ ತನಕ ರಾಷ್ಟ್ರಪತಿಯವರ ಕಾರ್ಯಗಳನ್ನು ನಿರ್ವಹಿಸುತ್ತಾರೆ. ತಮ್ಮ ಪದವಿ ನಿಮಿತ್ತವಾಗಿ ರಾಜ್ಯಸಭೆಯ ಸಭಾಪತಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

**ಪ್ರಧಾನ ಮಂತ್ರಿಗಳು:**

ಅನುಚ್ಛೇದ 74(ಸಿ) ರಾಷ್ಟ್ರಪತಿಯವರಿಗೆ ನೆರವು ಮತ್ತು ಸಲಹೆಯನ್ನು ನೀಡಲು ಪ್ರಧಾನಮಂತ್ರಿಯ ನೇತೃತ್ವದಲ್ಲಿ ಒಂದು ಮಂತ್ರಿಮಂಡಲವು ಇರತಕ್ಕದ್ದು ಮತ್ತು ರಾಷ್ಟ್ರಪತಿ ಮಂತ್ರಿಮಂಡಲದ ಸಲಹೆ ಪಡೆಯಬಹುದು.

ಲಾರ್ಡ್ ಮಾರ್ಲೆ ಪ್ರಧಾನಮಂತ್ರಿಯನ್ನು ಸಮಾನರಲ್ಲಿ ಮೊದಲಿಗ ಎಂದು ಬಣ್ಣಿಸುತ್ತಾರೆ.

* ಅನುಚ್ಛೇದ 75(1): ರಾಷ್ಟ್ರಪತಿಯಿಂದ ಪ್ರಧಾನ ಮಂತ್ರಿ ನೇಮಕ ಮತ್ತು ಪ್ರಧಾನ ಮಂತ್ರಿ ಸಲಹೆ ಮೇರೆಗೆ ಮಂತ್ರಿ ಮಂಡಲವನ್ನು ರಾಷ್ಟ್ರಪತಿಯವರ ಇಷ್ಟ ಪರ್ಯಂತ ಪದವಿಧಾರಣೆ ಮಾಡತಕ್ಕದ್ದು.
* ಅನುಚ್ಛೇದ 75(3): ಮಂತ್ರಿಮಂಡಲವು ಲೋಕಸಭೆಗೆ ಸಾಮೂಹಿಕವಾಗಿ ಜವಾಬ್ದಾರಿಯಾಗಿರತಕ್ಕದ್ದು.
* ಅನುಚ್ಛೇದ 75(5): ಯಾವುದೇ ಮಂತ್ರಿ ಸತತ 6 ತಿಂಗಳವರೆಗೆ ಯಾವುದೇ ಸದನದ ಸದಸ್ಯತ್ವ ಪಡೆಯದೇ ಇದ್ದರೆ ಅಂತಹ ಸಮಯದಲ್ಲಿ ಮಂತ್ರಿ ಪದವಿ ಕಳೆದುಕೊಳ್ಳುತ್ತಾರೆ.

**ಪ್ರಧಾನ ಮಂತ್ರಿ ಸಂವಿಧಾನಿಕ ಸ್ಥಾನಮಾನ:**

1) ಇವರು ನೈಜ ಕಾರ್ಯಾಂಗ ಪ್ರಾಧಿಕಾರಿಯಾಗಿರುತ್ತಾರೆ.

2) ರಾಷ್ಟ್ರಪತಿಯವರು ರಾಷ್ಟ್ರದ ಮುಖ್ಯಸ್ಥರಾಗಿರುತ್ತಾರೆ. ಪ್ರಧಾನಮಂತ್ರಿಯವರು ಸರ್ಕಾರದ ಮುಖ್ಯಸ್ಥರಾಗಿರುತ್ತಾರೆ.

**ಪ್ರಧಾನಮಂತ್ರಿಯವರ ಅಧಿಕಾರ ಮತ್ತು ಕಾರ್ಯಗಳು:**

**ಅನುಚ್ಛೇದ 78 ರಾಷ್ಟ್ರಪತಿಗೆ ಸಂಬಂಧಿಸಿದಂತೆ ಪ್ರಧಾನಮಂತ್ರಿಯವರ ಕಾರ್ಯಗಳು:**

* ಪ್ರಧಾನಿ, ರಾಷ್ಟ್ರಪತಿ ಮತ್ತು ಮಂತ್ರಿಗಳ ನಡುವೆ ಪ್ರಧಾನ ಸಂಪರ್ಕ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತಾರೆ.
* ಆಡಳಿತ, ಕಾನೂನು ರಚನೆಯ ಕುರಿತಂತೆ ಮಂತ್ರಿಮಂಡಲದ ನಿರ್ಣಯಗಳನ್ನು ರಾಷ್ಟ್ರಪತಿಗೆ ತಿಳಿಸುವರು.

* ಆಡಳಿತ, ಕಾನೂನಿನ ಕುರಿತಂತೆ ಮಾಹಿತಿಯನ್ನು ರಾಷ್ಟ್ರಪತಿಯವರು ಕೋರಿದಾಗ ಒದಗಿಸುವುದು.
* ಓರ್ವ ಮಂತ್ರಿಯ ತೀರ್ಮಾನದ ಪರ್ಯಾಯಲೋಚಿಸುವಂತಾದರೆ, ಹಾಗೆ ಮಾಡುವುದು.

**ಸಂಸತ್ತಿಗೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿಯವರ ಕಾರ್ಯಗಳು:**

1) ಪ್ರಧಾನಿಯು ಲೋಕಸಭೆಯ ನಾಯಕರು.
2) ಲೋಕಸಭೆಯನ್ನು ವಿಸರ್ಜಿಸಲು ರಾಷ್ಟ್ರಪತಿಯವರಿಗೆ ಯಾವುದೇ ವೇಳೆಯಲ್ಲಿ ಶಿಫಾರಸ್ಸು ಮಾಡುವುದು.
3) ಸರ್ಕಾರದ ಮುಖ್ಯಸ್ಥರಾಗಿ ಅವರು ಸರ್ಕಾರದ ನೀತಿಗಳನ್ನು ಸದನದ ಸಭಾಂಗಣದಲ್ಲಿ ಪ್ರಕಟಿಸುತ್ತಾರೆ.

**ಮಂತ್ರಿಮಂಡಲಕ್ಕೆ ಸಂಬಂಧಿಸಿದಂತೆ ಪ್ರಧಾನಮಂತ್ರಿಯವರ ಕಾರ್ಯಗಳು:**

1) ಮಂತ್ರಿಗಳನ್ನು ನೇಮಿಸಲು ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡುತ್ತಾರೆ.
2) ಖಾತೆಗಳನ್ನು ಹಂಚಿಕೆ ಮತ್ತು ಬದಲಾವಣೆ ಮಾಡುತ್ತಾರೆ.
3) ಅವರು ಯಾವುದೇ ಮಂತ್ರಿಯ ರಾಜಿನಾಮೆ ಕೇಳಬಹುದು ಅಥವಾ ಅವರನ್ನು ವಜಾಮಾಡಬೇಕೆಂದು ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡಬಹುದು.
4) ಮಂತ್ರಿಮಂಡಲದ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ ಮತ್ತು ಅದರ ತೀರ್ಮಾನಗಳ ಮೇಲೆ ಪ್ರಭಾವ ಬೀರುತ್ತಾರೆ.
5) ಎಲ್ಲಾ ಮಂತ್ರಿಗಳ ಚಟುವಟಿಕೆಗಳಿಗೆ ಮಾರ್ಗದರ್ಶನ ಮಾಡಿ, ನಿರ್ದೇಶಿಸಿ, ನಿಯಂತ್ರಿಸುತ್ತಾರೆ ಮತ್ತು ಸಮನ್ವಯಗೊಳಿಸುತ್ತಾರೆ.
6) ತನ್ನ ಪದವಿಗೆ ರಾಜೀನಾಮೆ ನೀಡುವ ಮೂಲಕ ಅವರು ಸರ್ಕಾರದ ಪತನಕ್ಕೆ ದಾರಿ ಮಾಡಬಹುದು.

**ಪ್ರಧಾನಿಯವರ ವಿವಿಧ ಕಾರ್ಯಗಳು:**

1) ಇವರು ನೀತಿ ಆಯೋಗ, ಎನ್‌ಡಿಸಿ ರಾಷ್ಟ್ರೀಯ ಭಾವೈಕ್ಯತಾ ಪರಿಷತ್ತು ಮತ್ತು ಅಂತರರಾಜ್ಯ ಮಂಡಳಿಗಳ ಅಧ್ಯಕ್ಷರಾಗಿರುತ್ತಾರೆ.
2) ದೇಶ, ವಿದೇಶಿ ನೀತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.
3) ಒಕ್ಕೂಟ ಸರ್ಕಾರದ ಮುಖ್ಯ ವಕ್ತಾರರಾಗಿರುತ್ತಾರೆ.
4) ತುರ್ತು ಪರಿಸ್ಥಿತಿಗಳಲ್ಲಿ ರಾಜಕೀಯ ಮಟ್ಟದ ಸಂಧಿಗ್ದ ಸಮಯದ ಮುಖ್ಯ ವ್ಯವಸ್ಥಾಪಕರಾಗಿರುತ್ತಾರೆ.
5) ರಾಷ್ಟ್ರ ನಾಯಕರಾಗಿ ಅವರು ವಿಭಿನ್ನ ರಆಜ್ಯಗಳ ವಿಭಿನ್ನ ಜನ ಸಮುದಾಯಗಳನ್ನು ಭೇಟಿಯಾಗಿ ಅವರ ಸಮಸ್ಯೆಗಳ ಬಗೆಗೆ ಅಹವಾಲುಗಳನ್ನು ಸ್ವೀಕರಿಸುತ್ತಾರೆ.
6) ಪ್ರಧಾನಿಯು ಆಡಳಿತ ಪಕ್ಷದ ನಾಯಕರು.
7) ಪ್ರಧಾನಿಯು ದೇಶದ ರಾಜಕೀಯ ಮುಖ್ಯಸ್ಥರು.

## ಮಂತ್ರಿಮಂಡಲ:

ಸಾಮಾನ್ಯವಾಗಿ ಮಂತ್ರಿಗಳಲ್ಲಿ ಮೂರು ವಿಧ ಇರುತ್ತಾರೆ.

1) ಸಂಪುಟ ಸಚಿವರು: ಇವರು ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಿ, ಪ್ರಮುಖ ನಿರ್ಣಯ ತೆಗೆದುಕೊಳ್ಳಲು ನೆರವಾಗುತ್ತಾರೆ.
2) ರಾಜ್ಯ ಸಚಿವರು: ಇವರು ಪ್ರತ್ಯೇಕ ರಾಜ್ಯ ಖಾತೆಗಳನ್ನು ಹೊಂದಿರುತ್ತಾರೆ. ಮತ್ತು ಸಂಪುಟ ಮಂತ್ರಿಗಳಿಗೆ ನೆರವಾಗುತ್ತಾರೆ.
3) ಉಪ ಮಂತ್ರಿಗಳು: ಇವರು ಸಂಪುಟ ಮಂತ್ರಿಗಳಿಗೆ ನೆರವಾಗುತ್ತಾರೆ.

## ಮಂತ್ರಿಮಂಡಲದ ಹೊಣೆಗಾರಿಕೆ:

* ಅನುಚ್ಛೇದ 75(2)ರ ಪ್ರಕಾರ, ಮಂತ್ರಿಗಳ ವೈಯಕ್ತಿಕ ಹೊಣೆಗಾರಿಕೆಯು, ಕಾರ್ಯಾಂಗದ ಮುಖ್ಯಸ್ಥರಾದ ರಾಷ್ಟ್ರಪತಿಯವರಿಗೆ ಇರುತ್ತದೆ.

* ಅನುಚ್ಛೇದ 75(3)ರ ಪ್ರಕಾರ, ಮಂತ್ರಿಗಳು ಯಾವುದೇ ಸದನದ ಸದಸ್ಯರಾಗಿದ್ದರು. ಮಂತ್ರಿಮಂಡಲ ಸಾಮೂಹಿಕವಾಗಿ ಹೊಣೆಗಾರಿಕೆಯು ಲೋಕಸಭೆಗೆ ಇರುತ್ತದೆ.

**ಭಾರತದ ಸಂಸತ್ತು: (ಅನುಚ್ಛೇದ 79ರಿಂದ ಅನುಚ್ಛೇದ 122)**

ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆ, ಈ ಮೂರು ಸೇರಿ ಸಂಸತ್ತಿನ ರಚನೆಯಾಗಿದೆ. ಸಂಸತ್ತಿನ ಸಮಾನಾರ್ಥಕ ಇಂಗ್ಲೀಷ್ ಪದ ಪಾರ್ಲಿಮೆಂಟ್ ಎಂಬುದು, ಮಾತನಾಡು ಎಂಬ ಅರ್ಥದ 'ಪಾರ್ಲೇ' ಎಂಬ ಫ್ರೆಂಚ್ ಪದದಿಂದ ಹುಟ್ಟಿದೆ. ರಾಜ್ಯಸಭೆ, ರಾಜ್ಯಗಳ ಪರಿಷತ್ತು ಆದರೆ, ಲೋಕಸಭೆಯು ಜನಗಳ ಸದನ (ಕೆಳಮನೆ).

**ಸಂಸತ್ತಿನ ಅಧಿವೇಶನಗಳು:**

ಲೋಕಸಭೆ ವರ್ಷದಲ್ಲಿ ಕೊನೆಪಕ್ಷ ಎರಡು ಬಾರಿಯಾದರೂ ಸೇರಲೇಬೇಕು ಮತ್ತು ಎರಡು ಅನುಕ್ರಮ ಅಧಿವೇಶನಗಳ ನಡುವಿನ ಅಂತರ ಆರು ತಿಂಗಳಿಗಿಂತ ಹೆಚ್ಚಿರಬಾರದು.

ಪ್ರತಿವರ್ಷವು ಸಂಸತ್ತಿಗೆ 3 ಅಧಿವೇಶನಗಳಿರುತ್ತವೆ.

1ನೇ ಅಧಿವೇಶನ – ಫೆಬ್ರವರಿಯಿಂದ ಮೇ – ಬಜೆಟ್ ಅಧಿವೇಶನ

2ನೇ ಅಧಿವೇಶನ – ಜುಲೈಯಿಂದ ಸೆಪ್ಟೆಂಬರ್ – ಮಳೆಗಾಲದ ಅಧಿವೇಶನ

3ನೇ ಅಧಿವೇಶನ – ನವೆಂಬರ್‌ನಿಂದ ಡಿಸೆಂಬರ್ – ಚಳಿಗಾಲದ ಅಧಿವೇಶನ

ರಾಜ್ಯಸಭೆಯ ಬಜೆಟ್ ಅಧಿವೇಶನವನ್ನು ಎರಡಾಗಿ ವಿಭಾಗಿಸಲಾಗಿದೆ. ಆದ್ದರಿಂದ ರಾಜ್ಯಸಭೆಗೆ ವರ್ಷದಲ್ಲಿ ನಾಲ್ಕು ಅಧಿವೇಶನಗಳಿರುತ್ತವೆ.

* ಅನುಚ್ಛೇದ 81: ಲೋಕಸಭೆಯ ರಚನೆಯ ಕುರಿತು ಹೇಳುತ್ತದೆ. ಇದರ ಅನ್ವಯ 552ಕ್ಕೆ ಮೀರದಂತೆ ಸದಸ್ಯರನ್ನು ಹೊಂದಿರಬೇಕು. ಅದರಲ್ಲಿ ಎಲ್ಲಾ ರಾಜ್ಯಗಳಿಂದ 530 ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ 20ಕ್ಕೆ ಮೀರದಂತೆ ಸದಸ್ಯರು ಚುನಾಯಿತರಾಗುತ್ತಾರೆ.
* ಅನುಚ್ಛೇದ 331: ಇಬ್ಬರು ಆಂಗ್ಲೋ ಇಂಡಿಯನ್ ಸದಸ್ಯರು ರಾಷ್ಟ್ರಪತಿಯಿಂದ ನೇಮಕರಾಗುತ್ತಾರೆ. ಪ್ರಸ್ತುತ ರಾಜ್ಯಗಳಿಂದ 530 ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ 13 ಸದಸ್ಯರು ಚುನಾಯಿತರಾಗುತ್ತಿದ್ದು, ಆಂಗ್ಲೋ ಇಮಡಿಯನ್ ಸದಸ್ಯರನ್ನು ಒಳಗೊಂಡಂತೆ ಒಟ್ಟು 545 ಸದಸ್ಯರು ಇದ್ದಾರೆ.

ಈ ಸದಸ್ಯರ ಸಂಖ್ಯೆಯನ್ನು 1971ರ ಜನಗಣತಿ ಆಧರಿಸಿ ನಿರ್ಣಯಿಸಲಾಗಿದೆ. ಒಟ್ಟು ಸದಸ್ಯರಲ್ಲಿ 74 ಎಸ್‌ಸಿ ಮತ್ತು 41 ಎಸ್‌ಟಿ ಕ್ಷೇತ್ರಗಳಿಗೆ ಮೀಸಲು ಇರಿಸಲಾಗಿದೆ.

**ಲೋಕಸಭೆಯ ಅವಧಿ:**

5 ವರ್ಷಗಳು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಒಂದು ಬಾರಿಗೆ ಒಂದು ವರ್ಷಕ್ಕೆ ಮೀರದಂತೆ ಅವಧಿ ವಿಸ್ತರಿಸಬಹುದು.

**ಹಂಗಾಮಿ ಅಧ್ಯಕ್ಷ:**

ಪ್ರತಿ ಐದು ವರ್ಷಕ್ಕೆ ಅಥವಾ ಸಾರ್ವತ್ರಿಕ ಚುನಾವಣೆಯ ನಂತರ, ಲೋಕಸಭೆಯ ಅಧಿವೇಶನವನ್ನು ಮೊದಲ ಬಾರಿಗೆ ಸೇರಿದಾಗ, ಅತ್ಯಂತ ಹಿರಿಯ ಸದಸ್ಯರನ್ನು ರಾಷ್ಟ್ರಪತಿಯು ಲೋಕಸಭೆಯ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸುತ್ತಾರೆ. ಇವರು ಹೊಸದಾಗಿ ಚುನಾಯಿತರಾದ ಸದಸ್ಯರಿಗೆ ಪ್ರಮಾಣ ವಚನ ಭೋದಿಸುತ್ತಾರೆ.

ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಸದನದ ಕಲಾಪಗಳನ್ನು ನೋಡಿಕೊಳ್ಳಲು, ಉಪ ಸಭಾಪತಿ ಇರುತ್ತಾರೆ. ಇವರು ಸಾಮಾನ್ಯವಾಗಿ ವಿರೋಧ ಪಕ್ಷದಿಂದ ಆಯ್ಕೆ ಆಗಿರುತ್ತಾರೆ.

**ಸಭಾಪತಿಯ ಅವಧಿ:**

ಇವರು ಒಮ್ಮೆ ಚುನಾಯಿತರಾದ ಮೇಲೆ, ಅವರ ಚುನಾವಣೆಯ ದಿನದಿಂದ ಲೋಕಸಭೆಯ ವಿಸರ್ಜನೆಯ ನಂತರದ ಸದನದ ಮೊದಲ ಸಭೆಗೆ ನಿಕಟಪೂರ್ವ ಸಮಯದವರೆಗೂ, ಅಧ್ಯಕ್ಷರೆಂದು ಪರಿಗಣಿಸಲ್ಪಡುತ್ತಾರೆ.

ಸಭಾಪತಿ, ಉಪಸಭಾಪತಿಗೆ ಮತ್ತು ಉಪಸಭಾಪತಿಯು ಸಭಾಪತಿಯವರಿಗೆ ತಾವು ಸಹಿ ಮಾಡಿದ ಪತ್ರ ನೀಡುವ ಮೂಲಕ, ತಮ್ಮ ಪದವಿಗೆ ರಾಜೀನಾಮೆ ಕೊಡಬಹುದು. ಸಭಾಪತಿಯನ್ನು ಲೋಕಸಭೆಯ ಸದಸ್ಯರ ಬಹುಮತದ ನಿರ್ಣಯದ ಮೂಲಕ ಪದವಿಯಿಂದ ತೆಗೆದುಹಾಕಬಹುದು.

ಲೋಕಸಭಾಧ್ಯಕ್ಷರ ಅಧಿಕಾರಗಳು ಮತ್ತು ಕಾರ್ಯಗಳು:

* ಅವರು ಸದನದ ಕಲಾಪವನ್ನು ನಿಯಂತ್ರಿಸುತ್ತಾರೆ.
* ಅಗತ್ಯವಿದ್ದಾಗ ತಮ್ಮ ನಿರ್ಣಾಯಕ ಮತ ಚಲಾಯಿಸುತ್ತಾರೆ.
* ಠರಾವುಗಳಿಗೆ, ಮಸೂದೆಗಳ ಮೇಲಿನ ಚರ್ಚೆಗೆ ಅವಕಾಶ ಕೊಡುತ್ತಾರೆ.
* ಸದನದ ನಿರ್ಣಯಗಳನ್ನು ರಾಷ್ಟ್ರಪತಿಗೆ ಕಳುಹಿಸುವಾಗ, ತಾವು ಸಹಿ ಮಾಡುತ್ತಾರೆ.
* ಲೋಕಸಭೆಯ ಸದಸ್ಯರ ಹಕ್ಕುಗಳ ಮತ್ತು ವಿಶೇಷ ಸ್ಥಾನಮಾನಗಳ ಅಭಿರಕ್ಷಕರಾಗಿರುತ್ತಾರೆ.
* ಯಾವುದೇ ಮಸೂದೆ, ಹಣಕಾಸು ಮಸೂದೆಯೋ, ಅಲ್ಲವೋ ಎಂಬುದನ್ನು ಅವರೇ ಅಂತಿಮವಾಗಿ ತೀರ್ಮಾನಿಸುತ್ತಾರೆ.
* ಜಂಟಿ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಾರೆ.
* ಸದಸ್ಯರು ಕಳುಹಿಸಿದ ರಾಜೀನಾಮೆಗಳನ್ನು ಸ್ವೀಕರಿಸುತ್ತಾರೆ.
* ಸಂಸದೀಯ ಸಮಿತಿಗಳು ಇವರಿಂದ ರಚಿಸಲ್ಪಡುತ್ತವೆ ಮತ್ತು ಅವುಗಳಿಗೆ ಅಧ್ಯಕ್ಷರನ್ನು ನೇಮಿಸುತ್ತಾರೆ.
* ಸದನವು ಸುಸೂತ್ರವಾಗಿ ನಡೆಯಲು ಯಾವುದೇ ಕ್ರಮ ಕೈಗೊಳ್ಳಲು ಅವರು ಅಧಿಕಾರ ಹೊಂದಿದ್ದಾರೆ.

ಅನುಚ್ಛೇದ 80: ರಾಜ್ಯಸಭೆಯ ರಚನೆಯ ಕುರಿತು ಹೇಳುತ್ತದೆ. ವಿಧಿ 80ರ ಅನ್ವಯ ರಾಷ್ಟ್ರಪತಿಯು ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಮಾಜ ಸೇವೆಗಳಲ್ಲಿ ಸೇವೆ ಸಲ್ಲಿಸಿದ 12 ಜನರನ್ನು ನಾಮ ನಿರ್ದೇಶನ ಮಾಡುತ್ತಾರೆ.

ರಾಜ್ಯಗಳಿಂದ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 250ಕ್ಕೆ ಮೀರದ ಸದಸ್ಯರು ಆಯ್ಕೆ ಆಗುತ್ತಾರೆ.

**ರಾಜ್ಯಸಭೆಯ ಅವಧಿ:**

ಇದೊಂದು ಶಾಶ್ವತ ಸದನ. ಇಲ್ಲಿನ ಸದಸ್ಯರ ಅವಧಿ 6 ವರ್ಷಗಳು ಮತ್ತು 1/3 ಭಾಗ ಸದಸ್ಯರು ಪ್ರತಿ 2 ವರ್ಷಕ್ಕೊಮ್ಮೆ ನಿವೃತ್ತರಾಗುತ್ತಾರೆ.

ರಾಜ್ಯಸಭೆಯಲ್ಲಿ ಹಣಕಾಸು ಮಸೂದೆಯನ್ನು ಮಂಡನೆ ಮಾಡುವಂತಿಲ್ಲ. ಮತ್ತು ವಾರ್ಷಿಕ ಆಯವ್ಯಯವನ್ನು ಚರ್ಚಿಸುವ ಅಧಿಕಾರವಿದ್ದರೂ, ಅನುದಾನ ಬೇಡಿಕೆಗಳ ಮೇಲೆ ಮತ ಚಲಾಯಿಸುವ ಅಧಿಕಾರವಿಲ್ಲ.

**ಸಂಸತ್ತಿನ ಕಾರ್ಯಗಳು ಮತ್ತು ಅಧಿಕಾರಗಳು:**

* ವೇತನ: ಸಂಸತ್ ಸದಸ್ಯರ (ವಿಧಿ 106), ಸಿಎಜಿ, ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳ ನ್ಯಾಯಮೂರ್ತಿಗಳ ಯುಪಿಎಸ್‌ಸಿ ಅಧ್ಯಕ್ಷರ ಮತ್ತು ಸದಸ್ಯರ ವೇತನಗಳನ್ನು ಸಂಸತ್ ನಿರ್ಧರಿಸುತ್ತದೆ.
* ಸಂಸತ್ತಿನ ವ್ಯವಹರಣೆಗಳ ಬಗ್ಗೆ, ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.
* 169ನೇ ವಿಧಿ ಪ್ರಕಾರ ರಾಜ್ಯಗಳ ವಿಧಾನ ಪರಿಷತ್ತುಗಳನ್ನು ರದ್ದತಿ ಅಥವಾ ನಿರ್ಮಾಣ ಮಾಡಬಹುದು.
* ಅನುಚ್ಛೇದ 245–246 ರ ಪ್ರಕಾರ, ಒಕ್ಕೂಟ ಪಟ್ಟಿಯಲ್ಲಿನ (100 ವಿಷಯಗಳು) ಮತ್ತು ಸಮವರ್ತಿ ಪಟ್ಟಿಯಲ್ಲಿನ (52 ವಿಷಯಗಳು) ವಿಷಯಗಳ ಮೇಲೆ ಮತ್ತು 248ನೇ ವಿಧಿ ಅನ್ವಯ ಉಳಿಕೆ ವಿಷಯಗಳ ಮೇಲೆ ಕಾನೂನು ಮಾಡುವ ಅಧಿಕಾರ ಸಂಸತ್ತಿಗಿದೆ.
* ಸಂಸತ್ತು ಪ್ರಶ್ನೋತ್ತರ, ಸೂಚನೆ, ಚರ್ಚೆ, ವಿವಿಧ ಸಮಿತಿಗಳ ಮೂಲಕ ಕಾರ್ಯಾಂಗವನ್ನು ನಿಯಂತ್ರಿಸುತ್ತದೆ.
* ಪ್ರಶ್ನೋತ್ತರ ಕಾಲ
* ತಾರಾಂಕಿತ ಪ್ರಶ್ನೆಗಳು
* ಅತಾರಾಂಕಿತ ಪ್ರಶ್ನೆಗಳು

* ಸೂಚನೆಗಳು

  – ಗಮನ ಸೆಳೆಯುವ ಸೂಚನೆ

  – ನಿಲುವಳಿ ಸೂಚನೆ

  – ನಿಂದನಾ ಸೂಚನೆ

* ಚರ್ಚೆಗಳು

* ವಿವಿಧ ಸಮಿತಿಗಳು (ಅಂದಾಜು ಸಮಿತಿ, ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಇತ್ಯಾದಿ)

* ಸಂಸತ್ತು ಒಕ್ಕೂಟದ ಹಣಕಾಸಿನ ನಿಯಂತ್ರಣವನ್ನು ಮಾಡುತ್ತದೆ. ಕಾರ್ಯಾಂಗದ ಹಣಕಾಸಿನ ಬೇಡಿಕೆಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರ ಸಂಸತ್ತಿಗಿದೆ.

* ನ್ಯಾಯಿಕ ಅಧಿಕಾರಗಳು.

  – ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆ ಹೆಚ್ಚಿಸುವ ಅಧಿಕಾರ ಹೊಂದಿದೆ.

  – ನ್ಯಾಯಾಧೀಶರನ್ನು ಪದಚ್ಯುತಿ ಮಾಡುವ ಅಧಿಕಾರ ಹೊಂದಿದೆ (124(4)).

  – 138ನೇ ವಿಧಿ ಪ್ರಕಾರ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವ ಅಧಿಕಾರ ಹೊಂದಿದೆ.

  – ಅನುಚ್ಛೇದ 32ರಲ್ಲಿನ ಹೊರತಾದ ಬೇರಾವುದೇ ಉದ್ದೇಶಕ್ಕಾಗಿಯೂ ರಿಟ್ ಹೊರಡಿಸುವ ಅಧಿಕಾರವನ್ನು ಸಂಸತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಬಹುದು.

  – ಅನುಚ್ಛೇದ 140ರ ಪ್ರಕಾರ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಲು ಪೂರಕವಾದ ಅಧಿಕಾರಗಳನ್ನು ಪ್ರಧಾನ ಮಾಡಲು ಉಪಬಂಧಿಸಬಹುದು.

  – ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯ ಸ್ಥಾಪಿಸಬಹುದು (ವಿಧಿ 231).

  – ಅಗತ್ಯವೆನಿಸಿದರೆ ಹೆಚ್ಚುವರಿ ನ್ಯಾಯಾಲಯಗಳ ಸ್ಥಾಪನೆ ಮಾಡಬಹುದು. ಉದಾ: ರಾಷ್ಟ್ರೀಯ ಹಸಿರು ಮಂಡಳಿ.

  – ಆಡಳಿತ ನ್ಯಾಯಾಧೀಕರಣಗಳನ್ನು ಸಂಸತ್ತು ಸ್ಥಾಪನೆ ಮಾಡಬಹುದು. ಉದಾ: ಸಿಎಟಿ ಮತ್ತು ಕೆಎಟಿ.

* 302ನೇ ವಿಧಿಯ ಪ್ರಕಾರ ಸಾರ್ವಜನಿಕ ಹಿತದೃಷ್ಟಿಯಿಂದ ವ್ಯಾಪಾರ ಮತ್ತು ಸಂಪರ್ಕ ಸ್ವಾತಂತ್ರ್ಯದ ಮೇಲೆ ಅಗತ್ಯವಾದ ಷರತ್ತುಗಳನ್ನು ಸಂಸತ್ತು ಕಾನೂನಿನ ಮೂಲಕ ವಿಧಿಸಬಹುದು.

* 312ನೇ ವಿಧಿಯ ಪ್ರಕಾರ ಅಖಿಲ ಭಾರತ ಸೇವೆಗಳನ್ನು ಮತ್ತು ಅಖಿಲ ಭಾರತ ನ್ಯಾಯಿಕ ಸೇವೆಗಳನ್ನು ಸಂಸತ್ತು ಸೃಷ್ಟಿಸಬಹುದು.

* ಸಂಸತ್ತಿನ ತುರ್ತು ಪರಿಸ್ಥಿತಿಯ ಸಮಯದ ಅಧಿಕಾರಗಳು:

  – ವಿಧಿ 352(4) ಅನ್ವಯ ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿ 2 ತಿಂಗಳಲ್ಲಿ ಎರಡೂ ಸದನಗಳ ಅಂಗೀಕಾರವನ್ನು ಪಡೆಯಬೇಕು.

  – ವಿಧಿ 356(3)ರ ಅನ್ವಯ ರಾಜ್ಯ ತುರ್ತು ಪರಿಸ್ಥಿತಿಯಲ್ಲಿ 2 ಸದನಗಳ ಅಂಗೀಕಾರವನ್ನು ಎರಡು ತಿಂಗಳ ಒಳಗೆ ಪಡೆಯಬೇಕು.

  – 360(3) ಆರ್ಥಿಕ ತುರ್ತು ಪರಿಸ್ಥಿತಿಗೂ ಸಂಸತ್ತಿನ ಎರಡು ಸದನಗಳ ಅಂಗೀಕಾರ ಅಗತ್ಯ.

* ವಿಧಿ 368ರ ಅಡಿಯಲ್ಲಿ ತಿದ್ದುಪಡಿಯ ಅಧಿಕಾರಗಳು:

  ಸಂಸತ್ತು ತನ್ನ ಸಂವಿಧಾನಾತ್ಮಕ ಅಧಿಕಾರವನ್ನು ಉಪಯೋಗಿಸಿ ಸಂವಿಧಾನದ ಯಾವುದೇ ಉಪಬಂಧವನ್ನು ಅದಕ್ಕೆ ಸೇರಿಸುವ ಮೂಲಕ ವ್ಯತ್ಯಸ್ಥಗೊಳಿಸುವ ಮೂಲಕ ಅಥವಾ ನಿರಸನಗೊಳಿಸುವ ಮೂಲಕ ಅನುಚ್ಛೇದ 368ರಲ್ಲಿ ವಿಧಿಸಿರುವ ಪ್ರಕ್ರಿಯೆಗೆ ಅನುಸಾರವಾಗಿ ತಿದ್ದುಪಡಿ ಮಾಡಬಹುದು.

# ಸಂಸದೀಯ ಸಮಿತಿಗಳು

**ಸಾರ್ವಜನಿಕ ಲೆಕ್ಕ ಪತ್ರ ಸಮಿತಿ:**

* ಸಮಿತಿ ರಚನೆ 1921ರಲ್ಲಿ.
* ಸದಸ್ಯರ ಸಂಖ್ಯೆ 22. ಲೋಕಸಭೆಯಿಂದ 15 ಮತ್ತು ರಾಜ್ಯಸಭೆಯಿಂದ 7 ಜನ ಆಯ್ಕೆಯಾಗುತ್ತಾರೆ.
* ಸದಸ್ಯರು ಸದನಗಳ ಏಕಮತಾಂತರ ವರ್ಗಾವಣೆಯ ರೀಜುತಿಯಲ್ಲಿ ಅನುಪಾತ ಪ್ರತಿನಿಧಿತ್ವ ತತ್ವದ ಆಧಾರದ ಮೇಲೆ ಚುನಾಯಿಸಲ್ಪಡುತ್ತಾರೆ.
* ಎಲ್ಲ ಸದಸ್ಯರಿಗೆ ಸಮಾನ ಅವಕಾಶಗಳಿರುತ್ತವೆ.
* ಸದಸ್ಯರ ಅಧಿಕಾರ ಅವಧಿ ಒಂದು ವರ್ಷ ಅಥವಾ ಹೊಸ ಸಮಿತಿ ರಚನೆಯಾಗುವವರೆಗೆ.
* ಮಂತ್ರಿಗಳು ಸದಸ್ಯರಾಗುವಂತಿಲ್ಲ.
* ಈ 22 ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಸಭಾಪತಿ ಆಯ್ಕೆ ಮಾಡುತ್ತಾರೆ.
* 1966–67ರಿಂದ ಆಯೋಗದ ಅಧ್ಯಕ್ಷರನ್ನು ವಿರೋಧ ಪಕ್ಷದಿಂದ ಆರಿಸಲಾಗುವುದು.

**ಸಮಿತಿಯ ಕಾರ್ಯಗಳು:**

* ಭಾರತ ಕಂಟ್ರೋಲರ್ ಆಡಿಟರ್ ಜನರಲ್ ಅವರ ವಾರ್ಷಿಕ ಲೆಕ್ಕದ ವರದಿಯನ್ನು ಪರಿಶೀಲನೆ ಮತ್ತು ನಂತರ ವರದಿಯನ್ನು ರಾಷ್ಟ್ರಪತಿ ಸಂಸತ್ತಿನ ಮುಂದಿರಿಸುವರು.
* ರಾಜ್ಯದ ವ್ಯಾಪಾರ ಮತ್ತು ತಯಾರಿಕೆ ಘಟಕದ ಲೆಕ್ಕದ ಹೇಳಿಕೆ ಮತ್ತು ಆಯವ್ಯಯ ಪಟ್ಟಿ ಲಾಭ ನಷ್ಟ ಲೆಕ್ಕದ ಹೇಳಿಕೆಗಳನ್ನು ಪರಿಶೀಲಿಸುವುದು.
* ಭಾರತ ಕಂಟ್ರೋಲರ್ ಆಡಿಟರ್ ಜನರಲ್ ಈ ಸಭೆಯಲ್ಲಿ ಭಾಗವಹಿಸಿ ಸಹಾಯ ಮಾಡುತ್ತಾರೆ.

ಪ್ರಸ್ತುತ ಅಧ್ಯಕ್ಷರು ಕೆ.ವಿ. ಥಾಮಸ್.

**ಅಂದಾಜು ಸಮಿತಿ:**

* 1950ರಲ್ಲಿ ಹಣಕಾಸು ಮಂತ್ರಿಯಾಗಿದ್ದ ಜಾನ್ ಮಥಾಯಿಯವರ ಶಿಫಾರಸ್ಸಿನ ಮೇಲೆ 1950ರಲ್ಲಿ ರಚನೆ.
* ಮೊದಲು 25 ಜನ ಇದ್ದ ಸದಸ್ಯರ ಸಂಖ್ಯೆಯನ್ನು 1956ರಲ್ಲಿ 30ಕ್ಕೆ ಏರಿಸಲಾಯಿತು.
* ಎಲ್ಲಾ 30 ಜನ ಸದಸ್ಯರು ಲೋಕಸಭೆಯವರೇ ಆಗಿರುತ್ತಾರೆ.
* ಅವಧಿ ಒಂದು ವರ್ಷ ಅಥವಾ ಸಭಾಪತಿ ನಿರ್ಧರಿಸಿದ ಅವಧಿ ಅಥವಾ ಹೊಸ ಸಮಿತಿ ನೇಮಕವಾಗುವವರೆಗೆ.
* ಚುನಾವಣೆ ಏಕ ವರ್ಗಾಯಿತ ಮತದ ರೀತಿಯಲ್ಲಿ ಅನುಪಾತ ಪ್ರತಿನಿಧಿತ್ವದ ಆಧಾರದ ಮೇಲೆ.
* ಮಂತ್ರಿಗಳು ಸದಸ್ಯರಾಗುವಂತಿಲ್ಲ.
* ಸಭಾಪತಿಯಿಂದ ಸದಸ್ಯರಲ್ಲಿ ಒಬ್ಬರು ಅಧ್ಯಕ್ಷರಾಗಿ ನೇಮಕ.

**ಕಾರ್ಯಗಳು:**

* ಆಯವ್ಯಯದಲ್ಲಿ ಸೇರಿರುವ ಅಂದಾಜನ್ನು ಪರಿಶೀಲಿಸುವುದು.
* ಅಂದಾಜು ಮಾಡಿದ ಲೆಕ್ಕಕ್ಕೆ ಅನುಗುಣವಾಗಿ ಇರುವ ನೀತಿಯ ಅನುಸಾರ ಸಂಸ್ಥೆಯ ಅಭಿವೃದ್ಧಿ ಸಮರ್ಥತೆ ಮತ್ತು ಆಡಳಿತ ಸುಧಾರಣೆಗಳ ಬಗ್ಗೆ ವರದಿ ಸಲ್ಲಿಸುವುದು.
* ಆಡಳಿತದಲ್ಲಿ ಸಮರ್ಥತೆ ಮತು ಮಿತವ್ಯಯವನ್ನು ತರಲು ಬೇಕಾದ ನೀತಿಯನ್ನು ಸಲಹೆ ನೀಡುವುದು.
* ಅಂದಾಜಿನಲ್ಲಿ ಹೇಳಿರುವ ನೀತಿಯ ಪರಿಮಿತಿಯಲ್ಲಿ ಹಣವನ್ನು ತೊಡಗಿಸಲಾಗಿದೆಯೇ ಎನ್ನುವುದನ್ನು ಪರಿಶೀಲಿಸುವುದು.
* ಸಂಸತ್ತಿಗೆ ಸಲ್ಲಿಸುವ ಅಂದಾಜು ಯಾವ ವಿನ್ಯಾದಲ್ಲಿರಬೇಕು ಎನ್ನುವುದನ್ನು ಸಲಹೆ ನೀಡುವುದು.

**ಸಾರ್ವಜನಿಕ ಉದ್ಯಮಿಗಳ ಸಮಿತಿ:**

* ಕೃಷ್ಣಮೆನನ್ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ 1964ರಲ್ಲಿ ಈ ಸಮಿತಿಯನ್ನು ರಚಿಸಲಾಯಿತು.
* 15 ಸದಸ್ಯರು ಲೋಕಸಭೆಯಿಂದ 10 ರಾಜ್ಯಸಭೆಯಿಂದ 5 ಜನ ಆಯ್ಕೆ ಆಗುತ್ತಿದ್ದರು. ಆದರೆ 1974ರಲ್ಲಿ ಸದಸ್ಯರ ಸಂಖ್ಯೆಯನ್ನು 22ಕ್ಕೆ ಏರಿಸಲಾಯಿತು. ಲೋಕಸಭೆಯಿಂದ 15 ರಾಜ್ಯಸಭೆಯಿಂದ 7.

**ಕಾರ್ಯಗಳು:**

1) ಸಾರ್ವಜನಿಕ ಉದ್ಯಮಗಳ ವರದಿ ಮತ್ತು ಲೆಕ್ಕ ಪರಿಶೀಲನೆ.
2) ಸಾರ್ವಜನಿಕ ಉದ್ಯಮಗಳ ಕಾರ್ಯಗಳ ಮೇಲೆ ಭಾರತದ ನಿಯಂತ್ರಣ ಮತ್ತು ಮಹಾಲೆಕ್ಕ ಪರಿಶೋಧಕರ ವರದಿ ಪರಿಶೀಲನೆ. ಆದರೆ ಈ ಕೆಳಗಿನ ಯಾವುದನ್ನು ಸಮಿತಿ ತನಿಖೆ ಹಾಗೂ ಪರೀಕ್ಷೆ ನಡೆಸುವ ಹಾಗಿಲ್ಲ.

* ಸಾರ್ವಜನಿಕ ಕಾರ್ಯಗಳ ವ್ಯವಹಾರಿಕ ಮತ್ತು ವಾಣಿಜ್ಯ ಕಾರ್ಯಗಳನ್ನು ಹೊರತುಪಡಿಸಿದ ಎಲ್ಲಾ ಪ್ರಮುಖ ಸರ್ಕಾರಿ ನೀತಿ.
* ದಿನನಿತ್ಯದ ಆಡಳಿತ.
* ಯಾವುದೇ ವಿಶೇಷ ಕಾಯಿದೆಯ ಅಡಿಯಲ್ಲಿ ಒಂದು ನಿರ್ದಿಷ್ಟ ಸಾರ್ವಜನಿಕ ಉದ್ದಿಮೆ ಸ್ಥಾಪಿಸಿದಲ್ಲಿ, ಅದೇ ವಿಶೇಷ ಕಾಯ್ದೆಯ ಅನುಸಾರ ಸ್ಥಾಪಿಸಿದ ವಿಧಾನದ ವಿಷಯ.

**ಅಧೀನ ಶಾಸನದ ಮೇಲಿನ ಸಮಿತಿ:**

* ಇದನ್ನು ಪ್ರತಿನಿಯೋಜಿತ ಶಾಸನ ಸಮಿತಿಯೆಂದು ಕರೆಯುವರು.
* ರಚನೆ: 1953, ಸದಸ್ಯರು: 15

ಸಂವಿಧಾನದಿಂದ ಲೋಕಸಭೆಗೆ ನಿಯೋಜಿಸಲ್ಪಟ್ಟ ಅಥವಾ ಸಂಸತ್ತಿನಿಂದ ಕಾಯಾಂಗಕ್ಕೆ ವಹಿಸಲ್ಪಟ್ಟ ನೀತಿಗಳು, ಬೈಲಾಗಳು, ಕಟ್ಟುಪಾಡುಗಳು, ಸರಿಯಾಗಿ ಕಾರ್ಯರೂಪಕ್ಕೆ ತರಲ್ಪಟ್ಟಿವೆಯೇ ಎಂದು ಲೋಕಸಭೆಯ ವರದಿಯನ್ನು ನೋಡಿ ಸಮಿತಿಯು ಪರಿಶೀಲಿಸುತ್ತದೆ.

**ವಿಭಾಗೀಯ ಸ್ಥಿರ ಸಮಿತಿಗಳು:**

1993ರಲ್ಲಿ 17 ವಿಭಾಗೀಯ ಸ್ಥಿರ ಸಮಿತಿಗಳನ್ನು ಸಂಸತ್ತು ರಚಿಸಿತು.

* ಕಾರ್ಯಾಂಗದ ಮೇಲೆ ನಿಯಂತ್ರಣ ತರಲು ಅದರಲ್ಲೂ ಹಣಕಾಸು ನಿಯಂತ್ರಣ ತರಲು ಸ್ಥಾಪನೆ.
* ಕೇಂದ್ರದ ಎಲ್ಲಾ ಮಂತ್ರಾಲಯಗಳು ಹಾಗೂ ವಿಭಾಗಗಳನ್ನು ಈ ಸಮಿತಿಯ ಪರಿಧಿ ವ್ಯಾಪಿಸುತ್ತದೆ.
* ಪ್ರತಿ ಸಮಿತಿ 45 ಸದಸ್ಯರನ್ನು (ಲೋಕಸಭೆ 30 ರಾಜ್ಯಸಭೆ 15) ಹೊಂದಿರುತ್ತದೆ.
* ಆಯೋಗಕ್ಕೆ ಒಂದು ವರ್ಷ ಅವಧಿ.
  – 11 ಸಮಿತಿಗಳ ಅಧ್ಯಕ್ಷರನ್ನು ಸಭಾಪತಿ ಆಯ್ಕೆ ಮಾಡುವರು.
  – 6 ಸಮಿತಿಗಳ ಅಧ್ಯಕ್ಷರನ್ನು ರಾಜ್ಯಸಭೆ ಅಧ್ಯಕ್ಷರು ಮಾಡುತ್ತಾರೆ.

ಈ ಸಮಿತಿಯಲ್ಲಿ ಎಲ್ಲಾ ಪಕ್ಷಗಳು ಪ್ರಮಾಣಬದ್ಧವಾಗಿ ಪ್ರತಿನಿಧಿತ್ವ ಹೊಂದಿರುತ್ತದೆ.

**ನೈತಿಕ ಸಮಿತಿ:**

ಲಾಲ್ ಕೃಷ್ಣ ಅಡ್ವಾನಿ ಮತ್ತು ಮುರಳಿ ಮನೋಹರ ಜೋಷಿ ಇದರ ಸದಸ್ಯರಾಗಿದ್ದಾರೆ. ಇದನ್ನು 2014ರಲ್ಲಿ ರಚಿಸಲಾಗಿದೆ. ಸಂಸತ್ ಸದಸ್ಯರಲ್ಲಿ ನೈತಿಕತೆಯನ್ನು ಹೆಚ್ಚಿಸಲು ಇದರ ರಚನೆಯಾಗಿದೆ.

**ಮಹಿಳಾ ಸಮಿತಿ:**

ಲೋಕಸಭೆ 30 ರಾಜ್ಯಸಭೆಯಿಂದ 20 ಮಹಿಳೆಯರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

**ವ್ಯವಹಾರ ಸಲಹಾ ಸಮಿತಿ:**

* ಸಂಸತ್ತಿನ ಪ್ರತಿಯೊಂದು ಸದನದಲ್ಲಿಯೂ ವ್ಯವಹಾರ ಸಲಹಾ ಸಮಿತಿ ಇರಬೇಕು.
* ಲೋಕಸಭೆಯಲ್ಲಿ ಈ ಸಮಿತಿಗೆ 15 ಸದಸ್ಯರು.
* ಸಭಾಪತಿಯವರು ತಮ್ಮ ಪದವಿ ನಿಮಿತ್ತ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಉಳಿದ ಸದಸ್ಯರನ್ನು ಸಭಾಪತಿ ನೇಮಕ ಮಾಡುತ್ತಾರೆ.
* ರಾಜ್ಯಸಭೆಯಲ್ಲಿ ಆಯೋಗಕ್ಕೆ 11 ಸದಸ್ಯರಿರುತ್ತಾರೆ.
* ರಾಜ್ಯಸಭೆಯ ಅಧ್ಯಕ್ಷ, ರಾಜ್ಯಸಭೆಯ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

**ಖಾಸಗಿ ಸದಸ್ಯರ ಮಸೂದೆ ಮತ್ತು ಗೊತ್ತುವಳಿ ಸಮಿತಿ:**

* ಇದು 15 ಜನ ಸದಸ್ಯರಿಂದ ಕೂಡಿದೆ.
* ಉಪಸಭಾಪತಿ ಇದರ ಅಧ್ಯಕ್ಷರಾಗಿರುತ್ತಾರೆ.
* ಸಮಿತಿಯ ಖಾಸಗಿ ಸದಸ್ಯರ ಮಸೂದೆ ಮತ್ತು ಗೊತ್ತುವಳಿಗೆ ಸಮಯ ನಿಗಧಿಪಡಿಸುತ್ತದೆ.
* ಒಂದು ವರ್ಷದ ಅವಧಿ.
* ಇದು ಲೋಕಸಭೆಯಲ್ಲಿ ಪರಿಚಯಿಸುವುದಕ್ಕೆ ಮುಂಚೆ ಸಂವಿಧಾನ ತಿದ್ದುಪಡಿ ಕೇಳುವ ಖಾಸಗಿ ಸದಸ್ಯರ ಮಸೂದೆ ಮತ್ತು ಗೊತ್ತುವಳಿಯನ್ನು ಪರಿಶೀಲಿಸುತ್ತದೆ.

**ಒಕ್ಕೂಟ ನ್ಯಾಯಾಂಗ: (ಅನುಚ್ಛೇದ 124ರಿಂದ 147)**

ಭಾರತದ ಕಾನೂನನ್ನು ಅರ್ಥೈಸುವುದರಲ್ಲಿ, ಅನ್ವಯಿಸುವುದರಲ್ಲಿ ದೇಶ ಮತ್ತು ಅದರ ನಾಗರೀಕರ ನಡುವಿನ ವಿವಾದಗಳ ನ್ಯಾಯ ನಿರ್ಣಯ ಮಾಡುವುದೇ ನಮ್ಮ ನ್ಯಾಯಾಂಗ.

ನ್ಯಾಯಾಂಗ ರಾಜ್ಯದ ಇತರ ಅಂಗಗಳ ಎಲ್ಲಾ ರಚನೆಗಳಿಗಿಂತ ಉನ್ನತವಾಗಿರುವ ಕಾವಲು ಗೋಪುರ. ಇಲ್ಲಿಂದ ಅದು ರಾಜ್ಯದ ಇತರ ಅಂಗಗಳ ಕಾರ್ಯಗಳ ಮೇಲೆ, ಅವು ಕಾನೂನಿಗನುಸಾರವಾಗಿ ಮತ್ತು ಸಮವಿಧಾನದ ಸರ್ವೋಚ್ಚತೆಗನುಸಾರವಾಗಿ ಕಾರ್ಯ ನಿರ್ವಹಿಸುತ್ತವೆಯೇ ಎಂದು ಪಹರೆಯಂತೆ ನಿಗಾ ವಹಿಸುತ್ತದೆ.

ಭಾರತದ ಸರ್ವೋಚ್ಚ ನ್ಯಾಯಾಲಯವು ಮುಖ್ಯ ನ್ಯಾಯಾಧೀಶರು ಮತ್ತು 30 ಇತರ ನ್ಯಾಯಾಧೀಶರನ್ನು ಒಳಗೊಂಡಿದೆ.

**ಅನುಚ್ಛೇದ 124(2):** ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯ ಕುರಿತು ಹೇಳುತ್ತದೆ.

* ಸರ್ವೋಚ್ಚ ನ್ಯಾಯಾಲಯದ ಪ್ರತಿಯೊಬ್ಬ ನ್ಯಾಯಾಧೀಶರು ರಾಷ್ಟ್ರಪತಿಯವರಿಂದ ನೇಮಕಗೊಳ್ಳುತ್ತಾರೆ.

**ಅನುಚ್ಛೇದ 124(3):** ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅರ್ಹತೆಗಳು.

* ಭಾರತದ ನಾಗರಿಕರಾಗಿರಬೇಕು.
* 5 ಅಥವಾ ಹೆಚ್ಚು ವರ್ಷಗಳ ಕಾಲ ಒಂದು ಅಥವಾ ಹಲವು ಹೈಕೋರ್ಟ್‌ಗಳ ನ್ಯಾಯಾಧೀಶರಾಗಿರಬೇಕು.
* 10 ಅಥವಾ ಹೆಚ್ಚು ವರ್ಷಗಳ ಅವಧಿಗೆ ಉಚ್ಚನ್ಯಾಯಾಲಯದ ಅಥವಾ ಉಚ್ಚನ್ಯಾಯಾಲಯದ ನ್ಯಾಯವಾದಿಯಾಗಿರಬೇಕು.
* ರಾಷ್ಟ್ರಪತಿಯವರ ಅಭಿಪ್ರಾಯದಲ್ಲಿ ಪ್ರಸಿದ್ದ ನ್ಯಾಯವಂತರಾಗಿರಬೇಕು.

**ಅನುಚ್ಛೇದ 124 ಪದಚ್ಯುತಿ:** ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಯಾರೂ ಅವರ ವಿಷಯದಲ್ಲಿ ರುಜುವಾತಾದ ದುರ್ವರ್ತನೆ ಅಥವಾ ಅಸಾಮರ್ಥ್ಯದ ಕಾರಣದ ಮೇಲೆ ತೆಗೆದುಹಾಕಬೇಕೆಂದು, ಸಂಸತ್ತಿನ ಪ್ರತಿಯೊಂದು ಸದಸನದಿಂದ ಬಹುಮತದ ಮೂಲಕ ಮತ್ತು ಹಾಜರಿದ್ದು ಮತಕೊಡುವ ಸದನದ ಸದಸ್ಯರಲ್ಲಿ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದಂತೆ ಅವರನ್ನು ವಜಾಗೊಳಿಸಬಹುದು.

**ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಮತ್ತು ಅಧಿಕಾರ ವ್ಯಾಪ್ತಿ ಅಭಿಲೇಖ ನ್ಯಾಯಾಲಯ:**

* ತನ್ನ ಅಧಿಕಾರ ವ್ಯಾಪ್ತಿಯನ್ನು ನಿರ್ಣಯಿಸುವ ಅಧಿಕಾರ.
* ತನ್ನ ನಿಂದನೆಗೆ ದಂಡಿಸುವ ಅಧಿಕಾರ.
* ಹೈಕೋರ್ಟ್ ಮತ್ತು ಅಧೀನ ನ್ಯಾಯಾಲಯಗಳಿಗಾದ ನಿಂದನೆಗೆ ದಂಡಿಸುವ ಅಧಿಕಾರ.

**ಮೂಲ ಅಧಿಕಾರ ವ್ಯಾಪ್ತಿ:**

* ಮೂಲಭೂತ ಹಕ್ಕುಗಳ ರಕ್ಷಣೆ 32ನೇ ವಿಧಿಯ ಮೂಲಕ.

**ಅಸಾಧಾರಣ ಮೂಲ ಅಧಿಕಾರ ವ್ಯಾಪ್ತಿ:**

* ರಾಷ್ಟ್ರಪತಿ ಚುನಾವಣೆ ಸಂಬಂಧಿಸಿದ ವಿಷಯ ಅನುಚ್ಛೇದ 71.
* ಎರಡು ಅಥವಾ ಹೆಚ್ಚು ರಾಜ್ಯಗಳ ನಡುವೆ ನಡೆದ ವಿವಾದದ ಕುರಿತು.
* ಭಾರತ ಸರ್ಕಾರ ಮತ್ತು ಒಂದು ಅಥವಾ ಹೆಚ್ಚು ರಾಜ್ಯ ಒಂದು ಪಕ್ಷ, ಮತ್ತು ಒಂದು ಅಥವಾ ಹೆಚ್ಚು ರಾಜ್ಯಗಳು ಇನ್ನೊಂದು ಪಕ್ಷದಲ್ಲಿ.

**ಅಪೀಲು ಅಧಿಕಾರ ವ್ಯಾಪ್ತಿಗಳು: ಅನುಚ್ಛೇದ 132(1)**

1) ಉಚ್ಚ ನ್ಯಾಯಾಲಯದ ತೀರ್ಪಿಗೆ ವಿರುದ್ದ
2) ವಿಶೇಷ ಅನುಮತಿ ಅರ್ಜಿ ಅನುಚ್ಛೇದ 136
3) ಯಾವುದೇ ನ್ಯಾಯಾಲಯದ ಆದೇಶದ ವಿರುದ ಅಪೀಲು ಹೂಡಲು ಸುಪ್ರೀಂ ಕೋರ್ಟ್ ತನ್ನ ವಿವೇಚಾನುಸಾರ ವಿಶೇಷ ಅನುಮತಿಯನ್ನು ನೀಡಬಹುದು
4) ಸಮಾಲೋಚನೆಯ ಅಧಿಕಾರ ವ್ಯಾಪ್ತಿ. ಅನುಚ್ಛೇದ 143
5) ಹೆಚ್ಚುವರಿ ಅಧಿಕಾರ ವ್ಯಾಪ್ತಿ. ಅನುಚ್ಛೇದ 138

**ನ್ಯಾಯಾಂಗ ಕ್ರಿಯಾಶೀಲತೆ ಮತ್ತು ಪಿ.ಐ.ಎಲ್:**

**ಸಾರ್ವಜನಿಕ ಹಿತಾಸಕ್ತಿ ಅರ್ಜಿ: ಪಿಐಎಲ್:**

ನ್ಯಾಯದ ಗುರಿಯನ್ನು ತಲುಪಲು ಇರುವ ಕಾನೂನು ಸಾಧನ ಎಂದು ಬಣ್ಣಿಸಲಾಗಿದೆ.

6) ಇದು ಮೂಲತ: ಅಮೇರಿಕಾ ಪರಿಕಲ್ಪನೆ
7) ಭಾರತದಲ್ಲಿ ನ್ಯಾಯಮೂರ್ತಿ ಕೃಷ್ಣ ಅಯ್ಯರ್‌ರಿಂದ ಈ ಪರಿಕಲ್ಪನೆ ಮೂಡಿ ಬಂದಿತು
8) 1976ರಲ್ಲಿ ಬೆಳಕಿಗೆ ಬಂದಿದೆ
9) ಸಾರ್ವಜನಿಕ ಕಾರ್ಪೋರೇಷನ್ ಕಾಮಗಾರ್ ಯೂನಿಯನ್ ವಿರುದ್ದ ಭಾರತದ ಒಕ್ಕೂಟದ ಪ್ರಕರಣದಲ್ಲಿ ಬಳಕೆ ಮಾಡಲಾಯಿತು
10) ನ್ಯಾಯಮೂರ್ತಿ ಪಿ.ಎನ್.ಭಗವತಿಯವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಸಾರವನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

* ಕಾನೂನನ್ನು ಉಲ್ಲಂಘಿಸಿ ಅಥವಾ ಕಾನೂನು ಅದಿಕಾರವಿಲ್ಲದೆ ಹೊರೆ ವಿಧಿಸಲ್ಪಟ್ಟ ವ್ಯಕ್ತಿಗೆ ಅಥವಾವ ಒಂದು ನಿರ್ಧಾರಿತ ವರ್ಗದ ವ್ಯಕ್ತಿಗೆ ಕಾನೂನು ಅಪಕೃತ್ಯದ ಕಾರಣವಿರಬೇಕು
* ಈ ದೋಷ ಯಾವುದೇ ಸಂವಿಧಾನಾತ್ಮಕ ಕಾನೂನು ಹಕ್ಕಿನ ಉಲ್ಲಂಘನೆಯಿಂದ ಹುಟ್ಟಿರಬೇಕು
* ಅಪಕೃತ್ಯ ಎಸಗಲ್ಪಟ್ಟ ವ್ಯಕ್ತಿ ಈ ಕಾರಣಗಳಿಂದ ನ್ಯಾಯಾಲಯವನ್ನು ಸಂಪರ್ಕಿಸಲು ಅಸಮರ್ಥರಾಗಿರಬೇಕು
  – ಬಡತನ
  – ಅಸಹಾಯಕತೆ

– ಸಾಮಾಜಿಕ ಅಥವಾ ಆರ್ಥಿಕ ಅಸಾಮರ್ಥ್ಯ

* ಮೇಲಿನ ಷರತ್ತುಗಳು ತೃಪ್ತಿಕರವಾಗಿದ್ದರೆ ಆಗ ಸಮಾಜದ ಯಾರೇ ಸದಸ್ಯ ಮೇಲಿನ ಅಪಕೃತ್ಯದ ನ್ಯಾಯಿಕ ಪರಿಹಾರವನ್ನು ಕೋರಬಹುದು
* ಆದರೆ ಈ ವ್ಯವಹಾರಗಳನ್ನು ಆರಂಭಿಸುವ ವ್ಯಕ್ತಿ ಸಾರ್ವಜನಿಕ ಕುಂದುಕೊರತೆಯ ನಿವಾರಣೆಗಾಗಿ ಪ್ರಾಮಾಣಿಕ ಯತ್ನ ಮಾಡುತ್ತಿದ್ದಾನೆಯೇ ವಿನಾ ಯಾವುದೇ ವೈಯಕ್ತಿಕ ಲಾಭಕ್ಕಾಗಿ ಅಲ್ಲ ಎಂಬುದನ್ನು ನ್ಯಾಯಾಲಯ ಖಾತರಿಪಡಿಸಿಕೊಳ್ಳಬೇಕು
* ಪ್ರಕರಣ ಎಲ್ಲಾ ರೀತಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಾಗಲು ತಕ್ಕುದಾಗಿದ್ದರೆ ನ್ಯಾಯಾಲಯ ತನಗೆ ಕಳುಹಿಸಲಾದ ಪತ್ರಗಳನ್ನು ಆಧರಿಸಿ ಕೂಡಾ ಕಾರ್ಯಪ್ರವರ್ತವಾಗಬಹುದು.

**ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕರು: ಅನುಚ್ಛೇದ 148–151**

* ರಾಷ್ಟ್ರಪತಿಯವರಿಂದ ನೇಮಕವಾಗುತ್ತಾರೆ.
* ಅಧಿಕಾರ ಅವಧಿ: 6 ವರ್ಷ ಅಥವಾ 65 ವರ್ಷ ಆಗುವವರೆಗೆ, ಇದರಲ್ಲಿ ಯಾವುದು ಮೊದಲೋ ಅದು.
* ಪದಚ್ಯುತಿ: ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿರ್ಯಯನ್ನು ತೆಗೆದುಹಾಕುವ ವಿಧಾನವನ್ನು ಅನುಸರಿಸಲಾಗುತ್ತದೆ.

11) ಇವರ ಸ್ವಾತಂತ್ರ್ಯ ಮತ್ತು ರಕ್ಷಣೆ:

ಸಂವಿಧಾನ ಇವರ ಸ್ವಾತಂತ್ರ್ಯವನ್ನು ಕೆಳಕಂಡಂತೆ ರಕ್ಷಿಸುತ್ತವೆ.

* ಇವರ ವೇತನ ಮತ್ತು ಆಡಳಿತ ವೆಚ್ಚ ಸಂಚಿತ ನಿಧಿಯಿಂದ ಪೂರೈಕೆಯಾಗುತ್ತದೆ.
* ಸಂಸತ್ತಿನ ಕಾಯಿದೆ ಮೂಲಕ ವೇತನ, ಭತ್ಯೆ ನಿಗದಿಯಾಗಿರುತ್ತದೆ.
* ಇವರ ಅಧಿಕಾರಾವಧಿ ಮುಗಿದ ನಂತರ, ಬೇರೆ ಯಾವುದೇ ಪದವಿಗೆ ಅರ್ಹರಾಗುವುದಿಲ್ಲ.
* ರಾಷ್ಟ್ರಪತಿಯಿಂದ ನೇಮಕವಾದರೂ, ಸಂಸತ್ತಿನಿಂದ ಮಾತ್ರ ಪದಚ್ಯುತಿಯಾಗುತ್ತಾರೆ.

12) ಇವರ ಅಧಿಕಾರ ಮತ್ತು ಕಾರ್ಯಗಳು:

* ಭಾರತದ ಸಂಚಿತ ನಿಧಿಯ ಖರ್ಚು, ವೆಚ್ಚವನ್ನು ಪರಿಶೋಧಿಸಿ, ವರದಿ ಸಲ್ಲಿಸುವುದು ಮತ್ತು ಕಾನೂನಿನ ಪ್ರಕಾರ ಖರ್ಚು ವೆಚ್ಚಗಳು ಸರಿಯಾಗಿವೆಯೇ ಎಂದು ಪರಿಶೋಧನೆ.
* ಕೇಂದ್ರ ಮತ್ತು ರಾಜ್ಯಗಳ ಸಾರ್ವಜನಿಕ ಖಾತೆ ಹಾಗೂ ತುರ್ತು ನಿಧಿಯಿಂದ ಮಾಡಲಾದ ವೆಚ್ಚಗಳ ಬಗ್ಗೆ ಪರಿಶೀಲನೆ ಮತ್ತು ವರದಿ.
* ಕೇಂದ್ರ ಮತ್ತು ರಾಜ್ಯಗಳ ಎಲ್ಲಾ ಇಲಾಖೆಗಳ ವ್ಯಾಪಾರ ಹಾಗೂ ಉತ್ಪಾದನೆಯ ಲಾಭ ಮತ್ತು ನಷ್ಟದ ಪರಿಶೀಲನೆಯ ವರದಿ ಸಲ್ಲಿಸುವಿಕೆ.
* ಕೇಂದ್ರ ಮತ್ತು ರಾಜ್ಯಗಳ ಖರ್ಚು ಮತ್ತು ಆದಾಯಗಳನ್ನು ಪರಿಶೀಲಿಸಿ ಆದಾಯದ ಮಾಪನ ಮತ್ತು ಆದಾಯದ ಹಂಚಿಕೆ, ಸಂಸತ್ತಿನ ಕಾಯಿದೆ ಮತ್ತು ಕಾನೂನಿಗೆ ಅನುಗುಣವಾಗಿದೆಯೇ ಎಂದು ಪರಿಶೀಲಿಸುವುದು.

**ರಾಜ್ಯಗಳ ಕಾರ್ಯಾಂಗ: ಸಂವಿಧಾನದ ಭಾಗ – 5 ರಾಜ್ಯಪಾಲರು (ಅನುಚ್ಛೇದ 152 ರಿಂದ 167)**

ರಾಜ್ಯ ಕಾರ್ಯಾಂಗ ಮುಖ್ಯಸ್ಥರನ್ನು ರಾಜ್ಯಪಾಲರು ಎಂದು ಹೆಸರಿಸಲಾಗಿದೆ. 155ನೇ ವಿಧಿ ಪ್ರಕಾರ ರಾಜ್ಯಪಾಲರು ರಾಷ್ಟ್ರಪತಿಯವರಿಂದ ನೇಮಕವಾಗುತ್ತಾರೆ.

ಅನುಚ್ಛೇದ 156: ರಾಜ್ಯಪಾಲರು ತಾವು ಸಹಿ ಮಾಡಿದ ಪತ್ರವನ್ನು ರಾಷ್ಟ್ರಪತಿಯವರಿಗೆ ಬರೆದ ತಮ್ಮ ಪದವಿಗೆ ರಾಜೀನಾಮೆ ಕೊಡಬಹುದು.

ಅನುಚ್ಛೇದ 157: ರಾಜ್ಯಪಾಲರಾಗಲು ಅರ್ಹತೆಗಳು:

* ಭಾರತದ ನಾಗರಿಕರಾಗಿರಬೇಕು

* ಅವರು 35 ವರ್ಷಗಳ ವಯಸ್ಸನ್ನು ಪೂರ್ತಿಗೊಳಿಸಿರಬೇಕು
* ಅವರು ಸಂಸತ್ತಿನ ಯಾವುದೇ ಸದನದ ರಾಜ್ಯ ವಿಧಾನಮಂಡಲದ ಸದಸ್ಯರಾಗಿರಬಾರದು
* ಅವರು ಯಾವುದೇ ಲಾಭದಾಯಕ ಪದವಿಯನ್ನು ವಹಿಸಿರಬಾರದು

ಅನುಚ್ಛೇದ 153: ರಾಜ್ಯಪಾಲರಿಂದ ಪ್ರಮಾಣ ವಚನ.

**ರಾಜ್ಯಪಾಲರ ಅಧಿಕಾರ ಮತ್ತು ಕಾರ್ಯಗಳು**

**ಕಾರ್ಯಾಂಗ ಅಧಿಕಾರಗಳು:**

* ಅನುಚ್ಛೇದ 166(1): ರಾಜ್ಯ ಸರ್ಕಾರದ ಎಲ್ಲ ಕಾರ್ಯಾಂಗ ಪ್ರಕ್ರಿಯೆಗಳು ಔಪಚಾರಿಕವಾಗಿ ರಾಜ್ಯಪಾಲರ ಹೆಸರಿನಲ್ಲಿ ನಡೆಯುತ್ತದೆ
* ಅನುಚ್ಛೇದ 163: ರಾಜ್ಯಪಾಲರು ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲವನ್ನು ನೇಮಕ ಮಾಡುತ್ತಾರೆ
* ಅಡ್ವೋಕೆಟ್ ಜನರಲ್ ನೇಮಕ ಮತ್ತು ಸಂಭಾವನೆ ನಿರ್ಧಾರ
* ರಾಜ್ಯ ಚುನಾವಣಾ ಆಯುಕ್ತರ ನೇಮಕ ಮಾಡಿ ಅವರ ಸೇವಾ ಷರತ್ತು ಅವಧಿಗಳ ನಿರ್ಧಾರ ಮಾಡುತ್ತಾರೆ
* ಕೆಪಿಎಸ್‌ಸಿ ಅಧ್ಯಕ್ಷರ ಮತ್ತು ಸದಸ್ಯರ ನೇಮಕ ಮಾಡುತ್ತಾರೆ. ಆದರೆ ಅವರನ್ನು ಭಾರತದ ರಾಷ್ಟ್ರಪತಿಯವರಿಂದ ಮಾತ್ರ ತೆಗೆದು ಹಾಕಬಹುದು
* ಅನುಚ್ಛೇದ 167: ರಾಜ್ಯದ ವ್ಯವಹಾರಗಳ ಆಡಳಿತಕ್ಕೆ ಸಂಬಂಧಿಸಿದ ಮತ್ತು ಶಾಸನ ರಚನೆಯ ಪ್ರಸ್ತಾವಗಳ ಮಾಹಿತಿಗಳನ್ನು ರಾಜ್ಯಪಾಲರು ಮುಖ್ಯಮಂತ್ರಿಯವರಿಂದ ಕೇಳಬಹುದು
* ಯಾವುದೇ ಮಂತ್ರಿ ತೀರ್ಮಾನ ಕೈಗೊಂಡಿರುವ ಆದರೆ ಮಂತ್ರಿಮಂಡಲ ಪರಿಗಣನೆಗಾಗಿ ಅದರ ಮುಂದಿಡುವಂತೆ ರಾಜ್ಯಪಾಲರು ಮುಖ್ಯಮಂತ್ರಿಯವರಿಗೆ ಒತ್ತಾಯ ಮಾಡಬಹುದು
* ರಾಜ್ಯದಲ್ಲಿ ಸಂವಿಧಾನಾತ್ಮಕ ತುರ್ತುಪರಿಸ್ಥಿತಿ ಜಾರಿಗೆ ತರುವಂತೆ ರಾಜ್ಯಪಾಲರು ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡಬಹುದು (356)

**ಶಾಸನೀಯ ಅಧಿಕಾರಗಳು ಮತ್ತು ವಿಧಾಯೀ ಅಧಿಕಾರಗಳು:**

* ವಿಧಾನ ಮಂಡಲದ ಅಧಿವೇಶನ ಕರೆಯುವಿಕೆ ಮತ್ತು ಮುಕ್ತಾಯ ಮತ್ತು ವಿಧಾನ ಸಭೆಯನ್ನು ವಿಸರ್ಜಿಸಬಹುದು.
* ಚುನಾವಣಾ ನಂತರದ ಪ್ರಥಮ ಅಧಿವೇಶನವನ್ನು ಮತ್ತು ಪ್ರತಿ ವರ್ಷದ ಮೊದಲ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುತ್ತಾರೆ.
* ವಿಧಾನ ಮಂಡಲದಲ್ಲಿ ಇತ್ಯರ್ಥದಲ್ಲಿರುವ ಅಥವಾ ಇತರ ಮಸೂದೆಯ ಬಗೆಗೆ ರಾಜ್ಯಪಾಲರು ವಿಧಾನ ಮಂಡಲದ ಸದನಗಳಿಗೆ ಸಂದೇಶ ಕಳುಹಿಸಬಹುದು.
* ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳು ತೆರವು ಆದಾಗ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದ ಯಾವುದೇ ಸದಸ್ಯರನ್ನು ಅದರ ವ್ಯವಹರಣೆಗಳ ಅಧ್ಯಕ್ಷತೆ ವಹಿಸಲು ನೇಮಿಸುತ್ತಾರೆ.
* ಸಾಹಿತ್ಯ, ಕಲೆ, ವಿಜ್ಞಾನ, ಸಮಾಜ ಸೇವೆಗಳ ಕ್ಷೇತ್ರದಲ್ಲಿ ವಿಶೇಷ ಜ್ಞಾನವಿರುವ ಅಥವಾ ವ್ಯವಹಾರಿಕ ಅನುಭವವಿರುವ ವ್ಯಕ್ತಿಗಳ ಪೈಕಿ ರಾಜ್ಯ ವಿಧಾನ ಪರಿಷತ್ತಿನ 1/6ನೇ ಭಾಗ ಸದಸ್ಯರನ್ನು ನಾಮನಿರ್ದೇಶನ ಮಾಡುತ್ತಾರೆ.
* ಚುನಾವಣಾ ಆಯೋಗದ ಸಲಹೆ ಮೇರೆಗೆ ರಾಜ್ಯಪಾಲರು ರಾಜ್ಯ ವಿಧಾನಮಂಡಲದ ಸದಸ್ಯರನ್ನು ಅನರ್ಹಗೊಳಿಸುವ ಪ್ರಶ್ನೆಯನ್ನು ನಿರ್ಧರಿಸುತ್ತಾರೆ.
* ಯಾವುದೇ ಮಸೂದೆ ರಾಜ್ಯ ವಿಧಾನ ಮಂಡಲದಿಂದ ರಾಜ್ಯಪಾಲರ ಅನುಮೋದನೆಗೆ ಕಳುಹಿಸಿದಾಗ ಅವರು ಒಪ್ಪಿಗೆ ಕೊಡಬಹುದು.
* ಒಪ್ಪಿಗೆ ತಡೆಹಿಡಿಯಬಹುದು.

* ಹಣಕಾಸು ಮಸೂದೆ ಹೊರತುಪಡಿಸಿ, ಮಸೂದೆಯನ್ನು ರಾಜ್ಯ ವಿಧಾನ ಮಂಡಲದ ಪುನರ್‌ಪರಿಶೀಲನೆಗಾಗಿ ಹಿಂದುರುಗಿಸಬಹುದು. ಆದಾಗ್ಯೂ ಮಸೂದೆ ತಿದ್ದುಪಡಿಯೊಂದಿಗೆ ಅಥವಾ ಇಲ್ಲದೇ ವಿಧಾನ ಮಂಡಲದಿಂದ ಮತ್ತೇ ಅಂಗೀಕೃತವಾದರೆ ರಾಜ್ಯಪಾಲರು ತಮ್ಮ ಒಪ್ಪಿಗೆ ನೀಡಲೇಬೇಕು.
* ರಾಜ್ಯ ಹೈಕೋರ್ಟಿನ ಸ್ಥಾನಕ್ಕೆ ದಕ್ಕೆ ತರಬಲ್ಲ ಮಸೂದೆಗಳಿದ್ದರೆ ರಾಷ್ಟ್ರಪತಿಯ ಪರಿಶೀಲನೆಗಾಗಿ ರಾಜ್ಯಪಾಲರು ಮೀಸಲಿಡಬಹುದು.

ಅನುಚ್ಛೇದ 213: ಆದ್ಯಾದೇಶಗಳನ್ನು ಹೊರಡಿಸುವ ಅಧಿಕಾರ.

* ರಾಜ್ಯ ಹಣಕಾಸು ಆಯೋಗದ ವರದಿ, ಕೆಪಿಎಸ್‌ಸಿ ವರದಿ ರಾಜ್ಯ ಲೆಕ್ಕಗಳಿಗೆ ಸಂಬಂಧಿಸಿದ ಸಿಎಜಿ ವರದಿಗಳನ್ನು ರಾಜ್ಯಪಾಲರು ವಿಧಾನ ಮಂಡಲದ ಮುಂದಿರಿಸುತ್ತಾರೆ.

**ಹಣಕಾಸು ಅಧಿಕಾರಗಳು:**

* ರಾಜ್ಯ ವಿಧಾನ ಮಂಡಲದಲ್ಲಿ ಪ್ರತಿವರ್ಷ ವಾರ್ಷಿಕ ಹಣಕಾಸು ವಿವರ ಪತ್ರವನ್ನಿರಿಸುವಂತೆ ಮಾಡುತ್ತಾರೆ.
* ಅನುಚ್ಛೇದ 199: ರಾಜ್ಯಪಾಲರ ಪೂರ್ವ ಶಿಫಾರಸ್ಸಿನೊಂದಿಗೆ ಮಾತ್ರ ಧನ ವಿಧೇಯಕಗಳನ್ನು ರಾಜ್ಯ ವಿಧಾನ ಮಂಡಲದಲ್ಲಿ ಮಂಡನೆ.
* ರಾಜ್ಯಪಾಲರ ಪೂರ್ವ ಶಿಫಾರಸ್ಸಿಲ್ಲದೆ ಯಾವ ಅನುದಾನ ಬೇಡಿಕೆ ಮಂಡಿಸುವಂತಿಲ್ಲ.
* ಯಾವುದೇ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ರಾಜ್ಯದ ಸಾದಿಲ್ವಾರು ನಿಧಿಯಿಂದ ರಾಜ್ಯಪಾಲರು ಮುಂಗಡ ಹಣವನ್ನು ನೀಡಬಹುದು.
* ಪಂಚಾಯತಿ ಮತ್ತು ಪುರಸಭೆಗಳ ಹಣಕಾಸು ಪರಿಸ್ಥಿತಿಯ ಪುನರಾವಲೋಕನ ಮಾಡಲು ಪ್ರತಿ 5 ವರ್ಷಗಳ ನಂತರ ಒಂದು ರಾಜ್ಯ ಹಣಕಾಸು ಆಯೋಗ ರಚನೆ ಮಾಡುವರು.

**ನ್ಯಾಯಿಕ ಅಧಿಕಾರಗಳು:**

* ಅನುಚ್ಛೇದ 161: ಯಾವುದೇ ವ್ಯಕ್ತಿಗೆ ವಿಧಿಸಿರುವ ದಂಡನೆಯ ಬಗೆಗೆ ಕ್ಷಮಾದಾನವನ್ನು ಪ್ರವಿಲಂಬನವನ್ನು ಮುಂದೂಡಿಕೆ ಅಥವಾ ಮಾಫಿಯನ್ನು ಮಾಡಲು ಅಥವಾ ಶಿಕ್ಷೆಯ ಆದೇ#ಶವನ್ನು ಅಮಾನತ್ತುಗೊಳಿಸಲು ಮಾಫಿ ಅಥವಾ ಪರಿವರ್ತನೆ ಮಾಡಲು ರಾಜ್ಯಪಾಲರಿಗೆ ಅಧಿಕಾರವಿದೆ.
* ರಾಜ್ಯ ಹೈಕೋರ್ಟ್ ನ್ಯಾಯಾಧೀಶರ ನೇಮಕ ಮಾಡುವಾಗ ರಾಷ್ಟ್ರಪತಿಯವರು ರಾಜ್ಯಪಾಲರ ಜೊತೆ ಸಮಾಲೋಚಿಸುತ್ತಾರೆ.
* ರಾಜ್ಯ ಹೈಕೋರ್ಟಿನೊಂದಿಗೆ ಸಮಾಲೋಚಿಸಿ ರಾಜ್ಯಪಾಲರು ಜಿಲ್ಲಾ ನ್ಯಾಯಾಧೀಶರ ನೇಮಕ, ಪ್ರಕಟಣೆ, ಬಡ್ತಿ ನಿರ್ಧರಿಸುತ್ತಾರೆ.
* ರಾಜ್ಯ ಹೈಕೋರ್ಟ್ ಮತ್ತು ರಾಜ್ಯ ಲೋಕಸೇವಾ ಆಯೋಗಗಳೊಂದಿಗೆ ಸಮಾಲೋಚಿಸಿ ರಾಜ್ಯದ ನ್ಯಾಯಿಕ ಸೇವೆಗಳಿಗೆ ವ್ಯಕ್ತಿಗಳನ್ನು ನೇಮಿಸುತ್ತಾರೆ.

**ತುರ್ತು ಅಧಿಕಾರಗಳು:**

ವಿಧಿ 356: ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರವನ್ನು ನಡೆಸಲಾರದಂತಹ ಪರಿಸ್ಥಿತಿ ಉದ್ಭವಿಸಿದೆಯೆಂದು ರಾಜ್ಯಪಾಲರಿಗೆ ಮನವರಿಕೆಯಾದರೆ ರಾಜ್ಯದಲ್ಲಿ ರಾಷ್ಟ್ರಪತಿಯವರ ಆಳ್ವಿಕೆಯನ್ನು ಜಾರಿಗೆ ತರಬೇಕೆಂದು ಶಿಫಾರಸ್ಸಿನ ವರದಿಯನ್ನು ರಾಜ್ಯಪಾಲರು ರಾಷ್ಟ್ರಪತಿಯವರಿಗೆ ಕಳುಹಿಸಬಹುದು.

**ಮುಖ್ಯಮಂತ್ರಿ ಅಧಿಕಾರ ಮತ್ತು ಪ್ರಕಾರ್ಯಗಳು:**

* ರಾಜ್ಯದ ನೈಜ ಕಾರ್ಯಾಂಗದ ಮುಖ್ಯಸ್ಥನಾಗಿ ಮುಖ್ಯಮಂತ್ರಿಯವರಿಗೆ ವಿಶಾಲ ಅಧಿಕಾರಗಳು ಮತ್ತು ಪ್ರಕಾರ್ಯಗಳು ಇವೆ.
* ಅವರು ರಾಜ್ಯ ಸರ್ಕಾರದ ಸಕ್ರಿಯ ಮುಖ್ಯಸ್ಥರಾಗಿರುವುದರಿಂದ ಅವರ ಮಂತ್ರಿಗಳ ಆಯ್ಕೆಯ ಬಗೆಗೆ ರಾಜ್ಯಪಾಲರಿಗೆ ಸಲಹೆ ಕೊಡುತ್ತಾರೆ.

* ಮಂತ್ರಿಮಂಡಲ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ ಮತ್ತು ಸಾಮೂಹಿಕ ಜವಾಬ್ದಾರಿಯ ತತ್ವ ಅನುಸರಿಸಲ್ಪಡುವಂತೆ ನೋಡಿಕೊಳ್ಳುತ್ತಾರೆ.
* ರಾಜ್ಯ ಆಡಳಿತ ವ್ಯವಹಾರಗಳಿಗೆ ಸಂಬಂಧಿಸಿದ ಮಂತ್ರಿಮಂಡಲದ ಎಲ್ಲ ನಿರ್ಣಯಗಳನ್ನು ಮತ್ತು ಶಾಸನ ರಚನೆಯ ಪ್ರಸ್ತಾವಗಳನ್ನು ರಾಜ್ಯಪಾಲರಿಗೆ ತಿಳಿಸುತ್ತಾರೆ.
* ರಾಜ್ಯಪಾಲರು ಕೇಳಬಹುದಾದ ಶಾಸನ ರಚನೆಯ ವ್ಯವಹಾರಗಳ ಮತ್ತು ಪ್ರಸ್ತಾವನೆಗಳ ಮಾಹಿತಿಯನ್ನು ರಾಜ್ಯಪಾಲರಿಗೆ ನೀಡುತ್ತಾರೆ.
* ರಾಜ್ಯಪಾಲರು ಸರ್ಕಾರದ ನಿರ್ಣಯ ಬೇಕೆಂದು ಕೇಳುವ ವಿಷಯಗಳನ್ನು ಮಂತ್ರಿಮಂಡಲದ ಪರಿಗಣನೆಗಾಗಿ ಅವರ ಮುಂದಿಡುತ್ತಾರೆ.
* ರಾಜ್ಯಪಾಲರು ಮತ್ತು ಮಂತ್ರಿಮಂಡಲದ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಣೆ.
* ಮಂತ್ರಿಗಳು ಮತ್ತು ವಿಧಾನಮಂಡಲದ ನಡುವೆಯೂ ಏಕೈಕ ಸಂಪರ್ಕ ಸೇತುವೆಯಾಗಿರುತ್ತಾರೆ.
* ಬಹುಮತ ಪಕ್ಷದ ನಾಯಕರಾಗಿ ಶಿಸ್ತು ಪರಿಪಾಲನೆ ಅವರ ಕರ್ತವ್ಯ.
* ಯಾವುದೇ ವೇಳೆಯಲ್ಲಿ ಅವರು ರಾಜೀನಾಮೆ ನೀಡಬಹುದು ಮತ್ತು ಮತ್ತೋರ್ವ ವ್ಯಕ್ತಿಯ ಇನ್ನೊಂದು ಮಂತ್ರಿಮಂಡಲ ರಚಿಸುವಂತೆ ಅಥವಾ ಸದನ ವಿಸರ್ಜಿಸಿ ರಾಷ್ಟ್ರಪತಿ ಆಡಳಿತ ಹೇರುವಂತೆ ಶಿಫಾರಸ್ಸು ಮಾಡಬಹುದು.
* ತಾತ್ವಿಕವಾಗಿ ಎಲ್ಲ ನೇಮಕಾತಿಗಳು ರಾಜ್ಯಪಾಲರ ಹೆಸರಿನಲ್ಲಿ ನಡೆದರೂ, ಆಚರಣೆಯಲ್ಲಿ ಪ್ರಭಾವಿ ಅಧಿಕಾರ ಮುಖ್ಯಮಂತ್ರಿಯದೇ ಆಗಿರುತ್ತದೆ.

**ವಿಧಾನ ಸಭೆಯ ಅಧಿಕಾರಗಳು ಮತ್ತು ಪ್ರಕಾರ್ಯಗಳು:**

* ವಿಧಾನಸಭೆ ರಾಜ್ಯ ಪಟ್ಟಿಯ ಯಾವುದೇ ವಿಷಯದ ಮೇಲೆ ಕಾನೂನುಗಳನ್ನು ಮಾಡಬಹುದು.
* ಸಮವರ್ತಿಯಲ್ಲಿನ ವಿಷಯದಲ್ಲಿ ಸಂಸತ್ತು ಮಾಡಿದ ಕಾನೂನಿಗೆ ವಿರುದ್ದವಾಗದ ರೀತಿಯಲ್ಲಿ ಕಾನೂನು ರಚಿಸಬಹುದು.
* ಪ್ರಶ್ನೆಗಳನ್ನು ಕೇಳುವ ಅವಿಶ್ವಾಸ ನಿರ್ಣಯ ಮಂಡಿಸುವ ಇತ್ಯಾದಿಗಳ ಮೂಲಕ ವಿಧಾನಸಭೆ ಮಂತ್ರಿಮಂಡಲದ ಮೇಲೆ ನಿಯಂತ್ರಣ ಹೊಂದಿದೆ.
* ವಿಧಾನಸಭೆ ಸರ್ಕಾರದ ಹಣಕಾಸು ವ್ಯವಹಾರವನ್ನು ನಿಯಂತ್ರಿಸುತ್ತದೆ ಮತ್ತು ಧನ ವಿಧೇಯಕಗಳನ್ನು ಅಂಗೀಕರಿಸುವ ಅನನ್ಯ ಅಧಿಕಾರವನ್ನು ಹೊಂದಿದೆ.
* ಅದರ ಅಧ್ಯಕ್ಷ, ಉಪಾಧ್ಯಕ್ಷರನ್ನು ಚುನಾಯಿಸುತ್ತದೆ ಹಾಗೂ ಅವರನ್ನು ಅವಿಶ್ವಾಸ ಮತದ ಮೂಲಕ ತೆಗೆಯಲೂ ಬಹುದು.

**ಭಾರತದ ಅಟಾರ್ನಿ ಜನರಲ್ ಮತ್ತು ರಾಜ್ಯದ ಅಡ್ವೋಕೆಟ್ ಜನರಲ್ ನಡುವಿನ ವ್ಯತ್ಯಾಸಗಳು:**

**ಅಟಾರ್ನಿ ಜನರಲ್ (76):**

* ರಾಷ್ಟ್ರಪತಿಗಳಿಂದ ನೇಮಕ
* ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ನೇಮಕವಾಗುವುದಕ್ಕೆ ಅರ್ಹರು
* ರಾಷ್ಟ್ರಪತಿಯವರು ಇಷ್ಟ ಪರ್ಯಂತ ಅವರು ಅಧಿಕಾರ ನಿರ್ವಹಿಸುವರು
* ಭಾರತದ ರಾಷ್ಟ್ರಪತಿಗೆ ಕೆಲ ವಿಷಯಗಳ ಕುರಿತು ಕಾನೂನು ಸಲಹೆಯನ್ನು ಕೊಡುವ ಕಾರ್ಯವನ್ನು ವಹಿಸಲಾಗಿರುತ್ತದೆ
* ಅವರು ಸಂಸತ್ತಿನ 2 ಸದನಗಳಲ್ಲಿ ಭಾಷಣ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಆದಾಗ್ಯೂ ಅವರು ಸಂಸತ್ತಿನ ಸದಸ್ಯರಾಗಿರುವುದಿಲ್ಲ.

**ಅಡ್ವೋಕೇಟ್ ಜನರಲ್ (165):**

* ರಾಜ್ಯಪಾಲರಿಂದ ನೇಮಕ
* ಹೈಕೋರ್ಟಿನ ನ್ಯಾಯಾಧೀಶರಾಗಲು ನೇಮಕವಾಗುವುದಕ್ಕೆ ಅರ್ಹರು
* ರಾಜ್ಯಪಾಲರ ಇಷ್ಟ ಪರ್ಯಂತ ಅವರು ಅಧಿಕಾರ ನಿರ್ವಹಿಸುವರು
* ರಾಜ್ಯದ ರಾಜ್ಯಪಾಲರಿಗೆ ಕೆಲವು ವಿಷಯಗಳ ಮೇಲೆ ಕಾನೂನು ಸಲಹೆಯನ್ನು ಕೊಡುವ ಕಾರ್ಯವನ್ನು ವಹಿಸಿಕೊಡಲಾಗುತ್ತದೆ.
* ರಾಜ್ಯ ವಿಧಾನ ಮಂಡಲದ 2 ಸದನಗಳಲ್ಲಿ ಮಾತನಾಡುವ ಹಕ್ಕನ್ನು ಹೊಂದಿರುತ್ತಾರೆ. ಆದಾಗ್ಯೂ ಅವರು ವಿಧಾನ ಮಂಡಲದ ಸದಸ್ಯರಾಗಿರುವುದಿಲ್ಲ.

## ಒಕ್ಕೂಟದ ವ್ಯವಸ್ಥೆ

ಹಲವಾರು ರಾಜ್ಯಗಳು ಒಂದು ಕೇಂದ್ರದಡಿಯಲ್ಲಿ ಸಂಘಟಿತವಾಗಿದ್ದರೂ ಕೂಡ ತಮ್ಮ ಆಂತರಿಕ ವಿಷಯಗಳಲ್ಲಿ ಸ್ವತಂತ್ರವಾಗಿರುವಂಥ ಸರ್ಕಾರದ ಪದ್ದತಿಗೆ ಒಕ್ಕೂಟವೆಂದು ಕರೆಯುತ್ತಾರೆ.

ಒಕ್ಕೂಟ ರೀತಿಯ ಸರ್ಕಾರವನ್ನು ಭಾರತಕ್ಕೆ ಅಳವಡಿಸಲು ಅಮೇರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾದ ಸಂವಿಧಾನದ ರೂವಾರಿಗಳ ಮೇಲೆ ಪ್ರಭಾವ ಬೀರಿದವು.

**ಸಂಯುಕ್ತ ಅಥವಾ ಒಕ್ಕೂಟ ಸರ್ಕಾರದ ಅವಶ್ಯಕತೆಗಳು:**

* ದ್ವಿ ಸರ್ಕಾರವಿರಬೇಕು
* ಕೇಂದ್ರ ಮತ್ತು ರಾಜ್ಯಗಳ ಅಧಿಕಾರದ ಕುರಿತು ಸಂವಿಧಾನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರಬೇಕು
* 2 ಶಾಸಕಾಂಗ ಸರ್ಕಾರಗಳಿಗೆ ಸಂವಿಧಾನವು ವಿಶೇಷವಾದ ವಲಯವನ್ನು ಕೊಡಬೇಕು
* 2 ಸರ್ಕಾರಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಅಧಿಕಾರವನ್ನು ಚಲಾಯಿಸುವ ಅಧಿಕಾರವನ್ನು ಹೊಂದಿರಬೇಕು
* 2 ಸರ್ಕಾರಗಳ ನಡುವೆ ತೀರ್ಪು ಹೇಳಲು ಸ್ವತಂತ್ರ ಮತ್ತು ನಿಷ್ಪಕ್ಷವಾದ ಒಕ್ಕೂಟ ನ್ಯಾಯಾಲಯವಿರಬೇಕು.

**ಸಂಯುಕ್ತ ಸರ್ಕಾರದ ಅವಶ್ಯಕತೆ:**

* ಏಕ ನಾಗರಿಕತ್ವ
* ಉಳಿಕೆ ಅಧಿಕಾರಗಳೊಂದಿಗೆ ಬಲವಾದ ಕೇಂದ್ರಸರ್ಕಾರ
* ಒಂದೇ ಅಖಿಲ ಭಾರತ ಸೇವೆಗಳು

**ಕೇಂದ್ರ ಮತ್ತು ರಾಜ್ಯಗಳ ಆಡಳಿತಾತ್ಮಕ ಸಂಬಂಧಗಳು:**

* ರಾಜ್ಯಗಳ ಮತ್ತು ಒಕ್ಕೂಟದ ಬಾಧ್ಯತೆ
* ಕೆಲ ಸಂದರ್ಭಗಳಲ್ಲಿ ಕೇಂದ್ರವು ರಾಜ್ಯಗಳ ಮೇಲೆ ನಿಯಂತ್ರಣ
* ಕಾರ್ಯಾಂಗದ ಅಧಿಕಾರವನ್ನು ಪ್ರಧಾನ ಮಾಡಲು ಒಕ್ಕೂಟದ ಅಧಿಕಾರ
* ಒಕ್ಕೂಟಕ್ಕೆ ಕಾರ್ಯಗಳನ್ನು ವಹಿಸಿಕೊಡಲು ರಾಜ್ಯಗಳ ಅಧಿಕಾರ
* ಅಖಿಲ ಭಾರತ ಸೇವೆಗಳು
* ತುರ್ತು ಪರಿಸ್ಥಿತಿಯ ಅವಕಾಶಗಳು

**ಹಣಕಾಸಿನ ಸಂಬಂಧಗಳು: ಅನುಚ್ಛೇದ 268ರಿಂದ 290**

* ಒಕ್ಕೂಟವು ವಿಧಿಸಿದ ಮತ್ತು ಕೇಂದ್ರ ಮತ್ತು ರಾಜ್ಯಗಳು
* ಸಂಗ್ರಹಿಸಿದ ಮತ್ತು ವಿನಿಯೋಗಿಸುವ ತೆರಿಗೆಗಳು 268ಎ

* ಒಕ್ಕೂಟವು ವಿಧಿಸಿದ ಆದರೆ ರಾಜ್ಯಗಳು ಸಂಗ್ರಹಿಸಿದ ಮತ್ತು ವಿನಿಯೋಗಿಸಿದ ಸುಂಕಗಳು 268
* ಒಕ್ಕೂಟವು ವಿಧಿಸಿ ಸಂಗ್ರಹಿಸಿದ ತೆರಿಗೆಗಳನ್ನು ರಾಜ್ಯಗಳಿಗೆ ವಹಿಸುವುದು 269
* ಒಕ್ಕೂಟವು ವಿಧಿಸಿದ ಮತ್ತು ಒಕ್ಕೂಟ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾದ ತೆರಿಗೆಗಳು 270
* ಕೇಂದ್ರ ಸರ್ಕಾರದಿಂದ ವಿಧಿಸಿದ, ಸಂಗ್ರಹಿಸಿದ ಮತ್ತು ಹಿಡಿದಿಟ್ಟುಕೊಂಡ ತೆರಿಗೆಗಳು 271

**ಹಣಕಾಸು ಆಯೋಗ: (ಅನುಚ್ಛೇದ 280)**

* ಓರ್ವ ಅಧ್ಯಕ್ಷ, 4 ಜನ ಸದಸ್ಯರು
* ಎಲ್ಲರೂ ರಾಷ್ಟ್ರಪತಿಯವರಿಂದ ನೇಮಕ
* 5 ವರ್ಷ ಅವರ ಅಧಿಕಾರ ಅವಧಿ
* ಎಲ್ಲರೂ ಮರು ನೇಮಕಕ್ಕೆ ಅರ್ಹರು
* ಅರ್ಹತೆಗಳು– ಸಂವಿಧಾನದಲ್ಲಿ ಉಲ್ಲೇಖವಿಲ್ಲ, ಆದರೂ ಸಂಸತ್ತು ನಿರ್ಧರಿಸುತ್ತದೆ.

**ಹಣಕಾಸು ಆಯೋಗದ ಕಾರ್ಯಗಳು:**

* ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ಹಂಚಿಕೆ
* ಕೇಂದ್ರದಿಂದ ರಾಜ್ಯಕ್ಕೆ ಸಹಾಯ ಧನಗಳ ಬಗ್ಗೆ ಅನುಸರಿಸಬೇಕಾದ ತತ್ವಗಳು
* ರಾಜ್ಯ ಹಣಕಾಸು ಆಯೋಗವು ಮಾಡಿದ ಶಿಫಾರಸ್ಸುಗಳ ಆಧಾರದ ಮೇಲೆ ಆ ರಾಜ್ಯದಲ್ಲಿನ ಪಂಚಾಯತಿಗಳು ಮತ್ತು ಪುರಸಭೆಗಳ ಸಂಪನ್ಮೂಲಗಳನ್ನು ಹೆಚ್ಚಿಸುವ ದೃಷ್ಟಿಯಿಂದ ರಾಜ್ಯ ಸಂಚಿತ ನಿಧಿಯನ್ನು ಬಲಪಡಿಸುವ ಅಗತ್ಯ ಕ್ರಮಗಳು
* ಉತ್ತಮ ಹಣಕಾಸು ಸ್ಥಿತಿಯ ಹಿತದೃಷ್ಟಿಯಿಂದ ರಾಷ್ಟ್ರಪತಿಯವರಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸುಗಳನ್ನು ಮಾಡುವುದು ಅವರ ಕರ್ತವ್ಯವಾಗಿರುತ್ತದೆ
* ಅನುಚ್ಛೇದ 281 ಹಣಕಾಸು ಆಯೋಗದ ಶಿಫಾರಸ್ಸುಗಳು

**ಚುನಾವಣಾ ಪ್ರಕ್ರಿಯೆ: (ಅನುಚ್ಛೇದ 324ರಿಂದ 329)**

ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು ಪ್ರಜಾಪ್ರಭುತ್ವವನ್ನು ಜೀವಂತವಾಗಿರಿಸುತ್ತದೆ. ಪ್ರಸ್ತುತ ಚುನಾವಣಾ ಆಯೋಗವು 3 ಜನ ಸದಸ್ಯರಿಂದ ಕೂಡಿದೆ. ಅನುಚ್ಛೇದ 326ನೇ ಅನ್ವಯ, 1989 61ಎ ತಿದ್ದುಪಡಿಯ ನಂತರ 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ನಾಗರಿಕರಿಗೂ ಮತದಾನ ಮಾಡುವ ಹಕ್ಕು ಇದೆ.

**ಚುನಾವಣಾ ಆಯೋಗದ ಅಧಿಕಾರ ಮತ್ತು ಕಾರ್ಯಗಳು:**

* ಅನುಚ್ಛೇದ 324ರ ಅನ್ವಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ
* ಮತದಾರರ ಪಟ್ಟಿ ತಯಾರಿಸುತ್ತದೆ
* ಚುನಾವಣಾ ಸಾಮಾನ್ಯ ನಿಯಮಗಳನ್ನು ರೂಪಿಸುತ್ತದೆ ಮತ್ತು ಚುನಾವಣಾ ದಿನಾಂಕ, ವೇಳಾಪಟ್ಟಿ ಅಧಿಸೂಚನೆ ಹೊರಡಿಸುತ್ತದೆ
* ನಾಮಪತ್ರ ಪರಿಶೀಲನೆ, ನೀತಿ ಸಂಹಿತೆಯ ನಿರ್ಧಾರ
* ರಾಜಕೀಯ ಪಕ್ಷಗಳಿಗೆ ಗುರುತುಗಳ ಹಂಚಿಕೆ ಮತ್ತು ಮನ್ನಣೆ
* ಸದಸ್ಯರ ಅನರ್ಹತೆಯ ಪ್ರಶ್ನೆ ಉದ್ಭವಿಸಿದಾಗ ಸಂಬಂಧಿಸಿದವರಿಗೆ ಅಭಿಪ್ರಾಯ ನೀಡುತ್ತದೆ
* ನಿರ್ದಿಷ್ಟ ಕಾರಣಗಳಿಗಾಗಿ ಚುನಾವಣೆ ಮುಂದೂಡುವಿಕೆ
* ಚುನಾವಣಾ ವಿವಾದ ವಿಚಾರಣೆಗೆ, ಚುನಾವಣಾ ಅಧಿಕಾರಿಗಳ ನೇಮಕ ಮಾಡುತ್ತದೆ
* ಅಭ್ಯರ್ಥಿಯ ಚುನಾವಣಾ ಖರ್ಚು ವೆಚ್ಚಗಳನ್ನು ಕಾನುನಿನ ಪ್ರಕಾರ ಸಲ್ಲಿಸದಿದ್ದರೆ ಆತನನ್ನು ಅನರ್ಹಗೊಳಿಸುವ ಅಧಿಕಾರವನ್ನು ಚುನಾವಣಾ ಆಯೋಗ ಹೊಂದಿದೆ.

**ಚುನಾವಣಾ ಪ್ರಕ್ರಿಯೆ:**

* ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುತ್ತದೆ
* ಅಧಿಸೂಚನೆ
* ನಾಮಪತ್ರ ಸಲ್ಲಿಕೆಗೆ 8 ದಿನಗಳ ಕಾಲಾವಧಿ
* ಚುನಾವಣಾ ಠೇವಣಿ ಸಲ್ಲಿಕೆ
* ನಾಮಪತ್ರಗಳ ಪರಿವೀಕ್ಷಣೆ
* ನಾಮಪತ್ರ ಹಿಂತೆಗೆದುಕೊಳ್ಳಲು 2 ದಿನಗಳ ಕಾಲಾವಕಾಶ
* ಅಂತಿಮವಾಗಿ ಚುನಾವಣಾಧಿಕಾರಿಯಿಂದ ಅಭ್ಯರ್ಥಿಗಳ ಪಟ್ಟಿ
* ನಾಮಪತ್ರ ಹಿಂತೆಗೆದ ನಂತರ ಪ್ರಚಾರಕ್ಕೆ 20 ದಿನ ಅವಕಾಶ
* 48 ಗಂಟೆ ಮುನ್ನ ಪ್ರಚಾರ ಅಂತ್ಯ
* ಫಲಿತಾಂಶ, ಅಭ್ಯರ್ಥಿ ಘೋಷಣೆ

**ಚುನಾವಣೆ ಮತ್ತು ನ್ಯಾಯಾಲಯ:**

* ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆ ವಿವಾದ ಸುಪ್ರೀಂಕೋರ್ಟಿನಲ್ಲಿ ಮಾತ್ರ ವಿಚಾರಣೆ
* ಚುನಾವಣಾ ಕ್ಷೇತ್ರಗಳ ಸೇವಾ ನಿರ್ಣಯವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲಾರದು
* ಸದನದ ಚುನಾವಣೆಗಳನ್ನು ಪ್ರಶ್ನಿಸಲಾಗದು
* ಒಮ್ಮೆ ಚುನಾವಣಾ ಪ್ರಕ್ರಿಯೆ ಆರಂಭವಾದ ಮೇಲೆ ನ್ಯಾಯಾಲಯ ಹಸ್ತಕ್ಷೇಪ ಮಾಡುವಂತಿಲ್ಲ

**ಚುನಾವಣಾ ಸುಧಾರಣೆಗಳು:**

1947ರಲ್ಲಿ ನ್ಯಾಯಮೂರ್ತಿ ವಿ.ಎಂ. ತಾರ್ಕುಂಡೆ ನೇತೃತ್ವದ ಸಮಿತಿ ಚುನಾವಣೆ ಸುಧಾರಣೆಗಳನ್ನು ಸೂಚಿಸಿತು

* ವಯಸ್ಕ ಮತದಾನವನ್ನು 18ಕ್ಕೆ ಇಳಿಸಿದ್ದು
* 1990 ದಿನೇಶ್ ಗೋಸ್ವಾಮಿ ಸುಧಾರಣೆಗಳು: ಭಾವಚಿತ್ರದ ಗುರುತಿನ ಭೇಟಿ
* 1991ರಲ್ಲಿ ಚುನಾವಣಾ ನೀತಿ ನಿಯಮಗಳ ರಚನೆ
* 1991ರಲ್ಲಿ ವಿದ್ಯುನ್ಮಾನ ಮತ ಯಂತ್ರಗಳ ಬಳಕೆ
* 1951ರಲ್ಲಿ ಪ್ರಜಾಪ್ರಾತಿನಿಧ್ಯ ಕಾಯ್ದೆ ಭ್ರಷ್ಟಾಚಾರವನ್ನು ನೀತಿ ಸಂಹಿತೆಯಲ್ಲಿ ನಿಷೇದ
* ಆಸ್ತಿ ವಿವರ ಸಲ್ಲಿಕೆ
* ನೋಟಾ ಬಳಕೆ ಇತ್ಯಾದಿ ಅಂಶಗಳು.

**ಕೆಲವು ವರ್ಗಗಳಿಗೆ ವಿಶೇಷ ಸಂವಿಧಾನಾತ್ಮಕ ಉಜಪಬಂಧಗಳು:**

* 15(3) ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ಉಪಬಂಧ
* 21(ಎ) ಪ್ರಾಥಮಿಕ ಶಿಕ್ಷಣದ ಮೂಲಭೂತ ಹಕ್ಕು
* 23 ಮತ್ತು 24 ಶೋಷಣೆಯ ವಿರುದ್ದದ ಹಕ್ಕು
* 39 (ಎಫ್) ಬಾಲ ಕಲ್ಯಾಣ
* 51(ಎ)(ಕೆ) ತಂದೆ ತಾಯಿ ಅಥವಾ ಪೋಷಕರು, ಅವರ ಮಕ್ಕಳಿಗೆ ಶಿಕ್ಷಣಾವಕಾಶ ಕಲ್ಪಿಸಬೇಕಾದ ಮೂಲಭೂತ ಕರ್ತವ್ಯ
* 15(4), 29(2) ಎಸ್ಸಿ, ಎಸ್ಟಿ ಸೇರಿದಂತೆ ಹಿಂದುಳಿದ ವರ್ಗಗಳಿಗೆ ಸೇರಿದಂತೆ ವಿಶೇಷ ಉಪಬಂಧ
* 16(4) ಹಿಂದುಳಿದ ವರ್ಗಗಳಿಗೆ ವಿಶೇಷ ಉಪಬಂಧ

* 330 ಎಸ್ಸಿ, ಎಸ್ಟಿಗಳಿಗೆ ಲೋಕಸಭೆಯಲ್ಲಿ ಸ್ಥಾನ ಮೀಸಲಾತಿ
* 332 ಎಸ್ಸಿ, ಎಸ್ಟಿಗಳಿಗೆ ರಾಜ್ಯ ವಿಧಾನಸಭೆಯಲ್ಲಿ ಮೀಸಲಾತಿ
* 338/338(ಎ) ಎಸ್ಸಿ ಮತ್ತು ಎಸ್ಟಿಗಳಿಗಾಗಿ ರಾಷ್ಟ್ರೀಯ ಆಯೋಗ
* 340 ಹಿಂದುಳಿದ ವರ್ಗಗಳಿಗಾಗಿ ರಾಷ್ಟ್ರೀಯ ಆಯೋಗ

## ತುರ್ತು ಪರಿಸ್ಥಿತಿ ಉಪಬಂಧಗಳು

**ರಾಷ್ಟ್ರೀಯ ತುರ್ತು ಪರಿಸ್ಥಿತಿ: (ಅನುಚ್ಛೇದ 352)**

* ಇಡೀ ದೇಶ ಅಥವಾ ಅದರ ಯಾವುದೇ ಭಾಗದಲ್ಲಿ ಘೋಷಣೆ ಕಾರಣಗಳು:

1) ಯುದ್ಧ
2) ಬಾಹ್ಯ ಆಕ್ರಮಣ
3) ಸಶಸ್ತ್ರ ದಂಗೆ

* ಇದನ್ನು ಸಚಿವ ಸಂಪುಟದ ತೀರ್ಮಾನದ ನಂತರ, ನಿರ್ಣಯವನ್ನು ಬರಹದ ಮೂಲಕ ಪಡೆದು ರಾಷ್ಟ್ರಪತಿಯವರಿಂದ ಉದ್ಘೋಷಣೆಯಾಗುತ್ತದೆ
* ಘೋಷಣೆಯ ನಂತರ ಒಂದು ತಿಂಗಳೊಳಗೆ ಸಂಸತ್ತಿನ ಒಪ್ಪಿಗೆ ಪಡೆಯಬೇಕು
* ನಂತರ ಪ್ರತಿ 6 ತಿಂಗಳಿಗೊಮ್ಮೆ ಸಂಸತ್ತಿನ ಅನುಮೋದನೆ ಪಡೆದು ಅನಿರ್ದಿಷ್ಟಾವಧಿಗೆ ಮುಂದುವರೆಸಬಹುದು.

**ಈ ಸಂದರ್ಭದಲ್ಲಿ ರಾಷ್ಟ್ರಪತಿಯವರ ವಿಶೇಷ ಅಧಿಕಾರಗಳು:**

1) ಕಾರ್ಯಾಂಗದ ಅಧಿಕಾರ ಚಲಾಯಿಸುವ ಕುರಿತು ಯಾವ ರಾಜ್ಯಕ್ಕೆ ಆಗಲಿ ನಿರ್ದೇಶನ ನೀಡಬಹುದು
2) ಒಂದು ಬಾರಿಗೆ ಒಂದು ವರ್ಷದಂತೆ ಲೋಕಸಭೆಯ ಅವಧಿ ವಿಸ್ತರಿಸಬಹುದು
3) ಕೇಂದ್ರ ಮತ್ತು ರಾಜ್ಯಗಳ ನಡುವಿನ ಆರ್ಥಿಕ ಸಂಪನ್ಮೂಲ ವಿತರಣೆಯ ಮಾದರಿಯನ್ನು ಬದಲಾಯಿಸಬಹುದು
4) ಅನುಚ್ಛೇದ 20 ಹಾಗೂ 21ನ್ನು ಬಿಟ್ಟು ನಾಗರೀಕ ಮೂಲಭೂತ ಹಕ್ಕುಗಳನ್ನು ಅಮಾನತ್ತಿನಲ್ಲಿ ಇಡಬಹುದು. ಈ ಸಮಯದಲ್ಲಿ ರಾಜ್ಯ ಪಟ್ಟಿಯಲ್ಲಿನ ವಿಷಯಗಳ ಕುರಿತು ಕಾನೂನು ಮಾಡಬಹುದಾದರೂ, ತುರ್ತು ಪರಿಸ್ಥಿತಿಯ 6 ತಿಂಗಳ ನಂತರದಲ್ಲಿ ನಿಷ್ಕ್ರಿಯಗೊಳ್ಳುತ್ತದೆ.

**ರಾಷ್ಟ್ರಪತಿ ಆಡಳಿತ: (ಅನುಚ್ಛೇದ 356 ಸಂವಿಧಾನಾತ್ಮಕ ತುರ್ತು ಪರಿಸ್ಥಿತಿ)**

ಈ ಕೆಳಗಿನ ಸಂದರ್ಭಗಳಲ್ಲಿ ಎಲ್ಲ ರಾಜ್ಯಗಳನ್ನು ರಕ್ಷಿಸುವ ಹೊಣೆಯನ್ನು ಕೇಂದ್ರಕ್ಕೆ ವಹಿಸುತ್ತದೆ.

* ಬಾಹ್ಯ ಆಕ್ರಮಣದ ವಿರುದ್ಧ
* ಆಂತರಿಕ ಗಲಭೆಗಳು
* ರಾಜ್ಯಗಳು ಸಂವಿಧಾನದ ಉಪಬಂಧಗಳಿಗನುಸಾರವಾಗಿ ನಡೆಸಲ್ಪಡುವಂತೆ ರಕ್ಷಿಸುವುದು.

**ಕಾರಣಗಳು:**

* ರಾಜ್ಯದಲ್ಲಿ ಸಂವಿಧಾನಾತ್ಮಕ ವ್ಯವಸ್ಥೆಯ ವೈಫಲ್ಯ (ಅನುಚ್ಛೇದ 356)
* ಒಕ್ಕೂಟದ ನಿರ್ದೇಶನಗಳನ್ನು ಪಾಲಿಸಲು ವಿಫಲ (ಅನುಚ್ಛೇದ 365)
* ಈ ಘೋಷಣೆ ಸಂಸತ್ತಿನಿಂದ 2 ತಿಂಗಳ ಒಳಗೆ ಅಂಗೀಕೃತವಾಗಬೇಕು. ಅಲ್ಲಿಂದ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ. ಗರಿಷ್ಠ 3 ವರ್ಷಗಳವರೆಗೆ ಮುಂದುವರಿಸಬಹುದು.

1) ರಾಷ್ಟ್ರೀಯ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ
2) ಸಾರ್ವತ್ರಿಕ ಚುನಾವಣೆ ನಡೆಸಲು ಸಾಧ್ಯವಿಲ್ಲದಿದ್ದಾಗ, ಇದನ್ನು ಚುನಾವಣಾ ಆಯೋಗ ಧೃಢೀಕರಿಸಬೇಕು.

**ಈ ಸಂದರ್ಭದಲ್ಲಿ ರಾಷ್ಟ್ರಪತಿ ವಿಶೇಷ ಅಧಿಕಾರಗಳು:**

* ಎಲ್ಲ ಅಥವಾ ಭಾಗಶ: ಅಧಿಕಾರವನ್ನು ತಾವೇ ವಹಿಸಿಕೊಳ್ಳಬಹುದು
* ರಾಜ್ಯ ವಿಧಾನ ಮಂಡಲದ ಅಧಿಕಾರಗಳನ್ನು ಸಂಸತ್ತಿನಿಂದ ನಡೆಸಬಹುದು
* ಸಂಚಿತ ನಿಧಿ ವೆಚ್ಚಕ್ಕೆ ಅನುಮತಿ ನೀಡಬಹುದು
* ಸಂಸತ್ತು ಅಧಿವೇಶನದಲ್ಲಿ ಇಲ್ಲದಿರುವಾಗ ರಾಜ್ಯದ ಆಡಳಿತಕ್ಕಾಗಿ ಆಧ್ಯಾದೇಶಗಳನ್ನು ಹೊರಡಿಸಬಹುದು.
* ಮೂಲಭೂತ ಹಕ್ಕುಗಳನ್ನು ಅಮಾನತ್ತಿನಲ್ಲಿಡುವಂತಿಲ್ಲ
* ಆಯಾ ರಾಜ್ಯದ ಹೈಕೋರ್ಟ್ ಅಧಿಕಾರ ವ್ಯಾಪ್ತಿಯಲ್ಲಿ ಹಸ್ತಕ್ಷೇಪ ವಹಿಸುವಂತಿಲ್ಲ.

**ಆರ್ಥಿಕ ತುರ್ತು ಪರಿಸ್ಥಿತಿ (ಅನುಚ್ಛೇದ 3.60)**

ದೇಶದಲ್ಲಿ ಅಥವಾ ಯಾವುದೇ ಭಾಗದಲ್ಲಿ ಆರ್ಥಿಕ ಸ್ಥಿರತೆ ಅಥವಾ ಪತ್ತಿಗೆ ಭೀತಿಯುಂಟಾದಾಗ ಇದನ್ನು ಹೇರಬಹುದು. ಇಂತಹ ಘೋಷಣೆ 2 ತಿಂಗಳೊಳಗೆ ಸಂಸತ್ತಿನ ಅಂಗೀಕಾರ ಪಡೆಯಬೇಕು.

**ಈ ಪರಿಸ್ಥಿತಿಯಲ್ಲಿ ರಾಷ್ಟ್ರಪತಿಯವರ ವಿಶೇಷ ಅಧಿಕಾರಗಳು:**

* ರಾಜ್ಯಗಳು ಹಣಕಾಸಿನ ಔಚಿತ್ಯ ಪಾಲಿಸುವಂತೆ ನಿರ್ದೇಶನ
* ಎಲ್ಲಾ ಅಥವಾ ಯಾವುದೇ ವರ್ಗದ ವ್ಯಕ್ತಿಗಳ ವೇತನ, ಭತ್ಯೆ ಕಡಿತಗೊಳಿಸಬಹುದು
* ರಾಜ್ಯಗಳ ಎಲ್ಲ ಧನ ವಿಧೇಯಗಳನ್ನು ಹಣಕಾಸು ವಿಧೇಯಕಗಳನ್ನು ತಮ್ಮ ಪರ್ಯಾಯಲೋಚನೆಗಾಗಿ ಕಾಯ್ದಿರಿಸುವಂತೆ ಮಾಡಬಹುದು
* ಸುಪ್ರಿಂಕೋರ್ಟ್ ಮತ್ತು ಹೈಕೋರ್ಟ್ ಸೇರಿದಂತೆ ಒಕ್ಕೂಟದ ವ್ಯವಹಾರಗಳ ಸಂಬಂಧ ಸೇವೆ ಮಾಡುತ್ತಿರುವ ಎಲ್ಲ ಅಥವಾ ಯಾವುದೇ ವರ್ಗದ ವೇತನ ಮತ್ತು ಭತ್ಯೆಗಳನ್ನು ಕಡಿಮೆ ಮಾಡಬಹುದು
* ಸಂಸತ್ತು ಈ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಮಾಡಿದ ಕಾನೂನುಗಳು, ತುರ್ತು ಪರಿಸ್ಥಿತಿ ಹಿಂತೆಗೆದುಕೊಳ್ಳಲ್ಪಟ್ಟ ನಂತರ 6 ತಿಂಗಳವರೆಗೆ ಜೀವಂತವಾಗಿರುತ್ತದೆ.

## ಪ್ರಮುಖ ಸಂವಿಧಾನದ ತಿದ್ದುಪಡಿಗಳು

* 1ನೇ ತಿದ್ದುಪಡಿ 1951 ಭೂ ಸುಧಾರಣೆ
* 24ನೇ ತಿದ್ದುಪಡಿ 1971: ಸಂವಿಧಾನ ತಿದ್ದುಪಡಿಗೆ ರಾಷ್ಟ್ರಪತಿ ಸಮ್ಮತಿ ಕಡ್ಡಾಯ
* 31ನೇ ತಿದ್ದುಪಡಿ 1993: ಲೋಕಸಭಾ ಪ್ರತಿನಿಧಿತ್ವವನ್ನು 525ರಿಂದ 545ಕ್ಕೆ ಹೆಚ್ಚಳ ಮಾಡಲಾಯಿತು
* 42ನೇ ತಿದ್ದುಪಡಿ 1976: ಚಿಕ್ಕ ಸಂವಿಧಾನ ಎಂದು ಕರೆಯುತ್ತಾರೆ. ತಿದ್ದುಪಡಿಯು ಸ್ವರಣ್ ಸಿಂಗ್ ಸಮಿತಿಯ ಶಿಫಾರಸ್ಸುಗಳಿಂದ ಕೂಡಿದೆ. ಈ ತಿದ್ದುಪಡಿಯ ಅಂಶಗಳು ಕೆಳಗಿನಂತಿವೆ.

1) ಪ್ರಸ್ತಾವಣೆಗೆ ಸಮಾಜವಾದಿ, ಸರ್ವಧರ್ಮ, ಸಮಭಾವದ ಪದ ಸೇರಿಸಲಾಗಿದೆ.
2) ರಾಷ್ಟ್ರಪತಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಮಂತ್ರಿಮಂಡಲದ ಸಲಹೆಗೆ ಅನುಸಾರವಾಗಿ ನಡೆಯಬೇಕು.
3) ನ್ಯಾಯಾಂಗ ಅಧಿಕಾರಗಳು ಮೊಟಕುಗೊಳಿಸಲಾಯಿತು. ಕೇಂದ್ರ ಶಾಸನಗಳ ಸಿಂಧುತ್ವವನ್ನು ಸುಪ್ರೀಂಕೋರ್ಟ್‌ನಲ್ಲಿ ಮಾತ್ರ ಪ್ರಶ್ನಿಸಲು ಅವಕಾಶ.
4) ಶಿಕ್ಷಣ, ಅರಣ್ಯ, ವನ್ಯ ಪ್ರಾಣಿಗಳ ಮತ್ತು ವನ್ಯ ಪಕ್ಷಿಗಳ ಸಂರಕ್ಷಣೆ, ತೂಕ ಮತ್ತು ಅಳತೆ ರಾಜ್ಯ ಪಟ್ಟಿಯಿಂದ ಸಮವರ್ತಿಪಟ್ಟಿಗೆ ಸೇರಿಸಲಾಯಿತು.
5) ತುರ್ತು ಪರಿಸ್ಥಿತಿಯನ್ನು ದೇಶದ ಯಾವುದೇ ಭಾಗದಲ್ಲಿಯಾದರೂ ಹೊರಡಿಸಬಹುದು.
6) ತುರ್ತು ಪರಿಸ್ಥಿತಿಗೆ ಸಂಸತ್ತಿನ ಅನುಮೋದನೆಗೆ 1 ವರ್ಷ ಅವಕಾಶ.

7) ವಿಧಿ: 31(ಸ) ಸೇರಿಕೆ: ರಾಜ್ಯನಿರ್ದೇಶಕ ತತ್ವಗಳಿಗೆ ಆದ್ಯತೆ.

8) ಭಾಗ 4ಕ್ಕೆ, 39(ಎ), 43(ಎ), 48(ಎ) ಅನುಚ್ಛೇದಗಳ ಸೇರ್ಪಡೆ.

9) ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು.

**44ನೇ ತಿದ್ದುಪಡಿ 1978:**

* ಸ್ವತ್ತಿನ ಹಕ್ಕನ್ನು 300ಎ ಅಡಿಯಲ್ಲಿ ಸಆಧಾರಣ ಕಾನೂನು ಸಮ್ಮತ ಹಕ್ಕಾಗಿ ಮಾಡಲಾಯಿತು.
* 42ನೇಯ ತಿದ್ದುಪಡಿಯಿಂದಾದ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳ ಅವಧಿಯನ್ನು 6 ವರ್ಷಗಳಿಂದ ಪುನ: 5 ವರ್ಷಗಳಿಗೆ ಇಳಿಸಲಾಯಿತು.
* ಸದಸ್ಯತ್ವ ಅನರ್ಹತೆಗೆ ಚುನಾವಣಾ ಆಯೋಗದ ಅಭಿಪ್ರಾಯಕ್ಕೆ ಮನ್ನಣೆ.
* ಆಂತರಿಕ ಗಲಭೆ ಉಂಟಾದಾಗ ಸಶಸ್ತ್ರ ದಂಗೆ ಎಂಬ ಪದ ಬಳಕೆ.
* ರಾಷ್ಟ್ರೀಯ ತುರ್ತು ಪರಿಸ್ಥಿತಿಯು ಸಂಸತ್ತಿನ ಅನುಮೋದನೆಯ ನಂತರ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.
* ಅನುಚ್ಛೇದ 359ರ ಪ್ರಕಾರ ಅನುಚ್ಛೇದ 20 ಮತ್ತು 21 ಅಮಾನತುಗೊಳಿಸಲು ಬರುವುದಿಲ್ಲ.

**ತಿದ್ದುಪಡಿ 52, 1985:**

* 10ನೇ ಅನುಸೂಚಿ, ಪಕ್ಷಾಂತರ ನಿಷೇಧ ಕಾಯಿದೆ ಜಾರಿಗೆ.

**ತಿದ್ದುಪಡಿ 61, 1989:**

* ಮತದಾನದ ಹಕ್ಕನ್ನು 21ರಿಂದ 18 ವರ್ಷಕ್ಕೆ ಇಳಿಸಲಾಯಿತು

**ತಿದ್ದುಪಡಿ 73, 1993:**

* ಪಂಚಾಯಿತಿಗೆ ಸಂಬಂಧಿತ 9ನೇ ಭಾಗ ಸೇರ್ಪಡೆ (11ನೇ ಅನುಸೂಚಿ)

**ತಿದ್ದುಪಡಿ 74, 1993:**

* ಪೌರಸಭೆಗಳಿಗೆ ಭಾಗ 9ಎ, 12ನೇ ಅನುಸೂಚಿ ಸೇರ್ಪಡೆ
* 86ನೇ ತಿದ್ದುಪಡಿ, 2002: ಶಿಕ್ಷಣ ಹಕ್ಕು ವಿಧಿ 21ಎ ಮತ್ತು 51(ಎ) ಕೆ ಸೇರಿಸಲಾಯಿತು
* 91ನೇ ತಿದ್ದುಪಡಿ, 2003: ಪಕ್ಷಾಂತರ ನಿಷೇದ ಕಾಯಿದೆ ಬಲಪಡಿಸಿತು. ಈ ಮೂಲಕ ಮಂತ್ರಿಮಂಡಲದ ಗಾತ್ರ 15%ಕ್ಕೆ ಸೀಮಿತವಾಯಿತು.
* ತಿದ್ದುಪಡಿ 92, 2003: ಬೋಡೋ, ದೋಗ್ರಿ, ಮೈಥಲಿ, ಸಂತಾಲಿ ಎಂಬ 4 ಭಾಷೆಗಳನ್ನು ಅನುಸೂಚಿ 8ಕ್ಕೆ ಸೇರಿಸಲಾಯಿತು.
* ತಿದ್ದುಪಡಿ 93, 2005: ಎಸ್ಸಿ, ಎಸ್ಟಿಗೆ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ.
* ತಿದ್ದುಪಡಿ 94, 2006: ಜಾರ್ಖಂಡ್ ಮತ್ತು ಛತ್ತೀಸ್‌ಘಡ್‌ಗೆ ಪ್ರತ್ಯೇಕ ಬುಡಕಟ್ಟು ಮಂತ್ರಿಯನ್ನು ನೇಮಿಸಲು ಅವಕಾಶ.
* ತಿದ್ದುಪಡಿ 95, 2010: ಎಸ್ಸಿ, ಎಸ್ಟಿಗೆ ಇರುವ ಮೀಸಲಾತಿಯನ್ನು 60ರಿಂದ 70 ವರ್ಷಕ್ಕೆ ಮೀಸಲಾತಿ (2020ರವರೆಗೆ)
* ತಿದ್ದುಪಡಿ 96, 2011: ಒರಿಯಾ ಭಾಷೆಯನ್ನು ಒಡಿಯಾ ಆಗಿ ಬದಲಾವಣೆ.
* ತಿದ್ದುಪಡಿ 97, 2012: ವಿಧಿ 19(1) ಸಿ ಸಹಕಾರಿ ಸಂಘಗಳಿಗೆ ಪ್ರೋತ್ಸಾಹ ಮತ್ತು ಭಾಗ 93 ಸೇರ್ಪಡೆ.
* ತಿದ್ದುಪಡಿ 98, 2013: ಅನುಚ್ಛೇದ 371 ಜೆ, ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ.
* ತಿದ್ದುಪಡಿ 99, 2015: ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ನ್ಯಾಯಾಧೀಶರ ನೇಮಕಾತಿಗೆ ಅವಕಾಶ. ಆದರೆ ಪ್ರಸ್ತುತ ಈ ತಿದ್ದುಪಡಿಯನ್ನು ಸರ್ವೋಚ್ಚ ನ್ಯಾಯಾಲಯ ಇದನ್ನು ರದ್ದು ಮಾಡಿ, ಈ ಹಿಂದಿನ ಕೋಲಿಜಿಯಂ ಪದ್ಧತಿಯನ್ನು ಮುಂದುವರೆಸಿದೆ.
* ತಿದ್ದುಪಡಿ 100, 2015: ಭಾರತ ಮತ್ತ ಬಾಂಗ್ಲಾದೇಶ ನಡುವೆ ಭೂ ಗಡಿ ಒಪ್ಪಂದ.

**ಭಾರತದ ಸಂವಿಧಾನಕ್ಕೆ ಸಂಬಂಧಿಸಿದಂತೆ ಪ್ರಮುಖ ಪ್ರಕರಣಗಳು:**

* ಕೇಶವಾನಂತ ಭಾರತಿ ವಿರುದ್ಧ ಕೇರಳ ರಾಜ್ಯ (1973)

1) ಈ ಮೊಕದ್ದಮೆಯಲ್ಲಿ 24ನೇಯ, 25ನೇಯ, 29ನೇಯ ತಿದ್ದುಪಡಿಗಳ ಸಿಂಧುತ್ವವನ್ನು ಪ್ರಶ್ನಿಸಲಾಯಿತು.
2) ಇದು ಮೂಲಭೂತ ಹಕ್ಕುಗಳ ತಿದ್ದುಪಡಿಗೆ ಸಂಬಂಧಿಸಿದ ಪ್ರಕರಣ.
3) 13 ಜನ ನ್ಯಾಯಾಧೀಶರು ಈ ಪ್ರಕರಣ ವಿಚಾರಣೆ ನಡೆಸಿದರು.
4) 7 ಜನ ಬಹುಮತದ ಆಧಾರದ ತೀರ್ಪು ಇದಾಗಿದೆ.
5) ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಸಂಸತ್ತಿಗೆ ಮೂಲಭೂತ ಹಕ್ಕುಗಳು ಸೇರಿದಂತೆ, ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ ಇದೆ ಎಂದಿದೆ.
6) ಈ ಅಧಿಕಾರ ಚಲಾಯಿಸುವಾಗ ಸಂವಿಧಾನದ ಮೂಲ ರಚನೆಗೆ ಅಥವಾ ಚೌಕಟ್ಟಿಗೆ ಧಕ್ಕೆ ಬರದಂತೆ ತಿದ್ದುಪಡಿ ಮಾಡಬಹುದು.

* ಮೇನಕಾಗಾಂಧಿ ವಿರುದ್ಧ ಭಾರತದ ಒಕ್ಕೂಟ (1978)
* ಈ ಪ್ರಕರಣದಲ್ಲಿ ಅರ್ಜಿದಾರರ ಪಾಸ್‌ಪೋರ್ಟನ್ನು ವಿಚಾರಣೆಯಿಲ್ಲದೆ ವಶಪಡಿಸಿಕೊಳ್ಳಲಾಗಿತ್ತು.
* ಯಾರನ್ನು ವಿಚಾರಣೆಯಿಲ್ಲದೆ ಶಿಕ್ಷಿಸಬಾರದು. ಇತರ ಪಕ್ಷದ ಹೇಳಿಕೆಯನ್ನು ಕೇಳು, ಎಂಬ ಸ್ವಾಭಾವಿಕ ನ್ಯಾಯದ ನಿಯಮದ ಭಾಗವಾಗಿದೆ.
* ಅನುಚ್ಛೇದ 14ರ ಖಾತರಿ ಪಡಿಸುತ್ತದೆ.
* ಸುನಿಲ್‌ಭಾತ್ರಾ ವಿರುದ್ಧ ದೆಹಲಿ ಆಡಳಿತ (1980).
* ತಿಹಾರ್ ಜೈಲಿನಲ್ಲಿನ ಖೈದಿಯ ಮೇಲಿನ ಪಾಶವೀಯ ಹಲ್ಲೆಗೆ ಸಂಬಂಧಿಸಿದ ಪ್ರಕರಣ.
* ಅನುಚ್ಛೇದ 21ರ ರಕ್ಷಣೆಯನ್ನು ಕುರಿತಾದ ತೀರ್ಪು.
* ಹುಸ್ಸೈನಾರಾ ಖಾಟೂನ್ ವಿರುದ್ಧ ಗೃಹ ಕಾರ್ಯದರ್ಶಿ, ಬಿಹಾರ (1979).
* ಬಿಹಾರದ ಜೈಲಿನಲ್ಲಿ ವಿಚಾರಣೆಗಾಗಿ ವರ್ಷಗಟ್ಟಲೆ ಕಾಯ್ದ ವಿಚಾರಣಾದೀನ ಖೈದಿಗಳಿಗೆ ಸಂಬಂಧಿಸಿದ ಪ್ರಕರಣ.
* ಅನುಚ್ಛೇದ 21ರ ರಕ್ಷಣೆಯನ್ನು ಕುರಿತಾದ ತೀರ್ಪು.
* ಏರ್ ಇಂಡಿಯಾ ವಿರುದ್ಧ ನರ್ಗೇಶ್ ಮಿರ್ಜಾ (1981).
* 35 ವರ್ಷಗಳ ವಯಸ್ಸಿಗೆ ಅಥವಾ ಸೇವೆಯ ನಾಲ್ಕು ವರ್ಷದೊಳಗೆ ವಿವಾಹವಾಗಬಾರದು ಮತ್ತು ಗರ್ಭಿಣಿಯಾದರೆ, ಸೇವೆಯಿಂದ ನಿವೃತ್ತಗೊಳಿಸುವ ಕಾನೂನಿನ ಕುರಿತು ಸರ್ಜಿ ಸಲ್ಲಿಸಲಾಗುತ್ತದೆ.
* ಇದು ಅನುಚ್ಛೇದ 14ರ ಉಲ್ಲಂಘನೆಯೆಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ.
* ಇಂದಿರಾ ಸ್ವಹಾನಿ ವಿರುದ್ಧ ಭಾರತದ ಒಕ್ಕೂಟ (1993)–ಮಂಡಲ್ ಆಯೋಗ ಪ್ರಕರಣ.
* ಹಿಂದುಳಿದ ವರ್ಗಗಳಿಗೆ ಮೀಸಲಾತಿಗೆ ಸಂಬಂಧಿಸಿದ ಪ್ರಕರಣ.
* ಒಟ್ಟಾರೆ ಮೀಸಲಾತಿ ಶೇ.50ನ್ನು ಮೀರಬಾರದು.
* ಕೆನೆ ಪದರು ದಾಟಿದವರು ಪದೇ ಪದೇ ಮೀಸಲಾತಿಯ ಉಪಯೋಗ ಪಡೆಯುವಂತಿಲ್ಲ.
* ಬಿಜೋ ಇಮ್ಯಾನುಯಲ್ ವಿರುದ್ಧ ಕೇರಳ ರಾಜ್ಯ (1986)
* ಜಿಹೋವಾನ ಸಾಕ್ಷಿಗಳಿಗೆ ಸೇರಿದ ಮೂವರು ಮಕ್ಕಳು ರಾಷ್ಟ್ರಗೀತೆ ಹಾಡಲು ನಿರಾಕರಿಸಿದ ಪ್ರಕರಣ.
* ಇಲ್ಲಿ ಮಕ್ಕಳು ಗೀತೆಗೆ ಎದ್ದು ನಿಂತು ಗೌರವ ಸಲ್ಲಿಸಿದ್ದರು. ಆದರೆ ತಮ್ಮ ಧರ್ಮಕ್ಕೆ ವಿರುದ್ಧವಾದ ಗೀತೆ ಎಂದು ಅದನ್ನು ಹಾಡಿರಲಿಲ್ಲ.
* ನ್ಯಾಯಾಲಯ, ಅವರು ಅನುಚ್ಛೇದ 51(ಅ) ನ ಕರ್ತವ್ಯ ಉಲ್ಲಂಘಿಸಿಲ್ಲವೆಂದು ತೀರ್ಪು ನೀಡಿತು.

* ಎಂ.ಸಿ.ಮೆಹ್ತಾ ವಿ.ಭಾರತೀಯ ಒಕ್ಕೂಟ (1987).
* ಒಂದು ಕಂಪನಿ ಅಪಾಯಕಾರಿ ರಾಸಾಯನಿಕಗಳನ್ನು ಮತ್ತು ಅನಿಲಗಳನ್ನು ಉತ್ಪಾದಿಸುತ್ತಿದೆ. ಅದರಿಂದ ಕ್ಲೋರಿನ್ ಸೋರಿಕೆಯಾಗಿದೆ.
* ಪರಿಹಾರ ನೀಡದೆ ನಿರ್ಲಕ್ಷ ತೋರಿದ ಕಂಪನಿಗೆ, ಪರಿಹಾರ ನೀಡುವ ಆದೇಶ ಬಂತು.
* ಮೋಹಿನಿ ಜೈನ್ ವಿ.ಕರ್ನಾಟಕ ರಾಜ್ಯ.
* ಶಿಕ್ಷಣ ಸಂಸ್ಥೆಗಳ ಕ್ಯಾಪಿಟೇಷನ್‌ನ ಅತಿಯಾದ ಶುಲ್ಕ ಸಂಗ್ರಹಣೆಗೆ ಸಂಬಂಧಿಸಿದ ಪ್ರಕರಣ.
* ಅನುಚ್ಛೇದ 14 ಮತ್ತು 21 ರ ಉಲ್ಲಂಘನೆ ಎಂಬ ತೀರ್ಪು.
* ಕಾರಣ ಹೊರ ರಾಜ್ಯದವರಿಗೆ ಹೆಚ್ಚಿನ ಫೀ, ವಿಧಿಸಲಾಗಿತ್ತು. ಆದರೆ ಈ ತೀರ್ಪು ಮುಂದಿನ ಪ್ರಕರಣದಲ್ಲಿ ಬದಲಾಯಿತು.
* ಉನ್ನಿಕೃಷ್ಣನ್ ವಿ. ಆಂಧ್ರಪ್ರದೇಶ ರಾಜ್ಯ (1993).

1) ಉಚಿತ ಶಿಕ್ಷಣ ಕೇವಲ 14 ವರ್ಷಗಳವರೆಗೆ ಮಾತ್ರ.
2) ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ವ್ಯಾಪಾರ ನಡೆಸುವಂತಿಲ್ಲ.

* ಬಂಧಮುಕ್ತಿ ಮೋರ್ಚಾ ವಿ. ಭಾರತದ ಒಕ್ಕೂಟ (1984).
  – ಹರಿಯಾಣದ ಗಣಿಗಳಲ್ಲಿನ ಜೀತದಾಳುಗಳಿಗೆ ಸಂಬಂಧಿಸಿದ ಪ್ರಕರಣ.
  – ಅನುಚ್ಛೇದ 21 ಮತ್ತು 23ಕ್ಕೆ ಸಂಬಂಧಿಸಿದ್ದು.
* ಚರಣ್‌ಲಾಲ್ ಸಾಹು ವಿ. ಭಾರತದ ಒಕ್ಕೂಟ (1990)
  – ಭೂಪಾಲ್ ಅನಿಲ ದುರಂತದ ಪರಿಣಾಮದ ಪರಿಹಾರ ವಿತರಣೆಗೆ ಸಂಬಂಧಿಸಿದ ಪ್ರಕರಣ.
  – ಅನುಚ್ಛೇದ ಸಾಬೀತು.

**ಸಂವಿಧಾನದ ಪರಾಮರ್ಶೆ:**

ಮೂಲಭೂತ ಕಾನೂನು ಮತ್ತು ಉದ್ದೇಶಗಳನ್ನು ಮುಂದಿನ ಜನಾಂಗಕ್ಕೆ ಕಟ್ಟಿ ಹಾಕುವ ಹಕ್ಕು ಯಾವ ಜನಾಂಗಕ್ಕೂ ಇಲ್ಲ ಎಂದು ನಮ್ಮ ಪ್ರಾಚೀನ ನ್ಯಾಯ ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಒಂದು ಕಾಲದ ಸಮಾಜಕ್ಕೂ ಮತ್ತೊಂದು ಕಾಲದ ಸಮಾಜಕ್ಕೂ, ಒಂದು ಪೀಳಿಗೆಗೂ, ಮತ್ತೊಂದು ಪೀಳಿಗೆಗೂ ಬಹಳಷ್ಟು ವ್ಯತ್ಯಾಸಗಳನ್ನು ಗುರುತಿಸಬಹುದು ಎಂದು ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಅಭಿಪ್ರಾಯ ಪಟ್ಟಿದೆ.

ಬೆಳೆಯುತ್ತಿರುವ ಸಮಾಜಕ್ಕೆ ಹೊಸ ಪೀಳಿಗೆಯ ಅವಶ್ಯಕತೆಗಳನ್ನು ಪೂರೈಸಲು ಸಂವಿಧಾನವನ್ನು ತಿದ್ದುಪಡಿ ಮಾಡಬೇಕೆಂಬುದನ್ನು ಯಾವಾಗಲೋ ಗುರುತಿಸಲಾಗಿದೆ.

ನೆಹರು ಸ್ವತಂತ್ರ್ಯ ಭಾರತ ಪ್ರಬಲವಾದ ರಾಷ್ಟ್ರವಾಗಿ ಹೊರಹೊಮ್ಮುತ್ತದೆ. ಅದು ಏನು ಮಾಡುತ್ತದೆ, ಏನು ಮಾಡುವುದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಅದು ತಲೆ ಬಾಗಲು ಮಾತ್ರ ನಾನು ಒಪ್ಪುವುದಿಲ್ಲ. ಮುಂದಿನ ಜನಾಂಗವನ್ನು ಈ ಸದನ ತನ್ನ ಅಭಿಪ್ರಾಯಗಳಿಂದ ನಿಯಂತ್ರಿಸಲಾಗದು.

ಕಾಲದ ಪರೀಕ್ಷೆಗಳನ್ನು ನಮ್ಮ ಸಂವಿಧಾನ ಗೆದ್ದಿದೆ. ಅತ್ಯಂತ ಒತ್ತಡದ ನಡುವೆಯೂ, ಸಂವಿಧಾನ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿದೆ.

ಕಲ್ಯಾಣ ಸಮಾಜವನ್ನು ನಿರ್ಮಿಸಲು ಭಾರತ ಪ್ರಯತ್ನಿಸುತ್ತಿದೆ. ಈ ಗುರಿಯತ್ತ ರಾಷ್ಟ್ರದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಶ್ರಮಿಸುತ್ತಿದೆ. ಸಾಮಾಜಿಕ ಮತ್ತು ಆರ್ಥಿಕ ಗುರಿಗಳನ್ನು ಮುಟ್ಟಲು ರಾಷ್ಟ್ರವು ಕಲ್ಯಾಣಾರ್ಥಕತೆಯಿಂದ ಮಾರುಕಟ್ಟೆ ಆರ್ಥಿಕತೆಗೆ ಮಾರ್ಪಾಡು ಮಾಡುವಾಗ ಹಲವಾರು ಬದಲಾವಣೆಗಳನ್ನು ರಾಷ್ಟ್ರ ಕಾಣುತ್ತಿದೆ.

ಮುಕ್ತ ಆರ್ಥಿಕತೆಯೆಡೆಗೆ ಭಾರತ ಮುನ್ನಡೆಯುತ್ತಿದೆ. ಜಗತ್ತು ಹಳ್ಳಿಯಾಗುತ್ತಿದೆ. ಭಾರತದ ಆರ್ಥಿಕ ನೋಟದಲ್ಲಿ ಬದಲಾಗುತ್ತಿರುವ ತಾಂತ್ರಿಕತೆ ಮತ್ತು ಸಮೂಹ ಮಾಧ್ಯಮಗಳ ಹೊಸ ವ್ಯವಸ್ಥೆ ಸೃಷ್ಟಿಸುತ್ತಿದೆ.

ಈ ಮಧ್ಯೆ ಸ್ವರ್ಣಸಿಂಗ್ ಆಯೋಗವು (1976) ದೊಡ್ಡ ರೀತಿಯಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡುವ ಪ್ರಯತ್ನ ಮಾಡಿತು. ನಂತರ ಕೇಂದ್ರ ರಾಜ್ಯಗಳ ಸಂಬಂಧವನ್ನು ಮರುಪರಿಶೀಲನೆ ಪಡಿಸಲು 1983ರಲ್ಲಿ ಪ್ರಯತ್ನ ಮಾಡಲಾಯಿತು. ಈ ಕೆಲಸಕ್ಕಾಗಿ ನ್ಯಾಯಮೂರ್ತಿ ಆರ್.ಎಸ್.ಸರ್ಕಾರಿಯಾ ನೇತೃತ್ವದಲ್ಲಿ ಒಂದು ಆಯೋಗ ರಚಿಸಲಾಯಿತು. ಮುಂದೆ ಫೆಬ್ರವರಿ 23, 2000ರಂದು ಭಾರತದ ರಾಷ್ಟ್ರಪತಿಯವರು ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಶ್ರೀ.ಎಂ.ಎನ್.ವೆಂಕಟಾಚಲಯ್ಯ ಅವರನ್ನು ಆಯೋಗದ ಮುಖ್ಯಸ್ಥರನ್ನಾಗಿ ಮತ್ತು ಕೆಳಗಿರುವ ವ್ಯಕ್ತಿಗಳನ್ನು ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಿದರು.

* ನ್ಯಾಯಮೂರ್ತಿ ಆರ್.ಎಸ್.ಸರ್ಕಾರಿಯಾ
* ನ್ಯಾಯಮೂರ್ತಿ ಕೊಟ್ಟಪಲ್ಲಿ ಪುನ್ನಯ್ಯ
* ನ್ಯಾಯಮೂರ್ತಿ ಬಿ.ಪಿ.ಜೀವನ ರೆಡ್ಡಿ
* ಶ್ರೀ ಪಿ.ಎ. ಸಂಗ್ಮಾ
* ಶ್ರೀ ಸೊಲಿ ಸರಾಬ್ಜಿ. ಮುಂತಾದ ಒಟ್ಟು 10 ಜನ ಸದಸ್ಯರು

ಕೆಳಗಿನ ವಿಷಯಗಳ ಕುರಿತು ಈ ಆಯೋಗ ಪರಾಮರ್ಶಿಸಿ ವರದಿ ನೀಡಿತು.

* ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಬಲಪಡಿಸುವುದು
* ಚುನಾವಣಾ ಸುಧಾರಣೆಗಳು, ರಾಜಕೀಯ ವ್ಯವಸ್ಥೆಯ ಗುಣಮಟ್ಟ ಹೆಚ್ಚಿಸುವಿಕೆ
* ಸಾಕ್ಷರತೆಯ ಬೆಳವಣಿಗೆ
* ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಸುಧಾರಣೆ
* ಮೂಲಭೂತ ಹಕ್ಕುಗಳ ವಿಸ್ತರಣೆ
* ಆಡಳಿತಾತ್ಮಕ ವ್ಯವಸ್ಥೆ ಮತ್ತು ಸಾರ್ವಜನಿಕ ಜೀವನದ ಗುಣಮಟ್ಟ
* ರಾಜ್ಯ ಭಂಡಾರದ ಶಾಸನ ಸಮ್ಮತವಾದ ಹಿಡಿತ ಮತ್ತು ಹಣಕಾಸಿನ ನೀತಿಗಳು ಸಾರ್ವಜನಿಕ ಲೆಕ್ಕಪತ್ರ ಅಂಗರಚನೆ.
* ವಿಕೇಂದ್ರೀಕರಣ ಮತ್ತು ಹಸ್ತಾಂತರ
* ನಿರ್ದೇಶಕ ತತ್ತ್ವಗಳನ್ನು ನೆರವೇರಿಸುವುದು
* ಆಡಳಿತ ವ್ಯವಸ್ಥೆ ಮತ್ತು ಸಾರ್ವಜನಿಕ ಜೀವನದ ಗುಣವಮಟ್ಟ.

## ಮಾನವ ಹಕ್ಕುಗಳು:

ಮಾನವ ಬುದ್ಧಿಜೀವಿ. ಆಲೋಚನಾಶಕ್ತಿ ಉಳ್ಳವನು ಅಂತೆಯೇ ಪ್ರತಿಯೊಬ್ಬ ಮನುಷ್ಯನಾಗಿ ಹುಟ್ಟಿದ್ದಕ್ಕಾಗಿ ಕೆಲವು ಮೂಲಭೂತ ಹಕ್ಕುಗಳನ್ನು ಹೊಂದಿರುತ್ತಾನೆ. ಅವುಗಳನ್ನು ನಾವು ಮಾನವ ಹಕ್ಕುಗಳು ಎಂದು ಕರೆಯುತ್ತೇವೆ.

ಆತನ ಅಸ್ತಿತ್ವದಿಂದಲೇ ಈ ಹಕ್ಕುಗಳು ಬಂದಿವೆ. ಮಾನವ ಹಕ್ಕು ಹಾಗೂ ಶಾಂತಿ ಮಾನವ ಜೀವನದ ಅವಿಭಾಜ್ಯ ಅಂಶಗಳು. ಮಾನವ ಹಕ್ಕುಗಳ ರಕ್ಷಣೆ ಇಲ್ಲವೇ, ನಿರಂತರ ಆರ್ಥಿಕ, ಸಾಮಾಜಿಕ ಹಾಗೂ ಬೌದ್ಧಿಕ ಬೆಳವಣಿಗೆ ಅಸಾಧ್ಯ.

ಮಾನವ ಹಕ್ಕುಗಳು ಹುಟ್ಟಿನಿಂದ ಬಂದ ಹಕ್ಕುಗಳಾಗಿರುವುದರಿಂದ ಪ್ರತಿಯೊಬ್ಬ ವ್ಯಕ್ತಿಗೂ ಹುಟ್ಟಿನಿಂದ ಬಂದ ಹಕ್ಕು, ಧರ್ಮ, ಜನಾಂಗಗಳ ಭೇದವಿಲ್ಲದೆ ಅಡಕವಾಗಿದೆ. ಈ ಹಕ್ಕುಗಳು ಮಾನವನ ಉನ್ನತಿಗೆ ಸಹಾಯಕವಾಗಿದೆ.

## ಮಾನವ ಹಕ್ಕುಗಳ ವಿಧಗಳು-2

1) ರಾಜಕೀಯ ಮತ್ತು ನಾಗರಿಕ ಹಕ್ಕುಗಳು
2) ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು.

**ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ 1948:**

ಮಾನವ ಜನಾಂಗದ ಸದಸ್ಯರ ಆಂತರಿಕ ಘನತೆ ಸಮಾನತೆ ಮತ್ತು ಕಸಿದುಕೊಳ್ಳಲಾರದ ಹಕ್ಕುಗಳನ್ನು ಗೌರವಿಸುವುದು ಜಗತ್ತಿನ ಶಾಂತಿ, ಸ್ವಾತಂತ್ರ್ಯ ಮತ್ತು ನ್ಯಾಯಗಳನ್ನು ಉಳಿಸುವ ಆಧಾರವಾಗಿದೆ.

**ಮಾನವ ಹಕ್ಕುಗಳ ಅಭಿವೃದ್ದಿಗೆ ಶಾಸನಗಳು:**

1992 ಮೇ 14ರಂದು ಮಾನವ ಹಕ್ಕುಗಳು ಆಯೋಗದ ಮಸೂದೆಯು ಲೋಕಸಭೆಯಲ್ಲಿ ಮಂಡಿಸಲ್ಪಟ್ಟಿತು. ಆಯೋಗದ ಅವಶ್ಯಕತೆ ಜರೂರಾಗಿದ್ದರಿಂದ ರಾಷ್ಟ್ರಪತಿಯ 1993 ಸೆಪ್ಟೆಂಬರ್ 23ರಂದು ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗ ರಚಿಸಲು ಸುಗ್ರೀವಾಜ್ಞೆಯನ್ನು ಹೊರಡಿಸಿದರು. ಈ ಮಸೂದೆ ರಾಷ್ಟ್ರಪತಿಯವರ ಅನುಮೋದನೆಯನ್ನು ಜನವರಿ 8, 1994ರಲ್ಲಿ ಪಡೆದು ಮಾನವ ಹಕ್ಕುಗಳ ಸಂರಕ್ಷಣಾ ಕಾಯಿದೆಯನ್ನು ಜಾರಿಗೆ ತಂದರು.

**ಉದ್ದೇಶ:**

ರಾಷ್ಟ್ರೀಯ ಮಾನವ ಹಕ್ಕುಗಳ ಮತ್ತು ರಾಜ್ಯ ಮಾನವ ಹಕ್ಕುಗಳ ಆಯೋಗದ ರಚನೆ ಮತ್ತು ಮಾನವ ಹಕ್ಕುಗಳ ವಿಷಯಗಳ ಕುರಿತದ್ದಾಗಿದೆ.

**ರಚನೆ:**

8 ಸದಸ್ಯರಿಂದ ಕೂಡಿದೆ. ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿಯು ಇದರ ಅಧ್ಯಕ್ಷರು ಆಗಿರುತ್ತಾರೆ.

ಅಧಿಕಾರ ಅವಧಿ:

ಐದು ವರ್ಷಗಳು.

ಕಾಯಿದೆ ಪರ ಅನುಚ್ಛೇದ 12ರಲ್ಲಿ ಹೇಳಿರುವ ಮಾನವ ಹಕ್ಕುಗಳು.

**ಮಾನವ ಹಕ್ಕುಗಳ ಆಯೋಗದ ಕಾರ್ಯಗಳು:**

* ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಕಕ್ಷಿದಾರ ಅಥವಾ ಅವನ ಪರವಾಗಿ ಹಾಕಿದ ದಾವೆಯನ್ನು ಆಯೋಗ ಪರಿಶೀಲಿಸುತ್ತದೆ.
* ನ್ಯಾಯಾಲಯದಲ್ಲಿ ಮಾನವ ಹಕ್ಕು ಉಲ್ಲಂಘನೆಯಾಗಿದೆ ಎಂದಾದರೆ ಆಯೋಗ ಮಧ್ಯಸ್ಥಿಕೆ ವಹಿಸಬಹುದಾಗಿದೆ.
* ಜೈಲುವಾಸಿಗಳ ಜೀವನದ ಪರಿಸ್ಥಿತಿಯನ್ನು ಪರೀಕ್ಷಿಸಲು ಕಾರಾಗೃಹಗಳಿಗೆ ಭೇಟಿ ಕೊಡಬಹುದು.
* ಸಂವಿಧಾನದಲ್ಲಿ ಮಾನವ ಹಕ್ಕುಗಳ ರಕ್ಷಣೆಗೆ ಮಾಡಿರುವ ರಕ್ಷಣೋಪಾಯಗಳನ್ನು ಪರಾಮರ್ಶಿಸಿ, ಮಾನವ ಹಕ್ಕುಗಳ ರಕ್ಷಣೆಗೆ ಸಲಹೆ ಸೂಚನೆಗಳನ್ನು ಕೊಡುತ್ತದೆ.
* ಅಂತರರಾಷ್ಟ್ರೀಯ ಒಪ್ಪಂದಗಳನ್ನು ರೀತಿ ನೀತಿಗಳನ್ನು ಮತ್ತು ಪುಸ್ತಕ ಪ್ರಬಂಧಗಳನ್ನು ಪರಿಶೀಲಿಸಿ ಅವುಗಳನ್ನು ಭಾರತದಲ್ಲಿ ಅಳವಡಿಸಲು ಅನುಗುಣವಾಗಿ ಶಿಫಾರಸ್ಸುಗಳನ್ನು ಮಾಡುತ್ತದೆ.
* ಭಯೋತ್ಪಾದನೆಯಂತಹ ಪ್ರವೃತ್ತಿಗಳು ಮಾನವ ಹಕ್ಕುಗಳ ಚಲಾವಣೆಗೆ ಅಡ್ಡಿ ಮಾಡಿದ ಆಯೋಗವು ಇದಕ್ಕೆ ಕಾರಣವಾಗುವ ಅಂಶಗಳನ್ನು ಪರಿಶೀಲಿಸಿ ಸೂಕ್ತ ಸೂಚನೆಗಳನ್ನು ಕೊಡುತ್ತದೆ.
* ಮಾನವ ಹಕ್ಕುಗಳ ಮೇಲೆ ಆಯೋಗವು ಸಂಶೋಧನೆ ನಡೆಸುತ್ತದೆ.
* ಸಮಾಜದ ವಿವಿಧ ಭಾಗಗಳ ಜನರಿಗೆ ಮಾನವ ಹಕ್ಕುಗಳ ಬಗ್ಗೆ ಜ್ಞಾನ ಮತ್ತು ಅವುಗಳ ರಕ್ಷಣೋಪಾಯಗಳ ಬಗ್ಗೆ ಅರಿವು ಮೂಡಿಸುತ್ತದೆ.
* ಮಾನವ ಹಕ್ಕುಗಳ ಬಗ್ಗೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಘಟನೆಗಳಿಗೆ ಆಯೋಗ ಪ್ರೋತ್ಸಾಹಿಸುತ್ತದೆ.
* ಮಾನವ ಹಕ್ಕುಗಳ ಅಭಿವೃದ್ದಿಗೆ ಆಯೋಗ ಕಾರ್ಯ ನಿರ್ವಹಿಸುತ್ತದೆ.
* ರಾಜ್ಯ ಮಾನವ ಹಕ್ಕುಗಳ ಆಯೋಗ.

**ಪರಿಸರ ರಕ್ಷಣೆ:**

ಭೂಮಿಯ ಮೇಲೆ ಜೀವಿಸಲು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವಶ್ಯಕವಾದ ವಸ್ತುಗಳು ಮತ್ತು ಮಾನವನನ್ನು ಒಳಗೊಂಡ ಆತನ ಸುತ್ತಮುತ್ತಲಿನ, ಸಜೀವ ಮತ್ತು ನಿರ್ಜೀವ ವಸ್ತುಗಳನ್ನೆಲ್ಲಾ ಸೇರಿಸಿ ಪರಿಸರ ಎಂದು ಕರೆಯುತ್ತಾರೆ.

**ಪರಿಸರದ ವರ್ಗೀಕರಣ:**

* ಜೈವಿಕ (ಜೀವಿತ) ಅಂಶ
* ಅಜೈವಿಕ (ನಿರ್ಜೀವ) ಅಂಶ
* ಶಕ್ತಿ ಸಂಪನ್ಮೂಲಗಳು

1) ಜೈವಿಕ ಅಂಶ: ಸಸ್ಯಗಳು, ಪ್ರಾಣಿಗಳು ಇತ್ಯಾದಿ

2) ಅಜೈವಿಕ ಅಂಶ: ಘನ (ಶಿಲಾಗೋಳ), ದ್ರವ (ಜಲಗೋಳ), ಅನಿಲ (ವಾಯುಗೋಳ).

3) ಶಕ್ತಿ ಸಂಪನ್ಮೂಲಗಳು: ಬರಿದಾಗುವಂತ ಶಕ್ತಿ, ಬರಿದಾಗದೇ ಇರುವಂತಹ ಶಕ್ತಿ.

**ಪರಿಸರ:**

ಪರಿಸರ ರಕ್ಷಣಾ ಕಾಯ್ದೆ 1986(2)ಎ ವಿಭಾಗವು ಪರಿಸರವನ್ನು ಈ ಕೆಳಗಿನಂತೆ ವಿವರಿಸುತ್ತದೆ.

ಪರಿಸರದಲ್ಲಿ ನೀರು, ಗಾಳಿ, ಭೂಮಿಯು ಸೇರಿದ್ದು, ನೀರು, ಗಾಳಿ, ಭೂಮಿ ಮತ್ತು ಮಾನವ ಉಳಿದ ಜೀವಿಗಳು ಗಿಡಗಳು ಅತಿ ಸೂಕ್ಷ್ಮ ಜೀವಾಣುಗಳು ಮತ್ತು ಇತರೆ ವಸ್ತುಗಳ ನಡುವೆ ಅಂತರ ಸಂಬಂಧವೇ ಪರಿಸರ.

**ಪರಿಸರ ಮಾಲಿನ್ಯಕ್ಕೆ ಕಾರಣವಾದ ಅಂಶಗಳು:**

* ಕಾಡು ನಾಶ
* ಕೃಷಿ ಅಭಿವೃದ್ದಿಗೆ ರಾಸಾಯನಿಕ ಬಳಕೆ
* ಜನಸಂಖ್ಯೆ ಬೆಳವಣಿಗೆ
* ಕೈಗಾರಿಕೆ ಬೆಳವಣಿಗೆ
* ಗಣಿಗಾರಿಕೆಯಿಂದ ಭೂಮಿ ನಾಶ, ಅಂತರಜಲದ ಕೊರತೆ, ವಾಯು ಮಾಲಿನ್ಯ, ಓಜೋನ್ ನಾಶಕ್ಕೆ ಕಾರಣವಾದ ಅಂಶಗಳು, ಹಸಿರು ಮನೆ ಪರಿಣಾಮ, ಹವಾಮಾನ ವೈಪರೀತ್ಯ.
* ತ್ವರಿತ ನಗರೀಕರಣ
* ಯೋಜನೆ ಇಲ್ಲದ ನಗರೀಕರಣ
* ಬಡತನದಿಂದಾಗಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಆಗದೇ ಇರುವುದು.

**ಪರಿಸರ ಸಂರಕ್ಷಣೆ ಸಂವಿಧಾನದ ಉಪಬಂಧಗಳು:**

* ಅನುಚ್ಛೇದ 47ರ ಪ್ರಕಾರ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವುದು ಸರ್ಕಾರದ ಕರ್ತವ್ಯವಾಗಿದೆ.

  – ಡಬ್ಲ್ಯೂಹೆಚ್‌ಓ: ಆರೋಗ್ಯವನ್ನು ಮಾನಸಿಕ, ದೈಹಿಕ ಹಾಗೂ ಸಾಮಾಜಿಕ ಸಮಸ್ಥಿತಿ ಎಂದು ಕೇವಲ ರೋಗ ಇಲ್ಲದಿರುವಿಕೆ ಅಲ್ಲವೆಂದು ಹೇಳುತ್ತದೆ.
* ಅನುಚ್ಛೇದ 48ಎ: ಪರಿಸರ ರಕ್ಷಣೆ ಅಭಿವೃದ್ಧಿ, ಪ್ರಾಣಿ ಸಂಪತ್ತು ರಕ್ಷಣೆ.
* ಅನುಚ್ಛೇದ 51ಎ ಕರ್ತವ್ಯಗಳು: ಕಾಡು, ನದಿ, ಪ್ರಾಣಿ, ಸಂಪತ್ತಿನಂತಹ ಪರಿಸರವನ್ನು ರಕ್ಷಿಸುವುದು ಮತ್ತು ಅಭಿವೃದ್ಧಿ ಪಡಿಸುವುದು ಪ್ರಜೆಗಳ ಕರ್ತವ್ಯ.

**ಪರಿಸರ ರಕ್ಷಣೆಗೆ ಶಾಸಕಾಂಗ ಉಪಬಂಧಗಳು:**

* 1860 ಐಪಿಸಿ ನೀರಿನ ಮಾಲಿನ್ಯ ನಿಷೇಧ

* 1948 ಕೈಗಾರಿಕೆ ಕಾಯಿದೆ: ಈ ಕಾಯಿದೆಯು ಕೆಲಸಗಾರರ ಆರೋಗ್ಯ, ರಕ್ಷಣೆ ಮತ್ತು ಸುಸ್ಥಿತಿ ಕಾಯ್ದಿಟ್ಟುಕೊಳ್ಳುವ ಗುರಿ.

**ಪರಿಸರ ಮಾಲಿನ್ಯ ರಕ್ಷಣೆಗೆ ಇರುವ ನಿರ್ದಿಷ್ಟ ಶಾಸನಗಳು:**

* ಭಾರತದ ಅರಣ್ಯ ಕಾಯಿದೆ 1927 ಮತ್ತು ಪ್ರಾಣಿ ಸಂಕುಲ ರಕ್ಷಣೆ ಕಾಯಿದೆ 1972
* ನೀರು ಮಾಲಿನ್ಯ ತಡೆ ಮತ್ತು ನಿಯಂತ್ರಣ ಕಾಯ್ದೆ 1974
* ಗಾಳಿ ನಿಯಂತ್ರಣ ಮತ್ತು ಮಾಲಿನ್ಯದ ತಡೆ ಕಾಯ್ದೆ 1981
* ಪರಿಸರ ಸಂರಕ್ಷಣೆ ಕಾಯ್ದೆ 1986
* ಮೋಟಾರ್ ವಾಹನ ಕಾಯ್ದೆ 1988
* ಜಲಮಾಲಿನ್ಯ ಕಾಯ್ದೆ 1957.

## ಜಾತ್ಯಾತೀತತೆ

ಗಾಂಧಿ ತಮ್ಮ ಕಲ್ಪನೆಯ ಸ್ವತಂತ್ರ ಭಾರತದಲ್ಲಿ ಸರ್ವಧರ್ಮ, ಸಮಭಾವದ ಕುರಿತು ಮಾರ್ಮಿಕವಾಗಿ ಹೇಳಿದ್ದಾರೆ. ಎಲ್ಲಾ ಧರ್ಮಗಳನ್ನು ಸಮಭಾವದಿಂದ ಮತ್ತು ಸಮಾನ ಗೌರವದಿಂದ ನೋಡುವ ಸರ್ವಧರ್ಮ ಸಮಭಾವ ಭಾರತದ ಜಾತ್ಯಾತೀತತೆ ವ್ಯವಸ್ಥೆಯ ಸಾರ.

ರಾಜ್ಯ ಮತ್ತು ಧರ್ಮಗಳನ್ನು ಬೇರೆ ಬೇರೆಯಾಗಿ ನೋಡುವ ವ್ಯವಸ್ಥೆಯೇ ಸಂಬಂಧಿಸಿದ ಎಲ್ಲಾ ವಿಷಯಗಳು ತಟಸ್ಥವಾಗಿರುತ್ತವೆ.

ಜಾತ್ಯಾತೀತತೆ 2 ಮೂಲ ತತ್ತ್ವಗಳ ಮೇಲೆ ನಿಂತಿದೆ.

* ಧರ್ಮವು ವೈಯಕ್ತಿಕ ವಿಷಯವಾಗಿದ್ದು ರಾಷ್ಟ್ರದ ವ್ಯವಹಾರದಲ್ಲಿ ಸಂಬಂಧಿಸಿರುವುದಿಲ್ಲ
* ಧರ್ಮ ಮತ್ತು ರಾಜಕೀಯ 2 ವಿಭಿನ್ನ ವಿಷಯವಾಗಿದ್ದು ರಾಜಕೀಯ ಮತ್ತು ಧರ್ಮವನ್ನು ಬೇರೆ ಬೇರೆಯಾಗಿಡಲು ಒತ್ತುಕೊಡುತ್ತದೆ ಹಾಗೂ ಜಾತ್ಯಾತೀತತೆ ಧಾರ್ಮಿಕ ಸ್ವಾತಂತ್ರ್ಯವನ್ನು ಹಾಗೂ ಉಳಿದ ಧರ್ಮಗಳೆಡೆಗೆ ಸಹನೆಯಿಂದ ಇರುವಂತೆ ಸೂಚಿಸುತ್ತದೆ.

1975ರಲ್ಲಿ ಸುಪ್ರೀಂಕೋರ್ಟ್, ಜಾತ್ಯಾತೀತ ರಾಷ್ಟ್ರವು ಎಲ್ಲ ಧರ್ಮಗಳನ್ನು ಮೀರಿ ಜನರ ಧಾರ್ಮಿಕ ನಂಬಿಕೆ ಹಾಗೂ ಆಚರಣೆಗಳ ಬಗ್ಗೆ ನಿರ್ಲಿಪ್ತವಾಗಿದ್ದು ಸರ್ವರ ಒಳಿತಿಗಾಗಿ ಪ್ರಯತ್ನವನ್ನು ಮಾಡಿ ಎಲ್ಲಾ ಪ್ರಜೆಗಳನ್ನು ಸಮಾನವಾಗಿ ನಡೆಸಿಕೊಳ್ಳುತ್ತದೆ. ಜಾತ್ಯಾತೀತತೆ ಸಂವಿಧಾನದ ಮೂಲಭೂತ ಲಕ್ಷಣ.

1976ರಲ್ಲಿ ಪೀಠಿಕೆಗೆ 42ನೇ ತಿದ್ದುಪಡಿ ಮೂಲಕ ಜಾತ್ಯಾತೀತ ಪದವನ್ನು ಸೇರಿಸಲಾಯಿತು.

* ಕೇಶವಾನಂದ ಭಾರತಿ ಹಾಗೂ ಎಸ್.ಆರ್.ಬೊಮ್ಮಾಯಿ ವರ್ಸಸ್ ಭಾರತ ಸರ್ಕಾರ ದಾವೆಯಲ್ಲಿ ಸುಪ್ರೀಂಕೋರ್ಟ್ ಜಾತ್ಯಾತೀತತೆ ಭಾರತ ಸಂವಿಧಾನದ ಮೂಲ ಲಕ್ಷಣ ಎಂದು ದೃಢಪಡಿಸಿದೆ.

**ಜಾತ್ಯಾತೀತತೆಯನ್ನು ಸಾದರಪಡಿಸುವ ಸಂವಿಧಾನದ ಉಪಬಂಧಗಳು:**

**ಸಾಮಾನ್ಯ ಉಪಬಂಧಗಳು:**

* ಅನುಚ್ಛೇದ 14: ಕಾನೂನಿನ ಮುಂದೆ ಸಮಾನತೆ
* ಅನುಚ್ಛೇದ 15: ಧರ್ಮ, ಪಂಗಡ, ಜಾತಿ. ಲಿಂಗ ಅಥವಾ ಹುಟ್ಟಿದ ಸ್ಥಳದ ಆಧಾರದ ಮೇಲೆ ತಾರತಮ್ಯ ಸಲ್ಲದು
* ಅನುಚ್ಛೇದ 16: ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ
* ಅನುಚ್ಛೇದ 25: ಧರ್ಮ ಪ್ರಚಾರ, ಆಚರಣೆ, ಸ್ವತಂತ್ರವೃತ್ತಿ ಮತ್ತು ಸ್ವತಂತ್ರವಾದ ವಿವೇಚನಾ ಶಕ್ತಿಗೆ ಅವಕಾಶ
* ಅನುಚ್ಛೇದ 26: ಧಾರ್ಮಿಕ ವ್ಯವಹಾರಗಳ ನಿರ್ವಹಣೆಗೆ ಸ್ವಾತಂತ್ರ್ಯ
* ಅನುಚ್ಛೇದ 27: ಯಾವುದೇ ನಿರ್ದಿಷ್ಟ ಧರ್ಮದ ಅಭಿವೃದ್ಧಿಗಾಗಿ ತೆರಿಗೆ ಸಂದಾಯ ಮಾಡುವುದಕ್ಕೆ ಸ್ವಾತಂತ್ರ್ಯ

* ಅನುಚ್ಛೇದ 28: ನಿಶ್ಚಿತವಾದ ಶೈಕ್ಷಣಿಕ ಸಂಸ್ಥೆಗಳಲ್ಲಿ ಧಾರ್ಮಿಕ ಪೂಜೆ ಅಥವಾ ಧಾರ್ಮಿಕ ಸಲಹೆಗಳು ಸೇವೆಗೆ ಸ್ವಾತಂತ್ರ್ಯ
* ಅನುಚ್ಛೇದ 29: ಅಲ್ಪ ಸಂಖ್ಯಾತರುಗಳ ಹಿತಾಸಕ್ತಿಯ ರಕ್ಷಣೆ
* ಅನುಚ್ಛೇದ 30: ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಗೆ ಮತ್ತು ಆಡಳಿತ ನಿರ್ವಹಣೆಗೆ ಅಲ್ಪಸಂಖ್ಯಾತರ ಹಕ್ಕುಗಳು.

**ಆಡಳಿತದಲ್ಲಿ ನಿಯಂತ್ರಣ:**

ಆಡಳಿತ ವರ್ಗದ ಕಾರ್ಯಗಳನ್ನು ಪರೀಕ್ಷಿಸಲು ಮತ್ತು ಅವರ ಕಾರ್ಯಗಳ ನಡುವೆ ಸಮತೋಲನ ಕಾಪಾಡಲು ಆಡಳಿತದ ಮೇಲೆ ನಿಯಂತ್ರಣದ ಅವಶ್ಯಕತೆ ಇದೆ.

ಪ್ರಜಾಪ್ರಭುತ್ವ ಸಮಾಜದಲ್ಲಿ ಅಧಿಕಾರಕ್ಕೆ ನಿಯಂತ್ರಣವಿರಬೇಕು ಮತ್ತು ಹೆಚ್ಚು ಅಧಿಕಾರವಿದ್ದಲ್ಲಿ ಹೆಚ್ಚು ನಿಯಂತ್ರಣದ ಅವಶ್ಯಕತೆ ಇದೆ.

**ಆಡಳಿತದ ಮೇಲೆ ಶಾಸಕಾಂಗದ ನಿಯಂತ್ರಣ:**

1) ಕಾಯಿದೆ ಮೂಲಕ:
  * ಸಭಾ ಕಾರ್ಯದಿಂದ
  * ತಾರಾಂಕಿತ ಪ್ರಶ್ನೆ
  * ಅತಾರಾಂಕಿತ ಪ್ರಶ್ನೆ
  * ಅಲ್ಪಾವಧಿ ಸೂಚನಾ ಪ್ರಶ್ನೆಗಳು – ಶೂನ್ಯವೇಳೆ, ಅರ್ಧ ಘಂಟೆ ಚರ್ಚೆ, ಅಲ್ಪಾವಧಿ ಚರ್ಚೆ.

  ಮನವಿ ಮತ್ತು ಸೂಚನೆಗಳ ಮೂಲಕ–
  * ಗಮನ ಹರಿಸುವ ಸೂಚನೆ
  * ಅವಿಶ್ವಾಸ ಸೂಚನೆ
  * ಖಂಡನಾ ಮನವಿ

2) ಆರ್ಥಿಕ ನಿಯಂತ್ರಣ
3) ಲೆಕ್ಕ ತಪಾಸಣಾ ವರದಿ

**ಆಡಳಿತದ ಮೇಲೆ ಕಾರ್ಯಾಂಗದ ನಿಯಂತ್ರಣ:**

* ಕಾರ್ಯಾಂಗದಿಂದ ಆಡಳಿತ ಜಾರಿ
* ಕಾರ್ಯಾಂಗದಿಂದ ಸುಗ್ರೀವಾಜ್ಞೆ ಅನುಚ್ಛೇದ 123 ಮತ್ತು 213
* ನಡತೆಯ ನಿಯಮಗಳು–
  – 1954 ಎಲ್ಲ ಭಾರತೀಯ ಸೇವೆಗಳು (ನಡತೆ) ನಿಯಂತ್ರಣಗಳು
* 1955 ಕೇಂದ್ರ ನಾಗರಿಕ ಸೇವೆಗಳು
* 1956 ರೈಲ್ವೆ ಸೇವೆಗಳು
* 1965 ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು

**ಆಡಳಿತದ ಮೇಲೆ ನ್ಯಾಯಾಂಗದ ನಿಯಂತ್ರಣ:**

* ಆಡಳಿತದ ಮೇಲೆ ಪ್ರಜೆಗಳ ನಾಗರೀಕರ ನಿಯಂತ್ರಣ
* ಕೇಂದ್ರ ತನಿಖಾ ದಳ
* ಕೇಂದ್ರ ಜಾಗೃತ ದಳ
* ರಾಜ್ಯ ಜಾಗೃತ ದಳ

* ಲೋಕಪಾಲ ಮತ್ತು ಲೋಕಾಯುಕ್ತ
* ಮಾಹಿತಿ ಹಕ್ಕು 2005
* ಸಕಾಲ ಇತ್ಯಾದಿ.

**ಮಾಹಿತಿ ಹಕ್ಕು ಅಧಿನಿಯಮ 2005:**

ಸಾರ್ವಜನಿಕರು ತಮ್ಮ ಮೇಲೆ ಪರಿಣಾಮವನ್ನುಂಟು ಮಾಡುವಂತಹ ಮಾಹಿತಿಯನ್ನು ಸರ್ಕಾರದಿಂದಾಗಲೀ ಅಥವಾ ಖಾಸಗಿಯವರಿಂದಾಗಲೀ ತೆಗೆದುಕೊಳ್ಳುವಿಕೆಯೇ ಮಾಹಿತಿ ಹಕ್ಕು ಅಧಿನಿಯಮ. ಮಾಹಿತಿಯ ಪಾರದರ್ಶಕತೆ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಗೆ ಮುಖ್ಯವಾಗುತ್ತದೆ. ಭ್ರಷ್ಟಾಚಾರ ನಿಯಂತ್ರಿಸಲು, ಸರ್ಕಾರವನ್ನು ನಡೆಸಲು ಮತ್ತು ಪ್ರಜೆಗಳಿಗೆ ತಮ್ಮ ಹೊಣೆಗಾರಿಕೆ ಅರಿಯಲು ಮಾಹಿತಿ ಅವಶ್ಯಕವಾಗಿದೆ.

ಪ್ರಜಾಪ್ರಭುತ್ವದ ಯಶಸ್ಸು ಪ್ರಜೆಗಳು ಆಡಳಿತದಲ್ಲಿ ಭಾಗವಹಿಸುವುದರ ಮೇಲೆ ಅವಲಂಬಿತವಾಗಿದೆ. ಸರ್ಕಾರ ಕೆಲ ಕಾನೂನಿನ ನಿರ್ದಿಷ್ಟ ಉಪಬಂಧಗಳೆಡೆಯಲ್ಲಿ ಕೆಲವು ಸೂಕ್ಷ್ಮ ಮಾಹಿತಿಗಳನ್ನು ಪ್ರಕಟಿಸದೇ ಇಟ್ಟುಕೊಳ್ಳಬಹುದು. ಆಡಳಿತದ ಬಿಚ್ಚು ಮನಸ್ಸಿನ ಫಲವನ್ನು ಕಂಡುಕೊಂಡ ಸ್ವೀಡನ್ 1766ರಲ್ಲಿಯೇ ಈ ಕಾಯಿದೆ ಖಾತ್ರಿ ಮಾಡಿತು. ಜೂನ್ 15, 2005ರಂದು ಭಾರತದ ಮಾಹಿತಿ ಹಕ್ಕು ಅಧಿನಿಯಮಕ್ಕೆ ರಾಷ್ಟ್ರಪತಿ ಅಂಕಿತ ದೊರೆತಿದೆ.

**ಉದ್ದೇಶ:**

ಪ್ರತಿಯೊಬ್ಬ ಸಾರ್ವಜನಿಕ ಅಧಿಕಾರಿಯು ಉವಾಬ್ದಾರಿಯುತವಾಗಿ ಹಾಗೂ ಪಾರದರ್ಶಕವಾಗಿ ಕೆಲಸ ಮಾಡಬೇಕೆನ್ನುವುದು ಇದರ ಉದ್ದೇಶ.

**ವ್ಯಾಪ್ತಿ:**

* ಜಮ್ಮು ಕಾಶ್ಮೀರವನ್ನು ಬಿಟ್ಟು ಉಳಿದಂತೆ ದೇಶಕ್ಕೆ ಅನ್ವಯವಾಗುತ್ತದೆ.
* ಸರ್ಕಾರಿ ಒಡೆತನದಲ್ಲಿ ನಿಯಂತ್ರಣದಲ್ಲಿ ಅಥವಾ ಹಣಕಾಸಿನ ಸಹಾಯದಲ್ಲಿ ನಡೆಯುತ್ತಿರುವ ಯಾವುದೇ ಸಂಸ್ಥೆ ಮತ್ತು ಪ್ರತ್ಯಕ್ಷ ಪರೋಕ್ಷವಾಗಿ ಸರ್ಕಾರದಿಂದ ತಕ್ಕಮಟ್ಟಿನ ಹಣಕಾಸಿನ ಸಹಾಯ ಪಡೆದ ಅಂಗಗಳಿಗೆ ಅನ್ವಯವಾಗುತ್ತದೆ.

**ಕಾಯಿದೆ ಎಲ್ಲಿ ಅನ್ವಯಿಸುವುದಿಲ್ಲ:**

* ರಕ್ಷಣಾ ಸಂಸ್ಥೆಗಳು.
* 18 ತನಿಖಾ ದಳಗಳು. ಆದರೆ ಈ ಸಂಸ್ಥೆಗಳಿಂದ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಭ್ರಷ್ಟಾಚಾರ ಆರೋಪ ಇದ್ದಲ್ಲಿ ಸೂಕ್ತ ಮಾಹಿತಿ ಕೊಡಬೇಕು.

**ಮಾಹಿತಿ ಅಂದರೆ:**

* ದಾಖಲೆಗಳು, ಕಾಗದ ಪತ್ರಗಳ ಮತ್ತು ಕೆಲಸದ ತಪಾಸನೆಯ ಹಕ್ಕು
* ಟಿಪ್ಪಣಿ ತೆಗೆದುಕೊಳ್ಳುವ
* ದಾಖಲೆ, ಕಾಗದ ಪತ್ರಗಳ ಮತ್ತು ದೃಡೀಕರಿಸಿದ ಪತ್ರಗಳನ್ನು ತೆಗೆದುಕೊಳ್ಳುವ ಹಕ್ಕು
* ವಿಷಯದ ದೃಡೀಕರಿಸಿದ ನಕಲು ತೆಗೆದುಕೊಳ್ಳುವ ಹಕ್ಕು
* ವಿಸಿಡಿ, ಫ್ಲಾಪಿ, ಇನ್ನಾವುದೇ ಗಣಕಯಂತ್ರದಲ್ಲಿ ಶೇಖರಿಸಿದ ಇನ್ನಾವುದೇ ವಿಧಾನದಲ್ಲಿ ಮಾಹಿತಿ ಸಂಗ್ರಹಿಸುವ ಹಕ್ಕು
* ಸಾರ್ವಜನಿಕ ಅಧಿಕಾರಿಗಳ ಜವಾಬ್ದಾರಿ (ಕಟ್ಟುಪಾಡುಗಳ) ಪ್ರತಿವರ್ಷ ಪ್ರಕಟಿಸಬೇಕಾದ ಮಾಹಿತಿ
* ಸಂಸ್ಥೆಯ ಕಾರ್ಯ ಮತ್ತು ಕರ್ತವ್ಯಗಳು
* ನೌಕರರ ಅಧಿಕಾರ, ಮೇಲ್ವಿಚಾರಣೆ, ಹೊಣೆಗಾರಿಕೆ
* ತಮ್ಮ ಕಾರ್ಯ ನಿರ್ವಹಿಸಲು ಇರುವ ನಿಯಮಾವಳಿಗಳು

* ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರ
* ಇತರೆ ಪ್ರಮುಖವಾದ ಮಾಹಿತಿ

**ಮಾಹಿತಿ ಪಡೆದುಕೊಳ್ಳುವ ಮಾರ್ಗಗಳು;**

* ಸ್ವ ಇಚ್ಛೆಯಿಂದ ಸಾರ್ವಜನಿಕ ಅಧಿಕಾರ ಪ್ರಕಟಿಸುವ ಮಾಹಿತಿಗಳ ಮೂಲಕ
* ನಿಗದಿ ಪಡಿಸಿದ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ಸಲ್ಲಿಸುವ ಮೂಲಕ

**ಅರ್ಜಿ ವಿಧಾನ:**

ಅರ್ಜಿ ಸ್ವೀಕೃತವಾದಾಗ,

* ಮಾಹಿತಿ ಪಡೆಯಲು ಪಾವತಿ ಮಾಡಬೇಕಾದ ಶುಲ್ಕ
* ಶುಲ್ಕವನ್ನು ನಿರ್ಧರಿಸುವ ರೀತಿ
* ತಕರಾರುಗಳಿದ್ದಲ್ಲಿ ಪ್ರಶ್ನಿಸುವ ಹಕ್ಕಿನ ಬಗ್ಗೆ ವಿವರ
* ಮೇಲ್ಮನವಿ ಅಧಿಕಾರಿಗಳ ವಿವರ ಹಾಗೂ ಮೇಲ್ಮನವಿ ಸಲ್ಲಿಸಲು ಇರುವ ಕಾಲಾವಕಾಶ ಮುಂತಾದ ವಿವರಗಳನ್ನು ನೀಡಬೇಕು.

ಅರ್ಜಿ ತಿರಸ್ಕೃತವಾದರೆ,

* ತಿರಸ್ಕರಿಸಲು ಕಾರಣಗಳು
* ಮೇಲ್ಮನವಿ ಸಲ್ಲಿಸಲು ವಿವರಗಳನ್ನು ನೀಡಬೇಕು
* 3ನೇ ವ್ಯಕ್ತಿ ಮಾಹಿತಿ ಕೆಲ ನಿಬಂಧನೆಗಳಿಗೆ ಒಳಪಟ್ಟು ನೀಡಲಾಗುತ್ತದೆ.
* ಮೊದಲ ಮೇಲ್ಮನವಿ 30 ದಿನಗಳು, 2ನೇ ಮೇಲ್ಮನವಿ 90 ದಿನಗಳು.

**ಕೇಂದ್ರ ಮಾಹಿತಿ ಆಯೋಗ:**

* ಓರ್ವ ಮುಖ್ಯ ಮಾಹಿತಿ ಆಯುಕ್ತ ಮತ್ತು 10ಕ್ಕೂ ಮೀರದ ಆಯುಕ್ತರನ್ನು ಹೊಂದಿರಬೇಕು
* ಇವರು ಸಮಾಜ ಸೇವೆ ನಿರ್ವಹಣೆ ಮಾಧ್ಯಮಗಳ ವಿಷಯದಲ್ಲಿ ಅಪಾರವಾದ ಜ್ಞಾನ ಹೊಂದಿದವರಾಗಿರಬೇಕು
* ಅಧಿಕಾರವಧಿ: ವರ್ಷ ಅಥವಾ 65 ವರ್ಷ
* ರಾಜ್ಯ ಮಾಹಿತಿ ಆಯೋಗ ಕಾಯ್ದೆಯ 15ರ ಪರಿಚ್ಛೇದ ಪ್ರಕಾರ ರಚನೆ ಮಾಡಲಾಗುತ್ತದೆ
* ದಂಡ: ಮಾಹಿತಿಯನ್ನು ನಿಗಧಿತ ಅವಧಿಯಲ್ಲಿ ನೀಡಲು ವಿಫಲವಾದ ಅಧಿಕಾರಿಗೆ ಕನಿಷ್ಠ 250 ರೂಪಾಯಿಯಿಂದ 25,000ದವರೆಗೆ.

**ದಂಡಕ್ಕೆ ಕಾರಣಗಳು:**

* ಅರ್ಜಿ ಸ್ವೀಕರಿಸಲು ನಿರಾಕರಿಸಿದರೆ
* ಸೂಕ್ತ ಕಾರಣವಿಲ್ಲದೆ ಸರಿಯಾದ ಸಮಯದಲ್ಲಿ ಮಾಹಿತಿ ಒದಗಿಸದೇ ಹೋದರೆ
* ಕೋರಿಕೆಯನ್ನು ದುರುದ್ದೇಶದಿಮದ ನಿರಾಕರಿಸಿದರೆ
* ಗೊತ್ತಿದ್ದೂ ಸರಿಯಲ್ಲದ ಅಪೂರ್ಣ ಅಥವಾ ದಾರಿ ತಪ್ಪಿಸುವ ಮಾಹಿತಿಗಳನ್ನು ನೀಡಿದ್ದಾರೆಂದು ಋಜುವಾತಾದರೆ
* ಕೋರಿಕೆಯ ವಿಷಯ ನಾಶಪಡಿಸಿದ್ದರೆ
* ಮಾಹಿತಿ ಒದಗಿಸಲು ಅಡ್ಡಿಪಡಿಸಿದ್ದರೆ

**ಮಾಹಿತಿಗೆ ಭರಿಸಬೇಕಾದ ವೆಚ್ಚ:**

* ಎ4 ಅಳತೆ ಪ್ರತಿ ಹಾಳೆ ಪ್ರತಿಗೆ 2ರೂ.

  – ಸ್ಯಾಂಪಲ್ ಮಾದರಿ ಬೇಕಾದರೆ, ತಗಲುವ ವೆಚ್ಚ

– ದಾಖಲೆ ಪರೀಕ್ಷಿಸಲು

– ಮೊದಲನೇ ಗಂಟೆ – ಶುಲ್ಕವಿಲ್ಲ

– ನಂತರ ಪ್ರತಿ 15 ನಿಮಿಷಕ್ಕೆ ರೂ.5

– ಪ್ಲಾಫಿ ಸಿಡಿ ರೂ.50 (ಸಕಾಲದಲ್ಲಿ ಕನಿಷ್ಟ 20 ರೂ.ಗಳಿಂದ 500ರವರೆಗೆ ಇದೆ.)

## ಎಸ್ಸಿ ಅಂಡ್ ಎಸ್ಟಿ ಆಕ್ಟ್ರೋಸಿಟಿ ಆಕ್ಟ್ (ಪಿಓಎ)

ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆಯನ್ನು ನಿಷೇಧಿಸಿದೆ. ಇದರ ಸಮರ್ಪಕ ಕಾರ್ಯಾಚರಣೆಗಾಗಿ ಎಸ್ಸಿ ಅಂಡ್ ಎಸ್ಟಿ ಆಕ್ಟ್ರೋಸಿಟಿ ಆಕ್ಟ್ (ಪಿಓಎ) 1989ರಲ್ಲಿ ಜಾರಿಗೆ ತರಲಾಯಿತು. ಈ ಕಾಯ್ದೆಯ ಅನ್ವಯ ಯಾವ ಕ್ರಿಯೆಗಳು ದೌರ್ಜನ್ಯವಾಗುತ್ತವೆ ಮತ್ತು ಅವುಗಳಿಗೆ ಎಷ್ಟು ಪ್ರಮಾಣದ ಶಿಕ್ಷೆ ಎಂಬುದನ್ನು ನಿಗಧಿಸಲಾಗಿದೆ. ಈ ಕಾಯ್ದೆಯ ಪರಿಭಾಷೆ ಈ ಕೆಳಗಿನಂತಿದೆ.

366ನೆಯ ವಿಧಿ (24) (25) ಪರಿಭಾಷಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರದ ಯಾರಾದರೂ ಈ ಕಾಯ್ದೆಯ ಸೆಕ್ಷನ್ 3ರ ಅಪರಾಧಗಳಾದ ದೇಹ, ಮಾನ ಆಸ್ತಿಪಾಸ್ತಿಗೆ ಧಕ್ಕೆ ತರುವ ಕಾರ್ಯ ಮಾಡಿದ್ದಲ್ಲಿ ಅದು ದೌರ್ಜನ್ಯವಾಗುತ್ತದೆ.

ದೌರ್ಜನ್ಯ ಶಿಕ್ಷೆ ಈ ಕೆಳಕಂಡ ಅಪರಾಧ ಗುರುತಿಸಿದೆ. ಅವುಗಳು–

* ಬಲವಂತದ ದುಡಿಮೆ
* ಬೆತ್ತಲೆ ಮೆರವಣಿಗೆ
* ಎಸ್ಸಿ, ಎಸ್ಟಿ ಮಹಿಳೆಯರ ಗೌರವಕ್ಕೆ ಧಕ್ಕೆ
* ಹೋಟೆಲ್, ದೇವಸ್ಥಾನಕ್ಕೆ ನಿಷೇಧ

ಈ ಅಪರಾಧಗಳಿಗೆ 6 ತಿಂಗಳಿಗಿಂತ ಕಡಿಮೆ ಇಲ್ಲದ ಮತ್ತು 5 ವರ್ಷಗಳಿಗೆ ವಿಸ್ತರಿಸಬಹುದಾದ ಸಜೆ ವಿಧಿಸಲಾಗುತ್ತದೆ.

* ಸುಳ್ಳು ಸಾಕ್ಷಿ, ತಿರುಚಿದ ಸಾಕ್ಷಿಯಿಂದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಶಿಕ್ಷೆಯಾದರೆ–ಮರಣ ದಂಡನೆ. ವಾಸಸ್ಥಳ ಮತ್ತು ಪೂಜಾ ಸ್ಥಳಗಳಿಗೆ ಬೆಂಕಿ–ಜೀವಾವಧಿ ಶಿಕ್ಷೆ.

ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯೂರೋ ಪ್ರಕಾರ ಈ ಕಾಯ್ದೆಯಡಿ ದಾಖಲಾದ ಪ್ರಕರಣಗಳು ಈ ಕೆಳಗಿನಂತಿವೆ.

* 2009ರಲ್ಲಿ 11143
* 2010ರಲ್ಲಿ 10513
* 2011ರಲ್ಲಿ 11342
* 2013ರಲ್ಲಿ 13975

ಸರ್ಕಾರ ಈ ರೀತಿಯ ಕಾಯ್ದೆ ಕ್ರಮಗಳ ಮೂಲಕ ದೌರ್ಜನ್ಯ ತಡೆಗೆ ಎಷ್ಟೇ ಪ್ರಯತ್ನಿಸುತ್ತಿದ್ದರೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿರುದ್ಧ ಅಪರಾಧ ಸಂಖ್ಯೆ ಕಡಿಮೆಯಾಗಿಲ್ಲ. ಸಮಾಜ ಮನ ಪರಿವರ್ತನೆ ಮೂಲಕ ಈ ಸಾಮಾಜಿಕ ಪಿಡುಗಿಗೆ ಮಂಗಳ ಹಾಡಬೇಕಾಗಿದೆ.

# ವಿಭಾಗ – 3

# ಅಧ್ಯಾಯ – 1

# ಖಾಸಗಿ ಮತ್ತು ಸಾರ್ವಜನಿಕ ಆಡಳಿತ

**ಸಾರ್ವಜನಿಕ ಆಡಳಿತದ ಅರ್ಥ ಮತ್ತು ವ್ಯಾಪ್ತಿ:**

ಸಾರ್ವಜನಿಕ ಎಂಬ ಶಬ್ದವನ್ನು ಪ್ರಪ್ರಥಮ ಬಾರಿಗೆ 1882ರಲ್ಲಿ ಹ್ಯಾಮಿಲ್ಟನ್ ಬಳಸಿದರು. ನಂತರ 1887ರಲ್ಲಿ ಅಮೇರಿಕಾದ ಮಾಜಿ ಅಧ್ಯಕ್ಷ ವುಡ್ರೋ ವಿಲ್ಸನ್ ಅವರು ಬರೆದ 'ದಿ ಸ್ಟಡೀ ಆಫ್ ಅಡ್‌ಮಿನಿಸ್ಟ್ರೇಷನ್' ಪ್ರಬಂಧದಲ್ಲಿ ವಿವರವಾಗಿ ಸಾರ್ವಜನಿಕ ಆಡಳಿತದ ಬಗೆಗೆ ಬರೆದರು. ಆದ್ದರಿಂದ ಪ್ರೊ.ಡ್ವೈಟ್ ವಾಲ್ಡೆ ವುಡ್ರೋ ವಿಲ್ಸನ್‌ರನ್ನು ಸಾರ್ವಜನಿಕ ಆಡಳಿತದ ಪಿತಾಮಹ ಎಂದು ಕರೆದಿದ್ದಾರೆ.

ಸಾರ್ವಜನಿಕ ಆಡಳಿತದಲ್ಲಿಯ 'ಪಬ್ ಆಡ್' ಎಂಬ ಶಬ್ದವು ವಿಶಾಲ ಕ್ಷೇತ್ರದ ಒಂದು ಭಾಗವನ್ನು ವಿವರಿಸುತ್ತದೆ. ಸಾರ್ವಜನಿಕ ಎಂಬ ಪದವು ಸರ್ಕಾರಿ ಎಂಬ ಅರ್ಥವನ್ನು ಸೂಚಿಸುತ್ತದೆ. ಆದ್ದರಿಂದ ಸಾರ್ವಜನಿಕ ಆಡಳಿತವನ್ನು ಸರ್ಕಾರದ ವ್ಯವಹಾರಗಳ ನಿರ್ವಹಣೆ ಎಂದು ಹೇಳಬಹುದು.

ಅಡ್‌ಮಿನಿಸ್ಟ್ರೇಷನ್ ಪದವನ್ನು ಲ್ಯಾಟಿನ್ ಭಾಷೆಯಿಂದ ಪಡೆಯಲಾಗಿದೆ. ಅಡ್+ಮಿನಿಸ್ಟ್ರೇಷನ್ ಎರಡು ಪದಗಳ ಮಿಶ್ರಣ ಇದಾಗಿದೆ. ಇದರ ಅರ್ಥ ನಿರ್ವಹಿಸು, ಸೇವೆ ಮಾಡು, ವ್ಯವಸ್ಥೆ ಮಾಡು ಎಂದಾಗುತ್ತದೆ.

ವುಡ್ರೋ ವಿಲ್ಸನ್‌ರ ಪ್ರಕಾರ ಸಾರ್ವಜನಿಕ ಆಡಳಿತವೆಂದರೆ ಸಾರ್ವಜನಿಕ ಕಾನುನನ್ನು ಸವಿಸ್ತಾರವಾಗಿ ಮತ್ತು ಕ್ರಮಬದ್ಧವಾಗಿ ಅನುಷ್ಠಾನಕ್ಕೆ ತರುವುದೇ ಸಾರ್ವಜನಿಕ ಆಡಳಿತವಾಗಿದೆ. ಪ್ರತಿಯೊಂದು ನಿರ್ದಿಷ್ಟ ಕಾನೂನಿನ ಅನ್ವಯವು ಆಡಳಿತದ ಕ್ರಿಯೆಯಾಗಿದೆ.

ಎಲ್.ಡಿ.ವೈಟ್ ಪ್ರಕಾರ ಸಾರ್ವಜನಿಕ ನೀತಿಯನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಕೈಗೊಳ್ಳಲಾಗುವ ಚಟುವಟಿಕೆಗಳನ್ನು ಸಾರ್ವಜನಿಕ ಆಡಳಿತ ಎಂದು ಕರೆಯಲಾಗುತ್ತದೆ.

**ಸಾರ್ವಜನಿಕ ಆಡಳಿತದ ಲಕ್ಷಣಗಳು:**

1) ಏಕಸ್ವಾಮ್ಯತೆ
2) ಸಮುದಾಯ ಸೇವೆಯ ಪ್ರಜ್ಞೆ
3) ಸಮಾನ ಸೇವೆ
4) ಅನಾಮಧೇಯತೆ
5) ಸಾರ್ವಜನಿಕ ಜವಾಬ್ದಾರಿ
6) ಸಾರ್ವಜನಿಕ ಮಾಹಿತಿ
7) ಬೃಹತ್ ರೂಪದ ಸಂಘಟನೆ

**ಸಾರ್ವಜನಿಕ ಆಡಳಿತದ ವ್ಯಾಪ್ತಿ:**

ಸಾರ್ವಜನಿಕ ನೀತಿಯ ಅನ್ವಯಿಕೆ ಇಂದು ಪ್ರತಿಯೊಂದು ಕ್ಷೇತ್ರ ಮತ್ತು ಕಾರ್ಯ ಚಟುವಟಿಕೆಯನ್ನು ಒಳಗೊಂಡಿದೆ. ಪ್ರಸ್ತುತ ಇಡೀ ಆಡಳಿತಾತ್ಮಕ ವ್ಯವಸ್ಥೆ, ಅದರ ರಚನೆ, ಕಾರ್ಯಗಳು ಮತ್ತು ಪ್ರಕ್ರಿಯೆ ಹೆಚ್ಚುತ್ತಿದೆ. ಸಾರ್ವಜನಿಕ ಆಡಳಿತದ ವ್ಯಾಪ್ತಿ ಈ ಕೆಳಗಿನ ಕ್ಷೇತ್ರಗಳಲ್ಲಿ ವಿಶಾಲವಾಗಿ ವ್ಯಾಪಿಸುತ್ತಿದೆ ಎನ್ನಬಹುದಾಗಿದೆ.

* ಸಾಮಾನ್ಯ ಆಡಳಿತ
* ಸಂಸ್ಥೆ

* ಸಿಬ್ಬಂದಿ ನಿರ್ವಹಣೆ
* ವಿಧಾನ ಮತ್ತು ಕಾರ್ಯಕ್ರಮ
* ಸಾಮಗ್ರಿ ಮತ್ತು ಪೂರೈಕೆ
* ಸಾರ್ವಜನಿಕ ಹಣಕಾಸು
* ಆಡಳಿತಾತ್ಮಕ ಜವಾಬ್ದಾರಿ

**ಸಾರ್ವಜನಿಕ ಆಡಳಿತದ ಮಹತ್ವ:**

ಆಧುನಿಕ ರಾಜ್ಯವನ್ನು ಆಡಳಿತಾತ್ಮಕ ರಾಜ್ಯ ಎನ್ನುವರು. ಇದು ರಾಜ್ಯದ ಹೃದಯದಂತೆ ಕಾರ್ಯ ಮಾಡುತ್ತದೆ. ಈ ಕೆಳಗಿನ ಪ್ರಮುಖ ಅಂಶಗಳಿಂದ ರಾಜ್ಯದಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತಿದೆ.

1) ಸರ್ಕಾರದ ಆಧಾರ ಸ್ತಂಭವಾಗಿ
2) ಸೇವೆಯನ್ನು ಒದಗಿಸುವ ಸಾಧನ
3) ಯೋಜನೆಯನ್ನು ಜಾರಿಗೊಳಿಸುವ ಸಾಧನ
4) ಸಮಾಜ ಸ್ಥಿರತೆಯ ಬೆನ್ನೆಲುಬಾಗಿ
5) ಸಾಮಾಜಿಕ ಮಾರ್ಪಾಡು ಮತ್ತು ಆರ್ಥಿಕ ಅಭಿವೃದ್ಧಿಯ ಸಾಧನ
6) ರಾಷ್ಟ್ರೀಯ ಸಮಗ್ರತೆಯನ್ನು ಕಾಪಾಡುವ ಸಾಧನ
7) ರಾಜಕೀಯ ಪ್ರವೃತ್ತಿಗಳ ಮೇಲೆ ಪ್ರಭಾವ ಬೀರುತ್ತದೆ
8) ದುರ್ಬಲ ವರ್ಗಗಳ ರಕ್ಷಣೆ
9) ಅಭಿವೃದ್ಧಿ ಮತ್ತು ಕಲ್ಯಾಣ ಸಾಧನೆ
10) ನೀತಿ ನಿರೂಪಣೆಯಲ್ಲಿ ಇದರ ಪಾತ್ರ ಹೆಚ್ಚುತ್ತಿದೆ

**ಸಾರ್ವಜನಿಕ ಆಡಳಿತ ಪ್ರಾಮುಖ್ಯತೆ ಬೆಳೆಯಲು ಪ್ರಮುಖ ಕಾರಣಗಳು:**

* ಕೈಗಾರಿಕಾ ಕ್ರಾಂತಿ
* ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ
* ಆರ್ಥಿಕ ಯೋಜನೆ
* ಕಲ್ಯಾಣ ರಾಜ್ಯದ ಕಲ್ಪನೆ
* ಜನಸಂಖ್ಯೆ ಬೆಳವಣಿಗೆ
* ಆಧುನಿಕ ಯುದ್ಧದ ಸ್ವರೂಪ

**ಜನಸ್ನೇಹಿ ಆಡಳಿತದ ಲಕ್ಷಣಗಳು:**

* ಸೇವಾ ಗುಣಮಟ್ಟ ಕಾಯ್ದುಕೊಳ್ಳುವಿಕೆ
* ಸದಾಕಾಲ ಸೇವೆ
* ಸೇವೆಯಲ್ಲಿ ಕೃಪೆ ಮತ್ತು ಪರಿಗಣನೆ ಮುಖ್ಯ
* ಅಧಿಕ ಮತ್ತು ವಿಶ್ವಾಸಾರ್ಹ ಮಾಹಿತಿ ನೀಡಿಕೆ
* ಮುಕ್ತ ವಾತಾವರಣ ಮತ್ತು ಪಾರದರ್ಶಕತೆ
* ದಕ್ಷವಾದ ಕುಂದುಕೊರತೆ ವಿಭಾಗ

**ಖಾಸಗಿ ಮತ್ತು ಸಾರ್ವಜನಿಕ ಆಡಳಿತ:**

ಸರ್ಕಾರಿ ವ್ಯವಸ್ಥೆಯಲ್ಲಿ ಕಾರ್ಯಾಚರಣೆ ಮಾಡುವ ಆಡಳಿತವನ್ನು ಸಾರ್ವಜನಿಕ ಆಡಳಿತ ಎನ್ನುವರು ಮತ್ತು ಸರ್ಕಾರೇತರ ವ್ಯವಸ್ಥೆಯಲ್ಲಿ ಕಾರ್ಯಾಚರಣೆ ಮಾಡುವ ಆಡಳಿತವನ್ನು ಖಾಸಗಿ ಆಡಳಿತ ಎನ್ನುವರು.

ಈ ಎರಡು ಆಡಳಿತಗಳ ನಡುವೆ ಯಾವುದೇ ವ್ಯತ್ಯಾಸ ಇಲ್ಲ ಎಂದು ಹೆನ್ರಿ ಫಾಯೋಲ್, ಫಾಲೆಟ್, ಉರ್ವಿಕ್, ಇರ್ವಿನ್ ಹೇಳುತ್ತಾರೆ. ಆಡಳಿತದ ಮೂಲ ತತ್ವಗಳೆಲ್ಲವೂ ಖಾಸಗಿ ಮತ್ತು ಸಾರ್ವಜನಿಕ ಎರಡರಲ್ಲಿ ಏಕರೀತಿಯಾಗಿ ಇರುತ್ತವೆ ಎಂದು ಈ ವಿದ್ವಾಂಸರು ಹೇಳುತ್ತಾರೆ.

ಆದರೆ ಸೌಮನ್ ಪಾಲ್, ಅಪಲಬಿ, ಡ್ರಕರ್ ಎಂಬುವವರು ಈ ಎರಡೂ ಬೇರೆ ಬೇರೆ ಎಂದು ಹೇಳುತ್ತಾರೆ. ಅವರ ಪ್ರಕಾರ ತಮ್ಮ ಗುರಿ ಸಾಧನೆಗಾಗಿ ತಮ್ಮದೇ ಆದ ವಿಶಿಷ್ಟ ನೀತಿ ವಿಧಾನಗಳನ್ನು ಅನುಸರಿಸುವುದರಿಂದ ಎರಡರಲ್ಲಿ ವ್ಯತ್ಯಾಸವಿದೆ ಎನ್ನುವರು.

**ಖಾಸಗಿ ಮತ್ತು ಸಾರ್ವಜನಿಕ ಆಡಳಿತದ ನಡುವಿನ ವ್ಯತ್ಯಾಸಗಳು:**

ಈ ಕೆಳಗಿನ ಅಂಶಗಳಿಂದ ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತವನ್ನು ಭಿನ್ನವಾಗಿ ನೋಡಲು ಅವಕಾಶ ಪಡೆಯಬಹುದು.

ಸಾರ್ವಜನಿಕ ಆಡಳಿತ:

* ರಾಜಕೀಯ ಸ್ವರೂಪ ಪಡೆದಿದೆ
* ವ್ಯಾಪ್ತಿಯ ವೈಶಾಲ್ಯತೆಯ ಪರಿಣಾಮ ಪ್ರಾಮುಖ್ಯತೆ ಅಪಾರವಾಗಿದೆ
* ಸಾಮಾಜಿಕ ಹೊಣೆಗಾರಿಕೆ
* ಬಾಹ್ಯ ಹಣಕಾಸಿನ ನಿಯಂತ್ರಣ ತತ್ವ
* ಸೇವಾ ಮನೋಭಾವ
* ಕೆಂಪು ಪಟ್ಟಿ ವಿಧಾನ
* ಶಾಸನ ಬದ್ದ ಚೌಕಟ್ಟು
* ದಕ್ಷತೆಯ ಕೊರತೆ
* ಅನಾಮಧೇಯತೆ

**ಖಾಸಗಿ ಆಡಳಿತ:**

* ರಾಜಕೀಯ ಸ್ವರೂಪ ಇರುವುದಿಲ್ಲ
* ಸೀಮಿತ ವ್ಯಾಪ್ತಿಯನ್ನು ಹೊಂದಿದೆ ಮತ್ತು ಸಂಕುಚಿತ ಪರಿಣಾಮ ಬೀರುತ್ತದೆ
* ವೈಯಕ್ತಿಕ ಹೊಣೆಗಾರಿಕೆ
* ಆಂತರಿಕ ಹಣಕಾಸಿನ ನಿಯಂತ್ರಣ ತತ್ವ
* ವ್ಯಾಪಾರಿ ಮನೋಭಾವ
* ಶೀಘ್ರಗತಿಯ ಉದ್ದೇಶ
* ನಿರ್ಬಂಧ ರಹಿತವಾದುದು

ಈ ಕೆಳಗಿನ ಅಂಶಗಳಿಂದ ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತ ಎರಡು ಒಂದೇ ಎಂತಲೂ ಹೇಳಬಹುದಾಗಿದೆ.

* ಎರಡೂ ಆಡಳಿತಗಳು ಕಾನೂನಿನ ಆಧಾರವನ್ನು ಹೊಂದಿರುತ್ತವೆ
* ಬೇಡಿಕೆಗಳನ್ನು ಪೂರೈಸುತ್ತವೆ

* ಪ್ರಯೋಗಗಳ ಫಲಿತಾಂಶಗಳ ಪ್ರಯೋಜನ ಪಡೆಯುತ್ತವೆ
* ಕೌಶಲ್ಯ ಪ್ರಧಾನ
* ಶ್ರೇಣಿ ಪದ್ಧತಿ
* ಸಿಬ್ಬಂದಿಯ ಪರಸ್ಪರ ಬದಲಾವಣೆ
* ಏಕರೂಪತೆ
* ಒಂದೇ ಬಗೆಯ ಲೆಕ್ಕ ಪತ್ರ ದಾಖಲೆ

**ಸಾರ್ವಜನಿಕ ಆಡಳಿತ ಒಂದು ಕಲೆಯಾಗಿ:**

ಜಾನ್ ಎ ವಿಗ್ ಸಾರ್ವಜನಿಕ ಆಡಳಿತವು ಒಂದು ವಿಜ್ಞಾನವು ಹೌದು ಮತ್ತು ಕಲೆಯೂ ಕೂಡ ಎಂದಿದ್ದಾನೆ. ಹರ್ಮನ್, ಪೈನರ್ ಮುಂತಾದ ವಿದ್ವಾಂಸರು, ಸಾರ್ವಜನಿಕ ಆಡಳಿತವನ್ನು ಒಂದು ಕಲೆ ಎಂದೇ ಪರಿಗಣಿಸಿದ್ದಾರೆ. ಈ ವಿದ್ವಾಂಸರ ಪ್ರಕಾರ ಸಂಗೀತ, ನೃತ್ಯ, ನಾಟಕ, ಚಿತ್ರಕಲೆಗಳು ಮಾತ್ರ ಕಲಾ ವಿಭಾಗಕ್ಕೆ ಸೇರಿದಂತೆಯೇ ಆಡಳಿತವು ಒಂದು ಕಲೆಯೇ. ಸೂಕ್ತ ತರಬೇತಿಯ ಮೂಲಕ ಪ್ರತಿಭಾವಂತನು ಆಡಳಿತಗಾರನಾಗಲು ಸಾಧ್ಯ.

ಕೌಟಿಲ್ಯನ ಅರ್ಥಶಾಸ್ತ್ರವು ಆಡಳಿತ ಒಂದು ಕಲೆ ಎಂದೇ ವಿವೇಚಿಸಿದೆ. ಆಡಳಿತವು ಕೇವಲ ಸಿದ್ಧಾಂತವಲ್ಲ, ಅದು ಕಾರ್ಯಾಚರಣೆಯಾಗಿದೆ. ಕೌಟಿಲ್ಯ, ನೆಪೋಲಿಯನ್, ಬಿಸ್ಮಾರ್ಕ್, ಅಕ್ಬರ್, ತೋದರಮಲ್ಲ, ಅಶೋಕ ಮುಂತಾದವರು ಆಡಳಿತ ಕಲೆಗಾರರಾಗಿದ್ದರು. ಚೀನಿಯರು ಆಡಳಿತವನ್ನು ಕಲೆ ಎಂದೇ ಪರಿಗಣಿಸಿದ್ದರು. ರೋಮನ್ನರು ಮತ್ತು ಭಾರತೀಯರು ಇದನ್ನು ಕೌಶಲ್ಯ ಎಂದೇ ಕರೆದಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರ, ಮೆಕೆವೆಲ್ಲಿಯ ದಿ ಪ್ರಿನ್ಸ್, ಅಬ್ದುಲ್ ಫಜಲ್‌ನ ಐನ್ ಈ ಅಕ್ಬರಿ ಇತ್ಯಾದಿ ಆಡಳಿತವನ್ನು 'ಕಲೆ' ಎಂದೇ ಹೇಳುತ್ತವೆ. ಓರ್ವ ವ್ಯಕ್ತಿ ಒಂದು ಸಮೂಹವನ್ನು ಆಳುವುದನ್ನು ಕಲೆ ಎಂದು ಹೇಳಬಹುದು. ಸಾರ್ವಜನಿಕ ಆಡಳಿತ ಒಂದ ಕಲೆಯೇ. ಕಾರಣ, ಇದು ನಾಗರಿಕ ಜೀವನ ಸ್ವಭಾವವೇ ಕಾರಣ. ಇದು ಸರ್ಕಾರಕ್ಕೆ ಸಂಬಂಧಿಸಿದ ಕಲೆ, ವಾಸ್ತವಿಕವಾಗಿ ಕಾರ್ಯಾಚರಣೆಯಲ್ಲಿರುವ ಸರ್ಕಾರವಾಗಿದೆ. ವಾಸ್ತವವಾಗಿ ಇದು ವಿಜ್ಞಾನಕ್ಕಿಂತ ಹೆಚ್ಚಿನದಾಗಿ ಕಲೆಯಾಗಿದೆ.

**ಸಾರ್ವಜನಿಕ ಆಡಳಿತ ಒಂದು ವಿಜ್ಞಾನ:**

1887ರಲ್ಲಿ ವುಡ್ರೋ ವಿಲ್ಸನ್ ತಮ್ಮ 'ಆಡಳಿತ ಅಧ್ಯಯನ' ಕೃತಿಯಲ್ಲಿ ಸಾರ್ವಜನಿಕ ಆಡಳಿತ ಎಂಬುದು ಒಂದು ವಿಜ್ಞಾನ ಎಂದಿದ್ದಾರೆ. ಚಾರ್ಲ್ಸ್ ಬರ್ಡ್, ಲೂಥರ್ ಗಲಕ್–ಟೇಲರ್, ವಿಲ್ಲೊಬೆ, ಬಿಯರ್ಡ್, ಸಾರ್ವಜನಿಕ ಆಡಳಿತ ಒಂದು ವಿಜ್ಞಾನ ಎಂದು ಪ್ರತಿಪಾದಿಸಿದರು.

**ವಿಜ್ಞಾನ ಎಂಬುದಕ್ಕೆ ವಾದಗಳು:**

ವಿಜ್ಞಾನವನ್ನು ಅನುಭವ ಮತ್ತು ಅವಲೋಕನ ಮೂಲಕವಾಗಿ ಪಡೆದ ಕ್ರಮಬದ್ಧ ಜ್ಞಾನ ಎನ್ನುವುದಾದರೆ ಸಾರ್ವಜನಿಕ ಆಡಳಿತವು ಒಂದು ವಿಜ್ಞಾನ. ಸಾಂಪ್ರದಾಯಿಕ ಲೇಖಕರ ಪ್ರಕಾರ ಸಾರ್ವಜನಿಕಾಡಳಿತವು ಕೆಲವು ನಿರ್ದಿಷ್ಟ ಹಾಗು ಸ್ಥಿರವಾದ ನಿಯಮಗಳನ್ನು ರೂಡಿಸುವುದರಿಂದ ಅದೊಂದು ವಿಜ್ಞಾನ. ರಾಜ್ಯದ ದಿನನಿತ್ಯದ ಆಡಳಿತವನ್ನು ನಿರ್ದಿಷ್ಟ ನಿಯಮಗಳಿಗೆ ಅನುಗುಣವಾಗಿ ನಡೆಸಲಾಗುತ್ತದೆ.

ಸಾರ್ವಜನಿಕ ಆಡಳಿತದಲ್ಲಿಯೂ ಪರಿಶೋಧನೆ, ಅವಲೋಕನ ಪದ್ಧತಿ, ನಿರ್ದಿಷ್ಟ ತತ್ವ ಸಿದ್ಧಾಂತಗಳ ಉಲ್ಲೇಖಗಳಿರುವುದರಿಂದ ಅದೊಂದು ವಿಜ್ಞಾನ. ಒಟ್ಟಿನಲ್ಲಿ ಸಮಸ್ತ ಆಡಳಿತ ವ್ಯವಸ್ಥೆ ಒಂದು ಪ್ರಯೋಗ ಶಾಲೆ ಎಂದಾದರೇ ಸಾರ್ವಜನಿಕ ಆಡಳಿತ ಒಂದು ವಿಜ್ಞಾನವೆಂದೇ ಪರಿಗಣಿಸಬಹುದು.

**ಸಾರ್ವಜನಿಕ ಆಡಳಿತ – ವಿಜ್ಞಾನವಲ್ಲ:**

'ವಿಜ್ಞಾನ' ಎಂಬ ಪದವನ್ನು ಭೌತಶಾಸ್ತ್ರ. ರಸಾಯನಶಾಸ್ತ್ರ, ಜೀವಶಾಸ್ತ್ರ ಮುಂತಾದವುಗಳಿಗೆ ಬಳಸಲಾಗುತ್ತದೆ. ಸಾರ್ವಜನಿಕ ಆಡಳಿತದಲ್ಲಿ ಸಾರ್ವತ್ರಿಕವಾಗಿ ಅನ್ವಯವಾಗುವ, ಸಾರ್ವತ್ರಿಕವಾಗಿ ಸತ್ಯವಾಗಿರುವ ನಿಯಮಗಳಿರುವುದಿಲ್ಲ. ವ್ಯವಹಾರಿಕ ಅನುಭವದ ಆಧಾರದ ಮೇಲೆ ಕೆಲವೊಂದು ತತ್ವಗಳನ್ನು ರಚಿಸಲಾಗಿದೆ. ಸರ್ವಕಾಲಕ್ಕೂ, ಸರ್ವ ಸ್ಥಿತಿಗತಿಗಳಿಗೂ ವಾಸ್ತವವಾಗಿ ಉಳಿಯುವ ಯಾವ ವಿಷಯಗಳು ಸಾರ್ವಜನಿಕ ಆಡಳಿತದಲ್ಲಿ ಇರುವುದಿಲ್ಲ. ಸಾರ್ವಜನಿಕ

ಆಡಳಿತದಲ್ಲಿ ಯಾವೊಂದು ಕಡ್ಡಾಯವಾದ ಅಚಲವಾದ ನಿಯಮಗಳಿಲ್ಲದೇ ಇರುವುದು. ಪ್ರಯೋಗ ಶಾಲೆಯ ಪ್ರಯೋಗಗಳು ಸಾರ್ವಜನಿಕ ಆಡಳಿತದಲ್ಲಿ ಸಾಧ್ಯವಿಲ್ಲ. ಜನರ ಮೇಲೆ ಪ್ರಯೋಗ ನಡೆಸುವುದು ಸಾಧ್ಯವಿಲ್ಲ, ಸೂಕ್ತವಲ್ಲ. ವಿಜ್ಞಾನದಲ್ಲಿನ ಮುಂದಿನ ಆಗುಹೋಗುಗಳ ನಿಖರತೆಯ ಅರಿವು ಸಾರ್ವಜನಿಕ ಆಡಳಿತದಲ್ಲಿ ದೊರೆಯುವುದಿಲ್ಲ.

1) ನಿರ್ದಿಷ್ಟ ಮತ್ತು ನಿಖರವಾದ ವ್ಯಾಖ್ಯಾನಗಳಿಲ್ಲ

2) ತತ್ವಗಳು ಶ್ರೇಷ್ಠವು ಮತ್ತು ಸಾರ್ವತ್ರಿಕವೂ ಅಲ್ಲ

3) ಹೇಳಿಕೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾವಣೆ

4) ಕಾರಣ ಮತ್ತು ಪರಿಣಾಮಗಳನ್ನು ಗಮನಿಸುವುದಿಲ್ಲ

5) ನಿರ್ದಿಷ್ಟತೆ, ಪ್ರಯೋಗ ಸಾಧ್ಯವಿಲ್ಲ.

**ನೂತನ ಸಾರ್ವಜನಿಕ ಆಡಳಿತ:**

ಎನ್‌ಪಿಎಯನ್ನು 1960ರಿಂದ 1970ರ ದಶಕದಲ್ಲಿ ಅಮೇರಿಕಾದ ಜಿನೆವಾದಲ್ಲಿ ಗುರುತಿಸಲಾಯಿತು. ಸಾರ್ವಜನಿಕ ಆಡಳಿತ ವಿಷಯಕ್ಕೆ ಪ್ರಸ್ತುತ ಸಾಮಾಜಿಕ ಬದಲಾವಣೆಗಳಿಗೆ ತಕ್ಕಂತೆ ಹೊಸರೂಪವನ್ನು ನೀಡಲಾಗಿದೆ. ಹಳೆಯ ಸಾಂಪ್ರದಾಯಿಕ ಪರಿಕಲ್ಪನೆ ಮತ್ತು ಅದರ ದೃಷ್ಟಿಕೋನವನ್ನು ಎನ್‌ಪಿಎ ಬದಲಾಯಿಸಿದೆ. ಹಳೆಯ / ಈ ಮುಂಚೆ ಸಾರ್ವಜನಿಕ ಆಡಳಿತವ ಆಡಳಿತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿತ್ತು. ಮೌಲ್ಯಗಳಿಗಿಂತ ತತ್ವಗಳು ಮತ್ತು ಕ್ರಮ ವಿಧಾನಗಳನ್ನು ತತ್ವಶಾಸ್ತ್ರ ಆರ್ಥಿಕತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿತ್ತು.

**ನೂತನ ಸಾರ್ವಜನಿಕ ಆಡಳಿತ ಹುಟ್ಟಿಗೆ ಕಾರಣಗಳು:**

* 1960ರ ಅಂತ್ಯದಲ್ಲಿ ಅಮೇರಿಕಾದಲ್ಲಿ ಸಾಮಾಜಿಕ ಪರಿಸರದಲ್ಲಿ ಆತಂಕ ನಿಭಾಯಿಸುವಲ್ಲಿ ವೈಫಲ್ಯತೆ

* ಸಾಂಪ್ರದಾಯಿಕ ಸಾರ್ವಜನಿಕ ಆಡಳಿತದ ವಿಫಲತೆ

* ಸಾಮಾಜಿಕ ಉದ್ದಿಗ್ನತೆ ಮತ್ತು 1960ರ ಅವಧಿಯ ಬಿಕ್ಕಟ್ಟನ್ನು ಸಾಂಪ್ರದಾಯಿಕ ಸಾರ್ವಜನಿಕ ಆಡಳಿತ ಬಗೆಹರಿಸಲು ವಿಫಲವಾಯಿತು.

**ನೂತನ ಸಾರ್ವಜನಿಕ ಆಡಳಿತ ಬೆಳವಣಿಗೆ ಹಂತಗಳು:**

* ಸಾರ್ವಜನಿಕ ಸೇವೆಗಾಗಿ ಉನ್ನತ ಶಿಕ್ಷಣ ವಿಷಯದ ಮೇಲೆ 1967ರಲ್ಲಿ ಜಾನಹನಿ ವರದಿ

* 1967ರಲ್ಲಿ ಫಿಲಾಡೆಲ್ಫಿಯಾ ಸಮ್ಮೇಳನ – ಅಲ್ಲಿನ ನಿರ್ಣಯಗಳು ಈ ಕೆಳಗಿನಂತಿವೆ.

– ರಾಜಕಾರಣ ಮತ್ತು ಆಡಳಿತಗಳ ದ್ವಿವಿಭಜನೆ

– ಅಧಿಕಾರ ಶ್ರೇಣಿಯ ಪುನರ್ ಪರಿಶೀಲನೆ

– ಮೇಲಾಧಿಕಾರಿಗಳು ಮತ್ತು ಅಧೀನ ಅಧಿಕಾರಿಗಳು ಎಂಬ ಕಲ್ಪನೆ ಬಿಟ್ಟು 'ಸಮಾನರು'

* 1968ರ ವಿನ್ನು ಬ್ರೂಕ್ ಸಮ್ಮೇಳನ (2 ಸಮ್ಮೇಳನ)

* ಪ್ರೊ. ವಾಲ್ಡೋ – 1971ರಲ್ಲಿ 'ಬಂಡಾಯ ಸಮಯದಲ್ಲಿ ಸಾರ್ವಜನಿಕ ಆಡಳಿತ'

**ನೂತನ ಸಾರ್ವಜನಕ ಆಡಳಿತದ ಲಕ್ಷಣಗಳು:**

* ಸಮಂಜಸತೆ

* ಮೌಲ್ಯಗಳು

* ಸಾಮಾಜಿಕ ಬದಲಾವಣೆ

* ಬದಲಾವಣೆ (ಪರಿವರ್ತನೆ)

* ಕಕ್ಷಿಗಾರ ಆಧಾರಿತ

**ರಾಬರ್ಟ್ ಉಸಿ ಪ್ರಕಾರ ಎನ್‌ಪಿಎ ಲಕ್ಷಣಗಳು:**

* ಮಾನವ ದೃಷ್ಟಿಕೋನದ ಆಡಳಿತ
* ಪ್ರಸ್ತುತತೆಯ ಆಡಳಿತ
* ಸಾಮಾಜಿಕ ಸಮಾನತೆಯ ಮಾನವತಾಭಿವೃದ್ಧಿ
* ಸಂಶೋಧನೆ ಮತ್ತು ಬದಲಾವಣೆ
* ವಿವೇಚನೆಯ ಆಡಳಿತ

**ಪ್ರೊ. ವಾಲ್ಡೋ ಪ್ರಕಾರ ಎನ್‌ಪಿಎ ಲಕ್ಷಣಗಳು:**

* ಕಕ್ಷಿಧಾರರ ಆಧಾರಿತ ನೌಕರಶಾಹಿ
* ಪ್ರತಿನಿಧಿ ನೌಕರಶಾಹಿ
* ಆಡಳಿತದಲ್ಲಿ ಜನರ ಸಹಭಾಗಿತ್ವ

ನೂತನ ಸಾರ್ವಜನಿಕ ಆಡಳಿತವು ಸಮಾಜದಲ್ಲಿ ಖಾಸಗೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿತೆನ್ನಬಹುದು.

**ವಿಮರ್ಶೆ:**

ಎನ್‌ಪಿಎನಲ್ಲಿ ತೀವ್ರ ಅಭಿವೃದ್ಧಿಯ ಕುರಿತಾದ ವಿಶ್ಲೇಷಣೆ ಇದೆ. ಆದ್ದರಿಂದ ಎನ್‌ಪಿಎಯು ಅಭಿವೃದ್ಧಿ ಆಡಳಿತವಾಗಿದೆ. ಸಾರ್ವಜನಿಕ ಆಡಳಿತಕ್ಕೆ ಹೋಲಿಸಿದರೆ ಗಮನಾರ್ಹವಾದ ಯಾವ ಹೊಸ ತತ್ವಗಳು ಇದರಲ್ಲಿ ಇಲ್ಲ ಎಂಬ ವಾದವಿದೆ.

**ನೂತನ ಸಾರ್ವಜನಿಕ ನಿರ್ವಹಣೆ:**

ಸಾರ್ವಜನಿಕ ಆಡಳಿತದಲ್ಲಿ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿರುವ ನೂತನ ಪರಿಕಲ್ಪನೆಯಾಗಿದೆ. 1980ರ ದಶಕದಲ್ಲಿ ಜನ್ಮತಾಳಿದ ದೃಷ್ಟಿಕೋನ. ನೂತನ ಸಾರ್ವಜನಿಕ ನಿರ್ವಹಣೆ ಎಂಬ ಪದವನ್ನು 1991ರಲ್ಲಿ ಕ್ರಿಸ್ಟೋಫರ್ ಹುಡ್ 'ಪಬ್ಲಿಕ್ ಮ್ಯಾನೇಜ್‌ಮೆಂಟ್ ಫಾರ್ ಆಲ್ ಸೀಜನ್ಸ್' ಎಂಬ ಪತ್ರಿಕೆಯಲ್ಲಿ ಬಳಸಿದರು. ಎನ್‌ಪಿಎಂ ಪರಿಕಲ್ಪನೆಯ ವಿದ್ವಾಂಸರು ಗೇರಾಲ್ಡ್ ಕೆಡಿನ್, ಎಲ್‌ಟೆರ್ರಿ, ಆರ್.ರಾಡ್ಸ್, ಕೆಲ್ಲಿ, ಪಿ.ಹಾಗೇಟ್. ಇದನ್ನು ಮಾರುಕಟ್ಟೆ ಆಧಾರಿತ ಸಾರ್ವಜನಿಕ ಆಡಳಿತ, ವಾಣಿಜ್ಯೋದ್ಯಮಿ ಸರ್ಕಾರ ಎಂದು ಕರೆಯಲಾಗುತ್ತದೆ.

**ಲಕ್ಷಣಗಳು:**

ಸರ್ಕಾರವು ಸಾರ್ವಜನಿಕ ವಲಯ, ಖಾಸಗಿ ವಲಯ ಹಾಗೂ ಸರ್ಕಾರೇತರ ವಲಯಗಳಿಗೆ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪ್ರೋತ್ಸಾಹ ನೀಡಬೇಕು. ತಮ್ಮ ಸಮಸ್ಯೆಯನ್ನು ತಾವೇ ಬಗೆಹರಿಸಿಕೊಳ್ಳಲು ಸಮುದಾಯಗಳಿಗೆ ಅಧಿಕಾರ ನೀಡಬೇಕು. ಆಡಳಿತಶಾಹಿ ನಿಯಂತ್ರಣದಿಂದ ಸರ್ಕಾರದ ವಿವಿಧ ಸೇವೆಗಳ ಬಿಡುಗಡೆ ಮಾಡುವುದು. ವಸ್ತುಗಳ, ಸೇವೆಗಳ ಪೂರೈಕೆದಾರರ ನಡುವೆ ಸ್ಪರ್ಧಾ ಮನೋಭಾವ ಬೆಳೆಸಬೇಕು. ಫಲಿತಾಂಶಗಳಿಗೆ ಹೆಚ್ಚಿನ ಆದ್ಯತೆ ನೀಡುವುದು. ಅಧಿಕಾರ ವಿಕೇಂದ್ರೀಕರಣಕ್ಕೆ ಗಮನ ಹರಿಸುವುದು. ಇದು ವ್ಯವಹಾರ, ಗ್ರಾಹಕ ಸೇವೆಯ ಮೇಲೆ ಆಧಾರಿತವಾಗಿದೆ. ಮಾರುಕಟ್ಟೆ ವ್ಯವಸ್ಥೆಗೆ ಆದ್ಯತೆ ಮತ್ತು ಸರ್ಕಾರ ಸಮಸ್ಯೆಗಳು ಉದ್ಭವವಾಗದಂತೆಯೇ ನೋಡಿಕೊಳ್ಳಬೇಕು. ಅದಕ್ಕೆ ತಕ್ಕಂತೆ ನೀತಿ ನಿರೂಪಣೆ ತಯಾರಿಸಬೇಕು.

**ಪರಿಣಾಮಗಳು:**

1) ನಮ್ಯತೆಯ ಮಾರುಕಟ್ಟೆ ಆಧಾರಿತ ಆಡಳಿತ ವ್ಯವಸ್ಥೆಗೆ ಪರಿವರ್ತನೆ

2) ಸಮಾಜ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರದ ಪಾತ್ರ ಸರ್ಕಾರ–ನಾಗರಿಕ ಸಂಬಂಧದಲ್ಲಿ ಬದಲಾವಣೆ

3) ಉನ್ನತ ಮತ್ತು ಉತ್ತಮ ಸೇವೆಗಳು ಸಾರ್ವಜನಿಕರಿಗೆ ಒದಗಿಸಲು ವ್ಯವಸ್ಥಾಪಕರ ಸ್ವಾಯತ್ತತೆಗೆ ಒತ್ತು ನೀಡಿದೆ

4) ಖಾಸಗಿ ವಲಯಗಳಲ್ಲಿ ಅನೇಕ ಸೇವೆಗಳ ಅಭಿವೃದ್ಧಿ

5) ಸ್ವಾಯತ್ತ ಸಾರ್ವಜನಿಕ ಸಂಸ್ಥೆಗಳ ನಿರ್ಮಾಣ

6) ಸರ್ಕಾರದ ಗಾತ್ರದಲ್ಲಿ ಕಡಿತ

7) ಸರ್ಕಾರಿ ಸಂಸ್ಥೆಗಳ ಖಾಸಗೀಕರಣ, ಖಾಸಗಿ ಸಾಂಸ್ಥಿಕರಣ

8) ಆಯವ್ಯಯ ಶ್ರೇಯೋಭಿವೃದ್ದಿ ವೆಚ್ಚದಲ್ಲಿ ಕಡಿತ

9) ಕಾರ್ಯನಿರ್ವಹಣಾ ಮೌಲ್ಯಮಾಪನ

10) ಕೆಳಹಂತಗಳಿಗೆ ಅಧಿಕಾರಿಗಳ ವಿಕೇಂದ್ರೀಕರಣ

11) ಆಡಳಿತ ಮುಕ್ತತೆ ಮತ್ತು ಪಾರದರ್ಶಕತೆಯನ್ನು ಪ್ರೋತ್ಸಾಹಿಸುವುದು

12) ಆಡಳಿತದಲ್ಲಿ ಜನತೆ4 ಪಾಲ್ಗೊಳ್ಳುವುದು

**ಆಡಳಿತ ಮತ್ತು ನಿರ್ವಹಣೆಯ ವ್ಯತ್ಯಾಸಗಳು:**

**ಆಡಳಿತ:**

* ಸಂಸ್ಥೆಯ ಧ್ಯೇಯವನ್ನು ನಿರ್ಧರಿಸುತ್ತದೆ
* ಸಂಸ್ಥೆಯ ಉದ್ದೇಶವನ್ನು ನಿಶ್ಚಯಿಸುತ್ತದೆ
* ಇಲ್ಲಿ ಸಂಪೂರ್ಣ ಅಧಿಕಾರ ಆಡಳಿತಗಾರರಿಗೆ ಇರುತ್ತದೆ
* ಮಾನವ ಶಕ್ತಿಗೆ ನಿರ್ದೇಶನ ನೀಡುವ ಕಾರ್ಯವು ಆಡಳಿತಕ್ಕೆ ಇರುತ್ತದೆ
* ಇದು ಯೋಜನೆ ಮತ್ತು ಸಂಘಟನೆಯ ಕಾರ್ಯಗಳನ್ನು ನಿರ್ವಹಿಸುತ್ತದೆ
* ಇದು ಉಚ್ಚಮಟ್ಟದ ನಿರ್ವಹಣೆಗೆ ಸಂಬಂಧಿಸಿದೆ
* ಇದು ಆಡಳಿತಾತ್ಮಕ ನೈಪುಣ್ಯತೆಯನ್ನು ಒಳಗೊಂಡಿದೆ

**ನಿರ್ವಹಣೆ:**

* ಸಂಸ್ಥೆಯ ಧ್ಯೇಯವನ್ನು ಕಾರ್ಯರೂಪಕ್ಕೆ ತರುತ್ತದೆ
* ಉದ್ದೇಶವನ್ನು ಈಡೇರಿಸುತ್ತದೆ
* ಇಲ್ಲಿ ಆಡಳಿತಗಾರರಿಂದ ಕೊಡುವ ಅಧಿಕಾರ ಮಾತ್ರವಿರುತ್ತದೆ
* ನಿರ್ದೇಶನ ನೀಡುವುದಕ್ಕೆ ಸಂಬಂಧವನ್ನು ಹೊಂದಿದೆ
* ಪ್ರೇರೇಪಿಸುವ ಮತ್ತು ನಿಯಂತ್ರಿಸುವ ಕಾರ್ಯ ನಿರ್ವಹಿಸುತ್ತದೆ
* ಇದು ಮಧ್ಯಮ ಮತ್ತು ಕೆಳಮಟ್ಟದ ನಿರ್ವಹಣೆಗೆ ಸಂಬಂಧಿಸಿದೆ
* ಇದು ತಾಂತ್ರಿಕ ನೈಪುಣ್ಯತೆಯನ್ನು ಒಳಗೊಂಡಿರುತ್ತದೆ

# ಅಧ್ಯಾಯ – 2

# ಸಂಘಟನೆಯ ರಚನೆ

ಆರ್ಗನೈಸೇಷನ್ ಇಂಗ್ಲೀಷ್ ಪದದ ಅನುವಾದವೇ ವ್ಯವಸ್ಥೆ ಅಥವಾ ಸಂಘಟನೆ. ಸರ್ಕಾರದಲ್ಲಿ ಕಾರ್ಯಾಂಗದ ಮುಖ್ಯಾಧಿಕಾರಿ ಮತ್ತು ಆತನ ಅಧೀನ ಆಡಳಿತಾಧಿಕಾರಿಗಳಿಗೆ ವಹಿಸಲಾಗಿರುವ ಕಾರ್ಯಗಳನ್ನು ನಿರ್ವಹಿಸಲು ರೂಡಿಸಲಾಗಿರುವ ರಚನಾ ವ್ಯವಸ್ಥೆಯೇ ಸಂಘಟನೆ. ಪೂರ್ವ ನಿರ್ಧಾರಿತ ಉದ್ದೇಶವೊಂದರ ಸಾಧನೆಯನ್ನು ಸುಲಲಿತಗೊಳಿಸಲು ಕಾರ್ಯ ಮತ್ತು ಜವಾಬ್ದಾರಿಯನ್ನು ಉದ್ಯೋಗಿ ವರ್ಗದ ನಡುವೆ ಹಂಚಿ ಏರ್ಪಡಿಸುವ ಒಂದು ವ್ಯವಸ್ಥೆಯಾಗಿದೆ ಎಂದು ಎಲ್.ಡಿ.ವೈಟ್ ಹೇಳುತ್ತಾರೆ.

ವ್ಯವಸ್ಥೆ ಎಂದರೆ ಸಾರ್ವಜನಿಕ ಉದ್ದೇಶ ಸಾಧನೆಗಾಗಿ ನೂರಾರು ಜನರು ಒಂದು ನಿರ್ದಿಷ್ಟ ನಿಯಮಕ್ಕೆ ಒಳಗಾಗಿ ಕ್ರಮಬದ್ಧವಾಗಿ ಕಾರ್ಯನಿರ್ವಹಿಸುವ ವಿಧಾನವಾಗಿದೆ. ವ್ಯವಸ್ಥೆಯ ವಿಭಿನ್ನ ವ್ಯಾಖ್ಯೆಗಳನ್ನು ಗಮನಿಸಿದಾಗ ಇದು ಮೂರು ದೃಷ್ಟಿಕೋನಗಳಿಗೆ ಒತ್ತು ಕೊಟ್ಟಿರುವುದು ಕಂಡು ಬರುತ್ತದೆ.

1) ಆಡಳಿತ ರಚನೆಯನ್ನು ರೂಪಿಸುವ ಕಾರ್ಯ ಸೂಚಿಸಲು

2) ರಚನೆಯ ವಿನ್ಯಾಸ ಸಿದ್ಧಪಡಿಸುವ ಹಾಗೂ ರಚನೆಯನ್ನು ರೂಪಿಸುವ ಕಾರ್ಯ ಸೂಚಿಸಲು

3) ರಚನೆಯನ್ನೇ ಸೂಚಿಸಲು

ವ್ಯವಸ್ಥೆ ಎಂದರೆ ಕೇವಲ ರಚನೆ ಮತ್ತು ವಿನ್ಯಾಸವಲ್ಲ. ಇದು ರಚನೆ ಮತ್ತು ಪೂರ್ವ ನಿರ್ಧಾರಿತ ಉದ್ದೇಶ ಸಾಧನೆಯಲ್ಲಿ ಕಾರ್ಯ ನಿರತರಾಗಿರುವ ಸಿಬ್ಬಂದಿ ಮತ್ತು ಜನರನ್ನು ಒಳಗೊಂಡಿದೆ.

**ವ್ಯವಸ್ಥೆಯು ಹೊಂದಿರುವ ಲಕ್ಷಣಗಳು:**

1) ಉದ್ದೇಶಿತ ಗುರಿ ಸಾಧಿಸಲು ಜನಬಲ (ಮಾನವ ಸಂಪನ್ಮೂಲ)

2) ಉದ್ದೇಶಿತ ಗುರಿ ಸಾಧಿಸಲು ಸಾಮೂಹಿಕ ಪ್ರಯತ್ನ

3) ಅಧಿಕಾರ ವಿಭಜನೆ – ಪ್ರತಿಯೊಬ್ಬ ಉದ್ಯೋಗಿಯ ಅಧಿಕಾರ ಕಾರ್ಯ ಹೊಣೆಗಾರಿಕೆ ನಿರ್ಧರಿತವಾಗುತ್ತದೆ

4) ನಿಯೋಜನೆ ಮತ್ತು ಸಮನ್ವಯ

5) ಶ್ರಮ ವಿಭಜನೆ

6) ಸಮಾನ ಉದ್ದೇಶ

**ಸಂಘಟನೆಯ ಪ್ರಾಮುಖ್ಯತೆ:**

ಉತ್ತಮ ಸಂಘಟನೆಗಳು ಸರಿಯಾಗಿ ನಿರ್ವಹಿಸದಿದ್ದರೆ ನಮ್ಮ ಜೀವನ ಮಟ್ಟವನ್ನು ನಮ್ಮ ಸಾಂಸ್ಕೃತಿಕ ಮಟ್ಟ ಮತ್ತು ಪ್ರಜಾಸತ್ತಾತ್ಮಕ ಶೈಲಿಯನ್ನು ಕಾಯ್ದುಕೊಳ್ಳಲಿಕ್ಕಾಗದು. ನಾವು ವ್ಯವಸ್ಥೆಯಲ್ಲಿಯೇ ಹುಟ್ಟುತ್ತೇವೆ. ವ್ಯವಸ್ಥೆಯಲ್ಲಿಯೇ ಬೆಳೆಯುತ್ತೇವೆ. ವ್ಯವಸ್ಥೆಗಾಗಿಯೇ ಕಾರ್ಯ ನಿರ್ವಹಿಸುತ್ತೇವೆ.

**ಮಹತ್ವ:**

1) ವ್ಯವಸ್ಥೆಯು ಹೆಚ್ಚಿನ ಉತ್ಪಾದಕತೆ ಪರಿಣಾಮಕತೆ ಮತ್ತು ಫಲಿತಾಂಶಗಳ ಸಾಧನೆಗಾಗಿ ಮಾನವನ ಪ್ರಯತ್ನಗಳನ್ನು ಸರಿಯಾದ ದಿಕ್ಕಿನಲ್ಲಿ ನಿರ್ದೇಶಿಸುವ ಒಂದು ಉತ್ತಮ ಸಾಧನವಾಗಿದೆ.

2) ಕರ್ತವ್ಯ ಮತ್ತು ಜವಾಬ್ದಾರಿಯ ಮೂಲಕ ಸಂಸ್ಥೆಯ ಸ್ಪಷ್ಟರೂಪದ ಕಾರ್ಯ ನಿರ್ವಹಣೆ.

3) ಕಾರ್ಯ ನಿರ್ವಹಣೆಯಲ್ಲಿ ನಿಶ್ಚಿತತೆ ಶ್ರೇಷ್ಠತೆಯನ್ನು ಕಾಣಬಹುದು.

4) ಒಂದು ಸುಸ್ಥಿತ ವ್ಯವಸ್ಥೆಯಲ್ಲಿ ದಕ್ಷತೆಯು ಹೆಚ್ಚುವುದರಿಂದ ಕೆಲಸ ನಿರ್ವಹಣೆಯಲ್ಲಿ ವಿಳಂಬಕ್ಕೆ ಗೊಂದಲ ಮತ್ತು ತಪ್ಪು ತಿಳುವಳಿಕೆಯನ್ನು ನಿವಾರಿಸುತ್ತದೆ.

5) ಧ್ಯೇಯ ಸಾಧನೆ.

6) ರಚನಾತ್ಮಕ ಸಂಬಂಧಗಳನ್ನು ಸಮನ್ವಯಗೊಳಿಸುತ್ತವೆ.

7) ಸಂಘಟನೆ ಇಲ್ಲದೆಯೇ ಯಾವ ವ್ಯವಸ್ಥೆಯು ಕಾರ್ಯ ನಿರ್ವಹಿಸುವುದಿಲ್ಲ.

8) ಸಂಘಟನೆ ಮಾನವ ಜೀವನದ ಅತಿ ಮುಖ್ಯ ಅಂಗವಾಗಿದೆ.

ಸಂಘಟನೆಯು ಎರಡು ರೀತಿಯಲ್ಲಿ ಕಂಡು ಬರುತ್ತದೆ. ಅವುಗಳು ಔಪಚಾರಿಕ ಸಂಘಟನೆ ಮತ್ತು ಅನೌಪಚಾರಿಕ ಸಂಘಟನೆ. ಯಾವುದು ಪುವ ನಿರ್ಧಆರಿತ ನಿಯಮಗಳಿಗೆ ಅನುಸಾರವಾಗಿ, ವಿಧಿಬದ್ಧವಾಗಿ ಹುಟ್ಟಿರುತ್ತದೆಯೋ ಅದು ಔಪಚಾರಿಕ ಸಂಘಟನೆಯಾಗಿದೆ. ಹಾಗೆಯೇ ಅನೌಪಚಾರಿಕ ಸಂಘಟನೆಯು ಯಾವೊಂದು ವಿಧಿಬದ್ದ ಅಧಿಕಾರದಿಂದ ಮಂಜೂರಾಗಿರುವುದಿಲ್ಲ. ಇದು ಸಾಮಾಜಿಕ ಪರಸ್ಪರ ಕ್ರಿಯೆಗಳ ವ್ಯಕ್ತಿಗಳ ಸಂಬಂಧಗಳ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ಒಂದು ಸಂಸ್ಥೆಯಾಗಿದೆ. ಅನೌಪಚಾರಿಕ ಸಂಘಟನೆಯ ಅನಧಿಕೃತವಾಗಿದ್ದು, ವಿಧಿ ನಿಯಮಗಳಿಗೆ ಅನುಸಾರವಾಗಿ ರೂಪಿಸಲಾಗಿರುವುದಿಲ್ಲ. ಇದು ಸ್ವಾಭಾವಿಕವಾಗಿ ತನ್ನಷ್ಟಕ್ಕೆ ತಾನೇ ಔಪಚಾರಿಕ ವ್ಯವಸ್ಥೆಯ ನೆರಳಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ವ್ಯವಸ್ಥೆಯಲ್ಲಿಯ ನೌಕರರ ಗುಣ ಸ್ವಭಾವಗಳು, ರಾಗದ್ವೇಷಗಳು, ಭಾವನೆಗಳು, ಅವರ ಮನೋಧರ್ಮ ಸಂಪ್ರದಾಯಗಳು ಮುಂತಾದವು ಅನೌಪಚಾರಿಕ ಸಂಘಟನೆಯ ಪ್ರತಿಬಿಂಬವಾಗಿವೆ.

**ಅನೌಪಚಾರಿಕ ಸಂಘಟನೆಯ ಅವಶ್ಯಕತೆ ಮತ್ತು ಕಾರಣಗಳು:**

1) ವ್ಯಕ್ತಿಗಳು ತಮ್ಮ ಸಾಮಾಜಿಕ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಅನೌಪಚಾರಿಕ ಸಂಘಟನೆಗಳಿಗೆ ಮೊರೆ ಹೋಗುತ್ತಾರೆ.

2) ಸದಸ್ಯರ ಬೇಡಿಕೆ ಪೂರೈಸಲು ಅನೌಪಚಾರಿಕ ಸಂಘಟನೆ ಅಸ್ತಿತ್ವಕ್ಕೆ ಬರುತ್ತದೆ.

3) ಮಾನವರು ತಮ್ಮ ಹಿತವನ್ನು ಸಾಮಾಜಿಕ ಸಂಬಂಧಗಳಲ್ಲಿ ಕಂಡುಕೊಳ್ಳುತ್ತಾರೆ. ಸಾಮಾಜಿಕ ಸಂಬಂಧಗಳನ್ನು ಹೊಂದುವುದರ ಮೂಲಕ ಸಂಸ್ಥೆಯ ಸದಸ್ಯರು ತಮ್ಮ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಅನೌಪಚಾರಿಕ ಸಂಘಟನೆ ಇಂತಹ ಸಂಬಂಧಗಳಿಗೆ ಅವಕಾಶ ನೀಡುತ್ತದೆ.

4) ಸಂಸ್ಥೆಯ ಸದಸ್ಯನು ಉದ್ವಿಗ್ನತೆಗೆ, ನಿರಾಶೆಗೆ ಒಳಗಾಗುತ್ತಾನೆ. ಈ ಸಂದರ್ಭಗಳಿಂದ ಹೊರ ಬಂದು ಶಾಂತಿ, ಅನಿಕಂಪ, ನೆಮ್ಮದಿ ಪಡೆಯಲು ಈ ರೀತಿಯ ಸಂಘಟನೆಗಳು ನೆರವಾಗುತ್ತವೆ.

5) ಸಾಂಸ್ಥಿಕ ಗುರಿಗಳನ್ನು ಸಾಧಿಸಲು ಸದಸ್ಯರು ತಮ್ಮ ಸಹದ್ಯೋಗಿಗಳ ಮತ್ತು ಜೊತೆಗಾರರಿಂದ ಸಹಾಯ ಮತ್ತು ಮಾರ್ಗದರ್ಶನ ಪಡೆಯಲು ಅನೌಪಚಾರಿಕ ಸಂಘಟನೆ ಅವಶ್ಯಕ.

6) ಸದಸ್ಯರಿಗೆ ರಚನಾತ್ಮಕ, ಕ್ರಿಯಾಶೀಲ ಕೌಶಲ್ಯತೆ ಮತ್ತು ನೈಪುಣ್ಯತೆಡ ಪ್ರದರ್ಶಿಸಲು ಅನೌಪಚಾರಿಕ ಸಂಘಟನೆ ಅನುವು ಮಾಡಿ ಕೊಡುತ್ತದೆ.

7) ಅನೌಪಚಾರಿಕ ಸಂಘಟನೆಗಳು ಶೀಘ್ರ ಸಂಪರ್ಕ ಮಾಧ್ಯಮವಾಗಿವೆ.

**ವ್ಯತ್ಯಾಸಗಳು:**

**ಔಪಚಾರಿಕ ಸಂಘಟನೆ:**

* ಉದ್ದೇಶಪೂರ್ವಕವಾಗಿ ರೂಪಿಸಲಾಗಿರುತ್ತದೆ.
* ಯೋಜನಾ ಬದ್ದವಾದ, ಅಧಿಕೃತವಾದುದು
* ಬೃಹತ್ ಗಾತ್ರ
* ಸ್ಥಿರವಾದುದು
* ನಿರ್ದಿಷ್ಟ ರಚನೆಯುಳ್ಳ ಯಾಂತ್ರಿಕ ಹಾಗೂ ವಿವೇಚನೆಯುತವಾದುದು
* ವಿಧಿಬದ್ದ ಅಧಿಕಾರವುಳ್ಳದ್ದು
* ಅಧಿಕೃತ ಮತ್ತು ಸ್ಪಷ್ಟವಾದ ವಿಧಾನಗಳ ಅನುಸರಣೆ

* ಸಮಾಜಕ್ಕೆ ಸೇವೆ ಒದಗಿಸಲು ಸ್ಥಾಪನೆಯಾಗಿರುತ್ತದೆ
* ನಿಧಾನವಾಗಿ ಮಾಹಿತಿ ಹರಡುವಿಕೆ
* ಇದನ್ನು ನಕ್ಷೆಯಲ್ಲಿ ತೋರಿಸಬಹುದು

**ಅನೌಪಚಾರಿಕ ಸಂಘಟನೆ:**

* ಸ್ವಾಭಾವಿಕವಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ
* ಯೋಜನಾಬದ್ದವೂ ಅಲ್ಲ, ಅಧಿಕೃತವಾದುದೂ ಅಲ್ಲ
* ಚಿಕ್ಕ ಗಾತ್ರ
* ಕ್ರಿಯಾಶೀಲವಾದುದು
* ರಚನೆ ರಹಿತ, ವೈಯಕ್ತಿಕವಲ್ಲದ್ದು ಮತ್ತು ಭಾವನಾತ್ಮಕವಾದುದು
* ವಿಧಿರಹಿತ ಶಕ್ತಿವುಳ್ಳದ್ದು
* ಅಸ್ಪಷ್ಟ ಮಾರ್ಗಗಳ ಅನುಸರಣೆ
* ಸದಸ್ಯರ ತೃಪ್ತಿಗಾಗಿ ಸ್ಥಾಪನೆಯಾದುದು
* ಶೀಘ್ರಗತಿಯಲ್ಲಿ ಮಾಹಿತಿ ಹರಡುವಿಕೆ
* ತೋರಿಸಲು ಬರುವುದಿಲ್ಲ

**ಸಂಘಟನೆಯ ತತ್ವಗಳು:**

ಪ್ರತಿಯೊಂದು ಸಂಘಟನೆಯು ಈ ಕೆಳಗಿನ ತತ್ವಗಳ ಅಡಿಯಲ್ಲಿಯೇ ಜನ್ಮ ತಾಳಿರುತ್ತವೆ.

1) ಅಧಿಕಾರ ಶ್ರೇಣಿ ತತ್ವ
2) ನಿಯಂತ್ರಣ ವ್ಯಾಪ್ತಿ
3) ಏಕ ಆದೇಶ ತತ್ವ
4) ಅಧಿಕಾರ ನಿಯೋಜನೆ
5) ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ
6) ಕಾರ್ಯನಿರ್ವಾಹಕ ಸಲಹಾ ಮತ್ತು ಸಹಾಯಕ ವರ್ಗಗಳು
7) ಸಂಯೋಜನೆ ಮತ್ತು ಸಮನ್ವಯ
8) ಮೇಲ್ವಿಚಾರಣೆ / ಪರಿವೀಕ್ಷಣೆ
9) ಅಧಿಕಾರ ಮತ್ತು ಹೊಣೆಗಾರಿಕೆ

**ಸಿಬ್ಬಂದಿ:**

ಸಾರ್ವಜನಿಕ ಆಡಳಿತದಲ್ಲಿ ಸಿಬ್ಬಂದಿಯ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಒಂದು ದೇಶದ ಆಡಳಿತದಲ್ಲಿ ಸಿಬ್ಬಂದಿ ಪಾತ್ರ ಅತಿ ಮುಖ್ಯವಾದುದು. ಸುಗಮ ಮತ್ತು ದಕ್ಷ ಆಡಳಿತಕ್ಕೆ ಉತ್ತಮ ಸಿಬ್ಬಂದಿಯ ಅತ್ಯಂತ ಅವಶ್ಯಕತೆ ಇರುತ್ತದೆ. ಸಂಘಟನೆಯಲ್ಲಿ ಕಾರ್ಯ ನಿರತರಾದ ಎಲ್ಲರನ್ನು ಆ ಸಂಘಟನೆಯ ಸಿಬ್ಬಂದಿ ವರ್ಗ ಎಂದು ಕರೆಯಲಾಗುತ್ತದೆ. ಒಂದು ಸಂಸ್ಥೆಯಲ್ಲಿನ ಮಾನವ ಸಂಬಂಧಗಳಿಗೆ ಸಂಬಂಧಿಸಿದ ನಿರ್ವಹಣಾ ಕಾರ್ಯದ ಒಂದು ಭಾಗವೇ ಸಿಬ್ಬಂದಿ ಆಡಳಿತ ಎನ್ನಲಾಗಿದೆ. ಅಭಿವೃದ್ಧಿ, ಉತ್ಪಾದನೆ, ಪೋಷಣೆಗೆ ಮಾನವ ಶಕ್ತಿಯ ಬಳಕೆಯನ್ನು ಯೋಜಿಸುವುದು, ಸಂಘಟಿಸುವುದು, ನಿಯಂತ್ರಿಸುವುದು, ನಿರ್ದೇಶಿಸುವುದು ಇವೆಲ್ಲಾ ಸಿಬ್ಬಂದಿ ಆಡಳಿತ ಎನ್ನಬಹುದು. ಸರ್ಕಾರದ / ಸಂಘಟನೆಯ ಧ್ಯೇಯ ಮತ್ತು ಗುರಿಗಳನ್ನು ಕಾರ್ಯರೂಪಕ್ಕೆ ತರುವ ಸಾಧನವಾಗಿದೆ.

**ಸಿಬ್ಬಂದಿಯ ಲಕ್ಷಣಗಳು;**

1) ವೃತ್ತಿನಿರತ ವರ್ಗ: ಸರ್ಕಾರದ / ಸಂಘಟನೆಯ ಸೇವೆಯನ್ನು ವೃತ್ತಿಯಾಗಿ ಹೊಂದಿರುತ್ತಾರೆ.

2) ಕ್ರಮಬದ್ಧ ಶ್ರೇಣಿ ಪದ್ಧತಿ

3) ರಾಜಕೀಯ ತಟಸ್ಥತೆ

4) ಅನಾಮದೇಯತ್ವ

5) ನಿಷ್ಪಕ್ಷಪಾತವಾದುದು

6) ಕಾನೂನಿನ ಆಧಾರ

7) ಸೇವಾ ಮನೋಭಾವ

8) ಸಾರ್ವಜನಿಕ ಹೊಣೆಗಾರಿಕೆ

9) ಹೆಚ್ಚುತ್ತಿರುವ ಅಧಿಕಾರ

**ಸಿಬ್ಬಂದಿಯ ಕಾರ್ಯಗಳು:**

* ಸಲಹೆ ನೀಡುವುದು
* ಕಾನೂನು ಜಾರಿಗೊಳಿಸುವುದು
* ನೀತಿ ನಿರೂಪಣೆ
* ನಿಯೋಜಿತ ಶಾಸನ
* ಆಡಳಿತಾತ್ಮಕ ನ್ಯಾಯ ತೀರ್ಮಾನ
* ಆಡಳಿತ ಸುಧಾರಣೆ

**ಸಿಬ್ಬಂದಿಯ ಪಾತ್ರ:**

ಸಂಘಟನೆಯು ವಾಸ್ತವಿಕ ಆಡಳಿತ ನಡೆಸುತ್ತವೆ. ಸಂಘಟನೆಯು ಸಿಬ್ಬಂದಿಯ ದಕ್ಷತೆಗೆ ಅನುಗುಣವಾಗಿ ಗುರಿ ತಲುಪುವಿಕೆಯ ಕಾರ್ಯ ಮಾಡುತ್ತದೆ. ಸಿಬ್ಬಂದಿಯ ಕಾರ್ಯದ ಆಧಾರದ ಮೇಲೆ ಸಂಘಟನೆಯ ಸಾಧನೆ, ಸಾಫಲ್ಯಗಳು ಅವಲಂಬಿಸಿವೆ.

**ಸಿಬ್ಬಂದಿಯ ಆಯ್ಕೆ:**

* ಅರ್ಹತಾ ಪದ್ಧತಿ
* ಜೇಷ್ಠತೆ ಆಧಾರದ ಮೇಲೆ
* ಸ್ವತಂತ್ರ ನೇಮಕಾತಿ – ಪರೀಕ್ಷೆಯಿಂದ

**ಸಿಬ್ಬಂದಿಯ ಸಾಮಾನ್ಯ ಅರ್ಹತೆಗಳು:**

* ಪೌರತ್ವ
* ವಾಸಸ್ಥಳ
* ವಯೋಮಿತಿ
* ಲಿಂಗ
* ವಿದ್ಯಾರ್ಹತೆ
* ಅನುಭವ
* ತಾಂತ್ರಿಕ ಅರ್ಹತೆ
* ವೈಯಕ್ತಿಕ ಅರ್ಹತೆಗಳು

**ಆಡಳಿತಾತ್ಮಕ ಕಾನೂನು:**

ಆಡಳಿತಾತ್ಮಕ ಶಾಸನ / ಕಾನೂನು ಫ್ರೆಂಚ್ ಸಂವಿಧಾನದ ಅಥವಾ ನ್ಯಾಯಾಂಗ ಪದ್ಧತಿಯ ಪ್ರಮುಖ ಲಕ್ಷಣಗಳು. ಫ್ರೆಂಚ್ ಭಾಷೆಯಲ್ಲಿ ಡ್ರೈಟ್ ಅಡ್ಮಿನಿಸ್ಟ್ರೇಷನ್ ಎಂದು ಕರೆಯುತ್ತಾರೆ. ಇದರ ಹುಟ್ಟು ಫ್ರಾನ್ಸ್ ಅಧಿಕಾರಿಗಳ ವಿಚಾರಣೆಗಾಗಿ, ಪ್ರತ್ಯೇಕ ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದು, ಫ್ರಾನ್ಸ್‌ನಲ್ಲಿ ಆಡಳಿತಾತ್ಮಕ ನ್ಯಾಯಾಲಯಗಳ ಪದ್ಧತಿ ಮತ್ತು ಆಡಳಿತಾತ್ಮಕ ಶಾಸನಗಳು ಬೆಳವಣಿಗೆಯಾದವು. ನೆಪೋಲಿಯನ್ ಬೊನಾಪಾರ್ಟ್ ಸ್ಥಾಪಿಸಿದ **'ಕನ್‌ಸಾಲಿಡ್' 'ಎಲೇಟ್'** ಒಂದು ಆಡಳಿತಾತ್ಮಕ ಕಾನೂನಿನ ರಚನೆಯಾಗಿದೆ. ಆದ್ದರಿಂದಲೇ ಈತನನ್ನು ಆಡಳಿತಾತ್ಮಕ ಕಾನೂನಿನ ಸಂಸ್ಥಾಪಕ ಎನ್ನುತ್ತಾರೆ.

**ವ್ಯಾಖ್ಯೆಗಳು:**

ಐವರ್ ಜನ್ನಿಂಗ್ – 'ಆಡಳಿತಾತ್ಮಕ ಕಾನೂನು ಆಡಳಿತಕ್ಕೆ ಸಂಬಂಧಿಸಿದ್ದು, ಅದು ಸಂಸ್ಥೆ ಮತ್ತು ಆಡಳಿತಾತ್ಮಕ ಪ್ರಾಧಿಕಾರಗಳ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ಧರಿಸುತ್ತವೆ. ಹಾಗೆಯೇ ಡಬ್ಲ್ಯೂ.ಟಿ.ಮನ್ರೋ ಅವರ ಪ್ರಕಾರ ಆಡಳಿತಾತ್ಮಕ ಕಾನೂನು ಎಂದರೆ ಸಾರ್ವಜನಿಕ ಅಧಿಕಾರಿಗಳು ಮಾಡಿದ ಅಧಿಕೃತ ಕೃತ್ಯಗಳು, ಸಾಮಾನ್ಯ ನ್ಯಾಯಾಲಯಗಳು ವ್ಯಾಪ್ತಿಗೆ ಒಳಪಡುವುದನ್ನು ವಿಮುಕ್ತಗೊಳಿಸುತ್ತದೆ. ಮತ್ತು ಅವರ ಅಧಿಕಾರ ಬಳಕೆಯ ಕ್ರಮಬದ್ಧತೆಯ ವಿಚಾರಣಾ ವ್ಯವಸ್ಥೆ ಮಾಡುವ ನ್ಯಾಯ ಪದ್ಧತಿಯಾಗಿದೆ.

ಇದು ಆಡಳಿತದ ವಿಭಿನ್ನ ರಚನೆ ಮತ್ತು ಅಧಿಕಾರಗಳು, ಆಡಳಿತ ಪ್ರಾಧಿಕಾರಗಳ ಪರಿಮಿತಿ ಹಾಗೂ ಆಡಳಿತ ಪ್ರಾಧಿಕಾರಗಳು ತಮ್ಮ ಅಧಿಕಾರಗಳನ್ನು ಚಲಾಯಿಸುವ ವಿಧಾನ ಮುಂತಾದವುಗಳನ್ನು ನಿರ್ಧರಿಸುತ್ತದೆ.

**ಆಡಳಿತಾತ್ಮಕ ಕಾನೂನಿನ ಲಕ್ಷಣಗಳು:**

* ಸಾರ್ವಜನಿಕ ಅಧಿಕಾರಿಯ ಕಾರ್ಯ ಚಟುವಟಿಕೆಗಳು ಸಾಮಾನ್ಯ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಒಳಪಡುವುದಿಲ್ಲ.
* ಆಡಳಿತಾತ್ಮಕ ಅಧಿಕಾರಿಗಳ ದುರಾಡಳಿತವನ್ನು ನ್ಯಾಯ ಮಂಡಳಿ ವಿಚಾರಿಸಿ ತೀರ್ಪು ನೀಡುತ್ತದೆ.
* ಆಡಳಿತಾತ್ಮಕ ಮೌಲ್ಯಗಳಿಗೆ ಸಂಬಂಧಿಸಿದ ನಿಯಮಗಳನ್ನು ತಿಳಿಸುತ್ತದೆ.
* ಆಡಳಿತಾಧಿಕಾರಿಗಳ ಸಮರ್ಥನೆ ಮತ್ತು ದಕ್ಷತೆ ನಿರ್ಧರಿಸುತ್ತವೆ.

**ಆಡಳಿತಾತ್ಮಕ ಕಾನೂನಿನ ವ್ಯಾಪ್ತಿ:**

* ಸಾರ್ವಜನಿಕ ಸಿಬ್ಬಂದಿಯ ಸಮಸ್ಯೆಗಳು
* ಹಣಕಾಸಿನ ಆಡಳಿತದ ಸಮಸ್ಯೆಗಳು
* ಆಡಳಿತಾತ್ಮಕ ಕಾನೂನಿನ ಅಂಶಗಳು
* ಆಡಳಿತಾತ್ಮಕ ನಿಬಂಧನೆಗಳು
* ಸರ್ಕಾರಿ ಒಪ್ಪಂದಗಳು
* ಸರ್ಕಾರದ ವಿರುದ್ಧ ಹಕ್ಕು ಸಾಧನೆ ಮತ್ತು ದಾವೆ

**ಆಡಳಿತ ಕ್ರಮಗಳ ವಿರುದ್ಧದ ಪರಿಹಾರೋಪಾಯಗಳು:**

* ಶಾಸನೀಯ ನಿಯಮಗಳು
* ಸಾರ್ವಜನಿಕ ನಿಗಮಗಳು
* ಸರ್ಕಾರಿ ಹೊಣೆಗಾರಿಕೆ
* ಅಧಿಕಾರಿಗಳ ಅನರ್ಹತೆ
* ನೇಮಕಾತಿ ಶಾಸನ
* ಅಧಿಕಾರವಾದ, ಸೇವಾಸ್ಥಿತಿ, ಮೇಲಾಧಿಕಾರಿ

* ಅಧಿಕಾರಿಗಳ ಅಧಿಕಾರ ವ್ಯಾಪ್ತಿ
* ಅಧಿಕಾರ ಕ್ರಮದ ವಿರುದ್ಧ ಪರಿಹಾರ

**ಆಡಳಿತಾತ್ಮಕ ಕಾನೂನಿನ ಮೂಲಗಳು:**

* ದೇಶದ ಸಂವಿಧಾನ
* ಶಾಸಕಾಂಗದಿಂದ ರೂಪಿಸಿದ ಕಾನೂನು, ಕಾಯಿದೆ, ಗೊತ್ತುವಳಿ
* ಪ್ರಮುಖ ಸನ್ನದ್ದುಗಳು
* ಸುಗ್ರೀವಾಜ್ಞೆಗಳು, ನಿಯಮಗಳು, ಗೊತ್ತುವಳಿ, ಆದೇಶಗಳು
* ರೂಢಿ, ಸಂಪ್ರದಾಯ, ನಡಾವಳಿಗಳು

**ಆಡಳಿತಾತ್ಮಕ ಕಾನೂನಿನ ಮಹತ್ವ:**

ಇದು ಸಾಮಾನ್ಯ ಕಾನೂನನನ್ನು ಸಾಮಾಜಿಕ ಹಿತದ ಕಾನೂನುಗಳಿಗೆ ಅಧೀನವಾಗಿಸುತ್ತದೆ. ಆಡಳಿತಾತ್ಮಕ ಕಾನೂನಿನ ಉದ್ದೇಶ ವೈಯಕ್ತಿಕ ಹಕ್ಕುಗಳ ಅನುಷ್ಠಾನವಾಗಿರದೆ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ದಿಯನ್ನು ಪ್ರೋತ್ಸಾಹಿಸುವುದರಿಂದ ಒಣ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಬದಲು, ಸನ್ನಿವೇಶಕ್ಕೆ ತಕ್ಕಂತೆ ತಮ್ಮ ನೀತಿಯನ್ನು ಅನುಸರಿಸುತ್ತದೆ. ಇದು ನಿರ್ಧರಿಸುವ ಹೆಚ್ಚಿನ ಅಂಶದ ಮಾನದಂಡ ಹೆಚ್ಚಾಗಿ ತಾಂತ್ರಿಕ ಸ್ವರೂಪದ್ದಾಗಿದೆ. ಆಡಳಿತಾತ್ಮಕ ಕಾನೂನು ಇದು ಆಡಳಿತ ವ್ಯವಸ್ಥೆಯ ಅಧಿಕಾರಿಗಳಿಗೆ ವಿಶೇಷ ಸ್ಥಾನಮಾನ ಹಕ್ಕು ಸೌಲಭ್ಯಗಳನ್ನು ದೊರಕಿಸಿ ಕೊಡುತ್ತದೆ. ಆಡಳಿತ ವರ್ಗಕ್ಕೆ ವಿವೇಚನಾಧಿಕಾರ ನೀಡಿರುತ್ತದೆ. ಪರಿವರ್ತನೀಯ ಆಧುನಿಕ ಸಮಾಜದ ಅಗತ್ಯಗಳಿಗೆ ಆಡಳಿತ ಕಾನೂನು ಉತ್ತಮ ಪ್ರಕ್ರಿಯೆಯಾಗಿದೆ. ಆಧುನಿಕ ಕಲ್ಯಾಣ ರಾಜ್ಯದಲ್ಲಿ ಆಡಳಿತಾಧಿಕಾರಿಗಳ ಸ್ವೇಚ್ಛಾಧಿಕಾರ, ನಿರಂಕುಶತೆ ತಡೆಯಲು ಇದು ಅಗತ್ಯ. ಇದು ನಮ್ಯತೆ, ಪ್ರಯೋಗಶೀಲತೆ, ಸ್ಥಿತಿ ಸ್ಥಾಪಕತೆಯ ಗುಣ ತಾಂತ್ರಿಕತೆ ಒದಗಿಸುತ್ತದೆ. ಆಧುನಿಕ ಸಮಾಜದ ಹೊಸ ಸಮಸ್ಯೆಗಳ ನಿವಾರಣೆ ಮಾಡುವುದು.

**ಉಪಸಂಹಾರ:**

ಆಡಳಿತಾತ್ಮಕ ಕಾನೂನು ಪ್ರಯೋಗಾತ್ಮಕ ಮತ್ತು ಮನ್ವಂತರದ ಹಂತದಲ್ಲಿದೆ. ಇದು ಇನ್ನೂ ಪರಿಪೂರ್ಣ ಆಗಬೇಕಿದೆ. ದಿನನಿತ್ಯ ಇದು ಹೊಸ ಸಮಸ್ಯೆಗಳನ್ನು ಎದುರಿಸುತ್ತಿದ್ದು ಅದಕ್ಕೆ ತಕ್ಕುದಾದ ತತ್ವ ಹಾಗೂ ನಿಯಮಗಳನ್ನು ರೂಪಿಸಿಕೊಳ್ಳಬೇಕಿದೆ.

ಆಡಳಿತಾಧಿಕಾರಿಗಳನ್ನು ನಿಯಂತ್ರಿಸಲು, ನಿರಂಕುಶತೆಯನ್ನು ತಡೆಯಲು, ಅವರ ಕಾನೂನು ಬಾಹಿರ ಕೃತ್ಯಗಳಿಂದ ನಾಗರಿಕ ಹಕ್ಕು ಬಾಧ್ಯತೆಯನ್ನು ರಕ್ಷಿಸಲು ಮಹತ್ತರ ಪಾತ್ರ ವಹಿಸುತ್ತದೆ.

**ಆಡಳಿತಾತ್ಮಕ ಕಾನೂನಿನ ವಿಮರ್ಶೆ:**

1) ಸಮಾನತೆಯ ತತ್ವದ ಮೂಲವಾದ ಕಾನೂನಿನ ಅಧಿಪತ್ಯ ತತ್ವಕ್ಕೆ ವಿರುದ್ಧವಾಗಿದೆ.
2) ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. (ಆಡಳಿತಾಧಿಕಾರಿಗಳಿಗೆ ವಿಶೇಷ ಸ್ಥಾನಮಾನ, ಹಕ್ಕು ಸೌಲಭ್ಯ ದೊರಕಿಸಿ ಕೊಡುವುದರಿಂದ)
3) ಆಡಳಿತಾತ್ಮಕ ನ್ಯಾಯಾಲಯಗಳಲ್ಲಿ ಪಕ್ಷಪಾತೀಯ ಧೋರಣೆ, ಸರ್ಕಾರದೊಡಗಿನ ಹೆಚ್ಚಿನ ಒಲವು.
4) ಆಡಳಿತಾತ್ಮಕ ನ್ಯಾಯ ಮಂಡಳಿಗಳು ಏಕರೂಪದ ಕಾರ್ಯ ವಿಧಾನವನ್ನು ಅನುಸರಿಸುವುದಿಲ್ಲ.

**ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ:**

ಸಮಾಜದ ಕಾನೂನು ಮತ್ತು ಸುವ್ಯವಸ್ಥೆಯ ಕಾಪಾಡುವುದು ರಾಜ್ಯದ ಮುಖ್ಯ ಕರ್ತವ್ಯವಾಗಿದೆ. ರಾಷ್ಟ್ರದ ಸುಖ ಶಾಂತಿಗೆ, ಅಭಿವೃದ್ದಿಗೆ, ಐಕ್ಯತೆಗೆ ಕಾನೂನು ಸುವ್ಯವಸ್ಥೆಯು ಅವಶ್ಯಕ. ಜನಸಂಖ್ಯೆಯ ನಾಗಾಲೋಟ, ಕೈಗಾರಿಕೀಕರಣ, ನಗರೀಕರಣ, ರಾಜಕೀಯ ಪ್ರಜ್ಞೆ ಮುಂತಾದವುಗಳಿಂದಾಗಿ ಕಾನೂನು ಸುವ್ಯವಸ್ಥೆಯ ಸಮಸ್ಯೆಗಳಿಗೆ ಈ ಕಾನೂನು ಮತ್ತು ಸುವ್ಯವಸ್ಥೆ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಸರ್ವರ ರಕ್ಷಣೆಗೆ ಕಾನೂನು ಸುವ್ಯವಸ್ಥೆಗೂ ಕಾನೂನು ಅತ್ಯಗತ್ಯ.

## ಭಾರತದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಕೇಂದ್ರ ಪಾತ್ರ:

ಭಾರತದ ಸಂವಿಧಾನದ 355ನೇ ವಿಧಿಯ ಪ್ರಕಾರ ರಾಜ್ಯವನ್ನು ಬಾಹ್ಯ ದಾಳಿಯಿಂದ ರಕ್ಷಿಸುತ್ತದೆ. ದೇಶಾದ್ಯಂತ ಕಾನೂನು, ಸುವ್ಯವಸ್ಥೆ ಮತ್ತು ಶಾಂತಿ ಪಾಲನೆಯ ಜವಾಬ್ದಾರಿ ಗೃಹ ಸಚಿವಾಲಯ ಹೊಂದಿದೆ. ಮತ್ತು ಈ ಕೆಳಗಿನ ಪೋಲಿಸ್ ವ್ಯವಸ್ಥೆಯನ್ನು ಹೊಂದಿದೆ.

* ಸಿಆರ್‌ಪಿಎಫ್ – ಕೇಂದ್ರ ಮೀಸಲು ಪೋಲಿಸ್ ಪಡೆ
* ಬಿಎಸ್‌ಎಫ್ – ಗಡಿ ಭದ್ರತಾ ಪಡೆ
* ಆರ್‌ಎಸ್‌ಎಫ್ – ರೈಲ್ವೆ ರಕ್ಷಣಾ ಪಡೆ
* ಸಿಐಎಸ್‌ಎಫ್ – ಕೇಂದ್ರೀಯ ಉದ್ದಿಮೆ, ಸಂರಕ್ಷಣಾ ಪಡೆ
* ಭಾರತ ಟಿಬೆಟ್ ಪೋಲಿಸ್

## ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ರಾಜ್ಯದ ಪಾತ್ರ:

ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ರಾಜ್ಯಗಳಿಗೆ ಸೇರಿದ ವಿಷಯವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡುವಂತಿಲ್ಲ.

* ರಾಜ್ಯದ ಸಮಸ್ತ ಪೋಲಿಸ್ ಇಲಾಖೆ – ಗೃಹಮಂತ್ರಿ
* ಅರೆ ರಕ್ಷಣಾ ಪಡೆ

## ಕಲ್ಯಾಣ ಪರ ಆಡಳಿತ:

ಕಲ್ಯಾಣ ಎಂದರೆ ಯೋಗ ಕ್ಷೇಮ, ಸೌಖ್ಯ, ಹಿತ, ಸಾಮಾಜಿಕ ಸೇವೆ, ಸಾಧನೆ, ಮುಂತಾದವುಗಳ ಮೂಲಕ ನಡೆಯುವ ಹಿತರಕ್ಷಣೆ ಪುರೋಭಿವೃದ್ಧಿ. ಕಲ್ಯಾಣ ರಾಜ್ಯ ಪರಿಕಲ್ಪನೆ ಹುಟ್ಟಿರುವುದು ಈ ಕಲ್ಯಾಣಪರ ಆಡಳಿತದಿಂದಲೇ. ಜನರ ಕಲ್ಯಾಣವನ್ನು ಸಾಧಿಸುವುದು ರಾಜ್ಯ ಶಾಸನೀಯ ಮತ್ತು ಸಂವಿಧಾನಾತ್ಮಕ ಕರ್ತವ್ಯವಾಗಿದೆ. ಕಲ್ಯಾಣಪರ ಆಡಳಿತ ಎಂದರೆ, ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದವರ, ಅಂಗವಿಕಲರ ಕಲ್ಯಾಣ, ಶೈಕ್ಷಣಿಕ ಮತ್ತು ಮನೋರಂಜನಾ ಸೌಲಭ್ಯಗಳನ್ನು ಒದಗಿಸುವುದು. ಭಿಕ್ಷಾಟನೆ ನಿರ್ಮೂಲನೆ ಇತ್ಯಾದಿ ಒಳಗೊಳ್ಳುತ್ತದೆ.

## ಅಭಿವೃದ್ಧಿ ಆಡಳಿತ:

ಇದು ಇತ್ತೀಚಿನ ಆಡಳಿತಾತ್ಮಕ ಪರಿಕಲ್ಪನೆಯಾಗಿದೆ. 1955ರಲ್ಲಿ ಪ್ರಥಮವಾಗಿ ಭಾರತೀಯ ವಿದ್ವಾಂಸ ಗೋಸ್ವಾಮಿಯವರು ರಚಿಸಿದರೂ ಸಹ ಇದನ್ನು ರಿಗ್ಸ್, ವೀಡ್‌ರವರು ಪ್ರಖ್ಯಾತಿಗೊಳಿಸಿದರು. ಅಭಿವೃದ್ಧಿ ಆಡಳಿತವನ್ನು ಏಷ್ಯಾ, ಆಫ್ರಿಕಾ, ಲ್ಯಾಟಿನ್, ಅಮೇರಿಕಾದ ದೇಶಗಳಲ್ಲಿ ವ್ಯಾಪಕವಾಗಿ ಉಲ್ಲೇಖಿಸಲಾಗುತ್ತದೆ. 1960ರಿಂದ ಈಚೆಗೆ ವ್ಯಾಪಕವಾಗಿ ಬಳಸಲಾಗುತ್ತದೆ.

**ವ್ಯಾಖ್ಯೆಗಳು:**

1) ಮೋಹಿತ್ ಭಟ್ಟಾಚಾರ್ಯ: ಈ ಪದವನ್ನು 1955ರಲ್ಲಿ ಮೊದಲಿಗೆ ಭಾರತೀಯರಾದ ಗೋಸ್ವಾಮಿ ಬಳಸಿದರು ಎಂದಿದ್ದಾರೆ.
2) ಫ್ರೆಡ್ ರಿಗ್ಸ್: ಆಡಳಿತಾತ್ಮಕ ಸಮಸ್ಯೆ ಮತ್ತು ಸರ್ಕಾರಿ ಸುಧಾರಣೆ ಎರಡನ್ನೂ ತಿಳಿಸುವುದೇ ಅಭಿವೃದ್ಧಿ ಆಡಳಿತ.
3) ಡೊನಾಲ್ಡ್ ಸ್ಟೇನ್: ರಾಷ್ಟ್ರೀಯ ಅಭಿವೃದ್ಧಿ ಸಾಧಿಸುವುದೇ ಅಭಿವೃದ್ಧಿ ಆಡಳಿತ.
4) ಎಸ್.ಆರ್. ಮಹೇಶ್ವರಿ: ರಾಷ್ಟ್ರ ನಿಯಂತ್ರಣ, ಸಾಮಾಜಿಕ ಆರ್ಥಿಕ ಅಭಿವೃದ್ಧಿ ಮತ್ತು ಆಡಳಿತಾತ್ಮಕ ಕಾರ್ಯಾಚರಣೆಗೆ ಅವಕಾಶ. ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮಗಳ ರಚನೆಯನ್ನು ಅಭಿವೃದ್ಧಿ ಆಡಳಿತ ಎನ್ನಬಹುದಾಗಿದೆ.

**ಅಭಿವೃದ್ಧಿ ಆಡಳಿತದ ಬೆಳವಣಿಗೆ ಕಾರಣಗಳು:**

ಎರಡನೆಯ ಮಹಾಯುದ್ಧದ ನಂತರ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾಗಳಂತಹ ವಸಾಹತುಶಾಹಿ ಮುಕ್ತ ರಾಷ್ಟ್ರಗಳ ಉದಯವಾದವು. ಅಭಿವೃದ್ಧಿಶೀಲ ರಾಷ್ಟ್ರಗಳ ಸಹಾಯಕ್ಕಾಗಿ ಅಂತರರಾಷ್ಟ್ರೀಯ ಮತ್ತು ಅಮೇರಿಕಾದ ಆರ್ಥಿಕ, ತಾಂತ್ರಿಕ ಯೋಜನೆಗಳ ಉಗಮವಾದವು. ತೌಲನಿಕ ಆಡಳಿತ ಸಮೂಹ ಸ್ಥಾಪನೆ ಮಾಡುವಲ್ಲಿ ಈ ಅಭಿವೃದ್ಧಿಶೀಲ ರಾಷ್ಟ್ರಗಳ ಆಸಕ್ತಿ ಹೆಚ್ಚಿತು. ಈ ಮೂಲಕ ಅಭಿವೃದ್ಧಿ ಆಡಳಿತವು ಹುಟ್ಟಿತು.

**ಅಭಿವೃದ್ಧಿ ಆಡಳಿತದ ಲಕ್ಷಣಗಳು:**

* ಬದಲಾವಣೆ ಆಧಾರಿತ
* ಉದ್ದೇಶ ಆಧಾರಿತ
* ಫಲಿತಾಂಶ ಆಧಾರಿತ
* ಸಂಶೋಧನಾತ್ಮಕವಾದುದು
* ಕಕ್ಷಿಧಾರ ಆಧಾರಿತ
* ಬದ್ಧತೆಯಿಂದ ಕೂಡಿದ
* ಯೋಜನೆ ಅಗತ್ಯ
* ಲೌಕಿಕ ಆಯಾಮ
* ಸಹಭಾಗಿತ್ವ

**ಅಭಿವೃದ್ಧಿ ಆಡಳಿತದ ಧ್ಯೇಯ:**

ಆಧುನಿಕತೆ, ಸಾಮಾಜಿಕ, ಆರ್ಥಿಕ ಬೆಳವಣಿಗೆ ಸಾಂಸ್ಥಿಕ ರಚನೆ, ಸಮಗ್ರ ರಾಜಕೀಯ ಸಮುದಾಯದ ಸೃಷ್ಟಿಯು ಅಭಿವೃದ್ಧಿ ಆಡಳಿತದ ಧ್ಯೇಯವಾಗಿದೆ. ಇದು ಆಧುನಿಕತೆಯ ದಿಕ್ಕಿನಲ್ಲಿ ಸಾಮಾಜಿಕ ಬದಲಾವಣೆಯೊಂದಿಗೆ ಜನತೆಯ ಮೂಲ ಅಗತ್ಯತೆಯ ಪೂರೈಕೆ, ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ಯೋಜನೆ, ಸಾಮಾಜಿಕ ನ್ಯಾಯ ಸ್ಥಾಪನೆ, ಆರ್ಥಿಕ / ರಾಜಕೀಯ ಬೆಳವಣಿಗೆ, ಆಡಳಿತಾತ್ಮಕ ಆಧುನೀಕರಣ ಮುಂತಾದ ಉದ್ದೇಶಗಳನ್ನು ಒಳಗೊಂಡಿದೆ.

**ಕಾರ್ಯಗಳು:**

* ಅಭಿವೃದ್ಧಿಯ ಉದ್ದೇಶಗಳು ಮತ್ತು ನೀತಿಯ ರಚನೆ
* ಕಾರ್ಯಾ ಯೋಜನಾ ರಚನೆ, ಕಾರ್ಯಕ್ರಮ ನಿರ್ವಹಣೆ
* ಆಡಳಿತಾತ್ಮಕ ರಚನೆಗಳು
* ಫಲಿತಾಂಶಗಳ ವಿಕಾಸ
* ಅಭಿವೃದ್ಧಿ ಪ್ರಯತ್ನದಲ್ಲಿ ಜನತೆಯ ಸಹಭಾಗಿತ್ವ
* ಸಾಮಾಜಿಕ ರಾಷ್ಟ್ರೀಯ ಮೂಲಭೂತ ಸೌಲಭ್ಯಗಳ ಬೆಳವಣಿಗೆಯ ಪ್ರೋತ್ಸಾಹ.

# ಅಧ್ಯಾಯ – 3

# ಸಾಂಸ್ಥಿಕ ಮತ್ತು ನಿರ್ವಹಣಾ ವಿಷಯಗಳು, ಸಂಘಟನೆಯ ರಚನೆ, ವ್ಯವಸ್ಥೆ ಮತ್ತು ಪ್ರಕ್ರಿಯೆಗಳು

ಸಂಘಟನೆಯು ಸಮಾಜದಲ್ಲಿ ಒಂದು ನಿರ್ದಿಷ್ಟ ಗುರಿಯನ್ನು ಸಾಧಿಸಲು ರಚಿತವಾಗಿರುವ ವ್ಯವಸ್ಥೆಯಾಗಿದೆ. ಸಂಘಟನೆಯು ಈ ಕೆಳಗಿನ ಮೂಲ ಅಂಶಗಳನ್ನು ಒಳಗೊಂಡಿರುತ್ತದೆ.

* ಗುರಿಗಳು
* ತಂತ್ರಜ್ಞಾನ
* ಮಾನವ ಸಂಪನ್ಮೂಲ
* ನಿರ್ದೇಶನ
* ಯೋಜನೆ
* ಸಹಭಾಗಿತ್ವ
* ಹಣಕಾಸು

ಸಂಘಟನೆಯಲ್ಲಿ ಈಗಾಗಲೇ ಹೇಳಿದಂತೆ ಎರಡು ವಿಧಗಳಿವೆ. ಅವುಗಳು ಔಪಚಾರಿಕ ಮತ್ತು ಅನೌಪಚಾರಿಕ ಸಂಘಟನೆಗಳು. ಈ ಎರಡೂ ಸಂಘಟನೆಗಳ ಗುರಿಗಳು, ಉದ್ದೇಶಗಳು ಒಂದೇ ರೀತಿಯಾಗಿರುತ್ತದೆ. ಆದರೆ ರಚನೆಯಲ್ಲಿ ವಿವಿಧತೆಯನ್ನು ಒಳಗೊಂಡಿರುತ್ತದೆ.

ಒಂದು ಸಂಘಟನೆಯ ರಚನೆಯ ಕುರಿತು ಹಲವಾರು ವಿದ್ವಾಂಸರು ತಮ್ಮದೇ ಆದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಅವುಗಳು–

* ಟೇಲರ್‌ರವರ ವೈಜ್ಞಾನಿಕ ನಿರ್ವಹಣಾ ಸಿದ್ಧಾಂತ
* ಮಾರ್ಕ್ಸ್, ಸೈಮನ್‌ರ ಆಡಳಿತಾತ್ಮಕ ನಿರ್ವಹಣಾ ಸಿದ್ಧಾಂತ
* ಹೆನ್ರಿ ಫೆಯೊಲ್‌ರ ಸಾಂಪ್ರದಾಯಿಕ ನಿರ್ವಹಣಾ ಸಿದ್ಧಾಂತ ಮುಂತಾದವುಗಳು.

**ಸಂಘಟನೆಯ ವ್ಯವಸ್ಥೆ ಮತ್ತು ಪ್ರಕ್ರಿಯೆಗಳು:**

ಸಂಘಟನೆ ಎಂದರೆ ಕೇವಲ ಒಂದು ವಿಷಯಾಂಶದಿಂದ ಜನಿತವಾದುದಲ್ಲ. ಇದು ಹಲವು ವ್ಯವಸ್ಥಿತ ವಿಭಾಗಗಳನ್ನು ಒಳಗೊಂಡಿರುತ್ತದೆ ಮತ್ತು ಈ ವಿಭಾಗಗಳು ಒಂದಕ್ಕೊಂದು ನಿಕಟ ಸಂಬಂಧ ಹೊಂದಿರುತ್ತವೆ. ಒಂದು ಸಂಘಟನೆಯ ಪ್ರಮುಖವಾದ ವಿಭಾಗಗಳೆಂದರೆ ಮಾನವ ಸಂಪನ್ಮೂಲಗಳು, ಹಣಕಾಸು, ಉತ್ಪಾದನಾ ವಿಭಾಗಗಳು. ಈ ವಿಭಾಗಗಳು ಪರಸ್ಪರ ಒಂದಕ್ಕೊಂದು ಸಹಕರಿಸಿ ಉದ್ದೇಶಿತ ಕಾರ್ಯವನ್ನು ನೆರವೇರಿಸಲು ಸಹಾಯಕವಾಗುತ್ತವೆ.

ಸಂಘಟನೆಯ ವ್ಯವಸ್ಥೆಯಲ್ಲಿ ಅನೇಕ ರೂಪಗಳಿವೆ. ಉದಾಹರಣೆಗೆ ಆಡಳಿತ, ಶೈಕ್ಷಣಿಕ, ಆರೋಗ್ಯ, ವಾಣಿಜ್ಯ ಇತ್ಯಾದಿ. ವ್ಯವಸ್ಥೆಯ ವಿಭಾಗಗಳ ಕಾರ್ಯ ಸ್ವರೂಪ ಬೇರೆಯಾದರೂ ಅವುಗಳ ಗುರಿಯು ಸಂಘಟನೆಯ ಗುರಿಯೇ ಆಗಿರುತ್ತದೆ. ಸಂಘಟನೆಯ ವ್ಯವಸ್ಥಾ ಸಿದ್ಧಾಂತದ ಪ್ರಮುಖ ಬೆಂಬಲಿಗರಾದ ಡೆವಿಡ್ ಈಸ್ಟನ್‌ರು ಈ ವ್ಯವಸ್ಥೆಯಲ್ಲಿ ಪ್ರಕ್ರಿಯೆಗಳ ಹೂಡಿಕೆ ಮತ್ತು ಉತ್ಪನ್ನಗಳ ಆಧಾರವಾಗಿ ಕಾರ್ಯನಿರ್ವಹಿಸುತ್ತವೆ.

ಸಂಘಟನೆಯ ಕಾರ್ಯಕ್ಷಮತೆಯನ್ನು ವೃದ್ಧಿಸುವಲ್ಲಿ, ಕ್ರಮಬದ್ಧ ಕಾರ್ಯ ನಡೆಸಿ ಪುನರಾವರ್ತನೆಯನ್ನು ತಪ್ಪಿಸುವಲ್ಲಿ ಇವು ಪ್ರಮುಖ ಪಾತ್ರ ವಹಿಸುತ್ತವೆ.

## ನಿರ್ಧಾರ / ತೀರ್ಮಾನ ಕೈಗೊಳ್ಳುವುದು:

ಒಂದು ವಿಷಯದ ಕುರಿತು ತೀರ್ಮಾನ ಕೈಗೊಳ್ಳುವುದು ಪ್ರಸ್ತುತ ಆಧುನಿಕ ಆಡಳಿತ ವಿಚಾರಕ್ಕೆ ಬಂದರೆ ಅದು ಆಧುನಿಕ ಆಡಲಿತದ ಹೃದಯ ಭಾಗ ಎನ್ನಬಹುದು. ಎಮ್.ಟಿ.ಕೊಪ್ಯಾಡ್ ಪ್ರಕಾರ ಆಡಳಿತವು ಅಗತ್ಯವಾಗಿ ಒಂದು ನಿರ್ಧಾರ ಕೈಗೊಳ್ಳುವ ಕ್ರಿಯೆಯಾಗಿದೆ. ವೆಬ್‌ಸ್ಟರ್ ಅರ್ಥಕೋಶದ ಪ್ರಕಾರ 'ಒಂದು ಅಭಿಪ್ರಾಯದ ಬಗೆಗೆ ಒಬ್ಬನು ತನ್ನ ಮನಸ್ಸಿನಲ್ಲಿಯೇ ಕೈಗೊಳ್ಳುವ ನಿರ್ಧಾರ ಕಾರ್ಯವಾಗಿದೆ. ವಿವಿಧ ಪರ್ಯಾಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವುದೇ ನಿರ್ಧಾರ'ವಾಗಿದೆ.

## ನಿರ್ಧಾರ ಕೈಗೊಳ್ಳುವಿಕೆ ಲಕ್ಷಣಗಳು:

* ಇದು ಉದ್ದೇಶಾಧಾರಿತ ಪ್ರಕ್ರಿಯೆ
* ಇದು ಪರ್ಯಾಯದ ಒಂದು ಗುಂಪಾಗಿದೆ
* ಇದೊಂದು ಕ್ರಿಯಾಶೀಲ ಪ್ರಕ್ರಿಯೆ ಆಗಿದೆ. ಇದಕ್ಕೆ ಕಾಲಾವಕಾಶ ಬೇಕು. ಇದು ಪರಿಸ್ಥಿತಿಯಾತ್ಮಕ.
* ಇದು ನಿರಂತರ, ಮುಂದುವರೆಯುತ್ತಿರುವ ಪ್ರಕ್ರಿಯೆ
* ಇದೊಂದು ಬೌದ್ಧಿಕ ಮತ್ತು ವಿವೇಚನಾತ್ಮಕ ಪ್ರಕ್ರಿಯೆ
* ಇದು ಉದ್ದೇಶಪೂರಕ, ವಿವೇಕಯುತ ಮತ್ತು ಮೌಲೀಕೃತ ಆಗಿರುತ್ತದೆ

## ನಿರ್ಧಾರ ಕೈಗೊಳ್ಳುವಿಕೆಯ ತತ್ವಗಳು:

* ಸತ್ಯಾಂಶಗಳನ್ನು ಗುರುತಿಸಿ ಗುರಿಗಳನ್ನು ವ್ಯಾಖ್ಯಾನಿಸುವುದು
* ಸೂಕ್ತ ಕಾಲಾವಕಾಶ
* ನಿರ್ಧಾರಗಳು ಸ್ಥಿತಿ ಸ್ಥಾಪಕವಾಗಿರಬೇಕು
* ಸಂಪರ್ಕ
* ನಿರ್ಧಾರಗಳನ್ನು ಜಾರಿಗೆ ತಂದ ನಂತರ ಗಮನಿಸುವುದು
* ಫಲಿತಾಂಶಗಳ ಪರಾವಲೋಕನ

## ನಿರ್ಧಾರ ಕೈಗೊಳ್ಳುವ ಸಮಸ್ಯೆಗಳು:

* ನಿಯತ ಕಾರ್ಯಕ್ರಮ–ದಿನನಿತ್ಯ ಕೆಲಸದಲ್ಲಿ ಭಾಗಿಯಾಗಿರುವುದು
* ಹಲವು ಸಮಸ್ಯೆಗಳಲ್ಲಿ ತ್ವರಿತ ಶೀಘ್ರ ಸಮಸ್ಯೆಯ ಪರಿಹಾರಕ್ಕೆ ನಿರ್ಧಾರ ಕೈಗೊಳ್ಳುವಲ್ಲಿ ಸಮಸ್ಯೆ
* ಪರ್ಯಾಯ ವ್ಯವಸ್ಥೆಯಿಂದ ಸರಿಯಾದ ನಿರ್ಧಾರದ ಆಯ್ಕೆ
* ಪೂರ್ವಗ್ರಹ / ಪೂರ್ವಕಲ್ಪಿತ ಅಭಿಪ್ರಾಯ

## ವಿವೇಕಯುತ ತೀರ್ಮಾನ ಕೈಗೊಳ್ಳುವ ವಿಧಾನಗಳು:

* ಆಡಳಿತಗಾರನಿಗೆ ಸಾರ್ವಜನಿಕ ಹಿತಾಸಕ್ತಿಯ ಬಗೆಗೆ ಸರಿಯಾದ ಅರಿವನ್ನು ಮೂಡಿಸುವುದು
* ಸಂಘರ್ಷನಾತ್ಮಕ ಹಿತಾಸಕ್ತಿಗಳಿಂದ ನಿರ್ಧಾರಕನು ಮುಕ್ತನಾಗಿರಬೇಕು
* ಬಾಹ್ಯ ಒತ್ತಡಗಳಿಗೆ ಒಳಗಾಗದಂತೆ ಮೂಡುವುದು
* ಸಲಹಾ ಮಂಡಳಿ ರಚನೆ
* ಆಡಳಿತಗಾರನಿಗೆ ತೀರ್ಮಾನ ಕೈಗೊಳ್ಳುವ ವಿಷಯದ ಕುರಿತು ಹೆಚ್ಚಿನ ಮಾಹಿತಿ
* ಶಿಕ್ಷಣ ತರಬೇತಿ

**ನಿರ್ಧಾರ ಕೈಗೊಳ್ಳುವಲ್ಲಿ ಸೈಮನ್‌ರ ಪರಿಕಲ್ಪನೆ:**

ನಿರ್ಧಾರ ಕೈಗೊಳ್ಳುವಲ್ಲಿ ಸಂಪೂರ್ಣವಾಗಿ ಸಂಸ್ಥೆಯನ್ನು ಆವರಿಸಿಕೊಂಡಿರುತ್ತದೆ. ಅಂದರೆ ಸಂಸ್ಥೆಯ ಎಲ್ಲಾ ಹಂತಗಳಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತದೆ. ಸೈಮನ್ ಪ್ರಕಾರ 2 ಪ್ರಕಾರಗಳು ಇವೆ.

1) ವಾಸ್ತವ ಆವರಣ

2) ಮೌಲ್ಯ ಆವರಣ

ತೀರ್ಮಾನ ಕೈಗೊಳ್ಳುವಲ್ಲಿ ಸೈಮನ್‌ರ ಹಂತಗಳು:

1) ಭೌದ್ಧಿಕ ಕ್ರಿಯೆ

2) ಯೋಜಿಸುವ ಕ್ರಿಯೆ

3) ಆಯ್ಕೆಯ ಕ್ರಿಯೆ

**ನಿರ್ಧಾರ ಕೈಗೊಳ್ಳುವ ಮಾದರಿಗಳು**

ಸಾರ್ವಜನಿಕ ಆಡಳಿತ ಸಾಹಿತ್ಯದಲ್ಲಿ ನಿರ್ಧಾರ ಕೈಗೊಳ್ಳುವ 4 ಮಾದರಿಗಳಿವೆ.

1) ಸೈಮನ್‌ರ ಸೀಮಿತ ವಿವೇಚನಾಶೀಲತೆ

2) ಲಿಂಡ್ ಬ್ಲೊಮ್‌ನ ಹೆಚ್ಚುವರಿ ಮಾದರಿ

3) ಇಟಜಿಯನ್ ಮಿಶ್ರ ಶೋಧನಾ ಮಾದರಿ

4) ಡ್ರೋರ್‌ನ ಕುಲೀನ ಮಾದರಿ

**ಸಂವಹನ, ಸಂಪರ್ಕ:**

ಸಂಪರ್ಕವು ಆಡಳಿತ ವ್ಯವಸ್ಥೆಯ ಮೂಲ ತತ್ವಗಳಲ್ಲಿ ಒಂದು. ಸಂಪರ್ಕವಿಲ್ಲದೆ ಆಡಳಿತ ನಿರ್ವಹಣೆ ಅಸಾಧ್ಯ. ಸಾರ್ವಜನಿಕ ಆಡಳಿತದಲ್ಲಿ ಸಂಪರ್ಕ ಎಂದರೆ ಒಂದು ಸಂಸ್ಥೆಯಲ್ಲಿ ಮಾನವರ ವರ್ತನೆಯನ್ನು ಮಾರ್ಪಡಿಸಲು ಬಳಸುವ ವಿಧಾನವಾಗಿದ್ದು, ಲಿಖಿತ ಮತ್ತು ಮೌಖಿಕ ಸಂದೇಶಗಳನ್ನು ರವಾನಿಸುವ ಕಾರ್ಯ ವಿಧಾನವೇ ಸಂಪರ್ಕ. ಸಂಸ್ಥೆಯ ಉದ್ಯೋಗಿಗಳು ಆಗಿಂದಾಗೇ ಏನು ಮಾಡಬೇಕೆಂಬುದನ್ನು ತಿಳಿಸಿ, ಅವರು ಕಾರ್ಯ ನಿರತರಾಗಲು, ನಿರ್ದೇಶಿಸುವ ವಿಧಾನವೇ ಸಂಪರ್ಕ. ಸಂಪರ್ಕವು ಆಡಳಿತ ರಕ್ತ ಪರಿಚಲನಾವ್ಯೂಹ. ಸಂಪರ್ಕವೇ ನಿರ್ವಹಣೆಯ ಹೃದಯ.

**ಮಹತ್ವ:**

ವ್ಯವಸ್ಥಾಪನೆಯ ದಕ್ಷತೆ ಮತ್ತು ಕಾರ್ಯ ನಿರ್ವಹಣೆ ಹೆಚ್ಚಳ. ವ್ಯವಸ್ಥೆಯ ಎಲ್ಲಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಮಾಡಲು ಸಂಪರ್ಕ ಅತ್ಯವಶ್ಯಕ. ಮುನ್ನಡೆಸುವುದು, ಪ್ರೇರಣೆ ನೀಡುವುದು, ನಿರ್ದೇಶಿಸುವುದು, ಮೇಲ್ವಿಚಾರಣೆ ಎಲ್ಲಾ ಸಂಪರ್ಕವನ್ನೇ ಆಧರಿಸಿದೆ. ವ್ಯವಸ್ಥಾಪನೆ ಮತ್ತು ಉದ್ಯೋಗಿಗಳ ನಡುವೆ ಉತ್ತಮ ಸಂಬಂಧ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತದೆ. ವ್ಯವಸ್ಥಾಪನೆ ಮತ್ತು ಉದ್ಯೋಗಿಗಳ ನಡುವೆ ಪರಸ್ಪರ ನಂಬಿಕೆ, ಧೈರ್ಯ ಮೂಡಿಸಿ ಉದ್ಯೋಗಿಗಳಿಗೆ ಹೆಚ್ಚಿನ ಉದ್ಯೋಗ ತೃಪ್ತಿ ತರುತ್ತದೆ. ಸರ್ಕಾರದ ಎಲ್ಲಾ ಇಲಾಖೆಗಳ ಮಧ್ಯೆ ಸಂಪರ್ಕವಿರಬೇಕು. ಈ ಮೂಲಕ ದಕ್ಷತೆಯ ಸಾಧನೆ. ನಾಯಕನು ನಾಯಕತ್ವ ಚಟುವಟಿಕಕೆ ನಿಭಾಯಿಸಲು ಸಂಪರ್ಕವು ಅವಶ್ಯಕವಾಗಿದೆ. ತೀರ್ಮಾನ ಕೈಗೊಳ್ಳವಿಕೆಯಲ್ಲಿ ಮಹತ್ವದ ಪಾತ್ರ. ಸಂಸ್ಥೆಯಲ್ಲಿ ಅಧಿಕಾರ ಚಲಾವಣೆಗೆ ಇದು ಸಹಾಯಕವಾಗಿದೆ.

**ಸಂಪರ್ಕ ಸಾಧನ / ಮಾಧ್ಯಮಗಳು:**

* ಶ್ರವಣ ಸಾಧನ / ಮುಖಾಮುಖಿ ಭೇಟಿ
* ಮೌಖಿಕ
* ಲಿಖಿತ ಸಂಪರ್ಕ

* ಕ್ರಮಗಳು
* ಆಡಳಿತ ವರ್ಗಕ್ಕೆ ಸೇರಿದ ಸಮ್ಮೇಳನ

**ಸಂಪರ್ಕದ ವಿಧಗಳು:**

* ಆಂತರಿಕ ಮತ್ತು ಬಾಹ್ಯ ಸಂಪರ್ಕ
* ಅಧೋಮುಖ ಮತ್ತು ಊರ್ಧ್ವಮುಖ ಸಂಪರ್ಕ
* ಔಪಚಾರಿಕ ಮತ್ತು ಅನೌಪಚಾರಿಕ

**ಸಂಪರ್ಕದ ಮಾಧ್ಯಮಗಳು:**

1) ಔಪಚಾರಿಕ
2) ಅನೌಪಚಾರಿಕ

**ಔಪಚಾರಿಕ ಸಂಪರ್ಕ ಮಾಧ್ಯಮ:**

ಅಧಿಕೃತ ಮಾಹಿತಿ ರವಾನಿಸಲು ಆಡಳಿತ ವ್ಯವಸ್ಥೆಯಿಂದ ಉದ್ದೇಶ ಪೂರ್ವಕವಾಗಿ ಸ್ಥಾಪಿಸಲಾಗಿರುತ್ತವೆ. ಇದರಲ್ಲಿ 4 ಬಗೆಗಳು ಇವೆ. ಅವುಗಳು–

1) ಸರಪಳಿ
2) ನಕ್ಷತ್ರ
3) ವೃತ್ತ
4) ಎಲ್ಲ ಮಾಧ್ಯಮ

1) ಸರಪಳಿ: ಸಂದೇಶ ಮೇಲ್ಮುಖವಾಗಿ ಅಥವಾ ಕೆಳಮುಖವಾಗಿ, ಶ್ರವಣಾತ್ಮಕ ಸರಪಳಿ ಮೂಲಕ ರವಾನೆ.

2) ನಕ್ಷತ್ರ ಜಾಲ: ಮಾಹಿತಿಯು ಕೇಂದ್ರದಿಂದ / ನಾಯಕನಿಂದ ಗುಂಪಿನ ಸದಸ್ಯರಿಗೆ ತಲುಪುತ್ತದೆ. ಗುಂಪಿನ ಸದಸ್ಯರಲ್ಲಿ ಪರಸ್ಪರ ಮಾಹಿತಿ ವಿನಿಮಯ ಇರುವುದಿಲ್ಲ.

3) ವರ್ತುಲಾಕಾರದ ಜಾಲ: ಗುಂಪಿನ ಸದಸ್ಯರು ಅಕ್ಕಪಕ್ಕದ ಸದಸ್ಯರೊಡನೆ ಮಾಹಿತಿ ವಿನಿಮಯ ಮಾಡುವುದು.

4) ಎಲ್ಲಾ ಮಾಧ್ಯಮಗಳಲ್ಲಿ.

**ಅನೌಪಚಾರಿಕ ಸಂಪರ್ಕ ಮಾಧ್ಯಮ:**

**ಉತ್ತಮ ಸಂಪರ್ಕದ ಅಗತ್ಯಾಂಶಗಳು:**

* ಸಂಪರ್ಕದಲ್ಲಿರುವ ಎಲ್ಲ ಮಾಹಿತಿ ಹೊಂದಿರಬೇಕು
* ಪರಸ್ಪರ ನಂಬಿಕೆ
* ಸಾಮಾನ್ಯ ಅನುಭವದ ವಿಷಯದ ಬಳಕೆ
* ಪರಸ್ಪರ ತಿಳಿದಿರುವ ಪದ / ಭಾಷೆ ಬಳಕೆ
* ಸಂದರ್ಭಕ್ಕೆ ಮಾನ್ಯತೆ ಕೊಡಬೇಕು
* ಸಂಪರ್ಕ ಸ್ವೀಕರಿಸುವವರ ಗಮನ ಸೆಳೆಯುವುದು

**ಸಂಪರ್ಕ ಸುಧಾರಣೆಯ ವಿಧಾನಗಳು:**

1) ಸ್ಫುಟವಾದ ಭಾಷಾ ಬಳಕೆ
2) ಆಡಳಿತಗಾರನು ಔಪಚಾರಿಕ ಮತ್ತು ಅನೌಪಚಾರಿಕ 2 ಮಾಧ್ಯಮ ಬಳಸಬೇಕು
3) ಹಿಮ್ಮಾಹಿತಿ (ಪ್ರತ್ಯಾದಾನ)

4) ಆಡಳಿತಗಾರನು ಸಂದೇಶ ಕೇಳುವ ವ್ಯವಧಾನ ಹೊಂದಬೇಕು

5) ಆಡಳಿತಗಾರರು ತಮ್ಮ ಅಧೀನ ಅಧಿಕಾರಿಗಳ ನಡುವೆ ಪರಸ್ಪರ ವಿಶ್ವಾಸ, ನಂಬಿಕೆಯ ವಾತಾವರಣ ನಿರ್ಮಾಣ ಮಾಡಬೇಕು.

**ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ:**

ಇವೆರಡು ಆಡಳಿತ ವ್ಯವಸ್ಥೆಯ ಮುಖ್ಯ ತತ್ವವಾಗಿದೆ. ಆಡಳಿತ ವ್ಯವಸ್ಥೆಯಲ್ಲಿನ ಮೇಲಾಧಿಕಾರಿ ಮತ್ತು ಅಧೀನಾಧಿಕಾರಿಗಳ ನಡುವಿನ, ಕೇಂದ್ರ ಕಛೇರಿ ಮತ್ತು ಕ್ಷೇತ್ರ ಕಾರ್ಯಾಲಯಗಳ ನಡುವೆ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಮತ್ತು ಇಲಾಖೆಗಳ ನಡುವಿನ ಸಂಬಂಧವನ್ನು ಸೂಚಿಸುತ್ತದೆ. ಉನ್ನತ ಮತ್ತು ಅಧಿಕಾರಿಗಳ ಮಧ್ಯೆ ನಿರ್ಣಯ ತೆಗೆದುಕೊಳ್ಳುವ ಅಧಿಕಾರದ ವಿತರಣೆಯೇ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ ಮೂಲಾಧಾರ.

**ಕೇಂದ್ರೀಕರಣದ ಅರ್ಥ:**

ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಕೇಂದ್ರ ಕಾರ್ಯಸ್ಥಾನಕ್ಕೆ ಹೆಚ್ಚಿನ ಆಡಳಿತಾಧಿಕಾರವಿರುತ್ತದೆ. ಕ್ರಮೇಣವಾಗಿ ಕೆಳಗಿನ ವರ್ಗಗಳ ಅಧಿಕಾರ ಕಡಮೆಯಾಗುತ್ತದೆ. ಕೆಳ ಹಂತದ ಕಛೇರಿಗಳಿಗೆ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಇರುವುದಿಲ್ಲ. ಎಲ್.ಡಿ.ವೈಟ್ 'ಆಡಳಿತ ವ್ಯವಸ್ಥೆಯ ಕೆಳಹಂತದಿಂದ ಮೇಲಿನ ಹಂತಕ್ಕೆ ಅಧಿಕಾರ ವರ್ಗಾವಣೆಯಾಗುವ ಕಾರ್ಯ ವಿಧಾನವನ್ನು ಕೇಂದ್ರೀಕರಣವಾಗಿದೆ' ಎಂದಿದ್ದಾರೆ.

**ಕೇಂದ್ರೀಕರಣದ ಅನುಕೂಲತೆಗಳು:**

* ವಿವಿಧ ವಿಭಾಗಗಳ ಮೇಲೆ ನಿಯಂತ್ರಣ
* ಶೀಘ್ರ ನಿರ್ಣಯ, ಉದ್ಯಮಶೀಲತೆ ಬೆಳವಣಿಗೆ, ಸಂಸ್ಥೆಯ ದಕ್ಷ ಕಾರ್ಯನಿರ್ವಹಣೆಗೆ ಅನುಕೂಲ
* ಇದು ಆಜ್ಞೆಯ ಏಕತೆ ತತ್ವವನ್ನು ಬಲಪಡಿಸುತ್ತದೆ. ಆಡಳಿತದ ವಿವಿಧ ಘಟಕಗಳ ಮೇಲೆ ಪರಿಣಾಮಕಾರಿ ನಿಯಂತ್ರಣ
* ಆಡಳಿತದಲ್ಲಿ ಏಕರೂಪದ ಧೋರಣೆ ಮತದ್ತು ಆಡಳಿತ ವಿಧಾನಗಳು ಜಾರಿಗೆ ತರಲು ಸಾಧ್ಯವಾಗುವುದು
* ಇಲ್ಲಿ ಪಕ್ಷಪಾತಕ್ಕೆ, ಬೇಧ ಭಾವಕ್ಕೆ ಅವಕಾಶವಿಲ್ಲ
* ಈ ಪದ್ದತಿಯು ಆಡಳಿತ ಕೆಳಮಟ್ಟದಲ್ಲಿನ ಭ್ರಷ್ಟಾಚಾರವನ್ನು ತಡೆಯುತ್ತದೆ.
* ಕೇಂದ್ರೀಕರಣವು ಭಾವೈಕ್ಯತೆಯನ್ನು ಬೆಳೆಸುತ್ತದೆ ಮತ್ತು ರಾಷ್ಟ್ರೀಯ ಸಮಗ್ರತೆಯನ್ನು ಕಾಪಾಡುತ್ತದೆ
* ಅರ್ಥವ್ಯವಸ್ಥೆ ಬಲಪಡಿಸಲು ಹಾಗೂ ಪ್ರಬಲ ರಕ್ಷಣಾ ವ್ಯವಸ್ಥೆ ಹೊಂದಲು ಕೇಂದ್ರೀಕರಣ ಉತ್ತಮ ಸಾಧನವಾಗಿದೆ. ಹಣಕಾಸಿನ ನೆರವು ಕೇಂದ್ರ ಸಂಸ್ಥೆಯಿಂದ ಬರುವುದರಿಂದ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಅನುಕೂಲವಾಗುತ್ತದೆ
* ಜನತೆಗೆ ಗೊಂದಲಕ್ಕೆ ಅವಕಾಶವಿಲ್ಲ

**ಕೇಂದ್ರೀಕರಣದ ಅನಾನುಕೂಲಗಳು:**

* ಕೇಂದ್ರ ಕಛೇರಿಗೆ ಹೆಚ್ಚಿನ ಭಾರ
* ಸಮಯದ ಅಪವ್ಯಯ ಕಂಡುಬರುತ್ತದೆ. ಪ್ರತಿಯೊಂದಕ್ಕೂ ಕೇಂದ್ರದ ಅನುಮೋದನೆ ಅಗತ್ಯ
* ಕೇಂದ್ರೀಕರಣ ಪದ್ದತಿ ಜಟಿಲವಾಗಿರುತ್ತದೆ. ಆಡಳಿತ ನಿಯಮ, ಪೂರ್ವ ನಿರ್ದೇಶನ, ಕಾರ್ಯ ವಿಧಾನಗಳಿಗೆ ಪ್ರಾಮುಖ್ಯತೆ ದೊರೆತು, ಆಡಳಿತದಲ್ಲಿ ಸಲಿಲತೆ ಮಾಯವಾಗಿ ಅಧಿಕಾರಶಾಹಿಯು ಭದ್ರಗೊಳ್ಳುತ್ತದೆ
* ಕೇಂದ್ರೀಕೃತ ವ್ಯವಸ್ಥೆಯು ಸ್ಥಳೀಯ ಸಮಸ್ಯೆಗಳನ್ನು ಉಪೇಕ್ಷಿಸುವ ಸಾಧ್ಯತೆ ಇರುತ್ತದೆ
* ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ
* ಅಭಿವೃದ್ದಿ ಕಾರ್ಯಗಳಿಗೆ ಅಗತ್ಯವಾದ ಜನರ / ಸ್ಥಳೀಯ ಸಂಸ್ಥೆಗಳ ಸಹಕಾರ ಸಿಗುವುದಿಲ್ಲ
* ಸರ್ವಾಧಿಕಾರ ಮನೋಭಾವ ಬೆಳೆಯುತ್ತದೆ
* ದ್ವಿತೀಯ ಸಾಲಿನ ನಾಯಕತ್ವ ಬೆಳವಣಿಗೆಗೆ ಅವಕಾಶ ಇರುವುದಿಲ್ಲ.

**ವಿಕೇಂದ್ರೀಕರಣದ ಗುಣಗಳು:**

* ಉನ್ನತ ಹಂತದ ಮುಖ್ಯ ಕಾರ್ಯ ನಿರ್ವಾಹಕನ ಮೇಲಿನ ಕಾರ್ಯಭಾರವನ್ನು ಕಡಿಮೆ ಮಾಡುವುದು
* ಕಾರ್ಯಗಳು ತ್ವರಿತಗತಿಯಲ್ಲಿ ನೆರವೇರುತ್ತದೆ. ಕಾರ್ಯ ವಿಳಂಬವನ್ನು ತಡೆಗಟ್ಟಿ ಶೀಘ್ರ ತೀರ್ಮಾನ ಕೈಗೊಳ್ಳಲು ಅನುಕೂಲವಾಗುವುದು. ವಿಳಂಬಕ್ಕೆ ಅವಕಾಶ ಇರುವುದಿಲ್ಲ
* ಕೇಂದ್ರದ ನಿರಂಕುಶತ್ವಕ್ಕೆ ತಡೆ, ಅಧಿಕಾರದ ದುರುಪಯೋಗಕ್ಕೆ ತಡೆ
* ವಿಕೇಂದ್ರೀಕರಣ ಜನತೆಯ ಆಸಕ್ತಿಯನ್ನು ಹೆಚ್ಚಿಸುವುದು. ಜನತೆಯ ಸಹಭಾಗಿತ್ವಕ್ಕೆ ಹೆಚ್ಚು ಅವಕಾಶವಿರುವುದು
* ವಿವಿಧ ಪ್ರದೇಶಗಳ ಪರಿಸ್ಥಿತಿಗೆ ಅನುಗುಣವಾಗಿ ಆಡಳಿತಾತ್ಮಕ ಧೋರಣೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ
* ಕ್ಷೇತ್ರ ಕಛೇರಿ ಅಧಿಕಾರಿಗಳಿಗೆ ಅಧಿಕಾರ ಮತ್ತು ಸ್ವಾತಂತ್ರ್ಯ ಇರುವುದರಿಂದ ಅವರಿಗೆ ತಮ್ಮ ಪ್ರತಿಭೆಯನ್ನು ಹಾಗೂ ಕೌಶಲ್ಯತೆಯನ್ನು ಆಡಳಿತ ನಿರ್ವಹಣೆಯು ತೋರಿಸಲು ಅವಕಾಶ ಇರುತ್ತದೆ
* ವಿಭಿನ್ನ ಪ್ರಯೋಗಗಳನ್ನು ನಡೆಸಲು ಸುಲಭ
* ನಾಗರೀಕರು ಮತ್ತು ಆಡಳಿತದ ನಡುವೆ ನಿಕಟ ಸಂಪರ್ಕ ಬೆಳೆಸಿ, ಸಹಭಾಗಿತ್ವಕ್ಕೆ ಎಡೆಮಾಡಿಕೊಡುತ್ತದೆ
* ಜನರ ಮತತು ಅವರ ಸಮಸ್ಯೆಗಳನ್ನು ಅತಿ ಹತ್ತಿರದಿಂದ ಅರಿತುಕೊಂಡಿರುವ ಕ್ಷೇತ್ರಾಧಿಕಾರಿಗೆ ಅಭಿವೃದ್ದಿ ಯೋಜನೆಗಳನ್ನು ಕೈಗೊಂಡು ಸ್ಥಳೀಯ ಕ್ಷೇತ್ರಗಳನ್ನು ಅಭಿವೃದ್ದಿಗೊಳಿಸಲು ಸಹಕಾರಿಯಾಗಿದೆ
* ರಾಜಕೀಯ ಸ್ಥಿರತೆ ಮತ್ತು ಐಕ್ಯತೆ ಹೆಚ್ಚಳ

**ವಿಕೇಂದ್ರೀಕರಣದ ಅನಾನುಕೂಲಗಳು:**

* ಅತಿಯಾದ ವಿಕೇಂದ್ರೀಕರಣ, ಅರಾಜಕತೆ, ಗೊಂದಲ, ಅವ್ಯವಸ್ಥೆಗೆ ಕಾರಣ
* ಆಡಳಿತದಲ್ಲಿ ಏಕರೂಪದ ಧೋರಣೆ ಮತ್ತು ವಿಧಾನಗಳನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ
* ವಿವಿಧ ಹಂತಗಳ ನಡುವೆ ಸಂಪರ್ಕ ಕಷ್ಟಕರ
* ಭ್ರಷ್ಟಾಚಾರ ಹೆಚ್ಚಳ

**ಅಧಿಕಾರ ನಿಯೋಜನೆ:**

ಇದು ಬೃಹತ್ ಸಂಘಟನೆಗಳ ಸಾಮಾನ್ಯ ಲಕ್ಷಣವಾಗಿದೆ. ಇದು ಸಂಘಟನೆಯ ಪ್ರಾಥಮಿಕ ತತ್ವಗಳಲ್ಲಿ ಒಂದಾಗಿದೆ. ಅಧಿಕಾರ ನಿಯೋಜನೆಯಿಂದ ಮುಖ್ಯ ಕಾರ್ಯ ನಿರ್ವಾಹಕನ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಉನ್ನತ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ನಿರ್ದಿಷ್ಟ ಅಧಿಕಾರವನ್ನು ಅಧೀನ ಅಧಿಕಾರಿಗಳಿಗೆ ಅನುಗ್ರಹಿಸುವುದೇ ಅಧಿಕಾರ ನಿಯೋಜನೆ ಆಗಿದೆ. ಜೆ.ಡಿಮೂನ್‌ರವರ ಪ್ರಕಾರ ಮೇಲಾಧಿಕಾರಿಯು ನಿರ್ದಿಷ್ಟ ಅಧಿಕಾರವನ್ನು ತನ್ನ ಅಧೀನ ಅಧಿಕಾರಿಗೆ ಅನುಗ್ರಹಿಸುವ ವಿಧಾನಕ್ಕೆ ನಿಯೋಜಿತಾಧಿಕಾರ ಎನ್ನುತ್ತಾರೆ.

ಟೆರ್ರಿ ಪ್ರಕಾರ ಅಧಿಕಾರ ನಿಯೋಜನೆ ಎಂದರೆ ಓರ್ವ ಕಾರ್ಯಾಂಗಾಧಿಕಾರಿ ಅಥವಾ ಘಟಕದಿಂದ ಇನ್ನೊಂದಕ್ಕೆ ಅನುಗ್ರಹಿಸುವ ಅಧಿಕಾರವಾಗಿದೆ. ಈ ಸಮಾಯೋಜನೆ ಮೇಲಿನಿಂದ ಕೆಳಗೆ ಆಗಿರಬೇಕೆಂದೇನಿಲ್ಲ. ಇದು ಸಮಾನಾಂತರ ಸ್ತರಗಳಲ್ಲಿ ನಡೆಯಬಹುದು. ಅಥವಾ ಕೆಳಮುಖವಾಗಿರಬಹುದು.

ಮೋಹಿತ ಭಟ್ಟಾಚಾರ್ಯರು ನಿಯೋಜಿತ ಶಾಸನದ ಕುರಿತ ಲಕ್ಷಣಗಳನ್ನು ಹೇಳುತ್ತಾರೆ.

* ಮೇಲಾಧಿಕಾರಿಯು ಅಧೀನ ಅಧಿಕಾರಿಗೆ ಕರ್ತವ್ಯಗಳನ್ನು ವಹಿಸುವುದು
* ಅಧೀನ ಅಧಿಕಾರಿಗೆ ವಹಿಸಿದ ಕೆಲವನ್ನು ನಿರ್ವಹಿಸಲು ಅನುಕೂಲವಾಗುವುದು. ಮೇಲಾಧಿಕಾರಿಯು ಆತನಿಗೆ ಅಧಿಕಾರ ಪ್ರಧಾನ ಮಾಡುವುದು
* ಅಧೀನ ಅಧಿಕಾರಿಯ ಮೇಲೆ ಆತನ ಕರ್ತವ್ಯವನ್ನು ಪೂರ್ಣಗೊಳಿಸುವ ಭಾದ್ಯತೆಯನ್ನು ಹೊರಿಸುವುದು
* ಅಧೀನ ಅಧಿಕಾರಿಯು ತನಗೆ ವಹಿಸಿದ ಬಾಧ್ಯತೆಯನ್ನು ಅಥವಾ ಹೊಣೆಗಾರಿಕೆಯನ್ನು ಮತ್ತೊಬ್ಬ ತನ್ನ ಅಧೀನ ಅಧಿಕಾರಿಗೆ ವಹಿಸುವಂತಿಲ್ಲ

**ಅಧಿಕಾರ ನಿಯೋಜನೆಯ ಪ್ರಾಮುಖ್ಯತೆ:**

* ಆಡಳಿತ ಸುಗಮವಾಗಿ ಹಾಗೂ ದಕ್ಷತೆಯಿಂದ ಸಾಗಬೇಕಾದರೆ ಅಧಿಕಾರ ಮತ್ತು ಹೊಣೆಗಾರಿಕೆಯನ್ನು ಇತರರಿಗೆ ಹಂಚುವುದು ಸೂಕ್ತ
* ಮುಖ್ಯಸ್ಥನ ಮೇಲಿನ ಒತ್ತಡ ಕಡಿಮೆಯಾಗುತ್ತದೆ
* ಅಧಿಕಾರ ನಿಯೋಜನೆ ಇರುವುದರಿಂದ ಅಧೀನ ಅಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ
* ಮುಖ್ಯ ಕಾರ್ಯ ನಿರ್ವಾಹಕನು ಜಲಂತ ಮತ್ತು ಗಂಭೀರ ಸಮಸ್ಯೆಗಳತ್ತ ಗಮನ ಹರಿಸಬಹುದು
* ಅಧೀನ ಅಧಿಕಾರಿಗಳಲ್ಲಿ ಹೊಣೆಗಾರಿಕೆಯ ಮನೋಭಾವನೆಯನ್ನು ಪ್ರಚೋದಿಸಲು ಮತ್ತು ಅವರ ಸಾಮರ್ಥ್ಯವನ್ನು ಬೆಳಕಿಗೆ ತರಲು ಅಧಿಕಾರ ನಿಯೋಜನೆ ಅಗತ್ಯವಾಗಿದೆ
* ಅಧಿಕಾರ ನಿಯೋಜನೆಯು ದಕ್ಷತೆಯನ್ನು ಹೆಚ್ಚಿಸುತ್ತದೆ. ಆಡಳಿತದಲ್ಲಿ ಮಿತವ್ಯಯ ಸಾಧಿಸುತ್ತದೆ
* ಅಧೀನ ಅಧಿಕಾರಿಗಳ ಹೆಚ್ಚಿನ ಕಾರ್ಯ ಚೈತನ್ಯವೂ ಹೆಚ್ಚುವುದು
* ಕೆಲಸ ಕಾರ್ಯಗಳ ಮೇಲೆ ಪರಿಣಾಮಕಾರಿ ನಿಯಂತ್ರಣ ಸಾಧ್ಯವಾಗುತ್ತದೆ

**ಅಧಿಕಾರ ನಿಯೋಜನೆಯ ಪ್ರಕಾರಗಳು:**

1) ಪೂರ್ಣ ಸಮಗ್ರ ಅಥವಾ ಭಾಗಶ: ಅಧಿಕಾರ ನಿಯೋಜನೆ: ಅಧೀನ ಅಧಿಕಾರಿಗಳಿಗೆ ಮುಖ್ಯ ಅಧಿಕಾರಗಳನ್ನು ನೀಡಲಾಗುತ್ತದೆ. ಮಹತ್ವದ ನಿರ್ಣಯಗಳಿಗೆ ಇಲಾಖೆಯ ಮುಖ್ಯಸ್ಥನ ಸಲಹೆ ಮತ್ತು ಮಾರ್ಗದರ್ಶನ ಪಡೆಯಬೇಕೆಂಬ ನಿರ್ಬಂಧ ಇದ್ದರೆ ಅದು ಭಾಗಶ: ಅಧಿಕಾರ ನಿಯೋಜನೆ.
2) ನಿರ್ಬಂಧಯುಕ್ತ ಮತ್ತು ನಿರ್ಬಂಧರಹಿತ: ಅಧೀನಾಧಿಕಾರಿಯ ತೀರ್ಮಾನ, ಕ್ರಮಗಳು ಮೇಲಾಧಿಕಾರಿಯ ದೃಢೀಕರಣ ಮತ್ತು ನಿಯಂತ್ರಣಕ್ಕೆ ಒಳಗಾದರೆ ಅದನ್ನು ನಿರ್ಬಂಧಯುಕ್ತ ನಿಯೋಜಿತಾಧಿಕಾರಿ ಎನ್ನಲಾಗುತ್ತದೆ. ಅಧೀನಾಧಿಕಾರಿ ಅಧಿಕಾರ ಚಲಾಯಿಸಲು ಸ್ವತಂತ್ರನಾಗಿದ್ದರೆ ಅದನ್ನು ನಿರ್ಬಂಧ ರಹಿತ ನಿಯೋಜಿತಾಧಿಕಾರ ಎನ್ನಲಾಗುತ್ತದೆ.
3) ಔಪಚಾರಿಕ ಮತ್ತು ಅನೌಪಚಾರಿಕ ನಿಯೋಜಿತ ಅಧಿಕಾರ.
4) ನೇರ ಮತ್ತು ಪರೋಕ್ಷ ನಿಯೋಜಿತಾಧಿಕಾರ.

**ಅಧಿಕಾರ ನಿಯೋಜನೆಯ ಸಾಮಾನ್ಯ ನಿಯಮಗಳು:**

* ಅಧಿಕಾರ ನಿಯೋಜನೆಯು ಸ್ಪಷ್ಟವಾಗಿಯೂ ಹಾಗೂ ಲಿಖಿತವಾಗಿಯೂ ಇರಬೇಕು
* ಅಧಿಕಾರವನ್ನು ಹುದ್ದೆಗೆ ನಿಯೋಜಿಸಬೇಕೇ ಹೊರತು ವ್ಯಕ್ತಿಗಲ್ಲ
* ಅಧೀನ ಅಧಿಕಾರಿಯ ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಳ್ಳಬೇಕು
* ಅಧಿಕಾರವು ಜವಾಬ್ದಾರಿಗೆ ತತ್ಸಮಾನವಾಗಿರಬೇಕು
* ಸಂಪರ್ಕ ವ್ಯವಸ್ಥೆ ಮುಕ್ತವಾಗಿರಬೇಕು. ಸ್ವತಂತ್ರವಾಗಿರಬೇಕು ಮತ್ತು ಕ್ರಮಬದ್ಧ ವರದಿ ವ್ಯವಸ್ಥೆ ಹೊಂದಿರಬೇಕು
* ಏಕ ಆದೇಶ ತತ್ವವನ್ನು ಹೊಂದಿರಬೇಕು. ಓರ್ವ ಉದ್ಯೋಗಿ ಕೇವಲ ಒಬ್ಬನೇ ಮೇಲಾಧಿಕಾರಿಯ ಆದೇಶಗಳಿಗೆ ಒಳಪಡಬೇಕು
* ಅಧಿಕಾರ ನಿಯೋಜನೆಗೆ ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿರಬೇಕು
* ಧೋರಣೆ, ನಿಯಮಾವಳಿ, ಆಡಳಿತ ಕಾರ್ಯ ವಿಧಾನಗಳನ್ನು ಅರ್ಥೈಸಿ ಅಧಿಕಾರ ನಿಯೋಜಿಸಬೇಕು.

**ಅಧಿಕಾರ ನಿಯೋಜನೆಗೆ ಸಂಬಂಧಿಸಿದ ಅಡಚಣೆಗಳು:**

* ಉತ್ತಮ ಆಡಳಿತಾತ್ಮಕ ವಿಧಿ ವಿಧಾನಗಳು ಅಭಾವ
* ಸಮನ್ವಯತೆ ಮತ್ತು ಸಂಪರ್ಕದ ಅಭಾವ

* ಅಸ್ಥಿರತೆ ಮತ್ತು ಪುನರಾವರ್ತನೆ ಕೆಲಸ
* ಸಂಘಟನೆಯ ಗಾತ್ರ ಮತ್ತು ಸ್ಥಳ
* ಸ್ಥಾನಗಳ ಜವಾಬ್ದಾರಿ ಮತ್ತು ಅಧಿಕಾರವನ್ನು ಸ್ಪಷ್ಟಪಡಿಸದೆ ಇರುವುದು
* ರಾಜಕೀಯ ನಿರ್ಬಂಧಗಳು

**ವೈಯಕ್ತಿಕ ಅಡಚಣೆಗಳು:**

* ಅಹಂ ಭಾವನೆ ಮತ್ತು ಅಧಿಕಾರದ ಲಾಲಸೆ
* ಅಧೀನ ಅಧಿಕಾರಿಗಳಲ್ಲಿ ಮೇಲಾಧಿಕಾರಿಗಳಿಗೆ ವಿಶ್ವಾಸವಿಲ್ಲದಿರುವುದು
* ಅಧೀನ ಅಧಿಕಾರಿಗಳ ಸಾಮರ್ಥ್ಯದ ಬಗ್ಗೆ ವಿಶ್ವಾಸವಿಲ್ಲದಿರುವುದು

## ನಿಯಂತ್ರಣ:

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಆಡಳಿತಾಂಗ ವಿವಿಧ ಬಗೆಯ ನಿಯಂತ್ರಣಕ್ಕೆ ಒಳಗಾಗಿರುತ್ತದೆ. ನಿಯಂತ್ರಣವು ಕಾರ್ಯ ನಿರ್ವಹಣೆಯ ಅತ್ಯಂತ ಮಹತ್ವದ ಮೂಲವಾಗಿದೆ. ವಿವಿಧ ಸ್ವರೂಪದ ನಿಯಂತ್ರಣಗಳ ಮೂಲಕ ಸರ್ಕಾರಿ ಅಧಿಕಾರಿಗಳನ್ನು ಜವಾಬ್ದಾರಿಯುತವಾಗಿರುವಂತೆ ಮಾಡಲಾಗುತ್ತದೆ. ನಿಯಂತ್ರಣ ಅಂದರೆ ಪೂರ್ವಯೋಜಿತ ಪ್ರಮಾಣಗಳಿಗೆ ಅನುಗುಣವಾಗಿ ಚಟುವಟಿಕೆಗಳು ನಡೆಯುತ್ತವೆಯೋ ಇಲ್ಲವೋ ಎಂಬುದನ್ನು ವಿಶ್ಲೇಷಿಸುವ ಮತ್ತು ಚಟುವಟಿಕೆಗಳು ಅವುಗಳ ಅನುಗುಣವಾಗಿ ನಡೆಯುವಂತೆ ನೋಡಿಕೊಳ್ಳುವ ಪ್ರಕ್ರಿಯೆ.

## ನಿಯಂತ್ರಣದ ಪ್ರಾಮುಖ್ಯತೆ:

ನಿಯಂತ್ರಣದಿಂದಾಗಿ ಕಾರ್ಯಾಂಗದ ಮುಖ್ಯಾಧಿಕಾರಿಯಲ್ಲಿ ಆಡಳಿತಾಧಿಕಾರವು ಒಗ್ಗೂಡಿರುತ್ತದೆ. ನಿರಂತರವಾಗಿ ವ್ಯಾಪಕವಾಗುತ್ತಿರುವ ಸರ್ಕಾರದ ಕಾರ್ಯಕ್ಷೇತ್ರದಲ್ಲಿ ನಿಯಂತ್ರಣವು ಪ್ರಮುಖ ಪಾತ್ರ ವಹಿಸುತ್ತದೆ. ನಿಯಂತ್ರಣದಿಂದ ಪ್ರಜಾಸತ್ತಾತ್ಮಕ ಸಂಸ್ಥೆ ಮತ್ತು ವಿಧಾನಗಳಿಗಾಗಿ ಜನರಲ್ಲಿ ಆಸಕ್ತಿ ಬೆಳೆಯುತ್ತಿದೆ.

## ನಿಯಂತ್ರಣದ ಉದ್ದೇಶಗಳು:

ನಿಯಂತ್ರಣವು ವ್ಯಕ್ತಿಗಳ ಸ್ವಾತಂತ್ರ್ಯ ಕಾಪಾಡುವ ಮತ್ತು ಆಡಳಿತಗಾರರ ಸಾಮಾನ್ಯ ಚಟುವಟಿಕೆಗಳನ್ನು ಕಡಿತಗೊಳಿಸದಂತಹ ಉದ್ದೇಶ ಹೊಂದಿರುತ್ತದೆ.

## ನಿಯಂತ್ರಣದ ವಿಧಾನಗಳು:

1) ಆಂತರಿಕ ನಿಯಂತ್ರಣ ವಿಧಾನಗಳು
2) ಬಾಹ್ಯ ನಿಯಂತ್ರಣ ವಿಧಾನಗಳು

1) ಆಂತರಿಕ ನಿಯಂತ್ರಣ ವಿಧಾನಗಳು:
   * ಆಯವ್ಯಯ ನಿಯಂತ್ರಣ
   * ಸಿಬ್ಬಂದಿ ನಿರ್ವಹಣಾ ನಿಯಂತ್ರಣ
   * ದಕ್ಷತಾ ಮಾಪನ ವ್ಯವಸ್ಥೆ: ನಿರೀಕ್ಷಣಾ / ವೀಕ್ಷಕ ಅಧಿಕಾರಿ – ದಕ್ಷತೆಯ ಪರೀಕ್ಷೆ
   * ಆಡಳಿತಾತ್ಮಕ ನೈತಿಕತೆಯ ವೃತ್ತಿಮಟ್ಟ: ವೃತ್ತಿ ನೀತಿ ಸಂಹಿತೆ / ಆಡಳಿತದಲ್ಲಿ ನೈತಿಕತೆ
   * ನಾಯಕತ್ವ

2) ಬಾಹ್ಯ ನಿಯಂತ್ರಣ ವಿಧಾನಗಳು:

# ಕಾರ್ಯಾಂಗೀಯ ನಿಯಂತ್ರಣ

ಮುಖ್ಯ ಕಾರ್ಯ ನಿರ್ವಾಹಕನು ಕಾರ್ಯಾಂಗದ (ಆಡಳಿತಶಾಹಿಯ) ಕಾರ್ಯ ನಿರ್ವಹಣೆ ಮೇಲೆ ಚಲಾಯಿಸುವ ನಿಯಂತ್ರಣ. ಉದಾಹರಣೆಗೆ ರಾಜಕೀಯ ಕಾರ್ಯಾಂಗವಾದ ಮಂತ್ರಿಮಂಡಲ ಆಡಳಿತದ ಮೇಲೆ ನಿಯಂತ್ರಣ ಚಲಾಯಿಸುತ್ತದೆ.

**ಬಗೆಗಳು:**

* ನೀತಿ ರಚನೆಯ ಮೂಲಕ ನಿಯಂತ್ರಣ
* ಆಯ ವ್ಯಯ ವ್ಯವಸ್ಥೆಯ ಮೂಲಕ ನಿಯಂತ್ರಣ
* ನೇಮಕಾತಿಯ ವ್ಯವಸ್ಥೆ ಮೂಲಕ ನಿಯಂತ್ರಣ
* ಕಾರ್ಯಾಂಗೀಯ ಶಾಸನದ ಮೂಲಕ ನಿಯಂತ್ರಣ
* ನಾಗರಿಕ ಸೇವಾ ಸಂಹಿತೆ ಮೂಲಕ ನಿಯಂತ್ರಣ
* ಸಲಹಾ ವರ್ಗದ ಮೂಲಕ ನಿಯಂತ್ರಣ
* ಕಾರ್ಯಾಂಗ ನಿಯಂತ್ರಣದ ಮೌಲ್ಯಮಾಪನ

**ಆಡಳಿತದ ಮೇಲೆ ಶಾಸನೀಯ ನಿಯಂತ್ರಣ:**

1) ಶಾಸನ ರಚನೆ
2) ಸಂಸದೀಯ ಪ್ರಶ್ನೆಗಳು
3) ಆಯ ವ್ಯಯ ವ್ಯವಸ್ಥೆ
4) ಲೆಕ್ಕ ಶೋಧನಾ ವರದಿ
5) ಸಾಮಾನ್ಯ ಚರ್ಚೆ (ಸಭೆ)
6) ಶಾಸಕಾಂಗ ಸಮಿತಿಗಳು
7) ಬಾಹ್ಯ ನಿಯಂತ್ರಣಗಳಲ್ಲಿ ಒಂದಾಗಿದೆ
8) ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳ ಸರ್ಕಾರ ಉನ್ನತ ಅಂಗ

**ಆಡಳಿತದ ಮೇಲೆ ನ್ಯಾಯಾಂಗದ ನಿಯಂತ್ರಣ:**

ಆಡಳಿತಾಂಗ ತನ್ನ ಕಾರ್ಯ ವ್ಯಾಪ್ತಿ ಮೀರಿದಾಗ, ದೋಷಪೂರಿತ ಕಾನೂನು ಚಲಾಯಿಸಿದಾಗ, ಸತ್ಯಾಂಶ ಕಂಡು ಹಿಡಿಯುವಲ್ಲಿ ತಪ್ಪೆಸಗಿದಾಗ, ದೋಷಪೂರಿತ ಕಾರ್ಯ ವಿಧಾನ ಅನುಸರಿಸಿದಾಗ ಆಡಳಿತದ ಮೇಲೆ ನ್ಯಾಯಾಂಗ ನಿಯಂತ್ರಣ ತರುತ್ತದೆ.

**ನ್ಯಾಯಾಂಗ ನಿಯಂತ್ರಣದ ಕಾರ್ಯ ವಿಧಾನಗಳು:**

* ನ್ಯಾಯಿಕ ವಿಮರ್ಶೆ
* ಶಾಸನಬದ್ಧ ಮೇಲ್ಮನವಿ
* ಸರ್ಕಾರದ ವಿರುದ್ಧ ದಾವೆ
* ಸಾರ್ವಜನಿಕ ಅಧಿಕಾರಿಗಳ ವಿರುದ್ಧ ದಾವೆ
* ವಿಶೇಷ ನ್ಯಾಯಾಂಗೀಯ ಪರಿಹಾರೋಪಾಯಗಳು (32ನೇ ವಿಧಿ).

# ಅಧ್ಯಾಯ – 4

# ಔಪಚಾರಿಕ ಮತ್ತು ಅನೌಪಚಾರಿಕ ಸಂಘಟನೆ

**ಕಾರ್ಯಾತ್ಮಕ ನಿರ್ವಹಣೆ:**

ಒಂದು ಸಂಸ್ಥೆಯ ಅತ್ಯಂತ ಅವಶ್ಯಕವಾದ ಮತ್ತು ಸಾಮಾನ್ಯವಾಗಿ ಕಂಡುಬರುವ ನಿರ್ವಹಣಾ ವಿಧಾನವೇ ಕಾರ್ಯಾತ್ಮಕ ನಿರ್ವಹಣೆ. ಒಂದು ಸಂಸ್ಥೆ ಹಲವಾರು ವಿಭಾಗ ಅಥವಾ ಇಲಾಖೆಗಳಿಂದ ಕೂಡಿರುತ್ತದೆ. ಉದಾ: ವ್ಯವಹಾರಿಕ, ಹಣಕಾಸಿನ, ತಾಂತ್ರಿಕ, ಉತ್ಪಾದನಾ ಇತ್ಯಾದಿ. ಇದನ್ನು ಆಡಳಿತದ ಅನುಕೂಲಕ್ಕಾಗಿ ಮಾಡಲಾಗಿರುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಎಲ್ಐಸಿ ಅಲ್ಲಿ ಪ್ಲಾಲಿಸಿ ಅನುಮೋದನೆ, ನವೀಕರಣ, ಸಾಲ, ಪೂರ್ಣಾವಧಿಯ ಮುಕ್ತಾಯದ ಹಣ ಪಾವತಿ ಇತ್ಯಾದಿ ಇಲಾಖೆಗಳಿರುತ್ತವೆ.

ಅಗತ್ಯಕ್ಕೆ ತಕ್ಕಂತೆ ಇಲಾಖೆಗಳ ಮಧ್ಯೆ, ಮಾಹಿತಿ ವಿನಿಮಯವಾಗಿ, ಪರಸ್ಪರ ಹಂಚಿಕೆಯ ಮೂಲಕ ನಿರ್ವಹಣೆ ಜರುಗುತ್ತದೆ. ಅಂದರೆ ಯಾವ ಇಲಾಖೆಯಿಂದ ಕಾರ್ಯ ನಿರ್ವಹಣೆ ಆಗಬೇಕಾಗಿದೆಯೋ ಅಲ್ಲಿಗೆ ಸಂದೇಶ ರವಾನಿಸಿ, ಅವರಿಂದಲೇ ನಿರ್ವಹಣೆ ನಡೆಸಲಾಗುವುದು. ಈ ಇಲಾಖಾ ಮುಖ್ಯಸ್ಥರು ಸಂಘಟನೆಯ ಇತರ ಇಲಾಖೆಯೊಂದಿಗೆ ತನ್ನ ಇಲಾಖೆಯ ಸಂಪರ್ಕ ಮಾಡುವ ಕೊಂಡಿಯಂತೆ. ಈ ರೀತಿಯ ಇಲಾಖೆಗಳನ್ನು ಮತ್ತು ಮುಖ್ಯಸ್ಥರಿಂದ ಆಗುವ ಪ್ರಮುಖ ಅನಿಕೂಲ ಸಿಬ್ಬಂದಿಯು ಕೇವಲ ಒಬ್ಬ ಅಧಿಕಾರಿಯನ್ನು ಹೊಂದಿರುತ್ತಾರೆ. ಸಮಯದ ಅಭಾವ ತಪ್ಪಿಸಿ ಬೇಗ ಕಾರ್ಯ ನಿರ್ವಹಿಸುವಂತೆ ಮಾಡುತ್ತದೆ.

**ಹಣಕಾಸು:**

ಸಂಘಟನೆಯು ಪ್ರಾಥಮಿಕವಾಗಿ ಮುಂದುವರೆಯಲು ಹಣಕಾಸು ಅತಿ ಅವಶ್ಯಕವಾಗಿದೆ. ಎಲ್ಲ ಚಟುವಟಿಕೆಗಳಿಗೂ ಹಣಕಾಸು ಅತಿ ಅವಶ್ಯಕವಾದುದು. ಆದ್ದರಿಂದ ಸಂಘಟನೆಯ ರಚನೆಯಲ್ಲಿ ಹಣಕಾಸು ಆಡಳಿತವು ಸಹ ಪ್ರಮುಖ ಪಾತ್ರ ವಹಿಸುತ್ತದೆ.

ಉತ್ಪಾದನೆ, ಮಾನವ ಸಂಪನ್ಮೂಲ ನಿರ್ವಹಣೆ, ಮಾರಾಟ ಚಟುವಟಿಕೆಗಳಿಗೆ ಹಣಕಾಸು ಮೂಲ ದ್ರವ್ಯವಾಗಿದೆ. ಆದ್ದರಿಂದ ಹಣಕಾಸು ನಿರ್ವಹಣೆಯು ಒಂದು ಪ್ರಮುಖ ಆಡಳಿತಾತ್ಮಕ ವಿಷಯಾಂಶವಾಗಿ ಹೊರಹೊಮ್ಮುತ್ತಿದೆ. ಇದು ವೆಚ್ಚ ನಿಯಂತ್ರಣ, ಮುಂಗಡ ಪತ್ರ ರಚನೆ, ಯೋಜನೆ, ಬಂಡವಾಳಗಳ ಮುಂತಾದ ಕಾರ್ಯಗಳನ್ನು ಒಳಗೊಂಡಿದೆ.

ಮುಂಗಡ ಪತ್ರ ರಚನೆಯು ಹಣಕಾಸು ಆಡಳಿತದಲ್ಲಿ ಪ್ರಮುಖವಾದುದು. ಮುಂಗಡ ಪತ್ರವನ್ನು ಸಂಘಟನೆಯ ಅಂಕಿ ಅಂಶಗಳ ಆಧಾರದ ಮೇಲೆ ಮತ್ತು ಇರುವಂತಹ ಭೌತಿಕ ಸಂಪತ್ತಿನ ಆಧಾರದ ಮೇಲೆ ರಚಿಸಲಾಗುತ್ತದೆ. ನಂತರ ಈ ಮುಂಗಡ ಪತ್ರದಂತೆಯೇ ವಾರ್ಷಿಕವಾಗಿ ಆಡಳಿತ ನಡೆಸಿಕೊಂಡು ಹೋಗಲು ರೂಪ ರೇಷೆಗಳನ್ನು ರಚಿಸುತ್ತದೆ. ಮತ್ತು ಇದರಂತೆ ಸಂಘಟನೆಯು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುವಂತೆ ನಿರ್ದೇಶಿಸುತ್ತದೆ.

ಸಂಸ್ಥೆಯ ಅಸ್ತಿತ್ವ ಗಟ್ಟಿಗೊಳಿಸಲು ಅದರ ವೆಚ್ಚದ ನಿಯಂತ್ರಣವು ಅತ್ಯಧಿಕ ಮಹತ್ವದ್ದಾಗಿದೆ. ವೆಚ್ಚಗಳ ವಿಶ್ಲೇಷಣೆಯು ಸಂಘಟನೆಯನ್ನು ಪರಿಣಾಮಕಾರಿಯಾಗಿ ತನ್ನ ಗುರಿಯತ್ತ ನಡೆಯಲು ಸಹಾಯಕವಾಗುತ್ತದೆ.

ಹಾಗೆಯೇ ಹಣಕಾಸಿನ ಯೋಜನೆಗಳು ಸಾಮಾನ್ಯವಾಗಿ ವಾಣಿಜ್ಯ ಸಂಘಟನೆಯಲ್ಲಿ ತಮ್ಮ ಪಾತ್ರಧಾರಿಯಾಗುತ್ತವೆ. ಈ ಸಂಘಟನೆಗಳು ತಮ್ಮ ಯೋಜನೆಗಳನ್ನು ಹಣದ ರೂಪದಲ್ಲಿ ವ್ಯಕ್ತಪಡಿಸುತ್ತವೆ. ಇಂತಹ ಯೋಜನೆಗಳಿಂದ ಸಂಸ್ಥೆಯ ಹಣಕಾಸಿನ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ. ಹಾಗೂ ಹಣಕಾಸಿನ ಕಾರ್ಯ ಚಟುವಟಿಕೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಇದರಿಂದ ಸಂಸ್ಥೆಯ ಲಾಭ ಗಳಿಕೆಯಲ್ಲಿಯೂ ಇದು ಪ್ರಮುಖ ಪಾತ್ರ ವಹಿಸುತ್ತದೆ.

**ಮಾನವ ಸಂಪನ್ಮೂಲ:**

ಒಂದು ಸಂಘಟನೆಯಲ್ಲಿನ ಸಿಬ್ಬಂದಿಯನ್ನು ಮಾನವ ಸಂಪನ್ಮೂಲ ಎಂದು ಕರೆಯಬಹುದು. ಶಿಸ್ತುಬದ್ಧ ಸಿಬ್ಬಂದಿ ವರ್ಗ, ಮತ್ತು ವ್ಯವಹಾರಿಕ ಪರಿಜ್ಞಾನವುಳ್ಳ ಅಥವಾ ಸಂಘಟನೆಯ ಕುರಿತಾದ ಸಂಪೂರ್ಣ ಜ್ಞಾನ

ಹೊಂದಿದ ಎಲ್ಲಾ ಕೆಲಸಗಾರರೆಲ್ಲರೂ ಮಾನವ ಸಂಪನ್ಮೂಲಗಳೇ. ಮಾನವ ಸಂಪನ್ಮೂಲ ಸಂಸ್ಥೆಯ ಆಸ್ತಿ ಇದ್ದಂತೆ. ಈ ಮಾನವ ಸಂಪನ್ಮೂಲಕ್ಕೆ ಕಾಲಕಾಲಕ್ಕೆ ತರಬೇತಿ, ಅವಕಾಶಗಳು ಮತ್ತು ಬೇಡಿಕೆಗಳ ಪೂರೈಕೆ ಮಾಡಿದರೆ ಸಂಘಟನೆಯು ಸರಳವಾಗಿ ಮಾನವ ಸಂಪನ್ಮೂಲದೊಂದಿಗೆ ಕಾರ್ಯ ನಿರ್ವಹಿಸುವಂತಾಗುತ್ತದೆ. 1893ರಲ್ಲಿ ಪ್ರಥಮ ಬಾರಿಗೆ ಜಾನ್ ಕಾಮನ್ಸ್ ಎಂಬ ಅರ್ಥಶಾಸ್ತ್ರಜ್ಞ ಮಾನವ ಸಂಪನ್ಮೂಲ ಪದವನ್ನು ತನ್ನ ಕೃತಿ 'ದಿ ಡಿಸ್ಟ್ರಿಬ್ಯೂಷನ್ ಆಫ್ ವೆಲ್ತ್'ನಲ್ಲಿ ಬಳಸಿದ್ದಾರೆ. ನಂತರ ಆಧುನಿಕ ಜಗತ್ತಿನಲ್ಲಿ 1958ರಲ್ಲಿ 'ವಿಗ್‌ಬಕೆ' ಮಾನವ ಸಂಪನ್ಮೂಲ ಶಬ್ದ ಬಳಸಿ ಅದಕ್ಕೊಂದು ಆಧುನಿಕ ಅರ್ಥ ನೀಡಿದನು. ಮಾನವ ಸಂಪನ್ಮೂಲವನ್ನು ಈ ಕೆಳಗಿನ ಮೂರು ಮೂಲ ಅಂಶಗಳಿಂದ ಗಮನಿಸಬಹುದು.

1) ಜನಸಂಖ್ಯೆಯ ದೃಷ್ಟಿಯಿಂದ
2) (ಜನಸಂಖ್ಯೆಯಲ್ಲಿ) ವಿಭಾಗಿಸಲ್ಪಡುವುದು. ನಾನಾ ಕಾರಣಗಳಿಂದ ಮಾನವ ಸಂಪನ್ಮೂಲವನ್ನು ವಿಭಜಿಸುವುದು.
3) ಕೌಶಲ್ಯ ಮತ್ತು ವಿದ್ಯಾರ್ಹತೆ

   ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳುವ ಮೊದಲು ಸಾಮಾಜಿಕ ಕ್ಷೇತ್ರದಲ್ಲಿಯ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

1) ಭೌಗೋಳಿಕ ಸಂಘಟನೆಯ ವ್ಯಾಪ್ತಿ: ಮಾನ ಸಂಪನ್ಮೂಲ ಸಂಪರ್ಕಕ್ಕೆ / ಸಂಪರ್ಕ ಸಾಧನಗಳಿಗೆ ಅಭಾವವಿರಬಾರದು.
2) ವೃತ್ತಿಯ ರಚನೆ: ಸಂಘಟನೆಯ ನೀತಿ ನಿಯಮಗಳು, ಕೌಶಲ್ಯ, ವಿದ್ಯಾರ್ಹತೆಯ ಕುರಿತು ಮಾನವ ಸಂಪನ್ಮೂಲಕ್ಕೆ ಸಂಪೂರ್ಣ ಜ್ಞಾನವಿರಬೇಕು.
3) ತಲೆಮಾರಿನ ವ್ಯತ್ಯಾಸ: ಸಂಘಟನೆಯಲ್ಲಿ ವಯಸ್ಸಿನ ಅಂತರ ಹೊಂದಿದ ಸಿಬ್ಬಂದಿ ವರ್ತನೆ, ಬೇಡಿಕೆ ಮತ್ತು ಪಡೆಯುವಿಕೆಗಳು ವ್ಯತ್ಯಾಸ ಹೊಂದಿರುತ್ತಾರೆ.

**ವಿಮರ್ಶೆ:**

ಮಾನವ ಸಂಪನ್ಮೂಲವನ್ನು ಒಂದು 'ಸಂಪನ್ಮೂಲ' ಎಂಬಂತೆ ನೋಡುವುದು ತಪ್ಪು. ಮನುಷ್ಯ ಮಾರಾಟದ ವಸ್ತು ಅಲ್ಲ. ಮನುಷ್ಯ ಸಂಘಟನೆಯಲ್ಲಿ ಒಬ್ಬ ಕೌಶಲ್ಯವುಳ್ಳ ನವೀನತೆಯನ್ನು ಒಳಗೊಂಡಂತಹ, ಸಾಮಾಜಿಕ, ಬದಲಾವಣೆ, ಬಯಸುವ 'ಸಿಬ್ಬಂದಿ ಹೊರತು ಸಂಪನ್ಮೂಲ' ಅಲ್ಲ. 2000ದಲ್ಲಿ ಐಎಸ್‌ಓ–9001ದಲ್ಲಿ ಮಾನವ ಸಂಪನ್ಮೂಲ ಕುರಿತು ಪುನರ್ ವ್ಯಾಖ್ಯಾನ ನೀಡಲಾಯಿತು. ಅದರಂತೆ ಮಾನವ ಸಮಪನ್ಮೂಲ ಎಂದರೆ ಸಂಘಟನೆಯನ್ನು ಅರ್ಥೈಸಿಕೊಂಡು, ವಿಶ್ಲೇಷಿಸುವ, ಸಂಪರ್ಕಿಸುವ, ಜವಾಬ್ದಾರಿಯನ್ನು ಹೊಂದುವ. ಅಧಿಕಾರಯುತ ಸಿಬ್ಬಂದಿ ವರ್ಗವಾಗಿದೆ.

ಇಂಟರ್ ನ್ಯಾಷನಲ್ ಲೇಬರ್ ಆರ್ಗನೈಸೇಷನ್ 1975ರ ತನ್ನ ಒಡಂಬಡಿಕೆ ಬದಲಾಯಿಸಿ, 2001ರಲ್ಲಿ ಕಾರ್ಮಿಕ ಎಂದರೆ ವ್ಯಾಪಾರಿ ವಸ್ತುವಲ್ಲ ಎಂಬ ತತ್ವವನ್ನು ಅಳವಡಿಸಿಕೊಂಡಿದೆ. ಕಾರ್ಮಿಕರ ಸ್ಥಿತಿ ಗತಿ ಸುಧಾರಣೆ ತರಬೇತಿ ನೀಡಿದರೆ ಸಂಘಟನೆಯೊಂದಿಗೆ ಬದಲಾದ ಸಂದರ್ಭದೊಂದಿಗೆ ಮಾನವ ಸಂಪನ್ಮೂಲ ಯಶಸ್ವಿ ಕಾರ್ಯ ನಿರ್ವಹಿಸುತ್ತದೆ.

**ಮಾರುಕಟ್ಟೆ:**

ಪ್ರತಿಯೊಂದು ಸಂಘಟನೆಯು ತಾನು ರೂಇಸಿದ ವಸ್ತುವಿನ ಮಾರಾಟದ ಮೂಲಕ ಲಾಭ ಗಳಿಕೆಯತ್ತ ಮತ್ತು ಇತರೆ ಸಂಸ್ಥೆಗಳಿಂದ ಪೈಪೋಟಿಯಲ್ಲಿ ಯಶಸ್ವಿಯಾಗಲು ಬಯಸುತ್ತದೆ. ಆದ್ದರಿಂದ ತಾನು ರೂಪಿಸದ ವಸ್ತುವಿಗೆ ಮಾರುಕಟ್ಟೆಯನ್ನು ರಚಿಸುವುದು ಸಹ ಸಂಸ್ಥೆಗೆ ಅತಿ ಪ್ರಮುಖವಾದ ವಿಷಯವಾಗಿದೆ.

ಮಾರಾಟ ಹಂತಗಳಲ್ಲಿಯೂ ನಿರ್ವಹಣೆಯು ಅತ್ಯಂತ ಅವಶ್ಯಕವಾಗಿದೆ. ಗ್ರಾಹಕನ ಅಗತ್ಯತೆಗೆ ತಕ್ಕಂತೆ ವಸ್ತುಗಳ ವಿನ್ಯಾಸ, ಗಾತ್ರ, ಗುಣಮಟ್ಟವನ್ನು ಸಂಸ್ಥೆಯು ಗಮನದಲ್ಲಿರಿಸಿಕೊಂಡು ರಚಿಸಬೇಕಾಗುತ್ತದೆ.

ಹಾಗೆಯೇ ಮಾರುಕಟ್ಟೆಯಲ್ಲಿಯ ಸಮೀಕ್ಷೆ, ಸಂಶೋಧನೆ, ಸ್ಪರ್ಧೆಗಳ ಅಪಾರವಾದ ಅರಿವನ್ನು ಸಂಘಟನೆಯು ಒಳಗೊಂಡಿರಬೇಕು. ಈ ಎಲ್ಲ ವಿಷಯಾಂಶಗಳನ್ನು ಸಂಘಟನೆಯಲ್ಲಿ ನಿಭಾಯಿಸುವ ವಿಭಾಗವೇ ಈ ಮಾರುಕಟ್ಟೆ ಅಥವಾ ಮಾರಾಟ ವಿಭಾಗ.

**ಉತ್ಪಾದನೆ:**

ಸಂಸ್ಥೆಯ ಉತ್ಪಾದನಾ ವಿಭಾಗವು ಅತ್ಯಂತ ಪ್ರಮುಖವಾದ ವಿಭಾಗವಾಗಿದೆ. ಉತ್ಪಾದನೆಯು ಒಂದು ಸಂಘಟನೆಯ ಅಳಿವು ಉಳಿವನ್ನು ನಿರ್ಧರಿಸುತ್ತದೆ. ಉತ್ಪಾದನೆಯ ಹಂತಗಳಲ್ಲಿ ಅತ್ಯಂತ ವೈಜ್ಞಾನಿಕ ಸ್ವರೂಪದ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟಿವೆ. ಕಾರಣ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಪ್ರತಿ ಕಾರ್ಮಿಕ ಹಾಗೂ ಒಟ್ಟಾರೆ ನಿರ್ವಹಣೆಯು ಪ್ರಮುಖ ಪಾತ್ರ ವಹಿಸುತ್ತದೆ.

ಉತ್ಪಾದನೆಯ ಹಂತದಲ್ಲಿ ವಸ್ತುಗಳ ಗುಣಮಟ್ಟ, ಪರಿಣಾಮಾತ್ಮಕ ಗಾತ್ರ ಇವೇ ಮುಂತಾದವು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಉತ್ಪಾದನಾ ನಿರ್ವಹಣೆಯು ಯೋಜನೆ, ನಿಯಂತ್ರಣ ಮತ್ತು ಗುಣಮಟ್ಟ ನಿಯಂತ್ರಣ ಮುಂತಾದವುಗಳನ್ನು ಒಳಗೊಂಡಿರುತ್ತದೆ.

**ನಾಯಕತ್ವ:**

ಪ್ರತಿಯೊಂದು ಸಂಸ್ಥೆಗೂ ತನ್ನದೇ ಆದ ಧ್ಯೇಯೋದ್ದೇಶಗಳನ್ನು ಈಡೇರಿಸಬೇಕಾದರೆ ಜವಾಬ್ದಾರಿಯುತ ನಾಯಕನಿರಬೇಕು. ದಕ್ಷ ಆಡಳಿತಕ್ಕೆ ಯೋಗ್ಯ ಮತ್ತು ಸಮರ್ಥ ನಾಯಕತ್ವ ಅತ್ಯವಶ್ಯಕ. ನಾಯಕತ್ವ ಎಂದರೆ ಜನರ ಮೇಲೆ ಪ್ರಭಾವ ಬೀರುವ ಲಕ್ಷಣಗಳನ್ನು ಸೂಚಿಸುತ್ತದೆ. ಉತ್ಸಾಹದಿಮದ ನಿಗಧಿತ ಉದ್ದೇಶಗಳನ್ನು ಈಡೇರಿಸಲು ಇತರರ ಮನವೊಲಿಸುವ ಸಾಮರ್ಥ್ಯವೇ ನಾಯಕತ್ವ. ನಿರ್ಧರಿತ ಗುರಿಗಳನ್ನು ಈಡೇರಿಸಲು ವ್ಯಕ್ತಿಗಳು ಮತ್ತು ಗುಂಪುಗಳಿಗೆ ಪ್ರೇರಣೆ ಮತ್ತು ನಿರ್ದೇಶನ ನೀಡಿ ಅವರ ಪ್ರಯತ್ನ ಸಂಯೋಜಿಸುವ ಕಲೆಯೇ ನಾಯಕತ್ವ.

**ನಾಯಕತ್ವದ ಲಕ್ಷಣಗಳು:**

1) ನಾಯಕತ್ವವು ವೈಯಕ್ತಿಕ ಗುಣವಾಗಿದೆ. ಅನುಯಾಯಿಗಳಿಗೆ ಪ್ರೇರಣೆ ನೀಡುತ್ತದೆ.

2) ಪೂರ್ವ ನಿರ್ಧರಿತ ಧ್ಯೇಯಗಳ ಸಾಧನೆಗಾಗಿ ಇತರರ ನಡವಳಿಕೆಗಳ ಮೇಲೆ ಪ್ರಭಾವ ಬೀರುತ್ತದೆ.

3) ನಾಯಕತ್ವ ವ್ಯಕ್ತಿ ಮತ್ತು ಗುಂಪುಗಳ ನಡವಳಿಕೆಗಳ ಮೇಲೆ ಪ್ರಭಾವ ಬೀರುವಂತಹ ನಿರಂತರ ಪ್ರಕ್ರಿಯೆಯಾಗಿದೆ.

**ನಾಯಕತ್ವದ ಕಾರ್ಯಗಳು:**

1) ಗುರಿಗಳನ್ನು ಸಾಧಿಸುವುದು

2) ಸಾಧನೆಗಳ ನಿರ್ವಹಣೆ

3) ಕಾರ್ಯವಿಧಾನ ನಿಯಂತ್ರಿಸುವುದು

4) ಸಂಯೋಜಿತ ಕಾರ್ಯವನ್ನು ಪ್ರೋತ್ಸಾಹಿಸುವುದು

5) ಗುಂಪಿನ ಜೊತೆ ನಿಕಟ ಸಂಬಂಧವನ್ನು ಹೊಂದಿ ಗುಂಪಿನೊಂದಿಗೆ ಕೆಲಸ ಮಾಡಬೇಕು

**ನಾಯಕತ್ವದ ವಿಧಗಳು:**

1) ನಿರಂಕುಶ ನಾಯಕತ್ವ: ಎಲ್ಲಾ ಅಧಿಕಾರ ಮತ್ತು ತೀರ್ಮಾನ ಕೈಗೊಳ್ಳುವುದು ನಾಯಕನಲ್ಲಿ ಕೇಂದ್ರೀಕೃತವಾಗಿರುತ್ತದೆ.

2) ಪ್ರಜಾಸತ್ತಾತ್ಮಕ ನಾಯಕತ್ವ.

3) ನಿರಾತಂಕ ನಾಯಕತ್ವ: ತನ್ನ ಅಧಿಕಾರವನ್ನು ಅಲ್ಪ ಪ್ರಮಾಣದಲ್ಲಿ ಬಳಸುತ್ತಾನೆ ಮತ್ತು ತನ್ನ ಕೆಳಗಿನವರಿಗೆ ಅವರ ಕಾರ್ಯ ನಿರ್ವಹಣೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡುತ್ತಾನೆ.

**ನಾಯಕತ್ವದ ಸಿದ್ಧಾಂತಗಳು:**

1) ಧುರೀಣತ್ವದ (ಸ್ವಭಾವದ ಸಿದ್ಧಾಂತ) ನಾಯಕತ್ವ ಗುಣಗಳು ಹುಟ್ಟಿನಿಂದಲೇ ಬರುವುದು.

2) ಧುರೀಣತ್ವ ವರ್ತನಾ ಸಿದ್ಧಾಂತ: ನಾಯಕತ್ವ ವ್ಯಕ್ತಿಯ ವರ್ತನೆಯ ಮೇಲೆ ಅವಲಂಬಿತವಾಗಿರುತ್ತದೆ.

**ಪ್ರೇರಣೆ:**

ಯಾವುದೇ ಸಂಸ್ಥೆಗೂ ನೌಕರರು ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕಾದರೆ ಪ್ರೇರಣೆಯು ಅತಿ ಅವಶ್ಯಕ. ಪ್ರೇರಣೆಯಿಂದ ನೌಕರರ ಮನೋಬಲ ಹೆಚ್ಚುತ್ತದೆ. ಪ್ರೇರಕ ಶಕ್ತಿ ಹೆಚ್ಚಾಗಿರುವಲ್ಲಿ ಕಾರ್ಯದಕ್ಷತೆಯು ಹೆಚ್ಚಾಗಿರುತ್ತದೆ. ಒಂದು ನಿರ್ದಿಷ್ಟ ಗುರಿ ಸಾಧನೆಗಾಗಿ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಚಲಿಸುವಂತೆ ಮಾಡುವ ಒತ್ತಾಯ ಅಥವಾ ಪ್ರೋತ್ಸಾಹಕವಾಗಿದೆ ಅಥವಾ ಅಪೇಕ್ಷಿತ ಗುರಿ ಸಾಧನೆಗಾಗಿ ಜನರಲ್ಲಿ ಚೈತನ್ಯ ನೌಕರರಿಗೆ ನೀಡುವ ಮೂಲಕ ಪ್ರೇರೇಪಿಸಬಹುದು ಎಂದಿದ್ದಾರೆ.

* ದೈಹಿಕ ಅಗತ್ಯತೆಗಳು: ಕುರ್ಚಿ, ಫ್ಯಾನ್ ಇತ್ಯಾದಿ
* ರಕ್ಷಣಾ ಅಗತ್ಯತೆಗಳು
* ಸಾಮಾಜಿಕ ಅಗತ್ಯತೆಗಳು
* ಗೌರವ ಮತ್ತು ಪ್ರಶಂಸೆ
* ಸ್ವಯಥಾರ್ತತೆಯ ಅವಶ್ಯಕತೆಗಳು

ಹರ್ಜ್ ಬರ್ಗ್‌ರವರು ಪ್ರೇರಣೆಯ ವಿಷಯಗಳನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

1) ಸವಾಲೊಡ್ಡುವ ಕೆಲಸ
2) ಸಾಧನೆ
3) ಉದ್ಯೋಗ ಬೆಳವಣಿಗೆಗೆ ಅವಕಾಶ
4) ಹೊಣೆಗಾರಿಕೆ
5) ಅಭಿವೃದ್ಧಿ
6) ಮಾನ್ಯತೆ.

# ಅಧ್ಯಾಯ – 5

# ನಿರ್ವಹಣೆಯ ಪರಿಕರಗಳು, ತಂತ್ರಗಳು, ಅನಿಶ್ಚಿತತೆಯ ಸಂದರ್ಭದಲ್ಲಿ ನಿರ್ಧಾರ ಕೈಗೊಳ್ಳುವಿಕೆ

ಸಮಸ್ಯೆಯು ಅರ್ಥವಾಗದೆ ಇದ್ದಾಗ ಈ ಅನಿಶ್ಚಿತತೆಯ ಸನ್ನಿವೇಶ ಎದುರಾಗುತ್ತದೆ. ಸೂಕ್ತವಾದ ಮಾಹಿತಿ ಮತ್ತು ದತ್ತಾಂಶದ ಕೊರತೆಯಿಂದ ಈ ಅನಿಶ್ಚಿತತೆ ನಿರ್ಮಾಣವಾಗುತ್ತದೆ. ಇಲ್ಲಿ ನಿರ್ವಾಹಕನು ತೀರ್ಮಾನ ಕೈಗೊಳ್ಳುವಂತಹ ಸಂಗತಿ ಅತಿ ಪ್ರಮುಖವಾದುದು. ಪದೇ ಪದೇ ಅತಿ ಕಠಿಣವಾದ ಸಂದರ್ಭವಾಗಿ ಇದನ್ನು ನಿರ್ವಾಹಕ ಎದುರಿಸುತ್ತಾನೆ. ನಿರ್ವಾಹಕ ಸಾಮಾನ್ಯವಾಗಿ ಎದುರಿಸುವ ಕಠಿಣ ಸಮಸ್ಯೆಯೇ, ಸನ್ನಿವೇಶವೇ ಇದು.

ನಿರ್ಧಾರ (ಸಾಮಾನ್ಯವಾಗಿ) ಕೈಗೊಳ್ಳುವಲ್ಲಿ 2 ಪ್ರಸಂಗಗಳು.

1) ದೃಢ ನಿರ್ಧಾರ ತೆಗೆದುಕೊಳ್ಳುವಿಕೆ

2) ಅನಿಶ್ಚಿತತೆಯ ಸಂದರ್ಭದಲ್ಲಿ ನಿರ್ಧಾರ ಕೈಗೊಳ್ಳುವಿಕೆ

ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಹಲವಾರು ವಿಧಾನಗಳಿವೆ. ಅವುಗಳಲ್ಲಿ 3 ವಿಧಾನಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

1) ತೀರಾ ಅನಿಶ್ಚಿತತೆಯಲ್ಲಿ ತೀರ್ಮಾನ ಕೈಗೊಳ್ಳುವಿಕೆ

2) ಅಪಾಯದ ಸಂದರ್ಭದಲ್ಲಿ ತೀರ್ಮಾನ ಕೈಗೊಳ್ಳುವಿಕೆ

3) ಮಾಹಿತಿ ಪಡೆದು, ದೃಢವಾದ ತೀರ್ಮಾನ ಕೈಗೊಳ್ಳುವಿಕೆ

**ತೀರಾ ಅನಿಶ್ಚಿತತೆಯಲ್ಲಿ ತೀರ್ಮಾನ ಕೈಗೊಳ್ಳುವಿಕೆ:**

1) ತೀರ್ಮಾನ ಕೈಗೊಳ್ಳುವವನಿಗೆ ಜ್ಞಾನದ ಕೊರತೆ

2) ಮುಂದಾಗಬಹುದಾದ ಫಲಿತಾಂಶದ ಕುರಿತು ಅರಿವು ಅವರಿಗೆ ಇರುವುದಿಲ್ಲ

3) ಅಪರಿಚಿತರೊಂದಿಗೆ ಇರುವ ಅವರ ವರ್ತನೆಯ ಆಧಾರದ ಮೇಲೆ ನಿರ್ಧಾರ ಕೈಗೊಳ್ಳುವರು

4) ಈ ಸಂದರ್ಭದಲ್ಲಿ ಕೈಗೊಳ್ಳುವ ನಿರ್ಧಾರಗಳಲ್ಲಿ ಕೆಲವು,

* ಆಶಾವಾದಿತನದ್ದು
* ನಿರಾಶಾವಾದಿತನದ್ದು
* ಕನಿಷ್ಟ ವಿಷಾದದಿಂದ ಕೂಡಿದ ನಿರ್ಧಾರಗಳಾಗಿರುತ್ತವೆ. ಉದಾ: ಅರ್ಧ ಗ್ಲಾಸ್ ಹಾಲು.

ಆಶಾವಾದಿಯ ನಿರ್ಧಾರವು ಸ್ಥಿರ. ನಿರಾಶಾವಾದಿಯು ಕೆಟ್ಟವನಲ್ಲ. ಆಶಾವಾದಿ ಮತ್ತು ನಿರಾಶಾವಾದಿ ಇರ್ವರಿಂದಲೂ ಸಮಾಜಕ್ಕೆ ಒಳ್ಳೆಯತನವಿದೆ. ಉದಾ: ಆಶಾವಾದಿಯಿಂದ ವಿಮಾನ ತಯಾರಿಸಿದರೆ, ನಿರಾಶಾವಾದಿಯು ಪ್ಯಾರಾಚುಟ್ ತಯಾರಿಸುವನು.

ವ್ಯಕ್ತಿಯ ಅಜ್ಞಾನದಿಂದ ಅವರ ನಿರ್ಧಾರಗಳು ಅವರ ವ್ಯಕ್ತಿತ್ವವನ್ನು ಅವಲಂಬಿಸಿರುತ್ತವೆ. ಅನಿಶ್ಚಿತತೆಯ ಸಂದರ್ಭದಲ್ಲಿ ನಿರ್ಧಾರ ಕೈಗೊಳ್ಳುವುದು ಕೂಡ ತೀರ್ಮಾನ ಕೈಗೊಳ್ಳುವ ವಿಷಯದ ಹೃದಯ ಭಾಗ. ಹಾಗೆಯೇ ಒಬ್ಬ ಯಶಸ್ವಿ ನಾಯಕನ ಪ್ರಮುಖ ಗುಣಲಕ್ಷಣವು ಆಗಿದೆ. ಹಲವು ವಿವಿಧ ರೀತಿಯ ಮಾರ್ಗಗಳು, ವಿವಿಧ ರೀತಿಯ ಫಲಿತಾಂಶಗಳನ್ನು ತೋರಿಸುವ ಹಲವು ತೀರ್ಮಾನಗಳಲ್ಲಿ ಸೂಕ್ತವಾದ ಒಂದನ್ನು ಆರಿಸಿ ತೀರ್ಮಾನ ಕೈಗೊಳ್ಳುವಿಕೆಯೇ ಅನಿಶ್ಚಿತತೆಯ ಸಂದರ್ಭದಲ್ಲಿ ತೀರ್ಮಾನ ಕೈಗೊಳ್ಳುವುದಾಗಿದೆ.

**ನಿರ್ವಹಣೆ ಮತ್ತು ಪ್ರೇರಣೆ:**

* ಪೂರ್ವಭಾವಿಯಾಗಿ
* ಹಂಚಿಕೆ

* ಸಂಪ್ರದಾಯ
* ಪಾರದರ್ಶಕತೆ
* ಉದ್ಯೋಗ ಪ್ರದರ್ಶನ (ಕಾರ್ಯ ನಿರ್ವಹಣೆ)

**ನಿರ್ವಹಣಾ ಸಾಮರ್ಥ್ಯ:**

* ಸಂವೇದನೆ
* ಕ್ರೋಢೀಕರಣ
* ಸಂಘಟನೆ
* ಸಂಸ್ಕರಣೆ
* ನಿರ್ವಹಿಸುವುದು

ಕೆಲವರ ಅಭಿಪ್ರಾಯದಂತೆ ಸಾರ್ವಜನಿಕ ಆಡಳಿತ ಕೇವಲ 'ನಿರ್ವಹಣೆ'ಗೆ ಮಾತ್ರ ಸಂಬಂಧಿಸಿರುತ್ತದೆ. ಲೂಥರ್ ಗಲ್ಲಿಕ್ ಪ್ರಕಾರ ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ನಿರ್ವಹಣೆ ಮತ್ತು ಪ್ರೇರಣೆ, ನಿರ್ವಹಣಾ ಸಾಮರ್ಥ್ಯ ಎಂದು ಹೇಳಿದ್ದಾರೆ.

**ನಿರ್ವಹಣೆ ಮತ್ತು ಪ್ರೇರಣೆ, ನಿರ್ವಹಣಾ ಸಾಮರ್ಥ್ಯ ವಿಮರ್ಶೆ:**

ವಿಷಯ ದೃಷ್ಟಿಕೋನ ಹೊಂದಿರದೆ ತಾಂತ್ರಿಕ ದೃಷ್ಟಿಕೋನ ಹೊಂದಿರುತ್ತದೆ. ಆಡಳಿತದ ವಿಭಿನ್ನ ಇಲಾಖೆಗಳು ವಿಭಿನ್ನ ಕಾರ್ಯ ನಿರ್ವಹಿಸುತ್ತವೆ. ವಿಭಿನ್ನ ಸಮಸ್ಯೆ ಎದುರಿಸುತ್ತಿವೆ. ಈ ಸಮಸ್ಯೆಗಳನ್ನು ನಿರ್ವಹಣೆ ಮತ್ತು ಪ್ರೇರಣೆ ನಿರ್ವಹಣಾ ಸಾಮರ್ಥ್ಯ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆಡಳಿತ ನಿರ್ವಹಣೆಯಲ್ಲಿ ಮಾನವೀಯ ಅಂಶ ಮತ್ತು ಸಿಬ್ಬಂದಿಯ ಪಾತ್ರ ನಿರ್ಲಕ್ಷಿಸಿದೆ. ಸಂಘಟನೆಯು ಕೇವಲ ನಿರ್ವಹಣೆ ಮತ್ತು ಪ್ರೇರಣೆ ನಿರ್ವಹಣಾ ಸಾಮರ್ಥ್ಯ ತತ್ವದ ಮೇಲೆ ನಿಲ್ಲಲು ಸಾಧ್ಯವಿಲ್ಲ.

**ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರ:**

ಇದು ಸಮಯದ ಉದ್ದೇಶಗಳ ಸಾಧನೆಗಾಗಿ ಸೂಕ್ತವಾದ ತೀರ್ಮಾನ ಕೈಗೊಳ್ಳುವ ಒಂದು ಪ್ರಕ್ರಿಯೆಯಾಗಿದೆ. ಇದು ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಸಮಯದ ಮಿತಿಯನ್ನು ಹೊಂದಿದ ಕಾರ್ಯಕ್ರಮಗಳಲ್ಲಿ ಬಳಸುವ ಪ್ರಕ್ರಿಯೆ ಆಗಿದೆ. ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರವು ಇದೊಂದು ಪದ್ಧತಿಯಾಗಿದ್ದು, ನಿಗಧಿಪಡಿಸಿದ ಕಾರ್ಯಕ್ರಮವನ್ನು ನಿಗಧಿತ ಸಮಯದಲ್ಲಿ ಮುಗಿಸಲು ಕೈಗೊಳ್ಳಬೇಕಾದ ಹಂತಗಳ ಬಗೆಗೆ ವಿಶ್ಲೇಷಣೆ ನೀಡುತ್ತದೆ.

ಪ್ರಾಥಮಿಕವಾಗಿ ಈ ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರ ಪ್ರಕ್ರಿಯೆಯು ದೊಡ್ಡ ಮತ್ತು ಸಂಕೀರ್ಣವಾದ ಪದ್ಧತಿಯೊಂದಿಗೆ ನಿರ್ವಹಿಸಲು ಇದು ಮೊದಲ ಬಾರಿಗೆ ಯು.ಎಸ್.ನೇವಿ ಪ್ರೊಜೆಕ್ಟ್ ಆಫೀಸ್‌ನಲ್ಲಿ 1957ರಲ್ಲಿ ಯು.ಎಸ್.ನ ನ್ಯೂಕ್ಲಿಯರ್ ಪ್ರೊಜೆಕ್ಟ್‌ನ್ನು ಕಾರ್ಯಗತಗೊಳಿಸಲು ಬಳಕೆ. ಈ ಪ್ರಕ್ರಿಯೆಯು ನಿರ್ದಿಷ್ಟ ಗುರಿ ಮತ್ತು ನಿರ್ದಿಷ್ಟ ಸಮಯದ ಪರಿಮಿತಿ ಗೊತ್ತಿರುವ ಕೆಲಸಗಳಲ್ಲಿ ನಿರ್ದಿಷ್ಟವಾದ ತೀರ್ಮಾನ ಕೈಗೊಳ್ಳಲು ಮತ್ತು ಕೆಲಸವನ್ನು ಕಾರ್ಯಗತಗೊಳಿಸಲು ಪ್ರಾರಂಭಿಸಲಾಯಿತು. ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರ ಇದು ಘಟನಾಧಾರಿತವಾಗಿದೆ. ಈ ಪ್ರಕ್ರಿಯೆಯನ್ನು ಸಮಯ ನಿರ್ದಿಷ್ಟತೆಯನ್ನು ಹೊಂದಿ ಕಾರ್ಯಕ್ರಮಗಳಲ್ಲಿ ಮಾತ್ರ ಬಳಸಲು ಸೂಕ್ತ. ದೊಡ್ಡ ಪ್ರಮಾಣದ ಒಂದು ಬಾರಿಯ, ಅನಿಯಮಿತವಾದ, ಮೂಲ ಸೌಕರ್ಯದ ಮತ್ತು ಸಂಶೋಧನೆಯಾಧಾರಿತ, ಅಭಿವೃದ್ಧಿ ಆಧಾರಿತ ಕಾರ್ಯಕ್ರಮಗಳಲ್ಲಿ ಯೋಜನೆಗಳಲ್ಲಿ ಬಳಸಲಾಗುತ್ತದೆ.

ಉದಾಹರಣೆಗೆ 1968ರಲ್ಲಿಯ ಚಳಿಗಾಲದ ಓಲಂಪಿಕ್ ಆಟದ ಆಯೋಜನೆಯನ್ನು ಯಶಸ್ವಿಗೊಳಿಸಲು 1965ರಿಂದ 1968ರವರೆಗೆ ಈ ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರ ಪ್ರಕ್ರಿಯೆಗೆ ಅನುಸಾರವಾಗಿ ಕಾರ್ಯಕ್ರಮ / ಯೋಜನೆಯ ತಯಾರಿ ನಡೆಸಲಾಗಿತ್ತು. ಮೊದಲ ಬಾರಿ ಇದನ್ನು ಫ್ರೆಡರಿಕ್ ಟೇಲರ್ ಇದನ್ನು ರಚಿಸಿದರು. ನಂತರ ಹ್ಯೂ ಫೋರ್ಡ್ ಇದನ್ನು ಅಭಿವೃದ್ಧಿಗೊಳಿಸಿದರು.

**ಸಂಧಿಗ್ದ ಪಥ ವಿಧಾನ:**

ವ್ಯವಹಾರ ಸಂಸ್ಥೆಯಲ್ಲಿ ಪರಿಣಾಮಕಾರಿಯಾದ ನಿಯಂತ್ರಣಕ್ಕೆ ಸಿಪಿಎಂ ತಂತ್ರವನ್ನು ವ್ಯಾಪಕವಾಗಿ ಉಪಯೋಗಿಸಲಾಗುತ್ತದೆ. ಈ ತಂತ್ರವನ್ನು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ 1958ರಲ್ಲಿ ರೂಪಿಸಲಾಯಿತು. ಈ ತಂತ್ರದಲ್ಲಿ ಯೋಜನೆಯನ್ನು ಪೂರ್ತಿಗೊಳಿಸಲು ನಿಖರವಾದ ಸಮಯದ ಅಂದಾಜನ್ನು ಮಾಡಲಾಗುತ್ತದ.ಎ ಪರ್ಟ್ ತಂತ್ರದಲ್ಲಿ ಇರುವ ಸಮಯದ ಅನಿಶ್ಚಿತತೆ ಈ ತಂತ್ರದಲ್ಲಿ ಕಂಡುಬರುವುದಿಲ್ಲ. ಈ ತಂತ್ರವು ಸಮಯದ ಉಳಿತಾಯ ಮಾಡಿ, ಯೋಜನೆಯ ವೆಚ್ಚವನ್ನು ಕಡಿಮೆ ಮಾಡುತ್ತದೆ. ಯೋಜನೆಯನ್ನು ಯಶಸ್ವಿಯಾಗಿ ಪೂರ್ತಿಗೊಳಿಸಲು ಚಟುವಟಿಕೆಗಳನ್ನು ಕ್ರಮಬದ್ದವಾಗಿ ಹೊಂದಾಣಿಕೆ ಮಾಡಿ, ಅವುಗಳನ್ನು ಯೋಜಿಸಲು ಮತ್ತು ನಿಯಂತ್ರಿಸಲು ಸಿಪಿಎಂ ತಂತ್ರವನ್ನು ಉಪಯೋಗಿಸಲಾಗುತ್ತದೆ. ಸಿಪಿಎಂ ತಂತ್ರದಲ್ಲಿ ಎಲ್ಲ ಚಟುವಟಿಕೆಗಳನ್ನು ವಿಂಗಡಿಸಿ, ಅವುಗಳನ್ನು ಕ್ರಮಬದ್ದವಾಗಿ ಹೊಂದಾಣಿಕೆ ಮಾಡಿ, ಅವುಗಳ ಪರಸ್ಪರ ಸಂಬಂಧವನ್ನು ಜಾಲಬಂಧ ರೇಖಾಚಿತ್ರದಲ್ಲಿ ತೋರಿಸಲಾಗುತ್ತದೆ.

**ಸಿಪಿಎಂ ತಂತ್ರದಲ್ಲಿಯ ಹಂತಗಳು:**

1) ಚಟುವಟಿಕೆಗಳನ್ನು ಗುರುತಿಸುವುದು: ಸಿಪಿಎಂ ತಂತ್ರದ ಮೊದಲನೆಯ ಹಂತದಲ್ಲಿ, ಯೋಜನೆಯನ್ನು ಪೂರ್ತಿಗೊಳಿಸಲು ನಿರ್ವಹಿಸಬೇಕಾದ ಚಟುವಟಿಕೆಗಳನ್ನು ಗುರುತಿಸಲಾಗುತ್ತದೆ.

2) ಚಟುವಟಿಕೆಗಳನ್ನು ಕ್ರಮಬದ್ದವಾಗಿ ವ್ಯವಸ್ಥೆ ಮಾಡುವುದು: ಮಹತ್ವದ ಚಟುವಟಿಕೆಗಳನ್ನು ಗುರುತಿಸಿದ ನಂತರ, ಸಿಪಿಎಂ ತಂತ್ರದಲ್ಲಿಯ ಮುಂದಿನ ಹಂತವು, ಈ ಚಟುವಟಿಕೆಗಳನ್ನು ಕ್ರಮಬದ್ದವಾಗಿ ವ್ಯವಸ್ಥೆ ಮಾಡಿ ಅವುಗಳನ್ನು ಜಾಲಬಂಧ ರೇಖಾ ಚಿತ್ರದಲ್ಲಿ ತೋರಿಸುವುದಾಗಿರುತ್ತದೆ.

3) ಸಮಯದ ವಿಶ್ಲೇಷಣೆ: ಚಟುವಟಿಕೆಗಳನ್ನು ಜಾಲಬಂಧ ರೇಖಾ ಚಿತ್ರದಲ್ಲಿ ತೋರಿಸಿದ ನಂತರ, ಪ್ರತಿಯೊಂದು ಚಟುವಟಿಕೆಯನ್ನು ಪೂರ್ತಿಗೊಳಿಸಲು ಬೇಕಾಗುವ ಸಮಯವನ್ನು ನಿಗದಿಪಡಿಸಲಾಗುತ್ತದೆ.

4) ಸಂದಿಗ್ದ ಪಥವನ್ನು ನಿರ್ಧರಿಸುವುದು: ಈ ಹಂತದಲ್ಲಿ ಯೋಜನೆಯ ಅಧಿಕಾರಿಯು, ಯೋಜನೆಯನ್ನು ಪೂರ್ತಿಗೊಳಿಸುವಾಗ ಇರಬಹುದಾದ ಅಡೆತಡೆ ಅಥವಾ ಸಂದಿಗ್ದ ಪಥವನ್ನು ನಿರ್ಧರಿಸಬೇಕು.

5) ಮೊದಲಿನ ಯೋಜನೆಯ ತಿದ್ದುಪಡಿ: ಕೆಲವೊಂದು ಸಲ ಕಾರ್ಯವನ್ನು ಪೂರ್ತಿಗೊಳಿಸುವಾಗ ಆಗಬಹುದಾದ ವಿಳಂಬವನ್ನು ತಪ್ಪಿಸಲು, ಮೊದಲಿನ ಯೋಜನೆಯಲ್ಲಿ ತಿದ್ದುಪಡಿ ಮಾಡುವುದು ಅನಿವಾರ್ಯವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಯೋಜನಾ ಅಧಿಕಾರಿಯು ಮೊದಲಿನ ಯೋಜನೆಯಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಬೇಕಾಗುತ್ತದೆ.

6) ಯೋಜನೆಯನ್ನು ನಿಯಂತ್ರಿಸುವುದು: ಸಿಪಿಎಂ ತಂತ್ರದಲ್ಲಿ ಕೊನೆಯ ಹಂತವು ಯೋಜನೆಯನ್ನು ನಿಯಂತ್ರಿಸುವುದಾಗಿರುತ್ತದೆ. ಯೊಜನೆಯನ್ನು ನಿಯಂತ್ರಿಸುವಾಗ ಸಂಧಿಗ್ದ ಪಥಕ್ಕೆ ಬಹಳಷ್ಟು ಪ್ರಾಮುಖ್ಯತೆಯನ್ನು ನೀಡಬೇಕಾಗುತ್ತದೆ. ಇವುಗಳಿಗೆ ಮಹತ್ವವನ್ನು ನೀಡದಿದ್ದರೆ, ಯೋಜನೆಯನ್ನು ನಿಗದಿತ ಸಮಯದಲ್ಲಿ ಪೂರ್ತಿಗೊಳಿಸುವುದು ಅಸಾಧ್ಯವಾಗುತ್ತದೆ.

**ಸಿಪಿಎಂ ತಂತ್ರದ ಪ್ರಯೋಜನಗಳು:**

ಸಿಪಿಎಂ ಇದು ನಿರ್ವಹಣೆಗಾರರ ನಿಯಂತ್ರಣದ ಪ್ರಮುಖ ಸಾಧನವಾಗಿದ್ದು, ಕೆಳಗಿನ ಪ್ರಯೋಜನಗಳನ್ನು ಉಂಟಾಗಿಸುತ್ತದೆ.

* ಇದು ನಿರ್ವಹಿಸಬೇಕಾದ ಎಲ್ಲ ಚಟುವಟಿಕೆಗಳನ್ನು ರೇಖಾಚಿತ್ರದಲ್ಲಿ ತೋರಿಸಿ ಈ ಚಟುವಟಿಕೆಗಳಲ್ಲಿಯ ಪರಸ್ಪರ ಸಂಬಂಧವನ್ನು ಸೂಚಿಸುತ್ತದೆ.
* ಇದು ಕಾರ್ಯಕ್ರಮಗಳನ್ನು ಯೋಜನೆಯಂತೆಯೇ ಸಾಧಿಸಲು ವ್ಯವಸ್ಥಾಪಕರಿಗೆ ಒತ್ತಾಯಿಸುತ್ತದೆ.
* ಇದು ಪರಿಣಾಮಕಾರಿ ಯೋಜಿಸುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಪ್ರೋತ್ಸಾಹವನ್ನು ನೀಡುತ್ತದೆ.
* ಇದು ನಿರ್ವಹಣೆದಾರರಿಗೆ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ಅನುಕೂಲ ಮಾಡಿಕೊಡುತ್ತದೆ.

**ಸಿಪಿಎಂ ತಂತ್ರದ ಇತಿಮಿತಿಗಳು:**

* ಸಮಯ ಮತ್ತು ವೆಚ್ಚಗಳನ್ನು ನಿಖರವಾಗಿ ನಿರ್ಧರಿಸಿದರೆ ಮಾತ್ರ ಸಿಪಿಎಂ ತಂತ್ರವು ಸಮರ್ಪಕವಾಗುತ್ತದೆ.
* ವೆಚ್ಚ ಮತ್ತು ಸಮಯವನ್ನು ನಿರ್ಧರಿಸುವಲ್ಲಿ ತಪ್ಪುಗಳು ಸಂಭವಿಸಿದರೆ ಸಿಪಿಎಂ ತಂತ್ರವನ್ನು ನಿಯಂತ್ರಿಸುವುದು ಅಸಾಧ್ಯವಾಗುತ್ತದೆ.

**ಪರಿಣಾಮಕಾರಿತ್ವ ವೈಯಕ್ತಿಕ ಮಾಹಿತಿ / ನಿರ್ವಹಣೆ:**

ಈ ವಿಶ್ಲೇಷಣೆಯಲ್ಲಿ ಎರಡು ಪ್ರಮುಖ ಆಯಾಮಗಳು ಇವೆ. ಅವುಗಳು 1) ಪಿಐಎಂಎಂ 2) ಪಿಐಎಂಸಿ. ಈ ಆಯಾಮಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

**ಪಿಐಎಂಎಂ: (ಪರ್ಸನಲ್ ಇನ್‌ಫರ್‌ಮೇಷನ್ ಮ್ಯಾನೇಜ್‌ಮೆಂಟ್ ಅಂಡ್ ಮೋಟಿವೇಷನ್)**

ಇದು ನಿರ್ವಹಣೆ ಮತ್ತು ಪ್ರೇರಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದರ ಕುರಿತು ವಿವರಿಸುತ್ತದೆ. ಇದರಲ್ಲಿಯ ಹಂತಗಳು ಈ ಕೆಳಗಿನಂತಿವೆ.

* ಪೂರ್ವಭಾವಿಯಾಗಿ ನಿರ್ವಹಿಸುವುದು
* ವಿಷಯವನ್ನು ಹಂಚಿಕೆಯ ಮೂಲಕ ಸಂಘಟನೆಯಲ್ಲಿ ಪರಿಣಾಮಕಾರಿ ನಿಯಂತ್ರಣ
* ಸಂಪ್ರದಾಯ
* ಪಾರದರ್ಶಕತೆ

**ಪಿಐಎಂಸಿ: (ಪರ್ಸನಲ್ ಇನ್‌ಫರ್‌ಮೇಷನ್ ಮ್ಯಾನೇಜ್‌ಮೆಂಟ್ ಕ್ಯಾಪಾಸಿಟಿ)**

ಇದು ಈ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ.

* ಸಂವೇಧನೆ
* ಕ್ರೋಢೀಕರಣ
* ಸಂಘಟನೆ
* ಸಂಸ್ಕರಣೆ
* ನಿರ್ವಹಣೆ

**ಪೋಸ್ಡ್‌ಕಾರ್ಬ್:**

ನಿರ್ವಹಣೆಯಲ್ಲಿ ಕೆಲವು ನಿರ್ದಿಷ್ಟ ಕಾರ್ಯಗಳನ್ನು ನಾವು ಕಾಣಬಹುದು. ಈ ವಿಷಯದಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿದ್ದರೂ ನಿರ್ವಹಣೆಯ ಕಾರ್ಯ ವಿಧಾನದ ಬಗ್ಗೆ ಸಂಪೂರ್ಣ ಅಭಿಪ್ರಾಯವನ್ನು ಯಾವುದೇ ಲೇಖಕರು ನೀಡಿಲ್ಲ. ಪ್ರೊ.ಗುಲಿಕ್‌ರವರು ನಿರ್ವಹಣೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ಏಳು ಕಾರ್ಯ ವಿಧಾನಗಳನ್ನು ಪೋಸ್ಡ್‌ಕಾರ್ಬ್ ಅವುಗಳೆಂದರೆ ಯೋಜನೆ, ಸಂಸ್ಥೆ, ಸಿಬ್ಬಂದಿವರ್ಗ, ನಿರ್ದೇಶನ, ಸಂಯೋಜನೆ ವರದಿ ಸಲ್ಲಿಕೆ ಹಾಗೂ ಆಯವ್ಯಯ ಪತ್ರ ಮಂಡಣೆ.

ಲೂಥರ್ ಗಲ್ಲಿಕ್ ತಿಳಿಸಿರುವ ಸಾರ್ವಜನಿಕ ಆಡಳಿತದ ಕಾರ್ಯವಿಧಾನಗಳನ್ನು ಒಳಗೊಂಡ ಪೋಸ್ಡ್‌ಕಾರ್ಬ್ ವಿಶ್ಲೇಷಣೆ ಈ ರೀತಿಯಲ್ಲಿದೆ.

ಪಿ ಎಂದರೆ ಪ್ಲಾನಿಂಗ್ – ಯೋಜನೆ

ಓ ಎಂದರೆ ಆರ್ಗನೈಸೇಷನ್ – ಸಂಘಟನೆ

ಎಸ್ ಎಂದರೆ ಸ್ಟಾಫಿಂಗ್ – ಸಿಬ್ಬಂದಿ

ಡಿ ಎಂದರೆ ಡೈರೆಕ್ಷನ್ – ನಿರ್ದೇಶನ

ಸಿಓ ಎಂದರೆ ಕೋಆರ್ಡಿನೇಷನ್ – ಸಂಯೋಜನೆ

ಆರ್ ಎಂದರೆ ರಿಪೋರ್ಟಿಂಗ್ – ವರದಿ ಮಾಡುವಿಕೆ

ಬಿ ಎಂದರೆ ಬಡ್ಜೆಟ್ – ಆಯ ವ್ಯಯವನ್ನು ಸೂಚಿಸುತ್ತದೆ

ಇದು ಸಾರ್ವಜನಿಕ ಆಡಳಿತ ವ್ಯಾಪ್ತಿಯನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಆಡಳಿತ ತತ್ವವು ಸಾರ್ವಜನಿಕ ಆಡಳಿತ ರಚನೆ ವ್ಯವಸ್ಥೆ ಮತ್ತು ಕಾರ್ಯ ವಿಧಾನಗಳ ಚಿಂತನಾ ರೂಪಗಳು, ಸಿದ್ಧಾಂತಗಳು ಮತ್ತು ಸಾಮಾನ್ಯ ಸೂತ್ರಗಳನ್ನು ಒಳಗೊಂಡಿದೆ.

ಸಾರ್ವಜನಿಕ ಆಡಳಿತ ಪದ್ಧತಿಯು ಆಡಳಿತದ ನಿರ್ದಿಷ್ಟವಾದ ವಿಧಾನಗಳು ಮತ್ತು ಅವುಗಳ ಸಮಸ್ಯೆಗಳನ್ನು ಒಳಗೊಂಡಿದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ಆಡಳಿತ ಪದ್ಧತಿಯು ಶಿಕ್ಷಣ ಆರೋಗ್ಯ, ವ್ಯವಸಾಯ, ಹಣಕಾಸು ಸೇನೆ ಮೊದಲಾದ ಕ್ಷೇತ್ರಗಳಲ್ಲಿ ಆಡಳಿತ ತತ್ವಗಳನ್ನು ವಾಸ್ತವವಾಗಿ ಪ್ರಯೋಗಿಸುವ ವಿಷಯದ ಅಧ್ಯಯನವನ್ನು ಒಳಗೊಂಡಿದೆ.

ಸಾರ್ವಜನಿಕ ಆಡಳಿತ ವ್ಯಾಪ್ತಿಯು ಸರ್ಕಾರದ ಆಡಳಿತ ಪ್ರಕ್ರಿಯೆಗೆ ಮುಖ್ಯವಾಗಿ ಸಂಬಂಧಿಸಿದ್ದು ವಿಶೇಷವಾಗಿ ಲೂಥರ್ ಗಲ್ಲಿಕ್‌ರ ಪೋಸ್ಡ್‌ಕಾರ್ಬ್ ಇಲ್ಲಿ ಅನ್ವಯವಾಗುತ್ತದೆ. ಇದನ್ನೇ ನಾವು ಆಡಳಿತಾತ್ಮಕ ತತ್ವಗಳೆಂದು ಕರೆಯುತ್ತೇವೆ.

ಟೆರ್ರಿಯವರು ನಿರ್ವಹಣೆಯ ಕಾರ್ಯವನ್ನು ಯೋಜನೆ ವ್ಯವಸ್ಥೆಗೊಳಿಸುವ ಕಾರ್ಯಕ್ಕೆ ಪ್ರೇರೇಪಿಸುವ ಹಾಗೂ ನಿಯಂತ್ರಣಕ್ಕಷ್ಟೇ ಸೀಮಿತಗೊಳಿಸಿದ್ದಾರೆ. ಸೆಕ್ಲರ್ ಹಡ್ಸನ್ ನಿರ್ವಹಣಾ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ನಿಯಮ, ನಿರೂಪಣೆ, ಅಧಿಕಾರವನ್ನು ಪಡೆಯುವ ನಿರ್ಧರಿಸುವ ಹಾಗೂ ಚಲಾಯಿಸುವ ಕಾರ್ಯ ವ್ಯವಸ್ಥೆಗೊಳಿಸುವುದು, ಆಯವ್ಯಯ ಪತ್ರ ತಯಾರಿಸುವುದು ಸಿಬ್ಬಂದಿ ವರ್ಗದ ನೇಮಕ ವರದಿ ರಚಿಸುವುದು, ನಿರ್ದೇಶಿಸುವುದು, ಮುಂತೊಡಗಿಸುವುದು ಹಾಗೂ ನಿಯಂತ್ರಿಸುವುದು ಮುಂತಾದ ಕಾರ್ಯಗಳನ್ನು ಸೇರಿಸಿದ್ದಾರೆ.

**ನಿರ್ವಹಣೆಯ ಮುಖ್ಯ ಕಾರ್ಯಗಳಲ್ಲಿ ಪ್ರಮುಖವಾದವುಗಳೆಂದರೆ,**

1) ಯೋಜನೆ: ನಿರ್ವಹಣೆಯ ಪ್ರಥಮ ಕರ್ತವ್ಯವೆಂದರೆ ಯೋಜನೆ. ಯೋಜನೆಯೆಂದರೆ ಯಾವುದೇ ಒಂದು ಕೆಲಸವನ್ನು ಸಾಧಿಸಬೇಕಾದರೆ ಯಾವ ವಿಧಾನವನ್ನು ಅನುಸರಿಸಬೇಕು, ಹೇಗೆ ಅನುಸರಿಸಬೇಕು ಎಂಬುದರ ಬಗ್ಗೆ ಪೂರ್ವಭಾವಿಯಾಗಿ ಸಿದ್ದಪಡಿಸಿಕೊಳ್ಳುವುದೇ ಆಗಿದೆ. ಉತ್ತಮ ಫಲಿತಾಂಶವನ್ನು ಪಡೆಯಲು ಇದು ಅತ್ಯಂತ ಪ್ರಮುಖವಾದ ಘಟ್ಟವೆನಿಸಿದೆ. ಈ ಯೋಜನಾ ವಿಧಾನವು ಇತರರಿಗಿಂತ ಮುನ್ನಡೆಯುವ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಹಾಗೂ ಸಮಸ್ಯೆಗಳು ಬರುವುದಕ್ಕೆ ಮುನ್ನವೇ ಪರಿಹರಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ಯೋಜನೆಯ ಕಾರ್ಯಕ್ರಮವು ಈ ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

1. ಆಡಲಿತ ಪ್ರಮುಖ ಉದ್ದೇಶಗಳನ್ನು ತೀರ್ಮಾನಿಸುವುದು
2. ಕಾರ್ಯ ಚಟುವಟಿಕೆಯ ಪ್ರತಿ ಚಟುವಟಿಕೆಯನ್ನು ರೂಪಿಸುವುದು
3. ಪರ್ಯಾಯ ಚಟುವಟಿಕೆಗಳ ಸಾಧ್ಯತೆ ಹಾಗೂ ಪರಿಣಾಮಗಳನ್ನು ಹೋಲಿಸುವುದು
4. ಕಾರ್ಯವಿಧಾನದ ಪರಿಪೂರ್ಣತೆಯನ್ನು ಆರಿಸಿಕೊಳ್ಳುವುದು
5. ನಿಯಮಗಳು, ವಿಧಾನಗಳು, ಪರಿಚ್ಛೇದಗಳು, ಕಾರ್ಯಕ್ರಮಗಳು, ಅಗತ್ಯ ಮೌಲ್ಯಗಳು, ಆಯವ್ಯಯ ಪಟ್ಟಿಗಳನ್ನು ಸ್ಥಾಪಿಸಿಕೊಳ್ಳುವುದೇ ಆಗಿರುತ್ತದೆ.

2) ವ್ಯವಸ್ಥೆ: ಉತ್ತಮ ದಕ್ಷ ಆಡಳಿತದಲ್ಲಿ ಮಾನವ ಸಂಪನ್ಮೂಲ ಸಲಕರಣೆಗಳು, ಹಣ ಹಾಗೂ ಕಾಲಮಿತಿ ಮುಂತಾದವುಗಳನ್ನು ಸಮನ್ವಯಗೊಳಿಸುವುದೇ ವ್ಯವಸ್ಥೆ. ಆಡಳಿತದ ವಿಶಾಲವಾದ ಕಾರ್ಯ ಚಟುವಟಿಕೆಯನ್ನು ನೆರವೇರಿಸಲು ಹಲವಾರು ವ್ಯಕ್ತಿಗಳ ಅವಶ್ಯಕತೆಯಿದೆ. ವ್ಯವಸ್ಥೆಯೆಂದರೆ ನಿರ್ದಿಷ್ಟ ಗುರಿ ಸಾಧನೆಗಾಗಿ ಇರುವ ವ್ಯಕ್ತಿಗಳಿಗೆ ಅವರ ದಕ್ಷತೆಗೆ ಅನುಸಾರವಾಗಿ ಕೆಲಸಗಳನ್ನು ಹಂಚುವ ಪದ್ಧತಿಯಾಗಿರುತ್ತದೆ.

3) ಸಿಬ್ಬಂದಿ ವರ್ಗ: ವ್ಯವಸ್ಥೆಗೆ ಅತಿ ಅವಶ್ಯಕವಾದ ಸಿಬ್ಬಂದಿ ವರ್ಗದವರನ್ನು ನೇಮಿಸುವುದು. ತರಬೇತಿ, ಬಡ್ತಿ, ಸಂಬಳ ಮುಂತಾದ ಕಾರ್ಯಗಳು ಸಹ ನಿರ್ವಹಣಾ ಕಾರ್ಯವಾಗಿರುತ್ತದೆ.

4) ನಿರ್ದೇಶನ: ನಿರ್ವಹಣಾ ಕಾರ್ಯಗಳಲ್ಲಿ ನಿರ್ದೇಶನವು ಅತ್ಯಂತ ಪ್ರಮುಖವಾಗಿರುತ್ತದೆ. ನಿರ್ವಹಣಾ ವ್ಯವಸ್ಥೆಯಲ್ಲಿ ದಕ್ಷ ನಾಯಕತ್ವ ಹಾಗೂ ಪ್ರೇರೇಪಣಾ ತತ್ವವು ಆಡಳಿತದ ದಕ್ಷತೆಗೆ ಸಹಕಾರಿಯಾಗಿದೆ.

5) ನಿಯಂತ್ರಣ: ನಿರ್ವಹಣಾ ಕಾರ್ಯ ವಿಧಾನದಲ್ಲಿ ನಿಯಂತ್ರಣವೇ ಕಡೆಯ ಘಟ್ಟವಾಗಿದೆ. ಈ ಹಂತದಲ್ಲಿ ರೂಪಿಸಿರುವ ಯೋಜನೆಯೊಡನೆ ನಿರ್ವಹಿಸಲಾಗಿರುವ ಕಾರ್ಯಗಳನ್ನು ಹೋಲಿಸಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸುವ ವ್ಯವಸ್ಥೆ ಮಾಡಬೇಕಾಗಿರುತ್ತದೆ. ನಿಯಂತ್ರಣವು ಫಲಿತಾಂಶಗಳನ್ನು ಸರಿ ತೂಗಿಸುವುದು, ಗುರಿಸಾಧನೆಗೆ ಅನುಕೂಲ ಮಾಡಿಕೊಡುವುದು.

### ಸ್ವಾಟ್ (ಎಸ್.ಡಬ್ಲ್ಯೂ.ಓ.ಟಿ.) ಅನಾಲೆಸಿಸ್:

ಸ್ವಾಟ್ ವಿಶ್ಲೇಷಣೆಯು ಒಂದು ಯೋಜನಾಬದ್ದ ಪ್ರಕ್ರಿಯೆ ಆಗಿದ್ದು, ಇದು ಸಾಮರ್ಥ್ಯ, ದೌರ್ಬಲ್ಯ, ಅವಕಾಶ, ಮತ್ತು ಭಯಗಳನ್ನು ವಿಶ್ಲೇಷಿಸುತ್ತದೆ. ಸ್ವಾಟ್ ಹೊಂದಿರುವ ಪ್ರತಿಯೊಂದು ಯೋಜನೆಯನ್ನು ಅಥವಾ ವ್ಯವಹಾರವನ್ನು ವಿಶ್ಲೇಷಣೆಗೆ ಒಳಪಡಿಸುತ್ತದೆ. ಒಂದು ಯೋಜನೆಯ ಒಳ ಮತ್ತು ಬಾಹ್ಯ ಅಂಶಗಳನ್ನು ಯೋಜನೆಯ ಗುರಿ ಸಾಧನೆಗೆ ಅಡ್ಡಿಯಾಗುವ ತೊಡಕುಗಳ ಕುರಿತಾದ ವಿವರಣೆಯನ್ನು ಇದು ಒಳಗೊಂಡಿರುತ್ತದೆ. ಸ್ವಾಟ್ ವಿಶ್ಲೇಷಣೆ ಹುಟ್ಟಿದ್ದು 1970ರಲ್ಲಿ. ಒಂದು ಯೋಜನೆಯ ಕುರಿತಾದ ಈ ಕೆಳಗಿನ ಅಂಶಗಳನ್ನು ಸ್ವಾಟ್ ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ.

1) ಸಾಮರ್ಥ್ಯ (ಎಸ್): ಯೋಜನೆಯ ಅನುಕೂಲತೆಗಳನ್ನು ಹೇಳುವುದು

2) ವೀಕ್‌ನೆಸ್ (ಡಬ್ಲ್ಯೂ): ಯೋಜನೆಯಿಂಗಾಗುವ ಅನಾನುಕೂಲ ವಿಷಯಗಳ ಕುರಿತು ವಿವರಿಸುವುದು

3) ಅವಕಾಶ (ಓ): ಯೋಜನೆಯು ಅನಾನುಕೂಲ ವಿಷಯಗಳನ್ನು ಸಾಧಿಸಲು ಅವಶ್ಯಕವಾದ ಅವಕಾಶಗಳು

4) ಅಡ್ಡಿ ಆತಂಕಗಳು (ಟಿ)

ಸ್ವಾಟ್ ವಿಶ್ಲೇಷಣೆಯು ಯೋಜನೆಯ ದುರ್ಬಲ ಅಂಶಗಳನ್ನು ಮತ್ತು ಅಡ್ಡಿ ಆತಂಕಗಳನ್ನು ಸಾಮರ್ಥ್ಯ ಮತ್ತು ಅವಕಾಶಗಳಾಗಿ ಪರಿವರ್ತಿಸುವುದು. ಈ ಮೂಲಕ ಯೋಜನೆಯನ್ನು ಮತ್ತಷ್ಟು ಶಕ್ತಿಯುತಗೊಳಿಸಬಹುದು.

### ಆಂತರಿಕ ಮತ್ತು ಬಾಹ್ಯ ಅಂಶಗಳು:

ನಮ್ಮ ಶತ್ರುಗಳನ್ನು ಮತ್ತು ನಮ್ಮನ್ನು ನಾವು ಚೆನ್ನಾಗಿ ಅರಿತಿದ್ದರೆ ನೂರು ಯುದ್ದಗಳನ್ನು ಗೆಲ್ಲಬಹುದು ಎಂಬುದೊಂದು ಮಾತಿದೆ. ನೀವು / ನಾವು ನಮ್ಮನ್ನು ಮಾತ್ರ ನಾವು ಅರಿತಿದ್ದು, ಶತ್ರುಗಳನ್ನು ಅರಿಯದೆ ಹೋಗಿದ್ದರೆ ನಾವು ಗೆಲ್ಲಬಹುದು ಅಥವಾ ಸೋಲಬಹುದು. ನಾವು ನಮ್ಮನ್ನು ಮತ್ತು ಶತೃವನ್ನು ಅರಿಯಲು ವಿಫಲರಾದರೇ ನಾವು ಗೆಲ್ಲುವುದು ದುರ್ಲಭ.

**ಆಂತರಿಕ ಅಂಶಗಳು:**

ಸಂಘಟನೆಯ / ಯೋಜನೆಯ ಸಾಮರ್ಥ್ಯ ಮತ್ತು ದುರ್ಬಲತೆಯನ್ನು ಒಳಗೊಂಡಿರುತ್ತದೆ.

**ಬಾಹ್ಯ ಅಂಶಗಳು:**

ಅವಕಾಶಗಳು ಮತ್ತು ಅಡ್ಡಿ ಆತಂಕಗಳು ಬಾಹ್ಯದಿಂದ ಬರುವ ಅಂಶಗಳು.

**ಸ್ವಾಟ್ ಉಪಯೋಗ:**

ಇದು ಕೇವಲ ಲಾಭ ಗಳಿಕೆಯ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಇದನ್ನು ತೀರ್ಮಾನ ಕೈಗೊಳ್ಳುವಿಕೆಯಲ್ಲಿ ಮಾಹಿತಿಯಂತೆ ಬಳಸಬಹುದು. ಸ್ವಾಟನ್ನು ಯೋಜನೆಯ ಜಾರಿಗೂ ಮುನ್ನ ಅದರ ರಚನೆಯ ಹಂತದಲ್ಲಿಯೂ ಬಳಸಿ ಅದರ ಸಾಧಕ ಬಾಧಕ ಲಾಭ ನಷ್ಟಗಳ ಅರಿವು ಪಡೆಯಬಹುದು.

### ತಂತ್ರ ನಿರ್ಮಾಣದಲ್ಲಿ ಸ್ವಾಟ್:

ಒಂದು ಸಂಘಟನೆಯ ಅಥವಾ ವೈಯಕ್ತಿಕ ಪದ್ದತಿಯನ್ನು ಕಟ್ಟುವಾಗ ಸ್ವಾಟ್‌ನ ಬಳಕೆಯಾಗುತ್ತದೆ. ಇದರಿಂದ ಆಂತರಿಕ ಮತು ಬಾಹ್ಯ ಅಂಶಗಳ ಕುರಿತಾಗಿ ಸವಿವರಣೆಯೊಂದಿಗೆ ಒಂದು ಯೋಜನೆಯನ್ನು ಪ್ರಾರಂಭಿಸಬಹುದು.

ಕಾರ್ಪೋರೇಟ್ ವ್ಯವಸ್ಥೆಯ ಸ್ವಾಟ್ ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ.

* ಗುರಿಯನ್ನು ಹೊಂದುವುದು
* ಪ್ರಭಾವ ಬೀರುವ ಬಾಹ್ಯ ಅಂಶಗಳನ್ನು ಗಮನಿಸುವುದು

* ಪ್ರಸ್ತುತ ಇರುವ ಪದ್ದತಿಯ ವಿಶ್ಲೇಷಣೆ
* ಹೊಸ ಪದ್ದತಿಗಳ ಅಳವಡಿಕೆ
* ಗುರಿ ಸಾಧನೆಗಾಗಿ ನೀತಿ ನಿಯಮಗಳ ಸ್ಥಾಪನೆ
* ಯೋಜನೆಯ ಚಾಲನೆಗೂ ಮುನ್ನ ಸಂಪನ್ಮೂಲದ ಯೋಜನೆಯ ವಿಚಾರಗಳ ಮತ್ತು ನೀತಿ ನಿಯಮಗಳ ತಯಾರಿ
* ಫಲಿತಾಂಶವನ್ನು ಮೇಲ್ವಿಚಾರಣೆ ಮಾಡುವುದು

**ವ್ಯವಹಾರಿಕ ಸಂಘಟನೆಯಲ್ಲಿ ಸ್ವಾಟ್:**

ಪ್ರತಿಯೊಂದು ವ್ಯವಹಾರಿಕ ಸಂಸ್ಥೆಯು ತನ್ನ ಜೊತೆಗಿನ ಸ್ಪರ್ಧಾಳುವಿನ ಶಕ್ತಿ, ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಕುರಿತು ಜ್ಞಾನ ಹೊಂದಿರಬೇಕು. ಆದ್ದರಿಂದ ಮಾರುಕಟ್ಟೆಯ ಸಂಶೋಧನೆಗಳನ್ನು ಸಂಘಟನೆಯು ಆಗಾಗ ನಡೆಸುತ್ತಿರಬೇಕು.

**ಸ್ವಾಟ್ ವಿಶ್ಲೇಷಣೆಯ ಬಳಕೆ:**

ಸ್ವಾಟ್‌ನ್ನು ಯೋಜನೆಯ ಸಮಸ್ಯೆ ಮತ್ತು ಬಗೆಹರಿಸುವ ಕ್ರಮಗಳನ್ನು ತಿಳಿಯಲು ಬಳಸಬಹುದು. ಗುರಿ ಸಾಧನೆಗಾಗಿ ಇರುವ ಅಡ್ಡಿ ಆತಂಕಗಳನ್ನು ಗುರುತಿಸಲು, ಪರಿಣಾಮಕಾರಿ ನಿರ್ದೇಶನವನ್ನು / ಮಾರ್ಗವನ್ನು ಕಂಡುಹಿಡಿಯಲು, ಬದಲಾವಣೆಗೆ ಇರುವ ಇತಿ ಮಿತಿ ಮತ್ತು ಅವಕಾಶಗಳ ಕುರಿತು ಮಾಹಿತಿ ಪಡೆಯಲು, ಯೋಜನೆಯನ್ನು ಬೇರೆ ರೀತಿಯಲ್ಲಿ ಬದಲಾಯಿಸಲು, ಮೆದುಳಿನ ದಾಳಿ ಕ್ರಿಯೆಯಲ್ಲಿ ಸಂಪರ್ಕ ಸಾದನದಂತೆಯೂ ಬಳಸಲು ಉಪಯುಕ್ತವಾಗಿದೆ.

**ಸಾಧನೆ ಮೌಲ್ಯ ನಿರ್ಣಯ:**

ಪ್ರದರ್ಶನ, ಸಾಧನೆಯ ಬೆಲೆಕಟ್ಟುವಿಕೆಯನ್ನು ಪ್ರದರ್ಶನ ವಿಮರ್ಶೆ, ಪ್ರದರ್ಶನ ಮೌಲ್ಯಮಾಪನ ಎಂತಲೂ ಕರೆಯಲಾಗುತ್ತದೆ. ಇದು ಒಂದು ಸಂಘಟನೆಯ ಸಿಬ್ಬಂದಿಯ ಕಾರ್ಯದ ಕುರಿತ ಪ್ರದರ್ಶನ / ಸಾಧನೆಯ ಕುರಿತು ವಿಮರ್ಶಿಸುವುದು. ಮೌಲ್ಯ ನಿರ್ಣಯ ಮಾಡುವುದು ಸಂಘಟನೆಯ ಗುರಿ ಈಡೇರಿಕೆಯೆಡೆಗಿನ ಮಹತ್ವದ ಹೆಜ್ಜೆಯಾಗಿದೆ. ಸಂಘಟನೆಯ ಸಿಬ್ಬಂದಿಯ ವೃತ್ತಿ ಅಭಿವೃದ್ದಿ ಮತ್ತು ನಿರಂತರ ವಿಮರ್ಶೆಯನ್ನು ಈ ಸಾಧನೆಯ ಮೌಲ್ಯ ನಿರ್ಣಯ ಹೊಂದಿದೆ.

**ಮುಖ್ಯ ಗುಣಲಕ್ಷಣಗಳು:**

* ಇದೊಂದು ಸಿಬ್ಬಂದಿಯ ಕಾರ್ಯದ ಕುರಿತಾದ ವಿಮರ್ಶಿಸುವ ಪ್ರಕ್ರಿಯೆ
* ವೈಯಕ್ತಿಕ ಸಿಬ್ಬಂದಿಯ ಮೌಲ್ಯಮಾಪನ ಮಾಡುವ ಒಂದು ಶಿಸ್ತುಬದ್ದ ಕ್ರಮವಾಗಿದೆ
* ಸಂಘಟನೆಯಲ್ಲಿ ಸಿಬ್ಬಂದಿಯ ವರ್ತನೆ, ತೃಪ್ತಿದಾಯಕ ಕೆಲಸಗಳು ಭವಿಷ್ಯದ ಸುಧಾರಣೆಗೆ ದಕ್ಷತೆ, ಸದೃಢತೆ ಮತ್ತು ದುರ್ಬಲಕೆಗಳ ಅರಿವು ಮೂಡಿಸುತ್ತದೆ

ಸಾಧನೆಯ ಮೌಲ್ಯ ನಿರ್ಣಯ ಅಂಕಿಅಂಶಗಳ ವಿಷಯದ ಸಂಗ್ರಹಣೆಗೆ ಈ ಕೆಳಗಿನ ಮೂರು ವಿಧಾನ ಬಳಸಲಾಗುತ್ತದೆ.

1) ಉತ್ಪನ್ನದ ಉದ್ದೇಶ
2) ಸಿಬ್ಬಂದಿ
3) ತೀರ್ಮಾನದ ಮೌಲ್ಯಮಾಪನ

ತೀರ್ಮಾನಗಳ ಮೌಲ್ಯಮಾಪನವನ್ನು ಅತಿ ಹೆಚ್ಚು ಬಳಸಲಾಗುತ್ತದೆ. ಇದು ಮೌಲ್ಯಮಾಪನದಲ್ಲಿ ಹೆಚ್ಚು ಬಳಸಲಾಗುವ ಪದ್ದತಿ. ಇದರ ಬಳಕೆಯ ಮೂಲ ಉದ್ದೇಶವೇನೆಂದರೆ, ಸಿಬ್ಬಂದಿಯ ಕಾರ್ಯವೈಖರಿಯಲ್ಲಿ ಸುಧಾರಣೆ ತರುವುದು. ದಕ್ಷತೆಯಲ್ಲಿ ಹೆಚ್ಚಳ ತರುವುದು.

ಸಾಧನೆ ಮೌಲ್ಯ ನಿರ್ಣಯದಿಂದಾಗಿ ಈ ಕೆಳಗಿನ ವಿಷಯದಲ್ಲಿ ವ್ಯವಸ್ಥೆಯ ಸುಧಾರಣೆ ತರುವುದರೊಂದಿಗೆ ದಕ್ಷತೆಯನ್ನು ಹೆಚ್ಚಿಸುವುದು.

1) ಸಂಪರ್ಕ ವ್ಯವಸ್ಥೆಯ ಸುಧಾರಣೆ

2) ನಂಬಿಕೆ, ದಕ್ಷತೆಯನ್ನು ಹೆಚ್ಚಿಸುವುದರಿಂದ ಸಿಬ್ಬಂದಿಯನ್ನು ಗುರಿಯತ್ತ ಕೇಂದ್ರೀಕರಿಸುವುದು

3) ಗುರಿ ನಿರ್ದೇಶನ

4) ಪ್ರದರ್ಶನ ಸುಧಾರಣೆ

5) ತರಬೇತಿ ಅವಶ್ಯಕತೆಯ ಅರಿವು

ಸಂಘಟನೆಯ ಜೊತೆಗೆ ಸಾಧನೆ ಮೌಲ್ಯ ನಿರ್ಣಯ ಸಂಪರ್ಕ ಆಗದೆ ಹೋದರೆ ಅಥವಾ ಸಾಧನೆ ಮೌಲ್ಯ ನಿರ್ಣಯವನ್ನು ಸಂಘಟನೆಯಲ್ಲಿ ನಡೆಸದೆ ಹೋದರೆ ಆಗುವ ಪರಿಣಾಮಗಳು ಈ ಕೆಳಗಿನಂತಿವೆ.

1) ಅದಕ್ಷತೆ

2) ಹೆಚ್ಚುವ ತಪ್ಪುಗಳು

3) ನಕಾರಾತ್ಮಕ ದೃಷ್ಟಿಕೋನ

4) ಕೆಲಸದಲ್ಲಿ ಏಕತಾನತೆ

5) ಕಾಯ್ದೆ ವಿಷಯಗಳು – ಶಿಸ್ತಿನ ಕ್ರಮಗಳು

6) ಮೌಲ್ಯಮಾಪನದ ಸೀಮಿತತೆ

ಸಾಧನೆ ಮೌಲ್ಯ ನಿರ್ಣಯ ಮಾಡುವುದರಿಂದ ಸಿಬ್ಬಂದಿಯಲ್ಲಿ ಸುಧಾರಣೆ ಕೈಗೊಳ್ಳಲು ಅನುಸರಿಸಬೇಕಾದ ಕ್ರಮಗಳು:

1) ತರಬೇತಿ

2) ಮೌಲ್ಯಮಾಪನ ಮತ್ತು ದರ್ಜೆ ನೀಡುವುದು

3) ಸಾಮೂಹಿಕ ಪಾಲ್ಗೊಳ್ಳುವಿಕೆ

**ಪಿಡಿಸಿಎ ಸೈಕಲ್ (ಪ್ಲಾನ್ ಯುವರ್ ವರ್ಕ್ ಅಂಡ್ ವರ್ಕ್ ಅಟ್ ಯುವರ್ ಪ್ಲಾನ್):**

ಪಿಡಿಸಿಎ ಸೈಕಲ್ ಒಂದು ಪರಿಣಾಮಕಾರಿಯಾದ ನಿರ್ವಹಣಾ ಪ್ರಕ್ರಿಯೆ ಆಗಿದ್ದು, ಸಂಘಟನೆಯ ನಿಯಂತ್ರಣ ಮತ್ತು ಅಭಿವೃದ್ಧಿಯ ವಿಷಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದನ್ನು ಡೆಮಿಂಗ್ ಪ್ಲಾನ್ / ಸೈಕಲ್ / ವೀಲ್ / ಷಿವರ್ಟ್ ಸೈಕಲ್ / ಪ್ಲಾನ್ ಡೂ ಸ್ಟಡೀ – ಆಕ್ಟೀ ಸೈಕಲ್ ಎಂತಲೂ ಕರೆಯುತ್ತಾರೆ. ಪಿಡಿಸಿಎ ಸೈಕಲ್‌ನ ಮತ್ತೊಂದು ಆವೃತ್ತಿ ಓಪಿಡಿಸಿಎಓ ಅಬ್‌ಸರ್ವೇಷನ್.

**ಪಿಡಿಸಿಎ ಸೈಕಲ್:**

ನಿರ್ದಿಷ್ಟಗೊಳಿಸಿದ ಫಲಿತಾಂಶ ದೊರೆಯಲು ಸಂಘಟನೆಯಲ್ಲಿ ಕ್ರಮಬದ್ಧವಾದ ಯೋಜನೆಗಳನ್ನು ರೂಪಿಸಲು ಪಿಡಿಸಿಎ ಸೈಕಲ್ ಒಂದು ಯೋಜನೆಯಾಗಿದೆ.

ಪಿ – ಪ್ಲಾನಿಂಗ್ ಆನ್ ದಿ ವರ್ಕ್

ಡೂ – ಪ್ಲಾನ್ಡ್ ವರ್ಕ್ ಈಸ್ ಟೂ ಬೀ ಡನ್

ಚೆಕ್ – ವರ್ಕ್ ಈಸ್ ಟೂ ಬೀ ಚೆಕ್ಡ್

ಆಕ್ಟ್ – ಆಕ್ಟ್ ಆಸ್ ದಿ ರಿಸಲ್ಟ್ ಆಫ್ ವರ್ಕ್ ಕಮ್ಸ್

ಪಿಡಿಸಿಎ ಸೈಕಲ್‌ನ್ನು ಎಡ್ವರ್ಡ್ ಡೆಮಿಂಗ್ ಕಂಡು ಹಿಡಿದರು. ಪಿಡಿಸಿಎಯನ್ನು ಪಿಡಿಎಸ್‌ಎ ಎಂದು ಬದಲಾಯಿಸಿದರು. ಅವರ ಪ್ರಕಾರ **'ಚೆಕ್'** ಗಿಂತ **'ಸ್ಟಡಿ'** ವಿಷಯದ ಕುರಿತು ಅಧ್ಯಯನವು ಅವಶ್ಯಕ ಮತ್ತು ಪಿಡಿಸಿಎ ಸೈಕಲ್‌ನಲ್ಲಿ **'ಸ್ಟಡಿ'**ಯು ಸೂಕ್ತ ಎಂದು ಹೇಳುತ್ತಾರೆ. ಪಿಡಿಸಿಎ ಚಕ್ರವು ಒಂದು ವೈಜ್ಞಾನಿಕ ಪದ್ಧತಿಯಾಗಿದೆ.

ವೈಜ್ಞಾನಿಕವಾಗಿ ಈ ಚಕ್ರದಲ್ಲಿ 'ಹೈಪೋತೆಸಿಸ್' ಪ್ರಯೋಗ ಮತ್ತು ಫಲಿತಾಂಶದ 'ಇವೊಲ್ಯೂಷನ್'ನ ಹಂತಗಳು ಬರುತ್ತವೆ.

## ತರಬೇತಿ ಮತ್ತು ಅಭಿವೃದ್ಧಿ:

ತರಬೇತಿ ಮತ್ತು ಅಭಿವೃದ್ಧಿ ಒಂದು ಸಂಸ್ಥೆಯ ಮಾನವ ಸಂಪನ್ಮೂಲದ ಸುಧಾರಣೆ ಮತ್ತು ವೈಯಕ್ತಿಕ ಪ್ರದರ್ಶನದ ಕುರಿತು ವಿವರಿಸುತ್ತದೆ, ವಿಶ್ಲೇಷಿಸುತ್ತದೆ ಅಥವಾ ಮಾನವ ಸಂಪನ್ಮೂಲ ಮತ್ತು ಸಂಸ್ಥೆಯ / ಮಾನವ ಅಭಿವೃದ್ಧಿಯನ್ನು ವಿವರಿಸುತ್ತದೆ. ತರಬೇತಿ ಮತ್ತು ಅಭಿವೃದ್ಧಿಯು ಮೂರು ಪ್ರಮುಖ ಚಟುವಟಿಕೆಗಳನ್ನು ಹೊಂದಿವೆ. ಅವುಗಳು–

1) ತರಬೇತಿ
2) ಶಿಕ್ಷಣ
3) ಅಭಿವೃದ್ಧಿ

ತರಬೇತಿಯು ಚಟುವಟಿಕೆಯ ಕುರಿತು ವ್ಯಕ್ತಿಯ ವೈಯಕ್ತಿಕ ಬೆಳವಣಿಗೆಯನ್ನು ತಿಳಿಸುತ್ತದೆ. ಶಿಕ್ಷಣವು ಯೋಜನೆಯ ಕುರಿತಾದ ಜ್ಞಾನವನ್ನು, ಅಭಿವೃದ್ಧಿಯು ಸಂಸ್ಥೆಯ ಅಭಿವೃದ್ಧಿ ಕಾರ್ಯಗಳನ್ನು ಯೋಜಿಸುವುದರ ಕುರಿತು ವಿವರಿಸುತ್ತದೆ.

## ಸಂಘರ್ಷಣಾತ್ಮಕ ನಿರ್ವಹಣೆ:

ನಕಾರಾತ್ಮಕ ವಿಷಯಗಳಿಗೆ ಮಿತಿಯನ್ನು ಹಾಗೂ ಸಕಾರಾತ್ಮಕ ವಿಷಯಗಳನ್ನು ಹೆಚ್ಚಿಸುವಾಗ ಉಂಟಾಗುವ ಸಂಘರ್ಷದ ನಿರ್ವಹಣೆಯು ಒಂದು ಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಂಘರ್ಷಣಾತ್ಮಕ ನಿರ್ವಹಣೆಯ ಮುಖ್ಯ ಉದ್ದೇಶ ಎಂದರೆ ಗುಂಪು ಫಲಿತಾಂಶವನ್ನು ತರುವಲ್ಲಿ. ಕಲಿಕೆಯನ್ನು ಹೆಚ್ಚಿಸುವಲ್ಲಿ, ಸಂಘಟನೆಯ ಪ್ರದರ್ಶನದಲ್ಲಿ ಅಭಿವೃದ್ಧಿ ಬರುವಂತೆ ಮಾಡುವುದು.

## ಸಂಘರ್ಷಕ್ಕೆ ಕಾರಣಗಳು:

ವ್ಯಕ್ತಿಯ ಆಸೆ, ಅವಶ್ಯಕತೆಗೆ ಸಂಬಂಧವಿರದ ಅಥವಾ ಪೂರೈಸದ ಸಂಘಟನೆಯ ಗುರಿಗಳು ಸಂಘರ್ಷಕ್ಕೆ ಕಾರಣವಾಗುತ್ತದೆ. ಹಾಗೆಯೇ ಸಂಘರ್ಷಕ್ಕೆ ಈ ಕೆಳಗಿನವುಗಳು ಕಾರಣಗಳಾಗಿವೆ.

* ಸಂಘಟನೆಯು ವ್ಯಕ್ತಿಗತವಾಗಿ ವರ್ತನಾ / ನಡವಳಿಕೆಯ ಮೇಲೆ ಒಲವು ತೋರುವುದು
* ಸಂಘಟನೆಯು ಕೆಲವು ಸಲ ಎಲ್ಲರ ಬೇಡಿಕೆಗಳನ್ನು ಪೂರೈಸುವುದಿಲ್ಲ
* ಜಂಟಿ ಯೋಜನೆಗಳಲ್ಲಿ ಎರಡು ಗುಂಪುಗಳ ಸಂಘರ್ಷ
* 2 ಗುಂಪುಗಳ ಒಂದರ ಮೇಲೊಂದು ಅವಲಂಬಿತರಾಗಿ ಜವಾಬ್ದಾರಿ ಕ್ಷೀಣಿಸುವುದು

ಮೇರಿ ಫೊಲೆಟ್‌ರ ಪ್ರಕಾರ ಸಂಘರ್ಷವನ್ನು 3 ವಿಧದಿಂದ ನಿಯಂತ್ರಿಸಬಹುದು. ಅವುಗಳು–

1) ಪ್ರಾಬಲ್ಯದಿಂದ
2) ರಾಜಿ / ಒಪ್ಪಂದ
3) ಅನುಕೂಲವನ್ನು ಕಂಡುಹಿಡಿಯುವುದು

ಹಾಗೆಯೇ,

1) ತಪ್ಪಿಸಿಕೊಳ್ಳುವುದರಿಂದ
2) ನಿಗ್ರಹದಿಂದ ಸಂಘರ್ಷ ತಡೆಯಬಹುದು ಎನ್ನುತ್ತಾರೆ.

## ಅಂತರರಾಷ್ಟ್ರೀಯ ಸಂಘರ್ಷಣಾ ನಿರ್ವಹಣೆ:

ಎರಡು ಬೇರೆ ಬೇರೆಯ ಸಂಸ್ಕೃತಿ ಹೊಂದಿದ ದೇಶಗಳ ನಡುವಿನ ಸಂಘರ್ಷಕ್ಕೆ ವಿಶೇಷವಾದ ಗಮನ ವಹಿಸಬೇಕಾಗುತ್ತದೆ. ಸಾಂಸ್ಕೃತಿಕವಾಗಿ ಇರುವ ವಿಭಿನ್ನತೆಗಳನ್ನು ತಿಳಿಯಲು ಒಂದು ಗುಂಪು ವಿಫಲವಾದರೆ

ಸಂಘರ್ಷ ಪ್ರಾರಂಭವಾಗುತ್ತದೆ. ಇಲ್ಲಿ ತಪ್ಪು ತಿಳುವಳಿಕೆ, ಸಾಂಪ್ರದಾಯಿಕ ಏರು ಪೇರುಗಳು ಪ್ರಮುಖ ವಿಷಯಗಳಾಗುತ್ತವೆ. ಈ ಬಗೆಯ ಅಂತರರಾಷ್ಟ್ರೀಯ ಕಂಪನಿಗಳಲ್ಲಿ ಕಾಣಬಹುದು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಂಪನಿ ಪ್ರಾರಂಭಿಸಿ ಅಲ್ಲಿಯ ಸಾಂಪ್ರದಾಯಿಕ ವಿಭಿನ್ನತೆಗಳಿಂದ ತಲೆದೋರುವ ಸಮಸ್ಯೆಗಳನ್ನು ನಿರ್ವಹಣಾಕಾರ ಬಗೆಹರಿಸುವುದು ಸಾಮಾನ್ಯವಾಗಿ ಕಂಡು ಬರುವ ವಿಷಯವಾಗಿದೆ.

**ಉನ್ನತ ಶಿಕ್ಷಣ:**

ಸಂಘರ್ಷಣೆಯ ನಿರ್ವಹಣೆಯು ಶೈಕ್ಷಣಿಕವಾಗಿ ಕೇವಲ 14% ಮಾತ್ರ ಒಳಗೊಂಡಿರುತ್ತದೆ. ವಿಶ್ವ ವಿದ್ಯಾಲಯಗಳು 14% ಸಂಶೋಧನೆಗಳನ್ನು ಈ ನಿರ್ವಹಣೆಯ ಕುರಿತಾಗಿ ವಿವರಿಸುತ್ತವೆ. ಆದರೆ ಪ್ರಾಯೋಗಿಕವಾಗಿ ಒಬ್ಬ ನಿರ್ವಾಹಕ ದಿನದ 25%ರಷ್ಟು ಸಂಘರ್ಷಣೆಯ ವಿಷಯಗಳೊಂದಿಗೆ ನಿರ್ವಹಣೆ ಮಾಡುತ್ತಿರುತ್ತಾನೆ. ಆದ್ದರಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇದನ್ನು ಇನ್ನೂ ವ್ಯಾಪಕಗೊಳಿಸಬೇಕು. ಸಂಘರ್ಷಣೆಯು ಹುಟ್ಟಲು ಕಾರಣ ಸಂಪರ್ಕದಲ್ಲಿನ ದೋಷಗಳು ಮತ್ತು ವಿಷಯದ ಕುರಿತು ತಿಳುವಳಿಕೆಯ ಕೊರತೆ. ನಿರ್ವಾಹಕ ಒಳ್ಳೆಯ ಸಂಪರ್ಕ ಕೌಶಲ್ಯಗಳನ್ನು ಹೊಂದಿರುವುದರಿಂದ ಸಂಘರ್ಷಣೆಯನ್ನು ಬಗೆಹರಿಸಬಹುದು.

**ಗುಂಪು / ತಂಡ ರಚನೆ:**

ತಂಡ ರಚನೆಯ ಸಾಮಾಜಿಕ ಸಂಬಂಧಗಳನ್ನು ವರ್ಧಿಸಲು ಮತ್ತು ಗುಂಪಿನ ಸಮಸ್ಯೆಗಳನ್ನು ಬಗೆಹರಿಸಿ ಗುಂಪು ಯೋಜನಾಬದ್ಧವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು. ಗುಂಪನ್ನು ವ್ಯಕ್ತಿಗಳ ನಡುವಿನ ಮತ್ತು ಸಾಮಾಜಿಕ ಸಂಬಂಧಗಳನ್ನು ಸುಧಾರಿಸಲು ರಚಿಸಲಾಗುತ್ತದೆ. ಒಂದು ಗುಂಪು ಈ ಕೆಳಗಿನ ವಿಷಯಗಳನ್ನು ಒಳಗೊಂಡಿರುತ್ತದೆ.

1) ಗುರಿ ನಿರ್ದೇಶನ–ಗುರಿ ಸಾಧನೆಗಾಗಿ ಕಾರ್ಯ ನಿರ್ವಹಣೆ

2) ವ್ಯಕ್ತಿ ನಡುವಣ ಸಂಬಂಧವನ್ನು ನಿರ್ವಹಿಸುವುದು

3) ಸಮಸ್ಯೆಗಳನ್ನು ಬಗೆಹರಿಸುವಿಕೆ

4) ಸಂಪರ್ಕ ಕೌಶಲ್ಯಗಳು

ಒಂದು ಸಂಘಟನೆಯಿಂದ ಇನ್ನೊಂದು ಸಂಘಟನೆಗೆ ಗುಂಪು ರಚನೆ ಮತ್ತು ಅದರ ಪರಿಣಾಮಗಳು ಬೇರೆ ಬೇರೆಯಾಗಿರುತ್ತದೆ. ಒಂದು ಗುಂಪು ಈ ಕೆಳಗಿನ ವಿಷಯಗಳಿಂದಾಗಿ ಪ್ರಬಲ ಮತ್ತು ಪರಿಣಾಮಕಾರಿಯಾಗಿರುತ್ತದೆ.

1) ಸದಸ್ಯರು ಪರಸ್ಪರ ಜವಾಬ್ದಾರಿಯುತರಾಗಿರಬೇಕು

2) ಒಂದು ಯೋಜನೆಯ ಸಾಧನೆಯಲ್ಲಿ ಸದಸ್ಯರಿಗೆ ಸಾಕಷ್ಟು ಜ್ಞಾನ ಮತ್ತು ಅನುಭವ ಹೊಂದಿರಬೇಕು

3) ನಾಯಕ ಸಂಘಟನೆಯ ಚಟುವಟಿಕೆಗಳನ್ನು ಯಶಸ್ವಿ ನಾಯಕನಾಗಿರಬೇಕು

**ಗುಂಪು ರಚನೆಯಲ್ಲಿ ಕಂಡು ಬರುವ ಸವಾಲುಗಳು:**

1) ಗುಂಪು ಕಾರ್ಯ ಯೋಜನೆಯು ಕೌಶಲ್ಯಗಳು ನಾಯಕನಿಗೆ ಗುಂಪಿನ ಸದಸ್ಯರನ್ನು ಆಯ್ದುಕೊಳ್ಳುವಲ್ಲಿ ಸವಾಲುಗಳಿರುತ್ತವೆ. ಯೋಗ್ಯ ಸದಸ್ಯರು ಎಂದರೆ ಗುಂಪು ಕಾರ್ಯ ನಿರ್ವಹಿಸುವಲ್ಲಿ ಯೋಗ್ಯರಾದ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಿರಬೇಕು.

2) ಭೌಗೋಳಿಕವಾಗಿ ಜೊತೆಗೆ ಇರದ ಗುಂಪು ರಚನೆ ಸಂಘಟನೆಯು ವಿಶಾಲವಾಗಿ ವ್ಯಾಪಿಸಿರುತ್ತದೆ. ಸಂಘಟನೆಯ ಕಾರ್ಯವ್ಯಾಪ್ತಿ ಬೇರೆ ಬೇರೆಯಾಗಿರುತ್ತದೆ. ಇಂತಹ ಸನ್ನಿವೇಶದಲ್ಲಿ ಗುಂಪಿನ ಸದಸ್ಯರು ಒಂದೇ ಪ್ರದೇಶದಲ್ಲಿ ಇರದಿದ್ದರೂ ಗುಂಪು ಕಾರ್ಯ ನಿರ್ವಹಣೆ ಮಾಡಬೇಕಾಗುತ್ತದೆ.

3) ಜಾಗತೀಕರಣದಿಂದಾಗಿ ಜಗತ್ತಿನ ವ್ಯಾಪ್ತಿ ಸೀಮಿತಗೊಂಡಿದೆ.

**ಯಶಸ್ವಿ ಗುಂಪು ರಚನೆಯ ವಿಷಯಗಳು:**

* ಯೋಜನೆಯನ್ನು ವಿವರಿಸುವುದು
* ಗುರಿ / ಉದ್ದೇಶಗಳ ಕುರಿತಾಗಿ ಸದಸ್ಯರು ವಿವರವಾಗಿ ತಿಳಿಯುವಂತೆ ಮಾಡುವುದು

* ಗುಂಪಿನಲ್ಲಿ ನಿರ್ಧಿಷ್ಟವಾದ ಕಾರ್ಯವನ್ನು ಎಲ್ಲರಿಗೂ ಸಮಾನ ರೀತಿಯಿಂದ ಅನ್ವಯಿಸುವಂತೆ ಮಾಡುವುದು
* ಗುಂಪಿಗೆ ಪ್ರತಿಯೊಬ್ಬ ಸದಸ್ಯನಿಗೆ ಪ್ರತಿಯೊಂದು ಕಾರ್ಯ ಯೋಜನೆಯಲ್ಲಿ ತೊಡಗುವಂತೆ ನಿರ್ದೇಶಿಸುವುದು. ಪ್ರತಿಯೊಬ್ಬರು ತಮ್ಮ ಪಾತ್ರದ ಬಗೆಗೆ ಅರಿವು ಹೊಂದಿರಬೇಕು
* ಸದಸ್ಯರೊಂದಿಗೆ ಕಾರ್ಯ ಯೋಜನೆಯ ಬಗೆಗೆ ಆಗಾಗ ಸಭೆಗಳನ್ನು ನಡೆಸುತ್ತಿರಬೇಕು
* ಸಂಘರ್ಷವನ್ನು ನಿರ್ವಹಿಸುವುದು
* ವೈಯಕ್ತಿಕ ಜವಾಬ್ದಾರಿಯ ಬಗೆಗೆ ಪ್ರತಿ ಸದಸ್ಯರಿಗೂ ಅರಿವು ಇರಬೇಕು
* ಸಾಮೂಹಿಕ ಜವಾಬ್ದಾರಿಯನ್ನು ಸಹ ಗುಂಪು ಹೊಂದಿರಬೇಕು
* ಗುಂಪಿನಲ್ಲಿ ಒಗ್ಗಟ್ಟು ಮತ್ತು ಗುರಿಯ ಬಗೆಗೆ ಒಂದೇ ರೀತಿಯ ಕಾರ್ಯ ಯೋಜನೆ ಹೊಂದಿರಬೇಕು
* ಗುಂಪಿನಲ್ಲಿ ಸಕಾರಾತ್ಮಕ ಚಿಂತನೆಗಳು ಮತ್ತು ಒಗ್ಗಟ್ಟಿನ ವಾತಾವರಣ
* ಗುಂಪಿನ ಪರಿಚಯ
* ಪ್ರಾಮಾಣಿಕ ಮತ್ತು ಮುಚ್ಚು ಮರೆಯಿಲ್ಲದ ಸಂಪರ್ಕ ವ್ಯವಸ್ಥೆ
* ಸಾಮಾಜಿಕ ಆಸರೆ ಸಹಾಯ ಮನೋಭಾವ ಹೊಂದಿರಬೇಕು

**ಮಿದುಳು ದಾಳಿ:**

ಮಿದುಳು ದಾಳಿಯು ಒಂದು ಗುಂಪಿನ ಅಥವಾ ವೈಯಕ್ತಿಕವಾದ ಸಮಸ್ಯೆಗಳ , ಪರಿಹರಿಸುವ ಸೃಜನಶೀಲತೆಯಿಂದ ಕೂಡಿದ ಒಂದು ಪ್ರಕ್ರಿಯೆ. ಗುಂಪಿನ ಸದಸ್ಯರಿಂದ ಹಲವು ವಿಚಾರಗಳ ಸಂಗ್ರಹ ಮಾಡಿ ಒಂದು ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯನ್ನು ಅಲೆಕ್ಸ್ ಜಸ್‌ಬೋರ್ನ್ 1953ರಲ್ಲಿ ಅಪ್ಲೈಡ್ ಇಮ್ಯಾಜಿನೇಷನ್ ಪುಸ್ತಕದ ಮುಖಾಂತರ ಜನಪ್ರಿಯಗೊಳಿಸಿದರು. ಜಸ್‌ಬೋರ್ನ್ ಪ್ರಕಾರ ಈ ಮಿದುಳು ದಾಳಿ ಪ್ರಕ್ರಿಯೆಯು ವೈಯಕ್ತಿಕವಾಗಿ ಕಾರ್ಯ ನಿರ್ವಹಿಸುವುದಕ್ಕಿಂತ ಹೆಚ್ಚು ಪರಿಣಾಮಕಾರಿ. ಇದು ವಿಚಾರಗಳನ್ನು ಸಂಶೋಧನೆಗಳನ್ನು ಹೆಚ್ಚಿಸುತ್ತದೆ. ಪ್ರಸ್ತುತ ಎಲ್ಲಾ ಸಂಘಟನೆಗಳಲ್ಲಿ ಇದನ್ನು ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ.

ಜಾಹಿರಾತು ಪ್ರಾಯೋಜಕರಾದ ಜಸ್‌ಬೋರ್ನ್‌ರು ಸಮಸ್ಯೆ ಬಗೆಹರಿಸುವ ಪ್ರಕ್ರಿಯೆಗಳನ್ನು ಮೊದಲ ಬಾರಿಗೆ 1939ರಲ್ಲಿ ಪ್ರಾರಂಭಿಸಿದರು. ಗುಂಪು ವಿಚಾರಗಳ ಮತ್ತು ವಿಶೇಷವಾದ, ಪರಿಣಾಮಕಾರಿಯಾದ ವಿಶೇಷ ಗುಣಗಳನ್ನು ಹೊಂದಿದ ವಿಚಾರಗಳನ್ನು ಉತ್ಪತ್ತಿ ಮಾಡಲು ಒಂದು ಪ್ರಕ್ರಿಯೆಯ ಶೋಧನೆಯಲ್ಲಿದ್ದಾಗ ಜಸ್‌ಬೋರ್ನ್ ಈ ಮಿದುಳು ದಾಳಿಯನ್ನು ಪ್ರಾರಂಭಿಸಿದರು. ಮಿದುಳು ದಾಳಿಯು ಈ ಕೆಳಗಿನ ವಿಷಯಗಳನ್ನುಇ ತತ್ವಗಳನ್ನು ಹೊಂದಿದೆ.

1) ತೀರ್ಮಾನ ಮುಂದುಡುವುದು
2) ಪ್ರಮಾಣವನ್ನು ತಲುಪುವುದು

ಮಿದುಳು ದಾಳಿಯ ನಾಲ್ಕು ನಿಯಮಗಳು ಹೀಗಿವೆ.

1) ಗಾತ್ರದ ಮೇಲೆ ಕೇಂದ್ರೀಕರಣ
2) ವಿಮರ್ಶೆಯನ್ನು ತಡೆಯುವುದು
3) ಅಸಾಮಾನ್ಯ ವಿಚಾರಗಳನ್ನು ಪಡೆಯುವುದು
4) ವಿಚಾರಗಳನ್ನು ಕೂಡಿಸುವುದು ಮತ್ತು ಸುಧಾರಣೆ

ಮಿದುಳು ಪ್ರಕ್ರಿಯೆಯು ಈ ಕೆಳಗಿನ ವಿಷಯಗಳನ್ನು ಹೊಂದಿದೆ.

* ಗುಂಪಿನ ಸದಸ್ಯರಲ್ಲಿ ಸಾಮಾಜಿಕ ಅಡೆತಡೆಗಳನ್ನು ಕಡಿಮೆ ಮಾಡುವುದು
* ವಿಚಾರಗಳನ್ನು ಉತ್ಪತ್ತಿ ಮಾಡಲು ಪ್ರೇರೇಪಿಸುವುದು
* ಗುಂಪಿನ ಸೃಜನಶೀಲತೆಯನ್ನು ಹೆಚ್ಚಿಸುವುದು

**ಪ್ರಕ್ರಿಯೆಯ ಅನ್ವಯಿಕೆ:**

ನಿರ್ದಿಷ್ಟವಾದ ಪ್ರಶ್ನೆಯನ್ನು ಈ ಪ್ರಕ್ರಿಯೆಯು ಹೊಂದಿರಬೇಕು. ತೀರ್ಮಾನಗಳ ಬದಲಿಗೆ ಮಿದುಳು ದಾಳಿಯು ಸಾಕಷ್ಟು ವಿಚಾರಗಳನ್ನು ಉತ್ಪತ್ತಿ ಮಾಡುವಂತಿರುತ್ತದೆ. ಈ ವಿಚಾರಗಳು, ಪ್ರಶ್ನೆಗಳನ್ನು ಬಳಸಿಕೊಂಡು ಆಗಬಹುದಾದ ಫಲಿತಾಂಶದ ಕುರಿತು ವಿಶ್ಲೇಷಿಸಿ ಯೋಜನೆ ರೂಪಿಸಬೇಕಾಗುತ್ತದೆ.

**ಮಿದುಳು ದಾಳಿ ಪ್ರಕ್ರಿಯೆಯಲ್ಲಿನ ವಿಧಗಳು:**

* ಸಂಘಟನೆಯಲ್ಲಿ / ಗುಂಪಿನಲ್ಲಿ ಮಿದುಳು ದಾಳಿ
* ಗುಂಪು ವಿಚಾರಗಳ ಮೂಲಕ ನಕ್ಷೆಯ ಮೂಲಕ ಮಿದುಳು ದಾಳಿ
* ನಿರ್ದೇಶಿತ ಮಿದುಳು ದಾಳಿ
* ವೈಯಕ್ತಿಕ ಮಿದುಳು ದಾಳಿ
* ಪ್ರಶ್ನೆಗಳ ಮಿದುಳು ದಾಳಿ

**ಮಿದುಳು ದಾಳಿ ಪ್ರಕ್ರಿಯೆಯ ಅಡೆತಡೆಗಳು:**

* ವಿಚಾರಗಳ ತಡೆಹಿಡಿಯುವಿಕೆ
* ಸಹಯೋಗ ಭದ್ರಪಡಿಸುವಿಕೆ
* ಮೌಲ್ಯ ನಿರ್ಧಾರದ ಭಯ / ಆತಂಕ
* ಉಚಿತ ಸವಾರಿ
* ವ್ಯಕ್ತಿತ್ವ ಗುಣಲಕ್ಷಣಗಳು
* ಸಾಮಾಜಿಕ ಹೊಂದಾಣಿಕೆ

## ಸಾಮಾನ್ಯ ಗುಂಪಿನ ತಂತ್ರ:

ಸಮಸ್ಯೆಯನ್ನು ಗುರುತಿಸುವಿಕೆ ಮತ್ತು ಪರಿಹಾರವನ್ನು ಕಂಡುಕೊಳ್ಳುವಿಕೆಯ ನಿರ್ಧಾರ ಕೈಗೊಳ್ಳುವಿಕೆಯ, ಒಂದು ಗುಂಪಿನ ಪ್ರಕ್ರಿಯೆಯ ತಂತ್ರವಾಗಿದೆ. ಇದು ಯಾವುದೇ ಗಾತ್ರದ ಗುಂಪಿನ ನಿರ್ಧಾರವನ್ನು ವೇಗವಾಗಿ ತೆಗೆದುಕೊಳ್ಳಲು ಮತದಾನದ ಮೂಲಕ ಎಲ್ಲರ ಅಭಿಪ್ರಾಯಕ್ಕೆ ಮನ್ನಣೆ ಕೊಡುವಂತೆ ಬಳಕೆಯಾಗುತ್ತದೆ. ಮೊದಲು ಪ್ರತಿಯೊಬ್ಬರಿಗೂ ಪರಿಹಾರಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಲಾಗುತ್ತದೆ. ಒಂದೇ ವಿಧವಾದ ಪರಿಹಾರಗಳನ್ನು ನಿರ್ಲಕ್ಷಿಸುವುದು, ಅತ್ಯುತ್ತಮವಾದ ಒಂದನ್ನು ಪರಿಗಣಿಸುವುದು. ನಂತರ ಪರಿಹಾರಗಳಲ್ಲಿ ಯಾವುದು ಉತ್ತಮವಾದುದರ ಬಗೆಗೆ ನಿರ್ಧಾರ ಕೈಗೊಳ್ಳುವುದೇ ಇದರ ಪ್ರಕ್ರಿಯೆ ಆಗಿದೆ.

ಈ ಪ್ರಕ್ರಿಯೆಯನ್ನು ಆಂಟ್ರೆ ಡೆಲ್ಬಕ್ ಮತ್ತು ಆಂಡ್ರಿವ್ ಹೆಚ್. ವ್ಯಾನ್ ಅಭಿವೃದ್ಧಿ ಪಡಿಸಿದರು. ನಿರ್ಧಾರ ಕೈಗೊಳ್ಳುವುದಕ್ಕಿಂತ ಮೊದಲು, ಗುಂಪಿನಲ್ಲಿ ಚರ್ಚಿಸಿದ ಮೊದಲು ಪರಿಹಾರಗಳನ್ನು ಬರೆದಿಟ್ಟುಕೊಳ್ಳಬೇಕು. ಸಾಮಾನ್ಯ ಗುಂಪಿನ ಚರ್ಚೆಗಿಂತ ಸಾಮಾನ್ಯ ಗುಂಪಿನ ತಂತ್ರದ ಚರ್ಚೆಯಲ್ಲಿ ಅತ್ಯಂತ ಪರಿಣಾಮಕಾರಿಯಾದ ಯೋಜನೆಗಳು ಹೊಳೆಯುತ್ತವೆ. ಸದಸ್ಯರ ಸಮಾನ ಪಾಲ್ಗೊಳ್ಳುವಿಕೆ ಮತ್ತು ತೃಪ್ತಿಯ ಗುಂಪಿನ ದಕ್ಷತೆಯು ಹೆಚ್ಚುತ್ತದೆ.

**ಸಾಮಾನ್ಯ ಗುಂಪಿನ ತಂತ್ರದ ವಿಶೇಷ ಬಳಕೆ:**

* ಗುಂಪಿನಲ್ಲಿ ಕೆಲವರು ಮಾತ್ರ ಮಾತುಗಾರರಾಗಿದ್ದಾಗ
* ಗುಂಪಿನ ಕೆಲ ಸದಸ್ಯರಿಗೆ ಶಾಂತತೆಯಲ್ಲಿ ಹೆಚ್ಚು ಒಳ್ಳೆಯ ವಿಚಾರಗಳು ಹೊಳೆಯುತ್ತಿದ್ದಾಗ
* ಕೆಲಸ ಸದಸ್ಯರ ಪಾಲ್ಗೊಳ್ಳದಿರುವಿಕೆಯನ್ನು ತಪ್ಪಿಸಲು
* ಸುಲಭವಾಗಿ ಹೆಚ್ಚಿನ ವಿಚಾರಗಳು ಹೊರ ಹೊಮ್ಮದಿದ್ದಾಗ
* ಒಂದು ಗುಂಪಿನ ಚರ್ಚೆಗೆ ಸದಸ್ಯರು ಹೊಸಬರಿದ್ದಾಗ
* ತೀರಾ ವಿವಾದಾತ್ಮಕ ವಿಷಯವಿದ್ದಾಗ

**ಸಾಮಾನ್ಯ ಗುಂಪಿನ ತಂತ್ರದಲ್ಲಿನ 5 ಹಂತಗಳು:**

1) ಪ್ರಸ್ತಾವನೆ ಮತ್ತು ವಿವರಣೆ

2) ಪ್ರಧಾನ ಯೋಚನೆಗಳನ್ನು ಹರಿಬಿಡುವುದು

3) ಯೋಚನೆಗಳನ್ನು ಹಂಚಿಕೊಳ್ಳುವಿಕೆ

4) ಗುಂಪು ಚರ್ಚೆ

5) ಮತದಾನ ಮತ್ತು ದರ್ಜೆಯ ನಿರ್ಧಾರ

**ಪೆರೆಟೊ ಚಾರ್ಟ್:**

ವೆಲ್ಫ್ರೆಡ್ ಪೆರೆಟೊರಿಂದ ಅಸ್ತಿತ್ವಕ್ಕೆ ಬಂದ ಈ ವಿಷಯವು ರೇಖೆ, ಗ್ರಾಫ್‌ಗಳಿಂದ ಕೂಡಿದ ನಕ್ಷೆಯಾಗಿದೆ. ವೈಯಕ್ತಿಕ ವಿಷಯಾಂಶಗಳನ್ನು ಇಳಿಕೆ ಕ್ರಮದಲ್ಲಿ ಬಾರ್‌ಗಳಲ್ಲಿ ಮತ್ತು ಒಟ್ಟುಗೂಡುವ ವಿಷಯಾಂಶಗಳನ್ನು ರೇಖೆಗಳ ಮೂಲಕ 'ಗ್ರಾಫ್'ನಲ್ಲಿ ವಿವರಿಸುವ ಪ್ರಕ್ರಿಯೆಯಾಗಿದೆ.

**ಉದ್ದೇಶಗಳು:**

ಹಲವು ವಿಷಯಾಂಶಗಳಲ್ಲಿ ಅತಿ ಮುಖ್ಯವಾದುದನ್ನು ನಿರ್ದೇಶಿಸಲು / ತೋರಿಸಲು, ಗುಣ ನಿಯಂತ್ರಣ ಪ್ರಕ್ರಿಯೆಯಲ್ಲಿ ಇದು ಸಾಮಾನ್ಯವಾಗಿ ಕಂಡುಬರುವ ನಕಾರಾತ್ಮಕ ವಿಷಯಗಳನ್ನು ವಿವರಿಸಲು, ಗ್ರಾಹಕಗಳ ದೂರುಗಳ ಕುರಿತು ವಿವರಿಸಲು ಇದು ಉಪಯುಕ್ತವಾಗಿದೆ.

ಈ ರೀತಿಯ ಚಾರ್ಟ್‌ಗಳನ್ನು ಪ್ರಸ್ತುತ ಆಧುನಿಕ ತಂತ್ರಜ್ಞಾನದ ಬಳಕೆಯೊಮದಿಗೆ ಹೆಚ್ಚು ಬಳಕೆ ಮಾಡಲಾಗುತ್ತಿದೆ.

**ಇಷಿವಾಕಾ ಡಯಾಗ್ರಂ (ಫಿಶ್ ಬೋನ್ ಚಾರ್ಟ್):**

ಕೌರು ಇಷಿವಾಕಾ ಎಂಬುವರು 1968ರಲ್ಲಿ ಇದನ್ನು ರಚಿಸಿದರು. ಇದನ್ನು ಒಂದು ನಿರ್ದಿಷ್ಟ ಘಟನೆಯ ಕಾರಣಗಳನ್ನು ತೋರಿಸಲು ಬಳಕೆಯಾಗುತ್ತದೆ. ಸಾಮಾನ್ಯವಾಗಿ ಈ ರೇಖಾಚಿತ್ರಗಳನ್ನು ಉತ್ಪಾದನಾ ವಿನ್ಯಾಸ ಮತ್ತು ಗುಣಮಟ್ಟದ ದೋಷದ ನಿವಾರಣೆಗೆ ಬಳಕೆಯಾಗುತ್ತದೆ. ಈ ರೇಖಾ ಚಿತ್ರದಲ್ಲಿ ಕಾರಣಗಳನ್ನು ಗುಂಪಿನಲ್ಲಿ ತೋರಿಸಲಾಗುತ್ತದೆ. ರೇಖಾ ಚಿತ್ರದಲ್ಲಿ ಕಂಡು ಬರುವ ವಿಭಾಗಗಳು:

1) ಜನರು

2) ವಿಧಾನಗಳು

3) ಯಂತ್ರಗಳು

4) ವಸ್ತುಗಳು

5) ಅಳತೆಗಳು

6) ಪರಿಸರ

ಇಷಿವಾಕ್ ರೇಖಾಚಿತ್ರವು 'ಫಿಶ್ ಬೋನ್' ಆಕಾರದಲ್ಲಿದ್ದು ಸಮಸ್ಯೆಗೆ ಕಾರಣವಾದ ಎಲ್ಲ ನಿರ್ವಹಣೆಯ ಪರಿಸರಾತ್ಮಕ ವಸ್ತುವಿನ, ಜನರ, ವಸ್ತುಗಳ, ಪ್ರಕ್ರಿಯೆಯ ಕುರಿತು ತೋರಿಸುತ್ತದೆ. ಅದರೊಳಗಿನ ಸಣ್ಣ ಬಾಣದ ಗುರುತುಗಳು ಮುಖ್ಯ ಸಮಸ್ಯೆಯ ಕಾರಣಗಳನ್ನು ತೋರಿಸುತ್ತವೆ. ಇದು ಆಧುನಿಕ ನಿರ್ವಹಣೆಯ ಪರಿಷ್ಕರಣಾ ತಂತ್ರಗಳಲ್ಲಿ ಪ್ರಮುಖವಾದುದು. ಇಷಿವಾಕಾ ರೇಖಾಚಿತ್ರವು ಮೀನಿನ ಎಲುಬಿನ ಆಕಾರದಲ್ಲಿರುವುದರಿಂದ 'ಫಿಶ್ ಬೋನ್' ರೇಖಾಚಿತ್ರ ಎನ್ನುವರು.

# ಅಧ್ಯಾಯ – 6

# ಆಡಳಿತಾತ್ಮಕ ಸುಧಾರಣೆಗಳು

**ಸಾರ್ವಜನಿಕ ಸೇವೆಯಲ್ಲಿ ಮೌಲ್ಯಗಳು:**

ಪ್ರಜಾಸತ್ತಾತ್ಮಕ ಸರ್ಕಾರಗಳಲ್ಲಿ, ಸಾರ್ವಜನಿಕ ಸೇವೆಗಳಲ್ಲಿ, ನೈತಿಕಮಟ್ಟ ಮತ್ತು ಸತ್ಸಂಪ್ರದಾಯ ನಡವಳಿಕೆಗಳನ್ನು ಕಾಪಾಡಿಕೊಂಡು ಬರುವುದು ಒಂದು ಸಮಸ್ಯೆ ಆಗಿದೆ. ಆಡಳಿತದಲ್ಲಿ ನೈತಿಕತೆ ಎಂದರೆ ಆಡಲಿತದ ಕಾರ್ಯ ಚಟುವಟಿಕೆಗಳಲ್ಲಿ ನಿಷ್ಪಕ್ಷಪಾತವಾಗಿ, ಕರ್ತವ್ಯ ನಿಷ್ಠೆಯಾಗಿ, ಪ್ರಾಮಾಣಿಕವಾಗಿ, ಭ್ರಷ್ಟರಹಿತವಾಗಿ, ಉತ್ತಮ ರೀತಿಯಲ್ಲಿ ನಿರ್ವಹಿಸುವಿಕೆ. ಸಾರ್ವಜನಿಕ ನೀತಿಗಳನ್ನು ಜಾರಿಗೊಲಿಸುವಾಗ ಆಡಳಿತದ ನೈತಿಕ ಮೌಲ್ಯಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ನೈತಿಕತೆ ಇದು ಮೌಲ್ಯಗಳು, ಸತ್ಸಂಪ್ರದಾಯ ನಡವಳಿಕೆ, ಉತ್ತಮಮಟ್ಟ, ಸನ್ನಡತೆ, ಸದಾಚಾರ ಎಂಬ ಪದಗಳಿಗೆ ಸಮಾಂತರವಾಗಿ ಬಳಸಲಾಗುತ್ತದೆ.

ನೈತಿಕತೆಯೊಂದಿಗೆ ಸೇವೆಯನ್ನು ಸಾಮಾಜಿಕ ಜವಾಬ್ದಾರಿ ಎಂತಲೂ ವಿವರಿಸಲಾಗುತ್ತದೆ. ಆಡಳಿತ ಕಾರ್ಯಗಳನ್ನು ನಿರ್ವಹಿಸುವಾಗ ನಾಗರಿಕ ಸೇವಾ ಸಿಬ್ಬಂದಿಯ ನಡತೆ, ವರ್ತನೆ ಮತ್ತು ಆಡಳಿತ ನೀತಿಗಳನ್ನು ಅನುಷ್ಠಾನಗೊಳಿಸಲು ಕೈಗೊಳ್ಳುವ ಸಾಧನಗಳು ಮೌಲ್ಯಯುತವಾಗಿ ಕೂಡಿರಬೇಕು.

ಆಡಳಿತದಲ್ಲಿ ನೈತಿಕತೆಯು ಈ ಕೆಳಗಿನ ವಿಷಯಗಳನ್ನು ಒಳಗೊಂಡಿರುತ್ತದೆ.

* ಮೇಲಿನ ಅಧಿಕಾರಿಗಳು, ಸಹೋದ್ಯೋಗಿಗಳು, ಸಾರ್ವಜನಿಕರೊಡನೆ ಒಳ್ಳೆಯ ನಡವಳಿಕೆ ಹೊಂದಿರಬೇಕು
* ಅಧಿಕಾರಿಗೆ ಸತ್ಯನಿಷ್ಠೆಯ ರಕ್ಷಣೆ ಮಾಡಬೇಕು
* ಅಧಿಕಾರಿಯು ತನ್ನ ಖಾಸಗಿ ಜೀವನದಲ್ಲಿ ಕೆಲವು ಉತ್ತಮ ನೀತಿಗಳನ್ನು ಅನುಸರಿಸಬೇಕು
* ಉದ್ಯೋಗಿಗಳ ರಾಜಕೀಯ ಚಟುವಟಿಕೆಗಳು

**ಆಡಳಿತದಲ್ಲಿ ನೀತಿ ವರ್ತನೆಗೆ ಅಡ್ಡಿಗಳು:**

* ಭ್ರಷ್ಟಾಚಾರ
* ಸ್ವಜನ ಪಕ್ಷಪಾತ
* ಲಂಚ
* ಉದಾಸೀನತೆ
* ರಾಜಕೀಯ ಪ್ರಭಾವ
* ಬಾಹ್ಯ ಒತ್ತಡಗಳು
* ಪಕ್ಷಪಾತತೆ
* ಅಧಿಕಾರದ ದರ್ಪ
* ನಿರಂಕುಶತೆ

**ಆಡಳಿತದಲ್ಲಿ ನೀತಿ ವರ್ತನೆಯು ಈ ಕೆಳಗಿನ ಅಂಶಗಳ ಮೂಲಕ ನಿರ್ಧರಿಸಲಾಗುತ್ತದೆ,**

* ಉನ್ನತ ಅಧಿಕಾರಿಗಳು ಹಾಕಿಕೊಟ್ಟ ಪೂರ್ವ ನಿದರ್ಶನಗಳು, ಸತ್ಸಂಪ್ರದಾಯ ನಡವಳಿಕೆಗಳು
* ನಾಗರಿಕ ಸೇವಾ ಸಿಬ್ಬಂದಿಯ ಮೇಲೆ ಶಿಸ್ತು ಕ್ರಮದ ಪರಿಣಾಮಕತ್ವ
* ಸಮಾಜದಲ್ಲಿ ಅಸ್ತಿತ್ವದಲ್ಲಿರುವ ನೈತಿಕ ಮಟ್ಟ ಮತ್ತು ಮೌಲ್ಯಗಳು
* ಆಡಳಿತಾಧಿಕಾರಿಗಳ ಬಗೆಗೆ ರಾಜಕೀಯ ಮುಖಂಡರು ಹೊಂದಿರುವ ಧೋರಣೆ
* ಆಡಳಿತ ವ್ಯವಸ್ಥೆಯಲ್ಲಿನ ಆಂತರಿಕ ಸಂಬಂಧಗಳು

* ಆಡಳಿತ ವ್ಯವಸ್ಥೆಯಲ್ಲಿನ ಸಂಪರ್ಕ ಮಾದರಿಗಳು
* ಆಡಳಿತಾಧಿಕಾರಿಗಳ ಮೇಲೆ ಸಾರ್ವಜನಿಕರು ತಾಳಿರುವ ಮನೋಭಾವ

**ಉತ್ತಮ ಆಡಳಿತ:**

'ಆಡಳಿತ' ಎಂದರೆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆ ಮತ್ತು ಅದರ ಅನುಷ್ಠಾನ ಅಥವಾ ಅನುಷ್ಠಾನದ ಪ್ರಕ್ರಿಯೆಗಳ ಕುರಿತಾದುದು. ಇನ್ನು 'ಉತ್ತಮ ಆಡಳಿತ' ಎನ್ನುವುದು ಅದಕ್ಷ, ದುರ್ಬಲ ಆಡಳಿತಕ್ಕೆ ಮಾದರಿಯಾಗಿ ಇರುವಂತದು. ಅಭಿವೃದ್ಧಿ ಹೊಂದಿದ ದೇಶಗಳನ್ನು ಉತ್ತಮ ಆಡಳಿತದ ದೇಶಗಳೆಂದು ಗುರುತಿಸಬಹುದು. ಉತ್ತಮ ಆಡಳಿತವೆಂದರೆ ಇದು ಕೇವಲ ಒಂದು ಸರ್ಕಾರಿ ವ್ಯವಸ್ಥೆಗೆ ಮಾತ್ರ ಸೀಮಿತವಲ್ಲ.

ಉತ್ತಮ ಆಡಳಿತದ ವಿಧಾನಗಳನ್ನು ಈ ಕೆಳಗಿನ 4ರಲ್ಲಿ ಪಟ್ಟಿ ಮಾಡಬಹುದು.

1) ಸರ್ಕಾರ ಮತ್ತು ಮಾರುಕಟ್ಟೆ ಮಧ್ಯೆ
2) ಸರ್ಕಾರ ನಾಗರೀಕರ ಮಧ್ಯೆ
3) ಸರ್ಕಾರ ಮತ್ತು ಖಾಸಗಿ ಒಡೆತನದ ನಡುವೆ
4) ಚುನಾಯಿತ ಪ್ರತಿನಿಧಿ ಮತ್ತು ಆಯ್ಕೆಯಾದ ಅಧಿಕಾರಶಾಹಿ ವರ್ಗದ ನಡುವೆ.

**ಯುಎನ್‌ಓ ಗುರುತಿಸಿರುವ 'ಉತ್ತಮ ಆಡಳಿತ'ದ 8 ಲಕ್ಷಣಗಳು:**

1) ಒಮ್ಮತದ ಉದ್ದೇಶದಿಂದ ಕೂಡಿದ
2) ಪಾಲ್ಗೊಳ್ಳುವಿಕೆ
3) ಕಾನೂನಿನ ಆಳ್ವಿಕೆಯನ್ನು ಪಾಲಿಸುವುದು
4) ಪರಿಣಾಮಕಾರಿ ಮತ್ತು ದಕ್ಷತೆಯುಳ್ಳ ಆಡಳಿತ
5) ಹೊಣೆಗಾರಿಕೆಯತ್ತ
6) ಪಾರದರ್ಶಕ
7) ಪ್ರತಿ ಸ್ಪಂದನಾತ್ಮಕ
8) ಸಮಾನಾಂತರ ಮತ್ತು ಒಳಗೊಳ್ಳುವಿಕೆ

ಮಿಲ್ಟನ್ ಎಸ್ಮಾನ್‌ರು ಆಳ್ವಿಕೆ ಎಂಬ ಪದಕ್ಕೆ ಮಾನವೀಯ ಅರ್ಥವನ್ನು ನೀಡುತ್ತದೆ ಎನ್ನುತ್ತಾರೆ. ಅವರ ಪ್ರಕಾರ ಆಳ್ವಿಕೆಯು ಮಾನವ ಹಕ್ಕುಗಳನ್ನು ಮತ್ತು ಆಸ್ತಿ ಹಕ್ಕುಗಳ ರಕ್ಷಣೆ, ಸಾಮಾಜಿಕ ಘರ್ಷಣೆಗಳನ್ನು ಶಮನಗೊಳಿಸಿ ಆ ಮೂಲಕ ರಾಜಕೀಯ ಸ್ಥಿರತೆಯನ್ನು ಸ್ಥಾಪಿಸುವುದು ಮತ್ತು ಬಂಡವಾಳ ಹೂಡಿಕೆ, ಉದ್ಯಮಗಳಿಗೆ ಭದ್ರತೆ ಒದಗಿಸುವುದು ಮೊದಲಾದ ಉತ್ತಮ ಕಾರ್ಯಗಳನ್ನು ನಿರ್ವಹಿಸುವುದಾಗಿದೆ.

ಉತ್ತಮ ಆಳ್ವಿಕೆ ಪರಿಭಾವನೆಯು ಜನಾಧಾರಿತ ಅಥವಾ ಪ್ರಜಾ ಮೈತ್ರಿಯ ಆಳ್ವಿಕೆಯಾಗಿದೆ. ಇದರ ನಿರ್ಧಾರಕ ಅಂಶಗಳೆಂದರೆ ನ್ಯಾಯಬದ್ದ ಅಧಿಕಾರದ ಸೂಕ್ತ ಬಳಕೆ, ವೈಚಾರಿಕತೆ ಆಧರಿತ ಆಡಳಿತಶಾಹಿ, ಸ್ವತಂತ್ರ, ನ್ಯಾಯಾಂಗ ಜನರಿಗೆ ಆಡಳಿತಾಂಗದ ಹೊಣೆಗಾರಿಕೆ ಇತ್ಯಾದಿ.

**ಉತ್ತಮ ಆಡಳಿತದ ತತ್ವಗಳು:**

* ವಿಕೇಂದ್ರೀಕರಣ – ಎಂದರೆ ಜನರಿಗೆ ಅಧಿಕಾರ
* ಅಧಿಕಾರ ಹಂಚಿಕೆ – ಮೇಲಿನಿಂದ ಕೆಳಗೆ
* ಪ್ರಜಾಸತ್ತಾತ್ಮಕಗೊಳಿಸುವುದು
* ಆಡಳಿತಶಾಹಿ ಗಾತ್ರ ಕಡಿಮೆಗೊಳಿಸುವುದು

**ಉತ್ತಮ ಆಳ್ವಿಕೆಯ ಅವಶ್ಯಕತೆ / ಸಮಂಜಸತೆ:**

* ಅಧಿಕಾರ ದುರುಪಯೋಗ ತಡೆಯಲು

* ನಿರಂಕುಶ ನೀತಿ ರಚನೆ ಹೋಗಲಾಡಿಸಲು
* ನೌಕರಶಾಹಿ ಬೇಜವಾಬ್ದಾರಿಯನ್ನು ತಡೆಯಲು
* ವ್ಯಾಪಕ ಭ್ರಷ್ಟಾಚಾರದ ಇಂದಿನ ದುರಾಡಳಿತ ಹೋಗಲಾಡಿಸಲು

**ಉತ್ತಮ ಆಡಳಿತದ ಬಗೆಗೆ ವಿಶ್ವಬ್ಯಾಂಕ್ ಪರಿಕಲ್ಪನೆ:**

ಉತ್ತಮ ಆಡಳಿತವೆಂದರೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಸಂಪನ್ಮೂಲಗಳ ಅಭಿವೃದ್ಧಿಯ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಅಧಿಕಾರ ಚಲಾವಣೆಯ ರೀತಿ, ನೀತಿಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಕಾರ್ಯನಿರ್ವಹಣೆಯಲ್ಲಿ ಸರ್ಕಾರದ ಸಾಮರ್ಥ್ಯ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವುದು, ಮಾಹಿತಿ, ಅಭಿವ್ಯಕ್ತಿ ಸ್ವಾತಂತ್ರ್ಯ, ದಕ್ಷ, ಪರಿಣಾಮಾತ್ಮಕವುಳ್ಳ ವಿಷಯಗಳನ್ನು ಒಳಗೊಂಡ ಆಡಳಿತ ವ್ಯವಸ್ಥೆ ಉತ್ತಮ ಆಡಳಿತವಾಗಿದೆ ಎನ್ನಬಹುದು.

**ಉತ್ತಮ ಆಡಳಿತದ ಲಕ್ಷಣಗಳು:**

* ಉತ್ತಮ ಆಡಳಿತದ ಪೂರ್ವಾವಶ್ಯಕತೆ ಎಂದರೆ ಕಾನೂನು ಅಧಿಪತ್ಯದ ಸ್ಥಾಪನೆ
* ವಿಕೇಂದ್ರೀಕರಣ
* ಸಾರ್ವಜನಿಕ ವ್ಯವಹಾರಗಳಲ್ಲಿ ಪ್ರಾಮಾಣಿಕತೆ
* ಸ್ವಾತಂತ್ರ್ಯ ಮತ್ತು ನಿಷ್ಪಕ್ಷಪಾತ ನ್ಯಾಯಾಂಗ
* ಮಾನವ ಹಕ್ಕುಗಳು
* ಆಡಳಿತದಲ್ಲಿ ಜನರ ಸಹಭಾಗಿತ್ವ
* ಬಹುತ್ವ ಸಮಾಜದಲ್ಲಿ ಸಮಾನತೆಯ ಅಗತ್ಯತೆ

**ಉತ್ತಮ ಆಡಳಿತ ಕಾರ್ಯಕ್ರಮದ ಅಂಶಗಳು:**

* ನಾಗರಿಕ ಜೀವನ ಮಟ್ಟದ ಗುಣಾತ್ಮಕತೆಯನ್ನು ಸುಧಾರಿಸುವುದು
* ಆಡಳಿತದ ದಕ್ಷತೆ ಮತ್ತು ಪರಿಣಾಮಕತ್ವವನ್ನು ಹೆಚ್ಚಿಸುವುದು
* ಆಡಳಿತವನ್ನು ಸಂವೇಧನಾಶೀಲ, ನಾಗರಿಕ ಸ್ನೇಹಿ ಮತ್ತು ನಾಗರಿಕ ಕಾಳಜಿಯಿಂದ ಮಾಡುವುದು
* ಹೊಣೆಗಾರಿಕೆ ನಿಶ್ಚಿತಗೊಳಿಸುವುದು
* ಆಡಳಿತದ ವೆಚ್ಚ ತಗ್ಗಿಸುವುದು
* ಮಾಹಿತಿ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯ
* ಪ್ರತಿ ಇಲಾಖೆ ಫಲಿತಾಂಶ ದೃಷ್ಟಿಕೋನ ಹೊಂದುವಂತೆ ಮಾಡುವುದು
* ಸಾರ್ವಜನಿಕ ಸೇವೆಯ ಗುಣಾತ್ಮಕತೆ ಸಂಪಾದಿಸುವುದು
* ಭ್ರಷ್ಟಾಚಾರ ನಿರ್ಮೂಲನೆ
* ಅಧಿಕಾರ ಚಲಾವಣೆಯಲ್ಲಿ ನಿರಂಕುಶತೆ ಮತ್ತು ದಬ್ಬಾಳಿಕೆ ನಿವಾರಿಸುವುದು.

**ಭಾರತದಲ್ಲಿ ಉತ್ತಮ ಆಡಳಿತ:**

ಮಹಾತ್ಮರ 'ಸ್ವರಾಜ್ಯ' ಕಲ್ಪನೆಯು ಉತ್ತಮ ಆಳ್ವಿಕೆಯ ಕುರಿತಾಗಿಯೇ ವಿವರಿಸುತ್ತದೆ. ಸಂವಿಧಾನದಲ್ಲಿ ನೇರವಾಗಿ ಈ ಪರಿಭಾಷೆ ಇಲ್ಲದೇ ಹೋದರೂ ಪ್ರಸ್ತಾವನೆಯಲ್ಲಿ ಅಂತರ್ಗತವಾಗಿದೆ. ಭಾರತವು ಸಮಾನತೆ, ಸ್ವಾತಂತ್ರ್ಯ ನೀಡುವುದರ ಮೂಲಕ ಉತ್ತಮ ಆಡಳಿತ ತತ್ವಗಳನ್ನು ಅಳವಡಿಸಿಕೊಂಡಿದೆ. ಸಂವಿಧಾನದ 37ನೇ ವಿಧಿಯು ರಾಜ್ಯ ನಿತಿ ನಿರ್ದೇಶಕ ತತ್ವಗಳು ಎಲ್ಲರಿಗೂ ಜೀವ ನಿರ್ವಹಣೆಗೆ ಸಾಕಷ್ಟು ಸಾಧನ ಮತ್ತು ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ. ಸ್ತ್ರೀ ಪುರುಷರ ಮಧ್ಯೆ ಸಮಾನ ಕೆಲಸಕ್ಕೆ ಸಮಾನ ವೇತನ, ಕಾರ್ಮಿಕ ಆರೋಗ್ಯ, ಉದ್ಯೋಗಾವಕಾಶ ದೊರಕಿಸಿಕೊಡುವುದು, ದುರ್ಬಲ ವರ್ಗದವರ ಏಳಿಗೆ ಮುಂತಾದವುಗಳು ಉತ್ತಮ ಆಡಳಿತಕ್ಕೆ ರಹದಾರಿಗಳಾಗಿವೆ.

ಡಿಸೆಂಬರ್ 25ನ್ನು ಕೇಂದ್ರ ಸರ್ಕಾರ ಉತ್ತಮ ಆಡಳಿತ ದಿನವಾಗಿ ಆಚರಿಸಿದೆ. ಅದರ ಪ್ರಯುಕ್ತ ಪ್ರಧಾನಿಯವರು ಪ್ರಚೂರ ಪಡಿಸಿರುವ ಉತ್ತಮ ಆಡಳಿತದ ಅಂಶಗಳು ಇಂತಿವೆ.

* ಪ್ರಗತಿ ಸಾಧಿಸುವುದೇ ಈ ಆಡಳಿತದ ಕೀಲಿಕೈ
* ಕಲ್ಯಾಣ ರಾಜ್ಯ ಸ್ಥಾಪನೆ, ಪಾರದರ್ಶಕತೆ, ಹೊಣೆಯುಕ್ತ ಆಡಳಿತ ನೀಡುವುದೇ ಉತ್ತಮ ಆಡಳಿತದ ಧ್ಯೇಯ
* 'ಪ್ರಜೆಯೇ ಪ್ರಥಮ' ಇದು ಉತ್ತಮ ಆಡಳಿತದ ಮೂಲ ಮಂತ್ರ. ಇದೇ ಗುರಿ, ಇದೇ ತತ್ವ
* ವ್ಯರ್ಥ ಕಾನೂನುಗಳಿಗೆ ಮುಕ್ತಿ
* ಪದ್ಧತಿ, ರೂಢಿ, ನಿಯಮಗಳನ್ನು ನಾಗರಿಕ ಸ್ನೇಹಿಯಾಗಿ ಸರಳಗೊಳಿಸುವಿಕೆ
* ವೇಗದ ಅಭಿವೃದ್ಧಿಯ ಉದ್ದೇಶ ಸಾಧನೆ
* ಸ್ವಂ ದೃಢೀಕರಣಕ್ಕೆ ಅವಕಾಶ, ನಾಗರಿಕನ ಮೇಲೆ ನಂಬಿಕೆ ಮತ್ತು ಹೊಣೆ
* ಕ್ರಿಯಾತ್ಮಕ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ
* ತಾಂತ್ರಿಕತೆಯನ್ನು ಪ್ರಗತಿಗೆ ಸೇತುವೆಯಾಗಿ ಬಳಕೆ
* ತಾಂತ್ರಿಕತೆಯೇ ಸಬಲೀಕರಣದ ಅಸ್ತ್ರ
* ಮರುಸೃಷ್ಟಿಗೆ ಪ್ರೋತ್ಸಾಹ
* ಗ್ರಾಹಕರ / ಸಾರ್ವಜನಿಕರ ಕುಂದುಕೊರತೆಯಲ್ಲಿ ಆದ್ಯತೆ
* ಮುಕ್ತ ಜವಾಬ್ದಾರಿಯುತ ಆಡಳಿತ

ಸಾರ್ವಜನಿಕ ಆಡಳಿತದಲ್ಲಿನ ನೂತನ ಪರಿಭಾಷೆ ಇದಾಗಿದೆ. ಆದರೂ ಮೊದಲಿನಿಂದಲೂ 'ಒಳ್ಳೆಯ ಆಡಳಿತ'ದ ಕುರಿತು ಚಿಂತಕರು ಪ್ರಸ್ತುತಪಡಿಸುತ್ತಾ ಬಂದಿದ್ದಾರೆ.

**ಇ ಸರ್ಕಾರ / ಆಡಳಿತ (ವಿದ್ಯುನ್ಮಾನ ಆಡಳಿತ):**

ಸರ್ಕಾರದ ಎಲ್ಲ ಕಾರ್ಯ ಯೋಜನೆಗಳನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಮಾಹಿತಿ ಮತ್ತು ತಂತ್ರಜ್ಞಾನದ ನೆರವು ಪಡೆದು ಜಾರಿಗೊಳಿಸಲು ಕಂಡುಕೊಂಡಿರುವ ವಿನೂತನ ಪರಿಕಲ್ಪನೆಯೇ 'ಇ ಸರ್ಕಾರ / ಆಡಳಿತ'. ಇ ಸರ್ಕಾರ ಎಂದರೆ ಇಲೆಕ್ಟ್ರಾನಿಕ್ ಸರ್ಕಾರ ಎಂದರ್ಥವಿದೆ. ಇದರ ಉದ್ದೇಶ ಐಸಿಟಿ ಮೂಲಕ ಸರಳತೆ, ನೈತಿಕತೆ, ಹೊಣೆಗಾರಿಕೆಯುಕ್ತ, ಪ್ರತಿಸ್ಪಂದನಾತ್ಮಕ ಮತ್ತು ಪಾರದರ್ಶಕ ಆಡಳಿತ ನೀಡುವುದು.

ಇಲ್ಲಿ ನಾಗರಿಕ, ಉದ್ಯಮ, ಸರ್ಕಾರ ಇತರ ಇಲಾಖೆಗಳ ನಡುವೆ ಎಲ್ಲ ಪ್ರಕ್ರಿಯೆಗಳು, ಮಾಹಿತಿ ಹಂಚಿಕೆ ಐಸಿಟಿಯ ಸಹಾಯದಿಂದ ನಡೆಯುವುದು. ವೇಗದ, ಗರಿಷ್ಠ ದಕ್ಷತೆಯಲ್ಲಿ ನಾಗರಿಕರಿಗೆ ಸೇವೆ ದೊರಕಿಸುವುದು, ಆಂತರಿಕ ದಕ್ಷತೆಯಲ್ಲಿ ಸುಧಾರಣೆ, ವೆಚ್ಚ ತಗ್ಗಿಸುವುದು, ಕಂದಾಯ ಹೆಚ್ಚಿಸುವುದು, ಆಡಳಿತ ಪ್ರಕ್ರಿಯೆಗಳನ್ನು ಪುನರ್ ನಿರ್ಮಿಸುವುದು, ಸೇವಾ ಗುಣಮಟ್ಟ ಸುಧಾರಿಸುವುದು ಇವೇ ಮೊದಲಾದ ಪ್ರಮುಖ ಗುರಿಗಳನ್ನು ಇ ಸರ್ಕಾರ ಹೊಂದಿದೆ.

ವಿಶ್ವ ಬ್ಯಾಂಕ್ ವಿವರಿಸಿರುವಂತೆ ಇ ಸರ್ಕಾರ ಎಂದರೆ ಸರ್ಕಾರದ ಸಂಸ್ಥೆಗಳಿಂದ ಐಸಿಟಿ (ಅಂತರ್ಜಾಲ, ಮೊಬೈಲ್, ಕಂಪ್ಯೂಟಿಂಗ್)ಯನ್ನು ಬಳಸಿ, ಸರ್ಕಾರದ ಎಲ್ಲ ವ್ಯವಸ್ಥೆಗಳನ್ನು ಉದ್ದಿಮೆಗಳನ್ನು, ಸಾರ್ವಜನಿಕರೊಂದಿಗಿನ ಸಂಬಂಧವನ್ನು ಪರಿವರ್ತಿಸಿಕೊಳ್ಳುವುದು.

ಈ ತಾಂತ್ರಿಕತೆಯಿಂದ ಹಲವಾರು ಪ್ರಯೋಜನಗಳಿವೆ ಎಂದಿದೆ.

* ನಾಗರಿಕರಿಗೆ ಅತ್ಯುತ್ತಮ ಸೇವೆ ಸಲ್ಲಿಕೆ
* ಉದ್ಯಮ, ಕೈಗಾರಿಕೆಗಳೊಂದಿಗೆ ಉನ್ನತೀಕರಿಸಿದ ಸಂವಾದ
* ಮಾಹಿತಿ ಪೂರೈಕೆಯ ಮೂಲಕ ನಾಗರೀಕರನ್ನು ಸಬಲೀಕರಣಗೊಳಿಸುವುದು
* ಅತ್ಯಂತ ದಕ್ಷವಾದ ಸರ್ಕಾರದ ಆಡಳಿತದ ನಿರ್ವಹಣೆ

* ಕಡಿಮೆ ಭ್ರಷ್ಟಾಚಾರ, ಹೆಚ್ಚಿನ ಪಾರದರ್ಶಕತೆ
* ಅತ್ಯುತ್ತಮ ಅನುಕೂಲಕರ ವಾತಾವರಣ
* ಕಂದಾಯದಲ್ಲಿ ಹೆಚ್ಚಳ, ವೆಚ್ಚ ಕಡಿತ

**ಇ–ಆಡಳಿತ:**

* ಸುಲಭವಾಗಿ ಏಕ ಗವಾಕ್ಷಿಯಲ್ಲಿ ಸೇವೆ ಲಭ್ಯ
* ಸ್ವಯಂಚಾಲಿತದಿಂದ ಕುಶಾಗ್ರಮತಿ ಕಾರ್ಯ
* ಜಾಲದ ಜೋಡಣೆಯಿಂದ ಹೆಚ್ಚಿನ ದಕ್ಷತೆ
* ಹೆಚ್ಚಿನ ಹೊಣೆಗಾರಿಕೆ
* ಸೇವೆಯ ಒದಗಿಸುವ ವೆಚ್ಚ ಸಹಿತ
* ಹೆಚ್ಚಿದ ಪಾರದರ್ಶಕತೆ
* ಹೆಚ್ಚಿನ ಸಾರ್ವಜನಿಕರಿಗೆ ಮಾಹಿತಿ ಲಭ್ಯತೆ
* ಭ್ರಷ್ಟಾಚಾರ ಕಡಿತ

ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಪ್ರಕಾರ, 'ಪಾರದರ್ಶಕ ಈ ಆಡಳಿತ (ಚತುರ)ವು ತಡೆಯಿಲ್ಲದ ಪ್ರವೇಶ, ಸುರಕ್ಷಿತ, ಅಧಿಕೃತ (ವಿಶ್ವಾಸಾಹ್) ಮಾಹಿತಿಯು ಯಾವುದೇ ಅಂತರ್ ಇಲಾಖೆಯ ತೊಂದರೆಗಳಿಲ್ಲದೆ, ಉತ್ತಮ (ನಿಷ್ಪಕ್ಷಪಾತದಿಂದ) ಪೂರ್ವಾಗ್ರಹವಿಲ್ಲದ ಸೇವೆಯನ್ನು ಜನರಿಗೆ ಮುಟ್ಟಿಸುವುದಾಗಿದೆ.'

**ಭಾರತದಲ್ಲಿ 'ಇ–ಆಡಳಿತ':**

1970ರಲ್ಲಿ ಮೊದಲು ಸರ್ಕಾರದ ಅಂತರ್ ಇಲಾಖೆಯ ರಕ್ಷಣೆ, ಆರ್ಥಿಕ ಮೇಲ್ವಿಚಾರಣೆ, ಯೋಜನೆ, ಚುನಾವಣೆ, ಜನಗಣತಿ, ತೆರಿಗೆ ಆಡಳಿತದ ಅಂಕಿಅಂಶ ಮುಂತಾದವಲ್ಲಿ ಮಾತ್ರ ಬಳಸಲಾಗಿತ್ತು. 1980ರಲ್ಲಿ ಎನ್ಐಸಿಯ ಪ್ರಯತ್ನದ ಫಲವಾಗಿ ಎಲ್ಲಾ ಜಿಲ್ಲಾ ಕೇಂದ್ರ ಕಾರ್ಯಾಲಯಗಳನ್ನು 'ಇ–ಆಡಳಿತ'ಕ್ಕೆ ಒಳಪಡಿಸಿತು. 1990ರ ದಶಕದಲ್ಲಿ ಎನ್‌ಜಿಓ, ಖಾಸಗಿ ರಂಗವನ್ನು ಒಳಗೊಳ್ಳುವ ಮೂಲಕ ದೇಶದ ಮೂಲೆ ಮೂಲೆಗೂ ಇ–ಆಡಳಿತ ತಲುಪಿಸಲು ಆರಂಭವಾಯಿತು.

**ಇ–ಆಡಳಿತದ ಹಂತಗಳು:**

ಇದು ಮೂಲತಃ ಕಂಪ್ಯೂಟರ್‌ಗಳ ಅಭಿವೃದ್ಧಿಯ ಮೇಲೆ ನಿರ್ಧರಿತವಾಗಿದೆ. ಆದರೂ ಇದರಲ್ಲಿ 4 ಹಂತಗಳನ್ನು ಗುರುತಿಸಬಹುದು.

1) ಗಣಕೀಕರಣ

2) ಜಾಲವಾಗಿಸುವಿಕೆ

3) ಆನ್‌ಲೈನ್ ತರುವಿಕೆ

4) ಪಾರಸ್ಪರಿಕ

**ಇ ಆಡಳಿತ ಜಡವಾಗಿ ಮುಂದುವರೆಯಲು ಕಾರಣಗಳು:**

* ಇ ಆಡಳಿತದ ಲಾಭಗಳು ಐಟಿ ಕುರಿತಾದ ಅನಕ್ಷರತೆ ಮತ್ತು ಅರಿವಿನ ಕೊರತೆ
* ಪ್ರಸ್ತುತ ಇರುವ ಐಸಿಟಿಯ ಮೂಲಸೌಕರ್ಯಗಳ ಅರೆ ಬರೆ (ಅಸಮರ್ಪಕ ಬಳಕೆ)
* ಸರ್ಕಾರಿ ಇಲಾಖೆಗಳ ಜಡ ಮನೋವೃತ್ತಿಗಳು
* ಸರ್ಕಾರ ಇಲಾಖೆಗಳು ಮತ್ತು ಪರಿಹಾರದ ಅಭಿವೃದ್ಧಿಗಾರರ ನಡುವಿನ ಸಮನ್ವಯತೆ ಕೊರತೆ
* ಇಲಾಖಾ ಪ್ರಕ್ರಿಯೆಗಳನ್ನು ಪುನರ್ ನವೀಕರಿಸಲು ಇರುವ ಪ್ರತಿರೋಧಗಳು
* ರಾಷ್ಟ್ರೀಯ ಮಟ್ಟದಲ್ಲಿ ಸುಸ್ಥಿರವಾದ ಇ ಆಡಳಿತ ಜಾರಿಗೊಳಿಸಲು ಅಗತ್ಯವಿರುವ ಮೂಲ ಸೌಕರ್ಯಗಳ ಕೊರತೆ.

ಇದಕ್ಕೆ ಪರಿಹಾರಾರ್ಥಕವಾಗಿ ರಾಜ್ಯಗಳು ಐಟಿ ನೀತಿ ಜಾರಿಗೆ ಐಟಿ ಟಾಸ್ಕ್ ಫೋರ್ಸ್‌ಗಳನ್ನು ಜಾರಿಗೆ ತಂದಿವೆ.

**ಇ ಆಡಳಿತದ ಕ್ರಿಯಾ ಯೋಜನೆಯ ಅಂಶಗಳು:**

* ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು
* ಸರ್ಕಾರಿ ನೌಕರರು ಸಕ್ರೀಯರಾಗುವಂತೆ ತರಬೇತಿ ನೀಡುವುದು
* ಸೇವೆಗಳನ್ನು ಪರಿಣಾಮಕಾರಿಯಾಗಿ ತರುವುದು
* ಹೊಣೆಗಾರಿಕೆ ಮತ್ತು ಗುಣಮಟ್ಟದ ಕೆಲಸದ ಅಳತೆ

**ಇ ಆಡಳಿತದ ಉದಾಹರಣೆಗಳು:**

* ಎಂವೈಜಿಓವಿಟಿ.ಐಎನ್
* ಭೂಮಿ
* ಖಜಾನೆ
* ಕಾವೇರಿ
* ಮೊಬೈಲ್ ಒನ್
* ಕರ್ನಾಟಕ ಒನ್
* ಬೆಂಗಳೂರು ಒನ್ ಇತ್ಯಾದಿ

**ಇ ಆಡಳಿತದ ಸುರಕ್ಷಾ ಅನಾನುಕೂಲತೆಗಳು ಅಥವಾ ಸುರಕ್ಷತೆಗೆ ಸಂಬಂಧಿಸಿದ ನ್ಯೂನತೆಗಳು:**

* ವಿಷಯ ಕದಿಯುವಿಕೆ
* ಇ ಆಡಳಿತದ ಸಿಸ್ಟಂನ್ನು ಹಾಳುಗೆಡಿಸುವಿಕೆ
* ಮಾಹಿತಿಯನ್ನು ಸುಲಭವಾಗಿ ಹೊರಹಾಕುವ ದೌರ್ಬಲ್ಯ
* ಸೇವೆ ತಿರಸ್ಕರಿಸುವಿಕೆ
* ಸೌಕರ್ಯ ಮೇಲೆತ್ತುವಿಕೆ ಮತ್ತು ದುರ್ಬಳಕೆ
* ಸೈಬರ್ ಅಪರಾಧಗಳು

**ಯಶಸ್ವಿ ಇ ಆಡಳಿತಕ್ಕೆ ಬೇಕಾದ ಅಗತ್ಯತೆಗಳು:**

* ಅಗತ್ಯ ಬ್ಯಾಂಡ್–ವಿಡ್ತ್ ಒದಗಿಸುವಿಕೆ
* ಪ್ರಾದೇಶಿಕ ಭಾಷೆಯ ಮೂಲಕ ದೇಶದ ಪ್ರತಿ ಮೂಲೆಗೂ ಸಂಪರ್ಕ ಕಲ್ಪಿಸುವ ಮೂಲಕ
* ಅತ್ಯಂತ ಸುರಕ್ಷಿತವಾಗಿ ಮಾಹಿತಿಯನ್ನು (ಅಗತ್ಯವಾದ ವಿಶೇಷ ಸುರಕ್ಷತೆಗಳೊಂದಿಗೆ) ಒದಗಿಸುವಿಕೆ
* ರಕ್ಷಿತ ಸ್ಥಾಪನೆಯೊಂದಿಗೆ ದೇಶದ ಮೂಲೆ ಮೂಲೆ ತಲುಪುವುದು
* ವಿಶ್ವಾಸಾರ್ಹವಾದ ರಾಜ್ಯ, ರಾಷ್ಟ್ರದ ದತ್ತಾಂಶಗಳ ಸಂಗ್ರಹಣೆಯನ್ನು ಸುರಕ್ಷಿತವಾಗಿ ಇಡುವುದು. 'ದತ್ತಾಂಶ ಕೇಂದ್ರ'ಗಳನ್ನು ನಿರ್ವಹಿಸುವಿಕೆ.

ಈ ಎಲ್ಲಾ ಸಾಧಕ ಬಾಧಕಗಳ ನಡುವೆಯೂ ಇ ಆಡಳಿತ ಇಂದಿನ ಅತೀ ಅಗತ್ಯತೆಗಳಲ್ಲಿ ಒಂದಾಗಿವೆ. ಇ ಆಡಳಿತ ಮುಂದಿನ ತಲೆಮಾರಿಗೆ, ಮಾದರಿಯಾದ ಹೊಸ ವಿಧಾನವಾಗಿದೆ. ಇದು ಅನುಷ್ಠಾನದಲ್ಲಿ ಶ್ರೇಷ್ಠತೆಯನ್ನು ಸಾಧಿಸಬೇಕಾಗಿದೆ.

## ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರದ ಅನುಕೂಲಗಳು:

* ಒಂದು ಯೋಜನೆಯನ್ನು ಕಾರ್ಯಗತಗೊಳಿಸಲು ಕೆಲಸದ ಮತ್ತು ಯೋಜನೆಗಳ ಅಂಶಗಳ ಕುರಿತು ಸುವ್ಯವಸ್ಥಿತವಾಗಿ ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರ ಪ್ರಕ್ರಿಯೆಯು ವಿಶ್ಲೇಷಿಸುತ್ತದೆ.

* ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರ ಪ್ರಕ್ರಿಯೆಯು ಸಂಕೀರ್ಣವಾದ ವಿಷಯವನ್ನು ಗುರುತಿಸುವಂತೆ ಮತ್ತು ಗೋಚರಿಸುವಂತೆ ಮಾಡುತ್ತದೆ.
* ಯೋಜನೆಯನ್ನು ಪ್ರಾರಂಭಿಸುವ ಮತ್ತು ತಡವಾಗಿ ಪ್ರಾರಂಭಿಸುವುದರ ಕುರಿತು ಮತ್ತು ಪ್ರತಿಯೊಂದು ಚಟುವಟಿಕೆಯ ಕುರಿತು ವಿಶ್ಲೇಷಿಸುತ್ತದೆ.
* ಯೋಜನೆಯ ಕುರಿತ ಒಳ್ಳೆಯ ತಿಳುವಳಿಕೆಯನ್ನು ಪ್ರಕ್ರಿಯೆಯನ್ನು ನೀಡುತ್ತವೆ.
* ಅತಿಕ್ರಮಿಸುವ, ತಡವಾಗುವ, ವಿಳಂಬವಾಗುವ ಮತ್ತು ವಿಫಲವಾಗುವುದನ್ನು ತಡೆಯುತ್ತವೆ.
* ತೀರ್ಮಾನ ಕೈಗೊಳ್ಳುವಲ್ಲಿ ದೊಡ್ಡ ಪ್ರಮಾಣದ ಅಂಕಿಅಂಶಗಳನ್ನು ಮತ್ತು ರೇಖಾ ನಕ್ಷೆಗಳನ್ನು ನೀಡುವುದು ಸಾಧ್ಯವಾಗುತ್ತದೆ.
* ಯೋಜನೆಯನ್ನು ನಿಗಧಿಪಡಿಸಿದ ಸಮಯವನ್ನು ಮೊದಲೇ ಮುಗಿಸಲು ಅನುಕೂಲಕರವಾದ ಪ್ರಕ್ರಿಯೆ ಆಗಿದೆ.

**ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕ ತಂತ್ರದ ಅನಾನುಕೂಲತೆಗಳು:**

ಚಿಕ್ಕ ಯೋಜನೆಗಳಿಗೆ ಇದು ಸೂಕ್ತವಾಗಿರುವುದಿಲ್ಲ. ಯೋಜನಾ ಮೌಲ್ಯಮಾಪನ ಮತ್ತು ಪುನರಾವಲೋಕನ ತಂತ್ರ, ರೇಖಾ ನಕ್ಷೆಗಳು ಅತಿ ದೊಡ್ಡದಾಗಿದ್ದು, ಇವುಗಳ ರಚನೆಗೆ ಸಮಯಾವಾಕಾಶ ಬೇಕು. ಮತ್ತು ಈ ರೇಖಾ ಚಿತ್ರಗಳ ಪ್ರಿಂಟ್ ತೆಗೆಯಲು ವಿಶೇಷ ಗಾತ್ರದ ಹಾಳೆಯು ಬೇಕಾಗುತ್ತದೆ.

**ಲೋಕಪಾಲ:**

ಇದು ಒಂಬಡ್ಸ್‌ಮನ್ ಪದಕ್ಕೆ ಪರ್ಯಾಯ ಪದವಾಗಿದೆ. ಭಾರತದಲ್ಲಿ 2013ರಲ್ಲಿ 'ಲೋಕಪಾಲ ಮತ್ತು ಲೋಕಾಯುಕ್ತ' ಕಾಯಿದೆಯಾಗಿ ಜಾರಿಗೆ ಬಂದಿತು. 1963ರಲ್ಲಿ ಡಾ.ಎಂ.ಎಂ.ಸಿಂಗ್ವಿ ಅವರಿಂದ ಪ್ರಥಮ ಬಾರಿಗೆ ಈ ಪದದ ಪ್ರಯೋಗವಾಯಿತು. ಲೋಕಪಾಲ ಪರಿಚಯವಾಗಿ 52 ವರ್ಷದ ಬಳಿಕ ಕಾನೂನಾಗಿ ಭಾರತದಲ್ಲಿ ಜಾರಿಗೆ ಬಂದಿದೆ.

**ಕಾಯ್ದೆಯ ಪ್ರಮುಖ ಅಂಶಗಳು:**

* ಪ್ರಧಾನಿಯನ್ನು ಕೆಲವು ವಿನಾಯತಿಗೊಳಪಟ್ಟ ಕಾಯ್ದೆಯ ಅಡಿಯಲ್ಲಿ ತರಲಾಗಿದೆ
* ಒಬ್ಬ ಲೋಕಪಾಲ ಮತ್ತು ಗರಿಷ್ಠ 8 ಸದಸ್ಯರಿಂದ ಕೂಡಿದ ಸಂಸ್ಥೆಯ ರಚನೆ
* ಸದಸ್ಯರಲ್ಲಿ 50% ನ್ಯಾಯಾಲಯ ಹಿನ್ನೆಲೆಯವರು, ಉಳಿದ 50%ರಷ್ಟು ಎಸ್ಸಿ, ಎಸ್ಟಿ, ಓಬಿಸಿ, ಅಲ್ಪಸಂಖ್ಯಾತರ ಮತ್ತು ಮಹಿಳೆಯರು
* ಲೋಕಪಾಲ್‌ರನ್ನು ಪ್ರಧಾನಿ, ಎಲ್.ಸಿ.ಸಭಾಪತಿ, ಲೋಕಸಭಾ ವಿರೋಧ ಪಕ್ಷದ ನಾಯಕರು, ಸಿಜೆಐ ನ್ಯಾಯಾಧೀಶರು, ಸಿಜೆಐಯಿಂದ ನೇಮಕಗೊಳ್ಳುತ್ತಾರೆ
* ಎಲ್ಲ ವಿಧದ ಸರ್ಕಾರಿ ಸೇವಕರು ಇದರಲ್ಲಿ ಬರುವರು
* ವಿದೇಶದಿಂದ 10 ಲಕ್ಷಕ್ಕಿಂತ ಅಧಿಕ ದೇಣಿಗೆ ಪಡೆಯುವ ಎನ್‌ಜಿಓಗಳು ಲೋಕಪಾಲ್ ವ್ಯಾಪ್ತಿಗೆ ಬರುತ್ತವೆ
* ಸಿಬಿಐ ಒಳಗೊಂಡಂತೆ ಎಲ್ಲ ತನಿಖಾ ಇಲಾಖೆಗಳ ನೇತೃತ್ವ, ಅಧೀಕ್ಷಣೆ, ನಿರ್ದೇಶಕರ ಅಧಿಕಾರ ವ್ಯಾಪ್ತಿಯಲ್ಲಿ ಡಿಫೆನ್ಸ್ ಆಫ್ ಪ್ರೋಸಿಕ್ಯೂಶನ್. ಈ ಮೊದಲು ಕಾನೂನು ಮಂತ್ರಿಯ ಅಧೀನದಲ್ಲಿದ್ದರು
* ಲೋಕಪಾಲರಿಂದ ವಹಿಸಿದ ತನಿಖೆಯನ್ನು ನಡೆಸುತ್ತಿರುವ ಸಿಬಿಐ ಅಧಿಕಾರಗಳ ವರ್ಗವನ್ನು ಲೋಕಪಾಲರ ಅನುಮತಿ ಇಲ್ಲದೆ ಮಾಡುವಂತಿಲ್ಲ
* ಕಾನೂನು ಕ್ರಮ ಜರುಗಿಸುವ ಪ್ರಕ್ರಿಯೆಯು ಚಾಲ್ತಿ ಇದ್ದಾಗಲೇ ಆರೋಪಿಯ ಎಲ್ಲ ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ
* ವಿಚಾರಣೆ, ತನಿಖೆಗೆ, ಸಮಯದ ನಿಗದಿ

* ಸಾರ್ವಜನಿಕ ಸೇವಕರ ವಿರುದ್ಧ ನೇರವಾಗಿ ಕಾನೂನು ಕ್ರಮ ಜರುಗಿಸಲು ಅಧಿಕಾರ
* ಲೋಕಾಯುಕ್ತದಿಂದ ಅನುಮತಿ ಪಡೆದು ಸಿಬಿಐ ವಕೀಲರನ್ನು ನೇಮಿಸಿಕೊಳ್ಳಬಹುದು.

**ನಾಗರಿಕ ಕುಂದುಕೊರತೆಗಳ ನಿವಾರಣೆ:**

ನಾಗರಿಕ ಕುಂದು ಕೊರತೆಗಳ ನಿವಾರಣೆಯ ಸಾಧನೋಪಾಯಗಳು ಈ ಕೆಳಕಂಡಂತಿವೆ.

1) ಆಡಳಿತಾತ್ಮಕ: ಅಧಿಕಾರ ವ್ಯಾಪ್ತಿ ಮೀರಿದ ಅಧಿಕಾರದ ಬಳಕೆ ಅಥವಾ ಅಧಿಕಾರದ ದುರುಪಯೋಗದ ವಿರುದ್ಧ ಆಡಳಿತಾತ್ಮಕ ಪರಿಹಾರ ಮತ್ತು ಭ್ರಷ್ಟಾಚಾರದ ವಿರುದ್ಧ ತನಿಖೆ ಮಾಡಲು ಕೇಂದ್ರ ತನಿಖಾ ಮಂಡಳಿಯ ನೇಮಕ ಮಾಡುವುದು.
2) ಶಾಸನೀಯ: ವಿಭಿನ್ನ ಸಂಸದೀಯ ಸಾಧನಗಳು, ಸಂಸತ್ ಸಮಿತಿಯನ್ನು ಒಳಗೊಂಡಿದೆ. ಈ ಸಾಧನಗಳ ಮೂಲಕ ಕಾರ್ಯಾಂಗದ ಕಾರ್ಯ ವೈಖರಿಯ ವಿಮರ್ಶೆಯು ಸಂಸತ್ತಿನಲ್ಲಿ ನಡೆಯುತ್ತದೆ. ಪ್ರಶ್ನೋತ್ತರ ವೇಳೆ, ಶೂನ್ಯ ವೇಳೆಯಲ್ಲಿ ಸರ್ಕಾರದಿಂದ ಅಗತ್ಯ ಮಾಹಿತಿ ಪಡೆಯಲಾಗುತ್ತದೆ. ನಿಲುವಳಿ ಸೂಚನೆಗಳು ಮತ್ತು ಗೊತ್ತುವಳಿ ಮೂಲಕ ಸರ್ಕಾರದ ನೀತಿಯನ್ನು ಟೀಕಿಸಲಾಗುತ್ತದೆ. ಸಂಸದೀಯ ಸಮಿತಿಗಳಾದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ, ಅಂದಾಜು ಸಮಿತಿ, ಸಾರ್ವಜನಿಕ ಉದ್ಯಮಗಳ ಮೇಲಿನ ಸಮಿತಿ ಮುಂತಾದವುಗಳು ನಾಗರಿಕ ಕುಂದು ಕೊರತೆಗಳನ್ನು ನಿವಾರಿಸುತ್ತದೆ.
3) ನ್ಯಾಯಿಕ: ಸರ್ಕಾರದ ಆದೇಶವನ್ನು ಅನೂರ್ಜಿತಗೊಳಿಸುವಂತೆ ಕೋರಿ ಅವರ ವಿರುದ್ಧ ದಾವೆ ಹೂಡುವುದು, ಸರ್ಕಾರದ ಅನುಮತಿ ಪಡೆದು ತಪ್ಪೆಸಗಿದ ಅಧಿಕಾರಿಯ ವಿರುದ್ಧ ಕ್ರಮ ಜರುಗಿಸುವುದು, ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯಗಳ ರಿಟ್ ಅಥವಾ ಆದೇಶ ಹೊರಡಿಸುವ ಅಧಿಕಾರ, ಕ್ಷೇತ್ರಗಳು ಸರ್ಕಾರದ ಆದೇಶಗಳು ಸಂವಿಧಾನ ಬಾಹಿರವಾಗಿದ್ದರೆ ಅನೂರ್ಜಿತಗೊಳಿಸುವ ಅಧಿಕಾರ ಹೊಂದಿದೆ ಮತ್ತು ವಿಶೇಷ ವರ್ಗಗಳಿಗೆ ಸೇರಿದ ಜನರ ಕುಂದು ಕೊರತೆಗಳನ್ನು ಪರಿಹರಿಸಲು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿದೆ.
4) ಸರ್ಕಾರ ಕಾಲಕಾಲಕ್ಕೆ ನೇಮಿಸುವ ಸಮಿತಿಗಳು, ಆಯೋಗಗಗಳು.
5) ಲೋಕಪಾಲ ಮತ್ತು ಲೋಕಾಯುಕ್ತ.
6) ಗ್ರಾಹಕರ ನ್ಯಾಯಾಲಯಗಳು / ವೇದಿಕೆಗಳು.

**ಜಿಲ್ಲಾ ಆಡಳಿತ:**

ಭಾರತದಲ್ಲಿ ಜಿಲ್ಲೆಯ ಆಡಳಿತ ಒಂದು ಪ್ರಮುಖ ಘಟಕವಾಗಿದೆ. ಇದು ಕ್ಷೇತ್ರಾಡಳಿತದ ಕೇಂದ್ರ ಬಿಂದುವಾಗಿದೆ. ವಿಶೇಷ ಅಡಳಿತಾತ್ಮಕ ಉದ್ದೇಶಗಳಿಗೆ ಗುರುತಿಸಲ್ಪಟ್ಟ ಒಂದು ಪ್ರದೇಶವೇ ಜಿಲ್ಲೆ ಮತ್ತು ಒಂದು ಜಿಲ್ಲೆಯ ಪ್ರಾದೇಶಿಕ ಎಲ್ಲೆಯೊಳಗೆ ಕಾರ್ಯ ನಿರ್ವಹಿಸುವ ಸಾರ್ವಜನಿಕ ಆಡಳಿತದ ಭಾಗವೇ ಜಿಲ್ಲಾಡಳಿತ.

ಭಾರತದಲ್ಲಿ 'ಜಿಲ್ಲಾ ಆಡಳಿತ' ಮತ್ತು ಜಿಲ್ಲಾಧಿಕಾರಿಯ ಹುದ್ದೆಯು ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿತು. 1772ರಲ್ಲಿ ಗವರ್ನರ್ ಜನರಲ್ ವಾರೆನ್ ಹೆಸ್ಟಿಂಗ್ಸ್ ಪ್ರಾರಂಭಿಸಿದರು. ರಾಜ್ಯದ ಆಡಳಿತಾತ್ಮಕ ವಿವಿಧ ಅಂಶಗಳು ಜಿಲ್ಲಾ ಮಟ್ಟದಲ್ಲಿ ಸ್ಥಾಪನೆಯಾಗಿರುತ್ತವೆ. ಕಾನೂನು ಪರಿಪಾಲನೆ, ಆಡಳಿತ ವ್ಯವಸ್ಥೆ, ಅಭಿವೃದ್ಧಿ ದೃಷ್ಟಿಯಿಂದ ಜಿಲ್ಲಾಡಳಿತ ಪ್ರಮುಖ ಪಾತ್ರ ವಹಿಸುತ್ತದೆ.

ಪ್ರಮುಖ ಕಛೇರಿಗಳಾದ ಕಂದಾಯ, ನಾಗರಿಕ ನ್ಯಾಯ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ಆರಕ್ಷಕ ಗೃಹ, ಅಬಕಾರಿ ಮತ್ತು ತೆರಿಗೆ, ವಿದ್ಯುತ್, ಕೃಷಿ ಮುಂತಾದವುಗಳ ಕಾರ್ಯಕ್ಷೇತ್ರ ಜಿಲ್ಲೆಯೇ ಆಗಿದೆ.

**ಜಿಲ್ಲಾಡಳಿತ ನಿರ್ವಹಿಸುವ ವಿವಿಧ ಬಗೆಯ ಕಾರ್ಯಗಳು:**

* ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು
* ಸಾರ್ವಜನಿಕರಿಗೆ ಭದ್ರತೆ ಒದಗಿಸುವುದು
* ಅಪರಾಧಗಳ ನಿಯಂತ್ರಣ, ಕಂದಾಯ ವಸೂಲಿ, ಆಹಾರ ಮತ್ತು ನಾಗರಿಕ ಸರಬರಾಜು ವಿತರಣೆಯ ನಿರ್ವಹಣೆ

* ಜಿಲ್ಲಾಡಳಿತ ಕೆಲವು ಅಭಿವೃದ್ಧಿ ಕಾರ್ಯ, ಕೃಷಿ, ಉತ್ಪನ್ನ, ಸಹಕಾರ, ಪಶುಸಂಗೋಪನೆ, ಮೀನುಗಾರಿಕೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮುಂತಾದವುಗಳಿಗೆ ಸಂಬಂಧಿತ ಅಭಿವೃದ್ಧಿ ಕಾರ್ಯಗಳು
* ಪ್ರವಾಹ, ಕ್ಷಾಮ, ಭೂಕಂಪ ನಾಗರಿಕ ರಕ್ಷಣೆ
* ಸಂಸತ್ತು, ರಾಜ್ಯ ಶಾಸಕಾಂಗ, ಸ್ಥಳೀಯ ಸಂಸ್ಥೆಗಳ ಚುನಾವಣೆ.

**ಜಿಲ್ಲಾಧಿಕಾರಿ ಪಾತ್ರ, ಅಧಿಕಾರ ಮತ್ತು ಕಾರ್ಯಗಳು:**

* ಜಿಲ್ಲೆಯ ಆಡಳಿತದ ಮುಖ್ಯಸ್ಥ
* ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಜಿಲ್ಲಾಧಿಕಾರಿಯನ್ನು ಲಿಟಲ್ ನೆಪೋಲಿಯನ್ ಎಂದು ಬಣ್ಣಿಸಲಾಗುತ್ತಿತ್ತು. ಆದರೆ ಈಗ ಜಿಲ್ಲಾಧಿಕಾರಿಯ ಕಾರ್ಯ ವೈಖರಿಯು ಅಭಿವೃದ್ಧಿ ಪರವಾದುದಾಗಿದೆ. ಕಲ್ಯಾಣ ರಾಜ್ಯ ನಿರ್ಮಾಣದತ್ತ ಜಿಲ್ಲಾಧಿಕಾರಿಯ ಕಾರ್ಯವು ಚಲಿಸುತ್ತಿದೆ
* ಜಿಲ್ಲಾಧಿಕಾರಿಯು ಜಿಲ್ಲೆಯ ಸಮಗ್ರ ಆಡಳಿತದ ಬೆನ್ನೆಲುಬು, ಆತ ಗೊತ್ತುಪಡಿಸಿದ ಕಾರ್ಯಗಳಿಗಿಂತ ಗೊತ್ತುಪಡಿಸದೇ ಇರುವ ಕಾರ್ಯಗಳನ್ನು ಹೆಚ್ಚು ನಿರ್ವಹಿಸುತ್ತಾನೆ. ಇವರು ಬಹು ವಿಧದ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ.
* ಜಿಲ್ಲಾಧಿಕಾರಿಯ ಕಾರ್ಯಗಳು
  – ಕಂದಾಯ ಸಂಗ್ರಹಣೆ
  – ನ್ಯಾಯಿಕ ಕಾರ್ಯಗಳು
  – ಅಭಿವೃದ್ಧಿಪರವಾದ ಯೋಜನೆಗಳು
  – ಸಂಯೋಜನೆ
  – ಸಾರ್ವಜನಿಕ ಸಂಬಂಧಗಳ ಕಾರ್ಯಗಳು

**ಪಂಚಾಯತ್ ರಾಜ್:**

ಪಂಚಾಯತಿ ರಾಜ್ಯ ವ್ಯವಸ್ಥೆಯು ಅಧಿಕಾರ ಮತ್ತು ಆಡಳಿತ ವಿಕೇಂದ್ರೀಕರಣದ ಉಜ್ವಲ ಮಾದರಿಯಾಗಿದೆ. 1952ರಲ್ಲಿ ಜಾರಿಯಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, 1953ರಲ್ಲಿ ಜಾರಿಯಾದ ರಾಷ್ಟ್ರೀಯ ವಿಸ್ತರಣಾ ಸೇವೆಗಳ ಫಲಿತಾಂಶವನ್ನು ಅಧ್ಯಯನ ಮಾಡಲು ಬಲವಂತ್ ರಾಯ್ ಮೆಹ್ತಾ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. 1959ರಲ್ಲಿ ಈ ಸಮಿತಿಯು ತನ್ನ ವರದಿಯನ್ನು ನೀಡಿತು.

**ಪ್ರಮುಖ ಶಿಫಾರಸ್ಸುಗಳು:**

* ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯ ರಚನೆ.

– ಗ್ರಾಮ ಪಂಚಾಯತಿ

– ತಾಲ್ಲೂಕು ಪಂಚಾಯತಿ

– ಜಿಲ್ಲಾ ಪರಿಷತ್ತು

* ಅಧಿಕಾರ ಮತ್ತು ಜವಾಬ್ದಾರಿಗಳನ್ನು ಈ ಸಂಸ್ಥೆಗಳಿಗೆ ವರ್ಗಾವಣೆ ಮಾಡುವುದು.
* ಸಂಪನ್ಮೂಲಗಳನ್ನು ಒದಗಿಸುವುದು.

**ಅಶೋಕ ಮೆಹ್ತಾ ಸಮಿತಿ:**

ಈ ಸಮಿತಿಯು 1973ರಲ್ಲಿ ನೇಮಕವಾಗಿ 1979ರಲ್ಲಿ ವರದಿ ಸಲ್ಲಿಸಿತು.

ಸಮಿತಿಯ ಪ್ರಮುಖ ಶಿಫಾರಸ್ಸುಗಳು,

* ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಇರಬೇಕು. ಅವುಗಳು ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್.

* ರಾಜಕೀಯ ಪಕ್ಷಗಳು ಭಾಗವಹಿಸಲು ಅವಕಾಶ ನೀಡುವುದು.
* ಎಸ್ಸಿ, ಎಸ್ಟಿ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ನೀಡುವುದು.
* ಜಿಲ್ಲಾ ಪರಿಷತ್ತಿನಲ್ಲಿ ಸಾಮಾಜಿಕ ನ್ಯಾಯ ಪಂಚಾಯಿತಿ ಅಸ್ತಿತ್ವದಲ್ಲಿ ಇರಬೇಕು.
* ಸಂಪನ್ಮೂಲಗಳಿಗಾಗಿ ತೆರಿಗೆ ವಿಧಿಸುವ ಅಧಿಕಾರ ನೀಡಬೇಕು.

**1985ರ ಜಿ.ವಿ.ಕೆ.ರಾವ್ ಸಮಿತಿ:**

ಈ ಸಮಿತಿಯು ಜಿಲ್ಲಾ ಪರಿಷತ್ತನ್ನು ಹೆಚ್ಚು ಬಲಪಡಿಸಬೇಕು ಎಂದು ಶಿಫಾರಸ್ಸು ಮಾಡಿತು.

**1986ರ ಎಲ್.ಎಂ.ಸಿಂಘ್ವಿ ಸಮಿತಿ:**

ಈ ಸಮಿತಿಯು ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬೆಂಬಲಿಸಿತು.

ಶಿಫಾರಸ್ಸುಗಳು:

1) ಎಸ್ಸಿ, ಎಸ್ಟಿ ಮತ್ತು ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡುವುದು
2) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಉದಾರವಾಗಿ ಅನುದಾನ ನೀಡಬೇಕು
3) ಇವುಗಳ ಚುನಾವಣೆಗಳನ್ನು ಮುಂದೂಡದೆ ಸಕಾಲದಲ್ಲಿ ನಡೆಸಬೇಕು
4) ಇವುಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಬೇಕು.

ಇದರ ಅನ್ವಯ 1993 ಏಪ್ರಿಲ್ 20ರಂದು 73ನೇಯ ಮತ್ತು 74ನೇಯ ಸಂವಿಧಾನ ತಿದ್ದುಪಡಿಗಳು ರಾಷ್ಟ್ರಪತಿಯವರ ಒಪ್ಪಿಗೆ ಪಡೆದವು.

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಮಹಿಳೆಯರ ಕಲ್ಯಾಣ ಕಾರ್ಯಕ್ರಮಗಳು:**

1) ಕನಿಷ್ಠ ಅಂಶಗಳ ಕಾರ್ಯಕ್ರಮ: ಉದಾಹರಣೆಗೆ ಪ್ರಾಥಮಿಕ ಶಿಕ್ಷಣ, ವಯಸ್ಕ ಶಿಕ್ಷಣ, ಗ್ರಾಮೀಣ ನೀರು ಪೂರೈಕೆ, ರಸ್ತೆ, ವಸತಿ, ಪರಿಸರ ಸುಧಾರಣೆ, ಪಟ್ಟಣ ಸುಧಾರಣೆ.
2) 20 ಅಂಶಗಳ ಕಾರ್ಯಕ್ರಮ: ಉದಾಹರಣೆಗೆ ನೀರಾವರಿಯ ಉನ್ನತೀಕರಣ, ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು, ಕುಡಿಯುವ ನೀರು, ಜೀತ ವಿಮುಕ್ತಿ, ಸಾಮಾಜಿಕ ಅರಣ್ಯೀಕರಣ, ಆರೋಗ್ಯ, ಕುಟುಂಬ ಕಲ್ಯಾಣ ಇತ್ಯಾದಿ.
3) ಡಿ.ಡಬ್ಲ್ಯೂ.ಎ.ಸಿ.ಆರ್.ಎ: ಗ್ರಾಮೀಣ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು.
4) 1976ರ ಸಮಾನ ಪ್ರತಿಫಲ ಕಾಯ್ದೆ.
5) ಮಹಿಳಾ ಸಹಕಾರಿ ಸಂಘಗಳ ರಚನೆ.
6) ಮಹಿಳಾ ಸ್ವಧಾರ ಯೋಜನೆ.
7) ಕಿಶೋರಿ ಶಕ್ತಿ ಯೋಜನೆ.
8) ವಸತಿ ಯೋಜನೆಗಳು – ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ, ಆಶ್ರಯ ಯೋಜನೆ.
9) ರಾಜಕೀಯ ಮತ್ತು ಉದ್ಯೋಗದಲ್ಲಿ ಮೀಸಲಾತಿ.

**ಪ್ರಜೆಗಳ ಪಾಲ್ಗೊಳ್ಳುವಿಕೆ (ಜನತೆಯ ಸಹಭಾಗಿತ್ವ):**

ಜನರು ಸಕ್ರಿಯವಾಗಿ ಮತ್ತು ನಿರಂತರವಾಗಿ ಆಡಳಿತದ ಪ್ರಕ್ರಿಯೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದನ್ನು ಜನರ ಸಹಭಾಗಿತ್ವ ಅಥವಾ ಪಾಲ್ಗೊಳ್ಳುವಿಕೆ ಎನ್ನುವರು. ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಜನತೆ ಭಾಗವಹಿಸುವುದೇ ಜನತೆಯ ಪಾಲ್ಗೊಳ್ಳುವಿಕೆ ಎನ್ನಲಾಗುತ್ತದೆ. ಪ್ರಜಾಸತ್ತಾತ್ಮಕ ಸರ್ಕಾರವು ಜನತಾ ಪರಮಾಧಿಕಾರ ತತ್ವವನ್ನು ಆಧರಿಸಿರುವುದರಿಂದ, ಅಂತಿಮ ಅಧಿಕಾರದ ಕೇಂದ್ರಬಿಂದು ಜನರೇ ಆಗಿರುತ್ತಾರೆ. ಜನತೆಯ ಸಹಭಾಗಿತ್ವವಿಲ್ಲದೇ ಆಡಳಿತದ ತೀರ್ಮಾನಗಳು ನಿಷ್ಪರಿಣಾಮಕಾರಿಯಾಗುತ್ತವೆ.

ನೀತಿ ನಿರೂಪಣೆ, ನೀತಿ ಅನುಷ್ಠಾನ ಎರಡರಲ್ಲಿಯೂ ಜನತೆ ಪಾಲ್ಗೊಳ್ಳುವ ಅವಕಾಶ ನೀಡಲಾಗಿದೆ. ಉದಾಹರಣೆಗೆ ಪಂಚಾಯತ್ ರಾಜ್ ವ್ಯವಸ್ಥೆ.

ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಎರಡು ವಿಧವಾಗಿ ವಿವರಿಸಬಹುದು.

1) ಸಾಮಾನ್ಯ ಆಡಳಿತದಲ್ಲಿ ಪಾಲ್ಗೊಳ್ಳುವಿಕೆ

– ಚುನಾವಣೆ

– ಹಿಂದಕ್ಕೆ ಕರೆಸುವ ಪದ್ಧತಿ

– ಪ್ರಜಾ ನಿರ್ಧಾರ ಪ್ರಜಾ ನಿರ್ದೇಶನ

– ಒತ್ತಡ ಗುಂಪುಗಳು

– ಸಲಹಾ ಸಮಿತಿಗಳು

– ಜನಾಭಿಪ್ರಾಯ

2) ಅಭಿವೃದ್ಧಿ ಆಡಳಿತದಲ್ಲಿ ಪಾಲ್ಗೊಳ್ಳುವಿಕೆ: ಸಾಮಾಜಿಕ ಆರ್ಥಿಕ ಬದಲಾವಣೆಗಳನ್ನು ತರುವುದಕ್ಕಾಗಿ ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಕ್ರಿಯೆಯಲ್ಲಿ ಜನರು ಸಕ್ರಿಯವಾಗಿ ಭಾಗವಹಿಸುವುದು. ಇದು ಕೆಳಗಿನ ಆಯಾಮಗಳನ್ನು ಒಳಗೊಂಡಿದೆ.

* ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿ.
* ಕಾರ್ಯಾಚರಣೆಯಲ್ಲಿ ಭಾಗವಹಿಸುವಿಕೆ.
* ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸುವುದು.
* ಫಲಾನುಭವಿಗಳ ಪಾಲುಗಾರಿಕೆಯಲ್ಲಿ ಭಾಗವಹಿಸುವಿಕೆ. ಉದಾಹರಣೆಗೆ ಪಿಆರ್ಐನಲ್ಲಿ ಸ್ತ್ರೀ ಮಂಡಳಿಗಳು, ರೈತರ ಸೇವಾ ಸಹಕಾರ ಸಂಘಗಳು, ಯುವ ಕೇಂದ್ರಗಳು.

**ಅಭಿವೃದ್ಧಿ ಆಡಳಿತದಲ್ಲಿ ಜನತೆಯ ಪಾಲ್ಗೊಳ್ಳುವಿಕೆಯ ಅನುಕೂಲತೆಗಳು:**

* ಆಡಳಿತಾಂಗಕ್ಕೆ ಸ್ಥಳೀಯ ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಪರಿಸರ, ತಾಂತ್ರಿಕ ಸ್ಥಿತಿಗಳ ಕುರಿತು ಮಾಹಿತಿ ಒದಗಿಸುತ್ತದೆ.
* ಈ ಮಾಹಿತಿಯ ಮೂಲಕ ಯೋಜನೆಗಳ, ಕಾರ್ಯಕ್ರಮಗಳ ರಚನೆಗೆ ತುಂಬಾ ಸಹಾಯಕಾರಿಯಾಗಿದೆ.
* ಅಭಿವೃದ್ಧಿ ಕಾರ್ಯಕ್ರಮಗಳ ಯಶಸ್ವಿಗೆ ಅಗತ್ಯವಾದ ಜನ, ಧನ ಮತ್ತು ಸಾಮಗ್ರಿಗಳು ಮುಂತಾದ ಸ್ಥಳೀಯ ಸಂಪನ್ಮೂಲ ಕ್ರೋಢೀಕರಿಸಲು ಸಹಾಯಕವಾಗುತ್ತದೆ.
* ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆಗಬಹುದಾದ ಭ್ರಷ್ಟಾಚಾರ ಮತ್ತು ಆಡಳಿತಾಧಿಕಾರದ ದುರುಪಯೋಗ ಕಡಿಮೆ ಮಾಡಬಹುದು.
* ಯೋಜನೆಯ ಲಾಭ ಶ್ರೀಮಂತರ ಪಾಲಾಗದೆ, ಬಡವರಿಗೂ ಲಭಿಸುತ್ತದೆ.
* ಜನರು ತಮ್ಮ ಸಮಸ್ಯೆ ತಾವೇ ಬಗೆಹರಿಸಿಕೊಳ್ಳುವ ಜವಾಬ್ದಾರಿ ಜನರಲ್ಲಿ ಮೂಡುತ್ತದೆ.
* ಬೇರು ಮಟ್ಟದಲ್ಲಿ ಪ್ರಜಾಪ್ರಭುತ್ವ ಬಲಪಡಿಸುತ್ತದೆ.
* ಜನತಾ ಪ್ರಾತಿನಿಧ್ಯ, ಸಂವೇದನಾಶೀಲತೆಗೆ ನಿಜವಾದ ಅರ್ಥ ಕಲ್ಪಿಸುತ್ತದೆ.
* ಜನತೆ ಸರ್ಕಾರದ ನಡುವೆ ಪರಸ್ಪರ ಅರಿವು ಉತ್ತಮ ಬಾಂಧವ್ಯ.

**ಜನತೆಯ ಸಹಭಾಗಿತ್ವವು ಈ ಕೆಳಗಿನ ಅಂಶಗಳನ್ನು ಮಿತಿಗೊಳಿಸುತ್ತದೆ.**

* ದರ್ಪದ, ಯಾಂತ್ರಿಕತೆಯ ಅಧಿಕಾರಶಾಹಿ.
* ಅಹಿತಕರವಾದ ಸಾಮಾಜಿಕ ಆರ್ಥಿಕ ಪರಿಸ್ಥಿತಿ.
* ನಕಾರಾತ್ಮಕ ರಾಜಕೀಯ ಹಸ್ತಕ್ಷೇಪ.

* ನಿಗದಿತ ಕಾಲದ ಯೋಜನೆಗಳ ಸ್ವರೂಪ.
* ಮಧ್ಯವರ್ತಿಗಳ ಮತ್ತು ಭಟ್ಟಂಗಿಗಳ ಪಾತ್ರ ಕಡಿತ.
* ತಪ್ಪು ಆಡಳಿತಾತ್ಮಕ ಕಾರ್ಯ ವಿಧಾನಗಳು.

**ಜನತೆಯ ಸಹಭಾಗಿತ್ವದ ಅಡೆತಡೆಗಳು:**

* ಜನರ ನಿರಾಸಕ್ತಿ ಉದಾಸೀನ ಭಾವನೆ
* ಹಕ್ಕುಗಳ ಅರಿವಿನ ಕೊರತೆ
* ಕೆಳಮಟ್ಟದ ಸಾಮಾಜಿಕ ಆರ್ಥಿಕ ಸ್ಥಿತಿಗತಿ
* ವೈಯಕ್ತಿಕ ಪಾಲ್ಗೊಳ್ಳುವಿಕೆಗೆ ಹಿಂಜರಿತ
* ಸಮಯ ಮತ್ತು ಹಣದ ಕೊರತೆ
* ಮಾಹಿತಿ ಮತ್ತು ಜ್ಞಾನದ ಕೊರತೆ
* ತಮ್ಮಲ್ಲಿ ಆತ್ಮವಿಶ್ವಾಸದ ಕೊರತೆ
* ಅಧಿಕಾರಶಾಹಿಯ ಲೋಪಗಳು, ದೌರ್ಜನ್ಯಗಳು, ದರ್ಪಗಳು.

**1966ರ ಮೊದಲನೇ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು:**

* ಸಲಹಾ ಸ್ವರೂಪದ ಹುದ್ದೆಗಳಿಗೆ ಸಲಹೆ ನೀಡಲು ಅವಶ್ಯಕವಾದ ಅರ್ಹತೆ ಹಾಗೂ ಸಾಮರ್ಥ್ಯವನ್ನು ಹೊಂದಿದ ವ್ಯಕ್ತಿಗಳ ನೇಮಕ.
* ಕೇವಲ ಸಾಮಾನ್ಯ ಅಧಿಕಾರಿಗಳನ್ನು ನೇಮಿಸದೆ ಆಡಳಿತದಲ್ಲಿ ತಜ್ಞ ಆಡಳಿತಗಾರರಿಗೆ ಅವಕಾಶ.
* ಪ್ರತಿಯೊಂದು ಉದ್ಯೋಗ ಹೊಂದಿರುವ ಜವಾಬ್ದಾರಿಯ ಆಧಾರದ ಮೇಲೆ ವೇತನ ಶ್ರೇಣಿ ತರ್ಕಸಮ್ಮತವಾದ ರೀತಿಯಲ್ಲಿ ಅಂಗೀಕರಿಸಬೇಕು.
* ದಕ್ಷತೆ ಮತ್ತು ಕಾರ್ಯ ಸಾಮರ್ಥ್ಯ ಆಧರಿಸಿ ಬಡ್ತಿ.
* ತಾಂತ್ರಿಕ ಹುದ್ದೆಗಳಿಗೆ ನೇಮಕ ಪೂರ್ವ ಅವಧಿಯಲ್ಲಿ ವೃತ್ತಿಪರ ಶಿಕ್ಷಣ ಪಡೆದ ಅಧಿಕಾರಿಗಳಿಗೆ ನೀಡಬೇಕು.
* ವೃತ್ತಿಪರ ಹುದ್ದೆ ಹೊರತುಪಡಿಸಿ ಉಳಿದ ಹುದ್ದೆಗಳಿಗೆಡ ಸಾಮಾನ್ಯ ಅಧಿಕಾರಿಗಳನ್ನು ನೇಮಕ ಮಾಡಬೇಕು.
* ತರಬೇತಿ ಪಡೆದ ತಜ್ಞ ಅಧಿಕಾರಿಗಳನ್ನು ಈ ಕೆಳಗಿನ ಆಡಳಿತ ಕ್ಷೇತ್ರಗಲ್ಲಿ ಮುಖ್ಯಸ್ಥರನ್ನಾಗಿ ನೇಮಿಸಬೇಕು.
  - ಆರ್ಥಿಕ ಆಡಳಿತ
  - ಕೈಗಾರಿಕಾ ಆಡಳಿತ
  - ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ
  - ಹಣಕಾಸು ಆಡಳಿತ

# ಅಧ್ಯಾಯ –

# ವಿಶ್ವಸಂಸ್ಥೆ ಮತ್ತು ಅದರ ಅಂಗ ಸಂಸ್ಥೆಗಳು

**ಅಂತರ್‌ರಾಷ್ಟ್ರೀಯ ಸಂಸ್ಥೆಗಳ ಹುಟ್ಟು ಮತ್ತು ಬೆಳವಣಿಗೆ:**

ದೇಶ ದೇಶಗಳ ಮಧ್ಯದ ಯುದ್ದಗಳನ್ನು ಹೋಗಲಾಡಿಸಿ, ಶಾಂತಯುತವಾಗಿ ಕಲಹಗಳನ್ನು ಬಗೆಹರಿಸಲು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಶಾಶ್ವತ ಸಂಸ್ಥೆಗಳ ರಚನೆ ಆದವು. 20ನೇ ಶತಮಾನದಲ್ಲಿ ಇಂತಹ ಸಂಘಟನೆಗಳು ಸೃಷ್ಟಿಯಾದವು. ಈ ಶತಮಾನವನ್ನು ಅಂತರ್‌ರಾಷ್ಟ್ರೀಯ ಸಂಘಟನೆಗಳ ಯುಗವೆಂದು ಕರೆಯಲಾಗುತ್ತದೆ.

**1) ಪ್ರಾಚೀನ ಗ್ರೀಕರ ಕಾಲ:**

ಇವರ ಕಾಲದಲ್ಲಿ ರಾಜ್ಯ ರಾಜ್ಯಗಳ ಮಧ್ಯೆ ಒಪ್ಪಂದಗಳು, ಮಿತ್ರತ್ವಗಳು, ರಾಜ ತಾಂತ್ರಿಕ ವ್ಯವಹಾರಗಳು, ಕಲಹಗಳನ್ನು ಶಾಂತ ರೀತಿಯಿಂದ ಪರಿಹರಿಸಿಕೊಳ್ಳುವ ಸಾಧನಗಳು ಯುದ್ದ ನಿಯಮಗಳು ಅಸ್ತಿತ್ವದಲ್ಲಿದ್ದವು. ರೋಮನ್‌ರ ಕಾಲದಲ್ಲಿಯೂ ಹೀಗೆಯೇ ಇದ್ದವು.

**2) ಕ್ರಿಶ್ಚಿಯನ್ ಬಣಗಳ ಮಿತ್ರತ್ವ:**

ರೋಮನ್ ಸಾಮ್ರಾಜ್ಯದ ಪತನದ ನಂತರ ಯೂರೋಪ್ ಮತ್ತೇ ಅವ್ಯವಸ್ಥೆಗೆ ಗುರಿ ಆಯಿತು. ಆಗ ಜನ್ಮ ತಾಳಿದ್ದು ಕ್ರಿಶ್ಚಿಯನ್ ದೇಶಗಳ ಬಣ.

* ವಿಯನ್ನಾ ಕಾಂಗ್ರೆಸ್ – 1814–15
* ಹೋಲಿ ಅಲಾಯನ್ಸ್
* ಹೇಗ್ ಸಮ್ಮೇಳನ – 1899–1907
* ಲೀಗ್ ಆಫ್ ನೇಷನ್ – 1920–1929

**ವಿಶ್ವಸಂಸ್ಥೆ:**

ಸೆಂಟ್ ಜೇಮ್ಸ್ ಅರಮನೆಯ ಘೋಷಣೆಯ ನಂತರ 1941 ಜೂನ್ ಇಂಗ್ಲೇಂಡ್‌ದ ಜೇಮ್ಸ್ ಅರಮನೆಯಲ್ಲಿ ವಿಶ್ವಸಂಸ್ಥೆ ಸ್ಥಾಪನೆಯ ಮುನ್ನುಡಿ ಪ್ರಾರಂಭವಾಯಿತು. 2ನೇ ಮಹಾಯುದ್ದದಲ್ಲಿಯ ಮಿತ್ರರಾಷ್ಟ್ರಗಳು ಯುಎನ್‌ಓ ಸ್ಥಾಪನೆಯ ರುವಾರಿಗಳು.

ಅಟ್ಲಾಂಟಿಕ್ ಸಾಗರದಲ್ಲಿ ನೌಕೆಯಲ್ಲಿ ಇಂಗ್ಲೆಂಡ್ ಪ್ರಧಾನಿ ಚರ್ಚಿಲ್, ಅಮೇರಿಕಾ ಅಧ್ಯಕ್ಷ ರೂಸ್‌ವೆಲ್ಟ್ ಸಭೆ ಸೇರಿ ವಿಶ್ವಸಂಸ್ಥೆ ಸ್ಥಾಪಿಸಲು ನಿರ್ಧಾರ ಮಾಡುತ್ತಾರೆ. ಇದನ್ನು ಅಟ್ಲಾಂಟಿಕ್ ಪ್ರಣಾಳಿಕೆ ಎಂದು ಕರೆದರು. ವಿಶ್ವಸಂಸ್ಥೆ ಘೋಷಣೆ ಮಾಡಿದ ಪ್ರಮುಖ ರಾಷ್ಟ್ರಗಳು ಮತ್ತು ಆಯಾ ದೇಶದ ಪ್ರಮುಖರು ಈ ಕೆಳಗಿನಂತಿರುವರು.

ಅಮೇರಿಕಾ ಅಧ್ಯಕ್ಷ – ರೂಸ್‌ವೆಲ್ಟ್

ಇಂಗ್ಲೆಂಡ್ ಪ್ರಧಾನಿ – ಚರ್ಚಿಲ್

ರಷ್ಯಾ ಪ್ರಧಾನಿ – ಲಿಟಲೋವ್

ಚೀನಾ ಪ್ರಧಾನಿ – ಟಿ.ವಿ. ಶೃಂಗ್‌ಬಾಗಿ

ಮಾಸ್ಕೋ ಸಮ್ಮೇಳನವು 1943ರ ಅಕ್ಟೋಬರ್‌ನಲ್ಲಿ ರಷ್ಯಾದ ಮಾಸ್ಕೋದಲ್ಲಿ (ಯುಎಸ್‌ಎ, ಯುಕೆ, ಚೀನಾ, ಯುಎಸ್‌ಎಸ್‌ಆರ್) ವೈರಿಗಳ ವಿರುದ್ದ ಸಾಮೂಹಿಕ ಕ್ರಮ ಕೈಗೊಳ್ಳುವ ನಿರ್ಣಯ ಕೈಗೊಳ್ಳಲಾಯಿತು. ಹಾಗೆಯೇ ತೆಹ್ರಾನ್ ಸಮ್ಮೇಳನ 1943ರಲ್ಲಿ ಜಾಗತಿಕ ಶಾಂತಿ ಸುಭದ್ರತೆಗೆ ಒತ್ತು ಕೊಟ್ಟಿತು. ಯಲ್ಟಾ ಸಮ್ಮೇಳನದಲ್ಲಿ ವಿಶ್ವಸಂಸ್ಥೆ ಸ್ಥಾಪಿಸುವ ಅಂತಿಮ ನಿರ್ಣಯಕ್ಕೆ ಬರಲಾಯಿತು. ಏಪ್ರಿಲ್ 1945ರಲ್ಲಿ ಯುಎನ್ ಪ್ರಣಾಳಿಕೆ ತಯಾರಿಸಲು ಸ್ಯಾನ್ ಫ್ರಾನ್ಸಿಸ್ಕೋ ಸಮ್ಮೇಳನ ಕರೆಯಲಾಯಿತು. 1945 ಏಪ್ರಿಲ್ 20ರಂದು ಸ್ಯಾನ್ ಫ್ರಾನ್ಸಿಸ್ಕೋ ನಗರದ ಒಪೆರಾ ಹೌಸ್‌ನಲ್ಲಿ 50 ರಾಷ್ಟ್ರಗಳ 260 ಪ್ರತಿನಿಧಿಗಳು ಸಭೆ ಸೇರಿದ್ದರು. 1945 ಜೂನ್ 25ರಂದು ಅಂತಿಮ ಕರಡು

ಪ್ರಣಾಳಿಕೆ ಸ್ವೀಕರಿಸಲಾಯಿತು. 1945 ಅಕ್ಟೋಬರ್ 24ರಂದು ಅಧಿಕೃತವಾಗಿ ವಿಶ್ವಸಂಸ್ಥೆ ಉದಯವಾಯಿತು. ವಿಶ್ವಸಂಸ್ಥೆಯ ಸಂವಿಧಾನ 111 ಕಾಲಂಗಳನ್ನು 19 ಅಧ್ಯಾಯಗಳನ್ನು ಒಳಗೊಂಡಿದೆ. 51 ರಾಷ್ಟ್ರಗಳು ಪ್ರಣಾಳಿಕೆ ಸಹಿ ಹಾಕಿದ ಮೂಲ ಸದಸ್ಯ ರಾಷ್ಟ್ರಗಳಾದವು. ಹೊಸದಾಗಿ ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಲು ಭದ್ರತಾ ಮಂಡಳಿಯ ಶಿಫಾರಸ್ಸು ಅಗತ್ಯವಾಗಿದೆ.

**ವಿಶ್ವಸಂಸ್ಥೆಯ ತತ್ವಗಳು:**

* ಎಲ್ಲ ರಾಷ್ಟ್ರಗಳ ಸಾರ್ವಭೌಮತ್ವ ಮತ್ತು ಸಮಾನತೆಗೆ ಗೌರವ
* ಅಂತರ್‌ರಾಷ್ಟ್ರೀಯ ಶಾಂತಿ, ಸುರಕ್ಷೆ ನ್ಯಾಯಕ್ಕೆ ಚ್ಯುತಿಯಾಗದಂತೆ ವಿವಾದಗಳ ಶಾಂತಿಯುತ ಇತ್ಯರ್ಥ
* ಬಲ ಪ್ರಯೋಗದ ಮೂಲಕ ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಪ್ರದೇಶದ ಅಪಹರಣ ಸಲ್ಲದು
* ರಾಷ್ಟ್ರಗಳ ಆಂತರಿಕ ವ್ಯವಹಾರದಲ್ಲಿ ವಿಶ್ವಸಂಸ್ಥೆ ಹಸ್ತಕ್ಷೇಪ ಮಾಡದು.

## ವಿಶ್ವಸಂಸ್ಥೆಯ ಅಂಗಗಳು:

### 1) ಸಾಮಾನ್ಯ ಸಭೆ:

ಇದು ಎಲ್ಲ ಸದಸ್ಯ ಪ್ರತಿನಿಧಿಗಳ ಸಭೆಯಾಗಿದೆ. ಪ್ರತಿ ಸದಸ್ಯ ದೇಶ 5 ಸದಸ್ಯರನ್ನು ಕಳುಹಿಸುತ್ತದೆಯಾದರೂ ಒಂದು ದೇಶಕ್ಕೆ ಒಂದೇ ಮತ. ಪ್ರತಿ ವರ್ಷ ಒಂದು ವರ್ಷದ ಅವಧಿಗೆ ಅಧ್ಯಕ್ಷರ ಆಯ್ಕೆ ಮತ್ತು ಅದೇ ರೀತಿ 17 ಉಪಾಧ್ಯಕ್ಷರನ್ನು, 7 ಸ್ಥಾಯಿ ಸಮಿತಿಗಳಿಗೆ 7 ಮಂದಿ ಅಧ್ಯಕ್ಷರನ್ನು ಆರಿಸುತ್ತದೆ. ಸಾಮಾನ್ಯವಾಗಿ ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಸಭೆಯನ್ನು ನಡೆಸಲಾಗುತ್ತದೆ. ಈ ಸಭೆಯಲ್ಲಿ ಹೆಚ್ಚಿನ ಪ್ರಮುಖ ನಿರ್ಣಯಗಳಿಗೆ, ವಾರ್ಷಿಕ ಆಯವ್ಯಯ ಪೆಟ್ಟಿಗೆ ಅನುಮೋದನೆಗೆ 2/3 ಸದಸ್ಯರ ಅನುಮೋದನೆಯು ಅತಿ ಅವಶ್ಯಕ. ತುರ್ತು ವಿಷಯಗಳಿದ್ದಾಗ, ವಿಶೇಷ ಅಧಿವೇಶನ ಕರೆಯಲಾಗುತ್ತದೆ. ಇದು ಜಾಗತಿಕ ಸಂಸತ್ತಿನ ರೀತಿಯಲ್ಲಿ ಕಾರ್ಯನಿರ್ವಹಣೆ.

### 2) ಭದ್ರತಾ ಸಮಿತಿ:

ಇದು ಯುಎನ್‌ಓದ 'ಸಚಿವ ಸಂಪುಟ' ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಒಟ್ಟು 15 ಮಂದಿ ಸದಸ್ಯರು, 5 ಖಾಯಂ, 10 ತಾತ್ಕಾಲಿಕ ಸದಸ್ಯರು ಇರುತ್ತಾರೆ. ಯುಎಸ್‌ಎ, ರಷ್ಯಾ, ಚೀನಾ, ಫ್ರಾನ್ಸ್, ಇಂಗ್ಲೆಂಡ್ ಶಾಶ್ವತ ಸದಸ್ಯ ರಾಷ್ಟ್ರಗಳು. ಉಳಿದ 10 ಸದಸ್ಯರು 2 ವರ್ಷದ ಅವಧಿಗೆ ಸಾಮಾನ್ಯ ಸಭೆಯಿಂದ ಆಯ್ಕೆ ಮಾಡಲಾಗುತ್ತದೆ. ಖಾಯಂ ಸದಸ್ಯರಿಗೆ ವಿಟೋ ಅಧಿಕಾರವಿದೆ. ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರಕ್ಕೆ ಯತ್ನಿಸುವ ಕಾರ್ಯ ಮಾಡುತ್ತದೆ. ಶಾಂತಿ ಪಾಲನಾ ಪಡೆಯ ನಿಯೋಜನೆ, ಅಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ, ಯುಎನ್‌ಓನ ಮಹಾ ಕಾರ್ಯದರ್ಶಿಕೆ ಉಮೇದುವಾರಿಕೆಗೆ ಹೆಸರು ಸೂಚಿಸುವ ಕಾರ್ಯಗಳನ್ನು ಮಾಡುತ್ತದೆ.

### 3) ಆರ್ಥಿಕ ಮತ್ತು ಸಾಮಾಜಿಕ ಸಮಿತಿ:

ಈ ಸಮಿತಿಯಲ್ಲಿ 54 ಸದಸ್ಯರಿದ್ದಾರೆ. ಇವರ ಪೈಕಿ ಪ್ರತಿ 3 ವರ್ಷಕ್ಕೆ 18 ಜನರು ಆರಿಸಲ್ಪಡುತ್ತಾರೆ. ಇದರ ಮುಖ್ಯ ಕಾರ್ಯವೇನೆಂದರೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಮತ್ತು ಇನ್ನಿತೆ ಸಂಬಂಧಿತ ವಿಷಯಗಳ ಅಧ್ಯಯನ ಮತ್ತು ವರದಿ ನೀಡುತ್ತದೆ. ನಿರಾಶ್ರಿತರ, ಮಹಿಳೆಯ ಸ್ಥಾನಮಾನ, ವಸತಿ ಸಮಸ್ಯೆ ಮುಂತಾದವುಗಳ ಕುರಿತು ಅಧ್ಯಯನ ಮತ್ತು ಮಾನವ ಹಕ್ಕು ಮತ್ತು ಮೂಲಭೂತ ಸ್ವಾತಂತ್ರ್ಯಗಳ ರಕ್ಷಣೆ ಮಾಡುತ್ತದೆ.

### 4) ದತ್ತಿ ಸಮಿತಿ (ಧರ್ಮದರ್ಶಿ):

ಈ ಸಮಿತಿಯು ಸ್ವತಂತ್ರ ರಾಜ್ಯದ ಮಟ್ಟಕ್ಕೆ ಏರದ ಪ್ರದೇಶಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ. ಇದು ಪ್ರಸ್ತುತ ಯಾವುದೇ ದತ್ತಿಗಳಿಲ್ಲದ್ದರಿಂದ ಅಸ್ತಿತ್ವದಲ್ಲಿಲ್ಲ.

### 5) ಅಂತರ್ ರಾಷ್ಟ್ರೀಯ ನ್ಯಾಯಾಲಯ:

15 ಮಂದಿ ನ್ಯಾಯಾಧೀಶರನ್ನು ಹೊಂದಿರುವ ಇದು ಅಂತರ್ ರಾಷ್ಟ್ರೀಯ ನ್ಯಾಯಾಲಯವಾಗಿದೆ. ಈ ನ್ಯಾಯಾಧೀಶರ ಅಧಿಕಾರವಧಿ 9 ವರ್ಷಗಳು. ಇವರು ಮರು ಆಯ್ಕೆಗೆ ಅರ್ಹರಾಗಿರುತ್ತಾರೆ. ಇದರ ಕೇಂದ್ರ

ಕಛೇರಿ ಇರುವುದು ನೆದರ್‌ಲ್ಯಾಂಡ್‌ನ ಹೇಗ್‌ನಲ್ಲಿ. ಈ ನ್ಯಾಯಾಧೀಶರೇ 3 ವರ್ಷದ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. ಬಹುಮತದ ಆಧಾರದಲ್ಲಿ ನಿರ್ಣಯ ಅಗತ್ಯವಿದ್ದಲ್ಲಿ ಕಾನೂನಿನ ವಿಚಾರದಲ್ಲಿ ಸುಯೋಗ್ಯ ಸಲಹೆ ನೀಡುತ್ತದೆ. ನೈತಿಕ ಮತ್ತು ವೈಚಾರಿಕ ನೆಲೆಗಟ್ಟಿನ ಮೇಲೆ ಈ ನಿರ್ಣಯಗಳು ಮಹತ್ವವಾಗಿವೆ. ಆದರೆ ಈ ತೀರ್ಪು ಕಡ್ಡಾಯವಾಗಿ ಯಾವ ದೇಶಕ್ಕೂ ಅನ್ವಯಿಸುವಂತಿಲ್ಲ.

**6) ಸಚಿವಾಲಯ:**

ಮಹಾಕಾರ್ಯದರ್ಶಿ ಮತ್ತು ಯುಎನ್‌ಓ ಸಿಬ್ಬಂದಿ ವರ್ಗ ಈ ಅಂಗ ಸಂಸ್ಥೆಗೆ ಸೇರಿದವರಾಗಿದ್ದಾರೆ. ಕಾರ್ಯದರ್ಶಿ ಯುಎನ್‌ಎಸ್‌ಸಿನ ಶಿಫಾರಸ್ಸಿನ ಮೇರೆಗೆ ಸಾಮಾನ್ಯ ಸಭೆಯಿಂದ 5 ವರ್ಷಗಳ ಅವಧಿಗೆ ಆಯ್ಕೆಯಾಗುತ್ತಾರೆ. ಇದರ ಕಾರ್ಯಾಲಯ ನ್ಯೂಯಾರ್ಕ್‌ನಲ್ಲಿದೆ. ಜೊತೆಗೆ ಜಿನೇವಾ, ವಿಯೆನ್ನಾ ಮತ್ತು ನೈರೋಬಿಗಳಲ್ಲಿ ಇದರ ಶಾಖೆಗಳು ಇವೆ. ಇದರ ಮೊದಲ ಮಹಾಕಾರ್ಯದರ್ಶಿ ಟ್ರಿಗ್ವೆ ಲೀ. ಪ್ರಸ್ತುತ ಕಾರ್ಯದರ್ಶಿ ಬಾನ್–ಕಿ–ಮೂನ್.

## ಅಂತರ್‌ರಾಷ್ಟ್ರೀಯ ಸಂಬಂಧದಲ್ಲಿ ವಿಶ್ವಸಂಸ್ಥೆಯ ಪಾತ್ರ:

* 3ನೇ ಮಹಾಯುದ್ಧವಾಗದಂತೆ ತಡೆದಿರುವುದು ಪ್ರಮುಖ ಸಾಧನೆ.
* ಇರಾನ್ ಸಮಸ್ಯೆ: 1946 ಜನವರಿ 16ರಂದು ಯುಎಸ್‌ಎಸ್‌ಆರ್ ಇರಾನ್‌ನಲ್ಲಿ ಹಸ್ತಕ್ಷೇಪ ಮಾಡುತ್ತಿರುವುದನ್ನು ತಪ್ಪಿಸಿದುದು.
* ಕೊರಿಯಾ ಸಂಘರ್ಷ: 1984ರಲ್ಲಿ ಉತ್ತರ ಕೊರಿಯಾ, ದಕ್ಷಿಣ ಕೊರಿಯಾ ಪ್ರತ್ಯೇಕ ರಾಷ್ಟ್ರಗಳಾದವು. ಉತ್ತರ ಕೊರಿಯಾವನ್ನು ರಷ್ಯಾ, ದಕ್ಷಿಣ ಕೊರಿಯಾವನ್ನು ಅಮೇರಿಕಾ ಬೆಂಬಲಿಸಿ ಸಂಘರ್ಷದ ವಾತಾವರಣ ನಿರ್ಮಾಣವಾಗಿತ್ತು. ವಿಶ್ವಸಂಸ್ಥೆಯು ಎರಡು ರಾಷ್ಟ್ರಗಳ ಮಧ್ಯೆ ಒಪ್ಪಂದವೇರ್ಪಡಿಸಿ ಶಾಂತಿ ನೆಲೆಸುವಂತೆ ಮಾಡಿತು.
* ಸೂಯೆಜ್ ಕಾಲುವೆ ವಿವಾದ: ಈಜಿಪ್ಟ್ 1956ರಂದು ಸೂಯೆಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿತು. ಇದರಿಂದಾಗಿ ಯೂಕೆ, ಫ್ರಾನ್ಸ್, ಇಸ್ರೇಲ್, ಈಜಿಪ್ಟ್ ದೇಶದ ಮೇಲೆ ದಾಳಿ ನಡೆಸಿದವು. ಆದರೆ ವಿಶ್ವಸಂಸ್ಥೆಯು ಸೂಯೆಜ್ ಕಾಲುವೆಯ ಬಿಕ್ಕಟ್ಟನ್ನು ಸುಲಭವಾಗಿ ಬಗೆಹರಿಸಿತು.
* ಕ್ಯೂಬಾ ಸಂಘರ್ಷ – 1962.

## ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಬದಲಾದ ಪಾತ್ರ:

ವಿಶ್ವಸಂಸ್ಥೆ 1950ರಲ್ಲಿ 'ಶಾಂತಿಗಾಗಿ ಐಕ್ಯತೆ' ಎಂಬ ನಿರ್ಣಯ ಪಾಸು ಮಾಡುವುದರ ಮೂಲಕ ಸಾಮಾನ್ಯ ಸಭೆ, ವಿಶ್ವಶಾಂತಿ ಮತ್ತು ಭದ್ರತೆ ಕಾಪಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು. ಸಾಮಾನ್ಯ ಸಭೆಯ ಅಧಿಕಾರದಿಂದ ಕೊರಿಯಾ, ಸೂಯೆಜ್, ಬಿಕ್ಕಟ್ಟು ಬಗೆಹರಿಸಿತು. ಲೆಬನಾನ್, ಕಾಂಗೋ ಬಿಕ್ಕಟ್ಟುಗಳನ್ನು ಹತೋಟಿಗೆ ತಂದಿತು. 1956ರಲ್ಲಿ ಮಧ್ಯ ಪೂರ್ವದಲ್ಲಿಯ ಘರ್ಷಣೆಯನ್ನು ಸಾಮಾನ್ಯ ಸಭೆ ವಿಶೇಷ ಅಧಿಕಾರದಿಂದ ಬಗೆಹರಿಸಿತು. ಈ ಮೊದಲು ವಿಶ್ವಶಾಂತಿ ಮತ್ತು ಭದ್ರತೆ ಕಾಪಾಡುವ ಅಧಿಕಾರ ಭದ್ರತಾ ಸಮಿತಿಗಿದ್ದು, ಸದಸ್ಯ ರಾಷ್ಟ್ರಗಳ ವಿಫಲ ಕಾರ್ಯಾಚರಣೆಗಳಾಗುತ್ತಿದ್ದವು.

## ವಿಶ್ವ ಆರೋಗ್ಯ ಸಂಸ್ಥೆ:

ಚೀನಾ ರಾಯಭಾರಿ ಡಾ.ಸ್ಜೆಮಿಂಗ್ ಪ್ರಥಮ ಬಾರಿಗೆ 1945ರಲ್ಲಿ ಈ ಕುರಿತು ಪ್ರಸ್ತಾಪಿಸಿದರು. 1946ರಲ್ಲಿ ಯುಎನ್‌ಓದ 51 ಸದಸ್ಯ ದೇಶಗಳು ಡಬ್ಲ್ಯೂಹೆಚ್‌ಓ ಸ್ಥಾಪನೆಗೆ ಅಂಕಿತ ನೀಡಿದವು. 1948ರಲ್ಲಿ ಯುಎನ್‌ಓ ದ ಎಲ್ಲ ಸದಸ್ಯ ದೇಶಗಳ ಒಪ್ಪಿಗೆಯೊಂದಿಗೆ ಡಬ್ಲ್ಯೂಹೆಚ್‌ಓ ಏಪ್ರಿಲ್ 7ರಂದು ಸ್ಥಾಪನೆ ಆಯಿತು. ಮಲೇರಿಯಾ, ಟಿಬಿ, ಲೈಂಗಿಕ ಸಂಪರ್ಕದ ರೋಗಗಳಿಂದ ಜಗತ್ತನ್ನು ಮುಕ್ತಗೊಳಿಸುವುದು ಡಬ್ಲ್ಯೂಹೆಚ್‌ಓದ ಪ್ರಾಥಮಿಕ ಗುರಿಯಾಗಿದೆ. ಇದರ ಕೇಂದ್ರ ಕಛೇರಿ ಇರುವುದು ಸ್ವಿಟ್ಜರ್ಲೆಂಡಿನ ಜಿನಿವಾದಲ್ಲಿದೆ. ಪ್ರಸ್ತುತ ಇದರ ಮುಖ್ಯಸ್ಥರು ಮಾರ್ಗರೇಟ್ ಜಾನ್. 2013ರವರೆಗೆ 194 ದೇಶಗಳು ಸದಸ್ಯತ್ವ ಪಡೆದಿದೆ.

**ವಿಶ್ವ ಆರೋಗ್ಯ ಸಂಸ್ಥೆಯ ಈವರೆಗಿನ ಕಾರ್ಯಗಳು:**

* ಸಾಂಕ್ರಾಮಿಕ ರೋಗಗಳ ಬಗೆಗೆ 1947ರಿಂದ ಡಬ್ಲ್ಯೂಹೆಚ್ಓ ಟೆಲೆಕ್ಸ್ (ಮಾಧ್ಯಮ) ಮೂಲಕ ಮಾಹಿತಿ ನೀಡಲು ಪ್ರಾರಂಭಿಸಿತು.
* ಟಿಬಿ ಕುರಿತಾದ ಚುಚ್ಚುಮದ್ದು ಬಿಸಿಜಿಯನ್ನು 1950ರಲ್ಲಿ ಜಗತ್ತಿನ ಎಲ್ಲೆಡೆ ಪರಿಚಯಿಸಿತು
* 1955ರಲ್ಲಿ ಮಲೇರಿಯಾ ನಿರ್ಮೂಲನಾ ಯೋಜನೆ ಕೈಗೆತ್ತಿಕೊಂಡು ಯಶಸ್ವಿಗೊಳಿಸಿತು
* 1965ರಲ್ಲಿ ಕ್ಯಾನ್ಸರ್ ಸಂಶೋಧನೆಯ ಅಂತರ್‌ರಾಷ್ಟ್ರೀಯ ವಿಶೇಷ ಸಂಘವನ್ನು ಸ್ಥಾಪಿಸಿತು
* 1975ರಲ್ಲಿ ರೋಗದಿಂದ ಪ್ರತಿ ರಕ್ಷಣೆಯ ಯೋಜನೆ
* 1977ರಲ್ಲಿ ಉಷ್ಣವಲಯದ ಪ್ರದೇಶದಲ್ಲಿಯ ರೋಗಗಳ ಕುರಿತಾದ ಯೋಜನೆ
* 1986ರಲ್ಲಿ ಹೆಚ್‌ಐವಿ / ಏಡ್ಸ್ ನಂತರ ಆನ್‌ಏಡ್ಸ್ 1996ರಲ್ಲಿ ಸ್ಥಾಪನೆ ಆಯಿತು.

**ವಿಶ್ವ ಆರೋಗ್ಯ ಸಂಸ್ಥೆಯ ಉದ್ದೇಶ:**

ಜಗತ್ತಿನ ಎಲ್ಲ ಜನತೆಗೆ ಉನ್ನತ ಮಟ್ಟದ ಆರೋಗ್ಯ ದೊರೆಯುವಂತೆ ಅವಕಾಶ ಮಾಡಿಕೊಡುವುದು.

**ವಿಶ್ವ ಆರೋಗ್ಯ ಸಂಸ್ಥೆಯ ಸಂವಿಧಾನದಲ್ಲಿ ಹೇಳಲಾದ ಕಾರ್ಯಗಳು:**

* ಅಂತರ್‌ರಾಷ್ಟ್ರೀಯ ಆರೋಗ್ಯ ವಿಷಯದ ಕುರಿತು ಅದು ಸಹಯೋಗ ಮತ್ತು ನಿರ್ದೇಶನದ ಕಾರ್ಯ ನಿರ್ವಹಿಸಬೇಕು.
* ಅಂತರ್‌ರಾಷ್ಟ್ರೀಯ ಸಂಘಟನೆಗಳೊಂದಿಗೆ ಸಹಕಾರಯುತ ಸಂಬಂಧ.
* ಸರ್ಕಾರಗಳಿಗೆ ಆರೋಗ್ಯದ ವಿಷಯದ ಕುರಿತು ಸಹಾಯ ಮತ್ತು ನಿವಾರಣೆ.
* ಅಂತರ್‌ರಾಷ್ಟ್ರೀಯ ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆ ಸಂಶೋಧನೆಗೆ ಬೆಂಬಲ ನೀಡುವುದು.

**ವಿಶ್ವ ಆರೋಗ್ಯ ಸಂಸ್ಥೆಯ ಪಾತ್ರ:**

ಜಂಟಿ ಕಾರ್ಯಾಚರಣೆಯ ಸಂದರ್ಭದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ನಾಯಕತ್ವ ವಹಿಸುತ್ತದೆ. ಸಂಶೋಧನೆ ಮತ್ತು ಚುಚ್ಚುಮದ್ದುಗಳ ಪೂರೈಕೆ ಮಾಡುತ್ತದೆ. ವೈದ್ಯಕೀಯ ನೈತಿಕತೆಯನ್ನು ಪ್ರತಿಬಿಂಬಿಸುತ್ತದೆ. ಆರೋಗ್ಯದ ಕುರಿತಾದ ವಿಚಾರ, ವಿನಿಮಯ ಗೋಷ್ಠಿಯನ್ನು ಮಾಡುತ್ತದೆ.

**ಅಂತರ್‌ರಾಷ್ಟ್ರೀಯ ಕಾರ್ಮಿಕರ ಸಂಘ:**

ಇದರ ಸ್ಥಾಪನೆಯಾದದ್ದು 1919ರಲ್ಲಿ. ಇದರ ಕೇಂದ್ರ ಕಛೇರಿ ಸ್ವಿಟ್ಜರ್‌ಲ್ಯಾಂಡ್‌ನ ಜಿನೇವಾದಲ್ಲಿದೆ. ಪ್ರಸ್ತುತ ಇದರ ಮುಖ್ಯಸ್ಥರು ಗೆಯ ರೈಡರ್. ಅಂತರ್ ರಾಷ್ಟ್ರೀಯ ತರಬೇತಿ ಕೇಂದ್ರವನ್ನು ಇಟಲಿಯ ಟ್ಯೂರಿನ್‌ನಲ್ಲಿ ಸ್ಥಾಪಿಸಲಾಗಿದ್ದು, ಇದು ಐಎಲ್ಓದ ಅಧಿಕಾರಿಗಳನ್ನು ಮತ್ತು ಸಚಿವಾಲಯದ ಸದಸ್ಯರನ್ನು ತರಬೇತುಗೊಳಿಸುತ್ತದೆ.

ಕಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ, ಸಾಮಾಜಿಕ ರಕ್ಷಣೆ, ಕೆಲಸದ ಅವಕಾಶದ ಕುರಿತು ಈ ಸಂಘಟನೆ ಕಾರ್ಯ ನಿರ್ವಹಿಸುತ್ತದೆ. 1969ರಲ್ಲಿ ಐಎಲ್ಓ ನೊಬೆಲ್ ಶಾಂತಿ ಪ್ರಶಸ್ತಿ ಪಡೆಯಿತು. ತ್ರಿಪಕ್ಷೀಯ ಆಡಳಿತಾತ್ಮಕ ರಚನೆಯನ್ನು ಹೊಂದಿದೆ. ಪ್ರಾತಿನಿಧ್ಯದ ಸರ್ಕಾರ, ಉದ್ಯೋಗಿ, ಕಾರ್ಮಿಕರು, ತ್ರಿಪಕ್ಷೀಯ ರಚನೆಗೆ ಕಾರಣ ಸರ್ಕಾರ ಮತ್ತು ಸಾಮಾಜಿಕ ವ್ಯವಸ್ಥೆಯೊಂದಿಗೆ ನಿರ್ಬಂಧ ರಹಿತ ಆಡಳಿತ ನಿರ್ವಹಣೆಗೆ ಸಹಾಯ ಮಾಡುತ್ತದೆ. ಇದು ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತದೆ.

* ಕಾರ್ಮಿಕರ ಜೀವನಮಟ್ಟವನ್ನು ಸುಧಾರಿಸುವುದು
* ನಿರುದ್ಯೋಗ ತಡೆಯಲು ಕ್ರಮ ವಹಿಸುತ್ತದೆ. 1960ರಲ್ಲಿ ಜಾಗತಿಕ ಉದ್ಯೋಗ ಯೋಜನೆ ರಚನೆ ಮಾಡಲಾಯಿತು
* ಕಾರ್ಖಾನೆಗಳಲ್ಲಿ ದುಡಿಯುವವರಿಗೆ ಸಾಮಾಜಿಕ ಭದ್ರತೆ ನೀಡುವುದು
* ಕಾರ್ಮಿಕ ಸಂಘಟನೆ ರಚನೆ ಪ್ರೋತ್ಸಾಹ

* ಮಹಿಳೆ ಮತ್ತು ಮಕ್ಕಳ ಕುರಿತು ಕಾಳಜಿ
* ಸದಸ್ಯ ರಾಷ್ಟ್ರಗಳಿಗೆ ತಾಂತ್ರಿಕ ಸೇವೆ

ಕೆಲಸದ ವೇಳೆ, ಮಾನವ ಹಕ್ಕುಗಳು, ಕನಿಷ್ಠ ವೇತನ, ಕಾರ್ಮಿಕರ ಪರಿಹಾರ, ಕೈಗಾರಿಕಾ ಸುರಕ್ಷತೆ ಕುರಿತು ಕಾನೂನು ರಚನೆ ಮಾಡುತ್ತದೆ. ಹಾಗೆಯೇ ಕಾರ್ಮಿಕರಿಗೆ ವಸತಿ ಸೌಲಭ್ಯ, ಸಾಂಸ್ಕೃತಿಕ ಬೆಳವಣಿಗೆ, ಪೌಷ್ಠಿಕ ಆಹಾರ ಕುರಿತು ಕಾನೂನುಗಳನ್ನು ರಚಿಸುತ್ತದೆ.

**ಅಂತರ್‌ರಾಷ್ಟ್ರೀಯ ಕಾರ್ಮಿಕರ ಸಂಘದ ಕಾರ್ಯಗಳು:**

* ಕಾರ್ಮಿಕರ ಕುರಿತಾದ ಅಂಕಿಅಂಶಗಳ ಬಿಡುಗಡೆ ಮಾಡುವುದು.
* ಈ ದತ್ತಾಂಶದ ಮೂಲಕ ತನ್ನ ಸದಸ್ಯ ರಾಷ್ಟ್ರಗಳ ಸ್ಥಿತಿಗತಿಗಳ ಅಧ್ಯಯನ, ಅದರಿಂದ ಕಾರ್ಯಗತವಾಗಲು ಪ್ರೇರೇಪಣೆ ನೀಡುವುದು.
* 200 ರಾಷ್ಟ್ರಗಳನ್ನು ಒಳಗೊಂಡ 11 ಪ್ರಮುಖ ಅಂಕಿಅಂಶಗಳನ್ನು ಐಎಲ್‌ಓ ಬಿಡುಗಡೆ ಮಾಡುತ್ತದೆ.

**ಬಾಲ ಕಾರ್ಮಿಕ ಮತ್ತು ಐಎಲ್‌ಓ:**

ಬಾಲ ಕಾರ್ಮಿಕತೆ ಪದ್ಧತಿಯು ಸಾಮಾಜಿಕವಾಗಿ ದೈಹಿಕವಾಗಿ, ಮಾನಸಿಕವಾಗಿ, ನೈತಿಕತೆಯಿಂದ ಮಕ್ಕಳಿಗೆ ಅಪಾಯಕಾರಿಯಾಗಿದೆ. ಮಕ್ಕಳ ಶೈಕ್ಷಣಿಕ ಜೀವನಕ್ಕೆ ಅಡ್ಡಿಯಾಗಿರುತ್ತದೆ. ಮಕ್ಕಳ ಶೈಕ್ಷಣಿಕ ಅವಕಾಶ ಕಸಿದುಕೊಳ್ಳುತ್ತದೆ. ಆದ್ದರಿಂದ 1992ರಲ್ಲಿ ಬಾಲ ಕಾರ್ಮಿಕ ನಿವಾರಣೆ ಕಾರ್ಯಕ್ರಮವನ್ನು ಐಎಲ್‌ಓ ಪ್ರಾರಂಭಿಸಿತು. ಪ್ರಸ್ತುತ ಇದು 88 ದೇಶಗಳಲ್ಲಿ ವಾರ್ಷಿಕ 74 ಮಿಲಿಯನ್‌ದೊಂದಿಗೆ ಜಾರಿಯಲ್ಲಿರುತ್ತದೆ. ವಿಶ್ವದಲ್ಲಿ ಇದು ಅತಿ ದೊಡ್ಡ ಪ್ರಮಾಣದ ಮತ್ತು ವ್ಯಾಪಕವಾಗಿ ಹರಡಿದ ಯೋಜನೆಯಾಗಿದೆ. ಪ್ರಸ್ತುತ ಈ ಯೋಜನೆಯೊಂದಿಗೆ ಕಾರ್ಮಿಕರ / ಉದ್ಯೋಗಿಗಳ ಸಂಘಟನೆಗಳು, ಸರ್ಕಾರಿ ಸಂಸ್ಥೆಗಳು, ಖಾಸಗಿ ವ್ಯವಹಾರಿಕ ಸಂಸ್ಥೆಗಳು, ಎನ್‌ಜಿಓಗಳು ಭಾಗಿಯಾಗಿವೆ. ಹಾಗೆಯೇ ಇದು ಕನಿಷ್ಠ ಕೂಲಿ ಕಾಯಿದೆ. ಹೆಚ್‌ಐವಿ / ಏಡ್ಸ್ ಒತ್ತಾಯದ ದುಡಿಮೆಗೆ ವಿರೋಧಿಸುತ್ತದೆ.

**ಆಹಾರ ಮತ್ತು ಕೃಷಿ ಸಂಸ್ಥೆ:**

ಇದರ ಸ್ಥಾಪನೆಯಾದದ್ದು 16.10.1945ರಲ್ಲಿ. ಇದರ ಕೇಂದ್ರ ಕಛೇರಿ ಇರುವುದು ಇಟಲಿಯ ರೋಮ್‌ನಲ್ಲಿ. ಪ್ರಸ್ತುತ ಜೋಸ್ ಗ್ರಾಜಿಯಾನೊ ಡಾ.ಜಿಲ್ವಾ ಇದರ ಮುಖ್ಯಸ್ಥರು.

ಅಂತರ್‌ರಾಷ್ಟ್ರೀಯ ಎಫ್‌ಎಓನ ವಿಚಾರವು 19ನೇಯ ಶತಮಾನದ ಅಂತ್ಯದಲ್ಲಿ ಕಂಡುಬಂದಿತು. ಡೇವಿಡ್ ಲುಬಿನ್ ಯುಎಸ್ ಅವರು ಈ ವಿಚಾರವನ್ನು ವ್ಯಕ್ತಪಡಿಸಿದವರು. 1905ರಲ್ಲಿ ಇಟಲಿಯಲ್ಲಿ ಮೊದಲ ಬಾರಿಗೆ ಇದನ್ನು ಪ್ರಸ್ತಾಪಿಸಲಾಯಿತು. 1943ರಲ್ಲಿ ಯುಎಸ್ ಅಧ್ಯಕ್ಷ ಫ್ರಾಂಕಲಿನ್ ರೂಸ್‌ವೆಲ್ಡ್ ಈ ಕುರಿತಾಗಿ ಸಭೆ ಕರೆದರು. ಮತ್ತು 1945 ಅಕ್ಟೋಬರ್ 16ರಂದು ಸ್ಥಾಪನೆ ಆಯಿತು.

**ರಚನೆ:**

ಆಹಾರ ಮತ್ತು ಕೃಷಿ ಸಂಸ್ಥೆಯ ಸದಸ್ಯರು 2 ವರ್ಷಗಳಿಗೊಮ್ಮೆ ಸಭೆ ಸೇರುತ್ತಾರೆ. ಎಫ್‌ಎಓಗೆ ಆಡಳಿತಾತ್ಮಕ ಸಭೆ ಇದ್ದು ಇದನ್ನು ನಿರ್ದೇಶಕರು ನಡೆಸಿಕೊಂಡು ಹೋಗುತ್ತಾರೆ. ಎಫ್‌ಎಓ ಇಲಾಖೆಗಳನ್ನು ಒಳಗೊಂಡಿದೆ. ಅವುಗಳು ಆಡಳಿತ ಹಣಕಾಸು, ಕೃಷಿ ಗ್ರಾಹಕರ ರಕ್ಷಣೆ, ಆರ್ಥಿಕ ಸಾಮಾಜಿಕ ಅಭಿವೃದ್ಧಿ, ಮೀನುಗಾರಿಕೆ, ಅರಣ್ಯಾಗಾರಿಕೆ, ಸ್ವಾಭಾವಿಕ ಸಂಪನ್ಮೂಲ ನಿರ್ವಹಣೆ, ಪರಿಸರ ಮತ್ತು ತಾಂತ್ರಿಕ ನೆರವು.

**ಎಫ್‌ಎಓನ ಪ್ರಮುಖ ಕಾರ್ಯಗಳು:**

* ಹಸಿವು ನಿರ್ಮೂಲನೆ, ಆಹಾರ ಭದ್ರತೆ, ಪೌಷ್ಠಿಕ ಆಹಾರ ಕೊರತೆಯ ನೀಗಿಸುವಿಕೆ
* ಕೃಷಿ, ಅರಣ್ಯಾಗಾರಿಕೆ, ಮೀನುಗಾರಿಕೆಯನ್ನು ಹೆಚ್ಚು ಉತ್ಪನ್ನದಾಯಕ ಮತ್ತು ಅಭಿವೃದ್ಧಿಗೊಳಿಸುವುದು. ನಿರಂತರಗೊಳಿಸುವುದು
* ಗ್ರಾಮೀಣ ಬಡತನ ನಿರ್ಮೂಲನೆ
* ಸಣ್ಣ ಕೃಷಿ ಕಾರ್ಮಿಕರ ಅಭಿವೃದ್ಧಿ
* ಸ್ವಾಭಾವಿಕ / ನೈಸರ್ಗಿಕ ವಿಕೋಪಗಳಿಂದ ಹಾನಿಗೊಲಗಾದವರಿಗೆ ನೆರವು.

**ಎಫ್‌ಎಓ ಸಾಧನೆಗಳು:**

* 1961ರಲ್ಲಿ ಕೊಡೆಕ್ ಅಲಿಮೆಂಟರಿ ಕಮಿಷನ್ ಸ್ಥಾಪಿಸಿ, ಕೃಷಿ, ಆಹಾರದ ಅಭಿವೃದ್ದಿಗೆ ಯೋಜನೆ ರೂಪಿಸಿತು.
* ವಿಶ್ವ ಆರೋಗ್ಯ ಸಭೆ: 1996ರಲ್ಲಿ ಎಫ್‌ಎಓ ವಿಶ್ವ ಆರೋಗ್ಯ ಸಮ್ಮೇಳನ ನಡೆಸಿತು. ವಿಶ್ವದ 112 ದೇಶಗಳ ಮುಖ್ಯಸ್ಥರು ಹಾಜರಿದ್ದರು. ಈ ಸಮ್ಮೇಳನದಲ್ಲಿ 'ಹಸಿವು ನಿರ್ಮೂಲನೆ' ಯೋಜನೆ ಕೈಗೆತ್ತಿಕೊಳ್ಳಲಾಯಿತು.
* 1997ರಲ್ಲಿ ಟೆಲಿಫುಡ್ ಪ್ರಾರಂಭಿಸಿತು. ಕ್ರೀಡೆ, ಮನೋರಂಜನೆ, ಕಾರ್ಯಕ್ರಮಗಳ ಆಯೋಜನೆ, ಇದರಿಂದ ಬಂದ ಹಣ ಸಣ್ಣ ಕೃಷಿಕರಿಗೆ ಮೀನುಗಾರರಿಗೆ ವಿನಿಯೋಗ ಮಾಡಲಾಯಿತು.
* ಎಫ್‌ಎಓದ ರಾಯಭಾರಿ ಪ್ರತಿನಿಧಿತ್ವ ಕಾರ್ಯಕ್ರಮ 1999 ಪ್ರಾರಂಭಿಸಿತು. ಈ ಮೂಲಕ ಹಸಿವು ಪೌಷ್ಠಿಕಾಂಶದ ಕೊರತೆಯ ಕುರಿತು ಜನತೆಗೆ ಮನವರಿಕೆ, ಜನಪ್ರಿಯ, ಪ್ರಸಿದ್ಧಿ ಪಡೆದ ಕಲಾವಿದರು, ಆಟಗಾರರು, ಮುಂತಾದವರ ಮೂಲಕ ಆಹಾರದ ಬಗೆಗಿನ ತಿಳುವಳಿಕೆ ನೀಡುವ ಕ್ರಮ ಪ್ರಾರಂಭವಾಯಿತು.
* ಆಹಾರದ ಹಕ್ಕಿನಬ ಕುರಿತಾದ ನಿಯಮ 2004ರಲ್ಲಿ ಎಫ್‌ಎಓ ಅಂಗೀಕರಿಸಿ, ಅದನ್ನು ಪಾಲಿಸುವಂತೆ ಎಲ್ಲ ರಾಷ್ಟ್ರಗಳಿಗೆ ಹೇಳಿಕೊಂಡಿದೆ.
* ಎಫ್‌ಎಓ–ಈಯು ಒಡಂಬಡಿಕೆ: 2009ರಲ್ಲಿ ಎಫ್‌ಎಓ–ಈಯು ಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. 125 ಮಿಲಿಯನ್ ಯೂರೋವನ್ನು ಸಣ್ಣ ಕೃಷಿ ಕಾರ್ಮಿಕರ ಅಭಿವೃದ್ದಿಗೆ ಪಡೆಯಿತು.
* ಆಹಾರ ಭದ್ರತೆಯ ಯೋಜನೆಗಳು: ಹಸಿವು ನಿರ್ಮೂಲನೆ ಯೋಜನೆಯನ್ನು 102 ದೇಶಗಳು ಈ ಯೋಜನೆಯನ್ನು ಜಾರಿ ಮಾಡಿದೆ.
* ಹಸಿವಿನ ವಿರುದ್ಧ ಆನ್‌ಲೈನ್ ಪ್ರಚಾರ: 2011ರಲ್ಲಿ ಹಸಿವು ಕೊನೆಗಾಣಿಸುವ ಹೋರಾಟ.

**ಕೃಷಿಗೆ ಸಂಬಂಧಿಸಿದ ಎಫ್‌ಎಓನ ಸಾಧನೆಗಳು:**

* 1952– ಇಂಟಿಗ್ರೇಟೆಡ್ ಪ್ಲಾಂಟ್ ಪ್ರೊಟೆಕ್ಷನ್ ಕನ್‌ವೆನ್‌ಷನ್
* 1990– ಇಂಟಿಗ್ರೇಟೆಡ್ ಪೆಸ್ಟ್ ಮ್ಯಾನೇಜ್‌ಮೆಂಟ್ ಅಕ್ಕಿ ಅಭಿವೃದ್ಧಿ ಕುರಿತು ತರಬೇತಿ
* 1994– ಟ್ರಾನ್ಸ್‌ಬಾಂಡರಿ ಪೆಸ್ಟ್ಸ್ ಅಂಡ್ ಡಿಸ್‌ಕಷನ್

## ಅಂತರ್ ರಾಷ್ಟ್ರೀಯ ಹಣಕಾಸಿನ ನಿಧಿ:

ಹಣಕಾಸು ಭದ್ರತೆಯನ್ನು, ಅಂತರ್‌ರಾಷ್ಟ್ರೀಯ ವ್ಯಾಪಾರ ವ್ಯವಹಾರ, ಉದ್ಯೋಗ ಪೂರೈಕೆ, ಆರ್ಥಿಕ ಅಭಿವೃದ್ಧಿಯ ಕುರಿತಾದ ಬಡತನ ನಿರ್ಮೂಲನೆಯ ಉದ್ದೇಶಗಳೊಂದಿಗೆ ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಯು ಜನ್ಮ ತಾಳಿದೆ.

ಇದನ್ನು 27 ಡಿಸೆಂಬರ್ 1945ರಲ್ಲಿ ಸ್ಥಾಪಿಸಲಾಯಿತು. ಇದರ ಕೇಂದ್ರ ಕಛೇರಿ ವಾಷಿಂಗ್‌ಟನ್ ಡಿ.ಸಿಯಲ್ಲಿದೆ. ಇದರ ಪ್ರಸ್ತುತ ಸದಸ್ಯ ರಾಷ್ಟ್ರಗಳು 188. ಇಲ್ಲಿ ಬಳಸಲಾಗುವ ಅಧಿಕೃತ ಭಾಷೆಗಳು – ಅರೇಬಿಕ್, ಚೈನೀಸ್, ಇಂಗ್ಲೀಷ್, ಫ್ರೆಂಚ್, ರಷ್ಯನ್, ಸ್ಪ್ಯಾನಿಷ್, ಇದರ ಪ್ರಸ್ತುತ ಮುಖ್ಯಸ್ಥರು ಎಮ್.ಡಿ.ಕ್ರಿಶ್ಚಿಯನ್ ಲಿಗಾರ್ಡ್.

**ಐಎಂಎಫ್‌ನ ಕಾರ್ಯಕ್ರಮಗಳು:**

* ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹಣಕಾಸು ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ
* ಇದು ಜಾಗತಿಕ ಆರ್ಥಿಕತೆಯ ಕಣ್ಗಾವಲು
* ವ್ಯಾಪಾರ ನೀತಿಯಲ್ಲಿ ಉದಾರೀಕರಣ, ತರಬೇತಿ ಮತ್ತು ರಫ್ತಿನ ನಿರ್ಬಂಧಗಳ ನಿವಾರಣೆ
* ವಿದೇಶಿ ಹೂಡಿಕೆದಾರರುಗಳ ಹಕ್ಕುಗಳನ್ನು ಹೆಚ್ಚಿಸುವುದು
* ಆಡಳಿತದ್ದಲಿ ಸುಧಾರಣೆ, ಮತ್ತು ಭ್ರಷ್ಟಾಚಾರದ ಹೋರಾಟ

### ವಿಶ್ವಬ್ಯಾಂಕ್:

ವಿಶ್ವಬ್ಯಾಂಕ್ ಸ್ಥಾಪನೆಯಾದದ್ದು 1944, ಜುಲೈನಲ್ಲಿ. ಇದು ವಿಧಿ, ಒಪ್ಪಂದದ ಮೂಲಕ ಸ್ಥಾಪನೆಯಾದ ಸಂಸ್ಥೆಯಾಗಿದೆ. ಇದರ ಕೇಂದ್ರ ಕಛೇರಿ ಇರುವುದು ವಾಷಿಂಗ್‌ಟನ್ ಡಿ.ಸಿಯಲ್ಲಿ. ಪ್ರಸ್ತುತ ಇದರ ಸದಸ್ಯ ದೇಶಗಳು 188.

ವಿಶ್ವಬ್ಯಾಂಕ್ ಅಭಿವೃದ್ಧಿಶೀಲ ರಾಷ್ಟ್ರಗಳ ಜನರ ಮೂಲ ಅಗತ್ಯಗಳನ್ನು ಪೂರೈಸುವತ್ತ ಗಮನಹರಿಸಿದೆ. ಸಾಲಗಾರರು, ಸಾಲದ ಗಾತ್ರ, ಸಂಖ್ಯೆ, ಸಾಮಾಜಿಕ ಸೇವೆಗಳು, ಮೂಲ ಸೌಕರ್ಯಗಳ ವಿಸ್ತರಣೆ, ಸಾಲದ ಗುರಿಯನ್ನು ಈ ಬ್ಯಾಂಕ್ ಹೆಚ್ಚಿಸಿದೆ. ಕೃಷಿ ಸುಧಾರಣಾ ನೀತಿಗಳ ಜಾರಿ ಮಾಡಲಾಯಿತು. ಸಕ್ರೀಯವಾದ ಸಂಭಾವ್ಯ ಸಾಲಗಾರ ರಾಷ್ಟ್ರಗಳಿಂದ ಮಾಹಿತಿ ಸಂಗ್ರಹಣೆ ಮತ್ತು ಹೊಸ ವ್ಯವಸ್ಥೆಯನ್ನು ರಚಿಸಲಾಗಿದೆ. ಏಷ್ಯಾ, ಲ್ಯಾಟಿನ್, ಅಮೇರಿಕಾ ಮತ್ತು ಆಫ್ರಿಕಾ ಮಕ್ಕಳ (ಹತ್ತು ದಶಲಕ್ಷ) ಕಡಿಮೆ ಆರೋಗ್ಯ, ಪೌಷ್ಠಿಕ ಮತ್ತು ಶೈಕ್ಷಣಿಕ ಮಟ್ಟವನ್ನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

### 1989ರಿಂದ ಪ್ರಸ್ತುತದವರೆಗೆ:

ಬ್ಯಾಂಕ್ ಇತರ ಸಂಘಟನೆಗಳು ಮತ್ತು ಎನ್‌ಜಿಓಗಳ ಸಹಾಯದೊಂದಿಗೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಗಮನ ಹರಿಸಿತು. 1993–97ರಲ್ಲಿಯ ಮ್ಯಾಂಟ್ರಿಯಲ್ ಪ್ರೋಟೋಕಾಲ್ ಮೂಲಕ 2015ರ ಹೊತ್ತಿಗೆ ಓಜೋನ್ ಪದರು ಸಂರಕ್ಷಣೆಯ ಗುರಿಯನ್ನು ವರ್ಲ್ಡ್ ಬ್ಯಾಂಕ್ ಸಹ ಹಮ್ಮಿಕೊಂಡಿತು. 1991ರಲ್ಲಿ ಡಬ್ಲ್ಯೂಬಿ ಅಮೇಜಾನ್ ಅರಣ್ಯ ನಾಶದ ವಿರುದ್ದ ಮೂಲಭೂತ ಯೋಜನೆ ರೂಪಿಸಿತು. 2000ದಲ್ಲಿ 'ಏಡ್ಸ್ ಯುದ್ದ' 2011ರಲ್ಲಿ ಕ್ಷಯರೋಗದ ನಿರ್ಮೂಲನೆ ಯೋಜನೆಗಳಿಗೆ ಬೆಂಬಲವಾಗಿ ನಿಂತಿತು.

### ವಿಶ್ವಬ್ಯಾಂಕ್‌ನ ಸುಧಾರಣೆಗಳು:

1) ಬಡತನ ಮತ್ತು ಹಸಿವಿನ ನಿರ್ಮೂಲನೆ: 1990–2000 ಅವಧಿಯಲ್ಲಿ ಡಬ್ಲ್ಯೂಬಿ ಅತಿ ಕಡುಬಡತನದಲ್ಲಿ ವಾಸಿಸುತ್ತಿರುವ ಜನರ ಪ್ರಮಾಣವನ್ನು 5ರಿಂದ 3ಕ್ಕೆ ಇಳಿಸಿತು. ಪ್ರಪಂಚದ ಬಡತನದ ಅರ್ಧದಷ್ಟು ಪ್ರಮಾಣ ಕಡಿತಗೊಳಿಸಲಾಯಿತು. ಆಫ್ರಿಕಾ ದೇಶದ 36 ದೇಶಗಳಲ್ಲಿ ಬಡತನ ಪ್ರಮಾಣ ಕಡಿಮೆಗೊಳಿಸಲು ಗುರಿಯನ್ನು ಹೊಂದಿದೆ.

2) ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸಾಧನೆ: 1991ರಲ್ಲಿ 80%ರಷ್ಟು ಇದ್ದ ಪ್ರಮಾಣವು 2005ರಲ್ಲಿ 88%ರಷ್ಟು ಶಿಕ್ಷಣದ ಪ್ರಮಾಣವನ್ನು ಹೆಚ್ಚಿಸಲಾಯಿತು. ಲಿಂಗ ಸಮಾನತೆಯ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣದ ಯೋಜನೆಗಳನ್ನು ಉತ್ತೇಜಿಸಲಾಯಿತು.

3) ಮಕ್ಕಳ ಮರಣ ಪ್ರಮಾಣ ಕಡಿಮೆಗೊಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿತು. ದಕ್ಷಿಣ ಏಷ್ಯಾ ಮತ್ತು ಸಹಾರಾ ಆಫ್ರಿಕಾದಲ್ಲಿ ಮಕ್ಕಳ ಮರಣದ ದರವನ್ನು ಕಡಿಮೆಗೊಳಿಸುವ ಗುರಿಯನ್ನು ಹೊಂದಿದೆ.

* ತಾಯಿಯ ಆರೋಗ್ಯ ಸುಧಾರಣೆ.
* ಹೆಚ್‌ಐವಿ, ಮಲೇರಿಯಾ, ರೋಗ ನಿರ್ಮೂಲನೆ.
* ಜೈವಿಕ ವೈವಿಧ್ಯತೆ – ಅರಣ್ಯ ಸಂರಕ್ಷಣೆ
* ಆರ್ಥಿಕ ಅಭಿವೃದ್ಧಿಗಾಗಿ ಜಾಗತಿಕ ಪಾಲುದಾರಿಕೆಯ ಅಭಿವೃದ್ಧಿ.

### ಬಡತನ ನಿರ್ಮೂಲನೆ ಯೋಜನೆಗಳು:

80 ದೇಶಗಳಿಗೆ ಹಣಕಾಸಿನ ನೆರವು ನೀಡುವುದರ ಮೂಲಕ ಬಡತನ ಪ್ರಮಾಣ ಕಡಿಮೆಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಗ್ಲೋಬಲ್ ಫುಡ್ ಸೆಕ್ಯೂರಿಟಿ ಏಪ್ರಿಲ್ 2010ರಲ್ಲಿ ಪ್ರಾರಂಭಿಸಲಾಯಿತು. ಬಿಲ್‌ಗೇಟ್ಸ್ ಮತ್ತು ಶ್ರೀಮತಿ ಮಿಲಿಂಡಾ ಗೇಟ್ಸ್ ಜೊತೆಗೆ 6 ದೇಶಗಳ ಆಹಾರ ಭದ್ರತೆಗೆ $925 ಮಿಲಿಯನ್ ನೆರವು ನೀಡಿದೆ. ಕೃಷಿ, ಸಂಶೋಧನೆ, ಕೃಷಿ ವ್ಯಾಪಾರಗಳಲ್ಲಿ 8 ರಾಷ್ಟ್ರಗಳಲ್ಲಿ ಅಭಿವೃದ್ಧಿಗೆ ಸಹಾಯ ಮಾಡಲಾಗಿದೆ. ಜಾಗತಿಕ ಆಹಾರ ಬಿಕ್ಕಟ್ಟಿನ ಪ್ರತಿಕ್ರಿಯೆ ಕಾರ್ಯಕ್ರಮದ ಬಿಡುಗಡೆ ಮಾಡಿ 40 ದೇಶಕ್ಕೆ ಅನುದಾನ ನೀಡಿದೆ. ಆಸ್ಟ್ರೇಲಿಯಾ, ಮಂಗೋಲಿಯಾ, ಕಾಂಬೋಡಿಯಾ, ಚೀನಾ, ಇಂಡೋನೇಷಿಯಾ, ಸಿಂಗಾಪುರ, ಫಿಲಿಫೈನ್ಸ್, ಶ್ರೀಲಂಕಾ, ಜಪಾನ್, ಪಪುವಾ ನ್ಯೂಗಿನಿಗಳಲ್ಲಿ ಕ್ಷಿಪ್ರ ಬೆಳವಣಿಗೆ ಮತ್ತು ದೂರ ಶಿಕ್ಷಣ ಕೇಂದ್ರಗಳನ್ನು ಯೋಜಿಸಲಾಯಿತು.

**ಎಡಿಬಿ – ಏಷ್ಯನ್ ಅಭಿವೃದ್ಧಿ ಬ್ಯಾಂಕ್:**

ಇದನ್ನು 22.08.1966ರಲ್ಲಿ ಸ್ಥಾಪಿಸಲಾಯಿತು. ಇದರ ಗುರಿ ಫೈಟಿಂಗ್ ಪವರಿ ಇನ್ ಏಷ್ಯಾ ಅಂಡ್ ದಿ ಫೆಸಿಫಿಕ್. ಪ್ರಸ್ತುತ ಇದರ ಸದಸ್ಯ ರಾಷ್ಟ್ರಗಳ ಸಂಖ್ಯೆ 67. ಇದರ ಕೇಂದ್ರ ಕಛೇರಿ ಫಿಲಿಫೈನ್ಸ್‌ನ ಮಂಡಲ್ಯೂಂಗ್ ನಗರದಲ್ಲಿದೆ. ಪ್ರಸ್ತುತ ಇದರ ಮುಖ್ಯಸ್ಥರು ಟಾಕಿಹಿಕೊ ನಾಕೊಂ. ಇದೊಂದು ಪ್ರಾದೇಶಿಕ ಅಭಿವೃದ್ಧಿ ಕೇಂದ್ರ. ಪ್ರತಿಯೊಂದು ಸದಸ್ಯ ರಾಷ್ಟ್ರದಿಂದ ಒಬ್ಬ ಪ್ರತಿನಿಧಿಯನ್ನು ಮತ್ತು ಒಬ್ಬ ಅಧ್ಯಕ್ಷರನ್ನು ಹೊಂದಿದ ಮಂಡಳಿಯಾಗಿದೆ. ಅಧ್ಯಕ್ಷರ ಅಧಿಕಾರಾವಧಿ 5 ವರ್ಷಗಳು. ಎಡಿಬಿ ಸ್ಥಾಪನೆಯಾದಾಗ 1972ರಲ್ಲಿ ಜಪಾನ್ $173.7 ಮಿಲಿಯನ್, ಮತ್ತು $122.6 ನುಕುತಬ್ ವಿಶೇಷ ನಿಧಿಯನ್ನು ಕೊಡುಗೆಯಾಗಿ ನೀಡಿತು. ಇದಕ್ಕೆ ಬದಲಾಗಿ $1.25 ದಶಲಕ್ಷವನ್ನು ಅಮೇರಿಕಾ ನೀಡಿತು.

**ಎಡಿಬಿಯ ಗಮನಾರ್ಹವಾದ ಯೋಜನೆಗಳು:**

* ಅಫ್ಘನ್ ವಲಸೆ ಪ್ರಾಜೆಕ್ಟ್
* ಕಾರ್ನಲ್ ವಿ.ವಿ.ಥೈಲ್ಯಾಂಡ್ ಕಾರ್ಮಿಕ ಕೌಶಲಗಳನ್ನು ತರಲು ಹಣಕಾಸು ಸಹಾಯ ನೀಡುವುದು
* ಇಂಡೋನೇಷಿಯಾದಲ್ಲಿ ಭೂಕಂಪ ಮತ್ತು ಸುನಾಮಿ ತುರ್ತು ಪರಿಸ್ಥಿತಿಗಳಲ್ಲಿ ಹಣಕಾಸು ಬೆಂಬಲ
* ಫಿಲಿಫೈನ್ಸ್‌ನಲ್ಲಿ ಖಾಸಗಿ ವಲಯದ ಸಹಭಾಗಿತ್ವದೊಂದಿಗೆ ಬಡತನ ನಿರ್ಮೂಲನೆ ಕಾರ್ಯನೀತಿ
* ಪಾಕಿಸ್ತಾನದಲ್ಲಿಯ ಜಲವಿದ್ಯುತ್ ಯೋಜನೆಗಳನ್ನು ಸಣ್ಣ ಉದ್ದಿಮೆಯ ಅಭಿವೃದ್ಧಿಗೆ ಹಣಕಾಸು ಸಹಾಯ
* ಪಶ್ಚಿಮ ಹುಬೈ ಪ್ರಾಂತ್ಯ, ಚೀನಾ ಪರ್ವತ ಪ್ರದೇಶದಲ್ಲಿ ರೈಲ್ವೆ ಯೋಜನೆಗಳಿಗೆ ಹಣಕಾಸು ಸಹಾಯ
* ಕೊಲಂಬೋ ಬಂದರು ಯೋಜನೆಯ ವಿಸ್ತರಣೆ

**ಐಬಿಆರ್‌ಡಿ:**

ಇದು 1947ರಲ್ಲಿ ಆರಂಭವಾಯಿತು. ಇದರ ಕೇಂದ್ರ ಕಛೇರಿ ಇರುವುದು ವಾಷಿಂಗ್‌ಟನ್ ಡಿ.ಸಿಯಲ್ಲಿ. ಇದು 2ನೇ ಮಹಾಸಮರದ ನಂತರ ಆರ್ಥಿಕ ಪುನಶ್ಚೇತನಕ್ಕಾಗಿ ಕೃಷಿ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕಾಭಿವೃದ್ಧಿಗೆ ಅಗತ್ಯವಿರುವ ಅಗಾಧ ಮೊತ್ತದ ಸಾಲವನ್ನು ಸದಸ್ಯ ದೇಶಗಳಿಗೆ ನೀಡುತ್ತದೆ. ವಿಶ್ವ ವ್ಯಾಪಾರ ಮತ್ತು ವಿದೇಶೀ ವಿನಿಮಯ ಪಾವತಿ ಸಮತೋಲನಕ್ಕೆ ಸಹಾಯ ಮಾಡುತ್ತದೆ. ಪ್ರಗತಿಪರ ದೇಶಗಳ ಆರ್ಥಿಕ ಅಭಿವೃದ್ಧಿಗೆ ಅತ್ಯಧಿಕ ಸಹಾಯ ಮಾಡುತ್ತಿದೆ. ಇದರಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಮಂಡಳಿ ಹಾಗೂ ಅಧ್ಯಕ್ಷರು ಕಾರ್ಯನಿರ್ವಹಿಸುತ್ತಾರೆ.

ಇದರ 2 ಸಹಕಾರಿ ಅಂಶಗಳೆಂದರೆ,

1) ಅಂತರ್‌ರಾಷ್ಟ್ರಿಯ ಪ್ರಗತಿ ಕೂಟ
2) ಅಂತರ್‌ರಾಷ್ಟ್ರೀಯ ಹಣಕಾಸು ನಿಗಮ

**ಯುನೆಸ್ಕೋ:**

ಪ್ಯಾರಿಸ್‌ನಲ್ಲಿ 1946ರಲ್ಲಿ ಇದು ಸ್ಥಾಪನೆ ಆಯಿತು. ಇದರ ಉದ್ದೇಶ ವಿಶ್ವದಾದ್ಯಂತ ವಿಜ್ಞಾನ, ಶಿಕ್ಷಣ, ಸಂಸ್ಕೃತಿ ಮುಂತಾದವುಗಳನ್ನು ಪ್ರೋತ್ಸಾಹಿಸುವುದು. ತಾಂತ್ರಿಕ ಶಿಕ್ಷಣ, ಮಾಧ್ಯಮ, ತಂತ್ರಗಾರಿಕೆ, ರಚನಾತ್ಮಕ ಚಿಂತನೆ, ಸಾಂಸ್ಕೃತಿಕ ವಿಚಾರಗಳು ಹಾಗೂ ಪರಿಸರ ವಿಜ್ಞಾನದ ಬಗೆಗೆ ಇದು ಕಾರ್ಯೋನ್ಮುಖವಾಗುತ್ತದೆ. ಶಿಕ್ಷಣ ಮತುತ ಜ್ಞಾನ ಪ್ರಸಾರಕ್ಕಾಗಿ ಇದು ಸರ್ಕಾರಗಳಿಗೆ, ಎನ್‌ಜಿಓಗಳಿಗೆ ಸಹಾಯ ನೀಡುತ್ತದೆ. ಸಾಂಸ್ಕೃತಿಕ, ಪಾರಂಪರಿಕ, ಪರಿಸರಿಕ ಪ್ರಾಮುಖ್ಯತೆಗಳನ್ನು ಗುರುತಿಸಿ, ಪಟ್ಟಿ ಮಾಡಿ ಅವುಗಳ ರಕ್ಷಣೆಗೆ ಸಹಾಯ ಹಸ್ತ ನೀಡುತ್ತದೆ.

**ಯುನಿಸೆಫ್:**

ದ್ವಿತೀಯ ಮಹಾಯುದ್ದದ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಇದನ್ನು 1946ರಲ್ಲಿ ಸ್ಥಾಪಿಸಲಾಯಿತು. 1957ರಲ್ಲಿ ಶಾಶ್ವತ ಸಂಸ್ಥೆಯಾಗಿ ಪರಿವರ್ತಿಸಲಾಯಿತು. ಈ ಸಂಸ್ಥೆಯಲ್ಲಿ 30 ಸದಸ್ಯರಿದ್ದಾರೆ. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾದ ಪರಿಸರ ಒದಗಿಸುವುದೇ ಈ ಸಂಸ್ಥೆಯ ಉದ್ದೇಶವಾಗಿದೆ. 1965ರಲ್ಲಿ

ನೋಬೆಲ್ ಶಾಂತಿ ಪುರಸ್ಕಾರ ಪಡೆಯಿತು. ಶುಭಾಷಯ ಪತ್ರಗಳ ಮಾರಾಟದ ಮೂಲಕ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸಲಾಗುತ್ತಿದೆ.

**ವಿಶ್ವ ವ್ಯಾಪಾರ ಸಂಘ:**

ಈ ಸಂಸ್ಥೆ 1995 ಜನವರಿ 1ರಂದು ಹುಟ್ಟಿಕೊಂಡಿತು. ಇದರ ಎಲ್ಲ ಸದಸ್ಯ ದೇಶಗಳು ಜಿಎಟಿಟಿ ಯ ಒಪ್ಪಿಗೆ ಸೂಚಿಸಿದವು. ಅಂತರ್‌ರಾಷ್ಟ್ರೀಯ ಮಟ್ಟದ ವಾಣಿಜ್ಯ ಮತ್ತು ವ್ಯಾಪಾರದ ತೊಡಕುಗಳ ನಿವಾರಣೆಗೆ ಇದು ಯತ್ನಿಸುತ್ತದೆ. ಇದು ಅಂತರ್‌ರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳ ಧೋರಣೆ ರೂಪಿಸುವಲ್ಲಿ ಸಹಕರಿಸುತ್ತದೆ. ಐಎಂಎಫ್ ಮತ್ತು ಐಬಿಆರ್‌ಡಿ ಸಂಸ್ಥೆಗಳೊಂದಿಗೆ ಇದು ತೃತೀಯ ಆರ್ಥಿಕ ಆಧಾರ ಸ್ಥಂಭ ಎಂದು ಕರೆಯಲ್ಪಡುತ್ತದೆ.

**ಕಾಮನ್‌ವೆಲ್ತ್ ರಾಷ್ಟ್ರ ಸಂಘ:**

ಈ ಮೊದಲು ಈ ಸಂಘವನ್ನು 'ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್' ಎಂದು ಕರೆಯುತ್ತಿದ್ದರು. ಇದನ್ನು 1926ರಲ್ಲಿ ಸ್ಥಾಪಿಸಲಾಯಿತು. ಪ್ರಸ್ತುತ 54 ಸದಸ್ಯ ದೇಶಗಳು ಇವೆ. ಆದರೆ ಸಾಂಕೇತಿಕವಾಗಿ ಬ್ರಿಟನ್ನಿನ ದೊರೆಯ ಹಿರಿತನವಿದೆ. ಲಂಡನ್‌ನಲ್ಲಿ ಇದರ ಕೇಂದ್ರ ಕಛೇರಿಯಿದೆ. ಪ್ರಜಾತಂತ್ರವನ್ನು ಎತ್ತಿ ಹಿಡಿಯುವುದು, ಸ್ವಾತಂತ್ರ್ಯದ ಸಂರಕ್ಷಣೆ, ಬಡತನ ನಿರ್ಮೂಲನೆ, ವಿಶ್ವಶಾಂತಿ ನೆಲೆಗೊಳಿಸುವಿಕೆ, ಕ್ರೀಡೆ, ವಿಜ್ಞಾನ ಹಾಗೂ ಕಲೆಯ ಬೆಳವಣಿಗೆಗೆ ಹಾಗೂ ಆ ಬಗೆಗೆ ಸಂಬಂಧಗಳ ವೃದ್ದಿ ಇದರ ಪ್ರಮುಖ ಉದ್ದೇಶಗಳಾಗಿವೆ.

**ಸಾರ್ಕ್:**

ಇದನ್ನು 1985ರಲ್ಲಿ ಸ್ಥಾಪಿಸಲಾಯಿತು. ಇದರ 8 ಸದಸ್ಯ ರಾಷ್ಟ್ರಗಳು ಯಾವುವೆಂದರೆ ಭಾರತ, ಪಾಕಿಸ್ತಾನ, ನೇಪಾಳ, ಭೂತಾನ್, ಬಾಂಗ್ಲಾದೇಶ, ಶ್ರೀಲಂಕಾ, ಮಾಲ್ಡಿವ್ಸ್ ಮತ್ತು ಆಫ್‌ಘಾನಿಸ್ತಾನ. ಇದರ ಮೂಲ ಉದ್ದೇಶ ಆರ್ಥಿಕ ಸಂಬಂಧಗಳ ವೃದ್ದಿ. ಸಾಮಾಜಿಕ ಪ್ರಗತಿ ಮತ್ತು ಸಾಂಸ್ಕೃತಿಕ ಬೆಳವಣಿಗೆಯನ್ನು ಪರಸ್ಪರ ಸಹಕಾರದೊಂದಿಗೆ ಸಾದಿಸುವುದು. ಇದಕ್ಕಾಗಿ ತಾಂತ್ರಿಕ ಸಮಿತಿಗಳು, ಕಾರ್ಯಾಚರಣೆ ಪಡೆ ಹಾಗೂ ಸ್ಥಾಯಿ ಸಮಿತಿಗಳು ರಚನೆಗೊಂಡಿವೆ. ಆದರೆ ಸದಸ್ಯರ ಪರಸ್ಪರ ಅಪನಂಬಿಕೆಗಳು, ವಿವಾದಗಳು ಸಂಸ್ಥೆಯ ಪ್ರಗತಿಗೆ ತೊಡಕಾಗಿವೆ.

ಆದರೆ ನಿಯತಕಾಲಿಕವಾದ ಸಮಾವೇಶಗಳು ಪರಸ್ಪರ ಶಾಂತಿಯುತ ಸಹಕಾರಕ್ಕೆ ಅನುವು ಮಾಡಿಕೊಡುತ್ತಿವೆ. ಇದರ ಮುಖ್ಯ ಕಛೇರಿಯು ನೇಪಾಳದ ಕಠ್ಮಂಡುವಿನಲ್ಲಿದೆ. 2014ರಲ್ಲಿ 18ನೇ ಸಮಾವೇಶ ನೇಪಾಳದ ಕಠ್ಮಂಡುವಿನಲ್ಲಿ ನಡೆಯಿತು.

**ಸಾರ್ಕ್‌ನ ಉದ್ದೇಶಗಳು:**

* ಸದಸ್ಯ ದೇಶಗಳು ಜನತೆಯ ಕಲ್ಯಾಣವನ್ನು ಸಾಧಿಸುವುದು ಮತ್ತು ಅವರ ಜೀವನಮಟ್ಟದ ಸುಧಾರಣೆ
* ಸಾರ್ಕ್ ದೇಶಗಳ ಆರ್ಥಿಕ ಅಭಿವೃದ್ದಿ, ಸಾಮಾಜಿಕ ಪ್ರಗತಿ, ಸಾಂಸ್ಕೃತಿಕ ಬೆಳವಣಿಗೆ ಹೆಚ್ಚಿಸುವುದು
* ಸಾರ್ಕ್ ದೇಶಗಳ ಸಾಮೂಹಿಕ ಸ್ವಾವಲಂಬನೆ ಮತ್ತು ಪ್ರೋತ್ಸಾಹ
* ಪರಸ್ಪರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳ ಪರಿಹಾರಕ್ಕೆ ಕೊಡುಗೆ ನೀಡುವುದು
* ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ ಕ್ಷೇತ್ರಗಳಲ್ಲಿ ಪರಸ್ಪರ ನೆರವು ಜಂಟಿ ಪ್ರಯತ್ನ
* ಇತರೆ ಅಭಿವೃದ್ದಿಶೀಲ ರಾಷ್ಟ್ರಗಳೊಂದಿಗೆ ಸಹಕಾರ
* ಅಂತರ್‌ರಾಷ್ಟ್ರೀಯ ಸಂಸ್ಥಗಳೊಂದಿಗೆ ಸಹಕಾರ
* ಹೊಸ ಪುನರ್ ನವೀಕರಣವಾಗಬಲ್ಲ ಶಕ್ತಿ ಮತ್ತು ಇಂಧನ ಮೂಲಗಳ ಅಭಿವೃದ್ದಿ

ಇದು ವರ್ಷಕ್ಕೆ 2 ಬಾರಿ ಸಭೆ ಸೇರುತ್ತದೆ.

ಸಾರ್ಕ್‌ನ ಎಲ್ಲ ರಾಷ್ಟ್ರಗಳ ಮುಖ್ಯಸ್ಥರು ವರ್ಷಕ್ಕೊಮ್ಮೆ ಸಭೆ ಸೇರುತ್ತಾರೆ.

**ಸಾರ್ಕ್: ಇದೊಂದು ಪ್ರಾದೇಶಿಕ ಸಹಕಾರ ಸಂಘ:**

ವ್ಯಾಪಾರದ ದೃಷ್ಟಿಯಿಂದ ವಿಫುಲ ಮಾರುಕಟ್ಟೆಯನ್ನು ಹೊಂದಿದೆ. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಾರ್ಕ್ ಸದಸ್ಯರ ಮಧ್ಯೆ ಸಹಕಾರ ಕಲ್ಪಸಲಾಗುತ್ತಿದೆ. ಇದರ ಮುಲ ಉದ್ದೇಶ ಆರ್ಥಿಕ,

ಸಾಮಾಜಿಕ, ಸಾಂಸ್ಕೃತಿಕ ಸಹಯೋಗದ ವೃದ್ಧಿ. ಇತ್ತೀಚಿಗಿನ 13 ಮತ್ತು 14ನೇ ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳು.

* ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಘಟನೆಯ ಆರ್ಥಿಕ ಅಭಿವೃದ್ಧಿ
* ಜನರ ಜೀವನಮಟ್ಟ ಸುಧಾರಣೆ
* ಬಡತನ ನಿರ್ಮೂಲನಾ ನಿಧಿ (2005–15) ಬಡತನ ನಿರ್ಮೂಲನ ದಶಕ
* ಇಸ್ಲಾಮಾಬಾದ್‌ನಲ್ಲಿ ಸಾರ್ಕ್ ಎನರ್ಜಿ ಸೆಂಟರ್ ಸ್ಥಾಪನೆ
* ಭಯೋತ್ಪಾದನೆ ಕೃತ್ಯಗಳಿಗೆ ಹಣಕಾಸಿನ ನೆರವು ನೀಡುವುದಕ್ಕೆ ಕಡಿವಾಣ
* ಶಸ್ತ್ರಾಸ್ತ್ರ ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ನಿಯಂತ್ರಣ

**ಸಾರ್ಕ್‌ನ ಪ್ರಸ್ತುತತೆ:**

18ನೇ ಶೃಂಗ ಸಭೆ 2014 ನವೆಂಬರ್ 26, 27ರಂದು ಕಠ್ಮಂಡುವಿನಲ್ಲಿ ನಡೆಯಿತು. ಸಾರ್ಕ್ ದೇಶಗಳ ನಡುವೆ ಸಾರಿಗೆ ಸಂಪರ್ಕದ ಒಪ್ಪಂದ ಪ್ರಸ್ತಾವನೆ, ವಿದ್ಯುತ್ ಸಹಕಾರಕ್ಕೆ ಸಹಿ ಹಾಕಲಾಯಿತು.

**ಸಾರ್ಕ್‌ನ ಇಲ್ಲಿಯವರೆಗೆ ಸಾಧನೆಗಳು:**

* ಸಾರ್ಕ್‌ನ ಸಾಮಾಜಿಕ ಸನ್ನದು ಭಯೋತ್ಪಾದನೆಯ ವಿರುದ್ಧದ ಹೋರಾಟ ನಡೆಸುತ್ತಿದೆ
* ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ಒಪ್ಪಂದ
* ಸಾರ್ಕ್ ಅಭಿವೃದ್ಧಿ ನಿಧಿ, ಸಾರ್ಕ್ ಆಹಾರ ನಿಧಿ, ದಕ್ಷಿಣ ಏಷ್ಯಾ ವಿ.ವಿ. ಸ್ಥಾಪನೆ
* ದಕ್ಷಿಣ ಏಷ್ಯಾದಲ್ಲಿಯ ಪ್ರಾದೇಶಿಕತೆಯನ್ನು ಗುರುತಿಸುವುದು

**ಸಾರ್ಕ್‌ನ ವೈಫಲ್ಯತೆಗಳು:**

* ಅಂತರ್‌ದೇಶೀಯ ಉದ್ವಿಗ್ನತೆ ಕಡಿಮೆ ಮಾಡುವಲ್ಲಿ ವಿಫಲ
* ಬಡತನ ಅನಕ್ಷರತೆಯನ್ನು ಕಡಿಮೆಗೊಳಿಸಲಾಗದಿರುವುದು
* 30 ವರ್ಷಗಳಲ್ಲಿ ಗಮನಾರ್ಹ ಸಾಧನೆಗಳೇನು ಆಗಿಲ್ಲದಿರುವುದು. ಸಣ್ಣ ರಾಷ್ಟ್ರಗಳಿಗೆ ಅಭದ್ರತೆ ಭೀತಿ, ಭಾರತ ಪಾಕಿಸ್ತಾನ ನಡುವಿನ ನಿಲ್ಲದ ಸಂಘರ್ಷ
* ಪ್ರಾದೇಶಿಕ ಅಸಹಕಾರ
* ಚೀನಾದ ವೀಕ್ಷಕ ಸ್ಥಾನಮಾನ

**ಯೂರೋಪಿಯನ್ ಯೂನಿಯನ್:**

1992ರಲ್ಲಿ ಮ್ಯಾಸ್ಟ್ರಿಚ್ ಒಪ್ಪಂದದ ಅನ್ವಯ ಅಸ್ತಿತ್ವಕ್ಕೆ ಬಂದಿತು. ಪ್ರಸ್ತುತ 27+2=29 ದೇಶಗಳು ಸದಸ್ಯರಾಗಿವೆ. ಸದಸ್ಯ ದೇಶಗಳ ಮಧ್ಯೆ ಸಮಾನ ಏಕ ಮಾರುಕಟ್ಟೆ, ಒಂದೇ ಚಲಾವಣೆಯ ಕರೆನ್ಸಿ, ಸಮಾನ ಕರೆನ್ಸಿ ಹಾಗೂ ವ್ಯಾಪಾರ ಧೋರಣೆಗಳಿಗೆ ಅವಕಾಶ ಮಾಡಿದೆ.

ಇದರ ಮುಖ್ಯ ಅಂಗ ಸಂಸ್ಥೆಗಳೆಂದರೆ,

1) ಸಮಿತಿ
2) ಆಯೋಗ
3) ಯೂರೋಪಿನ ಸಂಸತ್ತು
4) ಯೂರೋಪಿನ ನ್ಯಾಯಾಲಯ

ಇದು ಒಂದು ಸಂಯುಕ್ತ ರಾಜ್ಯವನ್ನು ಹೋಲುವಂತಿದೆ. 2012ರಲ್ಲಿ ನೊಬೆಲ್ ಶಾಂತಿ ಪುರಸ್ಕಾರ ಪಡೆದಿದೆ. ಈ ಸಂಸ್ಥೆ ಶಾಂತಿ ಮತ್ತು ಪ್ರಜಾತಂತ್ರಕ್ಕಾಗಿ ಕಾರ್ಯ ನಿರ್ವಹಿಸುತ್ತದೆ.

**ಆಸಿಯನ್ ರಾಷ್ಟ್ರಗಳು:**

1967ರಲ್ಲಿ ಉದಯವಾದ ಈ ಸಂಘಟನೆಗೆ ಪ್ರಸ್ತುತ ಒಟ್ಟು 10 ರಾಷ್ಟ್ರಗಳ ಒಕ್ಕೂಟವಿದೆ. ಇದರ ಮುಖ್ಯ ಉದ್ದೇಶವೇನೆಂದರೆ ಈ ಪ್ರದೇಶದ ಆರ್ಥಿಕ ಅಭಿವೃದ್ದಿಗೆ, ಸಾಮಾಜಿಕ ಬೆಳವಣಿಗೆಗೆ ಯತ್ನ ಹಾಗೂ ಸಾಂಸ್ಕೃತಿಕ ಪ್ರಗತಿ ಸಾಧಿಸುವಿಕೆ ಮತ್ತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ, ವೈಜ್ಞಾನಿಕ, ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಪರಸ್ಪರ ನೆರವು ಮತ್ತು ಸಹಕಾರ, ಸಹಭಾಗಿತ್ವ ಹೊಂದುವಿಕೆ. ಇದು ಒಂದು ಮಿಲಿಟರಿ ಒಕ್ಕೂಟವಲ್ಲ. ಭಾರತ ಆಸಿಯನ್ ಸದಸ್ಯತ್ವ ಹೊಂದಿಲ್ಲವಾದರೂ, ಅದರೊಡನೆ ವಿಶೇಷ ಸಮ್ಮೇಳನ ಹಮ್ಮಿಕೊಳ್ಳುತ್ತದೆ.

**ಎಯು (ಆಫ್ರಿಕನ್ ಯೂನಿಯನ್):**

ಸ್ವಾತಂತ್ರ್ಯ ಗಳಿಸಿದ ಆಫ್ರಿಕನ್ 53 ದೇಶಗಳ ಮತ್ತು ಪ್ರಾದೇಶಿಕ ಸಂಸ್ಥೆಗಳಿಂದ 1963ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ಎಲ್ಲಾ ಸದಸ್ಯ ದೇಶಗಳ ಸ್ವಯಂ ನಿರ್ಧಾರದ ಹಕ್ಕನ್ನು ಈ ಸಂಸ್ಥೆ ಪ್ರತಿಪಾದಿಸುತ್ತದೆ. ಇದು ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಒಗ್ಗಟ್ಟನ್ನು ಆಫ್ರಿಕನ್ ರಾಷ್ಟ್ರಗಳಲ್ಲಿ ನೆಲೆಗೊಳಿಸಲು ಶ್ರಮಿಸುತ್ತದೆ. ನೂತನ ವಸಾಹತುಶಾಹಿತ್ವದ ವಿರುದ್ದ ಧ್ವನಿ ಎತ್ತಲೂ ಸಂಸ್ಥೆ ಬದ್ದವಾಗಿದೆ. ವಸಾಹತುಶಾಹಿತ್ವ, ವರ್ಣ ಭೇದ ನೀತಿ, ಸಾಮ್ರಾಜ್ಯ ಶಾಹಿತ್ವ ಮುಂತಾದವರ ವಿರುದ್ದ ಈ ಸಂಸ್ಥೆ ಉತ್ತಮ ಪಾತ್ರ ವಹಿಸಿದೆ.

**ನ್ಯಾಟೋ:**

ದ್ವಿತೀಯ ಮಹಾಯುದ್ದದ ನಂತರ ಹಲವಾರು ಸೇನಾಕೂಟಗಳು ಅಸ್ತಿತ್ವಕ್ಕೆ ಬಂದವು. ನಂತರ ಆದ ಶೀತಲ ಸಮರದ ಬೆಳವಣಿಗೆಗಳು ಹಲವಾರು ಮೈತ್ರಿಕೂಟಗಳ ರಚನೆಗೆ ಕಾರಣವಾದವು. ಈ ಕಮ್ಯೂನಿಸ್ಟ್ ರಷ್ಯಾದ ವಿರುದ್ದ ಒಂದು ರಕ್ಷಣಾ ವ್ಯವಸ್ಥೆಯಾಗಿ ಅಮೇರಿಕಾದ ನಾಯಕತ್ವದಲ್ಲಿ ಪಾಶಿಮಾತ್ಯ ರಾಷ್ಟ್ರಗಳು ರೂಪಿಸಿಕೊಂಡವು. 1949 ಏಪ್ರಿಲ್ 4ರಂದು 12 ರಾಷ್ಟ್ರಗಳಾದ ಅಮೇರಿಕಾ, ಯೂಕೆ, ಫ್ರಾನ್ಸ್, ನೆದರ್‌ಲ್ಯಾಂಡ್, ಕೆನಡಾ, ಇಟಲಿ, ಬೆಲ್ಜಿಯಂ, ಲಕ್ಸ್‌ಬರ್ಗ್, ಡೆನ್ಮಾರ್ಕ್, ಪೋರ್ಚುಗಲ್, ಐಸ್‌ಲಯಾಂಡ್, ಬೆಲ್ಜಿಯಂ, ನಾರ್ವೇ ಕೂಡಿಕೊಂಡು ರಚನೆ ಆಯಿತು. ನಂತರ ಸದಸ್ಯತ್ವ ಪಡೆದ ರಾಷ್ಟ್ರಗಳು ಗ್ರೀಸ್, ಟರ್ಕಿ, ಪಶ್ಚಿಮ ಜರ್ಮನಿ, ಸ್ಪೇನ್.

**ನ್ಯಾಟೋ ಹುಟ್ಟಿಗೆ ಕಾರಣಗಳು:**

1) ಸೋವಿಯತ್ ಒಕ್ಕೂಟದ ವಿಸ್ತರಣೆ

2) ಸೋವಿಯತ್ ಒಕ್ಕೂಟದ ವಿಸ್ತರಣೆಯ ವಿರುದ್ದ ಸದಸ್ಯ ರಾಷ್ಟ್ರಗಳನ್ನು ರಕ್ಷಿಸಲು ಯುಎನ್‌ಓ ದ ವಿಫಲತೆ

**ಪ್ರಮುಖ ಸಾಧನೆಗಳು:**

1) ಸಮತಾವಾದಿ ಸರ್ಕಾರಗಳು ಯೂರೋಪಿನಲ್ಲಿ ಉದಯಿಸದಂತೆ ತಡೆಯುವುದು

2) ಸದಸ್ಯರ ನಡುವೆ ಹೆಚ್ಚಿನ ಆರ್ಥಿಕ ಹೊಂದಾಣಿಕೆಗಳ ಹಾಗೂ ಪರಸ್ಪರ ಆರ್ಥಿಕಾಭಿವೃದ್ದಿಗೆ ಶ್ರಮಿಸುವುದು

**ನ್ಯಾಟೋದ ವಿಸ್ತರಣೆಯ ವಿವಾದ ಮತ್ತು ಪರಿಣಾಮ:**

ಯುಎಸ್‌ಎ ನೇತೃತ್ವದ ಬಲಿಷ್ಠ ದೇಶಗಳ ಕೂಟವಾದ ಇದರಲ್ಲಿ ಹಿಂದಿನ ಕಮ್ಯುನಿಷ್ಟ್ ರಾಷ್ಟ್ರಗಳಾದ ಪೋಲ್ಯಾಂಡ್, ಹಂಗೇರಿ, ಜೆಕ್ ದೇಶಗಳು ಸೇರಿಕೊಂಡಿರುವುದರಿಂದ ವಿಶ್ವ ರಕ್ಷಣಾ ವ್ಯವಸ್ಥೆಯಲ್ಲಿ ನ್ಯಾಟೋ ಹೊಸ ಅಧ್ಯಾಯ ತೆರೆದಿದೆ. ಈ ಮೂರು ದೇಶಗಳ ಸೇರ್ಪಡೆಯಿಂದ ಸದಸ್ಯ ರಾಷ್ಟ್ರಗಳ ಸಂಖ್ಯೆ 19ಕ್ಕೆ ಏರಿದ್ದು, ಹಿಂದಿನ ಕಮ್ಯೂನಿಷ್ಟ್ ಸೇರಲು ಅವಕಾಶವಾಗಿದೆ. ಪ್ರಸ್ತುತ ನ್ಯಾಟೋ ಗಡಿಯು ಬದಲಾಗಿದೆ. ಇದು ಈಗ ರಷ್ಯಾ ದೇಶದ ಹತ್ತಿರಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ಇದೇ ಒಂದು ದೊಡ್ಡ ವಿವಾದವಾದರೆ ಅಚ್ಚರಿಯಿಲ್ಲ.

**ನ್ಯಾಟೋದ ರಚನೆ:**

ಈ ಸೇನಾಕೂಟವು ನಾರ್ಥ್ ಅಟ್ಲಾಂಟಿಕ್ ಕೌನ್ಸಿಲ್ ಮತ್ತು ಸೇನಾ ಸಮಿತಿಯನ್ನು ಹೊಂದಿರುತ್ತದೆ. ಇದು ಧೋರಣೆಗಳನ್ನು ರೂಪಿಸುವ ಅಂಗವಾಗಿದೆ. ಇದರ ಎಲ್ಲ ಸದಸ್ಯ ರಾಷ್ಟ್ರಗಳು ಕಾಯಂ ಪ್ರತಿನಿಧಿಗಳು. ಸೈನಿಕ ಯೋಜನೆಗಳನ್ನು ಶಸ್ತ್ರಾಸ್ತ್ರ ಉತ್ಪಾದನೆ ಇತರ ವಿಷಯಗಳ ಪರಿಶೀಲನೆಯನ್ನು ಮಾಡುತ್ತವೆ. ಎಲ್ಲ ಸದಸ್ಯ ರಾಷ್ಟ್ರಗಳ ಸೇನಾ ಮಹಾದಂಡ ನಾಯಕರು ಸಮಿತಿಯ ಸದಸ್ಯರಾಗಿರುತ್ತಾರೆ. ಇದರ ಕೇಂದ್ರ ಕಛೇರಿ ಬೆಲ್ಜಿಯಂ ಬ್ರುಸೆಲ್ಸ್‌ನಲ್ಲಿದೆ.

**ಯೂರೋಪಿಯನ್ ಯೂನಿಯನ್: ಐರೋಪ್ಯ ಸಮುದಾಯ:**

ಯೂರೋಪಿಯನ್ ಸಮುದಾಯದ ರಚನೆಗೆ ಮುನ್ನ ಯೂರೋಪಿನ ಕೆಲವು ರಾಷ್ಟ್ರಗಳು ಸೇರಿ ಯೂರೋಪಿಯನ್ ಆರ್ಥಿಕ ಸಮುದಾಯ, ಬೆನೆಲಕ್ಸ್ ಒಕ್ಕೂಟ, ಯೂರೋಪಿನ ಕಲ್ಲಿದ್ದಲು ಮತ್ತು ಉಕ್ಕು ಸಮುದಾಯ ಮುಂತಾದವು ರಚನೆ ಆಗಿದ್ದವು. 2ನೇ ಮಹಾಯುದ್ದದ ನಂತರ ಯೂರೋಪ್ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಕುಸಿಯಿತು. ಇದರ ಪುನರ್ ವ್ಯವಸ್ಥೆಗೆ ಅಮೇರಿಕಾವು ಯೂರೋಪ್ ದೇಶಗಳಿಗೆ ಮಾರ್ಷಲ್ ಯೋಜನೆಯನ್ನು ಪರಚಯಿಸಿತು. ಈ ಯೋಜನೆಗೆ ಅನುಗುಣವಾಗಿ ಆರ್ಥಿಕ ಸಮುದಾಯದ ರಚನೆಗೆ ಒತ್ತು ನೀಡಲಾಯಿತು. ನಂತರ 1991ರಲ್ಲಿ ಯೂರೋಪಿಯನ್ ಆರ್ಥಿಕ ಸಮುದಾಯಕ್ಕೆ ಈಯು ಎಂದು ಮರು ನಾಮಕರಣ. 1993ರಲ್ಲಿ ಅಧಿಕೃತವಾಗಿ ಈಯು (ಯೂರೋಪಿಯನ್ ಯೂನಿಯನ್) ಎಂದು ಕರೆಯಲಾಯಿತು. 15 ಸದಸ್ಯ ಬಲದ ಯೂರೋಪ್ ಸಮುದಾಯ ಸಾಮಾನ್ಯ ನಾಗರಿಕತ್ವ ಸಾಮಾನ್ಯ ವಿದೇಶಾಂಗ ನೀತಿ, ರಕ್ಷಣಾ ನೀತಿಯನ್ನು ಹೊಂದಿದೆ. 2007ರಲ್ಲಿ ಇದರ ಸಂಖ್ಯೆ 27ಕ್ಕೆ ಏರಿದೆ.

**ಯೂರೋಪಿಯನ್ ಯೂನಿಯನ್‌ನ ಸಾಧನೆಗಳು:**

ಜನರ ಸರಕುಗಳ ಮತ್ತು ಬಂಡವಾಳದ ಮುಕ್ತ ಚಲನವಲನಕ್ಕೆ ಅವಕಾಶ ಮಾಡಿದೆ. ಸಮುದಾಯದೊಳಗೆ ಸಾಮಾನ್ಯ ಕೃಷಿ ಮತ್ತು ಸಾರಿಗೆ ನೀತಿಯನ್ನು ಜಾರಿಗೆ ತರಲಾಗಿದೆ. ಸದಸ್ಯ ರಾಷ್ಟ್ರಗಳು ರೈತರು ಎಷ್ಟು ಬೇಕಾದರೂ ಉತ್ಪಾದನೆ ಮಾಡಲು ಅವಕಾಶ, ಕೃಷಿಯಲ್ಲಿ ಏಕತೆ ತಗರಲಾಗಿದೆ. ಮುಕ್ತ ವ್ಯಾಪಾರ, ನೂತನ ಹಣಕಾಸು ನೀತಿಯ ಜಾರಿ 'ಯೂರೋ' ಒಂದೇ ರೀತಿಯ ಕರೆನ್ಸಿಯ ಚಲಾವಣೆಯಿಂದ ಡಾಲರ್‌ನ ಪ್ರಾಬಲ್ಯ ಕುಗ್ಗಿಸಿತು. ಜಗತ್ತಿನಲ್ಲಿ ಇತರ ಸಮುದಾಯಗಳ ರಚನೆಗೆ ಯೂರೋಪ್ ಸಮುದಾಯ ಯಶಸ್ಸು ಕಾರಣ. ಇದು ಒಂದೇ ಗಡಿ ಹೊಂದಿರುವ ಬೃಹತ್ ಮುಕ್ತ ಮಾರುಕಟ್ಟೆಯಾಗಿದೆ. ಸಮುದಾಯದೊಳಗಿನ ಗಡಿ ತೆಗೆದು ಹಾಕಲಾಗಿದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಇದೊಂದು ಪ್ರಗತಿಪರ ವ್ಯಾಪಾರ ಕ್ಷೇತ್ರವಾಗಿದೆ. ವಿವಿಧ ಪೇಟೆಗಳ ಮಧ್ಯೆ ಗೋಡೆ ಕಟ್ಟುವುದರ ಬದಲು ಯೂರೋಪ್ ಸಮುದಾಯ ಸೇತುವೆ ಕಟ್ಟಿದೆ. ಅಂತರ್‌ರಾಷ್ಟ್ರೀಯ ರಾಜಕಾರಣದಲ್ಲಿ ಗಣನೀಯ ಪ್ರಭಾವ ಸ್ವತಂತ್ರ ನೀತಿ ಅನುಸರಿಸುತ್ತಿದೆ. ಅಂತರ್‌ರಾಷ್ಟ್ರೀಯ ಭಯೋತ್ಪಾದನೆ, ಜಾಗತಿಕ ಉಷ್ಣಾಂಶ, ಹೆಚ್‌ಐವಿ, ಏಡ್ಸ್ ರೋಗ ಈ ರೀತಿಯ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುತ್ತದೆ. ಅತಿ ಹೆಚ್ಚಿನ ಆರ್ಥಿಕ ನೆರವು ನೀಡುತ್ತದೆ.

**ಭಾರತದ ವಿದೇಶಾಂಗ ನೀತಿಯ ಪರಿಚಯ:**

ಭಾರತ ಸಂವಿಧಾನದ 51ನೇ ವಿಧಿಯು ಅಂತರರಾಷ್ಟ್ರೀಯ ನಿಯಮ, ಒಪ್ಪಂದ ವಿಧಿಗಳಿಗೆ ಮನ್ನಣೆ ನೀಡುವುದರ ಕುರಿತು ವಿವರಿಸುತ್ತದೆ. ಭಾರತದ ವಿದೇಶಾಂಗ ನೀತಿಯು ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ನೆಲೆಗೊಳಿಸಿ ರಾಷ್ಟ್ರ ರಾಷ್ಟ್ರಗಳಲ್ಲಿ ನ್ಯಾಯಸಮ್ಮತ, ಗೌರವ ಪೂರಿತವು ಆದ ವ್ಯವಹಾರವನ್ನು ಏರ್ಪಡಿಸಿ ಅಂತರರಾಷ್ಟ್ರೀಯ ವಿವಾದಗಳನ್ನು ಪಂಚಾಯಿತಿ ಮೂಲಕ ಪರಿಹರಿಸಲು ಶ್ರಮಿಸುವುದಾಗಿದೆ. ಭಾರತದ ವಿದೇಶಾಂಗ ನೀತಿಯು ಹೊಂದಿರುವ ಮೂಲ ತತ್ವಗಳು,

* ಆಲಿಪ್ತ ನೀತಿ
* ಸಾಮ್ರಾಜ್ಯ ಶಾಹಿ, ವಸಾಹತು ಶಾಹಿ ನೀತಿಯ ವಿರೋಧ
* ವರ್ಣಭೇದ ನೀತಿ
* ಪಂಚಶೀಲ ತತ್ವಗಳು
* ವಿಶ್ವಸಂಸ್ಥೆಯಲ್ಲಿ ವಿಶ್ವಾಸ ಮತ್ತು ಗೌರವ
* ರಾಷ್ಟ್ರೀಯ ಹಿತಾಸಕ್ತಿ
* ಏಷ್ಯಾದ ಬಗ್ಗೆ ವಿಶೇಷ ಒಲವು
* ಕಾಮನ್‌ವೆಲ್ತ್ ದೇಶಗಳೊಡನೆ ಸಂಬಂಧ

ಭಾರತದ ವಿದೇಶಾಂಗ ನೀತಿಯು ಟೀಕೆಗೂ ಗುರಿಯಾಗಿದೆ. ಕಾರಣವೇನೆಂದರೆ ಭಾರತವು ಅಳವಡಿಸಿಕೊಂಡಿರುವ ತತ್ವಗಳು ಆದರ್ಶಮಯವಾದ ತತ್ವಗಳು, ವಾಸ್ತವಿಕತೆಯಲ್ಲಿ ಇವು ಅಪ್ರಯೋಜಕ ಎನಿಸಿಕೊಂಡಿವೆ.

ಆಲಿಪ್ತ ನೀತಿಯು ಅಪಾಯಕಾರಿಯಾಗಿದ್ದು ಕಾಮನ್‌ವೆಲ್ತ್‌ನೊಡನೆ ಸೇರಿಕೊಂಡಿರುವುದರಿಂದ ಪರಮಾಧಿಕಾರ ಕಳೆದುಕೊಂಡಿದೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ.

## ಭಾರತದ ನೆರೆಯ ರಾಷ್ಟ್ರಗಳು

**ಭೂತಾನ್:**

ಭಾರತದ ಪೂರ್ವ ಭಾಗದಲ್ಲಿರುವ ಈ ದೇಶವು ಹಿಂದೂ ರಾಷ್ಟ್ರವಾಗಿದೆ. ಭಾರತದೊಂದಿಗೆ 699 ಕಿ.ಮೀ. ಗಡಿಯನ್ನು ಹೊಂದಿದೆ. ಪ್ರಸ್ತುತ ಪ್ರಧಾನಿಯವರು ಮೊಟ್ಟಮೊದಲು ವಿದೇಶ ಪ್ರಯಾಣ ಬೆಳೆಸಿದ ದೇಶ. ಇತ್ತೀಚಿನ ಬಿ2ಬಿ ಮಂತ್ರವು ಈ ಎರಡೂ ದೇಶಗಳ ನಡುವಿನ ವಿದೇಶಿ ಸಂಬಂಧವನ್ನು ಸುಂದರಗೊಳಿಸಿದೆ. ಭಾರತವು ಭೂತಾನ್ ದೇಶಕ್ಕೆ ಕಾಮಟಾಪುರ ವಿಮೋಚನಾ ಸಂಘಟನೆ, ಈಶಾನ್ಯ ದಂಗೇಕೋರರ ಸಂಘಟನೆಗಳನ್ನು ಭೂತಾನ್‌ನಿಂದ ಹೊರಗೋಡಿಸಲು ನೆರವು ನೀಡಿತು. ಇದು ಸಹಜ ವ್ಯಾಪಾರಿ ಪಾಲುದಾರ ದೇಶವಾಗಿದೆ ಮತ್ತು ಭಾರತದೊಂದಿಗೆ ಈವರೆಗೂ ಉತ್ತಮ ಬಾಂಧವ್ಯ ಹೊಂದಿಕೊಂಡಿದೆ.

**ಬಾಂಗ್ಲಾದೇಶ:**

ಬಾಂಗ್ಲಾದೇಶವು 1973ರಲ್ಲಿ ಪಾಕಿಸ್ತಾನದಿಂದ ಸ್ವಾತಂತ್ರ್ಯ ಪಡೆಯುವಲ್ಲಿ ಭಾರತವೇ ಪ್ರಮುಖ ಕಾರಣವಾಗಿದೆ. ಈ ಎರಡೂ ದೇಶಗಳ ಮಧ್ಯೆ ನದಿ ನೀರು ಹಂಚಿಕೆ, ಗಡಿ ಸಮಸ್ಯೆ, ವಲಸಿಗರ ಸಮಸ್ಯೆ, ದ್ವಿಪಕ್ಷೀಯ ವ್ಯಾಪಾರ, ತೆರಿಗೆ ಮುಕ್ತ ನೀತಿಗಳು, ಮುಕ್ತ ವ್ಯಾಪಾರಕ್ಕೆ ಅವಕಾಶಗಳ ಕುರಿತು ಯಾವತ್ತು ಚರ್ಚೆಗಳು ನಡೆದಿವೆ. ಭಾರತ ಮತ್ತು ಬಾಂಗ್ಲಾ ಮಧ್ಯೆ ರಸ್ತೆ ಸಂಚಾರವಿದೆ. ಸೆಣಬು, ಹತ್ತಿ ರಫ್ತು ವ್ಯಾಪಾರವು ಎರಡೂ ದೇಶಗಳ ಮಧ್ಯೆ ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ. ಗೌಹಾತಿ, ಶಿಲ್ಲಾಂಗ್, ಢಾಕಾ, ನಗರಗಳನ್ನು ಜೋಡಿಸುವ ಒನ್ ಸೇವೆಯು ಪ್ರಾರಂಭವಾಗಿದೆ. ಆದರೆ ಬಾಂಗ್ಲಾದೇಶದ ಅಸಹಕಾರದಿಂದಾಗಿ ತೀಸ್ತಾ ನದಿ ನೀರು ಹಂಚಿಕೆ ವಿವಾದ ಮತ್ತು ಕಾನೂನು ಸಮ್ಮತವಲ್ಲದ ವಲಸೆಯಿಂದ ಸುರಕ್ಷತೆ ಮತ್ತು ಸ್ಮಗ್‌ಲಿಂಗ್‌ನ ಸಮಸ್ಯೆಯನ್ನು ಭಾರತ ಎದುರಿಸುತ್ತಿದೆ.

**ಶ್ರೀಲಂಕಾ:**

ಎಲ್‌ಟಿಟಿಇ ಉಗ್ರಗಾಮಿಗಳ ವಿವಾದಿತ ವಿಷಯದಿಂದಾಗಿ ಕಟ್ಟಿದ್ದ ಭಾರತ ಮತ್ತು ಶ್ರೀಲಂಕಾ ದೇಶಗಳ ನಡುವೆ ಸಂಬಂಧ ಇತ್ತೀಚೆಗೆ ಉತ್ತಮ ಬಾಂಧವ್ಯವನ್ನು ಪಡೆಯುತ್ತಿದೆ. ಆದರೂ ಭಾರತಕ್ಕೆ ಮೀನುಗಾರರ ಸಮಸ್ಯೆ, ತಮಿಳುವಾಸಿಗಳ ಸಮಸ್ಯೆಯು ಹೆಚ್ಚಾಗಿ ಕಾಡುತ್ತಿದೆ.

**ಪಾಕಿಸ್ತಾನ:**

ಅಖಂಡ ಭಾರತದಿಂದ ಹೋಳಾಗಿ ಹುಟ್ಟಿದ ದೇಶವಾದ ಪಾಕಿಸ್ತಾನ, ಭಾರತದೊಂದಿಗೆ ಸಮರಸದ ಸಂಬಂಧ ಬೆಳೆಸಿಕೊಳ್ಳದೆ ಹಾವು ಮುಂಗುಸಿಯಂತೆ ಕಿತ್ತಾಡುವಂತಾಗಿದೆ. ಪಾಕಿಸ್ತಾನವು ಉಗ್ರರಿಗೆ ಬೆಂಬಲ ನೀಡುತ್ತಿರುವುದೇ ದ್ವಿಪಕ್ಷೀಯ ಸಂಬಂಧದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಮೇಲಿಂದ ಮೇಲೆ ಗಡಿ ತಂಟೆ, ಜಮ್ಮು ಕಾಶ್ಮೀರ್ ಕುರಿತಾದ ಪಾಕಿಸ್ತಾನದ ನಿಲುವುಗಳು ಈ ಎರಡೂ ದೇಶಗಳ ನಡುವೆ ಸುಗಮ ಸಂಬಂಧಕ್ಕೆ ಅಡ್ಡಿಯಾಗುತ್ತಲೇ ಬಂದಿದೆ.

**ನೇಪಾಳ:**

ಭಾರತದ ನೆರೆಯ ನೇಪಾಳ ದೇಶದೊಂದಿಗೆ ಭಾರತದ ಸಂಬಂಧ ಸುಂದರವಾಗಿದೆ. ಭಾರತವು ನೇಪಾಳದ ಪ್ರತಿಯೊಂದು ಅತಂತ್ರ ಸ್ಥಿತಿಯಲ್ಲಿ ಸಹಾಯ ಮಾಡುತ್ತಾ ಬಂದಿದೆ. ಉದಾಹರಣೆಗೆ ಇತ್ತೀಚೆಗೆ ಪ್ರಧಾನಿಯಿಂದ ಹೆಚ್‌ಐಟಿ ಯೋಜನೆ ಘೋಷಣೆಯಾದುದು, ಅಲ್ಲಿ ಹೊಸದಾದ ಸಂವಿಧಾನ ರಚಿಸಲು ಭಾರತ ಸಹಕರಿಸಿದ್ದು, 2015ರಲ್ಲಿಯ ಭೂಕಂಪದಿಂದ ತೀವ್ರವಾಗಿ ಹಾನಿಯಾದಾಗ ಬೃಹತ್ ಪ್ರಮಾಣದಲ್ಲಿ ಭಾರತವು ನೆರವಿನ ಹಸ್ತ ನೀಡಿತು. ಪರಸ್ಪರ ಎರಡೂ ದೇಶಗಳ ನಡುವೆ ಮುಕ್ತ ವ್ಯಾಪಾರ ಮತ್ತು ಸಂಚಾರ ವ್ಯವಸ್ಥೆ ಇದೆ. ಹಾಗೆಯೇ ಹಲವು ಯೋಜನೆಗಳನ್ನು ರಚಿಸಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಉದಾಹರಣೆಗೆ 1996ರಲ್ಲಿ ನೀರು ಮತ್ತು ವಿದ್ಯುತ್ ಹಂಚಿಕೆಗಾಗಿ ಮಹಾಕಾಳಿ ನದಿ ಒಪ್ಪಂದ.

**ಬರ್ಮಾ: (ಮಯನ್ಮಾರ್)**

ಭಾರತ ಮತ್ತು ಬರ್ಮಾ ದೇಶಗಳ ನಡುವೆ ಸಹಜ ಸಂಬಂಧವಿದೆ. ಅಂತಹ ಅನ್ಯೋನ್ಯತೆಯಾಗಲೀ, ವಿರಸವಾಗಲೀ ಇರುವುದಿಲ್ಲ. ದ್ವಿಪಕ್ಷೀಯ ವ್ಯವಹಾರಗಳು, ಪ್ರಧಾನಿ ನರೇಂದ್ರಮೋದಿ ಭೇಟಿ, ಆಸಿಯಾನ್ 10 ಶೃಂಗ ಸಭೆಯಲ್ಲಿ ಭಾಗಿ ಮುಂತಾದ ಇತ್ತೀಚಿನ ಕ್ರಮಗಳಿಂದ ಎರಡೂ ದೇಶಗಲ ನಡುವಿನ ಸಂಬಂಧ ಹೊಸ ರೂಪ ಪಡೆಯುತ್ತಿದೆ. ಬರ್ಮಾ ದೇಶದಲ್ಲಿ 1990ರಲ್ಲಿ ಮುಕ್ತ ಚುನಾವಣೆ ನಡೆದವು ಮತ್ತು ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣವಾಯಿತು.

**ಆಫ್‌ಘಾನಿಸ್ತಾನ:**

ಮಾನವೀಯತೆಯ ಎಲ್ಲ ಸಹಕಾರವನ್ನು, ಸಹಾಯ ಹಸ್ತವನ್ನು ಭಾರತ ಈ ದೇಶಕ್ಕೆ ನೀಡಿದೆ. ಶಿಕ್ಷಣ ಕೇಂದ್ರಗಳು, ಆರೋಗ್ಯಕ್ಕಾಗಿ ಆಸ್ಪತ್ರೆಗಳು, ಇತರ ಸೌಕರ್ಯಗಳನ್ನು ಭಾರತವು ನೀಡುತ್ತಾ ಬಂದಿದೆ. ಈ ದೇಶವು ಉಗ್ರರ ನೆಲೆಯಾಗಿರುವುದರಿಂದ ರಕ್ಷಣೆಯ, ಸುರಕ್ಷತೆ ದೃಷ್ಟಿಯಿಂದ ಆಫ್‌ಘಾನಿಸ್ತಾನದೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು ಭಾರತಕ್ಕೆ ಅಗತ್ಯವಾಗಿದೆ.

**ಚೀನಾ:**

ಪ್ರಸ್ತುತ ಉತ್ತಮ ಬಾಂಧವ್ಯ ಇದೆ. ಈ ಎರಡೂ ದೇಶಗಳ ನಡುವೆ ತುಂಬಾ ತಡವಾಗಿ ದ್ವಿಪಕ್ಷೀಯ ಸಂಬಂಧ ಬಲಪಡಿಸುವ ಪ್ರಯತ್ನಗಳು ನಡೆದಿವೆ. ಆದರೂ ಈ ಎರಡೂ ದೇಶಗಳ ನಡುವಿನ ಗಡಿಯು ಪ್ರಮುಖ ಸಮಸ್ಯೆ. ಜಮ್ಮು ಮತ್ತು ಕಾಶ್ಮೀರ ಮತ್ತು ಅರುಣಾಚಲ ಪ್ರದೇಶದ ಸ್ಟ್ಯಾಪಲ್ಡ್ ವೀಸಾದ ವಿಷಯಾಂಶಗಳು ಇನ್ನೂ ಇತ್ಯರ್ಥವಾಗಿಲ್ಲ.

ಎರಡೂ ದೇಶಗಳು ದೊಡ್ಡ ವ್ಯಾಪಾರಿ ಪಾಲುದಾರಿ ದೇಶಗಳಾಗಿವೆ. ಇತ್ತೀಚಿನ ಬೆಳವಣಿಗೆಯಂತೆ ಸಿಕ್ಕಿಂ ಭಾರತದ ಭಾಗವಾಗಲು ಚೀನಾ ಒಪ್ಪಿದೆ. ಅದಕ್ಕೆ ಪ್ರತಿಯಾಗಿ ಟಿಬೆಟ್ ಚೀನಾದ ಪ್ರಾಂತ್ಯವಾಗಲು ಭಾರತ ಒಪ್ಪಿದೆ. ಮತ್ತು ವ್ಯಾಪಾರ, ಇನ್ನಿತರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಪರಸ್ಪರ ಸಹಕಾರ, ಸಮಿತಿಗಳ ರಚನೆ ಮಾಡಲಾಗಿದೆ.

**ಮಾಲ್ಡೀವ್ಸ್:**

ಎರಡೂ ದೇಶಗಳ ಮಧ್ಯೆ ಅತ್ಯುತ್ತಮ ಬಾಂಧವ್ಯವಿದೆ. ಆದರೆ ಇತ್ತೀಚೆಗೆ ಅಲ್ಲಿ ನಡೆದ ಪ್ರಜಾಪ್ರಭುತ್ವ ವಿರೋಧಿ ಘಟನೆಗಳಿಗೆ ಭಾರತ ಸರಿಯಾಗಿ ಸ್ಪಂದಿಸದೆ ಇರುವುದು ದುರದೃಷ್ಟಕರವಾದುದು. ಅಲ್ಲಿ ಸುನಾಮಿ ಎದುರಾದಾಗ ಭಾರತ ಪ್ರಾಮಾಣಿಕವಾಗಿ ಪರಿಹಾರ ಮತ್ತು ಪುನರ್‌ವಸತಿ ತಂಡಗಳನ್ನು ರವಾನಿಸಿತ್ತು.

ಹೆಚ್ಚಿನ ಮಾಹಿತಿಗಾಗಿ:

**ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ:**

ದ್ವಿತೀಯ ಜಾಗತಿಕ ಯುದ್ದದ ಬಳಿಕ ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವ ಪತನಗೊಂಡವು. ಹಳೆಯ ಜಗತ್ತಿನ ಬದಲಾವಣೆಯೊಂದಿಗೆ ನೂತನ ಜಗತ್ತು ಹುಟ್ಟಿಕೊಳ್ಳಲಾರಂಭಿಸಿತು. 1945ರಲ್ಲಿ ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರ ಸಂಘದ ಆರಂಭದೊಂದಿಗೆ ಹೊಸ ಶಕೆ ಆರಂಭಗೊಂಡಿತು. ಆದರೂ ಜಾಗತಿಕವಾಗಿ ಮಾನವ ಹಕ್ಕುಗಳು, ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ, ವರ್ಣಭೇದ ನೀತಿ ಹಾಗೂ ಭಯೋತ್ಪಾದಕತೆಯಂತಹ ಹಲವಾರು ಸಮಸ್ಯೆಗಳು ಇನ್ನೂ ಹಾಗೆಯೇ ಉಳಿದುಕೊಂಡಿವೆ. ವಿಶ್ವ ಕುಟುಂಬದ ಓರ್ವ ಮುಂಚೂಣಿಯ ಸದಸ್ಯ ರಾಷ್ಟ್ರವಾಗಿ ಭಾರತ ಈ ಎಲ್ಲಾ ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪೂರಕ ಪ್ರಯತ್ನ ನಡೆಸುತ್ತಿವೆ.

**ಮಾನವ ಹಕ್ಕುಗಳ ನಿರಾಕರಣೆ:**

ಮಾನವತಾವಾದಿಗಳು ಪ್ರತಿಯೊಬ್ಬನ ಜನ್ಮತ: ಅಥವಾ ಹುಟ್ಟಿನಿಂದಲೇ ಬರತಕ್ಕಂತಹ ಹಕ್ಕುಗಳ ಬಗೆಗೆ ಪ್ರತಿಪಾದಿಸಿದ್ದಾರೆ. ಆದರೆ ದುರದೃಷ್ಟವಶಾತ್ ಪ್ರಪಂಚದ ಬಹುತೇಕ ಮಂದಿ ಸುದೀರ್ಘ ಕಾಲಾವಧಿಯಲ್ಲಿ ಈ ಹಕ್ಕುಗಳನ್ನು ಅನುಭವಿಸಿಲ್ಲ. ಧರ್ಮ, ಜನಾಂಗ, ಲಿಂಗ, ಜಾತಿ, ವರ್ಣ ಹಾಗೂ ರಾಷ್ಟ್ರೀಯತೆ ಈ ಎಲ್ಲವುಗಳನ್ನು ಕಾರಣವಾಗಿರಿಸಿ, ಮಾನವ ಹಕ್ಕುಗಳ ನಿರಾಕರಣೆ ಹಾಗೂ ಶೋಷಣೆಯನ್ನು ನಾವು ಕಾಣಬಹುದಾಗಿದೆ.

1976ರ ಅಮೇರಿಕಾದ ಸ್ವಾತಂತ್ರ್ಯ ಯುದ್ದ, 1789ರ ಫ್ರಾನ್ಸಿನ ಮಹಾಕ್ರಾಂತಿ, 1917ರ ರಷ್ಯಾ ಕ್ರಾಂತಿ, 20ನೇಯ ಶತಮಾನದ ಪ್ರಥಮಾರ್ಧದಲ್ಲಿ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ, ಇವೆಲ್ಲಾ ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟವು. ಮಾನವ ಹಕ್ಕುಗಳ ನಿರಾಕರಣೆಯ ವಿರುದ್ದ, 1948ರ ಡಿಸೆಂಬರ್ 10ರ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಉದ್ಘೋಷಣೆ ಒಂದು ಪ್ರಮುಖ ಮೈಲುಗಲ್ಲು ಎಂಬುದಾಗಿ ಭಾವಿಸಲಾಗಿದೆ. ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರ ಪ್ರತಿಪಾದಿಸುತ್ತಾ ಬಂದಿದೆ. ಭಾರತ ತನ್ನ ಸಂವಿಧಾನದಲ್ಲಿಯೂ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ ಹಾಗೂ ಈ ವಿಚಾರದ ಬಗೆಗೆ ಬೆಳಕು ಚೆಲ್ಲಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿಯೂ ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂಬುದನ್ನು ಭಾರತ ಸಮರ್ಥಿಸುತ್ತಾ ಬಂದಿದೆ. ಗುಲಾಮಗಿರಿ ಪದ್ದತಿ, ಮಾನವರ ಮಾರಾಟ, ಮಕ್ಕಳ ದುಡಿಮೆ, ಮಹಿಳಾ ಶೋಷಣೆ ಇತ್ಯಾದಿಗಳನ್ನು ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ ನಿಷೇಧಿಸಿದೆ. ಬದುಕುವ ಹಾಗೂ ಶೈಕ್ಷಣಿಕ ಹಕ್ಕು ಇವೆಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೆಲ್ಲಾ ಸಂವಿಧಾನಿಕವಾಗಿ ಮಾನ್ಯತೆಗೊಂಡ ಹಕ್ಕುಗಳು ಎನಿಸಿವೆ. ಆದರೆ ನಿರಂಕುಶ ಪ್ರಭುತ್ವಗಳಲ್ಲಿ ಹಾಗೂ ಏಕ ಸಿದ್ದಾಂತ ಶಾಹಿತ್ವಗಳಲ್ಲಿ ಮೂಲಭೂತ ಹಕ್ಕುಗಳು ನಿರಾಕರಣೆಯನ್ನು ನಾವು ಈಗಲೂ ಗಮನಿಸಬಹುದು. ಜನಾಂಗ ಹತ್ಯೆ, ಎಲ್ಲಾ ವಿಧದ ಶೋಷಣೆ ಹಾಗೂ ದಬ್ಬಾಳಿಕೆಗೆ ಭಾರತ ವಿರೋಧ ವ್ಯಕ್ತಪಡಿಸುತ್ತದೆ. ವಿಶ್ವ ಸಂಸ್ಥೆ ಹಾಗೂ ಇನ್ನಿತರ ಜಾಗತಿಕ ವೇದಿಕೆಗಳ ಮೂಲಕ ಭಾರತ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನಿಸುತ್ತದೆ.

**ಶಸ್ತ್ರಾಸ್ತ್ರಗಳ ಪೈಪೋಟಿ:**

ಒಂದು ಪ್ರಸಿದ್ದ ಮಾತಿದೆ – 'ಅಣ್ವಸ್ತ್ರ ಯುಗದಲ್ಲಿ ನಾವು ಯುದ್ದವನ್ನು ಕೊನೆಗಾಣಿಸಬೇಕು, ಇಲ್ಲವಾದರೆ ಯುದ್ದ ನಮ್ಮನ್ನು ಕೊನೆಗಾಣಿಸುತ್ತದೆ'. ಪ್ರಚಲಿತ ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿ ಒಂದು ಭಯಾನಕ ವಿದ್ಯಮಾನ ಎಂಬುದಾಗಿ ಕಾಣಿಸುತ್ತದೆ. ನಿಶ್ಯಸ್ತ್ರೀಕರಣ ವಿಶ್ವದ ಇಂದಿನ ಹಾಗೂ ಮುಂದಿನ ಉಳಿವಿಗೆ ಅತ್ಯಗತ್ಯ ಎನಿಸುತ್ತದೆ. ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ನಿಲ್ಲಿಸಲು ನಿಶ್ಯಸ್ತ್ರೀಕರಣವೊಂದೇ ಪ್ರಮುಖ ಉಪಾಯ ಎಂದು ಭಾಸವಾಗುತ್ತಿದೆ.

ನಿಶ್ಯಸ್ತ್ರೀಕರಣ ಎಂದರೆ ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ನೇರ ಪ್ರಕ್ರಿಯೆ. ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ದದ ಸಂಭವ ತಲೆದೋರುತ್ತದೆ. ಈ ಎಲ್ಲಾ ಅನಿಷ್ಟಗಳನ್ನು ದೂರವಿರಿಸುವ ದೃಷ್ಟಿಯಿಂದ ನಿಶ್ಯಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆ ಎಂಬುದಾಗಿ ಭಾವಿಸಲ್ಪಡುತ್ತದೆ. ಅದೇ ರೀತಿ ಶಸ್ತ್ರಾಸ್ತ್ರಗಳು ಹಾಗೂ ಮದ್ದು ಗುಂಡುಗಳು ಆರ್ಥಿಕವಾಗಿಯೂ ಒಂದು ಅನಗತ್ಯ ನಷ್ಟದಾಯಕ ಎಂದೂ ಭಾವಿಸಲಾಗುತ್ತದೆ. ಅಮೇರಿಕಾದ ಅಧ್ಯಕ್ಷ ಐಸನ್ ಹೋವರ್ ಒಮ್ಮೆ ಹೀಗೆ ಉದ್ಗರಿಸಿದ್ದರು. 'ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಲ್ಲ, ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ದಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ.'

ಅಣ್ವಸ್ತ್ರ ಅಥವಾ ನ್ಯೂಕ್ಲಿಯರ್ ಬಾಂಬುಗಳ ತಯಾರಿಯೊಂದಿಗೆ ನಿಶ್ಯಸ್ತ್ರೀಕರಣ ಅಥವಾ ಶಸ್ತ್ರ ನಿಯಂತ್ರಣದ ಪ್ರಶ್ನೆ ತೀರಾ ಗಂಭೀರ ಎಂದು ಪರಿಗಣಿಸಲಾಗಿದೆ. ಭಾರತ ಒಂದು ಶಾಂತಿಪ್ರಿಯ ರಾಷ್ಟ್ರವಾದುದರಿಂದ ಶಸ್ತ್ರಾಸ್ತ್ರಗಳ ನಿಯಂತ್ರಣವನ್ನು ಪ್ರತಿಪಾದಿಸುತ್ತದೆ. ಮುಂದಿನ ಜಾಗತಿಕ ಸುರಕ್ಷೆಯ ದೃಷ್ಟಿಯಿಂದ ಯುದ್ದಗಳ ನಿವಾರಣೆ ತುಂಬಾ ಅವಶ್ಯಕವಾಗಿದೆ. 1963ರ ಬಳಿಕ ಅಮೇರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ರಷ್ಯಾ ಹಲವಾರು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡವು. ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ (ಸಾಲ್ಟ್), ಪಾಕ್ಷಿಕ ಪ್ರಯೋಗ ನಿಷೇದ ಒಪ್ಪಂದ, ಸಮಗ್ರ ಪರೀಕ್ಷಣಾ ನಿಷೇದ ಒಪ್ಪಂದ (ಸಿಟಿಬಿಟಿ), ಫಲಿಕೆ ನಿಷೇದ ಒಪ್ಪಂದ ಇವುಗಳು ಅಣುಶಸ್ತ್ರಗಳ ತಡೆಗಟ್ಟುವಲ್ಲಿ ಕೆಲವೊಂದು ಮಹತ್ವದ ವಿಶ್ವಮಟ್ಟದ ಸಂಧಿಗಳು ಎಂದು ಪರಿಗಣಿಸಬಹುದು. ಹೀಗೆ 'ಪರಸ್ಪರ ನಿಶ್ಚಿತ ನಾಶ'ದ ವಿರುದ್ದ ಭಾರತವು ಸೇರಿ ಎಲ್ಲಾ ರಾಷ್ಟ್ರಗಳು ಪ್ರಯತ್ನಿಸುವ ಅವಶ್ಯಕತೆಯಿದೆ.

**ಆರ್ಥಿಕ ಅಸಮಾನತೆ:**

ವಿಶ್ವ ಕುಟುಂಬದ ಸದಸ್ಯರಲ್ಲಿ ಪರಸ್ಪರ ಆರ್ಥಿಕ ಅಸಮಾನತೆಯ ಒಂದು ಪ್ರಮುಖ ಸಮಸ್ಯೆಯಿದೆ. ಇದು ವಸಾಹತುಶಾಹಿತ್ವದ ಒಂದು ಐತಿಹಾಸಿಕ ನೆಲೆಯ ಬಳುವಳಿ ಎಂದು ಭಾವಿಸಬಹುದಾಗಿದೆ. ಐರೋಪ್ಯ ರಾಷ್ಟ್ರಗಳು

ಆಫ್ರಿಕಾ, ಏಷ್ಯಾ ಹಾಗೂ ಲ್ಯಾಟಿನ್ ಅಮೇರಿಕನ್ ರಾಷ್ಟ್ರಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು. ಈ ಸಾಮ್ರಾಜ್ಯದ ಶಾಹಿತ್ವದ ಕೈಕೆಳಗೆ ಇದ್ದಂತಹ ರಾಷ್ಟ್ರಗಳು ಆರ್ಥಿಕವಾಗಿ ತೀರಾ ಹಿಂದುಳಿದವು. 20ನೇ ಶತಮಾನದ ಪೂರ್ವ ಭಾಗದವರೆಗೆ ಅವರ ಪ್ರಗತಿ ತೀರಾ ಕುಂಠಿತವಾಗಿತ್ತು. ಸ್ವಾತಂತ್ರ್ಯ ನಂತರ ಏಷ್ಯಾ ಹಾಗೂ ಆಫ್ರಿಕಾದ ರಾಷ್ಟ್ರಗಳು ಅಭಿವೃದ್ಧಿ ಸಾಧಿಸಲು ಪ್ರಯತ್ನಿಸಿದವು. ಆದರೆ ಕೃಷಿ, ಕೈಗಾರಿಕೆ, ಸಾರಿಗೆ, ಮತ್ತು ಸಂಪರ್ಕ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಆರ್ಥಿಕ ಅಡಚಣೆ ತಲೆದೋರಿತ್ತು. ಹಾಗಾಗಿ ವಿದೇಶಿ ಆರ್ಥಿಕ ಸಹಕಾರ ಇವುಗಳಿಗೆ ತೀರಾ ಅವಶ್ಯಕ ಎಂದು ಕಂಡುಬಂತು.

ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಿಗೆ 1945ರ ಬಳಿಕದ ರಾಜಕೀಯ ಧ್ರುವೀಕರಣ ಆಧರಿಸಿ ಅಮೇರಿಕಾ ಹಾಗೂ ಸೋವಿಯತ್ ರಷ್ಯಾದ ಗುಂಪುಗಳು ಸಹಾಯ ನೀಡಲು ಆರಂಭಿಸಿದವು. ಆದರೆ ಈ ರಾಷ್ಟ್ರಗಳ ಬಡತನ, ಮುಂದುವರಿದ ದೇಶಗಳ ರಾಜಕೀಯ ಸ್ವಾರ್ಥದ ಸಾಧನೆಗೆ ಪೂರಕವಾಗಿ ಪರಿಣಮಿಸಿತು.

ಮುಂದಿನ ಕಾಲಘಟ್ಟದಲ್ಲಿ ಭರತ ಆಲಿಪ್ತ ನೀತಿಯನ್ನು ಜಗತ್ತಿನಲ್ಲಿ ಮುಂದುವರೆಸಿತು. ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡ ರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು. ತನ್ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು. ಅದರೊಂದಿಗೆ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು. 'ತೃತೀಯ ಜಗತ್ತು ಎಂಬ ವಿಚಾರವೇ ಬಡ ರಾಷ್ಟ್ರಗಳು' ಎಂಬ ಅಂಶವನ್ನು ಎತ್ತಿ ತೋರುತ್ತಿದೆ. ಈ ದೇಶಗಳು ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗದ ಅವಕಾಶಗಳು ಮುಂತಾದ ಕೊರತೆಗಳಿಂದ ಹೊರಬರಲು ಪ್ರಯತ್ನಿಸುತ್ತಿವೆ. ಅದೇ ರೀತಿ ಅನ್ಯರಾಷ್ಟ್ರಗಳಲ್ಲಿನ ಅನಗತ್ಯ ವೆಚ್ಚ, ಮುಕ್ತ ವ್ಯಾಪಾರ, ಅಸಮರ್ಪಕ ಪೈಪೋಟಿ, ಜಾಗತೀಕರಣ ಮುಂತಾದ ವಿದ್ಯಮಾನಗಳು ಬಡರಾಷ್ಟ್ರಗಳ ಮೇಲೆ ಹಲವಾರು ಬಾರಿ ದುಷ್ಪರಿಣಾಮ ಬೀರುತ್ತದೆ. ಇವೆಲ್ಲವನ್ನೂ ನೀಗಿಸುವಲ್ಲಿ ವಿಶ್ವಸಂಸ್ಥೆ ಹಾಗೂ ಮುಂದುವರಿದ ರಾಷ್ಟ್ರಗಳು ಪೂರಕವಾಗಿ ಯತ್ನಿಸಬೇಕಾಗಿದೆ. ಭಾರತ ಒಂದು ಪ್ರಗತಿಪರ ರಾಷ್ಟ್ರವಾಗಿ ವಿಶ್ವ ಕುಟುಂಬದ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಹಾಗೂ ಸಮಾನತೆಯನ್ನು ಪ್ರತಿಪಾದಿಸುತ್ತದೆ.

**ವರ್ಣಭೇದ ನೀತಿ:**

ವರ್ಣಭೇದ ಹಾಗೂ ಶ್ವೇತ ವರ್ಣೀಯರಲ್ಲದವರ ಬಗೆಗೆ ಅಮಾನವೀಯ ನಡವಳಿಕೆ ಜಾಗತಿಕ ನಾಗರಿಕತೆಗೆ ಒಂದು ಶಾಪ ಎನ್ನಬಹುದು. ಜ್ಞಾನಪುನರುಜ್ಜೀವನದ ಬಳಿಕ ಕಂಡುಕೊಂಡ ಸಮುದ್ರಯಾನದ ಹೊಸ ಹೊಸ ದಾರಿಗಳ ಮೂಲಕ ಯೂರೋಪಿಯನ್ನರು ಸಂಚರಿಸಿ ತಮ್ಮ ವಸಾಹತುಗಳನ್ನು ಸ್ಥಾಪಿಸತೊಡಗಿದರು. ಆ ಬಳಿಕ ಜಗತ್ತಿನ ಪೂರ್ವ ಹಾಗೂ ಪಶ್ಚಿಮ ಭಾಗಗಳಲ್ಲಿ ತಮ್ಮ ವಿಶಾಲ ಸಾಮ್ರಾಜ್ಯ ಸ್ಥಾಪಿಸಲು ಪ್ರಾರಂಭಿಸಿದರು. ಅಂತೆಯೇ ಕಪ್ಪು, ಹಳದಿ ಹಾಗೂ ಕಂದು ಮೈ ಬಣ್ಣ ಹೊಂದಿದ ಆಫ್ರಿಕಾ, ಏಷ್ಯಾ ಹಾಗೂ ಅಮೇರಿಕಾ ಖಂಡಗಳ ಜನರನ್ನು ಬಿಳಿ ಜನರು ನಿಕೃಷ್ಟವಾಗಿ ಅಂದರೆ ಕಿಳು ದೃಷ್ಟಿಯಿಂದ ಕಾಣಲಾರಂಭಿಸಿದರು. ಆದರೆ ಇಂತಹ ವರ್ಣಭೇದ ನೀತಿ ನಿಜಕ್ಕೂ ಅಮಾನವೀಯ ಹಾಗೂ ಅನೈತಿಕ ಎನಿಸುವಂತಹುದು. ಹಲವಾರು ಸುಧಾರಣೆಗಳ ಬಳಿಕವೂ ಈ ವರ್ಣದ್ವೇಷ ನೀತಿ ಸುದೀರ್ಘ ಕಾಲ ಮುಂದುವರಿಸಲಾರಂಭಿಸಿದೆ. ಮಹಾತ್ಮಗಾಂಧಿ, ಅಬ್ರಹಾಂ ಲಿಂಕನ್, ಜಾನ್ ಎಫ್.ಕೆನಡಿ, ಮಾರ್ಟಿನ್ ಲೂಥರ್ ಹಾಗೂ ನೆಲ್ಸನ್ ಮಂಡೇಲರಂತಹ ಹಲವಾರು ಖ್ಯಾತರು ಇದರ ವಿರುದ್ಧ ಹೋರಾಡಿದರು.

1945ರಲ್ಲಿ ದ್ವಿತೀಯ ಮಹಾಯುದ್ಧವು ಕೊನೆಗೊಂಡ ಬಳಿಕ ಹಲವಾರು ಮಹತ್ತರ ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಗಳು ಜಾಗತಿಕ ನೆಲೆಯಲ್ಲಿ ಕಾಣಿಸಿಕೊಳ್ಳಲಾರಂಭಿಸಿದವು. ಹಲವಾರು ವಸಾಹತು ರಾಷ್ಟ್ರಗಳು ಸ್ವತಂತ್ರವಾದವು. ಸಾಮ್ರಾಜ್ಯಶಾಹಿತ್ವ ಹಾಗೂ ವಸಾಹತುಶಾಹಿತ್ವ ಕೊನೆಗೊಳ್ಳುವುದರೊಂದಿಗೆ ವರ್ಣಭೇದ ನೀತಿಯೂ ಮರೆಯಾಗಲಾರಂಭಿಸಿತು. ಆದರೂ ದಕ್ಷಿಣ ಆಫ್ರಿಕಾ ಸುದೀರ್ಘ ಕಾಲ ಈ ನೀತಿಯನ್ನು ಸಡಿಲಿಸಲು ಮುಂದಾಗಲಿಲ್ಲ. ಅದಕ್ಕೆ ವಿರೋಧವಾಗಿ ಭರತ ಸರ್ಕಾರ ಆ ರಾಷ್ಟ್ರ ವರ್ಣಬೇಧರಹಿತ ಸಮಾನತೆಯನ್ನು ಒಳಗೊಂಡಿದೆ. ಹಾಗೂ ಈ ತತ್ವವನ್ನು ಭಾರತ ಸಂವಿಧಾನವೂ ಎತ್ತಿ ಹಿಡಿಯುತ್ತದೆ.

**ಭಯೋತ್ಪಾದಕತೆ:**

ಭಯೋತ್ಪಾದಕತೆಯನ್ನು ಭಯಭೀತವಾದ ಅಥವಾ ಉಗ್ರಗಾಮಿತ್ವ ಎಂದು ಕರೆಯಬಹುದು. ಇದು ಒಂದು ಬಲಪ್ರಯೋಗದ ಒತ್ತಡ ತಂತ್ರಗಾರಿಕೆ. ರಾಜಕೀಯ, ಧಾರ್ಮಿಕ, ಅಥವಾ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಗುರಿಹೊಂದಿದ ಭಯೋತ್ಪಾದಕತೆಯು ವ್ಯಕ್ತಿಗಳಿಗೆ ಮತ್ತು ಸೊತ್ತುಗಳಿಗೆ ಅಪಾರ ಹಾನಿ ಉಂಟುಮಾಡುತ್ತದೆ. ಅದರಿಂದಲೂ ಹೆಚ್ಚಾಗಿ ಉಗ್ರಗಾಮಿತ್ವ ಮಾನಸಿಕ, ವೇದನೆಯನ್ನು ನೀಡುತ್ತದೆ. ಸಾಮಾಜಿಕ ಸಂಸ್ಕೃತಿಗೆ, ಅದೇ ರೀತಿ ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ ಬೀರುತ್ತದೆ. ಉಗ್ರಗಾಮಿ ಸಂಘಟನೆಗಳ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆ ಈ ಭಯೋತ್ಪಾದಕತೆ ಎನ್ನಬಹುದು. ಇಂತಹ ಸಂಘಟಿತ ಹಿಂಸೆಯ ಕೃತ್ಯಗಳು ಕಾನೂನು ಬಾಹಿರ ಹಾಗೂ ಸಮಾಜದ್ರೋಹಿ ಎನಿಸುವಂತಹವು. 2001ರಲ್ಲಿ ಅಮೇರಿಕಾದ ವಿಶ್ವ ವ್ಯಾಪಾರ ಕೇಂದ್ರದ ಧ್ವಂಸ, ಅಂತೆಯೇ ಬ್ರಿಟನ್, ಇರಾನ್, ಭಾರತ, ಆಫ್ಘಾನಿಸ್ತಾನ, ಪಾಕಿಸ್ತಾನ, ಇಂಡೋನೇಷಿಯಾ ಮುಂತಾದ ಹಲವಾರು ದೇಶಗಳಲ್ಲಿ ಸರಣಿ ಬಾಂಬು ಸ್ಫೋಟಗಳು ಜಾಗತಿಕ ಮಟ್ಟದಲ್ಲಿಯೂ ಅತ್ಯಂತ ಕಳವಳಕಾರಿ ಸಂಗತಿಗಳಾಗಿವೆ. ಈ ಉಗ್ರಗಾಮಿತ್ವವು ಧಾರ್ಮಿಕ ಮೂಲಭೂತ ಚಿಂತನೆಯಿಂದ, ಪ್ರತ್ಯೇಕವಾದದ್ದರಿಂದ, ತೀವ್ರ ಎಡಪಂಥೀಯ ವಿಚಾರದಿಂದ, ನಾಡ ಬಿಡುಗಡೆಯ ಛಲದಿಂದ, ವರ್ಣದ್ವೇಷ ನೀತಿ ಮುಂತಾದ ವಿಚಾರಧಾರೆಗಳಿಂದ ಪ್ರೇರಿತವಾಗಿರುತ್ತದೆ. ಒಂದು ರಾಷ್ಟ್ರವೇ ಇನ್ನೊಂದು ದೇಶದೊಳಗಿನ ಭಯೋತ್ಪಾದಕತೆಗೆ ಆರ್ಥಿಕ ಹಾಗೂ ಇನ್ನಿತರ ಸಹಕಾರ ನೀಡುವುದು ಇದೆ. ಈ ಉಗ್ರಗಾಮಿತ್ವವು ಒಂದು ರಾಷಟ್ರದ ನಾಗರೀಕರ ಮೇಲೆ, ಮಿಲಿಟರಿ ಪಡೆಗಳ ಮೇಲೆ, ಅಂತೆಯೇ ನಿರ್ದಿಷ್ಟ ಭಾಷಾವಾರು, ಧಾರ್ಮಿಕ, ಜನಾಂಗೀಯ ಅಥವಾ ವರ್ಣದವರ ಮೇಲೆ ಎರಗಿ ಸಾವು ನೋವು ಉಂಟು ಮಾಡುವುದಾಗಿದೆ. ಉಗ್ರಗಾಮಿತ್ವವು ಭಯವನ್ನು ಹೆಚ್ಚಿಸುವ ಹಾಗೂ ಪ್ರಚಾರವನ್ನು ಪಡೆಯುವ ಉದ್ದೇಶದಿಂದ ನಡೆಯುತ್ತದೆ. ಮಾತ್ರವಲ್ಲ ಅತ್ಯಧಿಕ ಸಾವು ನೋವು ಉಂಟು ಮಾಡಲು ಸ್ಫೋಟಕ ವಸ್ತುಗಳನ್ನು, ವಿಷಾನಿಲವನ್ನು ಬಳಸಲು ದಾರಿ ಮಾಡಿಕೊಡುತ್ತದೆ. ಇಂತಹ ವಿನಾಶಕಾರಿ ಕೃತ್ಯಗಳು ಸಾಕಷ್ಟು ಪೂರ್ವ ಯೋಜಿತವಾಗಿಯೇ ರೂಪಗೊಳ್ಳುತ್ತವೆ. ಉಗ್ರಗಾಮಿಗಳು ತಮ್ಮದೇ ಆದ ಗುಪ್ತಚರರನ್ನು ಹಾಗೂ ತರಬೇತು ಹೊಂದಿದವರ ಜಾಲವನ್ನು ಹೊಂದಿರುತ್ತಾರೆ. ಹಾಗೂ ಅವರ ಸಹಾಯದಿಂದ ಹಣವನ್ನೂ ಸಂಗ್ರಹಿಸುತ್ತಾರೆ. ಅತ್ಯಾಧುನಿಕ ಸಾರಿಗೆ, ಸಂಪರ್ಕ ಸಾಧನಗಳನ್ನೂ ಇವರು ಬಳಸುತ್ತಾರೆ. ತಮ್ಮ ನಿರ್ದಿಷ್ಠ ಗುರಿ ಹಾಗೂ ಸಂಘಟನೆಗೆ ಸಾಕಷ್ಟು ಪ್ರಚಾರವನ್ನು ಇವರು ಪಡೆದುಕೊಳ್ಳುತ್ತಾರೆ. ರಸ್ತೆ ಸಾರಿಗೆ, ರೈಲ್ವೆ, ವಿಮಾನ, ಪ್ರಮುಖ ಸರ್ಕಾರಿ ಕಛೇರಿಗಳು, ಕಿಕ್ಕಿರಿದ ಜನ ಜಂಗುಳಿ, ಮಾರುಕಟ್ಟೆ ಪ್ರದೇಶ ಮುಂತಾದವುಗಳು. ಈ ಭಯೋತ್ಪಾದಕತೆಯ ಜೊತೆ ಜೊತೆಗೆ ಮುಂದುವರಿಯುತ್ತದೆ. ಇದೊಂದು ಅಸಾಂಪ್ರದಾಯಿಕ ಯುದ್ದ ಎಂದೇ ಹೇಳಬಹುದು. ಆತ್ಮಾಹುತಿ ದಾಳಿ, ವಿಮಾನ ಕಳ್ಳತನ, ಬಾಂಬುದಾಳಿ, ನಿರ್ದಿಷ್ಟ ಮುಗ್ದ ಜನರನ್ನು ಒತ್ತೇ ಇರಿಸುವಿಕೆ ಇವೆಲ್ಲಾ ಉಗ್ರಗಾಮಿಗಳು ಮಾಡುವ ಹೀನ ಕೃತ್ಯಗಳಾಗಿವೆ.

ಭಾರತ ಇಂತಹ ಉಗ್ರಗಾಮಿತ್ವಕ್ಕೆ ಸಾಕಷ್ಟು ತುತ್ತಾದ ರಾಷ್ಟ್ರವಾಗಿದೆ. ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಂ, ಅಸ್ಸಾಂ ಇಂತಹ ಹಲವಾರು ರಾಜ್ಯಗಳಲ್ಲಿ ಭಯೋತ್ಪಾದಕತೆ ತಲೆ ಎತ್ತುತ್ತಲೇ ಇದೆ. 2007 ನವೆಂಬರ್ 26ರಂದು ಮುಂಬೈಯ ತಾಜ್‌ಮಹಲ್ ಹೋಟೆಲ್ ಮತ್ತು ರೈಲು ನಿಲ್ದಾಣಗಳ ದಾಳಿ, ನವದೆಹಲಿಯ ಸಂಸತ್ತಿನ ಮೇಲೆ ಅಂತೆಯೇ ಹೈದರಾಬಾದ್, ಚೆನ್ನೈ, ಬೆಂಗಳೂರು, ಬುದ್ದಗಯಾ ಮುಂತಾದ ಕಡೆಗಳಲ್ಲಿ ಇಂತಹ ವಿಧ್ವಂಸಕ ಕೃತ್ಯಗಳು ನಡೆದಿದೆ. ನಕ್ಸಲವಾದಿಗಳು ಭೀಕರವಾದ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ನಮ್ಮ ನೆರೆರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೈನಾ ನಮ್ಮಲ್ಲಿನ ಇಂತಹ ಭಯೋತ್ಪಾದಕತೆಗೆ ಕುಮ್ಮಕ್ಕು ನೀಡುವ ಬಗ್ಗೆ ಟೀಕಿಸಲ್ಪಡುತ್ತವೆ.

ಭಾರತ ತನ್ನಲ್ಲಿ, ಅದೇ ರೀತಿ ಅನ್ಯರ ನೆಲದಲ್ಲಿ ಭಯೋತ್ಪಾದಕತೆಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತದೆ. ನಮ್ಮ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭಯೋತ್ಪಾದಕತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿವೆ. ತನ್ಮೂಲಕ ಜನತೆಯ ಪ್ರಾಣ ಹಾಗೂ ಆಸ್ತಿಪಾಸ್ತಿಯನ್ನು ಉಳಿಸಲು ಯತ್ನಿಸುತ್ತಿವೆ. ಭೀತಿವಾದಿಗಳನ್ನು ನಿಗ್ರಹಿಸಲು ವಿಶೇಷ ಪರಿಣಿತಿ ಪಡೆದು ಪಡೆಗಳನ್ನು ರಚಿಸಲಾಗುತ್ತಿದೆ. ಕೆಲವೊಮ್ಮೆ ರಕ್ಷಣಾ ಪಡೆಗಳನ್ನು ಈ ಉಗ್ರಗಾಮಿಗಳ ವಿರುದ್ದ ಕಾರ್ಯಾಚರಣೆಗೆ ಬಳಸಲಾಗುತ್ತದೆ. ಶಾಂತಿಪ್ರಿಯ ರಾಷ್ಟ್ರವೆನಿಸಿದ ನಾವು ಭಯೋತ್ಪಾದಕತೆಯನ್ನು ವಿರೋಧಿಸುತ್ತೇವೆ.

ಮನುಕುಲದ ಇತಿಹಾಸವನ್ನು ಪರಿಶೀಲಿಸಿದಾಗ ಒಂದು ಸತ್ಯ ಗೋಚರಿಸುತ್ತದೆ. ಹಿಂಸೆ, ಭಯೋತ್ಪಾದನೆಗಳಿಂದ ಸಾಧನೆ ಮಾಡಿದ್ದು ಕ್ಷುಲ್ಲಕ ಹಾಗೂ ಸತ್ಯ, ಅಹಿಂಸೆ ಪ್ರೇಮ ತ್ಯಾಗಗಳಿಂದ ಸಾಧಿಸಿದ್ದು ಅಪಾರ. ನಮಗೆ ತೀರ ಹತ್ತಿರವಾಗಿ ತಿಳಿಯುವುದೇನೆಂದರೆ ಮಹಾತ್ಮಗಾಂಧೀಜಿ, ಇಂದಿರಾಗಾಂಧಿ, ರಾಜೀವ್‌ಗಾಂಧಿಯವರನ್ನು ಕೊಮದರೂ

ಹೊಸ ಇತಿಹಾಸವೇನೂ ನಿರ್ಮಾಣವಾಗಲಿಲ್ಲ. ಆದರೆ ಬುದ್ಧ, ಮಹಾವೀರ, ಜೀಸಸ್, ಮಹಮದ್ ಪೈಗಂಬರ್, ಬಸವ, ಗಾಂಧಿ, ನೆಹರು, ಅಂಬೇಡ್ಕರ್, ಮಾರ್ಟಿನ್ ಲೂಥರ್, ನೆಲ್ಸನ್ ಮಂಡೇಲಾ ಇಂತಹವರಿಂದ ಮನುಕುಲಕ್ಕೆ ಚೈತನ್ಯ, ಹೊಸ ಬೆಳಕು, ನೆಮ್ಮದಿ ಪ್ರಾಪ್ತವಾಗಿದೆ. ಹಿಂಸೆ ದ್ವೇಷಗಳಿಗಿಂತ ಶಾಂತಿ ಪ್ರೇಮಗಳೇ ಮಿಗಿಲಾದವು.

**ಶಸ್ತ್ರೀಕರಣ ಮತ್ತು ನಿಶ್ಯಸ್ತ್ರೀಕರಣ:**

ರಾಷ್ಟ್ರಗಳ ಇತಿಹಾಸವನ್ನು ಅವಲೋಕಿಸಿದರೆ ರಾಜ್ಯಗಳು ಸದಾ ಶಸ್ತ್ರಾಸ್ತ್ರಗಳನ್ನು ಹೊಂದುವುದರಲ್ಲಿ ಪೈಪೋಟಿಯನ್ನು ನಡೆಸುತ್ತಿದ್ದುದು ಕಂಡುಬರುತ್ತದೆ. ಸುಮಾರು 3–4 ದಶಕಗಳಿಂದ ಅಮೇರಿಕಾ, ರಷ್ಯಾ, ನ್ಯಾಟೋ ಮತ್ತು ವಾರ್ಸಾ ಕೂಟಕ್ಕೆ ಸೇರಿದ ರಾಷ್ಟ್ರಗಳು ಕೋಟಿಗಟ್ಟಲೆ ಹಣವನ್ನು ಶಸ್ತ್ರಾಸ್ತ್ರ ಖರೀದಿಗಾಗಿ ವಿನಿಯೋಗಿಸುತ್ತಿವೆ. ತೈಲ ಸಂಪದ್ಭರಿತ ರಾಷ್ಟ್ರಗಳು ದುಬಾರಿ ಬೆಲೆ ತೆತ್ತು ಶಸ್ತ್ರಾಸ್ತ್ರ ಖರೀದಿಸುತ್ತವೆ. ವಿಶ್ವಾದ್ಯಂತ 2.21 ಕೋಟಿ ರೂಪಾಯಿಗಳನ್ನು ಪ್ರತಿ ನಿಮಿಷಕ್ಕೆ ಶಸ್ತ್ರಾಸ್ತ್ರಗಳಿಗೆ ಖರ್ಚು ಮಾಡಲಾಗುತ್ತಿದೆ.

**ಶಸ್ತ್ರಾಸ್ತ್ರ ಪೈಪೋಟಿಗೆ ಕಾರಣವಾದ ಅಂಶಗಳು:**

* ಶಸ್ತ್ರೀಕರಣ ಎಂದರೆ ರಾಷ್ಟ್ರಗಳು ವಿದೇಶಿ ಆಕ್ರಮಣದಿಂದ ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಶಸ್ತ್ರಾಸ್ತ್ರಗಳನ್ನು ಹೊಂದುವುದು
* ಸಾಮ್ರಾಜ್ಯಶಾಹಿತ್ವದ ಆಕಾಂಕ್ಷೆ
* ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟದ ಮಧ್ಯದ ಶೀತಲ ಸಮರ
* ಸ್ವಾವಲಂಬನೆಯಾಗುವ ಆಕಾಂಕ್ಷೆ
* ಮಿಲಿಟರಿ ಸಂಶೋಧನೆ ಮತ್ತು ಸೈನಿಕಾಭಿವೃದ್ಧಿ
* ಆತಂಕ್ವಾದಿಗಳು, ಭಯೋತ್ಪಾದಕರಿಂದ ರಕ್ಷಣೆಗೆ
* ಮಿಲಿಟರಿ ಶ್ರೇಷ್ಠತೆ

**ನಿಶ್ಯಸ್ತ್ರೀಕರಣ ಮತ್ತು ಶಸ್ತ್ರಾಸ್ತ್ರಗಳ ನಿಯಂತ್ರಣ:**

ಈ ಎರಡು ಪದಗಳನ್ನು ಸಮಾನಾರ್ಥಕದಲ್ಲಿ ಬಳಸಲಾಗುತ್ತದೆ. ಆದರೆ ಇವು ಭಿನ್ನವಾಗಿವೆ. ನಿಶ್ಯಸ್ತ್ರೀಕರಣ ಎಂದರೆ ಎರಡು ಅಥವಾ ಹೆಚ್ಚು ರಾಷ್ಟ್ರಗಳು ಸ್ವಯಂ ಇಚ್ಛೆಯಿಂದ ಎಲ್ಲ ಅಥವಾ ಕೆಲವೊಂದು ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡಿಕೊಳ್ಳುವ, ಮಿತಗೊಳಿಸುವ, ತ್ಯಜಿಸುವುದಕ್ಕೆ ಸಂಬಂಧಿಸಿರುತ್ತದೆ. ಶಸ್ತ್ರಾಸ್ತ್ರ ನಿಯಂತ್ರಣ ಎಂದರೆ ನಿಶ್ಯಸ್ತ್ರೀಕರಣವನ್ನು ತಿಳಿಸುತ್ತದೆ ಮತ್ತು ವಿಶ್ವ ಶಾಂತಿ, ಭದ್ರತೆಗಾಗಿ ಶಸ್ತ್ರಾಸ್ತ್ರಗಳ ಬಳಕೆಯನ್ನು ವಿರೋಧಿಸುತ್ತದೆ. ಹ್ಯಾಡ್ಲಿಬೆಲ್‌ನ ಪ್ರಕಾರ ನಿಶ್ಯಸ್ತ್ರೀರಣ ಎಂದರೆ ಶಸ್ತ್ರಾಸ್ತ್ರಗಳಲ್ಲಿ ಕಡಿತ ಇಲ್ಲವೇ ನಾಶಗೊಳಿಸುವುದು. ಶಸ್ತ್ರಾಸ್ತ್ರ ನಿಯಂತ್ರಣ ಎಂದರೆ ಶಸ್ತ್ರೀಕರಣ ನೀತಿಯ ಮೇಲೆ ಅಂತರ್‌ರಾಷ್ಟ್ರೀಯ ನಿಯಂತ್ರಣ ಮತ್ತು ನಿರ್ಬಂಧ ಹೇರುವುದು.

**ನಿಶ್ಯಸ್ತ್ರೀಕರಣದ ಅವಶ್ಯಕತೆ:**

* ಯುದ್ಧದ ಸಾಧ್ಯತೆ ಕಡಿಮೆ ಮಾಡಿ ಅಂತರ್‌ರಾಷ್ಟ್ರೀಯ ಶಾಂತಿ ನೆಲೆಯೂರುವಂತೆ ಮಾಡುತ್ತದೆ
* ರಾಷ್ಟ್ರ ರಾಷ್ಟ್ರಗಳ ಮಧ್ಯೆ ನಂಬಿಕೆ ಮೂಡುವಂತೆ ಮಾಡುತ್ತದೆ
* ಶಸ್ತ್ರಾಸ್ತ್ರಗಳು ಯುದ್ಧಕ್ಕೆ ಕಾರಣವಾದರೆ, ನಿಶ್ಯಸ್ತ್ರೀಕರಣ ಶಾಂತಿಗೆ ಕಾರಣ

**ನಿಶ್ಯಸ್ತ್ರೀಕರಣದ ಪರಿಣಾಮಗಳು:**

* ದುಂದು ವೆಚ್ಚ ತಪ್ಪಿಸಬಹುದಾಗಿದೆ
* ಬೇರೆಯ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ವಿನಿಯೋಗ
* ಯುದ್ಧದಿಂದ ನಾಶ, ಶಾಂತಿಯಿಂದ ಲಾಭ

## ನಿಶ್ಯಸ್ತ್ರೀಕರಣದ ಪ್ರಯತ್ನಗಳು:

ನಿಶ್ಯಸ್ತ್ರೀಕರಣವು ಹಲವಾರು ವಿಫಲತೆಗಳ ಮತ್ತು ಕೆಲವೇ ಸಫಲತೆಗಳ ಕಥೆಯಾಗಿದೆ. ಅಂತರ್‌ರಾಷ್ಟ್ರೀಯ ರಂಗದಲ್ಲಿ ಇದೊಂದು ಜಟಿಲವಾದ ಸಮಸ್ಯೆಯಾಗಿದೆ. 1816ರಲ್ಲಿ ಪ್ರಥಮ ಬಾರಿಗೆ ರಷ್ಯಾ ದೇಶವು ನಿಶ್ಯಸ್ತ್ರೀಕರಣದ ಪ್ರಸ್ತಾಪ ಮಾಡಿತು. 1947ರಲ್ಲಿ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಆಯೋಗ ರಚನೆ ಮಾಡಲಾಯಿತು. ಯುಎನ್‌ಓ 1954ರಲ್ಲಿ ಕೊಲಂಬೋ ಘೋಷಣೆ ಮಾಡಿತು.

**ಸಾಧನೆಗಳು:**

* 1963ರ ಮಾಸ್ಕೋ ಅಣುಬಾಂಬ್ ಪರೀಕ್ಷಾ ಸ್ಫೋಟ ನಿಷೇದ ಒಪ್ಪಂದ
* 1971ರಲ್ಲಿ ಸಾಗರದಡಿಯಲ್ಲಿ ಬಾಂಬ್ ಇಡುವುದನ್ನು ನಿಷೇಧಿಸುವ ಒಪ್ಪಂದ
* 1970ರಲ್ಲಿ ನ್ಯೂಕ್ಲಿಯರ್ ಅಸ್ತ್ರಗಳ ಪ್ರಸರಣ ನಿಷೇದ ಒಪ್ಪಂದ
* 1995ರಲ್ಲಿ ಮತ್ತೇ ಮುಂದುವರೆಸುವ ಒಪ್ಪಂದ 178 ದೇಶಗಳು ಸಹಿ

**ನಿಶ್ಯಸ್ತ್ರೀಕರಣಕ್ಕೆ ಅಡಚಣೆಗಳು:**

* ಶಸ್ತ್ರಾಸ್ತ್ರಗಳಿಂದ ಭದ್ರತೆ ಹೆಚ್ಚುವುದು, ಅಣ್ವಸ್ತ್ರಗಳಿಂದ ತಮ್ಮ ಪ್ರತಿಷ್ಠೆ ಹೆಚ್ಚಿಸುವ ರಾಷ್ಟ್ರಗಳ ಕಲ್ಪನೆ
* ಅನುಪಾತ ಸಮಸ್ಯೆ: ಶಸ್ತ್ರಾಸ್ತ್ರಗಳ ಸಮಾನತೆ ಹೊಂದುವಿಕೆ
* ರಾಷ್ಟ್ರಗಳ ಮಧ್ಯದ ಪರಸ್ಪರ ಅಪನಂಬಿಕೆ
* ಭಯೋತ್ಪಾದಕರ ಹಾವಳಿ

## ಆಲಿಪ್ತ ನೀತಿ / ಚಳುವಳಿ:

ಅಂತರ್‌ರಾಷ್ಟ್ರೀಯ ರಂಗದಲ್ಲಿ ಪ್ರಸ್ತುತ ವಿದ್ಯಮಾನಗಳಲ್ಲಿ ಪ್ರಮುಖವಾಗಿ ಆಲಿಪ್ತ ಚಳುವಳಿಯ ಗಮನಾರ್ಹವಾದ ಬೆಳವಣಿಗೆಯನ್ನು ಕಾಣುತ್ತೇವೆ. ಪ್ರಾರಂಭದಲ್ಲಿ 25 ರಾಷ್ಟ್ರಗಳ ಸದಸ್ಯತ್ವ ಪಡೆದಿದ ಈ ನೀತಿಯು ಪ್ರಸ್ತುತ 118 ರಾಷ್ಟ್ರಗಳನ್ನು ಹೊಂದಿದೆ. ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳ ದಿಟ್ಟ ಹೆಜ್ಜೆ ಆಲಿಪ್ತ ನೀತಿಯಾಗಿದೆ.

**ಆಲಿಪ್ತ ನೀತಿಯ ಸ್ವರೂಪ:**

ಆಲಿಪ್ತತೆ ಎಂಬ ಪದವನ್ನು ಜಾರ್ಜ್‌ಲಿಸ್ಕಾ ಪ್ರಥಮ ಬಾರಿಗೆ ಬಳಸಿದರು. ಮಿಲಿಟರಿ ಕೂಟಗಳು, ಶೀತಲ ಸಮರ, ಜ್ರಿ ಬಣಗಳು, ಶಕ್ತ ರಾಜಕಾರಣದಿಂದ ದೂರವಿರುವ ನೀತಿಯನ್ನು ವಿವರಿಸಲು 'ಆಲಿಪ್ತ ನೀತಿ' ಬಳಸುವರು. 'ಆಲಿಪ್ತ ನೀತಿ' ಎಂದರೆ ರಾಷ್ಟ್ರವು ಶೀತಲ ಸಮರ, ಮಿಲಿಟರಿ ಕೂಟಗಳಿಂದ ದೂರ ಉಳಿದು ತನ್ನ ರಾಷ್ಟ್ರೀಯ ಹಿತಾಸಕ್ತಿ ರಕ್ಷಣೆಗಾಗಿ ಮತ್ತು ವಿಶ್ವ ಶಾಂತಿ ಭದ್ರತೆಗಾಗಿ ಅಂತರ್‌ರಾಷ್ಟ್ರೀಯ ವ್ಯವಹಾರಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವ ವಿದೇಶ ನೀತಿಯ ಮೂಲ ತತ್ವವಾಗಿದೆ. ವಿಶ್ವದ ಶಕ್ತ ರಾಷ್ಟ್ರಗಳ ಯಾವ ಬಣಕ್ಕೂ ಸೇರದೆ ರಾಷ್ಟ್ರ ರಾಷ್ಟ್ರಗಳ ನಡುವೆ ಪರಸ್ಪರ ವಿಶ್ವಾಸ ಮೂಡಿಸುವುದು ಇದರ ಗುರಿಯಾಗಿದೆ. ಇದರ ರೂವಾರಿ ಭಾರತದ ಪ್ರಧಾನಿಯಾಗಿದ್ದವರು ದಿ.ಜವಹರಲಾಲ್ ನೆಹರು.

**ಪಂಚಶೀಲ ತತ್ವಗಳೇ ಆಲಿಪ್ತ ನೀತಿಯ ಸೂತ್ರಗಳು:**

* ವಿಶ್ವದ ರಾಷ್ಟ್ರಗಳ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಪರಸ್ಪರ ಗೌರವ
* ಪರಸ್ಪರ ಆಕ್ರಮಣ ಮಾಡದಿರುವುದು
* ಒಂದು ರಾಷ್ಟ್ರದ ಆಂತರಿಕ ವ್ಯವಹಾರಗಳಲ್ಲಿ ಮತ್ತೊಂದು ರಾಷ್ಟ್ರ ಹಸ್ತಕ್ಷೇಪ ಮಾಡದಿರುವುದು
* ಸಮಾನತೆ ಮತ್ತು ಪರಸ್ಪರ ಗೌರವ
* ಶಾಂತಿಯುತ ಸಹಜೀವನ

**ಆಲಿಪ್ತತೆ ಮತ್ತು ತಟಸ್ಥತೆ:**

ಇವೆರಡೂ ಒಂದೇ ಆಗಿರುವುದಿಲ್ಲ. ತಟಸ್ಥತೆಯು ಕೇವಲ ಯುದ್ಧಾವಧಿಯ ನೀತಿಯಾಗಿರುತ್ತದೆ. ಆಲಿಪ್ತತೆಯು ಸರ್ವಕಾಲಕ್ಕೂ ಒಂದು ದೇಶ ಅಳವಡಿಸಿಕೊಂಡ ನೀತಿಯಾಗಿರುತ್ತದೆ.

**ಆಲಿಪ್ತ ನೀತಿಯ ಮೂಲಾಧಾರಗಳು, ಉಗಮಕ್ಕೆ ಕಾರಣಗಳು:**

* ದ್ವಿತೀಯ ಮಹಾಯುದ್ಧ
* ರಾಷ್ಟ್ರೀಯ ಭಾವನೆ
* ವಸಾಹತು ವಿರೋಧಿ ಭಾವನೆ
* ಆರ್ಥಿಕ ದುರ್ಬಲತೆ
* ಬಲಿಷ್ಠ, ದಕ್ಷ, ನಾಯಕತ್ವ
* ವಿಶ್ವ ಸಂಸ್ಥೆಯ ಪಾತ್ರ
* ವಿದೇಶಾಂಗ ನೀತಿಯ ರಚನೆಯಲ್ಲಿ ಸ್ವಾತಂತ್ರ್ಯದ ಬಯಕೆ
* ಯುದ್ಧದಿಂದ ದೂರವಿರುವ ಇಚ್ಛೆ
* ನೈತಿಕವಾದ
* ವಿಶ್ವಶಾಂತಿ ರಕ್ಷಣೆ
* ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ನೆರವಿನ ಪ್ರೇರಣೆ

**ಆಲಿಪ್ತ ನೀತಿಯ ರಾಷ್ಟ್ರಗಳ ಹಕ್ಕು ಬಾಧ್ಯತೆಗಳು:**

ಆಲಿಪ್ತ ನೀತಿಯು ಶಾಸನಬದ್ಧ ಆಧಾರ ಹೊಂದಿರುವುದಿಲ್ಲ. ಸಂಪ್ರದಾಯ ಆಧರಿಸಿದ ಚಳುವಳಿಯಾಗಿದೆ. ಇದು ಈ ಕೆಳಗಿನ ಹಕ್ಕು ಬಾಧ್ಯತೆಗಳನ್ನು ಹೊಂದಿದೆ.

* ಸಕಾರಾತ್ಮಕ ನಿಲುವನ್ನು ಹೊಂದುವುದು
* ನಿಷ್ಪಕ್ಷಪಾತ ಧೋರಣೆ
* ಶಕ್ತಿ ರಾಷ್ಟ್ರಗಳು ಮಿಲಿಟರಿ ಚಟುವಟಿಕೆಗಳ ಕುರಿತು ಉದಾಸೀನರಾಗುವುದು
* ತಮಗಿಷ್ಟವಾದ ರಾಜಕೀಯ ಸಿದ್ಧಾಂತ ಹೊಂದುವ ಅವಕಾಶ
* ತಾರತಮ್ಯ ನೀತಿಯಿರದೆ ಸಮಾನತೆ

### ಆಲಿಪ್ತ ನೀತಿಯ ಬೆಳವಣಿಗೆ:

1945ರಲ್ಲಿಯ 2ನೇಯ ಜಾಗತಿಕ ಯುದ್ಧದ ಭೀಕರತೆ ಪ್ರಪಂಚ ಒಡೆದು 2 ಬಣಗಳಾದಾಗ ಆಫ್ರಿಕಾ ಏಷ್ಯಾದ ವಸಾಹತುಶಾಹಿ ರಾಷ್ಟ್ರಗಳು ಸ್ವಾತಂತ್ರ್ಯಗೊಂಡು ಯಾವುದೇ ಬಣ ಸೇರದೆ ಆಲಿಪ್ತರಾಗುವ ತೀರ್ಮಾನ ಕೈಗೊಂಡವು. 1955ರಲ್ಲಿ ಇಂಡೋನೇಷಿಯಾದ ಬಾಡುಂಗ್‌ನಲ್ಲಿ ಏಷ್ಯಾ, ಆಫ್ರಿಕಾದ 29 ರಾಷ್ಟ್ರಗಳ ಸಮ್ಮೇಳನ ನಡೆಯಿತು. ತದನಂತರ ಆಲಿಪ್ತ ನೀತಿಯ ಜನನಕ್ಕೆ ನಾಂದಿ ಹಾಡಲಾಯಿತು. 1961ರಲ್ಲಿ ಬೆಲ್ಗ್ರೇಡ್ ಸಮ್ಮೇಳನ ಆಲಿಪ್ತ ನೀತಿಯ ಜನಕರಾದ ನೆಹರು, ಇಂಡೋನೇಷಿಯಾದ ಕಾರ್ಸಿ, ಈಜಿಪ್ಟ್ ಅಬ್ದುಲ್ ನಾಸೆರ್, ಯುಗೋಸ್ಲಾವಿಯಾದ ಟಿಟೋ ಸುದೀರ್ಘ ಚರ್ಚೆಯ ನಂತರ ಆಲಿಪ್ತ ನೀತಿಯು ಜಾರಿ ಆಯಿತು.

### ಆಲಿಪ್ತ ನೀತಿಯ ತತ್ವಗಳು ಧ್ಯೇಯಗಳು:

* ವಿವಿಧ ರಾಷ್ಟ್ರಗಳೊಡನೆ ಶಾಂತಿಯುತ ಸಹಬಾಳ್ವೆ, ಆಲಿಪ್ತತೆ
* ವಸಾಹತು ವಾದದ ವಿರೋಧ

* ಶಕ್ತ ರಾಷ್ಟ್ರಗಳ ಯುದ್ದದಲ್ಲಿ (ಘರ್ಷಣೆಯಲ್ಲಿ ಆಲಿಪ್ತ ರಾಷ್ಟ್ರಗಳ) ಭಾಗಿ ಇರಬಾರದು
* ಬಲಾಢ್ಯ ರಾಷ್ಟ್ರಗಳೊಡನೆ ಮಿಲಿಟರಿ ಒಪ್ಪಂದ ಸಲ್ಲದು
* ಆಲಿಪ್ತ ರಾಷ್ಟ್ರಗಳು ತನ್ನ ಭೂ ಪ್ರದೇಶದಲ್ಲಿ ಯಾವ ಬಣಕ್ಕೂ ಸೈನಿಕ ನೆಲೆಗಳಿಗೆ ಅವಕಾಶ ನೀಡಬಾರದು

**ಧ್ಯೇಯಗಳು:**

* ವಿಶ್ವದಲ್ಲಿ ಶಾಂತಿ
* ಸ್ನೇಹ ವೃದ್ಧಿ
* ವರ್ಣಭೇದ ನೀತಿ ವಿರೋಧ
* ಮಾನವ ಹಕ್ಕು
* ಆರ್ಥಿಕ ಅಭಿವೃದ್ಧಿ
* ಅಣ್ವಸ್ತ್ರ ನಿಷೇಧ
* ಶಾಂತಿಗಾಗಿ ಬಾಹ್ಯಾಕಾಶ ಉಪಯೋಗ

**ಆಲಿಪ್ತ ಚಳುವಳಿಯ ಸಾಧನೆಗಳು:**

* ಶೀತಲ ಸಮರದ ಸಮಯದಲ್ಲಿ ಹೊಸದಾಗಿ ಸ್ವತಂತ್ರಗೊಂಡ ರಾಷ್ಟ್ರಗಳಿಗೆ ಆಲಿಪ್ತ ನೀತಿ ಪ್ರೇರಣೆ
* ಶಕ್ತ ರಾಜಕಾರಣದಿಂದ ಉದ್ಭವಿಸಿದ ಅನೇಕ ಸಮಸ್ಯೆಗಳಿಗೆ ಪರಿಹಾರ
* ದಾಸ್ಯಕ್ಕೆ ಒಳಗಾದ ರಾಷ್ಟ್ರಗಳ ವಿಮೋಚನೆ
* ಸಾಮ್ರಾಜ್ಯಶಾಹಿ, ವಸಾಹತುಶಾಹಿ, ವರ್ಣಭೇದ ನೀತಿ ವಿರುದ್ದ ಧ್ವನಿ
* 1962ರ ಕ್ಯೂಬಾ ಮತ್ತು 1956ರ ಸೂಯೆಜ್ ಬಿಕ್ಕಟ್ಟು
* ಶಸ್ತ್ರಾಸ್ತ್ರ ಪೈಪೋಟಿ ವಿರೋಧ
* ವಿಶ್ವಸಂಸ್ಥೆ ಪ್ರಜಾಸತ್ತಾತ್ಮಕ ಸಂಸ್ಥೆಯಾಗುವಂತೆ ಮಾಡಿದೆ
* ತೃತೀಯ ಜಗತ್ತಿನ ಐಕ್ಯತೆ
* ಆರ್ಥಿಕಾಭಿವೃದ್ಧಿ.

• • • • • • • • • • • • • • •